UNIVERSAL
LIBRARY
OU_200746
UNIVERSAL
LIBRARY

University of Madras

B.A. Degree Examination

SELECTIONS

KANARESE

VOL. I

PUBLISHED BY THE UNIVERSITY

REGISTRAR
OSMANIA UNIVERSITY.

Madras
THE S.P.C.K. PRESS, PRINTERS TO THE UNIVERSITY

1917

REGISTRAR
OSMANIA UNIVERSITY.

ಅನುಕ್ರಮಣಿಕೆ.

	ಪುಟ.
ಕವಿರಾಜಮಾರ್ಗಂ	1–33
ವಿಕ್ರಮಾರ್ಜುನವಿಜಯಂ	34–68
ಶಾಂತಿಪುರಾಣಂ	69–103
ಕರ್ಣಾಟಕ ಕಾದಂಬರಿ	104–159
ಸಾಹಸಭೀಮವಿಜಯಂ	160–211
ಪಂಪರಾಮಾಯಣಂ	212–253
ಕಾವ್ಯಾವಲೋಕನಂ	254–285
ಪಂಚತಂತ್ರಂ	286–332
ಗಿರಿಜಾಕಲ್ಯಾಣಂ	333–381
ಕವಿಕಾವ್ಯವಿಮರ್ಶೆ	i–ix

ಕವಿರಾಜಮಾರ್ಗಂ.

ಕಂ॥ ಶ್ರೀ ತಳ್ತುರದೊಳ್ಕಾಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ ।
ಪ್ರೀತಿಯಿನಾವನನಗಲ
ಶ್ನೀತನಿರಂತರನುದಾರನಾ ನೃಪತುಂಗಂ ॥ 1 ॥

ಕೃತಕೃತ್ಯಮಲ್ಲನಪ್ರತಿ
ಹತವಿಕ್ರಮನೊಸೆದು ವೀರನಾರಾಯಣನ ।
ಪ್ಪತಿಶಯಧವಳಂ ನವಮಂ
ಗತಕ್ಕಿತೋಪಸ್ಥಿತಪ್ರತಾಪೋದಯಮುಂ ॥ 2 ॥

ಶ್ರೀವಿಶದವರ್ಣ ಮಧುರಾ
ರಾವೋಚಿತೆ ಚತುರರುಚಿರಪದರಚನೆ ಚರಂ ।
ದೇವಿ ಸರಸ್ವತಿ ಹಂಸವಿ
ಭಾವದೆ ನೆಲೆಗೊಳ್ಗೆ ಕೂರ್ತ್ತು ಮನ್ಮಾನಸದೊಳ್ ॥ 3 ॥

ಪರಮಾಲಂಕಾರೋಚಿತ
ವಿರಚನೆಗಳ್ನೆಗಟ್ಟುವಾರ ವದನೋದರದೊ ।
ಳ್ನೆರಮಕ್ಕಾ ಪರಮಕವೀ
ಶ್ವರರೆವುಗೀ ಕೃತಿಯೊಳಕೃತಕಾಚಾರಪರರ್ ॥ 4 ॥

ಶ್ರುತದೊಳ್ಬವಿಸಿ ನೋಲ್ಪೊಡೆ
ಸತತಂ ಕವಿವೃಷಭರಾ ಪ್ರಯೋಗಂಗಳೊಳಂ ।
ಕೃತಪರಿಚಯಬಲನಪ್ಪನ
ನತಿಶಯಧವಳನ ಸಭಾಸದವ್ಯಕ್ತಿಸುವರ್ ॥ 5 ॥

ವ್ಯಾಕರಣಕಾವ್ಯನಾಟಕ
ಲೋಕಕಳಾಸಮಯಮಾದಳಂಕೃತಿಗಳೊಳಂ ।
ವ್ಯಾಕುಳನಲ್ಲದನೇಕೆ ವಿ
ವೇಕಬೃಹಸ್ಪತಿಯು ನಗರವುಂ ಪುಗುತಿರ್ಪಂ ॥ 6 ॥

ಮೃಗಪಕ್ಷಿಶಕುನಿಗಣಂಗಳೊ
ಳಗಣಿತನಿಜಜಾತಿಜನಿತಭಾಷೆಗಳೆಂದುಂ ।
ನೆಗಳ್ದಿಂತಿರೆ ನರರೊಳಮ
ಪ್ರಗಲ್ಭವಚನಪ್ರವೃತ್ತಿ ನೆಗಳ್ದಂ ಸಹಜಂ ॥ 7 ॥

ಗುಣಮಿದು ದೋಷವಿದೆಂಬೀ
ಗಣಿದಮನೆತ್ತಲ್ಕುಗುಮಂಕುತಪ್ರಕೃತಿ ಜನಂ ।
ತೃಣಸಸ್ಯಘಾಸನಿಷಯ
ಪ್ರಣಯಂ ಸಮವೃತ್ತಿಯಪ್ಪವೊಲ್ಮೃಗಗಣದೊಳ್ ॥ 8 ॥

ಅದಱಿಂ ಪರಮಾಗಮಮಕೋ
ವಿದನಪ್ಪುದು ಪೂರ್ವ್ವಕಾವ್ಯರಚನೆಗಳಂ ತಾಂ ।
ವೊದಲೊಳ್ಕಲ್ತಂಗಲ್ಲದೆ
ಪದದೊಳ್ಪ್ರಾಣಂ ಪಿಡಂಗುಮಾಕ್ಯಮೆ ಕೃತಿಯೊಳ್ ॥ 9 ॥

ಜಡಜನಮುಮೆಲ್ಲನೋದಂ
ತಡೆಯದೆ ಕಲ್ಗುಂ ಗುರೂಪದೇಶಕ್ರಮದಿಂ ।
ನುಡಿವಲ್ಮೆಯಲ್ತದೇಂಕ
ಲ್ಕೊಡನೋದುವುದಲ್ತಿ ಗಿಳಿಗಳುಂ ಪುರುಳಿಗಳುಂ ॥ 10 ॥

ಪ್ರತಿಭಾವತ್ತ್ವಮುಮುಮಕೃತಕ
ಚತುರತೆಯುಂ ಪರಮಬುಧಜನೋಪಾಸನಮುಂ ।
ಕೃತಿಪರಿಚಯಮುಮುಂ ತರ್ಕ್ಕಂ
ಪ್ರತೀತಿಯುಂ ವಾಗ್ವಿದಗ್ಧಜ್ಞಾನಿಪುಣತೆಯೊಳ್ ॥ 11 ॥

ಪಸರಿಸಿದಾ ಬಗೆ ಮನಮಂ
ಪೊಸತಾಗೆ ನೆಗಳ್ಚಿಲಱಿಯದಾ ರಚನೆಯೊಳೀಂ ।
ಬಸನಂ ತನಗಿನಿತಱಿ ಬೇ
ವಸವೀಂ ಕವರ್ದವರಮೊಳರೆ ಕವಿಯಲ್ಲದರಂ ॥ 12 ॥

ಬಗೆಬಗೆದು ಕೇಳ್ದ ಬುಧರೊಲ
ವೊಗೆದಿರೆ ಹೃದಯದೊಳೆ ತಾಳ್ದ ಮಣಿಹಾರಂಬೊಲ್ ।
ಸೊಗಯಿಸುವ ವಚನವಿರಚನೆ
ನೆಗಳ್ದಂ ಭಾವಿಸುವೊಡದಱಿ ಪೆಂಪತಿಸುಲಭಂ ॥ 13 ॥

ನೆನೆನೆನೆದು ಪೆಱರ ಮೂತುಗ
ಳನೆ ನೆಗಳ್ದಿರೆ ಕೃತಿಯೊಳಡುವವಂ ನಗದ ಗುಹಾ ।
ಧ್ವನಿಯುವೊಲನರ್ತ್ಥವಚನಂ

ಕುಲುವಂತು ಪೆಱರ ಬಗೆಯಂ
ತೆಲ್ದೆರೆ ಪೆಱರ್ಗಲ್ಪಲಾಪ್ಯರ್ವಂ ಮಾತಲ್ವಂ ।
ಕಿಲ್ದಱೊಳೆ ಪಿರಿದುಮರ್ತ್ಥವ
ನಲ್ಪಲ್ನೆಲ್ವಾತನಾತನಿಂದಂ ನಿಪುಣಂ ॥ 15 ॥

ನುಡಿಯಂ ಛಂದದೊಳೊಂದಿರೆ
ತೊಡರ್ಚ್ಚಲಲ್ವಾತನಾತನಿಂದಂ ಜಾಣಂ ।
ತಡೆಯದೆ ಮಹಾಧ್ವಕ್ರಮಿಗಳ
ನೊಡರಿಸಲಾಪ್ಯರ್ವತನೆಲ್ಲರಿಂದಂ ಬಲ್ಲಂ ॥ 16 ॥

ಮಾತಲ್ವರ್ಕ್ಕೆಲಬರ್ಜ್ಜಗ
ತ್ಪ್ರತಳಗತಮನುಜರೊಳಗೆ ಮಾತಲ್ವವರೊಳ್ ।
ನೀತಿವಿದರವುಳಕವಿತಾ
ನೀತಿಯುತರ್ಕ್ಕೆಲರೆ ಪರವುಕವಿವೃಷಭರ್ಕ್ಕಳ್ ॥ 17 ॥

ಪಾಪವಿುದು ಪುಣ್ಯವಿುದು ಹಿತ
ರೂಪವಿುದಹಿತಪ್ರಕಾರವಿುದು ಸುಖವಿುದು ದುಃ ।
ಖೋಪಾತ್ತವಿುದೆಂದಱ್ಪುಗು
ವು ಪರವುಕವಿಪ್ರಧಾನರಾ ಕಾವ್ಯಂಗಳ್ ॥ 18 ॥

ಲೌಕಿಕಸಾವುಯಿ ಕೋರುವಿ
ನೇಕವುುವುಭ್ಯುದಯುಪರವುನಿಃಶ್ರೇಯಸವುುಂ ।
ಪ್ರಾಕಟವುಕ್ಕುಂ ವಿದಿತಾ
ನೇಕಕವೀಕಪ್ರಯೋಗಪದಪದ್ಧತಿಯೊಳ್ ॥ 19 ॥

ಅಧಿಕೃತಸತ್ಪುರುಷಾರ್ಥ
ಪ್ರಧಾನಧರ್ವಾರ್ತ್ಥಕಾವುವೋಕ್ತುಂಗಳವಾ ।
ಬುಧಜನವಿವಿಕ್ತಕಾವ್ಯ
ಪ್ರಧಾರಿತಾರ್ಥಂಗಳಖಿಳಭುವನಹಿತಂಗಳ್ ॥ 20 ॥

ಲೋಕದೊಳದಱುಂ ಕಾವ್ಯ
ಶ್ರೀಕರಣೋದ್ಯುಕ್ತನಕ್ಕೆ ಕವಿ ತನ್ನಱುವಂ ।
ತಾಕಲ್ಪಾಂತಸ್ಥಾಯಿ
ಶ್ರೀಕೀರ್ತ್ತಿವಧೂಪ್ರಧಾನವಲ್ಲಭನಕ್ಕುಂ ॥ 21 ॥

ಕವಿಭಾವಕೃತಾನೇಕ
ಪ್ರವಿಭಾಗವಿವಿಕ್ತಸೂಕ್ತವುಾರ್ಗಂ ಕಾವ್ಯಂ ।
ಸವಿಶೇಷಶಬ್ದರಚನಂ
ವಿವಿಧಾರ್ಥವ್ಯಕ್ತಿವರ್ತಿತಾಲಂಕಾರಂ ॥ 22 ॥

ನರಲೋಕಚಂದ್ರನುತದಿಂ
ಪರಮಾಲಂಕಾರಮುಂ ಶರೀರಮುಮೆಂದಿಂ ।
ತೆರಡಕ್ಕುಂ ಭೇದಂ ಬಹು
ಪರಿಕರಮಾ ಕಾವ್ಯವಸ್ತು ಪುರುಷಂಗೆಂದುಂ ॥ 23 ॥

ಅವಱೊಳ್ಶರೀರಮೆಂಬುದು
ಕವಿಪ್ರಧಾನಪ್ರಯೋಗಪದಪದ್ಧತಿಯೊಳ್ ।
ದ್ವಿವಿಧಮೆನಿಕ್ಕುಮದತಿಶಯ
ಧವಳೋಕ್ತಕ್ರಮದೆ ಗದ್ಯಪದ್ಯಾಖ್ಯಾತಂ ॥ 24 ॥

ಪದಪಾದವಿಯುತನಿಯಮಾ
ಸ್ಪದಮುಲ್ಲದಳಂಕೃತಂ ಕ್ರಿಯಾಕಾರಕದೊಳ್ ।
ಪುದಿದರ್ಥವ್ಯಕ್ತಿಯನೀ
ವುದು ಗದ್ಯಮನೇಕರೊಪಭೇದವಿವಿಕ್ತಂ ॥ 25 ॥

ಸದಮುಲಸಮುಸಂಸ್ಕೃತವಾ
ಕ್ಯದ ಹೃದಯಂ ಹರ್ಷಚರಿತಕಾದಂಬರಿಗಳ್ ।
ಮೊದಲಾಗಿ ನೆಗಳ್ತ್ತುವಿದಱೊಳ್
ಸದಳಂಕಾರಂಗಳಖಿಳಕವಿವಿದಿತಂಗಳ್ ॥ 26 ॥

ವಿುಗೆ ಕನ್ನಡಗಬ್ಬಂಗಳೊ
ಳಗಣಿತಗುಣಗದ್ಯಪದ್ಯಸಂವಿಶ್ರಿತವುಂ ।
ನಿಗದಿಸುವರ್ಗದ್ಯಕಥಾ
ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕ್ಕಳ್ ॥ 27 ॥

ಸಕಲಕಲಾಭೂಷಾಲ
ಕಿಕಸಾಮಯಿಕಾದಿವರ್ಣನಾನಿರ್ದಿಕ್ತ ।
ಪ್ರಕಟತರವಸ್ತು ವಿಸ್ತರ
ವಿಕಲ್ಪವಿದನಲ್ಲದಾಗದಾಗದು ಪೇೞಲ್ ॥ 28 ॥

ವಿಮಳೋದಯ ನಾಗಾರ್ಜ್ಜುನ
ಸಮೀತ ಜಯಬಂಧುದುರ್ವ್ವಿನೀತಾದಿಗಳೀ ।
ಕ್ರಮದೊಳ್ನಿಗೞ್ದಿ ಗದ್ಯಾ
ಶ್ರಮಪದಗುರುತಾಪ್ರತೀತಿಯಂ ಕೈಕೊಂಡರ್ ॥ 29 ॥

ಪದ್ಯಂ ಸಮಸ್ತ ಜನತಾ
ಹೃದ್ಯಂ ಪದವಿದಿತಪಾದನಿಯಮನಿವೇದ್ಯಂ ।
ವಿದ್ಯಾಪಾರಪರಾಯಣ

ಪ್ರಣುತಗುಣಸೂರಿನಾರಾ
ಯಣಭಾರವಿಕಾಳದಾಸಮಾಘಾದಿಗಳೀ ।
ಗಣಿದದೊಳೆ ಮಹಾಕಾವ್ಯ
ಪ್ರಣಯಮನಾಗಿಸಿದರಮಳಕವಿವೃಷಭರ್ಕ್ಕಳ್ ॥ 31 ॥

ನುಡಿಗೆಲ್ಲಂ ಸಲ್ಲದ ಕ
ನ್ನಡದೊಳ್ಪ್ರತ್ಯಾಣಮುಂ ಬೆದಂಡೆಯುಮೆಂದೀ ।
ಗಡಿನ ನಿಗಟ್ತೆಯು ಕಬ್ಬದೊ
ಳೊಡಂಬಡಂ ಮಾಡಿದರ್ಪುರಾತನಕವಿಗಳ್ ॥ 32 ॥

ಪರಮಶ್ರೀವಿಜಯುಂಕವೀ
ಶ್ವರಪಂಡಿತಚಂದ್ರಲೋಕಪಾಲಾದಿಗಳಾ ।
ನಿರತಿಕಯವಸ್ತು ವಿಸ್ತರ
ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ ॥ 33 ॥

ಈಂದವುಮುಮವಳನ ವೃತ್ತವು
ಮೊಂದೊಂದೆಡೆಗೊಂದು ಜಾತಿ ಜಾಣಿಸೆಯೆ ಬೆಡಂ ।
ಗೊಂದಿವಳೊಳಮರೆ ಪೇಳ
ಲ್ಸುಂದರರೂಪಿಂ ಬೆದಂಡೆಗಬ್ಬವುದಕ್ಕುಂ ॥ 34 ॥

ಕಂದಂಗಳ್ಪಲವಾಗಿರೆ
ಸುಂದರವೃತ್ತಂಗಳಕ್ಕರಂ ಚೌಪದಿ ಮು ।
ತ್ತಂದಲ್ಲೀತಿಕೆ ತ್ರಿವದಿಗ
ಳಂದಂಬೆತ್ತೆಸೆಯೆ ಪೇಳ್ದೊಡದು ಜತ್ತಾಣಂ ॥ 35 ॥

ಕಾವೇರಿಯಿಂದವಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್ ।
ಭಾವಿಸಿದ ಜನಪದಂ ವಸು
ಧಾವಳಯವಿಲೀನವಿಕದವಿಷಯವಿಶೇಷಂ ॥ 36 ॥

ಅದಱೊಳಗಂ ಕಿಸುವೊಱಲಾ
ವಿದಿತವಹಾಕೊಪಣನಗರದಾ ಪುಲಿಗೆಱೆಯಾ ।
ಸದಭಿಸ್ತುತಮಪ್ಪೆಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥ 37 ॥

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪ್ಪರಾ ನಾಡವರ್ಗಳ್ ।
ಚದುರರ್ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ ॥ 38 ॥

ಕುಲೀತವರಲ್ಲದೆ ಮುತ್ತಂ
ಪೆಱರುಂ ತಂತಮ್ಮ ನುಡಿಯೊಳೆಲ್ಲಂ ಜಾಣರ್ ।
ಕಿಱಿವಕ್ಕಳ್ಮಾವುಗರು
ಮುಱಿಪಲ್ಕಱಿವರ್ವಿವೇಕವುಂ ಮಾತುಗಳಂ ॥ 39 ॥

ಜಾಣರ್ಕ್ಕಳಲ್ಲದವರುಂ
ಪೂಣಿಗರಱಿಯದೆಯುವುಱಿವವೋಲವಗುಣದಾ ।
ತಾಣವುನಿನಿಸೆಡೆವೆತ್ತೊಡೆ
ಮಾಣದೆ ಪಿಡಿದದನೆ ಕೃತಿಗಳಂ ಕೆಡೆನುಡಿವರ್ ॥ 40 ॥

ಸಕ್ಕದವುಂ ಪಾಗದವುಮು
ದಕ್ಕುಂ ಬಗೆದಂತೆ ಸವುಱಿ ಪೇೞಲ್ಮುನ್ನಂ ।
ನಿಕ್ಕುವನೊಳವಪ್ಪುದಱಿಂ
ತಕ್ಕಂತವಱಿವಱಿ ಲಕ್ಷ್ಯವುಂ ಲಕ್ಷಣಮುಂ ॥ 41 ॥

ಅರಿದಾದಂ ಕನ್ನಡದೊ
ಳ್ತರಿಕೊಱಿಗೊಂಡಱಿಯೆ ಪೇೞ್ವೆನೆಂಬುದಿದಾರ್ಗ್ಗಂ ।
ಪರಮಾಚಾರ್ಯ್ಯರ ಪೊಲ್ಲ
ಯ್ತಿರಲಱಿಯರ್ಕ್ಕನ್ನಡಕ್ಕೆ ನಾಡವರೋಜರ್ ॥ 42 ॥

ಅವಗುಣಮಿನಿತಾದೊಡಮಾ
ಕವಿತಾಬಂಧವನಶೇಷವುಂ ದೂಷಿಸುಗುಂ ।
ಸವಿಳಾಸಲೋಲಲೋಚನ
ವಿವರವನೆಡೆವೆತ್ತ ಸದ ವೋಲನವರತಂ ॥ 43 ॥

ಅದಱಿಂದಲಸದೆ ಪೀನಂ
ಪದೆಯದೆ ಪಾಂಗಱಿದು ದೋಷವುಂ ಪಿಂಗಿಸಿ ತ ।
ಪ್ಪದೆ ಬಗೆದು ಪೇೞ್ವುದಾಗವು
ಮುದಾರನೃಪತುಂಗದೇವವಿದಿತಕ್ರಮದಿಂ ॥ 44 ॥

ಗೀತಿಕೆ ॥ ಕಾಣನೆ ಗೆಯ್ದುಂ ತನ್ನ ದೋಷವುಂ
ಕಾಣದಂತೆಂದುಂ ಕಣ್ಗಳ್ತಂವು ಕಾಡಿಗೆಯುಂ ।
ಪೂಣಿಗನಂತದಱಿಂ ಪೆಱರಿಂ
ಜಾಣರಿಂ ನೋಡಿಸಿ ಪೇೞ್ವುದು ಕಬ್ಬಮುಂ ॥ 45 ॥

ಕಂ॥ ದೋಸಮಿನಿತೆಂದು ಬಗೆದು
ದ್ಭಾಸಿನಿ ತಱಿಸಂದು ಕನ್ನಡಂಗಳೊಳೆಂದುಂ ।
ವಾಸುಗಿಯುವುಱಿಯಲಾಱದೆ
ಬೇಸಱುಗುಂ ದೇಸಿ ಬೇಱೆವೇಱಿಪ್ಪುದಱಿಂ ॥ 46 ॥

ಅಂತುಂ ಪುರಾಣಕವಿಗಳ
ಸಂತತಿಗತಮಾರ್ಗಗದಿತದೋಷಂಗಳುಮಂ ।
ಚಿಂತಿಸಿ ಮತ್ತೆನ್ನಱಿವುದ
ನಂತರಿಸದೆ ಬುಧಜನಕ್ಕೆ ಕೆಲವಂ ಪೇೞ್ವೆಂ ॥ 47 ॥

ನೆಲಸಿದ ಕಾವ್ಯಂ ಕಾವ್ಯ
ಕ್ಕೆ ಲಕ್ಷಣಂ ಸತತವೆಂದೆ ಪಟಿಗನ್ನಡವುಂ ।
ಪೊಲಗೆಡಿಸಿ ನುಡಿವರಾಗವು
ಬಲಹೀನದೇಸಿಯಲ್ಲದೆಂದಱಿದಿದ್ದರ್ಂ ॥ 48 ॥

ಪೊಡವಿಪತಿಗೊರೆವೆನನೆ ಜೇ
ೞ್ವಡೆಯದುವದೆಕರಿಸಿ ಕಬ್ಬಿಗರ್ದ್ದೞ್ಕೆನೆಯುಂ ।
ಹಡುವಸುವುಱೆಸೆಟ್ಟಿಸುಗೆಂ
ವುಡಿಯೊಳವಾಗ್ಗೆಂದು ನುಡಿವ ಪಟಿಗನ್ನಡವುಂ ॥ 49 ॥

ದೊರೆಕೊಂಡಿರೆ ಸೊಗಯಿಸುಗುಂ
ಪುರಾಣಕಾವ್ಯಪ್ರಯೋಗದೊಳ್ತತ್ಕಾಲಂ ।
ವಿರಸಂ ಕರಮವು ದೇಸಿಗೆ
ಜರೆದ್ವಧೂವಿಷಯರಾಗರಸರಸಿಕತೆವೊಲ್ ॥ 50 ॥

ಸಮಸಂಸ್ಕೃತಂಗಳೊಳ್ಸ
ಯ್ತಮರ್ದಿರೆ ಕನ್ನಡವನಱಿದು ಪೇೞ್ಗೆಂಬುದಿದಾ ।
ಗಮಕೋವಿದನಿಗದಿತಮಾ
ರ್ಗವಿದಂ ಪೆರಸಲ್ಕಮಾಗದೀ ಸಕ್ಕದದೊಳ್ ॥ 51 ॥

ಪೆರಸಿರೆ ಕನ್ನಡದೊಳ್ಪಂ
ಧುರಮಾಗದು ಕಾವ್ಯರಚನೆ ಪೇೞ್ವೊಡೆ ಪೀನಂ ।
ಪರುಷತರಮಕ್ಕುನೋದುಂ
ಕರಡೆಯ ಮದ್ದಳೆಯ ಜರ್ಜ್ಝರಧ್ವನಿಗಳವೊಲ್ ॥ 52 ॥

ಬಹಿರಂತರುಪವನಂಗಳೊ
ಳಹರಹಮಾ ಪರಭೃತಂಗಳುಲಿವ ರವಂಗಳ್ ।
ಸಹಸಾ ತಳವುಳಗೊಳಿಸದ
ವಹೋ ಮನಂಗಳನಿತಸ್ತತಂ ವಿರಹಿಗಳಾ ॥ 53 ॥

ವಿದಿತಸಮಸಂಸ್ಕೃತೋದಿತ
ಪದಂಗಳೊಳ್ಪುದಿದು ಪೆರಸಿ ಬರೆ ಕನ್ನಡದೊಳ್ ।
ವುದಮನವು ತಕ್ಕುದತಿಕಯ
ಮೃದಂಗಸಂಗೀತಕಾದಿವುಧುರರವಂಬೊಲ್ ॥ 54 ॥

ಬಹಿರುದ್ಯಾನಾಂತರದೊಳ್
ಸಹಸೋದಿತಮತ್ತಕೋಕಿಲೋಜ್ಜೃಂಭ್ವಧ್ವನಂ ।
ಮುಹುರಾಕರ್ಣ್ಣಿಸೆ ಪಡೆದ
ತ್ತಹರ್ನಿರ್ಶಂ ಪೆರ್ಚ್ಚನಂತರಂಗಕ್ಕೆನ್ನಾ ॥ 55 ॥
ನೆಗಲ್ದಿರ್ದ ಕನ್ನಡಂಗಳೊ
ಳಗಣಿತಗುಣವಿದಿತಸಂಸ್ಕೃತೋಕ್ತ ಕ್ರಮುವಂ ।
ಬಗೆದೊಂದುಮಾಡಿ ಪೇೞ್ದೊಡೆ
ಸೊಗಯಿಸುಗುಂ ಕಾವ್ಯಬಂಧವೆಂದುವನಿಂದ್ಯಂ ॥ 56 ॥
ತಱುಸಂದಾ ಸಕ್ಕದವುವು
ನಱಿಯದೆ ಕನ್ನಡವುವಂ ಸಮಾಸೋಕ್ತಿಗಳೊಳ್ ।
ಕಱುತಿತು ಬೆರಸಿದೊಡೆ ವಿರಸಂ
ವಱುಗುವ ಪಾಲ್ಗಳೆಯಾ ಪನಿಗಳಂ ಬೆರಸಿದವೊಲ್ ॥ 57 ॥
ಅರಸುಂಕುವಾರನನಾಯತ
ತರಕಡೆಗಣ್ಣಿಂದೆ ನೋಡಿ ಕೆಳದಿಸವೇತಂ ।
ಪರಿಗತನಗೆಯಿಂದಿರ್ದ್ದಂ
ಗುರುನಾಣ್ಪರದಿಂದವೇೞಲಿಗಿ ಮುಖತಾವರೆಯಂ ॥ 58 ॥
ನರಪತಿತನಯನನಾಯತ
ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ ।
ಪರಿಗತಹಾಸ್ಯದೊಳಿರ್ದ್ದಂ
ಗುರುಲಜ್ಜಾಭರದಿನೆೞಲಿಗಿ ಮುಖಸರಸಿಜಮಂ ॥ 59 ॥
ಎಂದಿಂತು ಸಮಾಸೋಕ್ತಿಯೊ
ಳೊಂದುಗಿರೆ ಸಕ್ಕದಂಗಳಂ ಕನ್ನಡಮುಂ ।
ಸುಂದರಮಕ್ಕುಂ ಕವಿಪದ
ವೊಂದಿದವೊಲ್ಕನಕರಚನೆಯೊಳ್ಮಣಿನಿಕರಂ ॥ 60 ॥
ಶ್ರುತದುಷ್ಟಮರ್ತ್ಥದುಷ್ಟಂ
ಕೃತಿಕಷ್ಟಂ ಕಲ್ಪನೋಕ್ತಿಕಷ್ಟವುಮೆಂದೀ ।
ಕೃತಕೃತ್ಯಮಲ್ಲವಲ್ಲಭ
ಮತದಿಂ ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ ॥ 61 ॥

(ಇವಱೊಳ್ ಶ್ರುತಿಕಷ್ಟ ಕಲನೋಕ್ತಿಕಷ್ಟಂಗಳೆಂತೆನೆ)

ಪರದರ್ಗ್ಗಪಾಖ್ಯರ್ಗ್ಗ
ದರಸರ್ಗ್ಗಕುಡಿಯರಪ್ಪ ನಾಲ್ವರ್ಗ್ಗಗಳ್ ।
ಸ್ಥಿರಗೋಷ್ಠ್ಯಧ್ಯಾಯಕ್ಷೇತ್ರ
ಪರಿಪಾಲ್ಯಕ್ಷೇತ್ರಕಷ್ಟ್ರಣಂಗಳ್ಕ್ರಯಿಗಳ್ ॥ 62 ॥

ಮಸಗಿ ಪೆಸೆದಿರ್ದ್ದ ವಿವರವು
ನಸಿಯದೆಱೆದೆವೊತ್ತಿ ಪೊಕ್ಕ ಕೆಲನಂ ಕೊಱ್ದು ।
ತ್ತೆಸೆದುವಿದಿಱಿರ್ದ್ದುವೆಳ್ದೆ
ಳ್ದೆ ಸವಂಜಸನಿಕ್ಕಿವಿಕ್ಕನರಿವಾಹನಿಯಂ ॥ 63 ॥

ಕುಱುತಂತೆ ಪೇೞ್ದ ನಾಲ್ಕುಂ
ಕುಱುಪುಗಳಂದಱಿದು ಪರರ ದೋಷಂಗಳುಮಂ ।
ಪೆಱವುವುದುನೀ ಮೂಲ್ಕೆಯೊಳಂ
ತೊಱೆವುದು ತೊಱೆವಂತಸಾಧುಜನಸಂಗತಿಯಂ ॥ 64 ॥

ಮಿಗೆ ದುಷ್ಕರಕಾವ್ಯಂಗಳೊ
ಳಗರ್ಹಿತಪ್ರಯುಮುಕ್ಕುಮೂ ಶ್ರುತಿಕಷ್ಟಂ ।
ಪಗರಣದೊಳುಱಿವ ವಱೂಱುಂ
ನಗಿಸುಗುಮಪ್ಪುದಱಿನಲ್ಲಿಗಂತವು ದೋಷಂ ॥ 65 ॥

ಯತಿಭಂಗವರ್ಥಶೂನ್ಯಂ
ಸತತವಿರುದ್ಧಾರ್ಥವುಕ್ತಪುನರುಕ್ತಾರ್ಥಂ ।
ಚ್ಯುತಯಾಥಾಸಂಖ್ಯಂ ವ್ಯವ
ಹಿತಮಚ್ಛಂದಂ ವಿಸಂಧಿಕಂ ನೇಯಾರ್ಥಂ ॥ 66 ॥

ಆಗಮನವಯನ್ಯಾಯವಿ
ಭಾಗಕಳಾಕಾಲಲೋಕದೇಶವಿರುದ್ಧಂ ।
ಭೋಗಿವಿಷಂಬೊಲ್ವಾಣ
ತ್ಯಾಗವನಾಗಿಸುಗುಮವುಮಳಕೃತಿವಧುಗಿನಿತುಂ ॥ 67 ॥

ಯತಿಯೆಂಬುದುಸಿಱು ತಾಣಂ
ಕೃತಾಸ್ಪದಂ ವೃತ್ತಜಾತಿಪದಪಕ್ಷತಿಯೊ ।
ಳ್ಪತತಂ ಛಂದೋವಿದಿತ
ಪ್ರತೀತಶಾಸ್ತ್ರೋಕ್ತಮಾರ್ಗದಿಂದಱಿವುದದಂ ॥ 68 ॥

ಕೇಡಡಸಿದಂದು ಬಗೆಯಂ
ಕೂಡದು ಕೂಡಿದುದುಮಱಿದು ವಿಪರೀತಮುಮಂ ।
ಮಾಡುಗುಮದಱಿಂ ಕವ್ಯ
ಕ್ಕೋಡಿ ಬರ್ದುಂಕಲ್ಲವಱಿವರಾಬ್ಧಿತಳದೊಳ್ ॥ 69 ॥

ತಡವಡಿಸಿ ಯತಿಯನಿಂತಿರೆ
ತೊಡಚ್ಚಿ ಕೆಡೆವೇೞ್ಪೊಡಕ್ಕುಮದು ಯತಿಭಂಗಂ ।
ಸಡಲಿಸದಲಸದದಂ ಪೇ
ೞ್ವೆಡೆಯೊಳ್ನಲೆ ಪೇೞಲಾಪ್ಪೆಡಂತದದೋಷಂ ॥ 70

ಕೇಡಡಸಿದೊಡಂ ಬಗೆಯಂ
ಕೂಡದು ಕೂಡಿದುದುಮಲ್ಲದು ವಿಪರೀತಮುಮಂ ।
ಮಾಡುಗುಮುದಱಿಂ ಕರ್ಮ್ಮ
ಕ್ಕೋಡಿ ಬದುರ್ಂಕಲ್ತಿ ಕಲ್ತರಾರ್ಬ್ಬಿನ್ನಣಮಂ ॥ 71 ॥

ದೋಸಮನೆ ಗುಣದವೋಲು
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯ ।
ದ್ವೇಸಿಯಿನೆ ನಿಱಿಸಿ ಖಂಡ
ಪ್ರಾಸಮನತಿಕಯಮಿದೆಂಬ ಯತಿಯಂ ಮಿಕ್ಕರ್ ॥ 72 ॥

ನಿರತಿಕಯಮಕ್ಕುಮದು ಬಂ
ಧುರಕವಿಜನತಾಪ್ರಯೋಗಸಂಬಂಧನದಿಂ ।
ಗುರುತರಲಜ್ಜಾಭರಮಂ
ಥರಲೀಲಾಲಸವಿಲಾಸಿನೀಚಳಿತಂಬೊಲ್ ॥ 73 ॥

ಅಂತುಂ ಯತಿಯಂ ಪೇಳ್ದಾ
ರ್ಪ್ಪಂತಾದ್ಯದೊಳಲಸದಾರ್ಯ್ಯೆಯೊಳ್ಕಂದದೊಳಂ ।
ಸಂತಂ ದ್ವಿತೀಯಪಾದಗ
ತಾಂತದೊಳಕ್ಕುದು ಚತುಷ್ಪದೀಪದವಿಗಳೊಳ್ ॥ 74 ॥

ಸಮುದಾಯಾರ್ಥಮನಾರಯೆ
ಸಮನಿಸುವಥ ಪ್ರತೀತಿ ತೋಱದೊಡೆಲ್ಲಂ ।
ಕ್ರಮಮಿರ್ಪ್ಪುದರ್ಥಶೂನ್ಯಂ
ಸಮಸ್ತ ಕವಿವೃಷಭದೂರದೂಷಿತಮಾರ್ಗ್ಗಂ ॥ 75 ॥

ಮುನಿವೀತರಾಗನೆಂದುಂ
ಜನಮುಂ ಸಾರ್ತ್ತಕ್ಕುಮಾವ ತೆಱದಿಂ ಪೋಪಂ ।
ಮನಮಂಜುಗುಮದಱಿಯದವಂ
ಮುನಿಗುಂ ಪಗೆವಂಗೆ ಪಾಪಕರ್ಮ್ಮಂ ಪೊಲ್ಲಂ ॥ 76 ॥

ಸ್ಥಿರಮರ್ಥಶೂನ್ಯಮೆಂಬುದು
ದುರುಕ್ತಮಿದನಿಂತು ಪೇೞ್ದೊಡೆಲ್ಲಂ ಪೀಸಂ ।
ಮುರುಳ್ದುಂ ಮುದಿರಾಪರವಶ
ಕರೀರನುಂ ಪೇೞ್ದುದಲ್ತೆ ನಾವಂ ಪೇೞ್ದಂ ॥ 77 ॥

ಪರಿಗೀತಾರ್ಥಂ ಪೂರ್ವ್ವಾ
ಪರದೊಳ್ಪಗೆವಾಗಳೆಂದುವೊಂದಱೊಳೊಂದುಂ ।
ದೊರೆಕೊಂಡೊಂದದೊಡದು ದು
ಷ್ಕರವೆಂ ವಿರುದ್ಧಾರ್ಥಮೆಂಬುದಾದಂ ದೋಷಂ ॥ 78 ॥

ಅರಿನೃಪಬಲವುಂ ಗೆಲ್ದುಱೆ
ಪರಾಕ್ರಮುಕ್ರಮದೆ ಶೌರ್ಯ್ಯಮುಂ ಪ್ರಕಟಿಸು ನೀಂ ।
ನರವುಹಿತಾ ನಿನಗೇನಹಿ
ತರುವೊಳರೇ ಸತತಪರಹಿತಾಚಾರಪರಾ ॥ 79 ॥

ಇದು ವಿದಿತವಿರುದ್ಧಾರ್ಥ
ಕ್ಕುದಾಹೃತಂ ಹರಣಮಾತ್ರವಿನ್ನಪ್ಪುವನುಂ ।
ಸದಭಿಮತಕಾವ್ಯಪದವಿ
ವಿದೂರಗತವಾಗೆ ಪರಿಹರಿಕ್ಕೆ ಬುಧರ್ಕ್ಕಳ್ ॥ 80 ॥

ಪುನರುಕ್ತವೆಂಬುದಕ್ಕುಂ
ನೆನೆಯದೆ ಪೂರ್ವೋದಿತಾರ್ಥಪದಪದ್ಧತಿಗೊಂ ।
ದಿನಿಸುಂ ವಿಶೇಷವಿಲ್ಲದೆ
ಜನಿಯಿಸಿದ ಪದಾರ್ಥವುದಱುದೀ ದೃಷ್ಟಾಂತಂ ॥ 81 ॥

ತ್ರಿದಶಸುರಲೋಕವಾಸಾ
ಸ್ಪದವುಂ ಪೆಱಗುಂ ಮನುಷ್ಯವನುಜಂ ನಿನ್ನಾ ।
ಪದಚರಣಯುಗದ್ವಯವುಂ
ವುದದಱ್ತಿಯೆ ಬಗೆವು ನೆನೆವನನುದಿನವೆಂದುಂ ॥ 82 ॥

ನಿಯತೋದ್ದೇಶಯುವನುದೇ
ಶಯುವನುವಂದಂತು ಪೇಳೆ ಯಾಥಾಸಂಖ್ಯಾ ।
ಹ್ವಯವುಕ್ಕುಮಾಗವೋಕ್ತಾಕ್ಕೆ
ಶ್ರಯದಿಂ ವ್ಯತಿರೇಕವುಕ್ಕುವುಲ್ಲದುವೆಲ್ಲಂ ॥ 83 ॥

ಚ್ಯುತಯಾಥಾಸಂಖ್ಯಾರ್ಥ
ಪ್ರತೀತದೋಷಾನುವಸಥವೆಂದಱಿಗೆ ಬುಧರ್ ।
ಸತತವುದಱಿಯೆ ನಿದರ್ಶನ
ಗತವಿಂತಕ್ಕುಂ ಪ್ರವೋದದಿಂ ಕವಿಜನದೊಳ್ ॥ 84 ॥

ನಳನೋತ್ಪಳಾಳರುಚಿಗಳ
ನಳಕಾನನನಯುನಯುಗಳದಿಂ ಗೆಲ್ದಿರ್ದ್ದಂ ।
ಕೊಳದೊಳಗೇನಂನೋಲ್ಪಿಗೆ
ವಿಳಸಿನೀ ನಿನ್ನ ಪೋಲದೇನತಿಶಯುವೋ ॥ 85 ॥

ಅಳಕಾನನನಯುನಂಗಳೊ
ಳಳನಳನೋತ್ಪಳವಿಕಾಸವುಂ ಗೆಲ್ವುದಱಿಂ ।
ತಿಳಿಗೊಳನಂ ಪೋಲ್ತಿರ್ದ್ದಂ
ತಿಳಯದಿದೇನೆಂಬುದಿಂತಿದನ್ವಯುವುದಱೊಳ್ ॥ 86 ॥

ಸವಿಕೇಷಾಲಂಕಾರೋ
ದ್ಭವಮಾಗಿಯುಮೊಂದುವರ್ಥದೊಳ್ಸಂಬಂಧ ।
ವ್ಯವಧಾನಮೂದೊಡಕ್ಕುಂ
ವ್ಯವಹಿತದೋಷಂ ಪ್ರಯೋಗವಿದಾ ತೆಱನದಱಿ ॥ 87 ॥

ಮನದೆ ನೆನೆದವರ ಕಿಡುಗುಂ
ಜಿನಾಧಿಪಾ ನಿನ್ನ ಪಾಪನಿಚಯಂ ಗುಣವುಂ ।
ಮುನಿಗಳುವುದಱಿಂ ತ್ವತ್ಸೇ
ವನೆಯಿಂ ಕಿಡಿಪಲ್ಕೆ ಪತ್ತಿದರ್ಸಂಸೃತಿಯಂ ॥ 88 ॥

ಗುರುಲಘುವಿನ್ಯಾಸಕ್ರಮ
ವಿರಚನೆ ಯೂನಾತಿರಿಕ್ತಮೂದೊಡೆ ಕೃತಿಯೊಳ್ ।
ನಿರುತಂ ಛಂದೋಭಂಗಂ
ದುರುಕ್ತತರದೋಷಮದಱಿ ಪಾಂಗಿಂತಕ್ಕುಂ ॥ 89 ॥

ಮೊದಲಪದಂ ನ್ಯೂನಾಕ್ಷರ
ಮುಪಱಿಂದೆ ಬಱಿಕ್ಕಮರ್ಥಮುಧಿಕಾಕ್ಷರಮಿಂ ।
ತಿಪಱಿಂ ಛಂದೋಭಂಗಂ
ಪದನಱಿದದನಿಂತು ಸಮುಱಿ ಪೇೞ್ದೊಡೆ ಚೆಲ್ವುಂ ॥ 90 ॥

ವನರುಹದಳನಯನೇ ನಿ
ನ್ನನೆ ನೆನೆನೆನೆದಿರುಳೊಳೊಱುಗದಿರೆ ಕಡೆಗಣ್ಗ ।
ಳ್ಮನಿಸನಭಿನಯಿಪವೊಲ್ಕೆ
ಮ್ಮನೆ ರಕ್ತಾಂಭೋಜರುಚಿಯನಿಚ್ಚಳಗೊಳ್ಗುಂ ॥ 91 ॥

ಛಂದಕ್ಕೆ ಬಾರದೆಂದಱಿ
ದೊಂದೊಂದಕ್ಷರಮೊಳೊಂದಿ ಬಂದು ನಿಂದಕ್ಷರಮುಂ ।
ಸಂದಿಸದೆ ಪೇೞ್ದೊಡವು ಕೃತಿ
ನಿಂದಿತಮೆಂದುಂ ವಿಸಂಧಿಯೆಂಬುದು ದೋಷಂ ॥ 92 ॥

ಜನಪತಿಗೆ ಪೊಸಗೆಯುಂ ಪುರ
ಜನವೆಲ್ಲಂ ಬೀಱುತಿರ್ಪರಾಗಳ್ತಮುಂ ।
ಮನದುತ್ಸವದಿಂ ಕುಣಿವಂ
ತನಿಲಾಹತಕೇತನಾಳಿ ಸೊಗಯಿಸಿ ತೋಱ್ಕುಂ ॥ 93 ॥

ಮುನ್ನಂ ಪೇೞ್ದುರ್ದರ್ಥಂ
ಭಿನ್ನಪ್ರಸ್ತಾರಭಿತ್ತಿದೋಷಾನುಗತಂ ।
ಸನ್ನುತಮಪರಾರ್ದ್ಧಂ ಸಂ
ಪನ್ನಶ್ಲಿಷ್ಟಾಕ್ಷರೋಪರಚಿತಮದೋಷಂ ॥ 94 ॥

ಸಂಧಿಗಳುಂ ಕೆಲವೆಡೆಯೊಳ್
ಬಂದು ವಿರೂಪಂಗಳಾಗಿ ಸವಸಿಸಿ ಕವಿತಾ ।
ಬಂಧನದೊಳಾಗೆ ದೋಷಾ
ಬಂಧುಗೆ ಶಕಲಕ್ಷ್ಮಣಂತೆ ಕಲಿಯುಂ ತಕ್ಕುಂ ॥ 95 ॥

ಆರವುರಸಂ ಕೃತಕಾದ್ರಿಯೊ
ಳರವುರವನೆಯೊಳಗೆ ಕಂದುಕಕ್ರೀಡೆಗಳೊಳ್ ।
ಆರವುದ್ಯಾನವನಂಗಳೊ
ಳರವುಂತಪಿರದೊಳರವುದೆಂದುಂ ನಿಲ್ವಂ ॥ 96 ॥

ದೋಷಂಗಳಂತು ಮಿಗೆ ಸಂ
ಶ್ಲೇಷದೊಳಾದಂದು ಸಕಲವಿದ್ವತ್ಸಭೆಯೊ ।
ಳ್ಪೂಷಿಸುಗುಂ ಕೃತಿವಧುವಂ
ಭೂಷಾವಿದರದಱ ತೆಱನನಱಿಗೀ ದೆಸೆಯಿಂ ॥ 97 ॥

ಕುಱುತಂತೆ ಪೇೞ್ದುಪದದೊ
ಳ್ಕೆಱೆಯದೊಡೊಡೆಲ್ಲಂ ವಿವಕ್ಷಿತಾರ್ಥವಶೇಷಂ ।
ಪೆಱತೊಂದಲ್ಲಿಲ್ಲದುದುವು
ನಱಿವವರಿಟ್ಟಱಿಯೆ ಪೇೞೊಡದು ನೇಯಾರ್ಥಂ ॥ 98 ॥

ಪರೆದಿರೆ ರಾಗಂ ತನ್ನೊ
ಳ್ನಿರಂತರಂ ಗಗನವಿವರವೊಪ್ಪಿತ್ತಾದಂ ।
ವರಪಾರಿಜಾತಕುಸುಮೋ
ತ್ಕರಸಾಂದ್ರಪರಾಗವಿಸರಪಿಂಜರಿತಂಬೊಲ್ ॥ 99 ॥

ಪರೆದಿರೆ ಸಂಧ್ಯಾರಾಗಂ
ನಿರಂತರಂ ಗಗನವಿವರವೊಪ್ಪಿತ್ತೆಂಬಾ ।
ದರದಿಂ ಪೇೞಲ್ಬಗೆದಂ
ತಿರೆ ಸಂಧ್ಯಾಪದವನಿಡದೆ ಪೇೞ್ವುದು ದೋಷಂ ॥ 100 ॥

ರಾಗಾದಿದೋಷವಿರಹಿತ
ವಾಗತಿಕಯುವಖಿಳವಸ್ತುವಿಸ್ತರವಿಷಯಂ ।
ಯೋಗಿಗುಣಾನುಗತಂ ಮು
ತ್ತಾಗಮವೇತದ್ವಿರುದ್ಧವಚನಂ ದೋಷಂ ॥ 101 ॥

ಆ ಕಪಿಲಸುಗತಕಣಚರೆ
ಲೋಕಾಯತಿಕಾದಿಮಾರ್ಗಭೇದಂ ಸಮಯಂ ।
ಪ್ರಾಕಟವದಂ ವಿರುದ್ಧವಿ
ನೇಕದಿನಱಿಪುವೊಡೆ ನಾಡೆ ಸಮಯವಿರುದ್ಧಂ ॥ 102 ॥

ಉಕ್ತವಿಚಾರಂ ನ್ಯಾಯವಿ
ಮುಕ್ತಂ ಕ್ರಮವಿನ್ನದಕ್ಕೆ ಬಾರದುವೆಲ್ಲಂ ।
ವ್ಯಕ್ತಂ ನ್ಯಾಯವಿರುದ್ಧಂ
ಪ್ರೋಕ್ತಮುಹಾದೋಷವಂತು ಪೇಳಿಲ್ಕಿಂತುಂ ॥ 103 ॥

ನಿರುಪಮಗಂಧರ್ವ್ವಗತಿ
ಸ್ವರಾದಿಕಕಳಾಗುಣಂ ಚತುಷ್ಪಷ್ಟಿವಿಧಂ ।
ದೊರೆಕೊಳ್ಳದುದೆಲ್ಲಿ ಕಳಾ
ವಿರುದ್ಧದೋಷಂ ವಿಶಿಷ್ಟಜನತಾದೂಷ್ಯಂ ॥ 104 ॥

ಕಾಲಮುಜೋರಾತ್ಯಾದಿಕ
ಮೂಲಕ್ಷಿತಭೇದಮುದಱೊಳೊಂದೊಂದಕ್ಕುಂ ।
ಕಾಲವಿರುದ್ಧಂ ದೋಷ
ಕ್ಕಾಲಯಮುದನಱಿದು ಕೃತಿಯೊಳಡದಿರ್ಕ್ಕೆ ಬುಧರ್ ॥ 105 ॥

ಲೋಕಮದೊರ್ಧ್ವಾಧೋಮಾ
ಧ್ಯಾಕಾಂಕ್ಷಿತಭೇದರೂಪದಿಂ ಮೂಱಕ್ಕುಂ ।
ಲೋಕವಿರುದ್ಧಂ ತದ್ವ್ಯತಿ
ರೇಕೋಕ್ತಿ ವಿವೇಕಿಲೋಕಗರ್ಹಿತಮಾರ್ಗಂ ॥ 106 ॥

ದೇಶಂ ವರರಾಷ್ಟ್ರಾದಿನಿ
ವೇಶಾಂತಲ ತದ್ವಿರುದ್ಧವಚನಂ ಮಿಗೆ ಸಂ ।
ಕ್ಲೇಶಕರಂ ಕೃತಿಕರ್ತೃಗೆ
ಕೌಶಲಮುಂ ಪಡೆಯುಮುಕ್ತದೇಶವಿರುದ್ಧಂ ॥ 107 ॥

ಇಂತಿಂತೆ ಪೇೞ್ವೊಡೆಲ್ಲಮ
ನಂತಾತ್ಮಕಮಕ್ಕುಮಾ ವಿರುದ್ಧದ ಭೇದಂ ।
ಸಂತಯಿಸಿ ಒಲಿದು ಮನಮು ನ
ದಂ ತಱಿಸಲೆ ಪೇೞಲಾರ್ಪ್ಪೆನೆಂಬವನೊಳನೇ ॥ 108 ॥

ಗೀತಿಕೆ ॥ ದೋಸವೇನಾನುಂ ಸ್ವಲ್ಪಮಾದೊಡಂ
ಮಾಸಿಸಿಕ್ಕುರ್ವಮಣಂ ಕೃತಿವಧುವಂ ।
ಪೇಸದೆ ದುರ್ಜನದೊಳಾದ ಪರಿಚಯಂ
ಮಾಸಿಸಿ ಕಿಡಿಸುವವೊಲೊಪ್ಪುವ ಕುಲವಧುವಂ ॥ 109 ॥

ವೃ॥ ಕಾರಕದೋಷಮುಂ ವಚನದೋಷಮುಮಾ ಗುರುದೋಷಮುಂ ಲಘೂ
ಚ್ಚಾರಿತಶಬ್ದದೋಷಮುಮವುದಂತೆ ಸಮುಚ್ಚಯಜಾತದೋಷಮುಂ ।
ಭೂರಿವಿಕಲ್ಪದೋಷಮುಮವುದಿನ್ನವಧಾರಣದೋಷಮುಂ ವಿಶಂ
ಕಾರಚಿತೋರುದೋಷಮುಮಮೀ ತೆಱದಿಂ ತಱಿಸಲ್ಕೆ ಪಂಡಿತರ್ ॥ 110

ಕಾರಕಮೂಲಂ ಕರ್ಮಕರಣಾದಿಕದಿಂ ಪ್ರಥಮಾದಿಭೇದನಿ
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇಲೆನಿಕ್ಕುಮಾ ।
ಚಾರುಗುಣೋದಯಂ ವಚನವೇಕಬಹುತ್ವವದಿಂದೆರಲ್ಕೆಲಾ
ಕ್ಕಾರಯೆ ಪೇಲ್ವೆನಿಂತಿವಲಿ ಜಾತಿವಿಭಾಗಗುಣಾಗುಣಂಗಳಂ ॥ 111 ॥

ನರಪತಿ ಬಂದನಾ ನೃಪನನಲ್ತಿಯೆ ಕಾಣ್ಬುದು ತನ್ನರೇಂದ್ರನಿಂ
ಧರಣಿ ಸನಾಥೆ ಭೂಪತಿಗೆ ಕಪ್ಪವಸಿತ್ತವನೀಶನತ್ತಣಿಂ !
ಪರಿಭವಮಂ ಕುಲಜ್ಞವೃಧೀಶ್ವರನಾ ದಯೆ ಸಾಲ್ದುಮಾ ಮಹೀ
ಶ್ವರನೊಳಿದಪ್ಪುದೆಂಬುದಿದು ಕಾರಕಯುಕ್ತವಿಭಕ್ತ್ಯನುಕ್ರಮಂ ॥ 112 ॥

ವರವೆಮಗೀಗೆ ದೇವತೆಗಳಾದರದಿಂ ಕರುಣಿಪ್ಪುದಕ್ಕೆ ಬಂ
ಧುರಗುಣ ಬಂಧುಸಂತತಿಯನೆಂಬುದು ಕಾರಕದೋಷಮಾಗಳಂ ।
ವರವನವೋಳುವಿಗೆವುಗೆ ದೇವತೆಗಳ್ಕರುಣಿಪ್ಪುದಕ್ಕೆ ಬಂ
ಧುರೆಗುಣ ಬಂಧುಸಂತತಿಗೆ ನಿಕ್ಕುವವೆಂಬುದದುಷ್ಟಕಾರಣಂ ॥ 113 ॥

ನಿಕ್ಕುವವಿಂತುಮುಲ್ಲದದಲಾ ಕ್ರಿಯೆ ಸಾರ್ದಿರೆ ಪತ್ತಿ ಮುಂದೆ ಸ
ಯ್ತಕ್ಕುವನುಕ್ರಮಾನುಗತದಿಂ ಬರವಿಗೆವುಗೆಂಬ ಕಾರಕಂ ।
ಸಕ್ಕದವೇನೊ ಕಾರಕವಿಭಕ್ತಿಯೊಳೊಂದೆ ಸಮಾಸಯುಕ್ತಿ ಲೇ
ಸಕ್ಕುಮಭೇದರೂಪಗುಣಮಾಗಿ ತಗುಳ್ವರೆ ವೇಣ್ಕೆಯಾಪದಂ ॥ 114 ॥

ಬಂದುವು ಪಾವುಡಂ ನೃಪತಿಗೆಂಬುದುಮಾನಗಳೀ ಪ್ರದೇಶದೊ
ಳ್ನಂದುದಿದೆಂಬುದುಂ ವಚನದೋಷವಿಶೇಷವನೈಪುಣೋಕ್ತಿಯಿಂ ।
ಬಂದುದು ಪಾವುಡಂ ನೃಪತಿಗೆಂಬುದುಮಾನಗಳೀ ಪ್ರದೇಶದೊ
ಳ್ನಂದುವಿವೆಂಬುದುಂ ಬಗೆದು ನೋಡೆ ಗುಣಂ ವಚನಕ್ಕೆ ನಿಕ್ಕುವಂ ॥ 115 ॥

ಜಾತಿವಿಭಾಗವುಂ ಬಗೆದು ಪೇಳೆ ಬಹುತ್ವಮನೇಕವಾಕ್ಯಸಂ
ಜಾತಗುಣಂ ತದೇಕವಚನಂಗಳೊಳಂ ದೊರೆವೆತ್ತು ಕೂಡುಗುಂ ।
ಮಾತಿನೊಳೇನೊ ಸಂಖ್ಯೆಗಳೊಳೇಕಬಹುತ್ವವಿಪರ್ಯಯುಕ್ತಸಂ
ಖ್ಯಾತಗುಣಂ ವಿಕಲ್ಪವದು ಕನ್ನಡದೊಳ್ಗುಣವುಂ ತಗುಳ್ಚಗುಂ ॥ 116 ॥

ಕುಂದುರೆ ತಗುಳ್ದುವಾದೆಸೆಯು ಬಿಲ್ಲವರಂ ಸುಳಿದಾನೆ ನಿಂದು ಮೆ
ಟ್ಟಿದುವಿಲೆ ನೋಡಿವೆಂಬುದಿದು ಜಾತಿಕೃತೈಕಬಹುತ್ವವೊಂದುಗುಂ ।
ಕುದಿಕುದಿದತ್ತಣಿಂ ಕುದುರೆ ನೂಲಲೊಳಾ ಬಲದಾನೆ ಪತ್ತು ತಾ
ಗಿದುವೆನೆ ದೋಷವೂ ಪರಿಗಂ ಸಂಖ್ಯೆಯೊಳೇಕಬಹುತ್ವಸಂಗದಿಂ ॥ 117 ॥

ಪೆರಸಿರೆ ಮುಂ ಸಮುಚ್ಚಯಪದದ್ವಿತಯೋಕ್ತಿ ವಿಭಕ್ತಿ ಕೂಡೆ ಬಂ
ದಿರದೆಯುಮೇಕಕಾವ್ಯದೊಳೆ ಕಾರಕಸಂಪದಮಂ ತಗುಳ್ಚಗುಂ ।
ನರಪತಿಯುಂ ನೃಪಾಂಗನೆಯರುಂ ನೆರೆದಲ್ತಿಯಿನಾಡಿ ಪೋದರಾ
ಪರಿಜನಮುಂ ಮಹೋತ್ಸವದೊಳೊಂದಿದುದೆಂಬುದಿದಲ್ಪದೂಷಿತಂ ॥ 118 ॥

ಗಣಿತದೊಳೊಂದಿ ಬರ್ಪ ಪದವೊಂದೆಡೆಗೊಂದು ವಿಶೇಷ್ಯಮುಂ ವಿಶೇ
ಷಣಮುಮನೊಂದಲೀಯದಿರೆಯುಂ ಮಿಗೆ ಕಾರಕದೋಷವಲ್ತಿದುಂ ।
ಪ್ರಣುತಪದಾಂತರೀಕರಣಮಂತದೆ ತಾಣದೊಳಾದೊಡಂ ಮಹಾ
ಗುಣವನೆ ತರ್ಕ್ಕಿವೇಕಬಹುಭೇದವಿಕಲ್ಪವುನಲ್ಲಿ ನೋಡಲಿಂ ॥ 119 ॥

ಗುಣಯುತನಪ್ಪನಂ ಸುಭಟನಪ್ಪನನಾಯುಧಯುಕ್ತನಪ್ಪನಂ
ಪ್ರಣತಸಮಸ್ತವೈರಿಗಣನಪ್ಪನನುಜ್ವಲಕೀರ್ತ್ತಿಯುಪ್ಪನಂ ।
ಗಣಿದಮನೇನುವಂ ಬಗೆಯದಾಗದುವಂತೆ ಪರೋಪಕಾರಕಾ
ರಣಪರನಪ್ಪನಂ ವುನದೆ ವೆಚ್ಚರಾರಭಿಮಾನಿಯಪ್ಪನಂ ॥ 120 ॥

ನೆಗೆದ ವುಂಗಿಲ್ಗಳಂ ಸುರಿವ ವೆರ್ಮ್ಮಲೆಯುಂ ವಿಗೆ ನುಣ್ಣನಪ್ಪ ಕೇ
ಕಿಗಳ ಸರಂಗಳಂ ಪೊಳೆವ ವಿಂಚುಗಳಂ ಕರವುಚ್ಚವುಪ್ಪ ಬೆ ।
ಟ್ಟುಗಳ ತಟಂಗಳಂ ಸುರಿವ ನಿರ್ಝರವುಂ ಪೊಸಗಾರೊಳಂತು ಬೆ
ಳ್ಪಗೆ ಪಥಿಕಾಂಗನಾಜನವುನಂಜಿಸುವಂತಿರೆ ತೋಱೆ ಸುತ್ತಲುಂ ॥ 121 ॥

ಗೀತಿಕೆ ॥ ಇಂತು ಕಾರಕಂಗಳೊ
ಳ್ಸಂತವಱಿಯೆ ಪೇೞ್ದು ಗುಣವುಂ ದೋಷವುಮಂ ।
ಚಿಂತಿಸಿ ಪೆಱವುವಿನ್ನಪ್ಪುವಂ
ಭ್ರಾಂತಿಲ್ಲದಱಿದು ಕೊಳ್ಗೆ ಕವಿಗಳ್ಕೃತಿಗಳೊಳಾ ॥ 122 ॥

ವೃ॥ ಆರುಮಿಂ ಗುರುಲಘೂದಿತದೋಷವಿಶೇಷವಂ
ಧೀರಸತ್ವರಱಿದುಂಕುಱಿಗೊಂಡು ವಿಭಾಗಿಸರ್ ।
ಕಾರಣಾಂತರವುನಂತವಱೊಳ್ತಱಿಸಂದು ನಿ
ರ್ದ್ಧಾರಿತಕ್ರಮದೆ ಪೇೞ್ವೆನುದಾಹರಣಂಗಳಂ ॥ 123 ॥

ಆಗಳುಂ ಗುರುಗಳಲ್ಲದ ತಾಣದೊಳಂ ಗುರೂ
ದ್ಯೋಗದಿಂ ಬಗೆಗ ಗೌರವದೋಷವಿಂದೆಂಬುದಂ ।
ಬೇಗವಾ ಲಘುಗಳಲ್ಲದ ತಾಣದೊಳಂ ಲಘೂ
ದ್ಯೋಗವುಕ್ರಮದೆ ನಂಬುಗೆ ಲಾಘವದೋಷವಂ ॥ 124

ಸಾದುಗೆತ್ತು ಬಗೆಯೂದವನಾಂಸೊಡಲಿಟ್ಟುದೇ
ನಾದಮಾನುವುಱುವಾನಸನಾಗದೆ ನೂಳದೊಳ್ ।
ವೋದದಾನುಡುವ ಸೀರೆಗವೆನ್ನನದಿಪ್ಪಿಬಾ
ರಾದೆ ಪೋದೆಡೆಯೊಳ್ಳೇ ತಡೆದಾನವನೆಂದಪಂ ॥ 125

ಇಂತು ಪೇೞ್ದೊಡಿದು ಗೌರವದೋಷದ ವೂರ್ಜ್ಜಿ ನಿ
ಶ್ಚಿಂತಮಿಂ ತೆಱದವಂ ಕಳೆಗಾ ಕೃತಿಯಂತ್ತಣಂ ।
ವುಂತೆ ಪೇೞ್ವೀ ಕುಱಿಪಂ ಕುಱಿಗೊಂಡು ಕವೀಕರಾ
ರ್ಯ್ಯಂತು ಪಿಂಗಿಸುಗೆ ಕಾವ್ಯದಿನಾ ಲಘುದೋಷವಂ ॥ 126

ನೆರೆದು ಬಂದವರವರ್ ಸಯಲೋಬಲವೆಲ್ಲಮೆ
ಱರೆಲಿಕೊಂದವನಿವಂದಿರನೀಗಳೆ ನಿಕ್ಕುವಂ ।
ಪರಿದು ಬೀೞ್ವವೊಲಿವಂದಿರ ಪಾಡಲೀವಂದವಂ
ತರವೆಳೊಡ್ಡಲೀಯದಂತಿರೆ ನಮ್ಮವರೆಲ್ಲರಂ ॥ 127 ॥

ಬೇಱೆವೇಱೆರೆ ವಿಕಲ್ಪಸಮುಚ್ಚಯಯುಗ್ಮದಾ
ತೋಱುವೆಂ ಕ್ರಮವಿಕಲ್ಪನೆಯಿಂ ಗುಣದೋಷವಂ ।
ಕೀಱುಕೊಂಡು ಗುಣವಂ ಕಳೆಗಲ್ಲಿಯ ದೋಷವಂ
ತೋಱೆ ಪಿಂಗಿಸುವವೊಲ್ ಸಟೆ ನೆಲ್ಲಿರೆ ಪೊಳ್ಗಳಂ ॥ 128 ॥

ದೇವರುಂ ಗೊರವರುಂ ಗುಣವೃದ್ಧರನಾರತಂ
ಕಾವರಕ್ಕರಸನಂ ಪ್ರಜೆಯುಂ ಪರಿವಾರವುಂ ।
ಏನುವುಂ ಬಗೆಯದಂತಿರೆ ವೇೞ್ದ ಸಮುಚ್ಚಯೋ
ದ್ಭಾವಕಕ್ರಮವಿಚಾರದೆ ದೋಷವಿಂದಗ್ಗಳಂ ॥ 129 ॥

ನೃಪನುವುಂ ಪ್ರಜೆಯುವುಂ ಪರಿವಾರವುವುಂ ಮಹಾ
ಕೃಪೆಯಿನಾ ಗೊರವರುಂ ಸುರರುಂ ಗುಣವೃದ್ಧರುಂ ।
ವಿಪುಳರಾಗಪರರಾಗಿಸುಗೆಂದು ಸಮುಚ್ಚಯ
ಕ್ಕುಪಚಿತೋರುಗುಣವುಂ ವಿುಗೆ ವೇೞ್ದಿ ಕವೀಶ್ವರರ್ ॥ 130 ॥

ಬೇಱೆವೇಱೆ ನಿಲೆ ಕಾರಕದೊಳ್ಕ್ರಯೆ ತಳ್ತು ವುುಂ
ತೋಱೆ ವೇೞ್ದವಗುಣಂ ಗುಣರೂಪದೆ ಪೊದ್ದುಗುಂ ।
ಸಾಱುಗಾನೆಯವರೆಲ್ಲರುವುಂ ನೃಪನಾನೆ ವು
ತ್ತೇಱುವೆಂ ಪಣಿದೊಡಾನೆಯನೆಂಬುದು ದೂಷಿತಂ ॥ 131 ॥

ಒಸೆಗೆ ವೇಣ್ಮನಿಗೆ ವೇಣವರೆಲ್ಲರುವಂತೆ ಬ
ಗ್ಗಿಸುಗೆ ವುತ್ತುೞಿಯಲಾಗದು ನೆಟ್ಟನೆ ಪೂಣ್ದುದಂ ।
ಪುಸಿವಡಾಗಿರದೆ ವಾನಸರೆಂಬುದನಿಂತೆ ಶಂ
ಕಿಸದೆ ನಂಬುವುದು ವಿುಕ್ಕ ವಿಕಲ್ಪದ ದೋಷವಂ ॥ 132 ॥

ಪಲಿಗೆ ವೇಣೊಪ್ಪಗಲ್ಗೆ ವೇಣ್ ನೆವವಿಲ್ಲದೊಡಿಂತು ಕೈ
ಗಲಿಯೆ ಬಗ್ಗಿಸುಗೆ ವೇಣವರೆಲ್ಲರುವುಂತುವುಂ ।
ನುಲಿವೆನಲ್ಲೆನೆನಿತಾದೊಡವೆಂಬುದು ಚೆಲ್ವಪುಂ
ಗಲಿಯದಿಂತಿದನೆ ನಿಂತಿರೆ ವೇೞ್ದಿ ವಿಕಲ್ಪವುಂ ॥ 133 ॥

ಗೀತಿಕೆ ॥ ಕುಲಿತು ಸಮುಚ್ಚೆಯದಾ ಬಲಿ ವಿಕಲ್ಪದಾ
ತೆಱದೊಳೆ ದೋಷವುುವನಂತೆ ಗುಣವುುವುಂ ।
ಕಿಱಿದಲಿಯೊಳಱಿಯೆ ವೇೞ್ದಿನಿಂತೆ ಪೆಱವುವುನೀ
ಕಾಱುಪನೆ ಕಾಱು ವಾಡಿ ವೇೞ್ದಿ ಕಬ್ಬವುಂ ॥ 134 ॥

ವೃ ॥ ನಿಯಮಿತಾನ್ವಿತಜಾತಿಗುಣಕ್ರಿಯಾ
ಶ್ರಯಮಿದಾಯವಧಾರಣಲಕ್ಷಣಂ ।
ನಯನಿಯೋಗವಿಕಲ್ಪನೆಯೊಳ್ಪಶಂ
ಕೆಯು ವಿಶೇಷಗುಣಕ್ಕಪಲಕ್ಷಣಂ ॥ 135 ॥

ಕುಲಜನೀತನೆ ಪಂಡಿತನೀತನು
ಜ್ವ್ವಲಯಶೋಧಿಕನೀತನೆ ತಿಬ್ಬನೆಂ ।
ದಲಸಿ ಪೇೞ್ವವಧಾರಣದೋಷಮಂ
ನೆಲಸಲೀಯದಿರಿಂ ಕೃತಿನಾರಿಯೊಳ್ ॥ 136 ॥

ಕೂರನೀತನೆ ಪಂಡಿತನೀತನೇ
ಕ್ಷೀರಗೌರಯಶೋಧಿಕನೀತನೇ ।
ಧಾರುಣೀತಳದೊಳ್ದ್ರವಮೆಂಬುದಾ
ಧಾರಮಿಂತವಧಾರಣದೊಳ್ಗಣಂ ॥ 137 ॥

ದಿವಿಜನೋ ಫಣಿನಾಯಕನೋ ಮುನೋ
ಭವನಿವಂ ಕರವೊಪ್ಪದನೆಂಬುದಂ ।
ಕವಿಗಳಟ್ಟ ವಿಶಂಕೆಯ ಪಾಲ್ಮೆಯಂ
ತವಿಸಿ ನಿಲ್ಕೆ ಮನೋಹರಕಾವ್ಯದೊಳ್ ॥ 138 ॥

ಸುರಗಣಾಧಿಪನೋ ಫಣಿನಾಥನೋ
ನಿರುತವೂ ಸ್ಮರನೋ ಸೊಗಯಿಪ್ಪರೀ ।
ದೊರೆಯರಿಲ್ಲ ನರರ್ಪ್ಪೆಱರೆಂಬುದಾ
ದರದಿನಕ್ಕೆ ಗುಣೋದಯಕಾರಣಂ ॥ 139 ॥

ಅಪರಿವೀಯಮೆಂ ದೋಷಗುಣಾಳಿಮಿಂ
ತುಪಚಿತಕ್ರಮದಾರಯೆ ಕಾವ್ಯದೊಳ್ ।
ವಿಪುಳವೃತ್ತಿಯೊಳೊಂದಿರೆ ಪೇೞ್ವಿನ
ಭ್ಯುಪಗಮೋಕ್ತಿ ಗುಣಾವಗುಣಂಗಳಂ ॥ 140 ॥

ಪೊಳೆವ ಮಿಂಚುಗಳಂತಿರೆ ಕೇತುಗಳ್
ಜಳದವೃಂದದ ವೋಲಿರೆ ಹಸ್ತಿಗಳ್ ।
ಗಳಿತಧಾರೆಗಳಂತಿರೆ ಪತ್ತಿಗಳ್
ಬೞಸಿ ಕಾರ್ಗ್ಗಣೆಯಾಯ್ತು ಮಹಾಹವಂ ॥ 141 ॥

ನಿಯಮಿತಾಕ್ಷರದಿಂದುಪಮಾಪ್ರತಿ
ಜ್ಞೆಯನೆ ತಿದ್ದುವುದಲ್ತಿಯಿನಿದ್ದುವೂ ।
ಬಯಕೆ ತೀರದ ಕಾರಣದಿಂ ವಿಪ
ಯ್ಯಯಮಿದಭ್ಯುಪಮೋಕ್ತ್ಯುಪದೂಷಣಂ ॥ 142 ॥

ಉಪಮಿತಾಕ್ಷರಮೆಲ್ಲಿಯುಮೇಕರೂ
ಪಪರಿವೃತ್ತಿಯೊಳೊಂದಿದ ಮಾಲ್ಕೆಯಿಂ ।
ದುಪಚಿತಕ್ರಮಮುಕ್ಕುಮಿದೆಂದುಮು
ಭ್ಯುಪಗಮುಕ್ಕೆ ಗುಣೋದಯಂಕಾರಣಂ ॥ 143 ॥

ಸಮುಚಿತನೃಪತುಂಗದೇವಮಾರ್ಗ
ಕ್ರಮುಗಮನಾಭಿಮುಖಕ್ಕೆಳಪ್ಪವರ್ಕಳಂ ।
ಕ್ರಮಸಹಿತಮಿಗವ್ಯರೂಪಕಾವ್ಯ
ಶ್ರಮಪದವಂ ನಿರಪಾಯನೆಯ್ದಲಾರ್ಪ್ಪರ್ ॥ 144 ॥

ಅತಿಶಯಧವಳೋರ್ವಿಪೋದಿತಾಳಂ
ಕೃತಿವುತಿನೀತಿನಿರಂತರಪ್ರತೀತಂ ।
ಶ್ರುತಿಯುವತಿಕ್ಕತೋಪಚಾರಸಾರ
ಸ್ವತಗುಣದಿಂ ಕೃತಕೃತ್ಯವೆಂದೆನಿಕ್ಕುಂ..... ॥ 145 ॥

ಕೈ॥ ನುಡಿಗಳೊಡಂಬಡಲ್ಬಗೆದವೊಲ್ಬಗೆಯಂ ವಿಗಲೀಯದೊಂದೆ ನಾ
ಲ್ನುಡಿಯ ಬೆಡಂಗೆ ಕನ್ನಡದ ವೂತಿನೊಳಾ ವಿಕಟೂಕ್ಷರಂಗಳೊ ।
ಳ್ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ನೆಲ್ಪವೆತ್ತು ದಾಂ
ಗುಡಿವಿಡುವಂತೆ ನೀಳ್ದು ನಿಲೆ ಪೇೞ್ದುದು ನೀತಿನಿರಂತರಕ್ರಮಂ ॥ 146 ॥

ಸಕಳಾಳಾಪಕಳಾಕಳಾಪಕಥಿತವ್ಯಾವೃತ್ತಿಯೊಳ್ಕೂಡಿ ಚಿ
ತ್ರಕರಂಬೊಲ್ಪುರಭೂಗಭಾವವಿಲಸದ್ವರ್ಣಕ್ರಮಾವೃತ್ತಿಯಂ ।
ಪ್ರಕಟಂವೂಡಿರೆ ಪೇೞ್ದ ಚಿತ್ರಕೃತಿಯಂ ವ್ಯಾವರ್ಣಿಸುತ್ತುಂ ಕವಿ
ಪ್ರಕರಂ ಶ್ರೀವಿಜಯಪ್ರಭೂತಮನಿದಂ ಕೈಕೊಳ್ವುದೀ ಮಾರ್ಗ್ಗಮಂ ॥ 147 ॥

ಕಂ ॥ ಪರಮಶ್ರೀಕೃತಿವಧುವಾ
ಶರೀರಶೋಭಾಕರಂಗಳಪ್ಪ ಗುಣಂಗಳ್ ।
ನಿರತಿಶಯಾಲಂಕಾರ
ಪ್ರರೂಪಿತಂಗಳ್ಪುರಾಣಕವಿವಿದಿತಂಗಳ್ ॥ 148 ॥

ಚಾರುಶ್ರೀನೃಪತುಂಗವಿ
ಚಾರಕ್ರಮಮಾರ್ಗ್ಗಗಣನೆಯೊಳ್ಪರಮಾಲಂ ।
ಕಾರವಿಭಾಗಂ ವಿವಿಧಾ
ಕಾರಂ ಶಬ್ದಾರ್ಥಭೇದದಿಂದೆರಡಕ್ಕುಂ ॥ 149 ॥

ಅನ್ನೆಗವುದಱೊಳಗೆ ಸಮು
ತ್ಪನ್ನಪ್ರಾಧಾನ್ಯವನ್ಯವುತಾರ್ಥಧಾರಂ ।
ವುನ್ನಂ ಶಬ್ದಾಳಂಕಾ
ರಂ ನಿಶ್ಚಿತವುಕ್ಕೆ ಪೇೞ್ವು ಮಾರ್ಗ್ಗೆಯೊಳೆನ್ನಾ ॥ 150 ॥

ಇಲ್ಲಿಗಿದು ತಕ್ಕುದಿಲ್ಲಿಗೆ
ಪೊಲ್ಲದಿದೆಂದಱಿದು ಸಮಱಿ ಬಲ್ಲಂತೆಲ್ಲಂ ।
ನೆಲ್ಲುಂ ಪೊಸರುಂ ಗುಡಿದಂ
ತಲ್ಲದೆ ತಲ್ಲಣಿಸದಲಸದಿಡು ವ್ಯಯಪದವುಂ ॥ 151 ॥

ಗಱಿಯಿಸಿದರ್ಥಂ ಸಲೆ ಪಾಂ
ಗಱಿಯದೆಯುಂ ಕಬ್ಬವೊಂದದಿರ್ದ್ದೊಡೆ ಮುತ್ತುಂ ।
ವೆಱಸುಂಗೋದಂತಿಕ್ಕುರ್ಕಂ
ಕಱಿಲ್ಬಿಕಳಿಗೊಂದಿ ಮುಂದೆ ಬಾರದ ಪದವುಂ ॥ 152 ॥

ನಿಲಿಸಿ ಲಘುಪದವುನದನ
ಗ್ಗಲಿಸಿರೆ ವುತ್ತೊತ್ತಿ ಱಪ್ರ ಪದವಂ ತುದಿಯೊಳ್ ।
ನಿಲೆ ಪೇಳ್ವಾಗಳ್ಕಾನನ
ತಲೆಯೊಳ್ಬಣ್ಣೊಱೆಯನಿಟ್ಟವೋಲಸುಖಕರಂ ॥ 153 ॥

ಬರಿಸಿ ಕ್ಷಿತಿಪತಿಯುಂ ಸ
ಯ್ತಿರಿಸಿ ಪ್ರಿಯಕುಶಲವಾರ್ತ್ತೆಯಂ ಪೆಸಗೊಂಡು ।
ಸ್ಥಿರಮಿದ್ದ್ದ ಪ್ರಭು ನುಡಿಯೆ
ಪ್ರರೂಢವುದನಾದನಾತನೆಂಬುದು ದೂಷ್ಯಂ ॥ 154 ॥

ಕ್ಷಿತಿಪತಿಯುಂ ಬರಿಸಿ ಜಗ
ನ್ನುತನಂ ಸಂತೈಸಿ ಕುಶಲವಾರ್ತ್ತಾಂತರವುಂ ।
ವಿತತವಚನಂ ಪೆಸಗೊಂಡತಿ
ವಿತೀರ್ಣವುದನಾದನಾತನೆಂಬುದು ವಾಗ್ದ್ದಂ ॥ 155 ॥

ಒಂದಂ ಕ್ರಿಯಾವಿಶೇಷಣ
ವುಂ ದೊರೆಕೊಳೆ ಸಯ್ತು ಪೇೞ್ದದಱೊಳೆ ಪೆಱುತಂ ।
ಸಂದಿಸಿ ಪೇೞ್ದೊಡೆ ಕೃತಿಯೊಳ
ಗೊಂದಿರದೆರಡಕ್ಕೆ ಬಿಟ್ಟಕಱುವಂ ಪೋಲ್ಕುಂ ॥ 156 ॥

ಪರಿವಾರವಾರವನಿತಾ
ಪರಿವೃತನರವುನೆಯೊಳರಸನಂಬರತಳದೊಳ್ ।
ವರತಾರಾಪರಿಗತಕಶ
ಧರನಂತೊಪ್ಪಿರೆ ವಿನೋದದಿಂದಿರುವುದಿಂ ॥ 157 ॥

ಪದನಱಿದೊಂದಂ ಕ್ರಿಯೆಯೊಳ್
ಪುದಿದುಱಿದುದನೊಂದಿ ಬರೆ ವಿಶೇಷ್ಯದೊಳೊಂದಂ ।
ಸದಭಿಮತವಾಗಿ ನಿಲೆ ಪೇ
ೞ್ವುದು ವಾಗ್ದ್ದಂ ನಿತ್ಯವುಮಲ್ಲವಲ್ಲಭವುತದಿಂ ॥ 158 ॥

ಇನ್ನಂತೆ ಮುತ್ತೆ ಬಟೆ ವಿಗೆ
ಮುನ್ನಿಲೆ ತಾಂಮೇಣ್ಪೆಱಂ ಗಡಂ ಗಳಮಾದಂ ।
ಕೆನ್ನಂ ನಿಲ್ಲಿಂದಿವನೆಂ
ದುನ್ನಿಱಿಸಲ್ಕಲ್ಲದೆಡೆಗಳೊಳ್ಕಲ್ಲದಿರಿಂ ॥ 159 ॥

ನೃಪಕನ್ಯಕಾಸ್ವಯಂವರ
ವಿಪುಳಮಹೋತ್ಸವವಿವಾಹದೊಳ್ಪಂದಿರೆ ಮುಂ ।
ನಪವಾದವಾದುದೆನಗೇಂ
ಜಪಲಾಧ್ವಜನೋಕ್ತಿಯಿಂದವಿಂಬಾರದಿರಿಂ ॥ 160 ॥

ಘನಮೆರಡನೆಯದಱೊಳಮಾ
ಱನೆಯವಿಭಕ್ತಿಯೊಳಿವೊಳವು ಗುರುಲಘುಂಭೇದಂ ।
ಅನಿಯತವೃತ್ತಿಯನಱಿದದ
ನನುಮಾರ್ಗ್ಗಕ್ರಮದೆ ಸಯ್ದು ಮಾಡುಗೆ ನಿಪುಣಂ ॥ 161 ॥

ಆದಿಸ್ವರಪದಮಂತದೊ
ಳಾದೆಡೆಯೊಳ್ದೀರ್ಘವುಕ್ಕುವೆರಡನೆಯು ವಿಭ ।
ಕ್ತ್ಯಾದಾನಪದಂ ದೀರ್ಘಂ
ಪಾದಾಂತದೊಳಾಱಿದ ತಾಣದೊಳ್ಸ್ವಚ್ಛಂದಂ ॥ 162 ॥

ನೃಪನನಭಿಮಾನಧನನನ
ನುಪಮನನತಿಕಯವಿಶಾಲಕೀರ್ತ್ತಿಧ್ವಜನಾ ।
ನುಪಚಿತಗುಣನಾನುಚಿತನ
ನಪೇತದೋಷನನುದಾರಚರಿತೋದಯನಂ ॥ 163 ॥

ಎಂದಿಂತು ಪೇೞ್ದವಾಱ್ಕೆಯೊ
ಳೊಂದನುವುದುವನೊಂದಿ ಬಾರದುದುವಂ ಪೀನಂ ।
ಸಂದೆಯಮಿಲ್ಲದೆ ಸಲೆ ತಱಿ
ಸಂದೋಸಱಿಸುವುದು ಕಾವ್ಯರಚನಾಕ್ರಮದೊಳ್ ॥ 164 ॥

ಪಲವುದನೊಡಗೂಡಿರೆ ಸ
ಯ್ತಲಸದೆ ಪೇೞ್ವೆಡೆಯೊಳಂ ಸ್ವಪಾದಾಂತದೊಳಂ ।
ಪಲವಾಱನೆಯ ವಿಭಕ್ತಿಯೊ
ಳಲಘೂಚ್ಚಾರಣೆ ಯಥೇಷ್ಟವುಱುದೆಡೆಗಳೊಳಂ ॥ 165 ॥

ನೃಪನಾ ನೃಪನಂದನನಾ
ನೃಪವಧುವರ್ನ್ನೆರೆದು ಸುಖದೊಳಿರೆ ಕೈಕೊಂಡ ।
ತ್ತಪರಿಮಿತರಾಗನೆಂದೆಯಂ
ನೃಪಬಾಂಧವರಾ ಸುಮಿತ್ರರಾ ಪರಿಜನದಾ ॥ 166 ॥

ನೃಪನ ನರಪಾಲತನಯನ
ನೃಪವಧುವನ್ನೆರೆದು ಸುಖದಿನಿರೆ ಕೈಕೊಂಡ ।
ತ್ತಪರಿಮಿತರಾಗವೆಂದೆಯಂ
ನೃಪತಿಸನಾಭಿಗಳ ಬಂಧುಜನದಾ ಕೆಳೆಯಾ ॥ 167 ॥

ಸಂಪೋಧನೆ ದೀರ್ಘೋಕ್ತಿಯೊ
ಳಂಬಾಗಿರೆ ಬಕ್ಕ್ಯಮುದನೆ ಪಲವೆಡೆಗಳೊಳೆಂ ।
ದುಂ ಬಲ್ಲವರಿಡದಿರ್ಕ್ಕೆಯು
ದುಂ ಬಾಯಲ್ಲಿದೊಳ್ವವೊಲ್ಕರಂ ವಿರಸಕರಂ ॥ 168 ॥

ನೃಪತೀ ಪರೋಪಕಾರೀ
ವಿಪುಳಗುಣೀ ವಿಕದಕಕಥರಾಯತಕೀರ್ತ್ತೀ ।
ವ್ಯಪಗತಭಯಾ ದಯಾಳೂ
ರಿವುವರ್ಗ್ಗಮನಲೆದು ಗೆಲ್ವೆಯಾಗಾಹವದೊಳ್ ॥ 169 ॥

ಅಲ್ಲಿಪಿಪವರುಂ ವಿಭೀತರು
ಮುಟ್ಟಿಲ್ಲರುಂ ಸಲೆ ವಿಯೋಗದಿಂ ನಿಜಜನದಿಂ ।
ಕಲ್ಲೆಯೆ ವರಾರ್ತ್ಥಿಗಳುಂ ಬಾ
ಯಲ್ಲಿದೊಳ್ಗಂತಿದನೆಯುಕ್ತಪುನರುಕ್ತಿಕಮುಂ ॥ 170 ॥

ಪುಲಿಪುಲಿ ಪರಿಪರಿ ಪೋಪೋ
ಗೆಲೆಯೆಲೆ ಪೆಱುಪಿಂಗುಪಿಂಗು ನಿಲ್ ನಿಲ್ ಬಾಬಾ ।
ಬಲಿವುನವುನಂಜಪಂಜಪೆ
ತೊಲತೊಲಗೀ ಮೆಳೆಗೆ ಪುಲಿಯದೆಂಬುದು ಮಾರ್ಗ್ಗಂ ॥ 171 ॥

ರೂಪಕದೊಳಂ ವಿಶೇಷಾ
ಖ್ಯಾಪೋದ್ದೇಶದೊಳಮಲ್ಲದುಲ್ಲೆಡೆಗಳೊಳಂ ।
ಚಾಪಳಮತಿಗಳ್ ವಿರಸನ
ವಿಸ್ತಾರವನಿಡದಿರ್ಕ್ಕೆ ಬಹುವಿಶೇಷಣಗಣಮಂ ॥ 172 ॥

ಸುಭಟಕ್ಕರ್ಕ್ಕಳ್ಕವಿಗಳ್ಗು
ಪ್ರಭುಗಳ್ಗೆಲ್ವಕ್ಕರ್ಕ್ಕಳಭಿಜನಕ್ಕರ್ಕ್ಕಳ್ಗುಣಿಗಳ್ ।
ಅಭಿಮಾನಿಗಳತ್ಯುಗ್ರ
ಗ್ಗಭೀರಚಿತ್ತವ್ವಿವೇಕಿಗಳ್ನಾಡವರ್ಗಳ್ ॥ 173 ॥

ಅಂತಧಿಕವಿಶೇಷಣಗುಣ
ಮುಂ ತಡೆಯದೆ ಪೇೞ್ವೊಡಂಕ[ದುಗ್ಗಡಣೆಯೊ]ಳಂ ।
ಸಂತಂ ಪೇೞ್ದಿಲ್ಲಿದಾವೆಡೆ
ಯಂತರದೊಳಮಾಗದೆಂದನತಿಕಯಧವಳ- ॥ 174 ॥

ನುತಶಬ್ದಾಲಂಕಾರದೊ
ಳತಿಕಯಮಿಂ ಕನ್ನಡಕ್ಕೆ ಸತತಂ ಪ್ರಾಸಂ ।
ಕೃತಕೃತ್ಯಮಲ್ಲವಲ್ಲಭ
ಮತದಿಂದದಱ ಪ್ರಪಂಚಮಿಂ ತೆಱನಕ್ಕುಂ ॥ 175 ॥

ವಿನುತಪ್ರಾಸಂ ಶಾಂತೋ
ಪನತಂ ವರ್ಗ್ಗೋದಿತಂ ಸಮಿಶ್ರಗತಂ ಮು ।
ತ್ತನುಗತಮಂತಗತಂ ಸಂ
ಜನಿತವಿಭೇದೋಕ್ತಿಯಿಂದಮಿಂತಾಱು ತೆಱಂ ॥ 176 ॥

ಪಾದದೊಳೆರಡನೆಯಕ್ಕರ
ಮಾದರದಿಂದಾದುದಾವುದದನಱಿದನಿತುಂ ।
ಪಾದದೊಳಿಡುವುದದಕ್ಕುಂ
ಭೇದೋಕ್ತಿಕ್ರಮವಿಚಾರಿತೋರುಪ್ರಾಸಂ ॥ 177 ॥

ಮನೆಗಿಂದು ಬಕ್ಕರ್ ವೆಂದಾ
ನನೇಕತರವಸ್ತುವಾಹನಾದಿಯನೊಸೆದಿಂ ।
ಬನೆ ಪಸರಿಸಿ ಕೂಡಲಿರ್ದ್ದಂ
ಜನೇಶನಿಂತೇಕೆ ಕಱುಪು ಪೋದನೊ ಪೇಱುಂ ॥ 178 ॥

ಎಂಬುದು ವಿನುತಪ್ರಾಸಂ
ಸಂಬಂಧಾಕ್ಷರದೊಳೆಲ್ಲಮಾತ್ರೆಗಳಿಂ ತ ।
ಳ್ತಂಬಾಗಿ ಪೆರಸಿ ಶೋಭಾ
ಡಂಬರಮಂ ಪಡೆಗುಮಂಚಿತಕಾವ್ಯೋಕ್ತಿಗಳೊಳ್ ॥ 179 ॥

ಪೆರಸಿರೆ ಮುಂ ಸಂಯೋಗಾ
ಕ್ಷರಂಗಳೇಕಸ್ವರಂಗಳಿಂ ಸುಪ್ರಾಸಂ ।
ನೆರೆದು ವಿಪರ್ಯ್ಯಾಸಕ್ರಮ
ದಿರೆ ಸತತಂ ಶಾಂತಪೂರ್ವ್ವಮಕ್ಕುಂ ಪ್ರಾಸಂ ॥ 180 ॥

ಪತ್ತಿಪ್ರಮಾದಫಲಕಮ
ನತ್ಯುಗ್ರಗ್ರಾಹನಿವಹಸಂಕ್ಷೋಭಿತದೊಳ್ ।
ಮತ್ತೀ ರತ್ನಾಕರದೊಳ್
ಪುತ್ರಿಕೆಯೆನೆ ಬಿಲ್ದಳಂತು ಬಾಲ್ದುದೆ ಚೋದ್ಯಂ ॥ 181 ॥

ಶಾಂತಪ್ರಾಸದ ಭೇದವು
ದಿಂತಕ್ಕುಂ ವರ್ಗ್ಗದಕ್ಕರಂಗಳ್ನಾಲ್ಕುಂ ।
ಸಂತವಿರೆ ಪೇೞ್ದ ತಾಣದೊ
ಳಂತಕ್ಕುಂ ಪ್ರಾಕ್ತನೋಕ್ತವರ್ಗ್ಗಪ್ರಾಸಂ ॥ 182 ॥

ಸಕಲಜನವಿನುತನಂ ಕತ
ಮುಖಸದೃಶವಿಶಾಲವಿವಿಧವಿಭವೋದಯನಂ ।
ಪ್ರಗತಗುಣಗಣನನರಿಬಲ
ವಿಘಟನನಂ ಕಂಡನಣುವಸಾ ರಾಘವನಂ ॥ 183 ॥

ಇದು ದಲ್ವರ್ಗ್ಗಪ್ರಾಸ
ಕ್ಕುದಾಹೃತಂ ಕುಱುಪು ಕಷಸವರ್ಣ್ಣತ್ರಯವುಂ ।
ವಿದಿತಪ್ರಾಸವಿವಿಕ್ತಾ
ಸ್ಪದದೊಳ್ನಲಿ ಪೇೞ್ದೊಡದು ಸವಿಸಪಪ್ರಾಸಂ ॥ 184 ॥

ಕಶಧರಬಿಂಬಾನನೆಯುಂ
ರುಷಕೇತನಕೇತನಾಭತನುತನುವಂ ತಾಂ ।
ಬಿಸವಿಶದವರ್ಣ್ಣೆಯುಂ ಕಂ
ಡೊಸೆದಂ ಬನದೊಳಗೆ ಜನಕತನಯಳನಣುವಂ ॥ 185 ॥

ಎಂದಿಂತು ಸವಿಸಪಪ್ರಾ
ಸಂ ದರ್ಶಿತಭೇದವಾಯ್ತನುಪ್ರಾಸವುವುಂ ।
ಸಂದಿಸಿದೆಱೆಯುಕ್ಕರವೊಂ
ದೊಂದಱೊಳಳವಡಿಸಿ ಬಂದೊಡನುಗತವುಕ್ಕುಂ ॥ 186 ॥

ಜನವಿನುತನನಘನನುಪವ
ನನುನಯಪರನರಸನಿನಿಸು ನೆನೆನೆನೆದು ಮನೋ ।
ಜನಿತಮುದನನಿಲತನಯನ
ನನನೃತವಚನಪ್ರಪಂಚನಿಂತಿರೆ ನುಡಿದಂ ॥ 187 ॥

ಇಂತಿದನುಪ್ರಾಸಂ ಪಾ
ದಾಂತದೊಳೊಂದಾವುದಾನುವಿಟ್ಟಕ್ಕರವುಂ ।
ಮುಂತಣ ಪಾದಾಂತಂಗಳೊ
ಳುಂ ತಡೆಯದೆ ಪೇೞ್ದೊಡಂತದಂತಪ್ರಾಸಂ ॥ 188

ಅತಿವಿಶದಯುಕ್ತೋದ್ಭೃತ್ತಂ
ನತಸಕಳಾರಾತಿಜನವಿತಾನಂ ಮತ್ತಂ ।
ವಿತತಶ್ರೀಸಂಪತ್ತಂ
ಸತತಂ ನೃಪತುಂಗದೇವನೊಲವಿಂ ಪೊತ್ತಂ ॥ 189 ॥

ಪ್ರಾಸಾನುಪ್ರಾಸಾಂತ
ಪ್ರಾಸಂಗಳ್ಮೂಲಮತಿಕಯುಂಗಳ್ಪ್ರಸಾ ।
ಭಾಸಂಗಳುಲ್ಲಿದ ಮಹಾಲುಂ
ಭಾಸುರನೃಪತುಂಗದೇವವಿದಿತಕ್ರಮದಿಂ ॥ 190 ॥

ಗೀತಿಕೆ ॥ ಆಱುದು ಪೀನಂ ಮಾರ್ಗ್ಗಗತಿಯಂ
ತಱುಸಲಾಗದಾರ್ಗ್ಗಂ ಬಹುವಿಕಲ್ಪದೊಳ್ ।
ಕುಱುತು ಪೂರ್ವ್ವಶಾಸ್ತ್ರಪದವಿಯಂ
ತೆಱೆದಿರೆ ಪೇೞ್ವೆನಿನಿಸಂ ಕನ್ನಡದೊಳ್ ॥ 191 ॥

ಕಂ ॥ ಕರಚರಣಕರೀರಶಿರೋ
ಧರವದನಾದ್ಯವಯವಂಗಳವು ತಂತಮ್ಮೊಳ್ ।
ದೊರೆಕೊಂಡೆಡೆಗಳೊಳೊಳವಾ
ಗಿರೆಯುಂ ನರರೊರ್ವ್ವರೊರ್ವ್ವರಂ ಪೋಲದಪೊಲ್ ॥ 192 ॥

ವರಶಬ್ದಾಲಂಕಾರದ
ವಿರಚನೆಗಳ್ಗೊೞ್ಪೊಡೊಂದೆ ತೋರ್ಕ್ಕೆಗಳಿಂತುಂ ।
ಪೊರೆದಿರ್ಪಲೊಂದೊಂದಱೊಳಾ
ವರಮುಕವೀಕಪ್ರಯೋಗಗತಮಾರ್ಗ್ಗಂಗಳ್ ॥ 193 ॥

ಕವಿಗಳುಮನಾದಿಲೋಕೋ
ದ್ಭವರಪ್ಪುದಱಿಂದನಂತಗಣನಾನುಗತಂ ।
ಸವಿಶೇಷೋಕ್ತಿಗಳುಮನಂ
ತವಿಧಂಗಳನಂತಭೇದವದಱಿಂ ಮಾರ್ಗ್ಗಂ ॥ 194 ॥

ಜನಿತವಿಭಾಗಂಗಳ್ವ
ಳ್ಮನಸಾತೀತಂಗಳಂತು ಮಾರ್ಗೋಕ್ತಿಗಳೊಳ್ ।
ನೆನೆದಱಿಪಲಾರ್ಪ್ಪರಾರದ
ನನಿಶ್ಚಿತಕ್ರಮವಿಶೇಷಗುಣಯುಕ್ತಕವುಂ ॥ 195 ॥

ಅಂತುಂಭೇದಮನಿನಿಸಾ
ರ್ವ್ವಂತುತ್ತರದಕ್ಷಿಣೋರುಮಾರ್ಗ್ಗದ್ವಯದಾ ।
ಚಿಂತಿತಪುರಾಣಕವಿವಿ
ತಾಂತರಮಂ ಪೇೞ್ವೆನಱ್ಪವಮಾಱ್ಕೆಯೊಳೆನ್ನಾ ॥ 196 ॥

ನಿಗದಿತಕಾವ್ಯೋಕ್ತಿಗಳೊ
ಳ್ನೆಗೞ್ವುವು ಮಾರ್ಗ್ಗಂಗಳಿಂತುಮೆರಡುಕ್ತಿಗಳಿಂ ।
ಬಗೆವಾಗಳೆರಡು ಮಾಱ್ಕೆಯೊ
ಳಿಗೆದುವು ವಕ್ರಸ್ವಭಾವನಿಯತಿಕ್ರಮದಿಂ ॥ 197 ॥

ಸತತಂ ದಕ್ಷಿಣಮಾರ್ಗ್ಗೋ
ದಿತೋಕ್ತಿಭೇದಕಗುಣಂಸ್ವಭಾವಾಖ್ಯಾನಂ ।
ವಿದಿತೋತ್ತರಮಾರ್ಗ್ಗಗತಂ
ಪ್ರತೀತವಕ್ರೋಕ್ತಿಕೃತವನಲ್ಪವಿಕಲ್ಪಂ ॥ 198 ॥

ಸವುಮಧುರನಿಬಿಡಕಾಂತಸು
ಕುಮಾರಸುಸಮೂಹಿತಪ್ರಸನ್ನೋದಾರ
ಪ್ರವಿತಗ್ರಾಮ್ಯೋಜಸ್ಸಿ
ಕ್ರಮದಿಂ ದಕಭೇದಮುಲ್ಲಿ ದಕ್ಷಿಣಮಾರ್ಗ್ಗಂ ॥ 199 ॥

ಅವಱ ವಿಪರ್ಯ್ಯಯವೃತ್ತಿ
ಪ್ರವಿಭಕ್ತವಿಕಲ್ಪಮಕ್ಕುಮುತ್ತರಮಾರ್ಗ್ಗಂ ।
ಸವಿಶೇಷಗುಣವ ನತಿಶಯ
ಧವಳೋಕ್ತಿಕ್ರಮದಿನಱಿಪುವೆಂ ತದ್ಭವದೊಳ್ ॥ 200 ॥

ಸವುಬಂಧಮೆಂಬುದಕ್ಕುಂ
ಸವುನಿಸಿ ಕಿವಿಗೆಡಱಿ ಬೂರದಾದಂ ಪುಟ್ಟಂ ।
ಸವೆಂದಪದದಾ ವಿಭೇದ
ಕ್ರಮಮೆರಡಕ್ಕುಂ ವೃದುಸ್ಫುಟೋಕ್ತಿಯಿನದಱಿಂ ॥ 201 ॥

ವೃದುತರವರ್ಣ್ಣಾನುಗಮಾ
ಸ್ಪದವಿರಚನೆಯೊಳಗೆ ತೋಪ್ಪುದಧುವೃದುಬಂಧಂ ।
ವಿದಿತಸ್ಫುಟಾಕ್ಷರಾಧಿಕ
ಪದವಿರಚಿತಮಪ್ಪುದಕ್ಕುಮಾ ಸ್ಫುಟಬಂಧಂ ॥ 202 ॥

ದೊರೆಕೊಳೆ ನೋಡಿದನಾಯತ
ಕರುಣಾಪಾಂಗದೊಳೆ ಲೋಲಲೋಚನಯುಗೆಯಂ ।
ಗುರುಜಘನಪಯೋಧರಯುಗ
ಭರವಿಧುರೆಯುನಾ ಧರಾಧಿಪತಿ ವಿಧುಮುಖಿಯಂ ॥ 203 ॥

ಇಂತಿದು ಸವುಬಂಧದ್ವಿತ
ಯಾಂತರಮಾ ವಿಷಮಬಂಧಮಿನ್ನಿಂತಕ್ಕುಂ ।
ಚಿಂತೈಕಸುಖಾಕ್ರಾಂತ
ಸ್ವಂತುಷ್ಟೈಕಾಗ್ರಚಿತ್ತರಾದರ್ತ್ತವ್ಮೊಳ್ ॥ 204 ॥

ಸವಿವೊಡೆ ಮಧುರರಸಂಬೊ
ಲ್ಕಿವಿಗಿನಿದಾಗಿರ್ಪ ವಚನವಿರಚನೆ ಮಧುರಂ ।
ಸವಿಳಾಸಾಳಾಪದಿನವ
ಱಿ ವಿಶೇಷವಿಶೇಷ್ಯಮುಂತು ಮಾರ್ಗ್ಗದ್ವಯದೊಳ್ ॥ 205 ॥

ದೆಸೆಗಳ್ವಶಾಲವಾದುವು
ಕೆಸಱಿಂ ಪಿಂಗಿತ್ತು ಧರಣಿ ತಿಳದುವು ಕೊಳಗಳ್ ।
ಕ್ವಸನಪಥಮುಮುಳವಾಯ್ತಿಂ
ದೊಸಗೆಗಳಂ ಬೀಱುವಂತೆ ಕರದಾಗಮದೊಳ್ ॥ 206 ॥

ಇದು ದಕ್ಷಿಣಮಾರ್ಗ್ಗವಿಭೇ
ದದ ಮಧುರರಸಪ್ರಯೋಗಮಾಚಾರ್ಯ್ಯಮನೋ ।
ಮುದಿತವಿತಾನಂ ವಿದಿತಾ
ಸ್ಪದಮುತ್ತರಮಾರ್ಗ್ಗವರ್ಗ್ಗಮುಧ್ಧುರಾಳಾಪಂ ॥ 207 ॥

ಧವಳಜಲಧರಕುಲಾಕುಲ
ಮವಿಕಳವಮಂಬರತಳಂ ವಿನೀಲಚ್ಛಾಯಂ ।
ಕುವಲಯಕೀರ್ತ್ತಿಗೆ ಕಾರದ
ಮವಧೀರಿತವಾಯ್ತು ದೆಂಬುದುತ್ತರಮಾರ್ಗ್ಗಂ ॥ 208 ॥

ಮಿಗೆ ನಿಬಿಡಬಂಧವೆಂಬುದು
ತಗುಳ್ವುವು ವರ್ಣಂಗಳಗಲದಿರೆ ಮುತ್ತಕ್ಯಂ ।
ನೆಗಟ್ಸಲ್ಪಪ್ರಾಣಾಕ್ಷರ
ನಿಗದಿತಮೇತದ್ವಿಪರ್ಯ್ಯಯೋಕ್ತಂ ಶಿಥಿಲಂ ॥ 209 ॥

ಅರವಿಂದೋತ್ಪಲಪುಷ್ಪೋ
ತ್ತರಂಗಳೊಳ್ಪಾಯ್ದು ಮುದ್ಧುಮುದ್ಧುಮುರೆಂಗಳ್ ।
ವಿರತಮುದವಾದುವುರುಮುದ
ವಿರಾಮುವನಕರಿಕಪೋಲಫಲಕದೊಳಾಗಳ್ ॥ 210 ॥

ಇದು ನಿಬಿಡಶಿಥಿಲಬಂಧಾ
ಸ್ಪದಮಾರ್ಗ್ಗದ್ವಿತಯಗದಿತಲಕ್ಷ್ಯವಿಭಾಗಂ ।
ಸದಭಿಕಮನೀಯಗುಣಮ
ಪ್ಪುದು ನಿಯತಂ ಕಾಂತವೆಂಬುದಭಿಗೀತಾರ್ತ್ಥಂ ॥ 211 ॥

ದಿನಕರಕರನಿಕರಂಗ
ಳ್ಗನವಿವರಪ್ರಸರಮಾಗಿಯುಂ ತಮ್ಮಂ ಕಂ ।
ಡನಿತಱೊಳೆ ತೆರಳ್ದೆನ್ನಾ
ಮನೋಗತಧ್ವಾಂತಬಂಧಮಳಱುತ್ತಿಲ್ಲಂ ॥ 212 ॥

ಇಂತೆದು ದಕ್ಷಿಣಮಾರ್ಗ್ಗದ
ಕಾಂತಮುಸಂಭವಿತಾರ್ತ್ಥಮುದ್ದಾವೋಕ್ತಂ ।
ಸಂತತಮುತ್ತರಮಾರ್ಗ್ಗಗ
ತಾಂತರಮದನಿಂತು ಕಾಱುತು ತಱುಸಲ್ಗೆ ಬುಧರ್ ॥ 213 ॥

ವಿಲಸಿತಭವದಭ್ಯಾಗಮ
ಜಲಧಾರೆಗಳೇನುಮಱಿಯದಂತುಮುದಂತ ।
ರ್ಮ್ಮಲಮುಂ ಕಱ್ಚಿದೊಡಾನೀ
ನೆಲಕೆಲ್ಲಂ ಪಾವನೀಯಚರಿತನೆ ಆದೆಂ ॥ 214 ॥

ಸುಕುಮಾರತರಾಕ್ಷರಪದ
ನಿಕರವಿಶಿಷ್ಟಪ್ರಯೋಗಗತವಪ್ಪುದದಾ ।
ಸುಕುಮಾರಮೆಂಬುದಕ್ಕುಂ
ಪ್ರಕಟಿತಮದಲಿ ಪ್ರಯೋಗಮಿಂ ತೆಱನಕ್ಕುಂ ॥ 215 ॥

ತೊಳಪೆಳವೆಱೆಯಂ ಮೊರೆವಳ
ಕುಳಿಂಗಳುಂ ಮೆಲ್ಲನೆಸಪ ಮಲಯಾನಿಲನುಂ ।
ಮುಳಿಸಂ ಕಱಿಲ್ಚಿ ಕಳೆದುವು
ಕಳಕಾಂಕುರಜೂತತತಿಗಳುಂ ಕಾಮಿಗಳಾ ॥ 216 ॥

ಇದಲಿ ವಿಪರ್ಯ್ಯಯವಿವಿಧಾ
ಸ್ಪದಾಕ್ಷರವಿಕಲ್ಪಮಿಂತಿದುತ್ತರದೂರ್ಗ್ಗಂ ।
ತ್ರಿದಶಾಧೀಶ್ವರಭೂತ್ಯ
ತ್ಯುದಾರವಿವಿಧಾರ್ತ್ಥವಿಭವನೀ ಭೂಪೇಂದ್ರಂ ॥ 217 ॥

ಬಂದಲಿ ಮಾತುಗಳಂ ಪೆಱ
ತೊಂದೆಱೊಳಲ್ಲಿದಿಟ್ಟುಕೂಡೆ ಪೇೞ್ದೊಡದಕ್ಕುಂ ।
ಸುಂದರತರಂ ಸಮೂಹಿತ
ಮೆಂದುಂ ವುತ್ತದಲಿ ಲಕ್ಷ್ಮಮಿಂ ತೆಱನಕ್ಕುಂ ॥ 218 ॥

ವಿನಿಮಿಳಿತಕುವುದನಂ
ಜನಿತೋನ್ನೀಲಾರವಿಂದವನಲಕ್ಷ್ಮೀಕಂ ।
ದಿನಕರನುದಯಂ ಗೆಯ್ತುಂ
ವಿನಿಹತತಿಮಿರಂ ವಿಶಿಷ್ಟಸಂಧ್ಯಾಶ್ಲೇಷಂ ॥ 219 ॥

ವಿನಿಮಿಳಾದಿಗಳವು ಲೋ
ಚನಾದಿಧರ್ಮ್ಮಂಗಳವನೆ ಕುವುದಾದಿಗಳೊ ।
ಳ್ನೆನೆದಿಂತು ಪೇೞ್ದೊಡಕ್ಕುಂ
ವಿನಿಶ್ಚಿತಕ್ರಮಸಮೂಹಿತಾಲಂಕಾರಂ ॥ 220 ॥

ವಿನಿಹತಸಮಸ್ತರಿಪುಕುಳ
ನನಿಮಿಷಲೋಚನದೆ ನೋಡಿ ನೀಡುಂ ಪ್ರಿಯೆಯಂ ।
ವಿನಿಮಿಳಿತಲೋಚನೆಯಂ
ಜನಪತಿ ನಿಜಬಾಹುಯುಗದಿನಾಶ್ಲೇಷಿಸದಂ ॥ 221 ॥

ಈ ಕುಲಿಪುಗಳಂದಲ್ವುದ
ನೇಕಸಮೂಹಿತಪದಪ್ರಯೋಗಾಂತರದುಂ ।
ಲೋಕಪ್ರತೀತಸುಭಗವಿ
ವೇಕಾಳಾಪಂ ಪ್ರಸನ್ನಮದುವಿಂತಕ್ಕುಂ ॥ 222 ॥

ಕರದವುಲಾಂಬರದೊಳ್ ಪಿಡಿ
ಕರನೆಸೆದತ್ತೆಂಬುದಾ ಪ್ರಸನ್ನಮಿದಕ್ಕುಂ ।
ಕರವೊಪ್ಪತ್ತುಷ್ಣೀತರ
ಕಿರಣಂ ವಪ್ಪರ್ಣಂತಸವುಯಜಳಧರಪಥದೊಳ್ ॥ 223 ॥

ಮಿಗೆ ವಸ್ತುಗತಸ್ಥಿತಿಯಂ
ಬಗೆದಗ್ಗಳವಾಗೆ ಪೇೞ್ದೊಡಕ್ಕುಮುದಾರಂ ।
ಬಗೆವೊಡೆ ಕಾವ್ಯದ ಪದವಿಯ.
ನೆಗೞ್ತೆಗದು ಮೂಲವುದಱಿ ಪಾಂಗಿಂತಕ್ಕುಂ ॥ 224 ॥

ಪುರುಷೋತ್ತಮರಾರ್ನಿರ್ನ
ನ್ನರುದಾರಾರಾತಿಸವಿಂತಿಯಂ ಕೊಂದಿದ್ದರ್ದಂ ।
ಸುರಸುದತೀ ಲೀಲಾಲಸ
ಪರಿರಂಭಾರಂಭಕೇಳಸುಖದೊಳ್ ನಿಱ್ಪರ್ ॥ 225 ॥

ಇದು ದಾಕ್ಷಿಣಾತ್ಯಕವಿವಂ
ರ್ಗ್ಗದುದಾರಮುದೀಚ್ಯದುರುವಿಶೇಷಣಯುತವು ।
ಪ್ಪುದನೊಲ್ವರಿಂತು ಹೇವಂ
ಗದಲೀಲಾಂಱುಜವಿಚಿತ್ರಚಿಕ್ರಾಧಿಕವಂ ॥ 226 ॥

ಗೋಪಾಳಬಾಳಲಲನಾ
ಟಾಪಳವಾಚಾಲಕಿತವಬಾಹ್ಲೀಕಾದಿ ।
ವ್ಯಾಪಾರಂಗಳ್ ಗ್ರಾವ್ಯಾ
ಳಾಪಂಗಳ್ ಮೂರ್ಗ್ಗಯುಂಗಳಪರಿಹಾರ್ಯ್ಯಂಗಳ್ ॥ 227 ॥

ನೆನೆದಿರುಳುಂ ಪಗಲುಂ ನಿ
ನ್ನನೆ ಖಿನವೊಱಿಲ್ದು ಮಱಿಗಿ ಕಾತರಿಸುತ್ತುಂ ।
ಮನದೊಳ್ ಸೈರಿಸಲಾಱೆಂ
ನಿನಗೆನಸುಂ ಕರುಣಮಿಲ್ಲ ಮುರವಾನಿಸನೈ ॥ 228 ॥

ಎಂದಿಂತೀ ಗ್ರಾವ್ಯೋಕ್ತಿಯೊ
ಳೊಂದಾಗಿಸದದನೆ ಪೇೞ್ವುದಿಂತೀ ಸ್ಥಿತಿಯೊ ।
ಳ್ಕಂದರ್ಪಂ ಚಲದೆನ್ನೊ
ಳ್ನಿಂದಂ ಮುನಿಸಿಲ್ಲ ನಿನ್ನೊಳಾತಂಗಿನಿಸುಂ ॥ 229 ॥

ಸವುಱಿ ಸವಾಸಪದಂಗಳ
ನವುರ್ದಿರೆ ಸಯ್ತಾಗಿ ಬಗೆದು ಪೇೞ್ದೊಡದಕ್ಕುಂ ।
ಕ್ರಮದೋಜೋಲಕ್ಷಣಮು
ತ್ತಮಮಿದು ಗದ್ಯಕ್ಕಲಂಕ್ರಿಯಾನುಸವೇತಂ ॥ 230 ॥

ಮಿಗೆ ಪದ್ಯದೊಳಂ ಗುಣಮುಂ
ತಗುಳ್ವುಗುಂ ಸಮುಹಿತಪ್ರಯೋಗಾನುಗತಂ ।
ಸೊಗಯಿಸುವಂತಿರೆ ಬಗೆದಿದ
ನಗಾಧಮನರಿಪುಗೆ ಕೃತಿಯೊಳೋಜೋಗುಣಮುಂ ॥ 231 ॥

ಕಾರಕಮುಂ ಕ್ರಿಯೆಯುಮನಲ್ಲಿ
ದೋರಂತಿರೆ ಮುಂ ತಗುಳ್ವ ಮುಕ್ತಕಪದದೊಳ್ ।
ಸಾರಂ ಸಮಾಸಪದದು
ಚ್ಚಾರಣೆಯಂ ನೀಳ್ದ ನಿಲೆ ತಗುಳ್ವುಗೆ ಕೃತಿಯೊಳ್ ॥ 232 ॥

ಮೊದಲೊಳ್ ಸಮಾಸಪದಮುಮು
ನೊದವಿಸಿ ಪೇಳ್ದಲ್ಲಿ ತುದಿಯೊಳಿಸಮಾಸಪದಾ ।
ಸ್ಪದಮಾಗಿ ನಿಱಿಸೆ ಕಬ್ಬಿನ
ತುದಿಯಂತಿರೆ ವಿರಸಮಕ್ಕುಮದು ತೊದಳುಂಟೀ ॥ 233 ॥

ಪರಮಾನುಭಾವಭೂಸುರ
ಸುರರಾಜೋಪಮಿತವಿವಿಧವಿಭವೋದಯನಂ ।
ನರಪತಿಯಂ ಕಪಿಪೃತನಾ
ಪರಿವೃತನಂ ಜಲಧಿತಟದೊಳಣುವಂ ಕಂಡಂ ॥ 234 ॥

ಎಂದಿಂತು ವೇಳ್ವಮಾರ್ಕ್ಕೆಯೊ
ಳೊಂದುವುದೋಜಸ್ವಿತಾಗುಣಂ ಕೈಕೊಳೆಯುಂ ।
ಸುಂದರಮಾಗದು ಕವಿಪದ
ವೆಂದುಂ ವೃತ್ಯಯದಿನಿಡುವೊಡದು ಸುಕರತರಂ ॥ 235 ॥

ನರಪತಿಯಂ ಕಪಿಪೃತನಾ
ಪರಿವೃತನಂ ಜಲಧಿತಟದೊಳಣುವಂ ಕಂಡಂ ।
ಪರಮಾನುಭಾವಭೂಸುರ
ಸುರರಾಜೋಪಮಿತವಿವಿಧವಿಭವೋದಯನಂ ॥ 236 ॥

ಬೆರಸಿರೆ ಸಮಾಸದೊಳ್ ಬಂ
ಧುರಮಾಗದು ಕಾವ್ಯಬಂಧಮೆಂದುಂ ಕೃತಿಯೊಳ್ ।
ದೊರೆಕೊಳ್ವಪದವಿಶೇಷ್ಯಾಂ
ತರವುದಱಿಂ ವ್ಯಸ್ತಮಾಗಿ ಪೇಳ್ದಿದನೆಂದುಂ ॥ 237 ॥

ಪರಿದೆಯ್ದಿತಾಗಿದಂ ಭಾ
ಸುರತರರಘುಕುಲಲಲಾಮಲಕ್ಷ್ಮೀಧರನೊಳ್ ।
ಪರಿಕೋಪವಿಧೃತವಿಸ್ಫುರ
ದುರುರಕ್ತಕಠೋರನಯನಯುತದಶವದನಂ ॥ 238 ॥

ಇಂತು ವಿಶೇಷ್ಯಕ್ರಿಯೆಯುಂ
ಸಂತಂ ನೋಲ್ಪಿದಱಿನಕ್ಕುಮದು ಸಾಪೇಕ್ಷಂ ।
ಚಿಂತಿಸೆ ಸಮಾಸಮುಂ ಪೇ
ಳ್ವಿಂತಪ್ಪ ಪದಂ ಸಮರ್ತ್ಥವಲ್ತಪ್ಪುದಱಿಂ ॥ 239 ॥

ಸಮನಿಸೆ ಸಾಪೇಕ್ಷತ್ವಮುಮಾ
ಸಮಾಸಮುಂ ಪೆಱಗುವೆಲ್ಲಿಯಾನುಂ ಗಮಕಂ ।
ಕ್ರಮಮದಱೊಳೆಲ್ಲವೆನಲಿನಿ
ತು ಮಾರ್ಗ್ಗದೊಳ್ಸಮಱುಗಿಂತು ಕವಿವೃಷಭರ್ಕ್ಕಳ್ ॥ 240 ॥

ಪರಿದೆಯ್ದಿ ತಾಗಿದಂ ಭಾ
ಸುರತರರಥುಕುಲಲಲಾಮನೊಳ್ ಲಕ್ಷ್ಮಣನೊಳ್ ।
ಪರಿಕೋಪವಶಭ್ರಮಣೋ
ದ್ಧುರರಕ್ತಕಠೋರಲೋಚನಂ ದಶವದನಂ ॥ 241 ॥

ಇಂತಿರೆ ಮಾರ್ಗ್ಗದ್ವಿತಯಗ
ತಾಂತರಮುಂ ಪೇೞ್ದೆನೆಲ್ಲಿಯುಂ ಕ್ಷೀರಗುಡಾ ।
ದ್ಯಂತರರಸಾಂತರಂ ಜಾ
ತ್ಯಂತರಮಪ್ಪಂತನಂತವಂತರ್ಭೇದಂ ॥ 242 ॥

ಗೀತಿಕೆ ॥ ಒಗೆದು ಮಾರ್ಗ್ಗದ್ವಿತಯಗ
ತಿಗಳಂ ಪ್ರಗುಣಗುಣಗಣೋದಯಕ್ಕರ್ಥ್ವಿತಕರ್ತ್ತದಿಂ ।
ಸೊಗಯಿಸುವಂತು ವಚನರಚನೆಯಿಂ
ನೆಗಲ್ದೊರೆ ಪೆರಸಿ ಪೇೞ್ದಿ ರಸವಿಶೇಷದೊಳ್ ॥ 243 ॥

ವೃ ॥ ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ವ್ಯಥೂ
ಚ್ಚಾರಣೆಯಿಂದಮದ್ಭುತರಸಂ ನಿಬಿಡೋಕ್ತಿಗಳಿಂದಮುಲ್ತಿ ಶೃಂ ।
ಗಾರರಸಂ ಸಮಂತು ಸುಕುಮಾರತರೋಕ್ತಿಗಳಿಂ ಪ್ರಸನ್ನಗಂ
ಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತದಿಂ ॥ 244 ॥

ಉತ್ಸವದಿಂದೆ ಹಾಸ್ಯರಸಮಾ ಮಧುರೋಕ್ತಿಗಳಿಂದಮುಲ್ತಿ ಬೀ
ಭತ್ಸ ರಸಾಂತರಂ ಶಿಥಿಲಬಂಧನದಿಂ ಸತತಂ ಭಯಾನಕೋ ।
ದ್ಯತ್ಸುರಸಂ ಕರಂ ವಿಷಮಬಂಧನದಿಂ ನೃಪತುಂಗದೇವಮಾ
ರ್ಗ್ಗೋತ್ಸವಮೂರ್ಜ್ಜಿತೋಕ್ತಿಗಳನಕ್ಕತಿರೌದ್ರರಸಂ ರಸಾವಹಂ ॥ 245 ॥

ಮಾತುಗಳಾವುವಾನುಮುಪಪನ್ನಿತಮಾರ್ಗ್ಗಯುತಪ್ರಯೋಗಸಂ
ಜಾತವಿಭೂಗದಿಂ ನೆಗೞ್ದ ಕನ್ನಡದೊಳ್ಗುಣಮಂ ತಗುಳ್ಚುಗುಂ ।
ನೀತಿನಿರಂತರಾನುಗತವೃತ್ತಿವಿಕಲ್ಪಿತಮಂ ತದೀಯನಿ
ರ್ಣ್ಣೀತಿಯನೀ ತೆಱದ್ದು ತಱುಸಲ್ಕೆಱುಧೋತ್ತಮರುಕ್ತಪೂರ್ವ್ವಕಂ ॥ 246 ॥

ನೋಡುವೆನಾವುಹೀಪತಿಯನತ್ಥಿ೯ಗುಣಾತ್ಥಿ೯ತಕಲ್ಪವೃಕ್ಷನಂ
ಬೇಡುವೆನತ್ಥ೯ಸಂಚಯವುನೆಂಬುದಿದುತ್ತರಮಾರ್ಗ್ಗವಾಚಕಂ ।
ನೀಡುಮುದಾತ್ತಚಾರುಗುಣನಂ ಮನದೊಳ್ನೆಱೆ ನೋಲ್ಪೆನಲ್ತೆಯೊ
ಳ್ಕೂಡಿರವೇಲ್ಪೆನೆಂಬುದಿದು ದಕ್ಷಿಣಮಾರ್ಗ್ಗವಿಚಕ್ಷಣೋದಿತಂ ॥ 247 ॥

ಸೂಡುವೆನೆಂಬುದಲ್ಲದಣವಾಗದು ಸೂಲ್ಪೆನವೋಳ್ಪುಮೆಂಬುದಂ
ಕೂಡುವೆನೆಂಬುದಲ್ಲದಿನಿಸಾವುದುಮಾಗದು ಕೂಲ್ಪೆನೆಂಬುದಂ ।
ಕಾಡುನೆನೆಂಬುದಲ್ಲದೆ ಸುಮಾರ್ಗ್ಗದೊಳಾಗದು ಕಾಲ್ಪೆನೆಂಬುದಂ
ಜೋಡುವೆನೆಂಬುದಲ್ಲದಿಡಲಾಗದು ನಿಕ್ಕುವ ತೋಲ್ಪೆನೆಂಬುದಂ ॥ 248 ॥

ಬರಿಸುವೆನಿಂದು ನಂದನವನಾಂತರದಲ್ಲಿಗೆ ಕಾಂತನಂ ಸಮಂ
ತಿರಿಸುವೆನಂತನಂತಸುಖಸಂಗತವುಂಗಳಕಾರಣಂಗಳಂ ।
ತರಿಸುವೆನಾ ಮುನೋನಯನವಲ್ಲಭನೊಳ್ಮನದೊಂದಲಂಪಿನಿಂ
ನೆರೆವೆನವೋಳ್ಪುಮೆಂಬುದಿದು ದಕ್ಷಿಣಮಾರ್ಗ್ಗವಿಶೇಷಭಾಷಿತಂ ॥ 249 ॥

ಬರಿಪೆನವೋಳ್ಪುಮಿಂದುಪವನಾಂತರದಲ್ಲಿಗೆ ನಲ್ಲನಂ ತಗು
ಳ್ದಿರಿಪೆನನಾರತಂ ಸರಸರಾಗನಿರೂಪಣಕಾರಣಂಗಳಂ ।
ತರಿಪೆನನಾಕುಳಂ ಮುನದಲಂಪಿನೊಳಾ ಮದನೋಪಪಾನನೊ
ಳ್ನೆರೆವೆನಭಂಗದೆಂಬ ವಚನಂಗಳವುತ್ತರಮಾರ್ಗ್ಗವರ್ತ್ತಿಗಳ್ ॥ 250 ॥

ಅನುಪಮನಂ ಬರಿಪ್ಪೆನನುರಾಗದೆ ನಲ್ಲನನಿಂದು ಮಿಕ್ಕನಂ
ದನವನದಲ್ಲಿಗಲ್ಲಿಗೆ ತರಿಪ್ಪೆನನಂಗಸುಖೋಚಿತಂಗಳಾ ।
ನನುನಯದಿಂದಿರಿಪ್ಪೆನಿನಿತುಂ ಸುರತಾಸವಸೇವನಾಸನಾ
ತನಸುಖದಿಂದಿರಿಪ್ಪೆನನುರಾಗದಿನೆಂಬುದಿದುತ್ತರೋತ್ತರಂ ॥ 251 ॥

ಪರಸುವೆನೆನ್ನದಾಂ ಪರೆಪೆನೆಂಬುದಿದಾಗದು ಚಿತ್ತನಾಥನೊಳ್
ಪರಸುವೆನೆನ್ನದಾಂ ಪರೆಪೆನೆಂಬುದಿದಾಗದು ಮಾರ್ಗ್ಗಯುಗ್ಮದೊಳ್ ।
ನಿರತಿಶಯಾನುಭಾವಭವನಪ್ಪ ಮಹಾನೃಪತುಂಗದೇವನಾ
ದರದೊಳೆ ಪೇೞ್ದಮಾರ್ಗ್ಗಗತಿಯಿಂ ತಱಿಸಲ್ಕದನಿಂತೆ ಕಬ್ಬಿಗರ್ ॥ 252 ॥

ಮನದೊಳಗಾಗಳುಂ ನಿಱಿಸದಾ ಮುಳಿಸಂ ಗತರಾಗಮೋಹನೊ
ಯ್ಯನೆ ಮುನಿನಾಥನೆಂಬ ವಚನಾಂತರವಿಂತಿದು ದಾಕ್ಷಿಣಾತ್ಯಕಂ ।
ಮನದೊಳಗಾಗಳುಂ ನಿಱಿಸದೊಯ್ಯನೆ ಮೋಹದಮನಂತೆ ರಾಗಮುಂ
ಮುನಿಸುಮನೊಲ್ಲದಂ ಮುನಿಪನೆಂಬುದಿದಕ್ಕುಮುದೀಚ್ಯವಾಚಕಂ ॥ 253 ॥

ತ್ರಿದಶಗಣೇಶಮೌಳಿಮಣಿಪೀಠನಿಷೇವಿಗಳೊಳ್ಮನೀಂದ್ರನಾ
ಪದಯುಗಳಂಗಳೊಳ್ಮನದೆ ಬಾಗುವೆನೆಂಬುದು ದಕ್ಷಿಣಾಯನಂ ।
ವಿದಿತಸುರಾಧಿರಾಜಮಕುಟಾಗ್ರಸಮುಚ್ಚ್ರಿತದೊಳ್ಮನೀಂದ್ರನಾ
ಪದಯುಗದೊಳ್ಮನೋವುದದೆ ಬಾಗುವೆನೆಂಬುದಿದುತ್ತರಾಯಣಂ ॥ 254 ॥

ವಿಲಸಿತಸಸ್ಯಸಂಪದಭಿರಾಮಗುಣೋದಯೆ ತಾಳ್ದದಲ್ಲಿರಾ
ಲಲನೆ ವಿಶಾಲಲಕ್ಷ್ಮಿಯನನಾರತಮೆಂಬುದು ದಕ್ಷಿಣಾಪಥಂ ।
ಜಲನಿಧಿವೇಖಲಾವಲಯಿತಾಂಗಿ ಕರಂ ಸೊಗಯಿಪ್ಪುದಾಯ್ತು ಭೂ
ಲಲನೆ ವಿಶಾಲಲಕ್ಷ್ಮಿಯನನಾಕುಳವೆಂಬುದಿದುತ್ತರಾಪಥಂ ॥ 255 ॥

ಗೀತಿಕೆ ॥ ನಿಳ್ಕವಮಿಂತು ಮಾರ್ಗ್ಗಯುಗದೊಳ್
ತಳ್ಕುದನಱಿಯೆ ಪೇೞ್ದೆನಿನಿಸೊಂದುದ್ದೇಶಮಂ ।
ವಿಳ್ಕ್ಕಗುಣೋದಯರ್ಕ್ಕಲೆಯದೆಂತು ಸ
ಯ್ತಳ್ಕುವಮಂತಾಗೆ ಬಗೆದು ಪೇೞ್ದಿಕ್ಕಬ್ಬದೊಳ್ ॥ 256 ॥

ವಿಳ್ಕ್ಕಶಬ್ದಾಲಂಕಾರಮಳ್ಕುಂ ದುಷ್ಕರಂ

ವಿಕ್ರಮಾರ್ಜುನವಿಜಯಂ

ರಾಜಸೂಯಾರಂಭಂ

ಕಂ ॥ ಶ್ರೀಗೆ ಫಳಂ ಚಾಗಂ ವಾಕ್
ಶ್ರೀಗೆ ಫಲಂ ಸರ್ವಶಾಸ್ತ್ರಪರಿಣತಿ ವೀರ ।
ಶ್ರೀಗೆ ಫಳಮಾಯುವೆಂದಿಂ
ತಾಗಳುಮಱಿದೆಸಗಿದಂ ಪರಾಕ್ರಮುಧವಳಂ ॥ 1 ॥

ವ ॥ ಅಂತು ಖಾಂಡವವನದಹನಪ್ರಪಂಚದಿಂಬಱಿಯವುರಾತಿವನದಹನಕ್ಕೆ ಮುನ್ನ ಮುಳ್ಕ ಪರವುಂಡಳಿಕರಿತ್ತುಂತೆತ್ತುಂ ಬೆಸಕೆಯ್ಕೆಲವುದಿವಸವಿರ್ದ್ದು ನಾರಾಯಣನಂ ದ್ವಾರಾವತಿಗೆ ಕಳಿಪಿ ॥

ಉ ॥ ತುಂಗತರಂಗಭಂಗುರಪಯೋಧಿಪರೀತಮಹೀಮಹೀತಳಾ
ಲಿಂಗಿತಕೀರ್ತ್ತಿ ಕೇಳ್ದ ಬಡಪಾರ್ವ್ವನಪುಯ್ಯಲನೊರ್ಮ್ಮೆ ಕೇಳ್ವನಾ ।
ವಂಗವುಗುರ್ವ್ವುಪರ್ವ್ವೆ ಜವದೊಳ್ಪೆರಗಿಲ್ಲದೆಪೋಗಿ ತಾಗಿ ತಂ
ದಂಗಡ ವಿಕ್ರಮಾರ್ಜ್ಜುನನೆಪಾರ್ವ್ವರ ಪಿಳ್ಳೆಯಪೋದಜೀವಮಂ ॥ 2 ॥

ವ ॥ ಎಂದು ಲೋಕವೆಲ್ಲಂ ಪೊಗೞೆ ವಿದ್ವಿಷ್ಟ ವಿದ್ರಾವಣನುಂಭೀಮಯುಧಿಷ್ಠಿರನಕುಳ ಸಹದೇವರು ವುಯ್ವರುಂಬೆರಸೊಂದುದಿವಸವೋಲಗಂಗೊಟ್ಟಿರೆ ಧರ್ಮ್ಮಪುತ್ರನಲ್ಲಿಗೆ ವುಯುಂ ಪಂಚತ್ಮಹಿರಣ್ಮಯಂ ಚತುರಕ್ರಂ ವೂಱುಯೋಜನದಳವಿಯ ಸಭಾಮಂಟಪಮನೊಂದುಲಕ್ಕರಕ್ಕಸವಡೆಯಿಂ ಪೊತ್ತುತರಿಸಿ ತನ್ನ ನಲ್ಮೆಯಂ ಬಲ್ಮೆಯಂ ವೆಱೆಯಲೆಂದು ದೇವಲೋಕದಿಂ ತಂದುವುಂದಿಟ್ಟು ॥

ವು ॥ ಇದಱಿಂದಂ ಬಿಸವಂದವೊಂದುತೆಱನಲ್ತೆಂದೆಂದೊಡಾರಯ್ವೊಡಿಂ
ತಿದಱೊಳ್ಪವ್ಯಸರೋವರಂಗಳಿದಱೊಳ್ಕಲ್ಪವನೀಜಂಗಳಿಂ ।
ತಿದಱೊಳ್ನಾಟಕಶಾಲೆ ರಯ್ಯಮಿದಱೊಳ್ದೇವಾಪ್ಸರೋನೃತ್ಯವಿಂ
ತಿದಱಿಂತಾಗಿರೆ ನೋೞ್ಪೊಡಾರುವುಱಿಯವರ್ಮ್ಮೆಡಲ್ಸಭಾಗೇಹವಂ॥ 3 ॥

ವ ॥ ಎಂದೆನ್ನೀಪ್ರಾಣವೆಂಬುದುಂ ವಿಕ್ರಮಾರ್ಜ್ಜುನನ ದಯೆಗೆಯ್ದು ಪ್ರಾಣವೆನ್ನ ಕೊಟ್ಟುದರ್ಕ್ಕೆವಾರ್ಕ್ಕೞ್ದೆ ಕೊಳ್ಳವೆಂದೊಡಂತೆಗೆಯ್ವೆವೆಂದುನಿಶ್ಚಯಿಸೆ, ಧರ್ಮ್ಮಪುತ್ರಂಗೋಲಗಂಗುಡಲ್ತಕ್ಕುದೆಂದದಂ ಧರ್ಮ್ಮಪುತ್ರಂಗೆ ಕೊಟ್ಟು, ಪರಾಕ್ರಮುಧವಳಂಗೆ ಕಶಾಂಕವಿಕದಯಕಮೆ ತೆರಳ್ದರುಳಿಗೊಂಡಂತಿರ್ದ ಕಂಬುವುಂ ಬಾಸಣಿಗೆಗಳೆದು ॥

ಕಂ ॥ ಇದನಿಂದ್ರನಟ್ಟದಂನಿನ
ಗಿದಱಪೆಸರ್ದ್ದೇವದತ್ತ ಮೆಂಬುದು ನಿನಗ ।
ಭ್ಯುದಯಕರಂ ಕಂಖಂ ರಿಪು
ಹೃದಯಕವಾಟಪುಟವಿಘಟನಂ ನೋಡರಿಗಾ ॥ 4 ॥

ವ ॥ ಎಂದದಂ ವಿಕ್ರಮಾರ್ಜ್ಜುನಂಗೆಕೊಟ್ಟು, ಮುನ್ನಂ ಷೋಡಶರಾಜರೊಳಗೆ ಮೂಂಧಾತನೆಂಬಂ ವಿದ್ಯಾಧರನಾತನ ಗದೆಯೆಂದು ಬಲಿಯಮಾತನಂ ಲವಣನೆಂಬಸುರಂ ಕಾದಿಕೊಂದುಕೊಂಡೊಡಾತನಂ ರಾವುಱಕಂದ್ರನತವ್ಮಂ ಕತ್ರುಘ್ನಂಗೆಲ್ದು ತನಗೆಕೊಂಡು ಸವುದ್ರದ ನಡುವಣಮೈನಾಕಪರ್ವ್ವತದೊಳ್ಮಡಗಿದೊಡೆನಗಿದು ವರುಣದೇವನಿತ್ತ ನಿಂತಪ್ಪುದು ॥

ಕಂ ॥ ಅಧಿಕರಿಪುನೃಪತಿಬಳಿನವ
ರುಧಿರಜಳಸ್ಪರಿತರೌದ್ರವಿಾಗದೆ ಪೆಸರಿಂ ।
ರುಧಿರವುಖಿಯೆಂಬುದೆಂದದ
ನಭಕಬಲಸ್ಥಂಗೆ ಭೀವುಸೇನಂಗಿತ್ತಂ ॥ 5 ॥

ವ ॥ ಅಂತಿತ್ತು ಬಲಿಯವುವರ ದಾನಸನ್ಮಾನಾದಿಗಳೊಳ್ಮಯಂ ರಾಗರಸವುಯನಾಗಿ ಸಂತಸಂಬಟ್ಟುಪ್ಪೋದನಿತ್ತ ವುತ್ತೊಂದು ದೆವಸವೂಸಭಾವುಂಟಪದೊಳ್ದರ್ವರಾಜಂ ತನ್ನ ನಾಲ್ವರ್ತ್ತವತ್ಮಂದಿರೊಡನೆ ದೇವೇಂದ್ರಲೀಲೆಯಿಂದೋಲಗಂಗೊಟ್ಟರೆಯಿರೆ ।

ಚಂ ॥ ಬೆಳಿಗುಂಗಳೆಲ್ಲವೊಂದುರುಳಿಯಾಗಿ ನಭಸ್ಥಳದಿಂದವಿೂವುಹೀ
ತಳಕಿಟ್ಟಿದಪ್ಪುದೆಂದು ವುನುಜಾಕೃತಿಯೆಂದು ವುುನೀಂದ್ರನೆಂದು ಕ ।
ಣ್ಗೊಳಸೆ ವುುನೀಂದ್ರರೊಳ್ಕವುಳಸಂಭವನಂದನನೆಂದು ನೋಟಕ
ರ್ತ್ತಳವೆಳಗಾಗೆ ಸಾರೆವರ ನೀರದವೂರ್ಗ್ಗದಿನಂದು ನಾರದಂ ॥ 6 ॥

ತರಳ ॥ ಬಳಸಿತನೊಡನೊಯ್ಯನೊಯ್ಯನೆ ಬರ್ಪ್ಪ ದೇವರದೊಂದು ಗಾ
ವುಳಯನಿನ್ನಿರವೆಂದು ತನ್ನನೆ ನಿಳ್ಕಿನೋಲ್ಪರಕಣ್ಣ ತ ।
ಣ್ಗೊಳಿಪ್ಪುತನ್ನಯವೆಂಯ್ಯೊಳೊಪ್ಪರೆ ಬೆಳ್ಪನಿಂದೆಳವಾಳವಿೂನ್
ಸೊಳೆಯೆಂಧಾತ್ರಿಗೆ ವರ್ಪ್ಪಗಂಗೆವೊಲೊಪ್ಪಿದಂವುುನಿಪುಂಗವಂ ॥ 7 ॥

ವ ॥ ಅಂತುಬರ್ಪ್ಪಗಳ್ ॥

ತರಳ ॥ ಸರಿಗೆಯೊಳ್ಸವೆದಕ್ಷವೂಲಿಕೆ ಪೊನ್ನವುುಂಜಿ ತೊಳಿಪ್ಪಕ
ಪ್ಪುರದಭಸ್ಮರಜಂ ಸುಕರ್ದ್ದರನೊಪ್ಪೆ ಪಿಂಗಜಟಾಳಿ ತಾ ।
ವರೆಯಸೂತ್ರದೊಳಾದ ಜನ್ನವುರಂ ದುಕೂಲದಕೋವಣಂ
ಕರವೊಡಂಬಡಿಸೋಟಕರ್ಕ್ಕಳನಾತಪಸ್ವಿವುರುಳ್ದಿದಂ ॥ 8 ॥

ಕಂ ॥ ಬಟ್ಟಗೊಡೆಚಂದ್ರಕಾಂತಿಯು
ನಟ್ಟಂಬರಿಗೊಳೆ ಪೊದಳ್ದ ಕೃಷ್ಣಜಿನವೊಂ ।
ದಿಟ್ಟಳವೆಸೆಯೆ ಪಿಡಂಗಂ
ಪುಟ್ಟಿಸೆಗಾಡಿಗಳೊಳೆಸೆವ ವೀಣಾಕ್ಷಣಿತಂ ॥ 9 ॥

ಪೆರಲೊಳ್ಪಣೆಯತಂತಿಗ
ಳೊರಸಿದ ಕೆಂಗಲೆಗಳಕ್ಷಮಾಲೆಯೊಳೆಸೆವಂ ।
ತಿರೆಪೊಸೆಯೆ ಮುತ್ತು ಪವಳಂ
ಪೆರಸಿದವೋಲ್ಪೆನ್ನ ತಪಸಿ ಕೆಯ್ಮೊಳಗಾಗಳ್ ॥ 10 ॥

ವ ॥ ಅಂತುಸಾಕ್ಷಾತ್‌ಬ್ರಹ್ಮಂ ಬರ್ಪಂತೆ ಬಂದು ॥

ಕಂ ॥ ಅಡಿಯಿಟ್ಟನೆಳೆಯೊಳವನಿಂ
ಪಿಡಿಯೊಳ್ಪರಿಜನಸವೇತಮಿದಿರೆಳ್ತರಸಂ ।
ಪೊಡವಡೆ ತಪಸ್ಸು ಕೆಯ್ಯಂ
ಪಿಡಿದೆತ್ತಿ ಪಲರ್ಮೆಪರಸಿದಂಪರಕೆಗಳಂ ॥ 11 ॥

ವ ॥ ಅಂತು ಧರ್ಮಪುತ್ರನಜಪುತ್ರನಂ ಮುಂದಿಟ್ಟೊಡಗೊಂಡು ಬಂದು ಮಣಿಕನಕರಚನವಿಚಿತ್ರವೇತ್ರಾಸನದೊಳಿರಿಸಿ ಮಹಾರ್ಘ್ಯಗುಣಮಣಿವಿಭೂಷಣಂಗೆ ಕನಕಪಾತ್ರದೊಳರ್ಘ್ಯಮೆತ್ತಿ ಕನಕಕಳಶಸಂಭೃತಕುಚಿಜಲಂಗಳಿಂದಮಮುನೀಶ್ವರನ ಪಾದಪದ್ಮಮಂಕರ್ಚಿ, ತತ್ಪಾದಪವಿತ್ರೋದಕಂಗಳಂ ಮಹಾಶಮುಷಿಯತಳದ ಕನಕಕಮಂಡಲುದಿವ್ಯತೀರ್ಥೋದಕಂಗಳಿಂದಯ್ವರುಂ ಪವಿತ್ರೀಕೃತಮಸ್ತಕರಾಗಿರ್ದ್ಯುಯುಧಿಷ್ಠಿರಂ ನಾರದಮಹಾಮುನಿಯುವೊಗಮಂನೋಡಿ ॥

ಕಂ ॥ ಪಡೆದುಂಬ್ರಹ್ಮಂಜಗವಂ
ಪಡೆಯಲ್ತಾನಾರ್ತ್ತನಿಲ್ಲಿ ಪೆಂಪಂ ನಿಮ್ಮಂ ।
ಪಡೆದಲ್ತೆ ಪಡೆದನೆನಿಸಿದ
ಕಡುಪೆಂಪಿನಪೊಱೆಗೆ ನೀವು ವೊರಲಿಗರಾದಿರ್ ॥ 12 ॥

ಬಾದೇಂ ಮುದೀಯಕರ್ಮ್ಮಫ
ಳೋದಿತ ಸಂತಾಪರೂಪರೂಪಕಳಾಪ ।
ಚ್ಛೇದನಕರಮಾಯ್ತು ಭವ
ತ್ಪಾದಪ್ರಕ್ಷಾಳನೋದಕಂ ಮುನಿನಾಥಾ ॥ 13 ॥

ಪೆಸಸೆನಗಾವುದೊ ಪೆಸಸಿಂ
ಪೆಸನಂಪರಿದಕ್ಕೆ ಗೆಯ್ಯೆ ಸಾರ್ದ್ದಿರ್ದ್ದೆನದಂ ।
ಪೆಸಸಿಂ ನಿಮ್ಮಿಬರುಂ
ಪೊಸತಾಗಿರೆ ಬಂದಿರೀಗಳಿಲ್ಲಿಂ ಬಂದಿರ್ ॥ 14 ॥

ವ ॥ ಎಂಬುದು ಮಾವುನೀಂದ್ರನಿಂದ್ರಲೋಕದಿಂ ಬಂದೆವೆಂದೊಡಲ್ಲಿಯ ಪಡೆ ಮಾತಾವುದು ॥

ಮ ॥ ದಿವಿಜೇಂದ್ರಂಸುಖವಿರ್ದ್ದನೇ ದಿತಿಸುತವ್ಯಾಬಾಧೆಗಲ್ದೇವರ್ಗಿ
ಲ್ಲವೊ ಆಷೋಡಕರಾಜರಿರ್ಪ್ಪತೆಱನೇನೆವ್ಮನ್ಪಯಕ್ಷ್ಮಾಪರಾ ।
ವಿಳಾಸಂಗಳೊಳರ್ಪ್ಪರೇದೊರೆತು ತಾನೆವ್ಮಯ್ಯನೈಶ್ವರ್ಯ್ಯವಿಂ
ತಿವನೆಲ್ಲಂತಿಳವಂತುಟಾಗಿ ಬೆಸಸಿಂ ಪಂಕೇಜಗರ್ಭ್ಭಾತ್ಮಜಾ ॥ 15 ॥

ವ ॥ ಎಂಬುದುಮಾವುನೀಶ್ವರನಿಳಾನರೇಶ್ವರಂ ಬೆಸಗೊಂಡಂದದೊಳೆ ದೇವ ಲೋಕದ ಪಡೆಮಾತೆಲ್ಲಮಂ ಪೇೞ್ದು ಪಾಂಡುರಾಜನಮಾತನಿಂತೆಂದಂ ॥

ಉ ॥ ನೀಡಿರದಿಂದ್ರನೋಲಗಕೆ ಪೋಪುದುಮಾಗಳುಮಂತೆವೋಗಿಯುಂ
ಷೋಡಕರಾಜರಿಂ ಕಡೆಯೊಳಿಪ್ಪುದು ಜೀಯ ಪಸಾದಮೆಂಬುದುಂ ।
ನೋಡಿದದೃಷ್ಟಿಗಳ್ಕಪುದಿದಿಪ್ಪುದುಮಾದಮೆ ಮಾನಭಂಗಮಂ
ಮಾಡೆ ಮನಃಕ್ಷತಕ್ಕಳವಿಗಾಣೆವು ನೋಡಿರೆ ಪಾಂಡುರಾಜನಂ ॥ 16 ॥

ಮ ॥ ಪರಚಕ್ರಂಗಳನೊತ್ತಿ ಕೊಂಡದಟರಂ ಕೊಂದಿಕ್ಕಿ ದಾಯಾದರೆ
ಲ್ಲರು ಮಳ್ಕುತ್ತಿರೆ ಸಂದಸಾಹಸದನಿಮ್ಮಾಯಪ್ಪುರಂ ಮುಕ್ಕಳಾ ।
ಗಿರೆಯುಂ ನಿಚ್ಚಲು ವಿಂದ್ರನೋಲಗದೊಳಂತಾಪಾಂಡುರಾಜಂಗೆ ನಿ
ರ್ನ್ನಿರವಃಪ್ಪೊಂದಪಮಾನದಿಂದವಿನಿತೊಂದೂನತ್ವವಃಪ್ಪಂತುಟೇ ॥ 17 ॥

ವ ॥ ಆವುಃವುದಂನೋಡಲಾಱುದೆಯುಂ ಪಾಂಡುರಾಜನೆನ್ನಿರ್ದ್ದಿರವನೆನ್ನ ಮುಕ್ಕಳ್ಗಱಿಪಿ ರಾಜಸೂಯುವೆಂಬ ಯಾಗಮಂ ಬೇಳ್ವಂತೆ ಮಾಡಿ ಬನ್ನಿವೆನೆಯು ಮಿದ ನಱಿಪಲೆಂದೆ ಬಂದೆವಾವುಖದ ಮಾಹಾತ್ಮ್ಯವಂ ಪೇೞ್ವೊಡೆ ಮುನ್ನಂ ಕೃತಯುಗ ದೊಳ್ಹರಿಶ್ಚಂದ್ರನೆಂಬ ಚಕ್ರವರ್ತ್ತಿ ಶತಕ್ರತುವಂ ನಿರ್ವ್ವರ್ತ್ತಿಸಿ ಚತುರರ್ಣ್ಣವಪರೀತ ಮಹೀತಲವಮಂ ಧರಾಮರರ್ಕ್ಕಳ್ಗೆ ದಕ್ಷಿಣೆಗೊಟ್ಟನಪ್ಪುದಱಿಂದಮಾದಱಫಲದೊಳೀ ಗಳಾತನಲ್ಲಿಗಿಂದ್ರಂ ನಿಚ್ಚಮೊಂದು ಪೊೞ್ತು ಪೋಗಿ ಪೂಜಿಸಬರ್ಪ್ಪನಿವ್ಮಯ್ಯಂಗೆ ನೀವುಮನಿತು ಮಹಿಮೆಯಂ ಮಾಱ್ಪಿರಪ್ಪೊಡೆ ॥

ಚಂ ॥ ಬಿರುದರನೊತ್ತಿ ಬೀರರ ನಡಂಗಿಸಿ ಕೊಂಕಿಗರಂಕಱಿಚ್ಚಿ ಚ
ನ್ನರನಡಿಗೊತ್ತಿ ಮಂಡಳಿಕರಂ ಬೆಸಕೆಯ್ಸಿ ಕಱುಂಬರಂನಿರಾ ।
ಕರಿಸಿ ಸವುಸ್ತವಾರಿಧಿಪರೀತಮಹೀತಳದೆರ್ತ್ತನೆಲ್ಲಮಂ
ತರಿಸಿ ನೆಗೞ್ತೆಯಂ ನಿಱಿಸಲಾಪ್ಪೊಡೆ ಮಾಡಿರೆ ರಾಜಸೂಯಮಂ॥ 18 ॥

ವ ॥ ಎಂದು ರಾಜಸೂಯಾಂತಂ ಕಳಹವೆಂಬುದಂ ಬಗೆದು ತಾನುಂ ಕಲಹ ಪ್ರಿಯನಪ್ಪುದಱಿಂದಮುನಿತನೆ ನುಡಿದು ಮಾಣ್ದ ಮುನೀಂದ್ರನಂ ನರೇಂದ್ರನಿಂತೆಂದಂ॥

ಚಂ ॥ ಬೆಳಗುವುದಿಂದ್ರಲೋಕದೊಳಗಯ್ಯನ ಮಾನ್ಯತೆಯೆಮ್ಮ ಸಾಹಸಂ
ಬೆಳಗುವುದೀಧರಾವಳಿಯದೊಳ್ತಣಿವರ್ವಿಜಮುಖ್ಯರಪ್ಪುದ ।
ಗ್ಗಳಕೆ ಪೊದಳ್ದುಪರ್ಬ್ಬುವುದು ಕೀರ್ತ್ತಿ ಪುರಾಕೃತಪುಣ್ಯದಿಂದೆ ನಂ
ಭವಿಸುವುದೆಂದೊಡೀವುಖದೊಳೇಂ ಪೊದಳಂಟೆ ಮುನೀಂದ್ರನಾಯಕಾ ॥

ವ ॥ ಎಂಬುದುಮಾವಾತಂ ನಿಲಿಸುಡಿದುದರ್ಕೆ ಮೆಚ್ಚಿ ನಿನಗದೇವಿರಿದು ॥

ಕಂ ॥ ಪರಪಿನನೀಳದ ಕಡೆಯಂ
ಮರುಳಂದವೆನೋಡಲಾಱದಂಬುಧಿಯಮಂ ।
ಕರಿದೆಂಬಂತಿರೆ ನಿನ್ನಂ
ನರನೆಂಬುದೆ? ನಿನ್ನ ಸಾಹಸಕ್ಕದುಪಿರಿದೇ ॥ 20 ॥

ವ ॥ ಎಂದು ನುಡಿದು ನಾಡಿಯುಂ ಪೊಲ್ತಿರ್ದ್ದುವಿಂಪೋಪೆವೆಂದ ಮುನಿನಾ
ಥನಂ ನರನಾಥಂಬಿಜಯಂಗೆಯ್ಯೆವೆನೆ ನಾರದನಿರದೆ ಗಗನತಳಕ್ಕೊಗೆದು ಮುಗಿಲಪೊರೆ
ಯೊಳಡಂಗಿದನಿತ್ತಥರ್ವರಾಜಂ ನಿಜಾನುಜರೊಡನೆ ರಾಜಸೂಯಪ್ರಪಂಚಮುನಾ
ಳೋಚಿಸಿ ಪುರುಷೋತ್ತಮನನೀಪದದೊಳ್ಪರಿಸುವುದು ನವುಗುತ್ತಮಪಕ್ಷಮೆಂದುಂ ॥

ಉ ॥ ದ್ವಾರವತೀಪುರಕ್ಕೆ ಚರಂ ತಡವಿಲ್ಲದೆ ಪೋಗಮಟ್ಟಿ ಪಂ
ಕೇರುಹನಾಭನಂಬರಿಸಿ ಮಜ್ಜನ ಭೋಜನಭೂಷಣಾದಿಸ ।
ತ್ಕಾರದೊಳಿಲ್ಲಿಱಂ ನೆಱೆಯೆಯೆಮಾಡಿ ಮುರಾಂತಕಪಾಂಡುಭೂಭುಜ
ಕ್ಕಾರಣಮಾಗೆ ನಾರದನ ವೇಱಿನೆಗಟ್ಟಿರ್ಪ್ಪೆಯರಾಜಸೂಯಮಂ ॥ 21 ॥

ಕಂ ॥ ಬೇಳಲೆ ಬಗೆವೊಡೆ ಹರಿಯೊಡ
ನಾಳೋಚಿಪವೆಂದುಬಱಿಯನಟ್ಟಿದೆನೆವ್ಮಂ ।
ಪಾಳಿಸುವೈನಿವ್ಮೊಡನೇ
ನಾಳೋಚಿಸದೆವುಗೆ ನೆಗಱಲೇಂನೆರವುಂಟೇ ॥ 22 ॥

ವ ॥ ಎಂಬುದುವುದೆಲ್ಲಮಂ ನೆಱೆಯೆಕೇಳ್ದ ಮುಂದಣ ಕಜ್ಜದ ಬಿಣ್ಪುಮನ
ಱಿದಂಭೋರುಹನಾಭಂ ಶುಂಭದಂಭೋಧರಧ್ವನಿಯಿನಿಂತೆಂದಂ ॥

ಉ ॥ ಎಂತು ಬಿಗುರ್ತ್ತುಬೀರರನೆಕೊಂದಪರೆಂತು ಸವುಸ್ತವಾರ್ದ್ದಿಪ
ರ್ಯ್ಯಂತಧರಿತ್ರಿಯಂ ವಕಕೆ ತಂದಪರೆಂತು ಧನಂಗಳಂ ಪ್ರಯೋ ।
ಗಾಂತರದಿಂತೆರಳ್ಚದಪರಾಗದಿದಾದೊಡವೆಂತು ರಾಜಸೂ
ಯಾಂತಮಿದೆಂತುಜೀಳ್ದಪಿರವಾಯುಶತಂ ಬರೆ ರಾಜಸೂಯಮಂ ॥ 23 ॥

ಕಂ ॥ ಗಾಳಿಂಗೊರವಂ ತಗುಳ್ಚಿಪ
ಳಾಳವನೇನೊಂದನಪ್ಪೊಡಂ ಗಱಿಪಿದೊಡಾ ।
ಬೇಳಂನುಡಿಗೇಳ್ದ ಕೆವ್ಯನೆ
ಬೇಳಲ್ಗಿವುಗಂತು ರಾಜಸೂಯಂ ಮೊಗ್ಗೇ ॥ 24 ॥

ವ ॥ ಮುನ್ನಂ ಕೃತಯುಗದೊಳೆಸಗಿದೊಂದುರಾಜಸೂಯದ ಕಡೆಯೊಳ್ದೀವಾ ಸುರಯುದ್ಧಂ ನೆಗಲೆ ಹಿರಣ್ಯಕಾಳನೇವಿಂಗಳ್ಕೊದಲಾಗಿ ನೆಗಲ್ತೆಯ ದೈತ್ಯರೆಲ್ಲಮೆನ್ನ ಚಕ್ರಘಾತದೊಳಲ್ಗಿ ಮಲ್ಗಿದಂತಾದರದೊಂದುಧರಾಸತಿಯ ಭಾರಾವತಾರದೊಳೆನಿ ತಾನುಂ ಘಸಣಿಪೋದುದದುಕಾರಣದಿಂ ರಾಜಸೂಯದ ಮೂತಂ ಕೇಳ್ವಲ್ಲಿಯೆಮಱೆ ವುದು ನುಡಿಯಲ್ವೇಡೆನೆ ಮಱುಮಾತುಗುಡಲಱಿಯದೆ ಧರ್ಮ್ಮಪುತ್ರಂ ಮೌನಂ ಗೊಂಡುಸಿರದಿರೆ ಪರಾಕ್ರಮಧವಳನಿಂತೆಂದಂ ॥

ಚಂ ॥ ಎನಿತುಗಡಂ ಪಯೋನಿಧಿಪರೀತಮಹೀತಳವೆಂಬುದಾಂಪ ಬೀ
ರರಪೆಸರಾವುದೀನುಡಿಯನೀಪದದೊಳ್ಪೊಱಿಗಿಕ್ಕೆನಾರದಂ ।
ಮನದೊಳಪೇಸುಗುಂ ಸುರಪನುಂನಗುಂ ಕಡುವಿನ್ನವಂಕ್ಕಂ ।
ಯ್ಯನವುಖನೆಂತುಪೇಕ್ಷಿಸುವುದೀವುಖವುಂ ಸರಸೀರುಹೋದರಾ ॥ 25 ॥

ವ ॥ ಎಂದೊಡೆ ಭೀಮಸೇನನಿಂತೆಂದಂ ॥

ಕಂ ॥ ಪನ್ನತರ ನಡುವನುಡಿಯ
ಲ್ಕೆನ್ನಭಜಾರ್ಗ್ಗಳಮೆ ಸಾಲ್ಗುಮೊಸೆ ಮೇಣ್ಮನಿವೇ ।
ಣೆನ್ನನುಡಿ ಟೂಕಡಾಘಣ
ಮೆನ್ನಂ ಪೆಸರುವುದು ರಾಜಸೂಯಂ ಬೇಳಲ್ ॥ 26 ॥

ವ ॥ ಎಂದು ಗಜಱಿ ಗರ್ಜ್ಜಿಸುವುದುಂಯುವಳರುಮಿಾ ಬೇಳ್ವೆಯು ಮೂತಂ ತವುಗೆ ನುಡಿದೊಡೆವ್ಯಗಂಡಮಾತುಮಳುಂಬವುಕ್ಕುಮೆಂದು ಮೆಯ್ಯೆಮೆಯ್ಗೆ ಪೆಸಸೆಂ ಬುದುಂ ರಾಜಸೂಯಮಂ ಬೇಳ್ದಲ್ಲದಿರಿರಪ್ಪೊಡೆ ಗಂಗಾನದಿಯು ಬಡಗಣತಡಿಯ ಮಧು ವುಘಸುವ ವಾರಣಾಸಿಪುರವುನಾಳ್ವಬೃಹದ್ಬಳಂಗೆ ಪುತ್ರೋತ್ಪತ್ತಿ ನಿಮಿತ್ತಮಪ್ಪುಂದು ದಿವ್ಯಪಿಂಡವುಂ ತನ್ನಿವ್ವರರಸಿಯರ್ಗ್ಗೆ ಪಚ್ಚು ಕೊಟ್ಟೊಡೆ ಪುಟ್ಟಿದೆರಡು ಪೋಲುಮನಿ ವೇವುವೆಂದು ಬಿಸುಡೆ, ಜರೆಯೆಂಬ ರಕ್ಕಸಿ ಕಂಡು ತಿನಲೆಂದೆರಡುಪೋಲುಮನೊಂದು ಕೆಯ್ಯೊಳೆ ಪಿಡಿದೊಡೊಂದೊಂದಱೊಳ್ಸಂದಿಸಿ ಮಾನಸರೂಪುಗೊಂಡೊಡೆ ಜೋದ್ಯಂ ಬಟ್ಟು ಜರಾಸಂಧನೆಂದು ಪೆಸರನಿಟ್ಟು ಬೃಹದ್ಬಳಂಗೆ ಕೊಟ್ಟೊಡಾ ಜರಾಸಂಧನುಂ ಸಾಲ್ವನುವೆಂಬ ದೈತ್ಯನುಮೊಂದಾಗಿ ಮೂವತ್ತೆರಡಕ್ಷೋಹಿಣೀಬಲಂಬೆರಸು ಮಧು ರಾಪುರಕ್ಕೆವಂದೆನ್ನಂ ಮುತ್ತಿ ಕೊಂಡೊಡುಪಾಯಬಲದೊಳ್ ಸಾಲ್ವನಂಕೊಂದು ಜರಾ ಸಂಧಂಗಳ್ಕಿ ಮಧುರಾಪುರವುಂಬಿಸುಟ್ಟುಪೋಗಿ ದ್ವಾರಾವತಿಯಂಸವುದ್ರಮೆ ನೀರ್ಗ್ಗಾ ದಿಗೆಯಾಗೆ ಮಾಡಿದೆನಿನ್ನುಂ ಯಾದವರಸೆಱೆಗಳೆಲ್ಲಮಾ ತನಲ್ಲಿರ್ದ್ದರಾತನುಂ ಭೀಮನಳೆ

ಯೊಳ್ಳಿಲ್ಲದೆ ಸಾಯನೆಂಬುದಾದೇಕವುದಱಿನಿವ್ಮಿಜ್ಜೆಯುವುಂ ಸಲಿಸೆ ಸವುಸ್ತಬಲಂ ಬೆರಸುಭೀವಾರ್ಜ್ಜುನರಂ ವೇಱ್ಪುವೆಂದು ಧರ್ಮ್ಮಪುತ್ರನನೊಡಂಬಡಿಸಿ ನುಡಿದು ವುಧುರಾಪುರವುನೆಯ್ದಿಬೃಹದ್ಬಳತನೂ ಜನಲ್ಲಿಗೆ ಧರ್ಮ್ಮಯುದ್ಧವುಂ ಬೇಡಿಯಟ್ಟಿದೊಡೆ ॥

ವು ॥ ಕಲಿ ವುಾರ್ಕ್ಕೊಳ್ಳದೆ ಕಟ್ಟುವೆಂಯ್ಕೊಳೆ ಸಿಡಿಲ್ತಾಪಂತೆವೋಲ್ತಾಗೆವೆ
ಯ್ದುಲಿಭೀವುಂ ವೆಱಪಿಂಗದಾನ್ತುಪಲವುಂ ಬಂಧಂಗಳಂ ತಳ್ತುತ ।
ತ್ಕುಲಶೈಲಂಕುಲಶೈಲದೊಳ್ಕಲುಷದಿಂಪೋರ್ವ್ವಂತೆವೋಲ್ಪೋರ್ದು ನೆ
ಯ್ದಿಲಕಾವಂತುದಿಗೆಯ್ದೆ ಸೀಱ್ವತೆಱುದಿಂ ಸೀಱ್ದಂ ಜರಾಸಂಧನಂ ॥ 27 ॥

ವ ॥ ಅಂತು ದೃಢಕಠಿನಹೃದಯಬಂಧನಂ ಜರಾಸಂಧನಂ ಕೊಂದುವುಾತನ ವುಗಂ ಕ್ಷೇವುಧೂರ್ತ್ತಿಯಂ ರಾಜ್ಯದೊಳ್ನಿಱಿಸಿ ಜರಾಸಂಧನೇಱುವ ರಥವುಂತರಿಸಿ ಸವುಸ್ತವಸ್ತುಗಳಂಕೊಂಡು ಗರುತ್ಮನಂ ನೆನೆದುಬರಿಸಿ ರಥವುಂ ಜೀರ್ದಿಸಲ್ವೇಱ್ದು ಯಾದವರ ಸೆಱೆಗಳುವುಂ ವುುಂದಿಟ್ಟು ನಾರಾಯಣಂ ಭೀವಾರ್ಜ್ಜುನರ್ವ್ವೆರಸು ಸುಖ ಪ್ರಯಾಣಂಗಳಂದಿಂದ್ರಪ್ರಸ್ಥಕ್ಕೆ ವಂದು ಧರ್ಮ್ಮಪುತ್ರನಂ ಕಂಡು ॥

ಶಿ ॥ ಜರಾಸಂಧಂಬುನ್ನಂವುಡಿದೊಡಿಳೆ ನಿಷ್ಕಂಟಕವುದ
ಲ್ಲಿರಲ್ವೇಡಿಂ ನಾಲ್ಕುಂದೆಸೆಗೆ ಪೆಸಸಿಂ ನಿವ್ಮಿನುಜರಂ ।
ಭರಂಗೆಯ್ವಾಗಳ್ನೀಂವೆಸರ್ವೆಸರೊಳಾನಾಲ್ವರುವುನಾ
ದರಂಗೆಯ್ದುಂನಾಲ್ಕುಂದೆಸೆಗೆಕಱುಪಿಂ ಬೆಳ್ಕುಱುವಿನಂ ॥ 28 ॥

ವ ॥ ಅಂತು ಭೀವುಸೇನನನಿಂದ್ರನವೋಲೆ ವೇಱ್ವಂತು ಪೂರ್ವ್ವದಿಗ್ಭಾಗಕ್ಕೆ ವೇಱ್ದು ನಕುಳನಂ ಯವುನನದಿರ್ಪ್ಪಲ್ವೇಱ್ವಂತೆ ದಕ್ಷಿಣದಿಶಾಭಾಗಕ್ಕೆ ಪೆಸಸಿ ಸಹದೇವನಂ ವರುಣನನದಿರ್ಪ್ಪಲ್ನಿಯಾವಿಸುವಂತೆ ಪಶ್ಚಿವುದಿಗ್ಭಾಗಕ್ಕೆವೇಱ್ದು ವಿಕ್ರಮಾರ್ಜ್ಜುನನಂ ಕುಬೇರನಿಂ ಕಪ್ಪಂಗೊಳಲ್ಸು ವುರ್ಪ್ಪಿಸುವಂತೆ ಉತ್ತರೋತ್ತರವುಾಗಲುತ್ತರ ದಿಶಾಭಾಗಕ್ಕೆ ವೇಱ್ದಾಗಳ್ ॥

ಚಂ ॥ ಅರಿನರಪಾಲವುೌಳವುಣಿಯೊಳ್ನಿಲೆಗೊಂಡುದು ಕಂಬುಚಕ್ರಜಾ
ವುರಹಳಚಿಹ್ನಚಿಹ್ನಿತಪದಾಕೃತಿ ಬೀಸುವ ಚಾವುರಾಳಿ ಸುಂ ।
ದರಿಯರಕೆಯ್ಗಳಂ ಬರ್ದುಕಿಬಿಱ್ದುವು ಬೆಳ್ಗೊಡೆನೋಡೆನೋಡೆನಿಂ
ದುರಿದುವು ಸಾಳಭಂಜಿಕೆಗಳಱ್ತುವು ವೈರಿನರೇಂದ್ರಗೇಹದೊಳ್ ॥ 29 ॥

ವ ॥ ಅಂತು ವಿಜಯಂ ತನ್ನ ದಿಗ್ವಿಜಯದೊಳಾದ ವಿಜಯಚಿಹ್ನಂಗಳ್ಮನ್ನವುನೆಗಟೆ ವಿಜಯಂಬೇಡಿಸಿ ಅರಿನೃಪರಂಳ್ಪೇದಿಸಿ ಪಾಂಚಾಳರಂಚಾಳಿಸಿ ಗಾಂಧರ್ವ್ವರಂವಿರೆ ಧರ್ಮ್ಮಾಡಿ ಕೌಳಾಧೀಕರಂಸಾಧಿಸಿ, ಕಿಂಪುರುಷರಂ ಕಾಪುರುಷರ್ಮ್ಮಾಡಿ ಬಾಹ್ಲೀಕರಂ ನೀಱ್ಕುರಿಸಿ ವುಳವಿಗರಂ ಕೆಳಗಿವಿಗೆಯ್ಯುದಾಟಂದು ನಿಜನಾವುಾಂಕಿತಸಾಯಕಂಗಳಂದೆ ಜ್ಜನಜ್ಜಂ ಕಿಡಿಸಿ ॥

ಮು ॥ ಉಱದಿರ್ಪಂತೆವಂಗಾವ ಗರ್ವ್ವ ವಿಱುಯಲ್ವೇಡವ್ಮನೆವಂಮ್ಮಳ್ಳದಂ
ನೆಱೆಕೊಂಡೆವ್ಮಯಬಾಲ್ಗಳೊಳ್ನಿಱುಸುವರ್ನ್ನೀವೆಂದು ತಂದಿತ್ತುಕೆ ।
ಯ್ನಿಱೆಯಂ ಕೊಟ್ಟುಳವಟ್ಟುಸಾರಥನವಂ ವುೂವಿಟ್ಟಿಗಂ ಪೂಣ್ದುಕಾ
ಲ್ಗಿಱಗಿತ್ತಂತರಿಗಂಗೆ ಜೆಚ್ಚಿರ್ಚಿಭಯದಿಂ ಗ್ರಾವುಂಕುಳಂರಾಜಕಂ ॥ 30 ॥

ವ ॥ ವುತ್ತವುಲ್ಲಿ ಕೆಲರಂ ವೈಶಾಸನವೃತ್ತಿಯೊಳ್ನಿಱುಸಿ ಕೆಲರನುದ್ಧತಾ
ಪ್ರತಿವುಹಿತರ್ವ್ವುಾಡಿ ಕೆಲರನಱಚ್ಚಾಟಿಸಿ ಸರ್ವ್ವಹರಣಂಗೆಯ್ದು ಕನವರವೆಲ್ಲವುನಿಂದ್ರ
ಪ್ರಸ್ಥಕ್ಕೆ ಕಳಿಪಿ ಕಾಶ್ಮೀರ ಹಿವುವಂತ ಹೇವುಕೂಟ ಕೈಳಾಸ ಪಾರಿಯಾತ್ರಶ್ವೇತ
ಶೃಂಗ ಗಂಧವೂದನಗಿರಿನಿಕಟವರ್ತ್ತಿಗಳಪ್ಪ ಪರ್ವ್ವತರಾಜರನಪಗತತೇಜರಂವೂಡಿ
ಕನವರೆವುಂ ಕೆಯ್ಗವೂಡಿ ವೀರರುಪರ್ವ್ವತದ ತೆಂಕಣತಲ್ಪಲೊಳ್ವ್ವಾದಕಯೋಜನ
ಪ್ರವೂಣವುಪ್ಪಜಂಬೂವೃಕ್ಷದ ಕೆಲದೊಳಡಸಿ ರಸದತೊಱೆ ಪರಿವಂತೆ ಕನಕಗಿರಿಯ
ನರಿದು ಪರಿವಜಂಬೂನದವೆಂಬ ತೊಱೆಯೊಳಪ್ಪಟ್ಟಿದ ಜಾಂಬೂನದವೆಂಬ ಪೊನ್ನ
ಪಾಸಱೆಗಳಂ ಕಂಡು ॥

ಕಂ ॥ ಗಾಂಡೀವದ ಕೊಪ್ಪುಗಳೊ
ಳ್ಚಂಡಿಸಿ ತತ್ತಟದ ಕನಕರೇಣುವನವನಾ ।
ಖಂಡಳತನಯನಸುಂಗೊಳೆ
ಖಂಡಿಸಿದಂ ನಿಶಿತಪರೆಕು ಕರಸಮಿತಿಗಳಂ ॥ 31 ॥

ವ ॥ ಅಂತು ಕನಕರೇಣುಗಳಪ್ಪಟ್ಟಿದ ಪಾಸಱೆಗಳುವುಂ ಕನಕದಪರಿಯುಸಿಲೆ
ಗಳುವುನೊಪ್ಪಿ ಜೆಟ್ಟಾಗಿ ಪುಂಜಿಸಿ ॥

ಚಂ ॥ ಬರಿಸಿ ಘಟೋತ್ಕಚಂಬೆರಸು ದಾನವಸೇನೆಯನೀಗಳೀಬಲಂ
ಜೆರಸಿದನಿಂತುಪೊತ್ತು ನಡೆ ನವ್ಮನಪುರಕ್ಕೆನೆ ತದ್ಗಿರಿಂದ್ರಕಂ ।
ದರಕನಕಾಚಳೆಂಗಳೆನಿತುಂಟಿನಿತಂ ತವೆಱೆವರೇಣು ಗ
ಳ್ವೆರಸುಕಡಂಗಿಪೊತ್ತು ನಡೆದತ್ತು ಘಟೋತ್ಕಚರೌದ್ರಸಾಧನಂ ॥ 32 ॥

ವ ॥ ಆಗಳ್ಭೂರಾಕ್ರವುಧವಳಂ ತನ್ನ ಪರಾಕ್ರವುವುಂ ವೆಱೆಯಲೆಂದು ಕೈಳಾ
ಸದ ವೇಗಕ್ಕೆ ಬಂದು ಕಾಬೇರನಿಂ ಕಪ್ಪಂಗೊಂಡು ಪೊನ್ನಂಜಕ್ಕರೆಕ್ಕೆಯಿಂ ಪೊತ್ತು ಬರೆ
ತಡೆಯದಿಂದ್ರಪ್ರಸ್ಥಕ್ಕೆ ಬಂದನಿತ್ತ ಭೀವುನುಂ ವೂಡಣದಿಶಾಭಾಗವುಂ ಬಾಯ್ಕೇಳಿ
ದೇವೇಂದ್ರನ ವಜ್ರವುುವಿಂದ್ರಾಣಿಯ ಕನ್ನಡಿಯುವುಲುಯೆ ಸವುಸ್ತವಸ್ತುಗಳಂತಂ
ದಂ, ಸಹದೇವನುಂ ಪಡುವಣದೆಸೆಯ ವುಂಡಳಿಕರನವಿರ್ಪ್ಪಿಯುಂ ವುುದಿರ್ಪ್ಪಿಯುಂ
ಕೊಂಡು ವರುಣನ ವುಕರವುಂ ವರುಣಾನಿಯಕೊರಲೊಳಿಯಲ್ದುವಿನುಗುವುಲೆಯಿ
ಯುಲಿವ ವಸ್ತುಗಳೆಲ್ಲವುಂತಂದು ವುುಂದಿಟ್ಟುಂ, ನಕುಳನುಂ ತೆಂಕಣದೆಸೆಯು ವುಲೆ
ಪರೆಂ ವುಂಡಳಿಕರುವುನಸಿಯರಾಗೆ ಕವರ್ದುಕೊಂಡು ಲಂಕೆಯ ವೇಗೆ ನಡೆದು
ವಿಭೀಷಣಂ ತನಗೆ ಬಾಯ್ಕೇಳದಿರ್ದ್ದೊಡೆ ವಿಕ್ರಮಾರ್ಜ್ಜುನಂಗೆ ಪೇೞ್ದಿಟ್ಟಿದೊಡೆ ॥

ಉ ॥ ತೊಂಡಿನೊಳುಳ್ಳಕೆಟ್ಟ ದಶಕಂಠನನಕ್ಕಟ ಕೊಂದ ಪೆವ್ಮಱು
ಳ್ಕೊಂಡುದೆ ತನ್ನುವಂ ಬಿಸುಡು ನೀಂ ಬಲಗರ್ವ್ವವುನಾಸವುಂದ್ರವೇಂ ।
ಬಂಡವೊ ಪಾಯ್ವೊಡೆಂದು ನಿಜಸಾಯಕದೊಳ್ಪರೆದೆಚ್ಚು ಕಪ್ಪವಂ
ಕೊಂಡನವುಂಕಿ ಲಂಕೆಯ ವಿಭೀಷಣನಂ ಪರಸೈನ್ಯಭೈರವಂ ॥ 33 ॥

ವ ॥ ಅಂತು ನಾಲ್ಕುಂಸವುದ್ರಂಗಳ ನೀರುಱಿಯೆ ರತುನಂಗಳುವುಂ ದಿಶಾಗ
ಜಂಗಳುಱಿಯೆ ಗಜಂಗಳುವುಂ ಆದಿತ್ಯನ ಕುದುರೆಗಳುಱಿಯೆ ಕುದುರೆಗಳುವುಂ
ದೇವೇಂದ್ರನ ಸುರಭಿಯುಮಿಶ್ವರನ ನಂದಿಯುವುಱಿಯೆ ಗೋವ್ರಜಂಗಳುವುನಿಂದ್ರ
ಪ್ರಸ್ಥಕ್ಕೆ ತೆರಳ್ಚಿ ಬಱಿಯಂ ನಾರಾಯಣನ ವುತದೊಳ್ಪುಸ್ತಿನಪುರದೊಳಿರ್ದ್ದ ಧೃತರಾ
ಷ್ಟ್ರವಿದುರಗಾಂಗೇಯದ್ರೋಣಾಶ್ವತ್ಥಾವುಕೃಪಬಾಹ್ಲೀಕ ಸೋವುದತ್ತ ಭಗದತ್ತಭೂ
ರಿಶ್ರವಃಕರ್ಣ್ಣಶಲ್ಯಶಕುನಿಸೈಂಧವದುರ್ಯ್ಯೋಧನ ದುಶ್ಶಾಸನಾದಿಗಳೆಲ್ಲರುವುಂ ಬಱಿ
ಯನಟ್ಟಿಬರಿಸಿ ಶಿಶುಪಾಲಾದಿಗಳಪ್ಪನೇಕಾಧೀಶ್ವರರೆಲ್ಲರುವುಂ ಬರಿಸಿ ವ್ಯಾಸರ್ಮ್ಮೊದ
ಲಾಗೆ ಬ್ರಹ್ಮ ಋಷಿಗಳನೆಲ್ಲರುವುಂ ಬರಿಸಿ ತುಱಿಲಪರಕೆಯ ಸವುಾನಪ್ರತಿಪತ್ತಿಯಿಂ
ಕಿಱಿವಿರಿಯರನಱಿದುಪೊಡವಟ್ಟುಪರಿಸಿಯುಪ್ಪಿಕೊಂಡು ನುಡಿದುಂ ನೋಡಿಯುಂ
ನಕ್ಕುಂ ಕೆಯ್ಯುಂಪಿಡಿದುಂ ಬಲ್ಲಿದಿರೆಯೆಂದು ಪ್ರಿಯದೊಳಂ ಬಿರ್ದಿನೊಳಂ ಸಂತಸಂ
ಬಡಿಸಿ ಶುಭದಿನವಾರನಕ್ಷತ್ರಯೋಗಕರಣವುಮಹೂರ್ತ್ತದೊಳಂದ್ರಪ್ರಸ್ಥಕ್ಕೆ ಉತ್ತರ
ದಿಗ್ಭಾಗದೊಳ್ಪಸಹಸ್ರಯೋಜನಪ್ರವೂಣದೊಳ್ಯಾಗವುಂಟುಪವುಂ ನವೆಂದು ವುಯನ
ಕೊಟ್ಟ ಸಭಾವುಂಟುಪದೊಳ್ ಬ್ರಹ್ಮಋಷಿಯರೆವುನರಸುವುಕ್ಕಳುವುನೆಡೆಯಱಿದಿ
ರಿಸಿ ಯಜ್ಞದ್ರವ್ಯಂಗಳುವುನೆಲ್ಲವುಂ ನೆರೆಪಿ ವುಹಾವಿಭವದೊಳ್ಯಮಿಪಾರ್ಶ್ವತಳದೀಕ್ಷಣ
ಶಾಲೆಯೊಳ್ಪಿರಣ್ಯದಾನವಂ ಮಾಡಿ ವೇದಸಿಧಿಗಳಪ್ಪಾಹವನೀಯದಕ್ಷಿಣಗಾರ್ಹಪತ್ಯ
ವೆಂಬ ವುೂಱುಂ ಕೊಂಡೆಂಗಳೊಳಂತ್ತರವೇದಿಯೊಳಗ್ನಿಸಂಧಾನಂಗೆಯ್ದು ವ್ಯಾಸ
ಕಶ್ಯಪವಿಶ್ವಾಮಿತ್ರಭಾರದ್ವಾಜಬ್ರಹ್ಮಾಧ್ವರ್ಯ್ವಗ್ನೀಧ್ರ ವೈತಾನವರುಣಾಗ್ನಿ ಪರಿಚಾರ
ಕೋದ್ಗಾತ್ರುನ್ನೇತೃಹೋತೃಜವುದಗ್ನ್ಯಾದಿಗಳಪ್ಪ ಷೋಡಶರ್ತ್ವಿಜರ್ಕ್ಕಳಂ ಬೇಳ
ಲ್ವೇಱುದ್ದ ಧರ್ಮ್ಮಪುತ್ರಂ ಸಪತ್ನಿಯಜಮಾನನಾಗಿರ್ದ್ದಾಗಳ್ ॥

ಕಂ ॥ ಜಾರಂತರಯಜ್ಞವಿದ್ಯಾ
ಪಾರಗರಾವಂಗಳಿಂ ಸ್ವಧಾಕಾರವಷ ।
ಟ್ಕಾರಂಸ್ವಾಹಾಕಾರೋಂ
ಕಾರಧ್ವನಿ ನೆಗಲೆ ನೆಗಟ್ಟುದಾಹುತಿಧೂವುಂ ॥ 34 ॥

ಬಳಸೆವುಂಗಿಲ್ಲಗ್ನಕಾ
ಚಳವುಂ ಬಳಸುವಪೊಲಿಕ್ಕಿದಾಹುತಿಗಳ ಗೊಂ ।
ದಳದಿನೊಡನೊಗೆದ ಪೊಗೆಗ
ಳ್ಬಳಸಿದುವೆಡೆವಿಡದೆ ಕನಕಯೂಪವುನಾಗಳ್ ॥ 35 ॥

ಚಂ ॥ ಒಡನೆ ದಿಗಂತದಂತಿಗಳ ಕೋಡವೊದಲ್ಗಳೊಳೆಯ್ದಿಪೊಕ್ಕ ಸಿ
ಪ್ಪಡಸಿದವಾಲ್ಕೆಯಾದುವು ಕರಂಗಳಡಂಗಿ ಕಿಲುಂಬುಗೊಂಡ ಕ ।
ನ್ನಡಿಗೆಣೆಯಾಯ್ತು ಭಾನುವಳಯಂ ದಿವಿಜಾಪಗೆ ನೋಡೆ ಕೂಡೆ ಕ
ಪ್ಪೊಡರ್ಗೆಣೆಯಾದುದಗ್ನಿಗಳ ಧೂಮದೊಳಾನೃಪಥವ್ಯರ್ಮಪುತ್ರನಾ ॥

ಕಂ ॥ ಗಣನಾತೀತಾಜ್ಯಾಹುತಿ
ಗಣದಿಂದಂ ತಣಿಯೆ ಜಾತವೇದಮನಾಬ್ರಾ ।
ಹ್ಮಣಸಮಿತಿ ಬೀಳೆ ದೇವ
ರ್ತ್ತಣಿಯುಂಡನ್ನೆರೆದು ದಿವ್ಯಹವ್ಯಾವೃತವಂ ॥ 37 ॥

ವ ॥ ತ್ರಿದಶೇಂದ್ರಂಗೆ ಯುಧಿಷ್ಠಿರಾಧ್ವರದ ಮಾಮಾಹಾತ್ಮ್ಯಮಂಸೂಱುಸೂ
ಱಿದೆ ಪೇೞಲ್ವರಿವಂತೆ ಪೊಣ್ಮೆ ಪಲವುಂಧೂಮಂಗಳಾಹೋಮಧೂ ।
ಮದ ಗಂಧಂ ನಸುಮುಟ್ಟಿ ದಿವ್ಯಪವಮಂ ಕೆಯ್ಕೊಂಡು ಸಗ್ಗಕ್ಕೆ ಪಾ
ಱುದುವಾಪಾರಿವಜಕ್ಕವಕ್ಕಿಗಳದೇಂ ಪೆಂಪೋ ಮಹಾಯಜ್ಞದಾ ॥ 38 ॥

ವ ॥ ಅಂತು ಪುರೋಡಾಶಪವಿತ್ರೋದರಂ ಮೂವತ್ತೆರಡುದಿವಸದೊಳ್ಕ್ರತುವಂ
ನಿರ್ವರ್ತ್ತಿಸಿ ಮಹಾದಾನಂಗೆಯ್ವ ದಕ್ಷಿಣಾಕಾಲದೊಳ್ ॥

ಉ ॥ ಒಟ್ಟಿದಪೊನ್ನಬೆಟ್ಟುಗಳನೀವಡೆಗೇನುದೊ ತೂಕವೆನ್ನಕೆ
ಯ್ಗಟ್ಟಳೆ ಕೊಳ್ಳನೆಂದು ಕುಡೆ ಷೋಡಶಭಾಗದೊಳಿತ್ತುದಕ್ಕೆ ಬಾ ।
ಯ್ವಿಟ್ಟರೆ ವಿಪ್ರಕೋಟಿ ಮುಡಗಲ್ಕೆಡೆಯಿಲ್ಲದೆ ಸೊನ್ನರಾಶಿಯಂ
ಬಟ್ಟನೆ ಬಂದು ಕಾಯೆ ಯಮುನಂದನನೇಂ ತೊಡರಲ್ಲದಿತ್ತನೋ ॥ 39 ॥

ಸ್ರ॥ ದಾನಾಂಭಃಪೀನಗಂಡಸ್ಥಳಕರಿನಿಕರಂ ಬಾೞ್ತೆಯೋ ವೆಂಚ್ಚವೇೞಲಾ
ಜಾನೇಯಾಶ್ವೋತ್ಕರಂಬಾೞ್ತೆಯೊ! ಮಣಿನಿಚಯಂಬಾೞ್ತೆಯೋ! ಪೇೞೊವೆಂದಾ।
ದೀನಾನಾಥಗ್ಗೆ ವೃದ್ಧದ್ವಿಜಮುನಿನಿಕರಕ್ಕಂದೆಡಪ್ಪೋಪಿನಂ ''ಕಃ
ಕೇನಾತ್ಥೀ ಕೋದರಿದ್ರಃ''ಎನುತಮಮನಿತುಮಂ ಧರ್ಮ್ಮಜಂ ಸೂೞ್ಗೊಟ್ಟಂ॥

ವ ॥ ಅಂತು ನಿಜಧವಳಚ್ಛತ್ರಚಾಮರಸಿಂಹಾಸನಾದಿರಾಜಚಿಹ್ನಂಗಳುೞಿಯೆ
ಸರ್ವ್ವಸ್ವಮೆಲ್ಲಮಂ ದಕ್ಷಿಣೆಗೊಟ್ಟು ವ್ಯಾಸಗಾಂಗೇಯವಿದುರಬಾಹ್ಲೀಕ ಸೋಮದತ್ತ
ಭಗದತ್ತ ಧೃತರಾಷ್ಟ್ರದ್ರೋಣಾಶ್ವತ್ಥಾಮಕೃಪಕೃಲವೃದ್ಧರುಮಂ ದುರ್ಯ್ಯೋಧನದುಶ್ಶಾ
ಸನಕರ್ಣ್ಣಶಲ್ಯಶಕುನಿಗಳುಮನವರವರ ದಾನಸನ್ಮಾನಾದಿಗಳೊಳಂ ಸಂತಸಂಬಡಿಸಿ
ಧರ್ಮ್ಮಪುತ್ರಂ ಪೇೞೊಮಾಸಭೆಯೊಳಗ್ರಪೂಜೆಗಾರ್ತ್ತಕ್ಕರೆನೆ ಗಾಂಗೇಯನಿಂತೆಂದಂ ॥

ಮ ॥ ಬಲಿಯಂ ಕಟ್ಟಿದನಾವನೀಧರಣಿಯಂ ವಿಕ್ರಾಂತದಿಂದಂ ರಸಾ
ತಲದಿಂದೆತ್ತಿದನಾವನಂದು ನರಸಿಂಹಾಕಾರದಿಂದೈತ್ಯನಂ ।
ಚಲದಿಂಸೀಳ್ದವನಾವನಬ್ಧಿಮಥನಪ್ರಾರಂಭದೊಳ್ಮಂದರಾ
ಚಲಮಂ ತಂದವನಾವನಾತನೆ ವಲಂ ತಕ್ಕಂ ಪೆಱತ್ತರ್ಕ್ಕರೇ ॥ 41 ॥

ವ ॥ ಎಂದು ತನ್ನಮನದೊಳಚ್ಚೊತ್ತಿದಂತೆ ನುಡಿದ ಗಾಂಗೇಯನ ಮಾತಂ ಮನದೆಗೊಂಡು ಯಮನಂದನನಾನಂದಂಬೆರಸಂತೆಗೆಯ್ದೆನೆಂದು ಪುರುಷೋತ್ತಮಂಗರ್ಘ್ಯಮೆತ್ತಿದಾಗಳ್ ॥

ಶಿಶುಪಾಲವಧಂ

ಕಂ ॥ ಮುಳಿದು ಶಿಶುಪಾಲನಾಸಭೆ
ಯೊಳಗೆ ಮಹಾಪ್ರಳಯಜಳಧಿನಾದದಿನಿರದುಂ ।
ಚ್ಚಳಿಸಿ ನುಡಿದಂತೆ ಕಳೆ! ಕಳೆ!
ಹರಿಗೆತ್ತಿದನರ್ಘ್ಯಹಸ್ತಮಂ ಧರ್ಮಸುತಂ ॥ 42 ॥

ತೀವಿದ ನದೆಯುಂ ಡೊಳ್ಳುಂ
ದೇವವ್ರತನೆನಿಸಿ ನೆಗಲ್ದಿಯಶವುಮಂ ಪೆರಸಿ ।
ನ್ನೀವುದು ಹರಿಗರ್ಘ್ಯಮನೆಂ
ದಾವನುಮಿಂಭೀಷ್ಮನಂತು ನುಡಿದರುಮೊಳರೇ ॥ 43 ॥

ಕುರುವೃದ್ಧಂ ಕುಲವೃದ್ಧಂ
ಸರಿತ್ಸುತಂತಕ್ಕನೆಂದು ನಂಬಿದ ಸಭೆಯೊ ।
ಳ್ಪೊರೆಗಿಡಿಸಿ ನುಡಿದೊಡೇನೊಲ
ವರಮೆನ್ನದೆ ನೀನುಮಂದನೆ ಕೊಂಡೆಸಗುವುದೇ ॥ 44 ॥

ಮನದೊಲವರವುಳ್ಳೊಡೆ ಕುಡು
ಮನೆಯೊಳ್ಹರಿಗರ್ಘ್ಯಪೂಜೆಯಂ ಯಜ್ಞದೊಳೀ ।
ಮನುಜಾಧೀಶ್ವರಸಭೆಯೊ
ಳ್ನಿನಯುಲುಮಾಗದ ದುರಾತ್ಮನಂ ಬೆಸಗೊಳ್ವಾ ॥ 45 ॥

ಅಳವಲ್ಲಿಯದೆಗ್ಗು ಬಳವಳ
ಬಳಿವಿನೆಗಂ ಪಚ್ಚಪಸಿಯತಲುಂಕಾಲುಂಗ ।
ಗ್ಗಳಿಕೆಯನೆ ಮಾಡಿ ನೀನುಂ
ಪಳಿಯಂ ಕಟ್ಟಿದೆಯೊ ಭೂಪರಿನಿಬರ ಕೊರಲೊಳ್ ॥ 46 ॥

ದೇವರನಡಿಗೆಱಗಿಸಿ ಸಕ
ಳಾವನಿತಳದದಟರಂ ಪಡಲ್ವಡಿಸಿದ ಶೌ ।
ರ್ಯಾವಷ್ಟಂಭದೊಳಾನಿರೆ
ಗೋವಳಗಂಗಗ್ರಪೂಜೆಯಂ ನೀಂ ಕುಡುವಾ ॥ 47 ॥

ಸವುಕಟ್ಟಱಿಯದೆ ಹರಿಗ
ರ್ಳ್ವೆಮೆತ್ತಿ ನಿಂದಿರ್ದ್ದ ಯಜ್ಞಮದು ಮೊದಲೊಳ್ತಾ ।
ನವುರ್ದವುವುರ್ದ್ದಿರೆ ತಣಿಯಂ
ಡವುರ್ದಂ ಗೋಮೂತ್ರದಿಂದೆ ಬಾಯ್ವಾಸಿದವೋಲ್ ॥ 48 ॥

ಕುಡವೇಳ್ವನ ಕುಡುವನ ಕುಡೆ
ಪಡೆವನ ಪೆಂಪೇಂ ನಿಗಳ್ತ್ತೆವಡೆಗುಮೊ ಪೇಳ್ವಂ ।
ಕುಡವೇಳ್ಗೆವು! ಕುಡುವಣ್ಣಂ
ಕುಡುಗೆವು! ಕುಡೆ ಕೊಳ್ವ ಕಲಿಯನಱಿಯಲ್ಕಕ್ಕಂ ॥ 49 ॥

ವ ॥ ಎಂದನಿತಱೊಳ್ಮಾಣದೆ ಗೀರ್ವ್ವಾಣಾರಿಯಸುರಾರಿಯನಿಂತೆಂದಂ ॥

ಕಂ ॥ ದೊರೆಯಂಕ್ಕುವೆಂ ನಿನಗೆ ಯುಧಿ
ಷ್ಠಿರನರ್ಘ್ಯವನೆತ್ತೆ ಶಂಖದೊಳ್ಪಾಲ್ಱೆದಂ ।
ತಿರೆ ಮಲಿನಮಿಲ್ಲದೊಳ್ಗಲ
ದರಸುಗಳಿರೆ ನೀನುವಗ್ರಪೂಜೆಯನಾಂಪಾ! ॥ 50 ॥

ಮನದೊಲವರದಿಂದೀಯವು
ತನಯನ ಕುಡುವಗ್ರಪೂಜೆ ವುತ್ಪನ್ನಿಧಿಯೊ ।
ಳ್ನಿನಗಕನಿಯು ವಿಱ್ತ್ತುವ ನಂ
ಜಿನ ದೊರೆಯೆಂದೊಣರ! ನಂದಗೋಪಾಲಸುತಾ ॥ 51 ॥

ವುನೆ ನಿನಗೆ ನಂದಗೋಪಾ
ಳನ ವುನೆ! ತುಱುಗಾರ್ತ್ತಿ ನಿನಗೆ ವುನವೆಂಡತಿ! ಪ ।
ಚ್ಚನೆ ಪಸಿಯು ಗೋವನೈ ಕರ
ವುನಯದೆ ನಿನ್ನಳವಿಗಳವನಱಿಯದೆ ನೆಗಳ್ದೈ ॥ 52 ॥

ವುರನಡಸಿ ಪಿಡಿದು ಕಟ್ಟಿದ
ಪರಿಭವವುಂ ವುಱೆದ ನಿನ್ನ ಪೆಡಗೆಯ್ಗಟ್ಟಿ ।
ಟ್ಟರೆ ಬಿಡಿಸಿದನಲ್ಲದನೇ
ಸರಿತಸ್ಸುತಂ ಬನ್ನವಿನ್ನವೆಂಬುವುವೊಳವೇ ॥ 53 ॥

ದನುಜಾಂತಕನೆಂಬೀನಿ
ನ್ನ ನಚ್ಚೆವೋದಂಕವೆಂಬಲವೊ ಮುನ್ನೆನ್ನನ್ನಂ ।
ದನುಜಂ ಪುಟ್ಟದೆ ಸಂದುದು
ನಿನಗೀಪೆಸರೆನ್ನ ಮುಂದೆಯುಂ ಸಂದಪುದೇ ॥ 54 ॥

ಅನಿರ್ದ್ದಸಭೆಯೊಳಧ್ಯಕ್ಷವು
ನಾನಲ್ಕಾಟಿಸಿದ ನಿನ್ನ ಬಿಸುನೆತ್ತರಿನಿಂ ।
ತೀನೆರವಿ ನೋಡೆ ಕುಡಿಯದೊ
ಡೇನೋ ಶಿಶುಪಾಲನೆಂಬ ಪೆಸರೆನೆದಪುದೇ ॥ 55 ॥

ವಱೆದ ಮುಚಕುಂದನೆಂಬನ
ಮುಖವೊಕ್ಕುದನಂದು ನೀಂ ಜರಾಸಂಧಂಗಂ ।
ಬಿಱುತೋಡಿದುದಂ ಭೂತಳ
ಮುಱಿಯದೆ ನೆನೆಯೆಲವೊ ಗೋವುಗಾದುದು ಪುಸಿಯೇ ॥ 56 ॥

ವಿನಾವೆ ಪಂದಿಯೆಂದೆನಿ
ತಾನುಂ ತೆಱನಾಗಿ ಡೊಂಬನಿದ್ದೆಯನಾಡ ।
ಲ್ನೀನಱಿವೆಯುಱುದಿದಿರ್ಚ್ಚಿದೊ
ಡಾನಱಿವೆಂ ನಿನ್ನನಿಲ್ಲಿ ದೆಸೆವಲಿಗೆಯ್ಯಲ್ ॥ 57 ॥

ಅಱಿಯದಿದಂ ಮಾಡಿದೆನೆ
ನ್ನಱಿಯವಿಕೆಗೆ ಸೈರಿಸೆಂದು ನೀಂ ಸಭೆಯೊಳ್ಕಾ ।
ಲ್ಗೆಱಗೆಱಗು ಕೊಲ್ಲೆನೆಂದೆರ್ದೆ
ತೆಱೆವಿನೆಗಂ ಹರಿಯು ನೆಱನನಸುರಂ ನುಡಿದಂ ॥ 58 ॥

ವ ॥ ಅಂತು ನುಡಿದು ಕಾಯ್ಪಿನೊಳ್ಪಿಡುಗಿ ನಡನಡುಗಿ ॥

ಕಂ ॥ ಪೊಳೆದುಳ್ಕುವ ಕುಡುದಾಡೆಯು
ಪೊಳಪು ನೊಸಲ್ಗಡರ್ದು ಪೊಡವರ್ತ ಪುರ್ವೇಸವಿನವು ।
ವ್ವಳಿಸುವ ವುಳಿಸಿನ ದಳ್ಳುರಿ
ಗಳನುಗುಟ್ಟುವೊಲುಗುಟ್ಟಿ ನಸುರನುರಿವಪಱಿಗಳಂ ॥ 59 ॥

ವ ॥ ಅಗಳ್ನಭಾಸದರೆಲ್ಲಂ ವೇರೆವಿಡುಂಕದೆ ಪಂದೆಯುಂ ಪಾವಡರ್ದ್ದವೊಲು ಸಿರದಿರೆ ನಾರಾಯಣಂ ಶಿಶುಪಾಲನನಿಂತೆಂದಂ ॥

ಕಂ ॥ ನಿನ್ನಯ ತಾಯ್ಸಾತ್ವತಿಯುಂ
ನಿನ್ನಂ ತಂದೆನ್ನ ತೊಡೆದುವೀಲಿಲೀಪುವುದುಂ।
ನಿನ್ನಲಲಾಟದ ಕಣ್ಣುದು
ಮುನ್ನಮೆ ಕಿಡೆ ನಿನ್ನ ಮೃತ್ಯುವೆನ್ನಯಕೆಯ್ಯೊಳ್ ॥ 60 ॥

ನೆಱೆದುದನಱಿದೀ ಕಿಱಿಯವ
ನಱಿಯದೆ ಕೆಡೆನುಡಿದನಪ್ಪೊಡಂ ನೂಱುವರಂ।
ನೆಱೆ ಸಲಿಸುವುದೆಂದುದನಾ
ಮಱೆವೆನೆ ಬಯ್ಚಯ್ಯೆ ಸಲಿಸುವೆಂ ನೂಱುವರಂ ॥ 61 ॥

ಮುನಿಯಲಿನಗಾಗ ಗಾಂಗೇ
ಯನಿರ್ದ್ದಸಿರ್ದ್ದಂ ಘಟೋದ್ಭವಂ ನೆಗಳ್ದಿ ಪೃಥಾ।
ತನಯರುಮಿರ್ದ್ದರ್ದ್ದುರ್ಯ್ಯೋ
ಧನಕೃಪಕಾನೀನರಿರ್ದ್ದರತ್ತ ಪಲಂಬರ್ ॥ 62 ॥

ಎನೆಯೆನೆ ಬಾಯ್ಗಂ ಬಂದನಿ
ತನಿತುಮನವಂರಾರಿ ಬಯ್ಯೆ ಸೈರಿಸಿ ನೂಱೆಂ।
ಬನಿತುವರಂ ಮನ್ನಿಸಿ ನಸು
ಕಿನಿಸದೆ ನಿಗೆ ಕಿನಿಸಿ ದಿತಿಜಕುಳದವದಹನಂ ॥ 63 ॥

ಮುಳಿದು ತನಗಘ್ರ್ಯಮೆತ್ತಿದ
ತಳಿಗೆಯೊಳಿಡೆಯೆಱಗಿದತೆಱದೆ ತಲೆ ಪಱಿದಾಗ।
ಳ್ಕಳಿಕಳಿಸಿ ನಗುತುಮಿರ್ದ್ದುದು
ತಳಿಗೆಯಮೇಲಸುರನದಟದೇನಚ್ಚರಿಯೋ ॥ 64 ॥

ವ ॥ ಅಂತು ಜವನಘ್ರ್ಯಮೆತ್ತಿದಂತಿರ್ದ್ದ ಶಿಶುಪಾಲನ ಶಿರೋಂಬುಜಮುಂ ಕಂಡಱಿಲ್ದು ತನ ನಂಟರಪ್ಪಕ್ಷಗ್ರೀವವಿದ್ಯುನ್ಮಾಲಿನೀಲಾದಿಗಳಪ್ಪ ಪ್ರಭುಗಳನಿಬರಾನುಂ ಮುರಾಂತಕನಂ ಬಂದು ತಾಗಿದೊಡೆ ॥

ಕಂ ॥ ತಿರುವೆ ಕರಚಕ್ರಮುಂ ದನು
ಜರ ತಲೆಗಳನಱುರವೈರಿ ಮುಱಿವೊಡೆ ಪರಿದಂ।
ಬರತಳವನಿಯ್ದಿ ಮೇಘದ
ಪೊರೆವೊರೆಯೊಳ್ತೊಡರ್ದು ನೆಲಕೆ ಬೀೞ್ದವೆ ತಲೆಗಳ್ ॥ 65 ॥

ವ ॥ ಅನಿತೊಂದು ಪ ಹಾಪ್ರಘಟ್ಟದೊಳಗ್ರಪೂಜೆಯಂ ನಾರಾಯಣಂಗೆ ಕೊಟ್ಟ ವಭೃತಸ್ನಾನದೊಳ್ಪರಿದುಮೊಸಗಯಂ ಮಾಡಿ ಯಾಗವಿಧಿಯಂ ನಿರ್ವರ್ತ್ತಿಸಿ ನೆರೆದ ರಾಜಕುಲಮೆಲ್ಲಮಂ ಪೂಜಿಸಿ ವಿಸರ್ಜ್ಜಿಸಿದಾಗಳ್ಕಾರಾಂತಕನಂತಕನಂದನನನಿಂತೆಂದಂ.

ಮ ॥ ಹಮುಸೇತುಪ್ರತಿಬದ್ಧಭೂವಳಯಮಂ ನಿಷ್ಕಂಟಕಂಮಾಡಿ ವಿ
ಕ್ರಮಮಂ ತೋಱಿ ನಿಜಾನುಜನ್ನೆರೆದುದೊಂದೈಕ್ಷ್ಯಮ್ಯದಿಂ ರಾಜಸೂ।
ಯಮನಿಂದಗ್ಗಳದಗ್ಗಳಕ್ಕೆಯು ವಃಖಂತಾನೆಂಬಿನಂ ನಿನ್ನ ಕೀ
ರ್ತ್ತಿವಧೂಮುಖಂಕೀರ್ತ್ತಿಗೆ ಪೋಲಲೆಂದೆಸೆದುದೋ ದಿಗ್ದಂತಿದಂತಂಗಳೊಳ್ ॥

ವ ॥ ಎಂದುನುಡಿದವಂದರಧರನಂ ನಿನ್ನನುಗ್ರಹದೊಳದೇವಿರಿದೆಂದು ವಸ್ತು ವಾಹನಂಗಳನಿತ್ತು ದ್ವಾರವತಿಗೆಕಳಿಪ ಸುಖಸಂಕಥಾವಿನೋದಂಗಳೊಳಾರ್ಜ್ಜುನಹ್ಮಯನನುಭವಿಸುತ್ತಿರ್ಪನ್ನೆಗವುತ್ತಂ ॥

ದ್ಯೂತಾರಂಭಂ

ಕಂ ॥ ಮೇಗಿಲ್ಲದ ಬಲ್ಲಾಳ್ತನ
ದಾಗರಮೆನೆ ನೆಗಲ್ದಿ ತತ್ಪೃಥಾನಂದನರು ।
ದ್ಯೂಗದ ಚಾಗದ ಯಾಗದ
ಭೋಗದ ಮಹಿಮೆಗ ಸುಯೋಧನಂ ಪೆಱಗಾದಂ ॥ 67 ॥

ವ ॥ ಱಗಿ ದುಶ್ಯಾಸನ ಕರ್ಣ್ಣಶಕುನಿಸ್ಯೆಂಧವರೆಂಬ ದುಷ್ಟಚತುಷ್ಟಯದೊಳ್ಮಂತಣಮಿದ್ದ ದಾಯಿಗರಪ್ಪೊಡೆ ಕರಂ ಪೆಟ್ಟ್ಟದರವರ ಪೆಚ್ಚಿರ್ದಿಂಗೇಗೆಯ್ವಂ ಬಸನಂಗಳಂ ಸವಕಟ್ಟುವವಪ್ಪೊಡೆ ಸಪ್ತವ್ಯಸನಂಗಳಯ್ವರುಮನೊಂದಂಗೆಲ್ವವಲ್ಲವು. ರಾಷ್ಟ್ರವ್ಯಸನಮಂ ಬಳೆವ್ಯಸನಮಂ ಪಾರ್ವವುಪ್ಪೊಡವು ವುನ್ನಮಿಲ್ಲ, ಪರಮಂಡಳವ್ಯಸನಮನಾರಯ್ವವುಪ್ಪೊಡಿತ್ತುಂ ತೆತ್ತುಂ ಬಾೞ್ವಿ ವುಂಡಲವಲ್ಲದೆ ಕೀೞ್ಮೆಯುಂ ವಿೞುಯುಂ ನೆಗೞ್ವಿ ವುಂಡಲವಿಲ್ಲ, ಪೌರುಷಮಂಸವುಂಕಟ್ಟುವವಪ್ಪೊಡೆ ಪೊಕ್ಕಿೞುಯಲಣ್ಮವರಿಲ್ಲ. ರಸದಾನಾದಿಗಳೊಳ್ಪ್ರಿಸುವವಪ್ಪೊಡವರಾಪ್ತವಂತರುಂ ಬುದ್ಧಿವಂತರುಮಾಗಿ ನೆಗೞ್ದಿರಿನ್ನಾವ ಮಾಟ್ಕಿಯೊಳ್ಪಗೆಯಂ ಕೆಯ್ಗಿ ಮಾಡುವಂ ಪೇೞ್ಮೆನೆ ಶಕುನಿಯಿಂತೆಂದಂ ॥

ಚಂ ॥ ಪೆಸಸಿದ ನಿನ್ನ ಮಾತಿನಿತುಮಂತಂಟಿ ಗೆಲ್ಲವು ಪಾಂಡುಪುತ್ರರಂ
ಪೆಸನಕೊಡಂಬಡಂ ಮಱೆದುಮಾಯವುನಂದೆನನುಂತೆ ನೆತ್ತದೊ ।
ಳ್ಪಸನಿಗನಾತನಂ ಬರಿಸಿ ನೆತ್ತವನಾಡಿಸಿ ಗೆಲ್ದು ಕೊಳ್ವಮಾ
ವಸುವುತಿಯಂ ವುನಂಬಸದೆ ನೀಂ ಬಲ್ಮೆಯಟ್ಟು ಫಣೀಂದ ಕೇತನಾ ॥

ವ ॥ ಎಂದು ನಾಳಿವಾಸಗೆಗಳಂ ಮುನ್ನಮೆ ಸಮಂಕಟ್ಟಿ ತಾಮುಮೂಮುಂ ಕೆಲವು ದಿವಸಂ ಗೋಷ್ಠಿಯೊಳಿರ್ಪುದಂ ಬರ್ಕೆಂದು ಬಟ್ಟಿಯನಿಟ್ಟಿದೊಡವರ ಮನದ ಪುಲ್ವುಗೆಯಂ ಪೊಲ್ಲವೆಯುಮನಱಯದೆ ಸಮಸ್ತಬಳೋದ್ಯುಕ್ತನಾಗಿ ಶಕುನಂಗಳ ಕ್ರಮನಮುಂ ಬಗೆಯದೆ "ನಿಯತಿಃ ಕೇನ ಲಂಘ್ಯತೇ" ಎಂಬ ನುಡಿಯಂ ನನ್ನಿವೂಡಿ, ಮುದಗಜೇಂದ್ರ ಪುರಮನೆಯ್ದೆಬರೆ ಧೃತರಾಷ್ಟ್ರಾದಿಕುಲವೃದ್ಧರೊಡನೆ ದುರ್ಯ್ಯೋಧನ ನಿದಿರ್ವ್ವೋಗಿ ಧರ್ಮ್ಮಪುತ್ರಂಗೆ ಪೊಡವಟ್ಟು ಭೀಮಂನಂ ಸಮಾನಪ್ರತಿಪತ್ತಿಯೊಳ್ಕಂಡು ತನಗೆ ಪೂಡವಟ್ಟ ವಂತ್ತಿನ ಮುವ್ವರುಮಂ ಪರಸಿ, ತನ್ನ ತಮ್ಮಂದಿರೆಲ್ಲರುಮನಯ್ವರ್ಗ್ಗಂ ಪೊಡವಡಿಸಿ ಪೊಱಲೊಳಗಣಿಂಗೆ ವಂದು ರಾಜಮಂದಿರಮಂ ಪೊಕ್ಕು ॥

ಉ ॥ ನೋಡಿ ಪೃಥಾತನೂಜರ ಸಭಾಗೃಹದಂದವನಂತುಟಪ್ಪುದಂ
ಮಾಡಿಪೆನೆಂದು ಮಾಡಿಸಿ ಸಭಾಳಯಮಂ ನಿಜರಾಜಲೀಲೆಯೊ ।
ಳ್ಕೂಡಿ ಯುಧಿಷ್ಠಿರಪ್ರಭುಗೆ ತಾನೆ ಸುಯೋಧನನುಯ್ದು ತೋಱಿದಂ
ನೋಡಿರೆ ಜಿಹ್ಮವೂಡುವರ ಬೂಲಮನಾಡಿದರೆಂಬ ಮಾಟ್ಕೆಯಿಂ ॥ 69 ॥

ವ ॥ ಅಂತು ಸುಯೋಧನಂ ತನ್ನಪಿಭವಮುಮುಂ ವಿಳಾಸಮುಮುಂ ಪಾಂಡವರ್ಗ್ಗೆ ವೆಂಟೞೆದು ಕಂಮುಕಕ್ರೀಡಾದಿನಾನಾವಿಧವಿನೋದಂಗಳಿಂ ಕೆಲನ್ನುದಿವಸಮನಿರ್ದ್ದಂದುದಿವಸಂ ತನಗೆ ಸಾವಂ ಸಮಂಕಟ್ಟುವಂತೆ ಪಿಂಗಾಕ್ಷನಕ್ಷಕ್ರೀಡೆಯಂ ಶಕುನಿಯೊಳ್ಸುಮಕಟ್ಟು ಪೂಡಲ್ವೇೞ್ದು ಪುಸಿಯನೆ ಪೆಱರಂ ಮುನ್ನವೂಡಲ್ವೇೞ್ದು ತಾನುಂ ಧರ್ಮ್ಮಪುತ್ರನುಂ ಕೆಲದೊಳಿರ್ದು ನೋಡುತ್ತಿರೆ ಶಕುನಿಯೆಂತೆಂದಂ ।

ಕಂ । ನೋಡುವುದಲ್ಲೊಳೀನಟ್ಟಿಯೊ
ಳಾಡುತ್ತಿರಲಾಗ ತಮ್ಮನಿರ್ವ್ವರುಮೆನೆ ನಾ ।
ವೂಡುನೆವು ಬನ್ನಿವೆಂಬುದು
ವೂಡುವಬಗೆ ಬಂದು ನೆತ್ತವಂ ಧರ್ಮ್ಮಸುತಂ ॥ 70 ॥

ಕರೆವೊಡೆ ಜೂಜಿಂಗೆಪರರ್
ಧುರಕ್ಕರಾತಿಗಳಂವೆ ಮ್ಮ ವೆಯ್ಗಲ್ಗಳ್ ವೆಂ ।
ಯ್ದಾರುವರೆಂಬಪುರಾತನ
ಗುರುವಚನಂ ತನಗೆ ನಿಟ್ಟೆಪಟ್ಟುದಱಿಂದಂ ॥ 71 ॥

ವ ॥ ಅಂತು ಪೂಡಿಕೊಂಡು ನಾಳಿವಾಸಗೆಯನಿಕ್ಕಲ್ವೇೞ್ವುದುಂ ಶಕುನಿ ಮುನ್ನೆ ತನ್ನವೂಡಿದ ನಾಳಿವಾಸಗೆಗಳನರಸಾಳಂತೆ ಕಣ್ಣಱಿದು ಮೆಟ್ಟಿ ಮಟ್ಟವುಱಿದಿಕ್ಕುವಾಗಳೊಡ್ಡಮಂ ಪೇೞಿಮೆನೆ ಪೊೞ್ತು ಪೋಗಿಂಗಮಱ್ತು ಗವೂಡುವ ತಮ್ಮುತಿರ್ವ್ವರುಂ ಪಲಗೆಗೆ ಸಾಯಿರಗದ್ಯಾಣಮೊನ್ನೇ ಸಾಲ್ಗಮುಗ್ಗಳಂ ಜೇಡಿಂದು ದುರ್ಯ್ಯೋಧನನಿಕ್ಕಲಂ ಪುಡಿಯೊಳ್ಪೊರಳ್ಚುವಂತೆ ಪಾಸಂಗಿಯುಂ ಪೊರಳ್ಚಿ ಮುನ್ನಂ ನೆತ್ತಮನಱಯದ ನಂತವರ ದಾಯಮುನಾಡೆ ಮಡಿಮಡಿಗೆ ಮಱುಗುತ್ತಂ ಮುಂದು ಪತ್ತೆಂಟುಪಲಗೆಯಂ ವೇೞ್ಪಡಿಸಲೆಂದು ಸೋಲ್ತು ಸೋಲದೊಳೇನಯಿಸಿಯಿನ್ನೊಡ್ಡಂಕೊಳ್ಳಮೆಂದು ॥

ಚಂ ॥ ಪಲಗೆಗೆ ಪತ್ತು ಸಾಯಿರವೆ ಗದ್ಯಾಣವೆಂದಿರದೊಡ್ಡಿ ಮುತ್ತಿರ
ಲ್ವಿಲಗೆಯನಾಡಿಸೋಲ್ತೊಡೆ ಸುಯೋಧನನೇವದೆ ಧರ್ಮ್ಮಪುತ್ರನುಂ।
ಕುಲಧನಸಂಕುಲಂಗಳನೆ ತಂದಿಡೆಯಿಟ್ಟವನಾಡಿಸೋಲ್ತನಾ
ಕುಲಮತಿ ಮುಂದೆ ಭಾರತದೊಳೊಡ್ಡುವುದಂ ಕಡುನನ್ನಿ ಮಾಲ್ಪವೋಲ್ ॥

ವ ॥ ಅಂತು ಕಾಳಿಂಗಾಂಗವನಸಂಭವಂಗಳಪ್ಪ ಮದಾಂಧಗಂಧಸಿಂಧುರಂಗ
ಳುಮನಾಜಾನೇಯಕಾಂಭೋಜಭೂಮಿಜಂಗಳಪ್ಪ ಜಾತ್ಯಶ್ವಂಗಳುಮನೊಡ್ಡಿದಾಗಳ್ದು
ರ್ಯ್ಯೋಧನಂ ಬಂದಿಕಾಱನಂತೆ ಸೆಱೆಗೆಯಲ್ದಂ, ವ್ರಣವೈದ್ಯನಂತೆ ಕೊಡಸಾರಿಯುಂ
ಪಿಡಿದುಂ ಸೂಳೆಯಂತೆ ಕಱುವುಱುವನಱಿದುಂ ರಸವಾದಿಯಂತೆ ಕಟ್ಟಿಯುಂ
ವೆಜ್ರ್ಜ್ಜೋಡೆಯಂತೆ ನುಣ್ಣಿತಂವೇಱ್ದುವಣುಗಾಳಂತೆ ದಾಯಂಬಡೆದು ಮೇಳದಂಕದಂತೆ
ಸುಱಿಯಱುದು ಡೊಂಬರ ಕೋಡಗದಂತಾಡಿಗೆಲ್ದಾಗಳ್ತಾವ್ಮಣ್ಣನಸೋಲಮಂ ಕಂಡಾ
ಗಳ್ಭೀಮಸೇನನಿಂತೆಂದಂ ॥

ಕಂ ॥ ಭಯಮುಱಿಯದಕಲಿಯುಂ ಚಾ
ಗಿಯುಮೆನಿಸದೆ ನಾಡೆ ಲೋಭಿಯುಂ ಪಂದೆಯುಮಾ ।
ಗಿಯೆ ಬಾಲ್ವಿಂಗಲ್ಲದೆ ಸೂ
ಳಿಯ ಕಣ್ಪಾಸಗೆಯ ಕಣ್ಣಂ ವೀನುಱುಗುಗುವೇ ॥ 73 ॥

ವ ॥ ಎಂದು ಕಯ್ಪಿಸರಂಬೆರಸುನುಡಿದ ಭೀಮಸೇನನ ನುಡಿಗಳ್ಕಡಿಗಳಂತೆ
ತನ್ನ ಮನಮನೊನಲಿಸೆಯುಮೆಂರ್ದೆಯುಂ ಕನಲಿಸೆಯುವೇನುಮೆನ್ನದೆ ಮುಂತಣ
ಕಜ್ಜಮನೆ ಬಗೆದುಸಿರದಿದ್ದ ದುರ್ಯ್ಯೋಧನನಲ್ಲಿಗೆ ಗಾಂಗೇಯನುಂ ವಿದುರನುಂ
ಬಂದು ॥

ಉ ॥ ಸಾಲದೆ ಜೂದು ನಿಮ್ಮೊಳಗಿದೇಂಗಳ! ಮಾಣಿಸಿಮೆಂದೊಡನ್ಯಭೂ
ಪಾಲಕಿರೀಟತಾಟಿತಪದಂ ಯಮುನಂದನನಜ್ಜ ನಾಡೆಯುಂ ।
ಸೋಲದೊಳಾದವೇವಯಿಸಿದೆಂ ನುಡಿಗಿನ್ನೆಡೆಯಿಲ್ಲ ಪೋಗಿಮಾ
ತ್ಮಾಲಯಕೆಂದೊಡೇನುಮೆನಲಣ್ಮದೆ ಬಾರಿಸಲಣ್ಮದಿಬ್ಬರುಂ ॥ 74 ॥

ವ ॥ ಧೃತರಾಷ್ಟ್ರನಲ್ಲಿಗೆ ಪೋಗಿ ॥

ಚಂ ॥ ನಿನಗೆ ಮಗಂ ಪುರಾಕೃತದ ಕರ್ಮ್ಮವೆ ಪುಟ್ಟುವವೋಲೆ ಪುಟ್ಟಿ ನಿ
ಮ್ಮಿನಿಬರುಮಂ ರಸಾತಳದೊಳಿಲ್ದಿದಪಂ ಪಗೆ ಪೊಲ್ಲ! ಪಾಂಡುನಂ ।
ದನರೊಳಹೀಂದ್ರಕೇತನನ ಜೂದಿನ ಗೆಲ್ಲಮದೆಂತುಟೆನ್ನು ನಂ
ಜಿನ ಸವಿಯೆಂತುಟೆಂದೊಡಿನಿಸಂತದೊಳಂತಕನಲ್ಲಿಗಟ್ಟುಗುಂ ॥ 75 ॥

ಕಂ ॥ ಪುರುಡಿಸಿಕೊಂಡೀಗಳ್ನೀ
ನರಸಿನ ಗರ್ವದೊಳೆ ಬೀಗಿಜೆಸೆಯಲ್ದೆ ಮಗನಂ ।
ಕರೆದೊಪ್ಪಿಸವೇಱೞ! ಯುಧಿ
ಷ್ಠಿರಂಗೆ ಮುಂ ಗೆಲ್ವ ವಸ್ತುವಾಹನಚಯಮಂ ॥ 76 ॥

ವ ॥ ಎಂದುಮತ್ತಮಿಂತೆಂದರ್ ॥

ಮ॥ ಸ್ರ ॥ ಕದನಪ್ರಾರಂಭಶೌಂಡಂ ರಿಪುನೃಪಬಡಬಾಸ್ಯಾನಲಂ ವೈರಿಭೂಭೃ
ನ್ಮದವನ್ಮಾತಂಗಕುಂಭಸ್ಥಳದಳನಕರೋಗ್ರಾಸ್ತನುಗ್ರಸ್ವಧೈರ್ಯಂ ।
ವಿದಿತಪ್ರತ್ಯಕ್ಷಸಾಖಾಕರಿನಿಕಟತಟಶ್ರಾಂತದಾನಂ ಭರದಿಂ
ಬಿದ್ದಿರೊಳ್ವಿಕ್ರಾಂತತುಂಗಂ ಹರಿಗನಿರೆ ಬಿಗುತ್ಕಾಂಪನಂ ಕಾವ ಗಂಡಂ ॥

ಕಂ ॥ ಶ್ರೀರಮಣೀರಮಣಂಗರಿ
ನಾರೀವೈಧವ್ಯದಿವ್ಯದೀಕ್ಷಾದಕ್ಷಂ ।
ಗಾರಣೆ ಹರಿಗಂಗೀಗಡೆ
ಬಾರಿಸು ನೀಂ ನಿನ್ನ ಮಗನನಂಧನರೇಂದ್ರಾ ॥ 78 ॥

ಕಾದುದು ಸರಣ್ಗೆವಂದರ
ನಾದುದು ಕಾಲಾಗ್ನಿ ಬಲಿದ ಪರನೃಪತಿಗೆ ಕಾ ।
ಪಾದುದು ನೆಲಕ್ಕೆ ತೋಳ್ವಲ
ವಿಾಡೊರೆತೆನೆ ಮರುಳೆ ಹರಿಗನೊಳ್ಪುಗೆಗೊಳಲ್ವಾ! ॥ 79 ॥

ವ ॥ ಎಂದೆನಿತಾನುಂ ತೆಱದೊಳೆ ಸಾಱೆಯುಂ ಕೀಱೆಯುಂ ನುಡಿದೊಡೆ ಧೃತರಾಷ್ಟ್ರಂ ಮಗನಲ್ಲಿಗೆ ವಂದು ಜಡಿದು ನುಡಿದುವೆಂಗೆಯ್ದುವೊಡಂಬಡಿಸಲಾಱದಿರೆ ಯುಧಿಷ್ಠಿರಂ ತಲೆಗವಿವನಲ್ಲದೆಯುಮೇವದೊಳ್ತಲೆಗವಿದು ಸಗ್ಗಂ ಕೊಂಡಾಡಿನೆತ್ತಮನಾಡಿ ॥

ಕಂ ॥ ವ್ಯಾಳಗಜಂಗಳನಗ್ಗದ
ಸೂಳೆಯರೊಕ್ಕಲನನರ್ಘ್ಯವಸ್ತುಗಳನಿಳಾ ।
ಪಾಳಂ ಸೋಲ್ತೊಡೆ ಜಾದಿನ
ಕೇಳಯನಾಕೇಳದನಿತಱೊಳ್ಕಾಣಿಸದಂ ॥ 80 ॥

ವ ॥ ಮಾಣಿಸಿದೊಡೆ ಮಾಣದೆ ರಣಮಂ ತೋಱುಯುಮೊತ್ತೆಯನುಗ್ಗಡಿಸಿಯುಮಾಡಿವೆನೆ ಪೆಱತೇನುಮುಪಾಯಮಿಲ್ಲದೆಮ್ಮಾಳ್ವ ನೆಲನೊತ್ತೆಯೆಂದೊಡೆ ಬಗೆದುನೋಡಿ, ಗೆಲ್ದಿಂಬಱಿಯಂ ಮುದುಗಂಗಳ್ಮಗುಳೆಕುಡಿಸುವರೆಂಬ ಬಗೆಯೊಳಂ ವಿಕ್ರಮಾರ್ಜ್ಜುನನುಂ ಭೀಮನುಂ ಯಮಳರುಮೆಱೆದುಕೊಳ್ವರೆಂಬ ಸಂಕೆಯೊಳಮಂತಲ್ತು

ನಿನ್ನ ನನ್ನಿಯೊಳಯ್ವರೆಮಿರೆ ವರುಷಾವಧಿಯೊಳಲ್ಲದೆ ನೆಲನನೊತ್ತೆವಿಡಿಯೆನೆಂದೊಡೆ ಧರ್ಮಪುತ್ರಂ ಪನ್ನೆರಡುವರುಷಂಬರಂ ನಾಡಂ ಪುಗದರಣ್ಯದೊಳಿರ್ಪಂತುಮನ್ಯಥಾ ವಾಸನೆಂದೊಂದುವರುಷದೊಳಾರಾನುಮಱಿದರಪ್ಪೊಡೆ ಮತ್ತಂ ದ್ವಾದಶಾಬ್ದಂಬರಂ ನಾಡ ಡೆಸೆಯಂ ನೋಡದಂತಾಗಿಯೊಂದೇಪಲಗೆಯೊಳೆ ಗೆಲ್ಲಸೋಲವುಪ್ಪಂತು ನನ್ನಿ ನುಡಿದು ನೆಲನನೊತ್ತೆಯಿಟ್ಟುಡಿ ॥

ದ್ರೌಪದೀವಸ್ತ್ರಾಹರಣಂ

ಕಂ ॥ ಆ ಪಲಗೆಯುವುಮಂ ಸೋಲ್ತು ವು
ಹೀಪತಿ ಚಲದಿಂ ಬಲಿಕ್ಕೆ ಸೋಲ್ತಂಗಡವು ।
ದ್ರೌಪದಿಯುವುನೇನಾಗದೊ
ಪಾಪದ ಫಳವೆಯ್ದಿವಂದ ದೆವಸದೊಳಾರ್ಗ್ಗಂ ॥ 81 ॥

ವ ॥ ಅಂತು ದುರ್ಯ್ಯೋಧನನಜಾತಶತ್ರುವಿನ ಸರ್ವ್ವಸ್ವಮೆಲ್ಲವುಂ ಗೆಲ್ದು ಗೆಲ್ದ ಕಸವರಮೆಲ್ಲಂ ಬಂದುದು ಪಾಂಚಾಳರಾಜತನೂಜೆಯೊರ್ವ್ವಳ್ಬಂದಳಲ್ಲಾಕೆಯಂ ತನ್ನಿವೆಂದು ಯುಧಿಷ್ಠಿರಂ ಕೊಟ್ಟು ನನ್ನಿಯ ಬಲದೊಳ್ತನಗೆ ಲಯಮಿಲ್ಲದುದನ ಱಿದು ಮೇಗಿಲ್ಲದ ಗೊಟ್ಟಾಟವಾಡಲ್ಬಗೆದು ಕರ್ಣ್ಣನ ಲೆಂಕಂ ಪ್ರಾತಿಕಾಮಿಯೆಂಬನುವುಂ ತನ್ನ ತಮ್ಮಂ ದುಶ್ಶಾಸನನುವುಂ ಪೇಟೊಡವಂದಿರಾಗಳೆ ಬೀಡಿಂಗೆವರಿದು ರಜಸ್ವಲೆಯಾಗಿರುವೆಂ ಮುಟ್ಟಲಾಗದೆನೆಯುವೊತ್ತಂಬದಿಂದೊಳಗಂಪೊಕ್ಕು ಪಾಂಚಾಳಯಂ ಕಣ್ಗೆಡೆ ಜಡಿದು ಮುಡಿಯಂ ಪಿಡಿದು ತನ್ಮಧ್ಯದಿಂ ಸಾಯೋಧನನ ಸಭಾಮಧ್ಯಕ್ಕೆತಂದು ॥

ಮ ॥ ವನದೊಳೆಲ್ಲಾಂದವುರಾಪಗಾಸುತಕೃಪದ್ರೋಣಾದಿಗಳ್ಬೇಡವೇ
ಡೆನೆಯುಂ ಮಾಣದೆ ತೊಟ್ಟೆ ತೊಟ್ಟು ವೆಗಗೆಯ್ವೋಪೋಗು ನೀನೆಂದು ಖ ।
ಯ್ದೆನಿತಾನುಂ ತೆಱದಿಂದವುಟ್ಟುದುವರಂ ಕೆಯ್ದಂದು ದುಶ್ಶಾಸನಂ
ತನಗಂ ಮೆಲ್ಲನೆ ಮೃತ್ಯು ಸಾರೆ ತೆಗೆದಂ ಧಮ್ಮಿಲ್ಲವುಂ ಕೃಷ್ಣೆಯಾ॥ 82 ॥

ವ ॥ ಅಂತು ಕೃಷ್ಣೆಯ ಕೃಪಣ್ಣಕಬರೀಭಾರವಂ ಮೇಗಿಲ್ಲದ ಪಿಡಿದು ತೆಗೆದು ಕೃಷ್ಣೋರಗನಂ ಪಿಡಿದ ಬೆಳ್ಳಾಳಂತುವ್ಮನೆ ಬೆದುರುತ್ತುವಿರ್ದ್ದ ದುಶ್ಶಾಸನನವುಂ ಕಣ್ಗೆತ್ತಿ ಕಿಱುನಗೆನಗುವ ಕುರುವರನ ವೊಗವುವುಂ ತಮ್ಮಣ್ಣನ ಬಿನ್ನನಾದ ವೊಗವುವುಂ ಕಂಡು ಕಣ್ಗಳಂ ನೆತ್ತರ್ತ್ತುಳಂಕೆ ॥

ಉ ॥ ಕೋಪದ ಪೆಚ್ಚಿನೊಳ್ನಡುಗುವೊರುಯುಗಂ ಕಡುಬಿಂದರಲ್ದ ನಾ
ಸಾಪುಟವಿಕ್ಕೆಯಿಂ ಪೊಡವರ್ದ ಪುರ್ವ್ವೆ ಬೊದಲ್ದಿ ಲಯಾಂತಕತ್ರಿಕೂ ।
ಲೋಪವುಭೀಷಣಭ್ರುಕುಟಿ ವುನ್ನವೆ ರೌದ್ರಗದಾಯುಧಂಬರಂ
ಪೋಪ ಭುಜಾಗ್ರಳಂ ರಿಪುಗಳಗ್ರಹವೂದುದು ಭೀವುಸೇನನಾ ॥ 83 ॥

ಮ ॥ ನೆಲನಂ ನುಂಗುವ ವೇಗದಿಂ ಪಿಡಿದು ಕೀಱುತ್ತಿರಾಗಜೇಂದ್ರಂಗಳಂ
ಚಲದಿಂ ಕಟ್ಟುವ ಸಪ್ತ ಸಪ್ತಿಯನಿಳಾಭಾಗಕ್ಕೆ ತರ್ಪೊಂದು ಕೋ ।
ಳ್ವಲವುಂ ಗರ್ವವುಮುಳ್ಕೆ ಪೊಣ್ಮೆ ವನದೊಳ್ಕೊಂಪಾಗ್ನಿ ಕೆಯ್ಗಣ್ಮೆ ಕ
ಣ್ಮಲರೊಳ್ಪಂದಿರೆ ಪೊಡಿದಂ ಕಲುಷದಿಂ ಗಾಂಡೀವಿ ಗಾಂಡೀವವುಂ ॥ 84 ॥

ಕಂ ॥ ಪ್ರಕಟಿತವೃಗಪತಿಶಿಖನಿ
ಸ್ಫಾಕಾಶರತಿವಿಕಟಭೀಷಣಭ್ರೂಭಂಗ ।
ನ್ನರ್ಕಜಸಹದೇವರಿರ್ವ್ವರು
ಮುಕಾಲಕಾಲಾಗ್ನಿರೂಪವುಂ ಕೆಯ್ಕೊಂಡರ್ ॥ 85 ॥

ವ ॥ ಅಂತು ಪ್ರಳಯಕಾಲಜಳನಿಧಿಗಳಂತೆ ವೇಗದಪ್ಪಲ್ಬಗೆದ ತನ್ನ ನಾಲ್ವ
ರ್ತ್ತವ್ಯಮಂದಿರ ಮುನಿದ ನೋಗವುಂ ಕಂಡು ತನ್ನ ನುಡಿದ ನನ್ನಿಯು ಕೇಡಂ ಬಗೆದ
ರೆಂದು ಕಟಾಕ್ಷವಿಕ್ಷೇಪದಿಂ ಬಾರಿಸೆ ॥

ಮ ॥ ಅನಿತೊಂದುಕ್ಕಿನೊಳುಕ್ಕಿ ಕೌರವಬಳವ್ಯೂಹಾಂಬುರಾಜಾತ್ಮಜಾ
ನನಪದ್ಮಗ್ಲಪನೈಕಕಾರಣಪರತ್ವಾಮಾಗೆಯುಂ ಮತ್ತವು ।
ಣ್ಣನ ಕಣ್ಣನ್ನೆಗೆ ವಿಸ್ಮಲಂಜೆಯೆ ಸವಂತಿರ್ದರ್ ಪೃಥಾಪುತ್ರರೆಂ
ತಿನಿತೊಂದಾದೊಡವೇಂ ಮಹಾಪುರುಷರಾಜ್ಞಾಲಂಘನಂಗೆಯ್ವರೇ ॥ 86 ॥

ವ ॥ ಆಗಳ್ ದ್ರೌಪದಿ ತನ್ನ ಕೇಶಪಾಶವುಂ ದುಶ್ಶಾಸನಂ ಪಿಡಿದುತೆಗೆದನೆಂಬು
ಸಿಗ್ಗಗ್ಗಳಂಪೆರ್ಚ್ಚಿ ಸಭೆಯೊಳಿಂತೆಂದಳ್ ॥

ಕಂ ॥ ಮುಡಿಯಂ ಪಿಡಿದೆಳೆದವನಂ
ಮುಡಿಯಿಸಿ ಮತ್ತವನ ಕರುಳ ಪಿಣಿಲಿಂದೆನ್ನಂ ।
ಮುಡಿಯಿಸುವಿನೆಗಂ ಮುಡಿಯೆಂ
ಗಡಿವಿಂದಿದನೆನ್ನೆಳಲ್ಗೆ ವಿಸಲನ್ನುಡಿದೆಂ ॥ 87 ॥

ವ ॥ ಎಂಬುದುಂ ಭೀಮಸೇನನಾಮಾತಂ ಕೇಳ್ದು ಸೈರಿಸಲಾಱದೆ ॥

ಉ ॥ ಆಱದ ಕೋಪಪಾವಕನಿನಣ್ಣನ ನನ್ನಿಯನಿಲ್ಲಿ ವಿಸ್ಮಲುವೆಂ
ವಿಸ್ಮಲೆನಿನುತ್ತು ವಿಪ್ರಪದದಲ್ಲಿಯೆ ನೋಡ ವರುಳ್ದಿ ಧೂಪವುಂ ।
ತೋಱುದ ಮಾಟ್ಕೆಯಿಂ ದ್ರುಪದರಾಜಸುತಾವಚನಂಗಳಲ್ಲಿ ವೆ
ಯ್ದೋಱೆ ವರುತ್ತುತಂ ನುಡಿದನಾಸಭೆಯೊಳ್ನವವೀಳುನಾದದಿಂ ॥ 88 ॥

ಮ ॥ ಮುಳಿಸಿಂದಂ ನುಡಿದೊಂದು ನಿನ್ನನುಡಿ ಸಾಲ್ಗಾರಾಗದೆಂಬುರ್ಮ್ಮಹಾ
ಪ್ರಳಯೋಲ್ಕೋಪವುವದ್ಧಾಹತಿಯಿನತ್ಯುಗ್ರಾಜಿಯೊಳ್ಮನ್ನವಿ ।
ಖಳದುಶ್ಶಾಸನನಂ ಪೊರಳ್ಚಿ ಬಸಿಱಿಂ ಪೋಲ್ದಿಕ್ಕಿಬಂಬಲ್ಗರು
ಳ್ಗಳನಾನಲ್ತೆ ವಿಳಾಸದಿಂ ಮುಡಿಯಿವೆಂ ಪಂಕೇಜಪತ್ರೇಕ್ಷಣೇ ॥ 89 ॥

ಕುಡಿವೆಂ ದುಶ್ಶಾಸನೋರಸ್ಥಳವನಗಲೆ ಪೋಟ್ಪುದ್ದು ಕೆನ್ನೆತ್ತರಂ ಪೊ
ಕ್ಕುಡಿವೆಂ ಪಿಂಗಾಕ್ಷನೂರೆಂದ್ವಯವನುರುಗದಾಘಾತದಿಂ ನುಚ್ಚುನೂಱು ।
ಗೊಡೆವೆಂ ತತ್ಪ್ರತ್ನರಶ್ಮಿಪ್ರಕಟವುಕುಟವುಂ ನಂಬುನಂಬೆನ್ನ ಕಣ್ಣಿಂ
ಕಿಡಿಯುಂ ಕೆಂಡುಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ ॥

ಮುಳಿಸಂ ಮೂಡಿಯುವೇವವುಂ ಪಡೆದುಮಿನ್ನೀಪಂದೆಗಳ್ವಾಣದಿಂ
ದುಳವನ್ನಂ ತಲೆವುತ್ತ ಮುಟ್ಟಿಗಳವೇಲಿರ್ದ್ದಪ್ಪುವೆಂದಂತೆದಲ್ ।
ಮುಳಿಸಿಲ್ಲಣ್ಣನ ನನ್ನಿಯೆಂಬುದನೆ ಪೇಳ್ದೀವೇಱ್ಪುವಿೞಾರವ
ರ್ಕ್ಕಳನುಂತಿನ್ನಿಗಮುಚ್ಚಿರ್ಪವುಕ್ಕದೆಸಡಿಲ್ದಿರ್ದಭೀವುನೇಂ ಪೂಣ್ದುನೇ ॥

ವ ॥ ಎಂದು ಪಾಂಚಾಳರಾಜತನೂಜೆಯು ಮನಮುನಾಱೆ ನುಡಿದು ಮತ್ತಮಿಂತೆಂದಂ ॥

ಮ ॥ ಸುರಸಿಂಧುಪ್ರಿಯಪುತ್ರ! ಕೇಳ್ಕಳಕಜಾ! ನೀಂ ಕೇಳ್ಕೃಪಾ ಕೇಳ! ಮಂ
ದರದಿಂದಂಬುಧಿಯಂ ಕಲಂಕಿಪಸುರಪ್ರಧ್ವಂಸಿವೋಲ್ಪಾಹುಮಂ ।
ದರದಿಂ ವೈರಿಬಲಾಬ್ಧಿ ಘೂರ್ಣ್ಣಿಸೆ ಬಿಗುರ್ತ್ತೀಕ್ರೌರವಕ್ರೌಡೆ ನೂ
ರ್ವ್ವರುವುಂ ಕೊಲ್ವೆನಿದೆನ್ನ ಪೂಣ್ಕೆ! ನುಡಿದೆಂ ನಿಮ್ಮಾಸಭಾಮಧ್ಯದೊಳ್ ॥

ವ ॥ ಎಂದು ವಿಳಯಕಾಳಜಳಧರನಿನಾದದಿಂ ಗಿರಿ ತಾಪಿಸಿದಂತಾನುಂ ನೆಲಂ ವೊಟಗಿದಂತಾನುಂ ಗಜಘೀಗರ್ಜ್ಜಿಸಿನುಡಿದು ಮಹಾಪ್ರತಿಜ್ಞಾರೂಢನಾದ ಭೀವುಸೇನನ ನುಡಿಯಂಕೇಳ್ದು ಕ್ರೌರವಕ್ರೌಡಲನಡುವಣಪರ್ವ್ವತಂಗಳಂತಲ್ಲಾಡೆ ಕುರುವೃದ್ಧನುಂ ಬುದ್ಧಿವೃದ್ಧನುವುಪ್ಪಗಾಂಗೇಯಂ ಧೃತರಾಷ್ಟ್ರಂಗಿಂತೆಂದಂ ॥

ಚಂ ॥ ಭರತಯಯಾತಿಕುತ್ಸುಪುರುಕುತ್ಸುಪುರೂರವರಿಂದಮಿನ್ನೆಗಂ
ಪರಿವಿಡಿಯಿಂದೆ ಬಂದ ಶಶಿವಂಶವದೀಗಳವಂದಿರಿಂದೆ ನಿ ।
ತ್ತರಿಸುವುದಕ್ಕುವೆಂದೆ ಬಗೆದಿರ್ದ್ದೊಡೆ ಕೀಲೊಳೆ ಕಿಚ್ಚುಪುಟ್ಟಿಭೋ
ಗ್ಗರೆದುರಿದಂತೆ ನಿನ್ನವುಗನಿಂದುರಿದತ್ತಿದನಾರೊ ಬಾರಿಪರ್ ॥ 93 ॥

ವ ॥ ಎಂದಟಲ್ದು ಧೃತರಾಷ್ಟ್ರನೊಳ್ನುಡಿಯೆ ಕುಂಭಸಂಭವಾಶ್ವತ್ಥಾವುಕೃಪ ವಿದುರಾದಿ ಗಳ್ನೀವೆನಿತುನುಡಿದೊಡವುನೆಯ ಕೋಡುಬಾಗದೆಂಬಂತೆ ದುರ್ಯ್ಯೋಧನನುದ್ಧೃತತೆಯುವುಂ ಭೀವುಸೇನನ ಮಹಾಪ್ರತಿಜ್ಞೆಯುವುನಾರ್ಗ್ಗಂ ಬಾರಿಸಲ್ಪಾರದು ಕೆಯ್ಗಱೆದವುನೆವಾಲ್ತೆಗಬುದ್ದಿವೇಱಲೆಡೆಯಿಲ್ಲ ತಾವುಂತಾವುವುಱುವರ್ಬ್ಬನ್ನಿವೆಂದುನಿಜನಿವಾಸಂಗಳ್ಗೆ ಪೋದರಾಗಳ್ಭೀವುಸೇನಂ ಧರ್ಮ್ಮಪುತ್ರಂಗೆಂದನುಪ್ಪಿಕ್ಕಿದೊಡೆ ತುಪ್ಪದವೊಲ್ಪಡುಗಿತೆಂಬಂತೆನವ್ಮಕೆವ್ಮನಿರ್ಪ್ಪರವಿದೇಕಾರಣಂಬನ್ನಿಂಪೋಪವೆಂದರವುನೆಯಂಪೊಱಮಟ್ಟುಬರೆ ಧೃತರಾಷ್ಟ್ರಂ ದುರ್ಯೋಧನನನೇಗೆಯ್ದುವೊಡಂಬಡಿಸಲಾಱದಿರೆಯುಂ ದ್ರೌಪದಿ ಪರಸ್ತ್ರೀಯಂ ನವ್ಮವುನೆಯೊಳಿರಿಸುವುದುಚಿತವು

ಲ್ಲಿಂದು ಕಳಿಪಿದೊಡೆ ಪಾಂಚಾಳರಾಜತನೂಜೆವೆರಸು ಬಿನ್ನಬಿನ್ನನೆ ಪೊಱಮಲಂ ಪೊಱ
ವಂಡೆ ಪುರಜನಂಗಳೆಲ್ಲಂ ನೆರೆದವರ ಪೋಗಿಂಗೆ ಸೈರಿಸಲಾಱದೆ ತವ್ಮೊಳಿಂತೆಂದರ್ ॥

ಕಂ ॥ ವಿದೊರೆಯಂ ಯವಮಾನಂದನ
ನೇದೊರೆಯಂ ಭೀಮಸೇನನೇದೊರೆಯಂಕಂ ।
ಜೋದರನ ಮಯ್ದುನಂತಾ
ವೇದೊರೆಯಯ್ಯರ್ವಮಳರವರ್ಗವಿಸಾಯಿರವಾಯ್ತೀ ॥ 94 ॥

ಜಾದಾಡಿಸೋಲ್ತು ನನ್ನಿಗೆ
ವೇದಿನಿಯಂ ಕೊಟ್ಟು ಪಾಂಡುನಂದನರೀಗ ।
ಳ್ಕೊದೊಡನೆಂ ತಿಣುಕಾಗದೆ
ಪೋದಪುದೇ ನಮ್ಮನೃಪತಿಗವು ತವುದಲೆಯೊಳ್ ॥ 95 ॥

ಜಾದಿನ ಗೆಲ್ಲದೊಳಾದೀ
ವೇದಿನಿಯಂ ಕಂಡು ಕಜ್ಜಮಂ ಕಾಣದೆ ದು ।
ಜ್ಜೋದನನೇಂ ಮರುಳಾದನೊ
ಪಾದದ ಬಡಿಗಂಡುದಿಲ್ಲ ಪಾಲನೆಕಂಡಂ ॥ 96 ॥

ಎನಿತಾನುವಂದದಿಂ ಜಾ
ದನಿಕ್ಕೆಯುಂ ದ್ರುಪದಸುತೆಯನೆಚ್ಚೆದುಯ್ಯೆಯುವಿ ।
ನ್ನಿನಿತೊಂದಾದುದು ದುಶ್ಯಾ
ಸನನಿಂದಂ ಶಕುನಿಯೆಂಬ ಪೆಳ್ಳರಸಿಂದಂ ॥ 97 ॥

ವ ॥ ಎಂದಿದ್ದರ್ಲ್ಲಿಯೆ ತಂತವ್ಮ ಕಂಡುದನೆ ನುಡಿಯೆಯುಂ ಕೆಲರವರ ಪೋ
ಗಿಂಗಱಲ್ತು ಕಣ್ಣನೀರನಿಕ್ಕೆಯುಂ ಕೆಲರ್ಪರಸಿ ಸೇಸೆಯ ನಿಕ್ಕೆಯುಂ ಪೊಱಮಲಂ ಪೊಱ
ವಂಟ್ಟು ಪುರದಬಾಹಿಗೆಯನೆಯ್ದುವಾಗಳ್ಗಾಂಗೇಯಂದ್ರೋಣಕೃಪವಿದುರಾದಿಗಳ್ಕೊಂತಿವೆರ
ಸೆಯ್ದೆವಂದು ಕಿಱಿದಂತರಮಂ ಕಳಿಪುತ್ತುಂಬರೆ ಧರ್ಮ್ಮಪುತ್ರನೆವುಗೆ ತಕ್ಕ ಬುದ್ಧಿ
ಯಂ ಪೇಱ್ದುವುಗುಱಿವೆಂದೊಡನಿಬರುಂ ಮನಂಬಂದಿಸಿದವೋಹದಿಂಗಱಗಱನೆ
ಕಣ್ಣನೀರ್ಗ್ಗಳಿಂ ಸುರಿದು ॥

ಚಂ ॥ ಪುಗುವುದರಣ್ಯಮಿಪ್ಪಿರವು ಪನ್ನಿರಡಬ್ದವುರಣ್ಯದಲ್ಲಿ ಕೋ
ಟ್ಯಾಗದ ವನೇಚರಾಧಿಪರ ದಾಯಿಗರತ್ತಣಿನಪ್ಪಪಾಯಕೋ ॥
ಟಿಗೆ ಪವಣಿಲ್ಲ ಕಲ್ಪಿಗೆಡೆಯಾವುದೊ ಪಾಱಿಯ ಬಟ್ಟೆದಪ್ಪಿ ವು
ನ್ನೆಗಱ್ಪೆಡೆಯಿಲ್ಲ ಪೋಗು ಜಯವಂಕ್ಕೆ ಶುಭಂ ನಿವುಗಕ್ಕೆ ವುಂಗಳಂ ॥

ವ ॥ ಎಂದೊಡಲ್ಲಿದ್ದರ್ ನಿವ್ಮಮನಕ್ಕೆ ಕೊಕ್ಕರಿಕ್ಕೆಯಾಗಿಯುಂ ಪಾಱಿಗೆ ಗೆಂ
ಟಾಗಿಯುಂ ನೆಗಳ್ವವುಲ್ಲೆಂದು ಪೊಡವಟ್ಟು ಕೊಂತಿಯಂ ವಿದುರನ ಮನೆಯೊಳರಲ್ವೀ

ಱ್ಸುಸುಭದ್ರೆಯನಭಿಮನ್ಯುವೆರಸು ದ್ವಾರಾವತಿಗೆಕಳಪಿ ನಿಜಪರಿಜನಂಬೆರಸು ಗಂಗೆಯಂ ಪಾಯ್ವುದಱುಪಡುವಣದೆಸೆಯ ಕಾವ್ಯಕವನದ ಒಟ್ಟಿಯಂ ತಗುಳ್ದು ಪೋಗೆವೋಗೆ ॥

ವರ್ಷಾಗಮಂ

ಚಂ ॥ ದೆಸೆಪಸುರೇಱುಪಚ್ಚೆಯೊಳೆಮುಚ್ಚಿ ಮುಸುಂಕಿದಮಾಲ್ಕೆಯಾದುದಾ
ಗಸಮುಳನೀಳನೀಳಗಳಕಂತತಮಾಳವಿನೀಳನೀರದ ।
ಪ್ರಸರವಿಭಾಸಿಯಾದುದು ಸವಿಾರನುದಾರಕದಂಬಕೇತಕೀ
ಪ್ರಸರರಜಸ್ಪರಪ್ರಕಟಪಾಂಸುಳಮಾದುದು ವೀಧಿಕಾಲದೊಳ್ ॥ 99 ॥

ಕರಿಯೆ ಮುಗಿಲ್ಗಳಿಂಗಗನಮಂಡಳವೊಪ್ಪಿರೆ ಸೋಗೆಯಿಂ ವನಾಂ
ತರವೆಸೆದೊಪ್ಪೆ ತೋರ್ಪ್ಪ ವೊಳೆವುಲ್ಗಳನೀಧರಣೀವಿಭಾಗವೊ ।
ಪ್ಪಿರೆಪೊಸವೇಟಕಾಱುರೆರ್ದೆಗಳೊಪ್ಪಿರೆಗಾಱೆ ಪೊಡಪ್ಪುಗಂಡು ವೇಂ
ಕರಿತುವದೇಂ ಕಲಂಕಿದುವದೇಂ ಕುಱುಗೊಂಡುವದೇಂ ಕನಲ್ದುವೋ ॥

ವ ॥ ಅದಲ್ಲದೆಯುಂ ॥

ಮ ॥ ಭವಲಾಲಾಟವಿಲೋಚನಾಗ್ನಿಶಿಖೆಯಿಂ ಬೆಂದಳ್ಕವುತ್ತಂಮನೋ
ಭವನೆಚ್ಚತ್ತೊಡೆ ಕಾವುಕಾಂತೆ ಬಲುಯಂ ತನ್ನಿಚ್ಚೆಯಿಂ ಮೆಚ್ಚಿ ಬಂ ।
ಣವುರಂತೀವಿದಮಾಲ್ಕೆಯಾಯ್ತು ನವಿಲಿಂ ಕಂದಂಗಳಿಂದಿಂದ್ರಗೋ
ಪವಿಳಾಸಂಗಳನಾಳಿಕಲ್ಲವರಲಿಂ ಕಾರೊಳ್ಕಹೀವಂಡಲಂ ॥ 101 ॥

ಚಂ ॥ ಪೊಳೆವವುರೇಂದ್ರಗೋಪದ ಪಸುತ್ತೆಳವುಲ್ಗಳ ತಳ್ತ ಕಾವ್ಮುಗಿ
ಲ್ಗಳ ಕಿಱುಗೊಂಕುಗೊಂಕಿದ ಪೊನಲ್ಗಳ ಕೆಂಪು ಪಸುಪ್ಪು ಕಪ್ಪು ಬೆ ॥
ಳ್ಪೊಳಕೊಳೆ ಕಕ್ರಕಾರ್ಮುಕವಿಳಾಸವನೇನೆದೆಗೊಂಡು ಬೇಟದ
ತ್ತಳಗವನುಂಟುಮಾಡಿದುದೊ ಕಾವನ ಕಾವ್ಮುಕದಂತೆ ಕಾವ್ಮುಕಂ॥

ವ ॥ ಅಂತುತವುಗಿದಿರಂಬಪ್ಪಂತೆ ಬಂದ ಪಯೋಧರಕಾಲದೊಳೆರಡುತಡಿಯುವುಂ ಪೊಯ್ದು ಪರಿವ ತೊಱೆಗಳುವುಂ ತೊವಲ್ಕು ಸೊಗಯಿಸುವಡವಿಗಳುವುಂ ಪಸಿಯನೇತ್ರವುಂ ಪಚ್ಚವಡಿಸಿದಂತೆ ಪಸುಪ್ಪುವಡೆದ ನೆಲದೊಳ್ಪಚ್ಚೆಯ ಪದ್ಮರಾಗದ ಪರಲ್ಗಳಿಂ ಬಲಿಗೆದಱ್ದಂತೆ ಪಸುಪ್ಪೆಸೆವ ನೆಲದೊಳುಪಾಶ್ರಯಂಬಡೆದಳಂಕರಿಸುವಿಂದ್ರಗೋಪಂಗಳುವುಂ ಕಿಸುಗಾಡ ನೆಲಂಗಳೆಳದಳರ ಬಣ್ಣವುಂಕೆಯ್ಕೊಂಡು ವಿರಹಿಗಳ ಮನಮನೊನಲಿಸುವಂತೆ ಜಲಜಲನೆ ಪರಿವ ಬಱ್ಱುಪೊನಲ್ಗಳುವುಂ ಕಂಡು ತಮ್ಮ ಕಣ್ಗಂ ಮನಕಂ ಸೊಗಯಿಸೆ ಪಯಣಂಬಂದು ಕಾವ್ಯಕವನವುಂ ಪುಗುತಂದರ ದೆಂತೆಂಬೊಡೆ ॥

ಮ ॥ ದೆಸೆಗೆತ್ತಂಗಜಲುತ್ತು ವಿರ್ಪ್ಪ ಪುಲಿಯಿಂ ನೀಳಾಭ್ರಮುಂ ದಂತಿಗೆ
ತ್ತು ಸಿಡಿಲ್ಗಾಗಸಕೆಯ್ದೆ ಪಾಯ್ವ ಪಲವುಂಸಿಂಗಂಗಳಂದೆತ್ತಗು ।
ರ್ವಿಸಿ ಪಾಯ್ವರ್ವಿಗಳಂವದಾಂಧವರಗಂಧೇಭಂಗಳಂ ಕಣ್ಗಗು
ರ್ವಿಸೆಯುಂ ಚಿತ್ತದೊಳಂದು ಕಾವ್ಯಕವನಂ ಮಾಡಿತ್ತತಿಪ್ರೀತಿಯಂ ॥

ಕಿಮ್ಮೀರವಧಂ

ವ ॥ ಅಂತುಸೌವ್ಯಭಯಂಕರಾಕಾರವುಪ್ಪ ಕಾವ್ಯಕವನವಂ ಪುಗುತಲ್ಲಿ ತದ್ವನಾಧಿಪತಿಯಪ್ಪ ದೈತ್ಯಂ ಕಿಮ್ಮೀರನವರಂ ಪುಗಲೀಯದಡ್ಡಮಾಗಿರೆ ॥

ಮ ॥ ಮಸಿಯಂಪುಂಜಿಸಿದಂತುಟಪ್ಪತನು ನೀಳಾಂಭೋಧರಂ ದಾಡೆಗ
ಳ್ಪೊಸವಿಂಚುಗ್ರವಿಲೋಚನಂ ದಿವಿಜಗೋಪಂ ಕಾರೊ ಮೇಣ್ ಕಾಳರ
ಕ್ಕಸನೋ ಪೇಳೆನೆ ಬಂದು ತಾಗೆ ಗದೆಯಂಕೊಂಡೆಯ್ದೆ ಭೀಮಂ ಸಿಡಿ
ಲ್ವು ಸಿಡಿಲ್ಪೊಯ್ದು ವೊಲಾಗೆ ಪೊಯ್ದನೆಳೆಯೊಳ್ಕಿಮ್ಮೀರನಂ ವೀರನಂ ॥ 104 ॥

ವ ॥ ಅಂತುಕಿಮ್ಮೀರನಂ ಕೊಂದು ಕಾವ್ಯಕವನವಂ ಪೊಕ್ಕು ತದ್ವನತಪೋ
ಧನರ ಗೋಷ್ಠಿಯೊಳವಾಟನಿಕರೆ ಬಿಟ್ಟೆಯೊಳಂ ತಮಗಿಂದ್ರಪ್ರಸ್ಥದ ರಾಜ್ಯಶ್ರೀಯಲಂ
ಮನುಳಿಸೆ ॥

ಪಿರಿಯಕ್ಕರ ॥

ಪಿರಿಯವುರಂಗಳೆ ಮಾಡಮಾಗೆ ಪೊಳೆವೆಳೆದಳರ್ಗಳೆ ಸೆಜ್ಜೆಯಾಗೆ
ಪಿರಿಯವಡುಗಳೆ ಮಜ್ಜನವಾಗೆ ಪೊಸನಾರೆ ದೇವಾಂಗವಸ್ತ್ರವಾಗೆ ।
ಪರಿದ ತಱೆಗೆಲೆಯೆ ಪರಿಯಣವಾಗೆ ಪಣ್ಪಲವತ್ತಿದ ಭೋನವಾಗೆ
ಸಿರಿಯ ಮಹಿಮೆಯಂ ವೆಱೆಯೆಯಲೇನಾತ್ತುರ್ದೊಬನದೊಳಿರ್ಪರವಾಪಾಂಡವರಾ॥

ಉ ॥ ಪಾಸಱೆ ಸಿಂಹಪೀಠಮಳನೀರುತಿ ಮಂಗಳಗೀತಿ ಭೂತಳಂ
ಪಾಸು ದ್ಯುಗವ್ರಜಂ ಪರಿಜನಂ ಪೊದಱೋಲಗಸಾಲೆ ವೊಕ್ಕಳಂ ।
ಬೀಸುವಗಾಳಿ ಚಾಪುರದಗಾಳಯೆನಲ್ತೊರೆವೆತ್ತದೇಂ ಸುಖಾ
ವಾಸನಿವಿತ್ತವಾಯ್ತೊ ವನವಾಸನಿವಾಸವೆ ಪಾಂಡುಪುತ್ರರಾ ॥ 106 ॥

ದ್ವೈತವನವೃತ್ತಾಂತಂ

ವ ॥ ಅಂತು ಕಾವ್ಯಕವನದೊಳಯ್ದುವರುಷವಿರ್ದ್ದಱನೆಯವರುಷದೊಳ
ದಱ ಕೆಲದೊಳೊಂದಿ ಸ್ಫುದಿಸಿ ಗಗನತಳವಂ ತಱಿಂಬುವಂತಿರ್ದ್ದ ಶಿಖರಿಶಿಖರಂಗ
ಳಿಂದಂ ದೆಸೆಗಳಂ ತಡವರಿಸಿಕೊಳ್ವಂತೆ ಬಳ್ವಳಬಳೆದು ಸೊಗಯಿಸುವವೆಮ್ಮೆರಂಗ
ಳಿಂದಂ ವನಲಕ್ಷ್ಮಿಯ ಗೋವುಂಡಲದಂತಿರ್ದ್ದ ಕಡವಿನ ಕಾಡೆಮ್ಮೆಯ ಬಂಡುಗಳಿಂದಂ.

ದೆಸೆಗಳ್ಗೆ ಬೆಚ್ಚಿ ವುಂ ಕಿಱಿಯ ವನವುಹಿಷಿಗಳಂ ವುದಹಸ್ತಿಯಂತೆ ವುರವಾಯ್ವು ಪುಲಿಗಳನತಿಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು ತದ್ವನೋಪಕಂಠವರ್ತ್ತಿ ಗಳಪ್ಪ ತಾಪಸಾಶ್ರವುಂಗಳೊಳ್ವಿಶ್ರವಿಸಲ್ಬಗೆದು ॥

ವು ॥ ಪುಗಲಿಲ್ಲೀಬನವೂರ್ಗ್ಗವಿಂಬು ನೆಲಸಲ್ನಾರುಂಟು ನಲ್ಕೊಂಬುಗೊಂ
ಬುಗಳೊಳ್ಪಣ್ಪಿಲವುಂಟು ವೃಕ್ಷತತಿಯೊಳ್ ನೀರುಂಟು ಪದ್ಮಾಕರಾ ।
ಳಗಳೊಳ್ತಣ್ಪಿಗಳುಂಟು ಹೇವುಲತಿಕಾಕುಂಜಂಗಳೊಳ್ತವ್ಮ ನ
ನ್ನಿಗೆ ಬನ್ನಂಬರಲೀಯದೀಬನದೊಳದ್ದೇಂ ಕಾಲವುಂ ಪಾರೆವೇಂ॥ 107 ॥

ವ ॥ ಎಂದು ತವ್ಮೊಳಯ್ವರು ವೇಕಕಾರ್ಯಾಳೋಚನಪರರಾಗಿ ದ್ವೈತವನ ದೊಳದ್ವೈತಸಾಹಸರಿರ್ಪ್ಪನ್ನೆಗವೊಂದುದಿವಸಂ ದುರ್ಯ್ಯೋಧನನ ವುಯ್ದುನಂ ಸಿಂಧುದೇಶಾಧೀಶ್ವರಂ ಸೈಂಧವನವರಂ ಛಿದ್ರಿಸಲೆಂದು ವೆಯ್ಗುರೆದುಬಂದು ॥

ವು ॥ ವ್ಯಗಯಾಕ್ರೀಡೆಗೆ ಪಾಂಡುರಾಜತನಯರ್ವೋಪನ್ನೆಗಂ ಬಂದು ತೊ
ಟ್ಟಗೆ ಪಾಂಚಾಳಿಯನೆತ್ತಿ ತನ್ನ ರಥದೊಳ್ತಂದಿಟ್ಟುಕೊಂಡುಯ್ದನ ।
ನ್ನಿಗ ವುಂತಾಪಡೆವಾತುಗೇಳ್ವ ತಿಬಳಬ್ಭೀವಾರ್ಜ್ಜುನರ್ಕ್ಕಯಪ್ಪ ಕೆ
ಯ್ಮಿಗೆ ಬೆನ್ನಂ ಪರಿದೆತ್ತ ಪೋಪೆಯೆಲವೋ ಪೋಪೋಗಲೆಂದೆಯ್ದಿದರ್ ॥

ವ ॥ ಅಂತೆಯ್ದಿ ತದ್ಗಾಷ್ಠಾತದೊಳಂ ಬಾಣಷ್ಠಾತದೊಳವುವನ ರಥವುಂ ಕತ ಚೂರ್ಣ್ಣಂ ವಾಡಿ ಜಯದ್ರಥನಂ ಕೋಡಗಗಟ್ಟುಗಟ್ಟಿ ಬೆನ್ನಂ ಬಿಲ್ಲ ಕೊಪ್ಪಿನೊಳಿ ಱಿದು ನಡೆಯೆಂದು ನಡೆಯಿಸಿ ಪಾಂಚಾಳಿಯಂ ಲೀಲೆಯಿಂದೊಡಗೊಂಡು ಬೀಡಿಂಗೆ ಬಂದು ಧರ್ಮ್ಮಪುತ್ರಂಗೆ ತೋಱಿದೊಡೆ ॥

ಕಂ ॥ ಲಾಕ್ಷಾಗೃಹವುಂ ಪುಗಿಸಲು
ವುಕ್ಷಕ್ರೀಡೆಯೊಳೆ ಧರಣಿಯುಂ ಕೊಳಲುಂ ಪಿಂ ।
ಗಾಕ್ಷಂಗೆ ಪೇೞ್ದು ಸೈರಿಸ
ದಾಕ್ಷೇಪದಿನೆವ್ಮನಿಲ್ಲಿ ಛಿದ್ರಿಸಬಂದೈ ॥ 109 ॥

ವ ॥ ಎಂದು ನಿನ್ನಂಪರಿಭವಕ್ಕೆ ತಂದು ನಿನ್ನಯಳವುಂಕಿಡಿಸಿದೆವಿಂಕೊಂದೊಡೇ ವಂದಪುದಿಂದೆ ದುರ್ಯ್ಯೋಧನನಲ್ಲಿಗೆಪೋಗೆಂದು ಕಟ್ಟದಕಟ್ಟುಗಳಂಬಿಟ್ಟುಕಳೆದೊಡೆ ಜಯದ್ರಥಂ ಸಿಗ್ಗಾಗಿ ಕೈಲಾಸದೊಳೀಶ್ವರಂಗೆ ತಪಂಗೆಯ್ದು ವೆಂಚ್ಚಿಸಿ ಪಾಂಡವರನೊಂ ದುದೆವಸದನುವರದೊಳ್ಗೆಲ್ವನಕ್ಕೆಂದು ವರಂಬಡೆದು ಪೋದನಿತ್ತ ದುರ್ಯ್ಯೋಧನಂ ಸವುಸ್ತ ಸಾಧನಸಹಿತನಾಗಿ ಕಾಡೊಳ್ಬೀಡರಂತೆ ತೊಱಲ್ವ ದಾಯಿಗರ ಕಂದಿಕುಂದಿದ ವೊಗಂಗಳಂ ನೋಡುವುದುವೆಂನ್ನನವರಿಂ ನೋಡಿಸುವುದುವಿಾಯೆರಡೆ ಸಂಸಾರಫಲ ವೆಂದು ನಾಗಪುರವುಂ ಪೊಱವಟ್ಟು ದುಶ್ಶಾಸನಾದಿಗಳಪ್ಪ ನೂರ್ವ್ವತ್ತರ್ವ್ವಮ್ಂ ದಿರುಂ ಭಾನುವತಿಯುಂ ಚಂದ್ರವತಿಯುವೆಂಬ ಜೇಟದರಸಿಯರುಂ ಲಕ್ಷ್ಮಣಂ ವೊದ

ಲಾಗೆ ನೂರ್ವರ್ಮ್ಮಕ್ಕಳಿಂ ಗಾಂಗೇಯದ್ರೋಣಕೃಪವಿದುರಪ್ರಭೃತಿಗಳುಮಂಶ್ವತ್ಥಾಮ ಕರ್ಣ್ಣಶಲ್ಯ ಶಕುನಿಸೈಂಧವಪ್ರಮುಖನಾಯಕರುಂ ಪೆರಸು ಪೀಂಟಿಯುನೆವದಿಂ ಬಂದು ದ್ಯೂತವನದ ಕೆಲದ ನಂದನವನದೊಳ್ಪಾಂಡವರ್ಗ್ಗೆ ಸಮೀಪಮಾಗೆ ಬೀಡಂಬಿಟ್ಟು ಪಾಡಿ ಸುತ್ತುಂ ಪೊಗಲ್ಕುಸುತ್ತುಮಿರ್ದ್ದನನ್ನಿಗಂ ಪಗೆಯಿಂಱಿಯದಬಂದರ ಮೂಗನರಿಯದಬಂದರೆಂಬಂತನಿಬರುಂ ಬಾಯಂ ಬಿಟ್ಟು ನೋಡೆನೋಡೆ ಪೂರ್ವ್ವಜನ್ಮದ ಪಗೆ ಚಿತ್ರಾಂಗದನೆಂಬ ಗಂಧರ್ವ್ವನಱುವತ್ತುಕೋಟಿಗಾಂಧರ್ವ್ವಬಲಂಬೆರಸು ಬಂದು ದುರ್ಯ್ಯೋಧನ ದುಶ್ಶಾಸನರಿರ್ವ್ವರುಮಂ ಕೋಡಗಗಟ್ಟುಗಟ್ಟಿ ॥

ಚಂ ॥ ಮಿಡುಕದೆ ಬೀಷ್ಮ ನೋಡುತಿರು! ಕುಂಭಜ ಸುಕ್ಕಿರರು ಕರ್ಣ್ಣಮಿಕ್ಕಮಾ
ನ್ಯರ್ಡಿಯದೆ ಮೂಗುವಟ್ಟಿರರು! ಗುರುಪ್ರಿಯನಂದನ ಕೂಗಡಂಗದಿ।
ದ್ದೊಡೆ ಬರ್ದುಕಾವುದಿಪ್ಪೊಡೆದೊಡೀಗಡೆ ಕೊಂದವೆನೆಂದು ಕೂಡೆ ಕ
ಣ್ಗಿಡೆ ಜಡಿದುಯ್ದನಾಖಚರನಿರ್ವ್ವರುಮಂ ಪರಮಾಣುಮಾರ್ಗ್ಗದಿಂ ॥ 110 ॥

ವ ॥ ಅಂತುಯುಯ್ವುದುಂ ನೆಗೞ್ತೆಯ ಬೀರರೆಲ್ಲಂ ಬಿಡವರಿಪತರರಂತೆ ಮಿಳ್ಕಿಳ ನೋಡುತ್ತಿರೆ ಮಿಕ್ಕುದುಂಡರಂತೆ ಕಲೆಯಂ ಬಾಗಿಬಿಲ್ಗಳಂ ಮುಂದಿಟ್ಟು ಬಿಲ್ಲುಂಬೞಿಗು ಮಾಗಿರೆ ಸುಯೋಧನವುಹಾದೀನಿ ಭಾನುಮತಿ ಬಾಯಲ್ಕುದು ಪುಯ್ಯಲಿಡುತುಂ ಬಂದು ಧರ್ಮ್ಮನಂದನನ ಕಾಲಮೇಲೆ ಕವಿದುಪಟ್ಟು ॥

ಕಂ ॥ ನೋಂತರ ಪಗೆವರನೆಲ್ತೂಱಿ
ದಂತಾಯ್ತೆಂದಿರದೆ ಪುರುಷಕಾರದ ಪೆಂಪಂ।
ಚಿಂತಿಸಿ ತರಿಸಿ ಮಹೀಶನ
ನೆಂತಪ್ಪೊಡವೆಂನಗೆ ಪುರುಷಭಿಕ್ಷಮನಿಕ್ಕಿಂ ॥ 111 ॥

ವ ॥ ಎಂದು ಪುಯ್ಯಲಿಡುವ ಭಾನುಮತಿಯ ಪುಯ್ಯಲಂ ಕೇೞ್ದು ಸುಯೋಧನಂ ಬಂದ ವೃತ್ತಾಂತಮನಱಿದು ಭಾನುಮತಿಯನಿಂತೆಂದಂ ॥

ಮ ॥ ಸುರಿಯಲ್ಬೇಡಮದಕ್ಕೆ ಬಾಷ್ಪಜಳಮಂ ನಿನ್ನಾಣ್ಮನಂ ನಿನ್ನೊಳೊಂ
ದಿರದಾಂಕೂಡುವೆವೆಮ್ಮೊಳಾದ ಕಲಹಕ್ಕೆಂತಾದೊಡಂ ಕೇಳ ನೂ।
ರ್ವ್ವರೆ ದಲ್ತಾರವರಾವುಮುರ್ವ್ವರೆವಲಂ ಮತ್ತೊರ್ವ್ವರೊಳ್ತೊಟ್ಟ ಸಂ
ಗರರಂಗಕ್ಕೆ ಜನಕ್ಕೆ ಕೂಡುವೆಡೆಯೊಳ್ನೂಱಯ್ವರಾವಲ್ಲವೇ ॥ 112 ॥

ವ ॥ ಎಂದು ನುಡಿದು ಯುಧಿಷ್ಠಿರಂ ಪಾಱುಯ ಪಸುಗೆಯನಱಿದು ನುಡಿದೊಡಾಪೊಣ್ಬೆಸನಂ ಕರಮಾಸೆವಟ್ಟು ತನ್ನ ಕೆಲದೊಳಿರ್ದ್ದ ಸಾಹಸಾಭರಣನ ಮೊಗವುಂ ನೋಡಿ ॥

ಕಂ ॥ ಪಿಡಿದುಯ್ದುದು ಗಂಧರ್ವ್ವರ
ಪಡೆಗಡ ನಿವ್ಮಣ್ಣನಂ ಸುಯೋಧನನನಿದಂ ।
ಕಡೆಗಣಿಸಲಾಗದೆವುಗೀ
ಗಡೆ ಬೇಗಂ ಬಿಡಿಸಿ ತಪ್ಪುದಾತನ ಸಖ್ಯಯಂ ॥ 113 ॥

ವ ॥ ಎಂಬುದುಂ ಮಹಾಪ್ರಸಾದವುಂತೆಗೆಯ್ವೆನೆಲ್ಲಿಪೊಕ್ಕೊಡಂ ಕೊಂಡುಬಂದವೆನೆಂದು ಬಗೆಯದಿದಿರಂ ನೋಡುತ್ತಿರಿವೆಂದು ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ ನೀವಿ ಜೇವೊಡೆದು ಗಂಧರ್ವ್ವರ ಪೋಪಬಲ್ಲಿಯಂ ಜೆಗಗೊಂಡು ಹಿಮವಂತನಲ್ಲಿ ರಾಕ್ಷಸಿಕೊಟ್ಟ ಚಾಕ್ಷುಷಿಯೆಂಬ ವಿದ್ಯೆಯಿಂ ತನ್ನಕಣ್ಣನಭಿಮಂತ್ರಿಸಿಕೊಂಡು ಪಾಱುವಗಾಂಧರ್ವ್ವಬಲಮಂ ಜಲಕ್ಕನೆ ಕಂಡು ॥

ಕಂ ॥ ಕೊಳ್ಳೊಕ್ಕಳ್ಳಿಂದೆಜಕ್ಕಿಂಡೆ ವಿಳ
ಯೋಳ್ಕದತೆಱದಿಂದೆ ಮುಸುಱುಳಿ ದಿವ್ಯಾಸ್ತ್ರಚಯಂ ।
ಗಳ್ಕೊಳೆ ಗಾಂಧರ್ವ್ವಬಲಂ
ಗಳ್ಕೆಡೆದುವು ವಿಂಟ್ಟೆಗೊಂಡ ಬಟ್ಟೆಯತೆಱದಿಂ ॥ 114 ॥

ವ ॥ ಅಂತಲ್ಲಿ ಪದಿನಾಲ್ವುಸಿವ್ವರಂ ಗಂಧರ್ವ್ವರಂ ಕೊಂದೊಡೆ ಚಿತ್ರಾಂಗದಂ ಪೆಱ್ಚಿ ಕೊಳ್ನಿನ್ನ ನಚ್ಚಿನ ಸೆಱೆಯನೆಂದು ಬಿಸುಟೊಡೆ ನೋಯಲೀಯದೆ ನೆಲದಾಕಾಶದೆಡೆಯೊಳಂಬುಗಳಂ ತರತರದಿಂದೆಚ್ಚು ಸೋಪಾನಂಮಾಡಿ ದುರ್ಯ್ಯೋಧನ ದುಶ್ಶಾಸನರನಿಲ್ಲಿಪು ಕಟ್ಟುಗಳಂ ಬಿಡದೊಡಗೊಂಡು ಬಂದು ಧರ್ಮ್ಮಪುತ್ರಂಗೆ ತೋಱುದೊಡೆ ಸಾಹಸಾಭರಣನ ಸಾಹಸವನಳವಲ್ಲದೆ ಪೊಗಟ್ಟು ತೊಡೆಯನೇಱಿಸಿಕೊಂಡು ಬಾಯೊಳ್ತಂಬುಲಂಗೊಟ್ಟಂ ಪಾಂಚಾಲರಾಜತನೂಜೆ ಪಗೆವರ ಕಟ್ಟುವಟ್ಟ ದ್ವೇಳದಿಕ್ಕೆಗೆ ಸಂತಸಂಬಟ್ಟು ಸೈರಿಸಲಾಱದಿಂತೆಂದಳ್ ॥

ಕಂ ॥ ಎವ್ಮಂ ಪಿಡಿದೆಲೆವಂದಿನ
ನಿವ್ಮದಟುಗಳೀಗಳೆತ್ತವೋದುವೊ? ಪಿಡಿವ ।
ಟ್ಟವ್ಮ ಬಱಿಲ್ದಿರೆ! ಕಂಡಿರ!
ನವ್ಮಳವಂ ನಿವುಗಮಿಗಳೀಯೆಡಱಾಯ್ತೀ ॥ 115 ॥

ವ ॥ ಎಂದು ಸಾಯೆ ಸರಸಂನುಡಿದು ಕಟ್ಟಿದ ಕಟ್ಟುಗಳಂ ತಾನೆ ಬಿಟ್ಟು ಕಳೆದು ಭಾನುಮತಿಗೆ ನಿನ್ನಾಣ್ಮನುವುಂ ನಿನ್ನ ಮಯ್ದುನನುವುಂ ನೀನೊಪ್ಪುಗೊಳ್ಳಿಂಬುದುಂ ದುರ್ಯ್ಯೋಧನಂ ದಾಡೆಗಳೆದ ಕಾಳಿಕನಂತೆಯುಂ ಕೋಡುಡಿದ ಮದಹಸ್ತಿಯಂತೆಯುಂ ಗಳಿತಗರ್ವ್ವನಾಗಿ ಪಾಂಡವರ ಮೊಗವುಂ ನೋಡಲ್ನಾಣ್ಬಿ ಮದಗಜಪುರಕ್ಕೆ ಪೋಗಿ ಜಾದಿನೊಳ್ಗೆಲ್ದ ನೆಲನಂ ಸಯಜ್ಞನಾಗಿ ತನ್ನೊಳ್ಪತ್ತಿಸಿ ದುಶ್ಶಾಸನನಂ ಯುವ

ರಾಜನಂ ಮಾಡಿ ನಿರ್ವ್ಯಾಜವರಸುಗೆಯ್ಯುತ್ತುಮಿರ್ದ್ದನಿತ್ತ ಯುಧಿಷ್ಠಿರನಟ್ಟಿದ ಕಿರಾತದೂತಂ ತಾಪಸವ್ಯಾಜನಾಗಿ ಪೋಗಿ ಸುಯೋಧನನ ವಾರ್ತ್ತೆಯೆಲ್ಲಮುಮನಱಿದು ಬಂದಜಾತಶತ್ರುಗಿಂತೆಂದು ಬಿನ್ನಪಂಗೆಯ್ದಂ ॥

ಚಂ ॥ ಕಿವಿಗಿನಿದುಂ ನೃಪಂಗೆ ಹಿತಮುಂ ನುಡಿಯೆಲ್ಲಿಯುಮಿಲ್ಲ ಕೇಳ! ಬಿ
ನ್ನವಿಸುವೆನೆನ್ನ ಕಂಡುದನೆ ಜಾದಿನೊಳುಕ್ಕೆವದಿಂದೆ ಗೆಲ್ದನಿ ।
ನ್ನವನಿತಳಂ ಕರಾಂಚಲದಪ್ರೋಲ್ಲನಗಿಂ ಪೆಸಕೆಯ್ಯೆ ಕೆಯ್ಗೆ ಮಾ
ನವನಯಮಾಬೃಹಸ್ಪತಿಯುಮಂ ಗೆಲೆವಂ ವೆಂದು ಧಾರ್ತ್ತರಾಷ್ಟ್ರನಾ ॥ 116 ॥

ಮ ॥ 'ಮೊದಲೊಳ್ನೀನಮರ್ದ್ದೊಪ್ಪಿಯಟ್ಟಿದುದನೀ' ಯೆಂದಟ್ಟಿದಿಟ್ಟಿರ್ದ್ದೊಡಂ
ಗದಸಾಮರ್ತ್ಥ್ಯದಿನಟ್ಟಿದೋಲೆಗೆ ಮಹಾಪ್ರತ್ಯಂತಭೂಪಾಳರ ।
ಟ್ಟಿದ ಕಾಳಂಗಗಜೇಂದ್ರದಾನಜಲಧಾರಾಸಾರದಿಂ ನೋಡ ಕುಂ
ದಿದುದಿಲ್ಲೊಳ್ಗೆಸಲಾಸುಯೋಧನನೃಪದ್ವಾರೋಪಕಂಠೆಂಗಳೊಳ್॥ 117 ॥

ಕಂ ॥ ನಸಿದಂ ಮೆಯ್ಮರೆದಂ ನಿ
ದ್ರಿಸಿದಂ ಕಂಜೇಗಿದಂದವುಂತಪ್ಪುದನಾ ।
ಳ್ವೆಸಕಂಗೆಯೆಂದನೆಂಬೀ
ಪಿಸುಣನಣಂಕೇಳ್ದಿನಿಲ್ಲ ಬೀಡಿನೊಳಿವನಾ ॥ 118 ॥

ಆಱುಯದ ಕಾರ್ಯ್ಯದತೆಱನೇ
ನಱಿವಂತುಟುವೊಗ್ಗೆ ದೇವರಡಿಯೊಳ್ ವಱೆದೆಂ ।
ನೆಱೆಗಱುಪೆಂ ಪಲವಂ ತಾಂ
ವಱಿಸೊಂದಿವನಲ್ಲನಹಿತನೆಱ್ಚಿತ್ತಿರ್ದ್ದಂ ॥ 119 ॥

ವ ॥ ಎಂದು ಬಿನ್ನಪಂಗೆಯ್ದು ಕಿರಾತದೂತಂ ಪೋಪುದು ಮಾವಮಾತೆಲ್ಲಮುಂ ಕೇಳ್ದು ಯಜ್ಞಸೇನತನೂಜೆ ಯಮತನೂಜಂಗಿಂತೆಂದಳ್ ॥

ಕಂ ॥ ಆವಡವಿಗಳೊಳ್ಪಣ್ಪಲ
ವಾವಗವೊಳವಲ್ಲಿಗಱಸಿ ಪರಿಪರಿದು ಕರಂ ।
ತಾವಡಿಗೊಳ್ವೀಭೀಮನ
ಜೀವಸವಿಂದು ನಿನ್ನ ಮನಮನೊನಲಿಸಿತಿಲ್ಲಾ! ॥ 120 ॥

ಉ ॥ ಪೋಗಿ ಸುರರ್ವ್ವಪರ್ವ್ವತದ ಕಾಂಚನತೂಣಿಗಳಂ ಪರಾಕ್ರಮೋ
ದ್ಯೋಗದಿನೆತ್ತಿ ತಂದು ನಿನಗಿತ್ತದಟಂ ಬಡವಟ್ಟು ಪೆಟ್ಟದೊ ।
ಳ್ಪೋಗಿ ತೊಲಲ್ಲು ನಾರ್ಗ್ಗಳನುಡಲ್ತರುತಿರ್ದ್ದಲೆ ಮಾಡಲಾರ್ತ್ತನಿ
ಲ್ಲಾಗಳೆ ಕೋಪಮಂ ನಿನಗೆ ಸಂಚಿತಶೌರ್ಯ್ಯದಿನಾರ್ಜುನಂ ಜಯಂ॥ 121 ॥

ಕಂ ॥ ಕಾಯಕ್ಲೇಶದಿನಡವಿಯ
ಕಾಯಂ ಮನವೊಪ್ಪಿ ತಿಂದನೀನಲ್ಲದೆ ನೊಂ ।
ದೀಯಮಳರಾವ ತೆಱದಿಂ
ನೋಯಿಸರೈ ನಿನ್ನ ನನ್ನಿಕಾಱನ ಮನಮಂ ॥ 122 ॥

ಆ ದುಶ್ಶಾಸನನಿಂದೆನ
ಗಾವಪರಾಭವಮನೀನ್ವಂ ಬಗೆಯದೊಡಿಂ ।
ತಾದರವೆ ತೊವಲ್ಗಾರುಮ
ನಾರದೀನಿನ್ನ ಮನಕೆ ಕಿಂಕೆಯುಮಿಲ್ಲಾ ॥ 123 ॥

ಎಂಮಯ್ವರ ಜೀವಸಮಂ
ನೀಂ ಮನದೊಳ್ನೆನೆಯಯವೊಡಿನ್ನಂ ನಿನ್ನಂ ।
ನೀಂ ಮರುಳೆ ಬಗೆಯುದಂತುಂ
ಘುಂವೆಂಬಡವಿಯೊಳಡಂಗಿ ಚಿಂತಿಸುತಿರ್ಪಾ ॥ 124 ॥

ಸಮಮನೆ ಕೆಯ್ಕೊಳ್ವೊಡೆ ಬಿ
ಲ್ಲುಮಂಬುಮಂ ಬಿಸುಡು ತಪಕೆ ನೀಂ ಬಗೆವೊಡೆ ವಿ ।
ಕ್ರಮಮಂ ಪಗೆಯಂ ಕಿಡಿಸುವೆ
ಸಮದಿಂ ಮುನಿಗಾಯ್ತು ಸಿದ್ಧಿ ಭೂಪತಿಗಾಯ್ತೀ ॥ 125 ॥

ತಪ್ಪನೆ ನುಡಿಯದನೆಂಬುದಿ
ದೊಪ್ಪದು ನಿನಗಹಿತರೆಯ್ದೆ ಪರ್ಬಿರ್ದ್ದರವ
ರ್ತ್ತಿಪ್ಪದ ಬೞಿಕ್ಕೆ ತಪ್ಪಿದ
ತಪ್ಪಲಿಗಳೆ ನಿನಗದೊಪ್ಪಮಲ್ಲದೆ ತಪ್ಪೇ ॥ 126 ॥

ವ ॥ ಎಂದಪಾಂಚಾಳರಾಜ ತನೂಜೆಯಮಾತಿಂಗೆ ಪೆಂಬಲಂಬಾಯ್ವಂತೆ ಭೀಮಸೇನ ನಿಂತೆಂದಂ ॥

ಕಂ ॥ ನುಡಿಯದೆ ಪೆಱತಂ ದ್ರೌಪದಿ
ನುಡಿದಳ್ತಕ್ಕುದನೆ ಕೇಳವಿಂ ಕೇಳದಿರಿಂ ।
ನುಡಿಗಿನ್ನೆಡೆಯಿಲ್ಲದೊಡಂ
ನುಡಿಯಿಸಿದಪುದೆನ್ನ ಮನದವುನಿಸವನಿಪತೀ ॥ 127 ॥

ನಲ್ಕುಂನೃಪವಿದ್ಯೆಯನಾ
ಡಲ್ಕಲ್ತುಂ ನೆಱೆಯೆ ಕಲ್ತೆಯಿಲ್ಲಾಗದೆ ಸೋ ।
ಲಲ್ಕೆ ನೃಪ ದೊರೆಯೆ ನೆಲನಂ
ವಲ್ಕಲವಸನಕ್ಕೆ ಮೆಯ್ಯನಾಂಪುದು ಪೆಂಪೇ ॥ 128 ॥

ಉ ॥ ನನ್ನಿಯ ದಾಯಿಗಂಗರಸನೇಳದಮಾಡಿದನೆಂಬ ಮಾತುಗ
ಳ್ನಿನ್ನವು ಕೂರದರ್ ಧರೆಯನೊಟ್ಟಜೆಯಂ ಕೊಳೆ ಕೊಟ್ಟುಬಂಟುಗೆ ।
ಟ್ಟನ್ನು ಮರಣ್ಯದೊಳ್ನವೆದಪಂ ಯಮನಂದನನೆಂಬ ಬನ್ನಮಂ
ಮುನ್ನವೆ ಸೋಂಕಿ ಕಣ್ಮಲೆವ ಮಾತುಗಳೆಲ್ಲರ ಪೇಳ್ವ ಮಾತುಗಳ್ ॥

ಕಂ ॥ ಸಲೆಸಂದಿರ್ಪತ್ತೊಂದುಂ
ತಲೆವರೆಗಂ ನಮಗೆ ಪರಿಭವಂ ಕೃಷ್ಣೆಯ ಮುಂ ।
ದಲೆಯಂ ಪಿಡಿದೆಳೆವಲ್ಲಿಯಿ
ತಲೆವಿಡಿದನ್ನವ್ಯ ಬೀರಮುಂ ಕೌರವರುಂ ॥ 130 ॥

ಚಂ ॥ ಮುಲೆಮುಲೆದುರ್ಕಿಸೊರ್ಕ್ಕಿ ಸಭೆಯೊಳ್ಕುಲಪಾಂಸನನೀಕ್ಷಿಸಕೋ
ಮುಲೆಯ ವಿಲೋಲನೀಲಕಬರೀಭರಮಂ ತೆಗೆವಾಗಳಲ್ಲಿ ಕೆ ।
ಯ್ಗುಲಸಿದುವಂತೆ ಪತ್ತಿ ಬೆರಲಚ್ಚುಗಳಚ್ಚಿ ಮೂದಂತೆ ಕೊಂಕುಗ
ಳ್ತಲೆನವಿರೊಂದಿ ಮೂದಲಿಸುವಂತೆವೊಲಿರ್ದುವು ನವ್ಯ ಬೀರಮುಂ ॥

ಮ ॥ ಅಸಿತೇಂದೀವರಲೋಲಲೋಚನೆಯನಾದಂ ತತ್ಸಭಾಮಧ್ಯದೊ
ಳ್ಪಸುವಂಮೋದುವವೋಲೆ ವೋದೆಯುಮುದಂ ಕಂಡಂತೆ ಪಲ್ಗಚ್ಚಿ ಸೈ ।
ರಿಸಿದೆಂ ನಿನ್ನಯ ನನ್ನಿಗಿನ್ನೆವರಮಾದುಶ್ಶಾಸನೋರಸ್ಥಳೋ
ಷ್ಣಸೃತಾಸೃಗ್ಜಲಪಾನಮಂ ಬಯಸಿ ಬಾಯ್ತೀರ್ಪೆಸೆ ಸೈತಿರ್ಪೆನೇ ॥ 132 ॥

ವ ॥ ಎಂದು ಗದಾದಂಡಮುಂ ಭುಜಾದಂಡದೊಳಳವಡಿಸಿಕೊಂಡು ಪಗೆವರಿರ್ವ್ವ
ರೆಸೆಯಂ ನೋಡಿ ತಳರಲ್ಬಗೆದ ಭೀಮಸೇನನಂ ಧರ್ಮ್ಮಪುತ್ರಂ ಕೋಪತಾಪದಿಂ
ಮುಸಗಿದ ಮದಗಜಮುನೆ ಮಾಣಿಸುವಂತೆಂತಾನುಂ ಮೃದುವಚನಂಗಳಿಂ ಮುಳಸನಾ
ಲ್ಕುಸುತ್ತಿರ್ದನಿರ್ಪ್ಪನ್ನೆಗಂ ॥

ವ್ಯಾಸಾಗಮನಂ

ಚಂ ॥ ಕನಕಪಿಕಂಗತುಂಗಜಟಿಕಾವಳಯಂ ಕುಡುವಿಂಬಿನೋಳಿಯಂ
ನೆನೆಯಿಸೆ ನೀಲನೀರದತನುಚ್ಛವಿ ಭಸ್ಮರಜೋವಿಲಿಪ್ತ ಮಾ ।
ಜನಗಿರಿಯಂ ಶರಜ್ಜ್ವಳಿತರಂ ಕವಿದಂತಿರೆ ಚೆಲ್ವನಾಳ್ದ ಭೋ
ಗನೆ ನಭದಿಂದವಯಂದಿಳಿದನಲ್ಲಿಗೆ ದಿವ್ಯಪರಾಶರಾತ್ಮಜಂ ॥ 133 ॥

ವ ॥ ಅಂತು ನಭೋವಿಭಾಗದಿಂ ಧರಾವಿಭಾಗಕ್ಕಿಳಿತಂದ ಕೃಷ್ಣದ್ವೈಪಾಯ
ನನಂ ಕಂಡಜಾತಶತ್ರು ತನ್ನೀಯೂದ ಸ್ಫಟಿಕಶಿಲಾತಳದ ಪಟ್ಟಕದಿಂದಿಳಿದು ನಿಜಾ
ನುಜಸಹಿತವಿದಿರ್ವ್ವಂದು ಧರಾತಳನಿಷ್ಠಲಲಾಟಪಟ್ಟಂ ಸಾಷ್ಟಾಂಗವೆಱಗಿ ಪೊಡ
ವಟ್ಟು ತದೀಯಾಶೀರ್ವ್ವಾದಮನಾಂತು ತಚ್ಛಿಲಾತಳದೊಳ್ಕುಳ್ಳಿರಿಸಿ ವನಕುಸುಮಂಗ

ಳಂದರ್ಘ್ಯಮೆತ್ತಿ ಸರೋವರಜಲಂಗಳಿಂ ಪದ್ಮಪತ್ರಪುಟಂಗಳಿಂ ತಂದು ಪದಪದ್ಮಂಗಳಂ ಕಚ್ಚಿ ತತ್ಪಾದಪವಿತ್ರೋದಕಂಗಳನನಿಬರು ಮುತ್ತವಾಂಗದೊಳ್ತಳೆದುಕೊಂಡಿರ್ದುಗಳ್ತತ್ಯವತೀನಂದನಂ ತನ್ನ ಮಕ್ಕಳ ಸಾಯಸಂಗಳ್ಗೆ ಮನ್ಯುವಿಕ್ಕು ಕಣ್ಣೀರಂ ನೆರೆಪೆ ಮಹಾಪ್ರಸಾದವೆಂದು ಧರ್ಮ್ಮನಂದನನಿಂತೆಂದಂ ॥

ಉ ॥ ನೀಗಿದುದೀಗಳೆಮ್ಮ ವನವಾಸಪರಿಕ್ರಮಮಿಂಗಳಾಳ್ದಿವಾ
ಸಾಗರವೇಖಳಾವೃತಧರಿತ್ರಿಯನೀಗಳಡಂಗಿತೆಮ್ಮ ಹೈ ।
ದ್ರೋಗಮನೇಕವಂಗಳಪರಂಪರೆಗಳ್ವೊರೆಕೊಂಡುವೀಗಳೇ
ನಾಗದೊ ಪೇೞ್ವವಚ್ಚರಣದಿವ್ಯಸರೋಜಯುಗಾವಲಂಬದಿಂ ॥ 134 ॥

ಕಂ ॥ ಆಪತ್ಪಯೋಧಿಯೊಳಗ
ತ್ಯಾಪತ್ತಿಂದುೞ್ಕಿ ಮುೞ್ಕಿ ನವೆವೆವುಗೆ ಕರ ।
ಣ್ಪಾಪಹರ ನೀನೆ ಬಗೆದೆವು
ಗಾಪತ್ಪತಿಕಾರಮಾವುದೀಗಳೆ ಬೆಸಸಿಂ ॥ 135 ॥

ಖಚರಪ್ಲುತಂ ॥
ಪರಕುರಾವನನಂಜಿಸಿಬೀರಕ್ಕಾಗರವಾದ ನದೀಜನೇ
ದೊರೆಯನೇದೊರೆಯಂಗಳ! ಕುಂಭಪ್ರೋದ್ಭವ ನಾತನನೂನುವೇ ।
ದೊರೆಯನೇದೊರೆಯಂ ಕೃಪನಂತಾಪಾಲ್ಮಿಯೊಳಂಕದಕರ್ಣನೇ
ದೊರೆಯನಿಂತಿವರೊರ್ವರಿನೊರ್ಬ್ಬರ್ಗರ್ವ್ವಿತರಗ್ಗಳವಲ್ಲರೇ ॥ 136 ॥

ಕಂ ॥ ಪ್ರಳಯದುರಿ ಕಾಳಕೂಟದ
ಗುಳಿಗೆ ಪುರಾಂತಕಲಲಾಟನೇತ್ರಾನಳನೊಂ ।
ದಳವಿಗವುಗ್ಗಳವುಗ್ಗಳ
ಮುಳಸುಗಳಿಂ ಮುಳಿದು ತುಡುವ ದಿವ್ಯೇಷುಗಳುಂ ॥ 137 ॥

ವ ॥ ಅದುಕಾರಣದಿಂದವರಂ ಗೆಲ್ವಾಗಳ್ವಿಕ್ರಮಾರ್ಜ್ಜುನನಲ್ಲದೆ ಗೆಲ್ಲನದಱಿಂದಾತಂಗೆ ದಿವ್ಯಾಸ್ತ್ರಂಗಳಂ ಪಡೆಯಲ್ವೇೞ್ವುದೆಂದಂ ಪಡೆವುಪಾಯಮುಮಂ ಮಂತ್ರಮುಮನುಪದೇಶಂಗೆಯ್ಯಲ್ವಂದೆನೆಂದು ಯುಧಿಷ್ಠಿರಂಗೆ ಪೇೞ್ದುವಿಕ್ರಮಾರ್ಜ್ಜುನಂಗೆ ಮುಂ ತ್ರಾಕ್ಷರಂಗಳನುಪದೇಶಂಗೆಯ್ದು ಗುಹ್ಯಕನೆಂಬನಂ ಸ್ಮರಣಮಾತ್ರದೊಳ್ಬರಿಸಿ ಸಾಹಸಾಭರಣನನಿಂದ್ರಕೀಲನಗೇಂದ್ರಮನೆಯ್ದಿಸಿಬಪ್ಪುದೆಂದು ಪೇೞ್ವುದುಂ ಧರ್ಮ್ಮಪುತ್ರನಾಮುನೀಂದ್ರಂಗೆ ಸಾಷ್ಟಾಂಗವೆಱಗಿ ಪೊಡವಡೆ ಪರಸಿ ಪಯೋಧರಪಥಕ್ಕೊಗೆದನಿತ್ತವಿಕ್ರಾಂತತುಂಗನುಂ ಧರ್ಮ್ಮಪುತ್ರಂಗಂ ವಾಯುಸುತಂಗಂ ಪೊಡವಟ್ಟು ಬೆಸಕೇೞ್ವೆನೆಂದಾಗಳ್ಪಂಚಾಳರಾಜತನೂಜೆಯಿಂತೆಂದಳ್ ॥

ಕಂ ॥ ಬಗೆಯುದೆ ಮೆಯ್ಗೊಗವುಂ ಬಗೆ
ಪಗೆವರ ಕಡುವೆರ್ಚ್ಚ ನೆನ್ನಪೂಣ್ಕೆಯನೆರ್ದೆಯೊ ।
ಳ್ಪಗೆ ಮುನಿಯು ಮಂತ್ರಪದವಂ
ಬಗೆ ಕೂಡುಗೆ ನಿನ್ನ ಬಗೆದ ಬಗೆಯೊಳ್ಪಾರ್ತ್ಥ ॥ 138 ॥

ವ ॥ ಎಂದು ಬುದ್ಧಿವೇಱುನೋಳಮನಱಿದು ॥

ಉ ॥ ಬಳ್ವಳನೀಳ್ದ ಕಣ್ಮಲರ ತಳ್ತೆವೆಯಿಂ ಕರೆಗಣ್ಮಿ ಬೆಳ್ಗಡ
ಲ್ಗಳ್ಪರಿಯಲ್ಕವೂಟಿಸಿದೊಡೊಯ್ಯನೆ ವಂಗಳಗೀತಿ ಭೀತಿಯಂ ।
ತಳ್ವದೆ ವಾಡೆ ಬಾಷ್ಪಜಳಮಂ ಕಳೆದಲ್ತಿಱುನೀಯೆ ಸಂಬಳಂ
ಗೊಳ್ವವೊಲಾತಳೋದರಿಯು ಚಿತ್ತವನಿಱ್ಕುಳಿಗೊಂಡನಂತರಂ ॥ 139 ॥

ಇಂದ್ರಕೀಲವೃತ್ತಾಂತಂ

ವ ॥ ಅಂತು ಯಾತೋಪ್ಯುಕ್ತನಾಗಿ ಗುಹ್ಯಕನ ಪೆಗಲನೇಱಿ ಗಂಧೇಭವಿದ್ಯಾ
ಧರಂ ವಿದ್ಯಾಧರನಂತೆ ಗಗನತಳಕ್ಕೊಗೆದು ವಹೀಂದ್ರಕೀಲಾಭಿಮುಖನಾದಾಗಳ್ ॥

ಚಂ ॥ ಕಡವಿನ ಕಂಪಡಂಗಿದುದು ಜಾದಿಯು ಸೊಂಪೆಸೆದತ್ತು ಸೋಗೆಯುಂ
ಕ್ಕುಡುಗಿದುದೆಂಜಕೆಯುಂಕ್ಕುಪೊಸತಾಯತ್ತು ಮುಗಿಲ್ಗಳನೀಳ್ದ ಕಪ್ಪುವೋ।
ಗಡಿಸಿದುದಿಂದುವಂಡಳದಕರ್ಪೆಸೆದತ್ತು ಘನಾಗಮಂ ಪೊದ
ಳ್ದಿಡೆ ಕರದಾಗಮಂ ನೆಱೆಯೆ ಪರ್ಬೆ ಸವುಸ್ತವಹೀವಿಭಾಗಮಂ॥ 140 ॥
ಅಳ ಬಿರಿದಿರ್ದ್ದ ಜಾದಿಯೊಳೆ ಪಲ್ಮೊದೆಯುತ್ತಿರೆ ಹಂಸೆ ಪೊತ ಪೂ
ಗೊಳದೊಳೆ ರಾಗಿಸುತ್ತಿರೆ ಶುಕಾವಳಿ ಬಂಧುರಗಂಧಶಾಳಿಯಂ ।
ಕುಳದೊಳೆ ಪಾಯ್ವವಾಯ್ವುನಲಿಯುತ್ತಿರೆ ಸಾರೆ ಚಕೋರವಿಂದುವುಂ
ಡಳಗಳತಾಮೃತಾಸವವನುಂಡುಸಿರುತ್ತಿರೆ ಚಿಲ್ವ ಶಾರದಂ ॥ 141 ॥

ಮ ॥ ಪುಳಯೊಳ್ಕಚ್ಚಿದ ಬಾಳ ಬಣ್ಣವನೆ ಪೋಲ್ವುಕಾಳಮಂ ಪರ್ವಿದ
ತ್ತೆಳೆಯಂರಂಜಿಪಪಳ್ಮಗಿಲ್ಮಗಿಲ ಪೆಳ್ಪೊಳ್ಪೊಕ್ಕ ತಳ್ಪೊಯ್ಯೆ ಬ ।
ಳ್ವಳನೀಳ್ದರ್ದ್ದ ದಿಶಾಳಿ ಶಾಳವನಗಂಧಾಂಧದ್ವಿರೇಫಾಳಿ ಕ
ಣ್ಗೊಳಸುತ್ತೊರ್ಮ್ಮೆಯೆ ಬಂದುದಂದು ಕರದಂ ಲೋಕಕ್ಕೆ ಕಣ್ಬಿರ್ಪಿನಂ॥

ವ ॥ ಆಗಳ್ವಿಜಯಂ ತನ್ನ ವಿಜಯಶ್ರೀಯ ಬರವಿಂಗಿದಿರ್ವ್ವಂದಂತೆ ಬಂದ ಕರ
ತ್ಕಾಲಶ್ರೀಯ ನುತ್ಕಂಠಿತಹೃದಯನಾಗಿ ಮೆಚ್ಚಿ ನೋಡುತ್ತುಂ ಬಪ್ಪನ್ನೆಗಂ ಮುನ್ನೆ
ಶಾರದನೀರದಂಗಳೆಲ್ಲವೊಂದೆಡೆಗೆ ತೆರಳ್ದೊಟ್ಟಿ ಬೆಟ್ಟಾದಂತಿರ್ದ್ದ ನೀಹಾರಗಿರಿಯಂ
ಕಂಡಿದಾವುದೆಂದು ಬೆಸಗೊಳೆಗುಹ್ಯಕನಿಂತೆಂದಂ ॥

ಮ ॥ ವಿದಳತ್ಕುಂದಕಳಾಂಕಕಳಂಖಧವಳಂ ಗಂಧೇಭದಾನಾಂಬುಪೂ
ರ್ಣ್ಣದರೀಸುಂದರಕಂದರಂ ವ್ಯಗಪತಿಪ್ರಧ್ವಾನಗರ್ಜ್ಜದ್ಗುಹಂ ।
ಮದಿರೋನ್ಮತ್ತ ನಿಳಿಂಪಕಿಂಪುರುಷಕಾಂತಾರಬ್ಧಸಂಗೀತವೊ
ಪ್ಪುದುದಲ್ತೇ ಸುರಸಿದ್ಧದಂಪತಿರತಿವ್ಯಾಪ್ತೋರುಹೈವಾಚಳಂ ॥ 143 ॥

ಕಂ ॥ ಲಳಿತೋತ್ಸವಧ್ವಜಾಂಶುಕ
ವಿಳಸನವುಂ ಮುಂದೆ ನಿನಗೆ ತೋರ್ಪಂತಿರೆ ಕ।
ಣ್ಮೊಳಸಿದ್ದುದು ನೋಡ! ಹಿಮಾ
ಚಳಶಿಖರದವೋಲೆ ಪಾಯ್ವ ಗಂಗಾಸ್ರೋತಂ ॥ 144 ॥

ವ ॥ ಎಂದು ಗುಹ್ಯಕಂ ಹಿಮವನ್ಮಹೀಧರವುಂ ತೋಱುತ್ತುಂ ಬಂದು ॥

ಉ ॥ ಸಾಳತಮಾಳಕಾನನಭರೋದ್ಧತಸಿಂಧುರಕಂಠಗರ್ಜ್ಜನಾ
ಭೀಳವನಂಬರೇಚರವಧೂಕರಪಲ್ಲವಸಂಚಳಲ್ಲತಾಂ
ದೋಳವನಾಶ್ರಿತಾದ್ರಿನದಕೂಳವನತ್ಯಧರೀಕೃತಾಂತಕು
ತ್ಕೀಳವನಿಂದುಕಾಂತನುಯಕೈಳವನೆಯ್ದಿದನಿಂದ್ರಕೀಳವಂ ॥ 145 ॥

ಮ ॥ ಕವಳಾಂತರ್ಗ್ಗತಗಂಧಬಂಧು ನಯದಿಂ ಬಂದಪ್ಪಿಕೊಳ್ವಂತೆ ಗಾ
ಳಿ ವನಂಗೊಂಡಿರೆ ತೀಡೆ ಭೃಂಗರುತಿಗಳ್ಮಾಂಗಲ್ಯಗೇಯಂಗಳಂ ॥
ದವನಂದೀಯೆ ಮಡಲ್ತು ಪೂತ ಲತೆಗಳ್ಕೈಯ್ಗೆಯ್ವು ನೀಡಲ್ಕವು
ರ್ವ್ಯವನೀವಂತೆವೊಲಾದುದದ್ರಿ ಹರಿಗಂಗಿಷ್ಟಾರ್ತ್ಥಸಂಸಿದ್ಧಿಯಂ॥ 146 ॥

ವ ॥ ಆಗಳ್ಗುಹ್ಯಕನಿಂದ್ರಸುತನನಿಂದ್ರಕೀಲನಗೇಂದ್ರದ ಚೆಂದ್ರಕಾಂತಶಿಲಾತಲ
ದೊಳಲುಪಿ ಬೀೞ್ಕೊಂಡು ಪೋದನಿತ್ತ ವಿಕ್ರಮಾರ್ಜ್ಜುನಂ ಪರಂತಪಂ ತಪೋನಿಯಮ
ನಿಯಮಿತನಾಗಿ ॥

ಮ॥ ಸ್ರ॥ ಭಸಿತಂ ಕರ್ಪ್ಪೂರಕಾಳಾಗರುಬಹುಳರಜಂ ವಲ್ಕಲಂ ಕಲ್ಪವೃಕ್ಷ
ಪ್ರಸವಂ ಯಜ್ಞೋಪವೀತಂ ಕನಕಕಮಳಿನಾಳೋತ್ಕರಂ ನಿಚ್ಚ ನಿಚ್ಚಂ ।
ಪೊಸತೆಂಬಂತಾಗೆ ಪಾರ್ತ್ಥಂಗೊಸೆದು ತುಡಲುಡಲ್ಪೂಸಲುಂ ಸಾಲ್ವನಂ ಸಾ
ಧಿಸಿತುದ್ಯದ್ಭಕ್ತಿಭಾರಾನತವನವನಿಪಾವ್ಯಂದಮಾನಂದದಿಂದಂ ॥ 147 ॥

ಚಂ ॥ ಅದಿರದ ಚಿತ್ತಮುಳ್ಕದ ಮನಂ ಬಗೆಗೊಳ್ಳದ ಮೋಹಮೆತ್ತಿ ಕ
ಟ್ಟಿದ ಜಡೆ ತೊಟ್ಟ ರತ್ನಕವಚಂ ಕೊರಲೊಳ್ಸಲೆ ಕೋದ ಬಿಲ್ಪ್ರಯ ।
ತ್ನದೆ ಬಿಗಿದಿರ್ದ್ದರಲ್ಪೊಣೆ ವಿಸುಪ್ಪಸಿಖೇಟಕವಿಂತಿವೊಂದುಕುಂ
ದದೆ ನಿಲೆ ನೋಱ್ಪು ನೋಟಕರ್ಗೆ ಸೌವ್ಯಭಯಂಕರನಾದನರ್ಜ್ಜುನಂ ॥

ವ ॥ ಅಂತು ಪರಾಶರನಂದನನುಪದೇಶದೊಳ್ತಪನಪ್ರಭಂ ತಪಂಗೆಯ್ಯಲ್ತಗು
ಳ್ಕೊಡೆ ॥

ಚಂ ॥ ಕರಿಣಿಯ ಸೀಯೆನಿಪ್ಪ ವೊಲೆವಾಲ್ಗೆ ತಗುಳ್ದುದು ತತ್ಕಿಶೋರಕೇ
ಸರಿ ಹರಿಪೋತಮಂ ಬೆದಱುತುಂ ಕರಿಪೋತಮವುಂಡುಗಚ್ಚಿ ಕೇ ।
ಸರಿಣಿಯ ಕೆಚ್ಚಲಂ ತುಡುಕುತುಂ ಪರಿದತ್ತು ಕುರಂಗಯೂಥದೊ
ಳ್ಬೆರಸಿದುವಂದು ಪೆಬ್ಬುಲಿಗಳಿಂ ವ್ರತನೂಜತಪಃಪ್ರಭಾವದಿಂ ॥ 149 ॥

ವ ॥ ಮತ್ತಮಾಗಿರ್ಮ್ಮಂದ್ರಕಂದರದೊಳ್ತಪಂಗೆಯ್ವ ತಪೋಧನರ ತಪಸ್ಸುಗಳೆಲ್ಲ
ಮಾತನತಪೋವಿಯಃಶಿಖಿಗಳಿಂ ಬೆಂದು ಬೆಂದ ನುಲ್ಲಿಯಂತೇತಕ್ಕರ್ಮಂ ಮುಟ್ಟಿಲ್ಲದೆ

ಮುಟ್ಟುಗಿಡೆ ದೇವೇಂದ್ರಂ ತಸಗಾದ ಹೃತ್ಕಂಪದೊಳಮಾಸನಕಂಪದೊಳಂ ನರೇಂದ್ರ ತಾಪಸಂತನ್ನಿಂದ್ರತ್ವಮಂ ಕೊಳಲೆಂದು ತಪಂಗೆಯ್ದಪನೆಂಬ ಸಂಕೆಯೊಳ್ತಪೋವಿಘಾತಂ ಮಾಡಿವೆಂದು ತನ್ನ ನಚ್ಚಿನಚ್ಚರಸೆಯರುಮನಾಱುಂಋತುಗಳುಮಂ ಗಂಧರ್ವ್ವರುಮಂ ಕಾವುದೇವನಂ ದಂಡನಾಯಕಂಮಾಡಿ ಪೇೞ್ದಾಗಳ್ ॥

ಚಂ ॥ ವನರುಹಗರ್ಭನೆಂಬವನುಮೆಯ್ತರೆ ಗೆಯ್ತಪಕ್ಕಿದುತ್ತಮಾಂ
ಗನೆಯಿನದಂತುಟಾದುದೆನೆ ಮತ್ತಿನ ಬೂತುತಪಂಗಳೆಮ್ಮ ಪು ।
ರ್ವ್ವಿನ ಕಡೆಯೊಂದು ಜರ್ವ್ವಿನೊಳೆ ತೀರ್ವ್ವುವವಲ್ಲದೆ ದೇವ ಬೆಂಬಲಂ
ಮನಸಿಜನೀಗಳಾಱುಋತುವುಂ ನರವೆಂದೊಡೆ ಸೋಲದಿರ್ಪ್ಪರಾರ್ ॥ 150 ॥

ವ ॥ ಎಂದು ದೇವಾಪ್ಸರೋವೃಂದಮೆನಿತಾನುಮಂದದಿಂ ಪುರಂದರನ ಪಕ್ಕದೆ ಪೊಣ್ಮಬಂದು ಗಗನತಳಮೆಲ್ಲಂ ತವ್ಮ ತೊಟ್ಟ ದಿವ್ಯಾಭರಣಕಿರಣಂಗಳೊಳ್ತೊಳಗಿ ಬೆಳಗೆಬಂದು ಮಹೀತಳಕ್ಕವತರಿಸಿ ನದನದೀಪುಳಿನಪರಿಸರ ಪ್ರದೇಶಂಗಳೊಳಂ ಕದಳೀವನಂಗಳೊಳಂ ಕನಕಲತಾವಮಂಟಪಂಗಳೊಳವಿಡಿದೆಡೆಗೊಳೆ ಪೂತವಲ್ಲಿಗೆಯುಬಳ್ಳಿಗಾವಣಂಗಳೊಳಂ ನನೆಯಜೊಂಪಂಗಳೊಳಂ ಗಗನಗಮನಜನಿತಶ್ರಮಮನಾಗ ಜಗಮನೆಯರಾಱಿಸಿ ಪಾಲ್ಗಡಲೊಳಮವರ್ದಿನೊಳಂ ಪುಟ್ಟಿದ ಕಳ್ಳ ಸೊಕ್ಕಿನೊಳಮಂತೆ ನಡುಗುವ ಬಡನಡುಗಳ್ಗೆ ನಡುಕಮುಮನಂತೆ ಪೊಡವ್ವ ಪುವ್ವುಗಳ್ಗೆ ಪೊಡವ್ವುವನುಮಂತೆ ಸೊಗಯಿಸುವ ಬೆಳವ್ಮಾಯ್ಗಳ್ಗೆ ತನಿಗಿತ್ತುಮನುಮಂತೆ ಪೊಳೆವನಿಡಿಯಲರ್ಗಣ್ಗಳ್ಗೆ ಮುಳಮುಳಪ ನೋಟಮುಮನುಮಂತೆ ತೊಡಸುವ ನುಡಿವ ನುಡಿಗಳ್ಗೆ ತೊದಳುವನೆಕ್ಕೆಯುಂ ತಳಯೆ ನೆಱೆಯೆ ಕೆಯ್ಗೞ್ದು ಮುನ್ನಮಾಱುಂಋತುಗಳುಮರ ನಿಮ್ಮನಿಮ್ಮ ಸ್ವರೂಪಂಗಳುಮನಾತನಿರ್ದಲ್ಲಿಗೆ ಪೋಗಿ ತೋಱುವೆಂದಾಗಳ್

ಕಂ ॥ ಆಱುಂಋತುಗಳ ಪೂಗಳು
ಮಾಱುಂಋತುಗಳಪೊದೞ್ದಿಚೆಲ್ವುಗಳುಮಣಂ ।
ಪೇಱುಲ್ಲದೊಂದುಸೂೞ್ಮೆ
ಯ್ವೀಱುದುವೊಡನೊಡನೆ ನೆಲದೊಳಂ ಗಗನದೊಳಂ ॥ 151 ॥

ಮೆಯ್ವೀಱುದರವರೊಡನೆಯೆ
ಮೆಯ್ವೀಱುಲ್ಬಗೆಪನಂಗಜಂಗಮಲತೆಗ ।
ಳ್ಕೆಯ್ವೀಱುವಂತೆ ಮೆಲ್ಲನೆ
ಹೆಯ್ವೀಱುದರವರಗಣಿಕೆಯರ್ವ್ವಂದಾಗಳ್ ॥ 152 ॥

ಸವುದಗಜಗಮನೆಯರ್ಮ್ಮಗಿ
ಲವೋಲಿ ನಡೆಪಾಡವಾಕೆಗಳ್ತಮಗೆ ಧರಾ ।
ಗಮನಂ ಪೊಸತಪ್ಪುದಱಿಂ
ದವರ್ದಿರೆ ಪದವಿಟ್ಟು ನಡೆಯಲಾಱದೆ ಸುೞಿದರ್ ॥ 153 ॥

ವ ॥ ಮುಡಿಯಂ ಸೋಗೆಯೆಂಗೆತ್ತು ಸೋಗೆ, ನಡೆಯಂ ಪೆಣ್ಣಂಜಿಗೆತ್ತಂಜೆ ಮೆ
ಲ್ನುಡಿಯಂ ಕೋಗಿಲೆಗೆತ್ತು ಕೋಗಿಲೆ ಳನೋತ್ತುಂಗಸ್ತನದ್ವಂದ್ವದಿ ।
ಟ್ಟಿಡೆಯಂ ಕೋಕವೆಂಗೆತ್ತು ಕೋಕವಳಕಾನೀಕಂಗಳಂ ಸೊಕ್ಕಿರ್ದುದಾ
ಱಡಿಗೆತ್ತಾಱಡಿ ಸುತ್ತುತುಂ ಬರೆ ಬನಂ ಬರ್ಪಂತೆ ಬಂದಾಕೆಗಳ್॥ 154 ॥

ವ ॥ ಅಂತು ನರೇಂದ್ರತಾಪಸನಂ ಸೋಲಿಸಲೆಂದು ಬಂದಾಕೆಗಳ್ತಮ್ಮ ಸೋಲ್ತು
ಮುಂದುವುಂದನೆ ಸುಳಿಯೆ ॥

ಚಂ ॥ ಮುಗವುಗಿಸುತ್ತುಮಿರ್ಪ ಮೃಗನಾಭಿಯನೀವನವಲ್ಲಿ ಕಂಪನಾ
ಳ್ದಿಗುಳ್ದಿಲರುತ್ತುಮಿರ್ಪ ಪದದೊಳ್ಪಿದವಟ್ಟು ಪೊದಳ್ದು ತೋರೆ ಮು ।
ಲ್ಲಿಗೆಯ ತುಱುಂಬು ರಾಹುತವೆನುಂಗಿದ ಚಂದ್ರನನೊಯ್ಯನೊಯ್ಯನಂ
ದಿಗುಳ್ದುವೊಲೊಪ್ಪಿರಲ್ಬಲದೊಳುರ್ವಸಿ ದೇವಿಗೆ ದೇವಿಯಾಡಿದಳ್॥ 155 ॥

ವ ॥ ಅಂತಾಕೆಗಳಿಡೆಯಾಡಿಯುಂ ಮನಂಗೊಳೆ ಪಾಡಿಯುಂ ವನುಜವಾಂ
ಧಾತನಂ ಸೋಲಿಸಲಾಱದೆ ಸಹಜವನೋಜನ ರೂಪಿಂಗಂ ಸುರತಮಕರಧ್ವಜನ
ಸೌಂದರ್ಯಕ್ಕಂ ಗಂಧೇಭವಿದ್ಯಾಧರನ ಗಂಡಗಾಡಿಗಂ ತಾಮೆ ಸೋಲ್ತೆಯ್ದುವಂದು ॥

ಕಂ ॥ ಬೂದಿ ಜಡೆ ಲಕ್ಕಣಂ ತಪ
ಕಾದುವೆರಲ್ಗೊಣೆ ಶರಾಸನಂ ಕವಚಮಿವೆಂ ।
ತಾದುವೊ ಮುತ್ತುಂ ಮೆಱಸುಂ
ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ! ॥ 156 ॥

ಚಂ ॥ ಕಡುತಪದಿಂದೆ ನಿನ್ನ ಪಡೆಪಾವುದೊ ಗಾನಿಲ! ಸಗ್ಗಮುಲ್ತಿ ಪೋ
ನುಡಿಯಾವೊ ವುರ್ಖ! ಸಗ್ಗದಫಲಂ ಸುಖಮುಲ್ತೆ ಳುಖಕ್ಕೆ ಪೇೞೊಡಂ ।
ಬಡದವರಾರೊ ಪೆಂಡಿರೊಳಗಾರ್ವೆಱರಾಮೆ ಪಲಾಮೆ ಬಂದು ಕಾ
ಲ್ದಿಡದಪೆವಿಂಬುಕೆಯ್ವಾಡಿದು ಪೊಲ್ಲಡಿಗಳ್ ಪಡೆ! ಕಚ್ಚ್ಬಱದಿಯಂ ॥

ಕಂ ॥ ಕೋಕಿಳಕುಳಗಳಕಳನಿನ
ದಾಕುಳರವದಿಂಪನಾಗಳಿಂ ಪಡೆದುದು ನೋ ।
ಡೀಕೆಗಳ ಚಳಿತಲುಳಿತ
ಭ್ರೂಕುಟಿಯೇ ಪರವುಸುಖದ ಕೋಟಿಯನೀಗುಂ ॥ 158 ॥

ವ ॥ ಎಂದೆನಿತಾನುಂತಱುದೊಳಱಿಪಿನ ಲಲ್ಲೆಯ ಚಿಲ್ಲದ ಪುರುಡಿನ ಮುಳಿ
ಸಿನ ನೆವದ ಪಡೆವಾತುಗಳಂ ನುಡಿದುಂ ಕಾಲ್ವಿಡಿದುಮಚಳತಧೈರ್ಯ್ಯನ ಮನವುಂ
ಚಳಿಯಿಸಲಾಱದಚ್ಚರಸಿಯು ರಚ್ಕೆಗಂಗೊಂಡಂತಾಗೆಯುಂ ಗಂಧರ್ವ್ವಗರ್ವ್ವವನು
ಱಿದುಪೋಗೆಯುಂ ಕಾವುದೇವನೇವಮಂ ಕೆಯ್ಕೊಂಡು ಸೀಂತಂತೆ ಮೊಗಂಬಾಡಿ ಪೋಗಿ
ದೇವೇಂದ್ರನ ನೊಗವಮಂ ನೋಡಲ್ವಾೞ್ದಿರ್ದನಾಗಳಂದ್ರಂ ನರೇಂದ್ರತಾಪಸನ ಧೈರ್ಯ್ಯ
ಕ್ಕೆ ವೆಚ್ಚಿ ಧರಾಮರವೇಷದೊಳಿಂದ್ರಕೀಲನಗೇಂದ್ರಮನೆಯ್ದುವಂದು ॥

ವು ॥ ಕಣೆಯಂ ಶೌರ್ಯ್ಯಾಭಿಮಾನಕ್ಕೆಡಱುದ ರಿಪುಸೈನ್ಯಕ್ಕೆ ಸಂಗ್ರಾಮದೊಳ್ಪ
ಲ್ಕಣೆಯಂಕಹ್ನಾರಸಾರಾವೃತಶಶಿವಿಶದಾತ್ಮೀಯವಂಕಕ್ಕೆಜೊಡಾ ।
ಮಣಿಯಂ ತೀವ್ರಪ್ರತಾಪದ್ಯುಮಣಿಯನೆರೆದರ್ತ್ಥಿವ್ರಜಂಗಳ್ಗೆ ಚಿಂತಾ
ಮಣಿಯಂ ಸಾಮಂತಚೂಡಾಮಣಿಯನಣಿಯರಂ ಬಂದು ಕಂಡಂ ಸುರೇಂದ್ರಂ॥

॥ ಶ್ರೀ ॥

ಶಾಂತಿಪುರಾಣಂ.

(ಪೊನ್ನಕವಿ. ಕ್ರಿ. ಶ. 950.)

ವಂ॥ ಪರಮಶ್ರೀಸ್ನೇಹಗೇಹಾಯಿತಪದಕಮಲಂ ಚೇತನಾಚೇತನಾಂಗ
ಸ್ಫುರಿತಾಘೌಘಚ್ಛಿದಂ ಭಾಸುರಸುರನರನಮದ್ಭವ್ಯಸೇವ್ಯಂ ವಚೋವಿ ।
ಸ್ತರತೃಪ್ತಿವ್ಯಾಪ್ತಲೋಕತ್ರಿತಯನಪಗತಾಶೇಷದೋಷಾಳಿ ಮುಕ್ತಿ
ಸ್ಥಿರಸೌಖ್ಯಾಂಭಃಸ್ವಯಂಭೂರಮಣಜಲಧಿ ರಕ್ಷಿಕ್ಕೆ ಶಾಂತೀಶನೆವ್ಮಂ ॥ 1 ॥

ಶಾ॥ ಕೇಶೋತ್ಪಾಟನದಿಂದಂ ಭಾವಿಸೆ ನಮಸ್ಸಿದ್ಧೇಭ್ಯಯೆಂದಾದಿತೀ
ರ್ಥೇಶರ್ವಂದಿಸಿ ದೀಕ್ಷೆಗೆಯ್ದರಜರಂ ಸಿದ್ಧಂನಮಾವ್ಯಂ ಜಗ ।
ಕ್ಕಾಶುದ್ಧಾಕ್ಷರನೆಂಬ ಶುದ್ಧಗೆಯುಮಿಂತಾಪೂರ್ವಜ್ಯರೆಂದಾಂ ಭವ
ಕ್ಲೇಶೋಚ್ಛಿತ್ತಿ ನಿಮಿತ್ತದಿಂದೇಲಿಗುವೆಂ ಸಿದ್ಧಾಂಪ್ರಪದ್ಮಂಗಳೊಳ್ ॥ 2 ॥

ಉ ॥ ವೀರಜಿನೇಂದ್ರನಿಂ ಗಣಧರಾಗ್ರಣಿಯಿಂ ಕ್ರಮದಿಂದೆ ಸಂದ ವಿ
ಸ್ತಾರದ ಜೈನಧರ್ಮದ ಮೊದಲ್ಪರಮೇಶ್ವರರೆಂಬಿನಂ ಸದಾ ।
ಚಾರನಮೇತರಾದರೆವುಗೀಗೆ ಶಿವಾಸ್ಪದಮುಖ್ಯಸೌಖ್ಯಮಂ
ಸೂರಿಗಳಂಗಜಾರಿಗಳತತ್ತ್ವವಿದಾರಿಗಳುದ್ಧಚಾರಿಗಳ್ ॥ 3 ॥

ಉ ॥ ಕ್ಷಾಯಿತದೃಷ್ಟಿ ತುಷ್ಟಿಯೊಳೊಡಂಬಡೆ ಜೈನವಚೋವ್ಯತಂ ಮುಖ
ಶ್ರೀಯು ಪೊದಳ್ಕೆಯಂ ಬೆಳಗೆ ಸೌಗತಸಾಂಖ್ಯಶಿವಾಗಮಂಗಳಂ ।
ನ್ಯಾಯನಯಪ್ರಮಾಣಗುಣಜಕಿಶ್ರಮದಿಂ ಸಲೆ ಸೋಲೆ ಗೆಲ್ವುಪಾ
ಧ್ಯಾಯರಜೀಯರೀಗೆವುಗೆ ಮುಕ್ತಿನಿವೇಕಮನಪ್ರಣಾಶಮಂ ॥ 4 ॥

ವಂ॥ ಬಗೆ ಶುದ್ಧಂ ತನು ಶುದ್ಧಮಾ ಸ್ತುತಿಪದಾರ್ಥಂ ಶುದ್ಧಮಿಂತೀ ತ್ರಿಶು
ದ್ಧಿಗಳಂ ಧ್ಯಾನಿಸುವೆವ್ಮನೋತೆಱಗುವೆವ್ಮಂ ವಂದಿಪೆವ್ಮಂ ತ್ರಿಕಾ ।
ಲಗಯೋಗಪ್ಪರವೀಶ್ವರಪ್ಪರಸಿತದ್ವಾತ್ಸಲ್ಯದಿಂ ಪರ್ವ್ವಿಸಾ
ಧುಗುಣಂ ಸಾಧುಗಳಪ್ಪೆವಾಪರಕೆಯಿಂದಾಮುಂ ವ್ರತವ್ರಾತದೊಳ್ ॥ 5 ॥

ಚಂ॥ ಗುರುವರದತ್ತದಿವ್ಯಮುನಿಪುತ್ರರುದಾತ್ತಶುಭಂಕರಪ್ರಭಂ
ಕರರಪರೈಶ್ವರಂ,ನೆಗಳ್ದ ನೇಮಿಜಿನೇಶ್ವರ ಶಾಸನಕ್ಕೆ ಭಾ ।
ಸುರಪರಿರಕ್ಷಣಸ್ಥಿತಿಯನಿತ್ತ ಱುರ್ವ್ವಿಗಭೂತಪೂರ್ವ್ವಮಾ
ಗಿರೆ ಡೊರೆವೆತ್ತ ಯಕ್ಷಿ ಬಗೆದೀಕ್ಷೆಸಿ ರಕ್ಷಿಸುಗೆವ್ಮನಾಗಳುಂ ॥ 6 ॥

ಮ ॥ ಅಣಿವಾದ್ಯಷ್ಟಗುಣಂಗಳಂ ಪಡೆವುದುಂ ಜೈನೋಕ್ತಿವಾರಾಶಿವಾ
ಹಣದಿಂದಂ ಪಡೆದಿರ್ದ ಸಿದ್ಧಪದವುಂ ಕೈಕೊಳ್ವುದಕ್ಕಡ್ಡಮೊ
ಡ್ಡಣಮೊಡ್ಡಿರ್ದ ಘಸೈನ್ಯಮುಂ ತುಳಿಯಿನಲ್ಸರ್ವಾಹ್ವಯಕ್ಷ್ಮಂ ಸ್ವವಾ
ರಣಕಾಧೋರಣನಾದನುಂತೆ ಸವಣಂಗೇಕಾರಣಂ ವಾರಣಂ ॥ 7 ॥

ಮ ॥ ಅತಿಗಂಭೀರವ್ಯದೂಕ್ತಿ ವಕ್ತ್ರದೊಳೊಡಂಬಟ್ಟೊಪ್ಪೆ ಕೇಳ್ವಂ ಬಹು
ಶ್ರುತನಲ್ಪಶ್ರುತನೆನ್ನದಾರ ಕಿವಿಗಂ ನುಣ್ಪೆಂಪಿನೊಳ್ಕೂಡೆ ಪಂ ।
ಡಿತರಂ ಮೂರ್ಖರುಮೆಂಕೆಯಿಂ ಪೊಗಳೆ ವೇಳಲ್ಪಟ್ಟಜಿಸಲ್ಕುಂ ಸರ
ಸ್ವತಿಯಿಂ ಸಾಧಿಸಿ ಸಂದ ಸಯ್ಪು ಸವಣಂಗಕ್ಕುಂಪೆಱಂಗಕ್ಕುಮೇ ॥ 8 ॥

ಕಂ ॥ ಭುವನದ ಕನ್ನಡಸಕ್ಕದ
ಕವಿಗಳ್ಸಲೆ ಸಾಲೆ ಸೋಲೆ ಸವಣಂಗಿತ್ತಂ ॥
ಸವಿವೇಕವುಭಯಕವಿಚ
ಕ್ರವರ್ತಿವೆಸರಂ ನಿಜಾಹಿತೋಷ್ಣಂ ಕೃಷ್ಣಂ ॥ 9 ॥

ಕಂ ॥ ದೊರೆಯಿಲ್ಲೆನೆ ಪೊರೆಯಿಲ್ಲೆನೆ
ನೆರವಿಲ್ಲೆನೆ ಸವಱೆ ಸಕ್ಕದಂ ಕನ್ನಡವೆಂ ।
ಬೆರಡುಂ ಕವಿತೆಯನವಂಳ್ವೀ
ತ್ತರಂ ಶಿರೊಡನಡಪಿದಂ ಕುರುಳ್ಗಳ ಸವಣಂ ॥ 10 ॥

ಕಂ ॥ ಕನ್ನಡಕವಿತೆಯೊಳಸಗಂ
ಗನ್ನೂರ್ವುಡಿರೇಖೆಗಗ್ಗಳಂ ಸಕ್ಕದದೊ ।
ಳ್ಮೆನ್ನುಳ್ಳ ಕಾಳದಾಸಂ
ಗನ್ನೂರ್ವುಡಿ ರಚನೆಯೊಳ್ಕುರುಳ್ಗಳ ಸವಣಂ ॥ 11 ॥

ಕಂ ॥ ಶಾಂತಿಜಿನಜನ್ಮಜಲಧಿಗೆ
ಶಾಂತಿಪುರಾಣಮೆ ಪರಾರ್ಘ್ಯರತ್ನಮಿದಂ ಪೇ ।
ಳ್ವಂತು ಕವಿಚಕ್ರವರ್ತಿಯೆ
ನೋಂತಂ ವೆಸರಿಂ ಪುರಾಣಚೂಡಾವಮಣಿಯಂ ॥ 12 ॥

ಕಂ ॥ ಜಿನನಾಥರೊಳಗೆ ಪದಿನಾ
ಱನೆಯಂ ತತ್ಸಕಳಚಕ್ರವರ್ತಿಗಳೊಳಗ ।
ಯ್ದನೆಯನೆನೆ ಪುಣ್ಯಪುಂಜಾ
ರ್ಜ್ಜನಕ್ಕೆ ಶಾಂತೀಶನಂತು ನೋಂತರುವೊಳರೇ ॥ 13 ॥

ಆ ತೀರ್ಥಕರನ ಪೆಂಪುಪ
ಮಾತೀತವದಕ್ಕೆ ಬಯಸಿ ಕಣ್ಣಂ ಕಾಲುಂ ।
ಬೂತೊಡೆ ಬಕ್ಕುಮೆ ಪುಣ್ಯಮು
ದಾತನ ನೆರಪಿರ್ದುದೆಯ್ದೆ ವರುಷದವೊದಲೊಳ್ ॥ 14 ॥

ಆ ಜಿನಪುರಾಣಮುಮನಮು
ದೀಕ್ಷಜನ ವ್ಯದುಮಧುರನಿನದ ಗೀತಮುಮಂ ರಾ ।
ರಾಜಿತಮುಂ ತ್ರಿಜಗಜ್ಜನ
ಪೂಜಿತಮುಂಪೇಳೆ ದುರಿತಹರಣಮುಮುರಿದೇ! ॥ 15 ॥

ಮಂ ॥ ಜಿನತತ್ತ್ವಂ ಸ್ಮರತತ್ತ್ವಮೆಂಬಿವೆರಡುಂ ದೂರಸ್ಥಮೆನ್ನರ್ಗಮಾ
ಜಿನತತ್ತ್ವಂ ಗತರಾಗಮಾ ಮುಪನತತ್ತ್ವಂ ರಾಗಸಂಪೂರ್ಣಮು ।
ಯ್ತನೆಯಂ ತಜ್ಜಿನಚಕ್ರವರ್ತ್ತಿ ಜಿನನಾಥಂ ಷೋಡಶಂ ಧರ್ಮಚ
ಕ್ರನಿಯುಕ್ತಂ ಭರತೋರ್ವ್ವಿಗಿಂತು ಸಲೆ ನೋಂತಂ ಶಾಂತಿತೀರ್ತ್ಥೇಶ್ವರಂ ॥

ಕಂ ॥ ತಾನಾರ್ಗ್ಗೆಣೆ! ಮುನಿಪತಿ! ವಿ
ದ್ಯಾನಿಧಿ! ಗುಣನಿಧಿ! ದಯೈಕನಿಧಿ! ಶುದ್ಧಯಶ ।
ಶ್ರೀನಿಧಿ! ತಪೋಂಬುನಿಧಿ! ಭುವ
ನಾನತಪದಕನಕಕಮಲನಮಿನಚರಿತಂ ॥ 17 ॥

ವಿತತನರುಹಪ್ಪಲಂ ಯುತಿ
ಪತಿಮುಹಿಪತಿಮುಕುಟನಿಕಟತಾಪಿತಚರಣಂ ।
ಕ್ಷಿತಿಪೂಜ್ಯಂ ಜಿತದುರಿತಂ
ನುತಸಂಪ್ರತಿಭಾವಿಭೂತಪರಿಣತತತ್ವಂ ॥ 18 ॥

ನೆಗಟ್ಟಿರ್ಹಣಂದಿಯೋಗಿಗ
ಳಗಾಧಬೋಧರ್ತ್ತದೀಯ್ಯಶಿಷ್ಯಖ್ಯಾತಾ ।
ಧಿಗತಜಿನತತ್ವರನುಪವ
ರಗಣ್ಯಪುಣ್ಯಾಗ್ರಗಣ್ಯರವಸಪ್ಪಿಣಿಯೊಳ್ ॥ 19 ॥

ಆ ಯತಿನಾಥರ ಶಿಷ್ಯರ
ಜೇಯಜಿನಾಗಮಪಯೋಧಿಪಾರೋತ್ತೀರ್ಣ ।
ಕ್ಷಾಯಿತ ಸಮ್ಯಗ್ದೃಷ್ಟಿಗ
ಳಾಯತ ಪುರಿಮಂಡಲಾಭಿಧಾನಾನೂನರ್ ॥ 20 ॥

ನೆಗಳ್ದರ್ಹಣಂದಿಸಿದ್ಧಾಂ
ತಿಗಳಧಿಗತ ಸಕಳತತ್ವರಾಯತಲವಣಾ ।
ಬ್ಧಿಗಭೀರಭೂರಿವಾರಿಧಿ
ನಿಗೂಢ ಮಹರುದ್ಧ ಸತ್ಪ್ರಸಿದ್ಧಿಸವೇತರ್ ॥ 21 ॥

ಆ ಪರಮೇಶ್ವರರಾಶಾ
ತಾಪೋಪಶಮೈಕವಂತರ ಸಂಸಾರಸವುಂ ।
ದ್ಯಾಪರಪಾರೋತ್ಸುಕರಭಿ
ರೂಢರ ಶಿಷ್ಯಸ್ಸುವೀರಣಂದಿಮುನೀಂದ್ರರ್ ॥ 22 ॥

ಅನಘತ್ರಿಕಾಲಯೋಗಿಗ
ಳನುಪಮಚಾರಿತ್ರರದ್ವಿತೀಯರವೇಯ ।
ರ್ಮ್ಮನಿಮುಖ್ಯರ್ಬ್ಬಟ್ಟುದ ರಾ
ಮಣಂದಿಗಳ್ವೀರಣಂದಿಮುನಿವರ ಶಿಷ್ಯರ್ ॥ 23 ॥

ಮುನಿಮುಖ್ಯರ ಬೆಟ್ಟುದ ರಾ
ಮನಂದಿಗಳ ಶಿಷ್ಯರಿಂದುಕುಂದೋಜ್ವಲನೂ ।
ತನಕೀರ್ತಿಮೂರ್ತಿಗಳ್ಟಂ
ದಿನಂದಿಗಳ್ಗಣಧರಾಗ್ರಗಣ್ಯಸಮಾನರ್ ॥ 24 ॥

ಆ ಚಂದಿನಂದಿಮುನಿವಸ
ದಾಚಾರರ ಶಿಷ್ಯರಮಲಜಿನಚಂದ್ರಮುನೀಂ ।
ದ್ರಾಚಾರ್ಯ ತ್ರೈಲೋಕ್ಯಚ
ರಾಚರರಕ್ಷಾಕ್ಷಮೈಕಕಾರಣನಿರತರ್ ॥ 25 ॥

ಚಂ॥ ಮುನಿಪಸಹಸ್ರಭೋಜನಕರಂ ಬುಧಭವ್ಯಜನೌಘಸೇವ್ಯನ
ತ್ಯನುಪಮಚಕ್ರವರ್ತ್ತಿ ಯತಿರಾಜಗಣಾಗ್ರಣಿ ದತ್ತವಿತ್ತ ಭೂ ।
ಜನಕವಿವಾದಿ ವಾಗ್ಮಿಗಮಕಂ ವಸುಧೈಕಕುಟುಂಬಕಂ ಸಭಾ
ಜನಸುಜನೈಕಭಾಜನಮುಖಿಂ ಜಿನಚಂದ್ರಮುನೀಂದ್ರನುರ್ವಿಯೊಳ್ ॥ 26 ॥

ಕಂ॥ ಗುಹ ಭವ ಶಿಬಿ ಕರ್ಣರಘೂ
ದ್ವಹ ಕಕರಿಪುಗುಪ್ತ ಚಾರುಗುಪ್ತಗುಣಂ ವೃ ।
ತ್ರಹಯಕನಾಶಾಂಬರರಾ
ಜಹಂಸನಕಳಂಕಚಂದ್ರನಾಜಿನಚಂದ್ರಂ ॥ 27 ॥

ದೀನಜನದಾನನಿರತನ
ನೂನಗುಣೋತ್ತಮಸುಸತ್ಯತಾಪನಲೋಕಾ ।
ಧಾನಂ ವಿತ್ತಾರ್ಥಿಗೆ "ಕಃ
ಕೇನಾರ್ಥೀಕೋದರಿದ್ರ" ಎಂದಾರ್ತೀವಂ ॥ 28 ॥

ಉ॥ ಆದಿಜಿನೇಂದ್ರಪಾದಕಮಲಭ್ರಮರಂ ಜಿನಚಂದ್ರದೇವನು
ತ್ಪಾದಿತಪೂಜ್ಯಪಾದಚರಿತಂ ಜಯವಾದ್ಯಕಳಂಕಸನ್ನಿಭಂ ।
ಭೀದುರಿತಾತಿದೂರ ನನವದ್ಯಜಿನಾಗಮವಿದ್ಯನಿದ್ಧದು
ರ್ಗೋದಧಿಧೌತಕೀರ್ತ್ತಿವಿಳಯಂ ಭರತಾವನಿರಾಜಪೂಜಿತಂ ॥ 29 ॥

ಕಂ॥ ವಿನಯನಿಧಾನಂ ಜಿನಸಮ
ಯನಿರತಿಕಯಸಾರ ಚಾರು ಸರ್ವ್ವಸ್ವವಿನೂ ॥
ತನಸತ್ಸುಮಂತಭದ್ರಂ
ಜಿನಚಂದ್ರಂ ವಿಬುಧವನಜವನಕಳಹಂಸಂ ॥ 30 ॥

ದಿಗಿಭಂ ದಿಗಿಭಕ್ಕೆ ವೊಗಂ
ಬುಗುವಂತಿರೆ ಸಂಜಿವಾರದಿಂ ಧನದಿಂದಂ :
ವಿಗಿಲುದ್ವಾನಿಯ ದಾನಂ
ದಿಗಿಭದ ದಾನಕ್ಕಮುಗ್ಗಳಿಂ ತನ್ಮುನಿಯಾ ॥ 31 ॥

ಈಡಿತ ಜಿನವರಶಾಸನ
ಚೂಡಾಮಣಿ ಬುಧಗರ್ಜನಲ್ಪಕಲ್ಪಕುಜಂ ಕೈ ।
ನೀಡಿವ ನರಗ್ಗೆ ಪೇಱ್ಪುದ
ನೀಡಿಲ್ಲದೆ ಕೊಡುವುದುತ್ತಮಾಜಿನಚಂದ್ರಂ ॥ 32 ॥

ವೃ ॥ ಎನಗೆ ಜಿನೇಂದ್ರಭಕ್ತಿಯೆ ಶರಣ್ಯಮೆನೆಗೊಡ್ಡಿದ ಭೂರಿವೈರಿಸಾ
ಧನಹರಣಂ ಬಲೆಂದೆ ಜಿನಚಂದ್ರವುನೀಂದ್ರರ ಪಾದವುಂಬಲದೊ ।
ಳ್ವನಮಿತರಾಗಿ ಕೊಂಡುಕೊನೆವಸ್ಸಲೆ ಪಾಣಿಯವಾಡಿಯೊಳ್ಮಹಾ
ವನಿಪರದೇನಗಣ್ಯಕೃತಪುಣ್ಯನೊ! ಭಾವಿಸೆ ತನ್ಮುನೀಂದ್ರನಾ ॥ 33 ॥

ಕಂ ॥ ಅಪವರ್ಗವೂರ್ಗ್ಗದುರ್ಗ್ಗಾ
ಪಹಾತಪಟು ಪರಮಜಿನವುತಾಂಬುಧಿಜಂ ।
ಕುಪದವುಲವಿಲಯನಂ ಪಂ
ಚಪರವುಗುರುಭಕ್ತಿನಿರತನಾಜಿನಚಂದ್ರಂ ॥ 34 ॥

ಜಿನಶಾಸನದೀಪಕನುಂ
ವುನಿವೈರೋಚನನುವುಪ್ಪ ಜಿನಚಂದ್ರವುನೀಂ ।
ದ್ರನನುರ್ವ್ವರಾಸ್ಯತಿಲಕನ
ನನೂನಗುಣವುಣಿಗಣಪ್ರಭೂಷಿತತನುವಂ ॥ 35 ॥

ಆಜಿನಚಂದ್ರನನಯುನಯು
ಭಾಜನನಂ ನಲೆ ಪುರಾಣಚೂಡಾವುಣಿಗೀ ।
ಭ್ರಾಜಿತಶಾಂತೀಶ್ವರಕಥೆ
ಗೀಜಗದೊಳ್ಪೆತಿಯೆನಲ್ಕೆ ಪೇಳ್ವೆಂ ಕೃತಿಯಂ ॥ 36 ॥

ವೃ ॥ ಕವಿಕವಿಜಕ್ರವರ್ತ್ತಿ ಕೃತಿನಾಯಕನಾ ಜಿನಚಂದ್ರದೇವನು
ತ್ನವನಿಧಿ ವುಲ್ಲಪಾರ್ಯನುವುದಾತ್ತಯಶೋನಿಧಿ ಪುನ್ನವಾರ್ಯ್ಯನುಂ ।
ನವಿ ತವದಂತು ಪೇಳೊಸಿದರೆಂದೊಡೆ ಶಾಂತಿಪುರಾಣವೇಂ ಕರಂ
ನವರನವೇಂ ನವುರ್ಥಯುತವೇಂ ವೃದುಬಂಧನವೇಂ ಪ್ರಸನ್ನವೋ ॥

ಕಂ ॥ ಉಪವೂತೀತಂ ಕೃತಿ ಶಾಂ
ತಿಪುರಾಣಂ ನಲೆ ಪುರಾಣಚೂಡಾವುಣಿಯೆಂ ।
ದುಪಕವುದಿಂ ಬರೆಯಿಸಿ ವು
ಲ್ಲಪಯ್ಯನುಂ ಪುನ್ನವುಯ್ಯನುಂ ಪರೆಯಿಸಿದರ್ ॥ 38 ॥

ಶಾಂತಿಪುರಾಣವನಿದನೋ
ರಂತಿರೆ ಬರೆಯಿಸುವ ಕೂಡೆ ಪರೆಯಿಸುವ ಜನ ।
ಕ್ಕಿಂತಾನ್ನೋರ್ಗಂತರದೇಂ ಗುಣ
ವಂತನದೇಂ ಪುರಿಸರನ್ನನೋ! ಗಡ ಪುನ್ನಂ ॥ 39 ॥

॥ ಮಲ್ಲಿಕಾಮಾಲೆ ॥

ಮುಲ್ಲವ್ಯೆಯನುದಗ್ರಬೋಧನವಗ್ರನಗ್ರಜನುಂ ನವು
ತ್ಫುಲ್ಲಪಂಕಜಲೋಚನಂ ಗುಣಿ ಪುನ್ನಮಯ್ಯನಜಯ್ಯನಾ ।
ಮುಲ್ಲಪಯ್ಯನ ತವ್ಮನವ್ಮನಭಕ್ತನಾವುವುದಾತ್ತನೀ
ಮುಲ್ಲಪಯ್ಯನೊಳೊಪ್ಪುಗುಂ ಪಿತೃಭಕ್ತಿಯಿಂ ವಿನಯೋಕ್ತಿಯಿಂ ॥ 40 ॥

ಕಂ॥ ಆ ತಂದೆಯ ಭಕ್ತನ ವಿ
ದ್ಯಾತಿಶಯಮಹಾನಿಧಾನನನ್ವಯವುಪಮಾ ।
ತೀತವದಂ ಪೇಳ್ವೆಂ ವಿ
ಖ್ಯಾತವುದೆಂತೆಂದೊಡಂಟು ವೆಂಗೀವಿಷಯಂ ॥ 41 ॥

ವೆಂಗೀವಿಷದುಂ ತ್ರೈಭುವ
ನಂಗಳೊಳಗ್ಗಳದ ವಿಷಯವುಪಮಾತೀತಂ ।
ನಂಗತನವುಸ್ತವುತ್ಯ
ತ್ತುಂಗ ಫಲದ್ರುಮವುವೂಲ್ಕವಸ್ತುನಿಧಾನಂ ॥ 42 ॥

ಚಂ॥ ಆಧರಣೀವಧೂತಿಲಕವಾಧರಣೀಲಲನಾವುಖಾಬ್ಜ ವುಂ
ತಾಧರಣೀರಮೈಕನವಯೌವನವಾಧರಣೀಪ್ರಿಯಾ ಕಟಾ ।
ಕ್ಷಾಧರ ವಿಭ್ರಮಭ್ರಮಣವುಗ್ಗಳದಗ್ಗದ ಕವ್ಮೆನಾಡು ವಿ
ದ್ಯಾಧರ ಲೋಕವೇನದಱ ಪೋಲ್ವೆಗೆ ಬಕ್ಕ್ಯುವೆ ಸೋಲದಿಕ್ಕ್ಯುವೇ ॥

ವಂ॥ ಅತಿವಿಖ್ಯಾತಿಯ ಕಂವೆನಾಡದನುದಾತ್ತಂ ಕಾವನೀವಂ ದ್ವಿಜೋ
ನ್ನತವಿದ್ಯಾನಿಧಿಗಳ್ಗನೂನನುಪವಾನಾತೀತಧೈರ್ಯಂ ಬಹು ।
ಶ್ರುತನಾ ಜ್ಞಾನದೆ ಯಾಜ್ಞವಲ್ಕ್ಯನದೃಶಂ ಕೌಂಡಿನ್ಯಗೋತ್ರಂ ಸಿರಾ
ಕೃತದೋಷಸ್ಥಿತಿ ನಾಗವುಯ್ಯನನಘಂ ಶ್ರೀಭೂಮಿದೇವೋತ ವುಂ ॥ 44 ।

ಕಂ॥ ಪುಟ್ಟಿದುದು ಪುಂಗನೂರೊಡ
ನ್ಪುಟ್ಟಿದುದಪರಿಮಿತಪುರುಷಗುಣಗಣಮೆರ್ದೆಯೊ ।
ಳ್ಪುಟ್ಟಿದುದು ಜಿನಮತಂ ಗುಡಿ
ಗಟ್ಟಿದುದಿಳೆ ಪುಟ್ಟಿ ನಾಗವುಯ್ಯನಜೇಯಂ ॥ 45 ॥

ಆ ಭೂಮಿದೇವತನಯ
ಪ್ರಾಭವಪರಿರ್ವ್ವರತ್ಯಪೂರ್ವ್ವ ।
ಶ್ರುತರುರ್ವ್ವೀಭಾರಭರಣಸಹರತಿ
ಕೋಭಾಸ್ಪದತನುಗಳವರೊಳಗ್ರತನೂಜಂ ॥ 46 ॥

ಅವಿತಜ್ಯೋತಿಷಶಾಸ್ತ್ರೋ
ಕ್ತಿವುಲ್ಲಪಂ ಜಿನವುತಜ್ಞನಾಹಿವುಸೇತು ।
ಪ್ರವಿತಯುಕಂ ಬಭ್ರುವರಾ
ಹವಿುಹಿರಶೌನಕನುನಂದಗಾರ್ಗ್ಯನವೂನಂ ॥ 47 ॥

ಚಂ॥ ವುಲ್ಲಪನಲ್ಲದೊಂ ಪ್ರಭುವೆ! ವುಲ್ಲಪನಲ್ಲದೊನತ್ಯುದಾತ್ತನೇ!
ವುಲ್ಲಪನಲ್ಲದೊಂ ಕುಚಿಯೆ ವುಲ್ಲಪನಲ್ಲದೊನಿಷ್ಟದಾನಿಯೇ! ।
ವುಲ್ಲಪನಲ್ಲದೊಂ ಗುಣಿಯೆ! ವುಲ್ಲಪನಲ್ಲದೊನೇಕವಾಕ್ಯನೇ!
ವುಲ್ಲಪನಲ್ಲದೊಂ ಸ್ಥಿರನೆ! ವುಲ್ಲಪನಲ್ಲದೊನಾರ್ಯಪೂಜ್ಯನೇ ॥ 48 ॥

ಕಂ ॥ ಈನೆಲದೊಳ್ಮಲ್ಲಪನ ನ
ವೂನನರ್ದರೀಗಳಿಲ್ಲ! ವುನ್ನುಳ್ಳೊಡೆ ಕಾ ।
ನೀನಂ ದಧೀಚಿ ಶಿಬಿ ವೃಷ
ಸೇನಂ ಯವುತನಯನಕ್ಕುವುಲ್ಲದನಲ್ಲಂ ॥ 49 ॥

ನಿಜಗುರು ಪರೋಕ್ಷವಿನಯವು
ನಜಾತರಿಪು ತನ್ನ ತವ್ಮನುಂ ತಾನುಂ ಭೂ ।
ಭುಜರಱಿವಿನಂ ಸವುಸ್ತ
ದ್ವಿಜರಱಿವಿನವುಖಿಲವುನಿಪರಱಿವಿನವಿೂಗಳ್ ॥ 50 ॥

ವೃ ॥ ಭೂವಿುಗೆ ಕಾವ್ಯರತ್ನವಿದೆ ಸಾರವೆನಲ್ಕೆಗಲ್ದೀ ಪುರಾಣಚಕೂ
ಡಾವುಣಿಗತ್ತಿರ್ಯುಂ ಕಳಶವಿಟ್ಟು ಗುರುಸ್ಥಿರಭಕ್ತಿಪೂರ್ವಕಂ ।
ವ್ರೇವುದೆ ವುಲ್ಲಪಯ್ಯನುವುುದಾತ್ತಯಶೋನಿಧಿ ಪುನ್ನವುಯ್ಯನುಂ
ತಾವುುಪಕಾರವುಂ ನೆರಪಿದರ್ಜ್ಜಗದೊಳ್ಜಿನಚಂದ್ರದೇವರಾ ॥ 51 ॥

ಕಂ ॥ ಶಾಂತಿಪುರಾಣದ ನಿರ್ವ್ವಾ
ಣಂ ತಕ್ಕುದೆ ವುಲ್ಲಪಯ್ಯನಿಂ ತದನುಜನಿಂ ।
ಶಾಂತಿಯೆನೆ ಪುನ್ನವುಯ್ಯನಿ
ನೇಂ ತಾವುಂತೀರ್ವ್ವರುಂ ಕೃತಜ್ಞರೊ! ಜಗದೊಳ್ ॥ 52 ॥

ಅವರೀರ್ವ್ವರ ಪುಣ್ಯಂ ತ್ರೈ
ಭುವನದೊಳವುಗಣ್ಯವುಂತು ನಲೆನೋಂತರದಾ ।
ರ್ಭವಜಲನಿಧಿಜಲದೊಳ್ಮೂ
ಡುವ ವುುಳುಗುವ ನಡೆವ ನುಡಿವ ಸಂಸೃತಿಗತರೊಳ್ ॥ 53 ॥

ಚಂ॥ ಅವರ ಪೊಗಳ್ತೆ ಗತ್ಯಧಿಕವುಪ್ಪ ನೆಗಳ್ತೆಗೆ ಕೊಂಡನಾವೊನಿ
ನ್ನವರ ಬುಧೋಕ್ತವುಪ್ಪ ಗುರುಭಕ್ತಿಗೆ ಸೂಕ್ತಿಗೆ ತಕ್ಕನಾವೊನಾ ।
ರವರ ಜಿನಾಗವುಕ್ರವುದಣುವ್ರತವುಂ ಸಲಿಸುತ್ತವಿರ್ಪುರೆಂ
ಧವಿರತವುಗ್ರಜಾನುಜರನೇಂ ಪೊಗಳ್ದಪ್ಪುದೊ! ವೂಱುಲೋಕವುಂ॥ 54 ॥

ಕಂ ॥ ತವದ ಪರಿದರ್ತ್ತಿಯಿಂದಿದ
ನವರೀರ್ವ್ವರುಮಲ್ಲಿಯೆ ನೆಱೆಯೆ ವೇಳಸಿ ಜಿನಚಂ ।
ದ್ರವರವುನೀಂದ್ರರ ಪೆಸರೊ
ಳ್ನೆವಮಿರ್ದರ್ನ್ನಿಗಳ್ದಖಂಡಭೂವಮಂಡಲದೊಳ್ ॥ 55 ॥

ಕಂ ॥ ಆ ಕಥೆ ಮುತ್ತಂತೆಂದೊಡೆ
ಭೀಕರಕರಿಮಕರನಿಕರಭಿನ್ನತರಂಗಾನೀ ।
ಕಂ ಲವಣಾಂಬುನಿಧಿವೃ
ತ್ತಾಕೃತಿ ಕವುನೀಯವುಮುಂಟು ಜಂಬೂದ್ವೀಪಂ ॥ 56 ॥

ಕಂ ॥ ತನ್ಮಧ್ಯದೊಳೊಪ್ಪಿಪ್ಪುರ್ವ್ವದು
ತನ್ಮೇರುಗಿರೀಂದ್ರವುದರ ವೂಡಣದೆಸೆಯೊ ।
ಳ್ಮನ್ಮಥನೃಪಾಭಿನವರಾ
ಜ್ಯೋನ್ಮದವುಹಿದೇಹವುಮುಂಟು ಪೂರ್ವ್ವವಿದೇಹಂ ॥ 57 ॥

ವ ॥ ಎಂಬಿನಂ ನೆಗಳ್ದಿ ಪೂರ್ವ್ವವಿದೇಹದೊಳ್ಳಾವುರಾಜಕವುನೀಯವುನೋರಥಜನ್ಮ
ಭೂಮಿಯಪ್ಪ ವತ್ಸಕಾವತೀವಿಷಯದಾವಾವೆಡೆಯೊಳಂ ನಿವ್ಮಪ್ರದೇಶಂಪ್ಪದೆ
ಪಥಿಕಜನದ ಕಣ್ಗಂ ಮನಕ್ಕಂ ಪಸರಂಬಡೆದು ನೆಱೆಸೊಗಯಿಸುವ ಸರಸ
ಸರಸೀರುಹಾಕರಂಗಳೊಳ್ ॥

ಚಂ॥ ವಿದಳಿತಹೇವುತಾವುರಸಸಾಂದ್ರಲಸನ್ಮಕರಂದವಕ್ಕ ಷ
ಟ್ಪದತತಿ ಪಾಯ್ವುಪಾಯ್ವು ಸರಸೀರುಹದಿಂ ಸರಸೀರುಹಕ್ಕೆ ಪೋ ।
ಲ್ತುದು ವುಧುವುಂ ಮನೋಭವನುವುಲ್ಮೆಯೊಳಾಡುವ ಪೊನ್ನಬಟ್ಟನೊ
ರ್ವೊದಲೆ ವುನೋಜಕಾಂತೆ ಮುಳಿಸಿಂ ದೆಸೆಗೋವದೆ ಸೂಸುವಂದವಂ ॥

ವ ॥ ವುತ್ತವೂನಾಡೂರೂರ್ದಪ್ಪದೆ ವಿಚಿತ್ರಕ್ಷೇತ್ರಂಗಳೊಳ್ಪವಿತ್ರಪುಣ್ಯಬೀಜಪ್ರರೋ
ಹದ ಬೆಳಸಿನ ಸಿರಿಯ ಕಣೊಂಬಲಂಗಳೆನಿಸುವ ಕೆಯ್ವೊಲಂಗಳೊಳ್ ॥

ಕಂ ॥ ಅಮಿತಗುಣವರ್ಣನಪ್ರ
ಕ್ರವುಕ್ಕೆ ಸಲೆ ನಾಣ್ಚಿ ತಲೆಯನೆಱಗಿದ ಸುಜನೋ ।
ತ್ತವುರಂತೆ ಭರದಿನೆಱಗಿದು
ವವೇಯಪರಿಪಕ್ವಗಂಧಶಾಲಿವನಂಗಳ್ ॥ 59 ॥

ಕಂ ॥ ತತ್ಕಳವುಕಣಿಕಕಬಳನ
ವುತ್ಕಶುಕಪ್ರಕರವೆಸೆಯೆ ಪೊಸನೇತ್ರದ ಚಂ ।
ಚತ್ಕಂಚುಕವುನಿಳಾವಿಳ
ಸತ್ಕಾಮಿನಿ ತೊಟ್ಟ ಪೋಲ್ವಿಯಂ ಪುಟ್ಟಿಸುಗುಂ ॥ 60 ॥

ವುತ್ತಂ ತದುಪಾಂತದೊಳ್ ॥

ಕಂ ॥ ಬಹುಪೋಷಮನಿವ್ಯಾವಿನ
ಸಹಕಾರದ ಸೊನೆಯು ಸೋನೆ ಬಳೆಯಿಸೆ ಬೆಳೆಗುಂ ।
ಮಹಿಯೆನೆ ಬಣ್ಣಿಸುವ ಪಿತಾ
ಮಹಂಗಮರಿದೆಗ್ಗವೊಗ್ಗಿ ನಿನಗಮದೆನಗಂ ॥ 61 ॥

ಅದಲ್ಲದೆಯುಂ ।

ಕಂ ॥ ನವಶಶಿಕಳೆಗಳನಮೃತ
ದ್ರವಂಗಳೊಳ್ತೀವಿತೀವಿ ನಿಱಿಸಿದರೆನೆ ತ ।
ದ್ಧವಳೋತ್ಪಲಹೃ ನಡೆನೋ
ಡುವ ಜನಪದಜನದ ಮನಮನುಱೆ ಸೆಱೆವಿಡಿಗುಂ ॥ 62 ॥

ವ ॥ ಎನಿಸಿ ದುಗ್ಧಾಬ್ಧಿಫೇನಪಿಂಡೋಪಮಾನಮುಂ ಸುಧಾಸಮುದ್ರಲಲಿತಲಹರಿಕಾಸ
-ಮಾನಮುಮೆಪ್ಪ ಬಿಳಿಯ ಕಬ್ಬಿನ ಕೆಯ್ಗಳೊಳೆರಡುಂ ದೆಸೆಗಳೊಳಿಂ ಮನೋ
ಜರಾಜರಾಜದ್ರಾಜಧಾನೀನಿಕಾಶಮಪ್ಪುದ್ಯಾನಂಗಳೊಳ್ ॥

ಉ ॥ ಮೆಯ್ವೆಸವೊಂದೆ ಪೂವಿನೊಳೆ ಪೋಗೆ ಕೆಲಂದಿರಿದಳ್ಳೆಗೊಂಬಿನೊ
ಳ್ಪಾಯ್ವುದುಮೊಂದೆ ಪಣ್ಣರಸಮಂ ಸವಿಗಾಱದೆ ಚಂಚುವಂ ನೆಲ ।
ಕ್ಕಾಯ್ವುದುಮೊಂದೆ ಕೋರಕವಿಘಾಟನಕಳ್ಕಮೆವೆತ್ತ ವಚತ್ತು ಲಂಘನಂ
ಗೆಯ್ವುದುಮಾದುದಾಮಧುಪ ಕೀರ ಪಿಕಾಳಿಗೆ ನಂದನಂಗಳೊಳ್ ॥ 63 ॥

ಚಂ॥ ನಯಮಮಳವಟ್ಟ ಪಚ್ಚೆ ಸಹಕಾರದೊಳಿಂಗುಳಿಕಂ ತಳರ್ತ್ತ ಶೋ
ಕೆಯೊಳರಿದಾಳಮುಳ್ಳಲರ್ದ ಸಂಪಗೆಯೊಳ್ಕಡುಗಪ್ಪು ಭೃಂಗಕೋ ।
ಟಿಯೊಳೆಸೆದಿರ್ದ ನೀಲಿ ಗಿರಿಮಲ್ಲಿಕೆಯೊಳ್ಪಮನಾಗ ಚೀರಪ
ಟ್ಟಿಯೆ ಬರೆದಿಟ್ಟ ಚಿತ್ರದ ಬನಕ್ಕೆಣೆಯಾಯ್ತು ಬನಂ ವಿದೇಹದೊಳ್ ॥ 64 ॥

ಕಂ ॥ ಇಂತಿನಿವಿರಿದಗ್ಗಳದದ
ಗುಂತಿಯನೊಳಕೊಂಡು ವಿಷಯವರವನಿತೆಯು ಸೀ ।
ಮಂತದ ಮಣಿಕಾಂತಿಗೆ ಮು
ಯ್ಯಾಂತುದು ಚೆಲ್ವಿಂ ಪ್ರಭಾಕರೀನಾಮಪುರಂ ॥ 65 ॥

ಚಂ॥ ಅದನೊಳಕೊಂಡ ಪೊನ್ನಪೊಸಕೋಂಟೆ ಪುರಾಂಗನೆಯುಟ್ಟ ಹೇಮವ
ರ್ಣದ ವಸನಂ ತದೀಯುರುಚಿವಿಚ್ಛುರಿತಂ ಪರಿಖಾಚ್ಛವಾರಿ ಕ ।
ಟ್ಟಿದ ಕಟಿಸೂತ್ರಮಂಬುವಿಹಗಾವಳಿ ಸೂಸಕಮಾಗೆ ಗೆಲ್ದು ನಾ
ಕದ ನರಲೋಕದೊಳ್ಪನದು ಪೇೞ್ದಿಱಿಗೊಂಡುದೊ ಸೂಱೆಗೊಂಡುದೋ ॥

ಕಂ ॥ ಆ ಪೊಳಲನಾಳ್ವನಖಿಳವ
ಸೀಪತಿ ಮುದದಿಂತಿದಂತಖಂಡನಕೆ ಸಮಾ ।
ರೋಪಿತಕೃಪಾಣಧಾರಾ
ವ್ಯಾಪಾರಂ ಸ್ಥಿಮಿತಸಾಗರಂ ಮುಂಡಳಕಂ ॥ 67 ॥

೫೫ ॥ ಬಾಗದ ತೋರ್ಕ್ಕೆಗಂ ನೆಗಳ್ದ ಬೀರದಳುರ್ಕ್ಕೆಗವೊಳ್ಪನಪ್ಪಿದು
ದ್ಯೋಗದವುರ್ಕ್ಕೆಗಂ ಸಿರಿಯ ಸಾರ್ಕ್ಕೆಗವೂಯುತಿಯಿರ್ಕ್ಕೆಗಂ ಪೆಱ।
ವೇರ್ಗೆನಲಿಲ್ಲದಂತು ನೆಗಳ್ದಿರ್ದ್ದುದರಿಂ ಮನುಜೇಂದ್ರಕೋಟಿ ಕೋ
ಟೀಗುಣಕೋಟಿಗಾ ಸ್ತಿಮಿತಸಾಗರನಾಗರವೂಗದಿರ್ಕ್ಕುಮೇ ॥ 68 ॥

೫೬ ॥ ಪರಿಜನವುನಳವಿಯಱಿದಾ
ಳರಸೆಂಬುದನಱಿಯಲಾಗದಂತಿರೆ ಪೊರೆದಾ ।
ನರಪತಿಯು ಗುಣಾಗುಣದಂ
ತರವಱಿವುದನಾಳಸಿರಿಯು ಲೀಲೆಯೆ ವೇಳ್ಗಂ ॥ 69 ॥

೫೭ ॥ ಮದವಿರಹಿತನೆನಿಸಿಯು ಮಮಿ
ತದಾನಿ ಗುಣಗಣದ ಪರವುಪದವಿಗೆ ವೊದಲೆಂ ।
ಬುದನೆನಿಸಿ ನೆಗಳ್ದುವೂನ್ಯಪ
ನುದಾತ್ತಗುಣಗಣದ ತಂತ್ತತುದಿಯೊಳಿನೂನಂ ॥ 70 ॥

೫೮ ॥ ತನುವೆನಿತನಿತುಂ ಮನವೆನಿ
ತನಿತುಂ ವ್ಯದುವುಧುರವಚನವೆನಿತನಿತುಂ ತೆ ।
ಕ್ಕನೆ ತೀವೆ ನುಧರ್ಮರಸಾ
ಯನವೊದವಿದ ನದವುನಾ ನೃಪೇಂದ್ರಂ ಪೋಲ್ತಂ ॥ 71 ॥

೫೯ ॥ ಅಂತಖಿಲಭುವನತಲತಿಲಕವಿಲಾಸವಿಲಸಿತನಿಲಯನುವುಪಹಸಿತಭೂಚರಖೇಚರ
ರಾಜಲೀಲಾವಿಲಾಸವಿಭವನುವುಪಹಸಿತಸನತ್ಕುಮಾರನಳಕೂಬರವುಮಕರಕೇತು
ಸೌಂದರ್ಯನುಂ ವಿನಿರ್ಜ್ಜಿತನಿರವಶೇಷನಿಳಿಂಪನಾಥವಿಭವನುವುಪಾಕೃತ ಪ್ರಕೃ
ಷ್ಟಾಷ್ಟ ಲೋಕಪಾಲಪರಿಪಾಲಿತಸಾಹಸನುವುಪಾಸ್ತ ಸವುಸ್ತ ರಾಜನ್ಯಕಥವಳಾ
ತಪತ್ರಪುಂಡರೀಕಷಂಡನುವುವನತನಾನಾನೂನದೇಶಾಧೀಶವುಣಿವುಕುಟ ವುಕ
ರಿಕಾಚ್ಛುರಿತಚರಣನಖವುಯೂಖಚಂದ್ರಿಕಾಪ್ರಸರನುವುಭಿಭೂತನೂತನಪುರಾ
ತನ ಪುರುಷಚರಿತನುವುವಲುಪ್ತ ಸಪ್ತ ಸಪ್ತಿ ದೀಪ್ತಿ ಪ್ರತಾಪವಿಧಾನನಿರತನುವೂ
ಕೃಷ್ಟ ಸುಂದರಸುಂದರೀಕಟಾಕ್ಷವಿಕ್ಷೇಪನುವುಪಜಾಪೋಪಗೃಹೀತವಿರೋ
ಧಿನರೇಂದ್ರಾಷ್ಟ್ರದಕತೀರ್ಥನುವುನುಕೂಲಕಾಲಸೀವುಂತಿನೀಸವೂನಗೋಮಿ
ನೀಕಾವಿನೀ ನಿಬಿಡಾಲಿಂಗಿತಾಕ್ಷೂಣವಕ್ಷಸ್ಥಳನುವುವಿರುದ್ಧವಿಜಯಶ್ರೀಕೇ
ಯೂರವಿಘಟ್ಟಿತವಾವೇತರ ಭುಜಭುಜಂಗನುಂ ವುವಕೀರ್ಣವರ್ಣ ಪದ
ವಾಕ್ಯನ್ಯಾಯ ನಯಪ್ರವುಾಣ ಕಾವ್ಯನಾಟಕನಿಕಾವುಕೋವುಳನುಂ ಶಿವಕರೀರ
ಸರಸ್ವತೀರೂಪನುವುಪಾರಪಾರಾವಾರಪರಪಾರಸವುತ್ತಾರಿತಕುಂದೇಂದು
ಕುವುದ್ವತೀತರಳತರತಾರಹಾರನೀಹಾರರೋಚಿರ್ವ್ಯಂಜರೀನಿಚಯವಿಶದಯ
ಶೋರಾಶೀವಳಯನುಂ ಜಿತಾಖಂಡಭೂವುಂಡಲನುವುಪ್ಪ ಸ್ತಿಮಿತಸಾಗರವು
ಹೀವಲ್ಲಭಂಗೆ ॥

ಕಂ ॥ ನಿರತಿಶಯರೂಪಯೌವನ
ವಿರಾಜಿತಾಂಗಿಯರನಂಗಜಂಗವುಲತಿಕೋ ।
ತ್ತರತನುಗಳ್ನಿಗಲ್ದಿ ವಸುಂ
ಧರೆಯುಂ ವಸುವುತಿಯುನೆಂಬರರಸಿಯರಾದರ್ ॥ 72 ॥

ಅಗ್ರಮಹಿಷೀಪದಕ್ಕ ವುಂ
ದಗ್ರಪ್ರೇಮಾಸ್ಪದಕ್ಕವುವರಿರೆ ನೃಪನ ।
ವ್ಯಗ್ರತೆಯಿನಿತರವನಿತೆಯ
ರಾಗ್ರಹವುನೆ ಬಿಟ್ಟನೇನವರ್ಸ್ಪೃಹಿಯರೋ! ॥ 73 ॥

ವ ॥ ಆ ಮಹಾದೇವಿಯರೀರ್ವರುಂ ಬೆರಸು ಸ್ತಿಮಿತಸಾಗರಧರಾಧೀಶ್ವರನವಿನಶ್ವರಸುಖಾ
ನುಭವನಿರತನನವರತಾಭ್ಯುದಯಪರಂಪರಾಸ್ಪೃತಸಿಜವುನೋಜಸಿತಾನಂದನೊ
ರ್ಮ್ಮ ಸಕಲವುಕುಟಬದ್ಧ ಮಣಿಕಿರೀಟಕೋಟಿವಿಟಂಕನಾಥಪದ್ಮರಾಗವುಣಿ
ಕಿರಣಾರುಣಿತವುೌಕ್ತಿಕವುಂಡನೀಭೂತದುಕೂಲವಿತಾನನೊಡ್ಡೋಲಗಂಗೊಟ್ಟು
ದ್ದರ್ದಲ್ಲಿ ಸಿಂಹಾಸನೋಭಯಪಾರ್ಶ್ವಪ್ರದೇಶಂಗಳನಲಂಕರಿಸಿ ವಸುಂಧರೆಯುಂ
ವಸುವುತಿಯುಮಿರೆ ॥

ಕಂ ॥ ಕ್ಷಿತಿನಾಥಾಪಾಂಗವಿಲೋ
ಕಿತೆಯಶ್ರೀಯೊರ್ವ್ವಳಾ ಜಯಶ್ರೀಯೊರ್ವ್ವ ।
ಳ್ಪ್ರತಿಪತ್ನಿಯರೊಳರೆನಿಸ
ಲ್ಕತಕ್ಯನೇಪಥ್ಯವುವರ್ಗದೇಂ ಸೊಗಯಿಸಿತೋ ॥ 74 ॥

ಎರಡುಂ ಕೆಲದೊಳಮಿರ್ವ್ವರು
ವುರಸಿಯರಿರೆ ಸೊಗಯಿಸಿರ್ದ್ದನವನಿಪನೆರಡುಂ ।
ಕರಿಣಿಗಳ ನಡುವಣಾಶಾ
ಕರೀಂದ್ರವೊಪ್ಪುವವೊಲೊಪ್ಪುವೊಡ್ಡೋಲಗದೊಳ್ ॥ 75 ॥

ನವವುಾಲತಿಗಂ ನವವುಾ
ಥವಿಗಂ ನಡುವಾದ ನವನವೋರುವುಹೀಜ ।
ಕ್ಕವನೀಶಂ ದೊರೆಯೆನಿಸಿದ
ನವರೀರ್ವರುವುರಸಿಯರ್ಕ್ಕಳೊಪ್ಪಿರೆ ಕೆಲದೊಳ್ ॥ 76 ॥

ವ ॥ ಇಂತನಂತಸುಖಪರಂಪರೆಯಿಂ ಪಲಕಾಲಂ ಸಲೆ ॥

ಕಂ ॥ ಆ ಜಾಯಾದ್ವಯಕಂ ಕ್ಷಿತಿ
ರಾಜಂಗವುಪೂರ್ವ್ವತುಂಗಜಂಗವುದಿವಿಜೋ ।
ರ್ವ್ವೀಜವಿವೆನೆ ಪುಟ್ಟಿದರಪ
ರಾಜಿತನು ವುನಂತವೀರ್ಯನುಂ ಪ್ರಿಯತನಯರ್ ॥ 77 ॥

ವ ॥ ಅಂತು ವಸುಂಧರೆಗಧರಾಜಿತಂ ವಸುಮತಿಗನಂತವೀರ್ಯಂ ಪ್ರಿಯತನಯರಪ್ಪು
ಟ್ಟುವುದುಂ ॥

ಕಂ ॥ ಜಯವೊಡವನ್ಪುಟ್ಟಿದುದು ನಯೋ
ದಯವೊಡವೆಳೆದುದು ವಿಳಾಸವೊಡನಾಡಿದುದ ।
ನ್ವಯದೊದವು ತಾಯುವುಂ ತಂ
ದೆಯುವುಂ ತಣ್ಪಿದುದಘಾರರಾಗಾವೃತದಿಂ ॥ 78 ॥

ವ ॥ ಅಂತು ಬಳೆಯೆ ವಳೆಯೆ ॥

ಚಂ॥ ದೊರೆವಡೆದಿದ್ದುದೀರ್ವ್ವರ ಮನೋರಥವುಗ್ಗಳವುಚ್ಚಿರ್ಪೋದುದೀ
ರ್ವ್ವರಮನದಳ್ಕಱುಚ್ಚುಡಿದುದೀರ್ವ್ವರ ಮಚ್ಚು ಪೊದಳ್ದುನೀಳ್ದುದೀ ।
ರ್ವ್ವರ ಸಮಶೀಲವಚ್ಚಿಱೆದುದೀರ್ವರನಚ್ಚಿನೊಡಂಬಡೆಂ ಭವಾಂ
ತರಗತವೋಹಬಂಧಬಲವೋ! ಬಲದೇವನ ವಾಸುದೇವನಾ ॥ 79 ॥

ಕಂ ॥ ಬಲದೇವವಾಸುದೇವರೊ
ಳೆಲಂಘ್ಯಬಲನೊರ್ವ್ವನುಗ್ರಬಲನೊರ್ವ್ವನವ
ರ್ಕ್ಕೆಲದೊಳಿರೆ ಚಂದ್ರರವಿ
ಮಂಡಲಮಧ್ಯದ ಕನಕಗಿರಿಗೆ ನೃಪನೆಣೆಯಾದಂ ॥ ॥ 80 ॥

ವ ॥ ಅಂತು ಬಲದೇವವಾಸುದೇವರನಲ್ಪಕಲ್ಪವುಹೀಜಾಂಕುರಯುಗಳವುಂ ಶೃಂ
ಗಾರಸಾಗರ ಸಂಭೂತಸುಧಾಸೂತಿಲೇಖಾಂಕುರದ್ವಂದ್ವಮುಂ ಪವಿತ್ರಕ್ಷತ್ರಧರ್ಮ
ಕಂಠೀರವದಂಷ್ಟ್ರಾಂಕುರಯುಗ್ಮವುಂ ಮದನವೂರ್ಗ್ಗಣಸಮುತ್ಥಿತನೂತನ
ಚೂತಾಂಕುರದ್ವಂದ್ವಮುವಾಶಾಕರಿಕಲಭಸುಕುಮಾರದನ್ತಾಂಕುರದ್ವಿತಯವುಮು
ವೆನೆ ಸೌಂದರ್ಯಕ್ಕೆ ಕುಲನಿಲಯವುಮು ಮೋದಾರ್ಯಕ್ಕೆ ನಿವಾಸವುಂ ಸೌಭಾ
ಗ್ಯಕ್ಕೆ ಜನ್ಮಭೂಮಿಯುಂ ಸೌಶೀಲ್ಯಕ್ಕುತ್ಪತ್ತಿ ಸ್ಥಾನವುಮಾಗಿ ಪುಣ್ಯಪುಂಜದಂ
ತೆಯುಂ ಸುಖಪ್ರಮೋದೋಹದಂತೆಯುಂ ಶೌರ್ಯಮೂಲಸ್ತಂಭದಂತೆಯುಂ
ಸಾಹಸದ್ರವಿಣಸಾಧನದಂತೆಯುಂ ಗುಣಮಣಿಕೋಶಗೃಹದಂತೆಯುಮಾಗಿ ಮೂ
ತಾಪಿತೃಗಳನುರಾಗದೊಡನೆ ಪ್ರವರ್ಧಮಾನರಾಗಿ ಸುಖದಿಂ[ರ್ಪ್ಪ]ನ್ನೆಗಂ ॥

ಮ ॥ ನಭದೊಳ್ಪೂವುಳೆ ಭೂಮಿಯೊಳ್ಮರತಕಂ ದಿಗ್ಭಿತ್ತಿಯೊಳ್ದೇವದುಂ
ದುಭಿನಾದಂ ಭುವನತ್ರಯಂಗಳೊಳನೂನಂ ವಂದನಾನಂದಕಂ ಸಭೆ ।
ಯೊಳ್ದೇವನಿಕಾಯವೊಪ್ಪುತಿರೆ ಬಂದಂ ಲೋಕನಾಥಂ ಸ್ವಯಂ
ಪ್ರಭತೀರ್ಥೇಶ್ವರನಾನೃಪೇಶ್ವರನ ರಾಜ್ಯಂ ಪೂಜ್ಯಮಪ್ಪನ್ನೆಗಂ ॥ 81 ॥

ಕಂ ॥ ಅಂತವತರಿಸಿದ ಘನದುರಿ
ತಾಂತಕನೆಱ್ತರವನಲ್ಲಿ ವನಪಾಲಕನ ।
ತ್ಯಂತಪ್ರಿಯಂ ಪ್ರತೀತ
ನ್ನಾಂತಂ ನೃಪನೆದ್ದು ಸಿಂಹವಿಷ್ಟರದಿಂದಂ ॥ 82 ॥

ಕಂ ॥ ನಡೆದೇಱಡಿಯಂ ಜಿನನಿ
ರ್ದೆಡೆಗೆಱುಗಿ ಬಳಕ್ಕೆ ಮುಚ್ಚಗೊಟ್ಟಂ ತೊಟ್ಟಾ ।
ಳ್ದೊಡುಗೆಗಳನುಟ್ಟ ದುಗುಲವು
ನಡೆಯಱ್ಪುದಾ ಮುನಿನಿವೇದಕಂಗೆ ನೃಪೇಂದ್ರಂ ॥ 83 ॥

ವ ॥ ಸೇನಾಪತಿಯಂ ಬರಿಸಿ ॥

ಕಂ ॥ ಪಡೆಯಂ ಸಾಱಲ್ವೇಳ್ದಾ
ಗಡೆ ಪುತ್ರಕಳತ್ರಮಿತ್ರಸಹಿತಂ ಮುಹಿಪಂ ।
ನಡೆದಂ ನದೀಪ್ರವಾಹಂ
ನಡೆವಂತಿರೆ ಸವುವಸರಣವಾರಾಶಿವರಂ ॥ 84 ॥

ವ ॥ ಅಂತು ಬಂದು ಪೊರಾಂತರದೊಳ್ಮಾನಸ್ತಂಭನಿರೀಕ್ಷಣಕ್ಷಣದೊಳ್ತ್ರಿಲೋಕದಯಾ
ನಗಜರಾಜನನಿಳದಾರಾಜಂ ಜೇವಾಜೀವವಿಭಾವಭಯಭೀರುಭವ್ಯಜನನಿರ್ವ್ಯಾ
ಜಶರಣಕರಣಮಂ ಯಥಾಕ್ರಮದಿಂ ಪೊಕ್ಕು, ಗಂಧಕುಟಿಯಂ ತ್ರಿಃಪ್ರದಕ್ಷಿ
ಣಂಗೆಯ್ದು ಭಗವದಭಿಮುಖನಾಗಿ ನಿಂದು ನಿಟಿಲತಟಘಟಿತಕರಪುಟಕಮುಳ
ಮುಕುಳಂ ॥

ಮ ॥ ತನುಸೌಂದರ್ಯದಿನನ್ನ ನಿನ್ನ ನೆನಲುಪ್ಪಾಚಾರದಿಂದನ್ನ ನಿ
ನ್ನ ನೆನಲ್ಪೌಧದಿನನ್ನ ನಿನ್ನ ನೆನಲಾತ್ಮೈಶ್ವರ್ಯದಿಂದನ್ನ ನಿ ।
ನ್ನ ನೆನಲ್ಸೌಖ್ಯದಿನನ್ನ ನಿನ್ನ ನೆನಲಕ್ಷೂಣತ್ವದಿಂದನ್ನ ನಿ
ನ್ನ ನೆನಲ್ಪಾರದು ನಿನ್ನನೇಂ ಪರಿಯಯೋ! ತ್ರೈಲೋಕ್ಯರಕ್ಷಾಮಣೀ ॥ 85 ॥

ವ॥ ಎಂದು ನಿಖಿಲದಿವಿಜದನುಜವಿನಮ್ರಕಮ್ರಶಿರೋಮಣಿದ್ವಿಗುಣಪಾಟಳಮಣಿಭೂಮಿ
ಭಾಗಾಭೋಗನಭಾಮಂಡಲನಂ ನಿರಸ್ತನವಸ್ತದುಸ್ತವೋವಿಸ್ತಾರನಂ ಪ್ರಾತಿ
ಹಾರ್ಯಾಷ್ಟಕಾವಿರ್ಭೂತಪ್ರಭಾತಿವಿಳಸಿತಾಂಗಪ್ರಭನಂ ಸ್ವಯಂಪ್ರಭಜಿನೇಂ
ದ್ರನಂ ಸ್ತುತಿಯಿಸಿ ಬಳಿಯಂ ತದನುಮತೋಪವಿಶದಶೇಷಪರಿಜನನಖಿಲವಸ್ತೂ
ತ್ಪಾದದ್ರವ್ಯವಿಳಯವಿಕಲ್ಪ ಪ್ರತಿಪಾದನ ನವಯ ನವಮುತ್ಪನ್ನಸಹಸ್ರ ರಸನಾನ
ನಾಂಬುರುಹನಿರ್ಯದ್ವಚನರಚನಾವ್ಯತನಂ ಗಣನಾಥನಂ ಗುರುಭಕ್ತಿಪೂರ್ವ್ವ
ಕಂ ವಂದಿಸಿ ಧರ್ಮ್ಮಮಂ ಕೇಳ್ದ ನವುಪಜಾತನಿರ್ವ್ವೇಗಪರಂ ಪರಮೇಶ್ವರ
ದೀಕ್ಷೆಯಂ ಸ್ತಿಮಿತಾಸಾಗರಂ ಕಯ್ಕೊಂಡು ॥

ಉ ॥ ಮುಕ್ತಿಯೊಳಾದ ನಂಬುಗೆ ಮನಂಬುಗದಲ್ಪಸುಖಾಶೆಗೆಂಬ ಲೋ
ಕೋಕ್ತಿಯಿನಕ್ಕಟಾ! ಸ್ತಿಮಿತಸಾಗರನರ್ಥಿಯೊಳಿಂದು ವಂದನಾ ।
ಭಕ್ತಿಗೆ ವಂದನಂ ಭುಜಗನಾಯಕನಂ ನಡೆನೋಡಿ ತತ್ಸುಖಾ
ಸಕ್ತಮನಂ ಪರಾಸು ಫಣಿನಾಥತೆಯಂ ಮುನಿನಾಥನೆಯ್ದಿದಂ ॥ 86 ॥

ಕಂ ॥ ಅಪರಾಜಿತನಿತ್ತ ಪರಂ
ತಪನ ತಪಶ್ಚರಣಮೊಂದೆ ಪೊಱಗೆನೆ ನಿರ್ವೇ ।
ಗಪರಾಯಣಂ ಮನಂಗೊಂ
ಡು ಪವಿತ್ರಶ್ರಾವಕವ್ರತಂಗಳೊಳೊಣರ್ದ್ದಂ ॥ 87 ॥

ವ ॥ ಅವಾವುವೆನೆ ॥

ಕೊಲೆಯೊಳ್ಪೊರೆಯಿಲ್ಲದ ಪರ
ಲಲನೆಗೆ ಬಗೆಗುಡದ ಕಳದ ನೆಱೆ ಪುಸಿಯುದ ಕಾ ।
ತರಿಸಿ ವಿಷಯಂಗಳಂ ಪಂ
ಬಲಿಸದ ಗುಣನೈದಣುವ್ರತಂ ಜಿನಮತದೊಳ್ ॥ 88 ॥

ದೆಸೆಗಳನೆ ಮೇರೆಯಂ ನಿಯ
ಮಿಸಿದಲ್ಲದೆ ನಡೆಯದವಿತಭೋಗವನುಪಭೋ ।
ಗಿಸದನ್ಯಪಾಶದಂಡಮ
ನೊಸೆದೀಯದುದಿದು ಗುಣವ್ರತತ್ರಯಮಕ್ಕುಂ ॥ 89 ॥

ತೀವ್ರೋಪವಾಸಮುಂ ದಾ
ನವ್ರತಮುಂ ನಿಖಿಲನವತೆಯುಂ ಸಲೆ ಸನ್ಮಾ ।
ಸವ್ರಜನಮುಮೆಂಬಿವು ಶಿ
ಕ್ಷಾವ್ರತಮಿದು ನಾಲ್ಕ್ಕತೆಱನನೂನಾಗಮದೊಳ್ ॥ 90 ॥

ಬಲದೇವನುದರದೊಳ್ಪಲೆ
ನೆಲಸಿದುವಿವು ನೆಱೆಯೆ ವಾಸುದೇವನ ಮನದೊ ।
ಳ್ನೆಲಸವೆ ಹಿವರ್ಕರಕಿರಣಂ
ನೆಲಸದವೊಲ್ಪ್ರಜಸಿಬಿಡಕೋಶೋದರದೊಳ್ ॥ 91 ॥

ತ್ರಿದಶಮಹೀಶ್ವರಖೇಚರ
ನದಸ್ಸುರೋರಾಜಾಕರಾಬ್ಜಬಂಧುಗೆ ಮುದದಿಂ ।
ಪದೆದೆಱುಗಿ ಹಲಧರಂ ತ್ರಿಃ
ಪ್ರದಕ್ಷಿಣಂಗೆಯ್ದು ಸೇನೆಗೊಂಡಘಜಯದಿಂ ॥ 92 ॥

ಕ್ಷಿತಿಪಾಗ್ರಣಿ ನಿಜಜನಕ
ಮತಮುಂ ಜಿನತತ್ವದೇಶಮುಂ ಪೊದ್ದಿ ವಿಪಾ ।
ಮೃತದವೊಲೆರ್ದೆಯೊಳ್ನಿಲೆ ತ
ಮ್ಮತೀರ್ವ್ವರುಂ ಸಮವಸರಣದಿಂ ಪೊರಮಟ್ಟರ್ ॥ 93 ॥

ವ ॥ ಅಂತು ಪೊರವಮಟ್ಟು ತಂತವ್ಮ ವಾಹನಂಗಳನೇಱಿ ಪರಿಜನಂಬೆರಸು ಯೂಥ ಪತಿ ಪೊಱಗಾದ ಕರಿಕಳಭಸ್ಥಿತಿಯಿಂದಂ ವ್ಯಗಪತಿ ಪೊಱಗಾದ ಕಿಶೋರಕೇ ಸರಿವಿಧಿಯಿಂದಂ ರಾಜಹಂಸಂ ಪೊಱಗಾದ ಯುವರಾಜಹಂಸಪ್ರಕಾರದಿಂ ಬಂದು ಪತಿವಿಯೋಗದಿಂ ನಿಜಜನನಿಯರನೆ ಪೋಲ್ತು ಪ್ರಸಾಧನರಹಿತೆಯುಂ ನಿರಾನಂದಜನೊವೇತೆಯುಮವಮಾನಿತಹಪಿೋರ್ತ್ಕರ್ಷೆಯುಮಾಗಿರ್ದ್ದ ತನ್ನನ್ನ ಯರಾಜಧಾನಿಯನನುಜನಮೇತನಪರಾಜಿತನೆಯ್ದುವಂದು ॥

ಕಂ ॥ ಕೃಕರಾಗಂ ವಿಗತಮನಃ
ಪ್ರಸರತೆಯಿಂ ಕಣ್ಣ ನೀರ್ಗ್ಗಳಿಂ ತೀವಿ ನಿರಂ ।
ಕುಶಶೋಕಪರವಶಂ ಚಿ
ತಿಸೇಷನಿಜಜನಕನಿಳಯವುಂ ವಿಭು.ವೊಕ್ಕಂ ॥ 94 ॥

ವ ॥ ಅಲ್ಲಿ ತನ್ನಂ ಕಾಣಲೊಡನಿವ್ಮಡಿಸಿದ ಶೋಕದವಾನಲನೆರ್ದೆಯೊಳೊಪ್ಪಿಳ್ಮರದ ಕಿಚ್ಚ್ಚಿನಂತಳುರೆ ತಳಮಳಗಾಗಿ ಸೈರಣೆಗೆಟ್ಟು ಬಾಯಳಿದಳುತುಂ ಪಳಯಿಸವ ಮಾತೃವರ್ಗ್ಗಕ್ಕೆಱಗಿ ಬೊಡವಮಟ್ಟು ಕುಳ್ಳಿರ್ದ್ದು ಸಂತೈಸಿ ॥

ಕಂ ॥ ಪರಮಾರ್ಥಂ ಪರಿಪಾಲನ
ಕರದಿಂದಪರಾಜಿತಾಬ್ಜವಿತ್ರಂ ಕಳೆದಂ ।
ನರಪತಿವಿಗಮದೊಳೊಡನೊಗೆ
ದರಸಿಯರ ಮುಖಾಬ್ಜಶೋಕಹಿಮಜಲಲವಮಂ ॥ 95 ॥

ವ ॥ ತದನಂತರಂ ನೈಮಿತ್ತಿಕನಿರೂಪಿತಶುಭದಿನಮುಹೂರ್ತದೊಳ್ ॥

ವೃ ॥ ಕಮಲಾಲಂಕರಣೈಕಕಾರಣನುದನ್ವದ್ದೇಷ್ಟಿತೊರ್ವೀಭರ
ಕ್ಷಮನೆಂದನ್ವಿತ ಮಂತ್ರಿವರ್ಗ್ಗನೊಡನರ್ದ್ದಾಳೋಚದಿಂದೀಯೆ ರಾ ।
ಜ್ಯಮನಿಂದ್ರಾಕೃತಿ ಸೀರಪಾಣಿ ಮಹಿಮಾವಷ್ಟಂಭದಿಂ ಸಂಹಪೀ
ಠಮನಂದೇಱಿದನುತ್ಸವೋದಯಕರಂ ಸಾಜನ್ಯಕಂದಾಂಕುರಂ ॥ 96 ॥

ಗದ್ಯ ॥ ಇದು ಜಿನೇಂದ್ರಚರಣ ಸರಸೀರುಹ ಶಿಲೀಮುಖಾಯಮಾನ ಶ್ರೀಮದುಭಯಕವಿ ಚಕ್ರವರ್ತಿನಿರ್ವರ್ತಿತಮುಮಮ್ಮವಮನಭಕ್ತಾಭಿಧಾನವಿದ್ಯಾನಿಧಾನಮುಮಲ್ಲ ಪಾರ್ಯ ತದನುಜಾತಾಭಿಜಾತ ಸಾರಸ್ವತಪುನ್ನಮಾರ್ಯಕಾರಿತಮುಮಪ್ಪ ಪುರಾಣ ಚೂಡಾಮಣಿಯೊಳ್ ಪ್ರಥಮಾಶ್ವಾಸಂ ॥

ದ್ವಿತೀಯಾಶ್ವಾಸಂ.

ಕಂ॥ ಶ್ರೀರಮಣೀರಮಣೀಯಂ
ಸೀರಾಸ್ತ್ರಂ ನಿಂದನಾಧಿರಾಜ್ಯದೊಳವನೀ ।
ಧಾರಣನನಂತವೀರ್ಯ್ಯನ
ಪಾರಬಲಂ ಯೌವರಾಜ್ಯಪದದೊಳ್ನಿಂದಂ ॥ 1 ॥

ಕುಂದದಳಚ್ಛವಿ ಕುವಯುದಾ
ನಂದನನಪರಾಜಿತಂ ಪ್ರಸನ್ನಂ ಶಿಖರಾಜಂ ।
ದಲಿನೆ ನಂದು ಪರಿಪೂ
ರ್ಣೇಂದುವಿಲಾಸದಿನದೇಂ ಪೊದಳ್ದೊದವಿದನೋ ॥ 2 ॥

ಅನುಜಂ ರಿಪುದುಸ್ಸಹತೇ
ಜನನುವಶಂ ತಾನಾಗಿ ನಡೆಯುತಿರೆ ಶಾರದನೂ ।
ತನದಿನಪನಂತೆ ಸೊಗಯಿಸಿ
ದನವುಲಕವುಲಾಭಿವೃದ್ಧಿಯಿಂ ಬಲದೇವಂ ॥ 3 ॥

ವಿಲಸಿತಗುಣಗಣದಿಂ ನಿರ್ಮ್ಮ
ಲತನುವಿಂ ಗೆಲ್ದು ಬೀಜದಿಂ ಬೆಳಸೆಂತ ।
ಗ್ಗಳವುಕ್ಕುಮಂತೆ ಗುರುಗ
ಗ್ಗಳವಾದನಿದೇಂ ಸುಪುತ್ರನೋ ಬಲದೇವಂ ॥ 4 ॥

ಪ್ರವಿಮಲವುತಿಗನಿತುಂ ರಾ
ಜವಿದ್ಯೆಗಳ್ನೆಱೆಯವವುಲಕೀರ್ತ್ತಿಗೆ ದಶದಿ ।
ಗ್ವಿವರಂ ನೆಱೆಯನ್ವು ಹಲಧರ
ನವೊಲಱಿವಿನ ಜಸದ ಪವಣನೆಯ್ದಿದರೊಳಿರೇ ॥ 5 ॥

ಸಾರಗುಣಂ ತದ್ರಾಜಕು
ಮಾರನೊಳುಳ್ಳನಿತು ಪೆಱರೊಳಿಲ್ಲೆಂತೆನೆ ವುಂ ।
ನೀರೊಳ್ನಿಲನುಗುವುಲ್ಲದೆ
ನೀರೊಳ್ನಿಲನುಗುಮೆ ಸಾರರತ್ನಾವಳಿಗಳ್ ॥ 6 ॥

ಆದರದಿನರ್ತ್ಥಶಾಸ್ತ್ರವು
ನೋದಿಯುವುಪರಾಜಿತಂಗೆ ದಯೆ ವುನದಿನದೇಂ ।
ಪೋದುದೆ ನಿಜಸ್ವಭಾವವಂ
ದಾದೆಡೆಯೊಳ್ಮಳ್ಳವಱಿಗುವೆಂಬುದುವುಂಟೆ! ॥ 7 ॥

ಕಂ ॥ ಕುಂಭದ್ವಿಪಲೀಲಾನ
ಸ್ತಂಭಂ ಲಕ್ಷ್ಮೀಕರೇಣುಗೆನಿಸಿದುದು ಭುಜ।
ಸ್ತಂಭಂ ಲಕ್ಷ್ಮೀಪ್ರಾಕಾ
ರಂ ಭುವನಕ್ಕೇಂ ಬಲಸ್ಥನೋ ಬಲದೇವಂ ॥ 8 ॥

ಗಜಘಟೆಗೆ ನಾಥನಾಗಿಯು
ಮಜಾತವದನಹಿತಸಿಂಹನಾಗಿಯುಮಾರ್ಗ್ಗಂ।
ನಿಜದಿಂ ಕ್ಷ್ಮಾಪರನುಮುಂ
ಗಜನಾಗಿಯುಮುಮಾನುಷಂ ಹಲಹಸ್ತಂ ॥ 9 ॥

ಬಲದೇವನಖಿಲರಿಪುಕುಲ
ವಿಲಯಾನಲನಾತ್ಮಕುಲಗಮುಜ್ವಲಗಗನ।
ಸ್ಥಲಖರಕರಂ "ಸುಪುತ್ರಃ
ಕುಲದೀಪಕ"ನೆನಿಸಿ ನೆಗಳ್ದನಖಿಳಾವನಿಯೊಳ್ ॥ 10 ॥

ಅನುಜಂ ನಾಮಾಕ್ಷರದಿಂ
ದನಂತವೀರ್ಯಂ ಪರಾಕ್ರಮುಕ್ರಮದಿಂ।
ತನ್ನನೆ ತಾನೆ ಪೋಲ್ದಮೆಂಬಿನ
ಮನಂತವೀರ್ಯಂಗನಂತವೀರ್ಯತೆ ಸಾರ್ಥಂ ॥ 11 ॥

ಈ ಭೂಮಿಗೆ ಮಿಗಿಲಾದೆ
ನ್ನೀಭೋಗಮೆ ಭೋಗವೆಂಳೆಗೆ ಕೀಳ್ಪಟ್ಟ ಫಣೀಂ।
ದ್ರಾಭೋಗಂ ಭೋಗವೆಂ ಪೆಱ
ತೇ ಭೋಗಂ ಪೋಗಿನೆಂಬನಂಬುಜನಾಭಂ ॥ 12 ॥

ಧರಣಿಯ ನವಯುರದಿಂದಮೆ
ಪರಿಪಾಲಿಸಲೆನ್ನ ಭುಜನೆ ಸಾಲ್ವುದು ಹಸ್ತ್ಯ।
ಶ್ವರಥಪದಾತಿಬಲಂ ನೃಪ
ಪರಿಕರವೆಂಬಲ್ಲಜಠರನೇಂ ಮೆಯ್ಗಲಿಯೋ! ॥ 13 ॥

ಭೃಂಗಯಮುನಾ ನಭಶ್ಯಾ
ಮಾಂಗಂ ಹರಿ ಸಿರಿಗಿರಲ್ಕೆಮಾಡಿದ ಛಾಸ್ವ।
ಜ್ಜಂಗವುಮಹೇಂದ್ರನೀಲೋ
ತ್ತುಂಗಪ್ರಾಸಾದಮೆನಿಸಿ ಸೊಗಯಿಸಿ ತೋರ್ಕುಂ ॥ 14 ॥

ದೊರೆವೆತ್ತ ವಿಜಯವಾವೇ
ತರಭುಜದೊಳ್ನಿಂದ ಬೀರಸಿರಿಯೆಸೆವ ನೆಳಲ್।
ಸ್ಫುರಿಯಿಸೆ ಮೆಯ್ಯೊಳ್ಪೊಲ್ತಂ
ಹರಿನೀಲೋದ್ಯತ್ಪ್ರಸನ್ನಮಣಿದರ್ಪಣಮುಂ ॥ 15 ॥

ಬಂಹಿಮುವತ್ಪಂಜರ ಶಿಕ
ಸಿಂಹಂಗಳೊಳಾದ ಬಾಳಕೇಳಿಯು ಕೆಳೆಯುಂ ।
ಬೃಂಹಿತರಿಪ್ರುಂತಿಘಟಾ
ಸಂಹರಣದಿನೇನಧೋಕ್ಷಜಂ ನೆಱಪಪನೊ ॥ 16 ॥

ಮತ್ತಂ ॥

ಪೊಱಗಣರಿವರ್ಗ್ಗವುಂ ತ
ಳ್ತಱಿದು ಗೆಲಲ್ಬಕ್ಕುರ್ವೊಳಗಣರಿಷಡ್ವರ್ಗ್ಗಂ ।
ನೆಱೆದಿರೆ ಬಾರದು ಗೆಲಲದ
ನಱಿದೀ ಬಲದೇವನಂತು ಗೆಲ್ವರುವೊಳರೆ ॥ 17 ॥

ಅಂತವರೀರ್ವರೊಳಂ ಭವ
ಸಂತತಿಯಿಂದೊಡನೆ ನಡೆವ ವೋಹಂ ವೊದಲಿಂ ।
ದಂ ತುದಿಯನೆಯ್ದೆ ಜಲರುಹ
ತಂತುವೊಲೆಡೆವಱಿಯದೊಲ್ದು ನಲೆ ಪಲಕಾಲಂ ॥ 18 ॥

ವ ॥ ಬಂದು ದಿವಸದೋಲಗದೊಳ್ಪೂರ್ವ್ವನಪೂರ್ವ್ವಂ ನಿಸೃಷ್ಟನವಗತಾರ್ಥಶಾಸ್ತ್ರ
ನಾಕೃತಿವಂತನುದಾತ್ತೋದಂತಸಂಭಾಷಣಸಮುತ್ಪಾದಿತತೋಷಣಂ ಸ್ವವಿಚಾರ
ವಿಭೂಷಣಂ ಸಪ್ತೋಪಾಯಪರಿಗೋಚರಂ ಖೇಚರಂ ಬಂದು ದೌವಾರಿಕನಿವೇದಿತ
ವೃತ್ತಾಂತನಾಗಿ ಕಂಡಪರಾಜಿತಾನಂತವೀರ್ಯರ್ಕಳ್ಗೆಱಗಿ ಪೊಡವಟ್ಟುಚಿತ
ಪ್ರದೇಶನ್ಯಸ್ತಭದ್ರಾಸನದೊಳ್ಕುಳ್ಳಿರೆ ಲಾಂಗಲಧರಂ ವಿದ್ಯಾಧರರಾಜದೂತನ ವೊ
ಗವುಂ ನೋಡಿ ॥

ಕಂ ॥ ಬಂದ ಬರವಾವುದೆಲ್ಲಿಂ
ಬಂದಿರ್ಪವದೀಯನಾವನುಮೇನಂಬುದಿದೆಂ ।
ತೆಂದೆವುಗೆ ಪೇಳ್ವುದವಿತಥ
ವೆಂದೊಡೆ ಖಚರೇಂದ್ರದೂತನಿರ್ದ್ದಂ ವಿನೀತಂ ॥ 19 ॥

ವ ॥ ವಿರಚಿತಾಂಜಲಿಪುಟಘಟಿತಕರನಿತೆಂದು ಬಿನ್ನಹಂಗೆಯ್ದಂ ॥

ಮ ॥ ವಿಭು ವಿದ್ಯಾಧರಚಕ್ರವರ್ತ್ತಿ ವಿಜಯಾರ್ದ್ಧಾದ್ರೀಂದ್ರಚೂಡಾಮಣಿ
ಪ್ರಭನುದ್ವೃತ್ತನರೇಂದ್ರಕಂಟಕದಳೀಲ್ಲೇದೈಕದಕ್ಷಾಸಿ ಭಾ
ವಿಭವದ್ಭೂತನೃಪಾಗ್ರಗಣ್ಯ ನಮರಪ್ರಸ್ಪರ್ಧಿಪುಣ್ಯಂ ವಿರೋ
ಧಿಭವಾಷ್ಟಾದಶತೀರ್ಥನಿಷ್ಠಿತ ಚರವ್ಯಾಪಾರಪಾರಾಯಣಂ ॥ 20 ॥

ಕಂ॥ ಪದನಮಿತಾಖಿಲಾರಿ ದವಿತಾರಿ ವುದೀಶ್ವರನೆನ್ನನಿಲ್ಲಿಗ
ಟ್ಟಿದನಿದನೊಪ್ಪುಗೊಳ್ವುದು ಪಸಾಯಮನಾ ಮಹಿಪಂ ಮರಲ್ದು ಬೇ ।
ಡಿದುದನೆ ರಾಗದಿಂ ಪದಿರದಟ್ಟುವುದೆನ್ನೊಡನಾನದಾವುದೆಂ
ಬುದನಱಿವಂತು ವೇಳ್ವಿನವಧಾರಿಸಿಮಿರ್ವರುಮೇಕಚಿತ್ತದಿಂ ॥ 21 ॥

ವ ॥ ಸಕಲಗಗನಚರವನಿಕಿರೀಟವುರೀಚಿವೇಚಕಿತಚರಣನಖವುಯೂಖ ನನವ
ರತನಿಪತಚ್ಚಾಮಿಕರದಂಡವುಂಡಿತಧವಳಚಾವುರಪವನಾಂದೋಳಿತದುಕೂ
ಲಾಂಶುಕಾಂತ ನನಂತಕಾಂತವ್ಯೋವುಚರಕಾಂತಾಕಟೂಹ್ಯೆಕಲಕ್ಷ್ಮ ದವಿುತಾರಿ
ವುಹಾರಾಜಂ ವ್ಯಾಘರಾಜಾಸನಾಸೀನನೊಡ್ಡೋಲಗಂಗೊಟ್ಟರೆ ನೈಣಶಾರೀರಗೀತ
ವಿಶಾರದಂ ನಾರದನಭ್ರಪಥದಿನವನಿಗವತರಿಸೆ ಕಂಡು ಪವಮಾನವುರ್ಗದಿಂದವ
ನಿತಳದೊಳಡಿಯಿಡದಲ್ಲಿಂವುನ್ನವಿದಿರೆದ್ದು ಭಕ್ತಿಪ್ರಸ್ಪುರಂ ವುನದೆರಕದಿ
ನೆಱಗಿದ ಗಗನಚರಾಧೀಶನಂ ಯತಿ ಪರಸಿ ಯಥೋದ್ದಿಷ್ಟ ವಿಷ್ಟರದೊಳ್ಕುಳಿ
ದ್ದು ಸ್ವಾಗತಕುಶಲಸಂಭಾಷಣಾನಂತರಂ ಪಡೆವುತುವುಂತುಗಳ್ಳಗುಳಿ ವುಂ
ತುವುಂತಾಗೆ ನಾರದನಿಂತೆಂದನೆವ್ಮ ಕಂಡುಂಕೇಳ್ದವುಱಿಯದ ವಸ್ತುಗಳಲ್ಲ
ಗಾಂಧರ್ವವೆಂಬುದೆವ್ಮ ಬಾಳವಿದ್ಯೆಯದರೊಳಿವ್ಮಂ ರಂಜಿಸುವಂ ಸತ್ಕೌ
ಶನಿಂತಿರಲಿಲ್ಲೊಂದು ಚೋದ್ಯವುಂ ಕಂಡೆನದಾವುದೆನೆ ವತ್ಸಕಾವತೀವಿಷಯದ
ಪ್ರಭಾಕರೀಪುರವನಾಳ್ವನಪರಾಜಿತನೆಂಬೊಂ ವುಹಾವುಂಡಲೀಶ್ವರಂ ತನ್ನ ತವ್ಮ
ನಂ ಯುವರಾಜನನಂತವೀರ್ಯನಂ ರಾಜ್ಯಭಾರದೊಳ್ನಿಯೋಜಿಸಿ ಸವುಸ್ತವಿಷ
ಯಸುಖವುನನುಭವಿಸುತ್ತಿರ್ಪನಾವುನೊಂದುದಿವಸವೂತನಂ ಪರಸಲ್ಕೋಗಿ
ಗೋಷ್ಠಿಯೊಳ್ಕುಳ್ಳಿರೆ ಗೊಟ್ಟಗೆಯುವೂಗೆ ॥

ಚಂ॥ ಸ್ಮರಕರವುಂತದೀಯವೃದುಗೇಯವುವುಚ್ಚಿದ ಪುಣ್ಣನೊಕ್ಕನೆ
ತ್ತರನಲಸಲ್ಕೆವೇಡಿ ನೆಱಗೊಂಡದನುಣ್ಮಿವ ಕಣ್ಣನೀರಿನಂ ।
ಕುರಿಸಿದ ವೆಯ್ಯರೋವುದೊದವಿಂದುಪಲಕ್ಷಿಸೆ ಬಪ್ಪುದಿಲ್ಲ ಬ
ರ್ಬರೆಯ ಕಿರಾತೆಯೊಟ್ಟಜೆಗೆ ಕಿನ್ನರರೊಟ್ಟಜೆಯುಂ ತರಳ್ಕೆಯುಂ ॥ 22 ॥

ವ ॥ ಅಂತೊಂದೆ ಕೊರಳೊಳಿಳ್ಕೊಳೆ ಪಾಡುವ ಬರ್ಬ್ಬರಕಿರಾತೆಯರಿಂಗೊರಲೊಳೊ
ದವಿ ಬಂದೆರ್ದೆಯುಂವುನವುನುಱೆಸೆಳೆವಿಡಿದ ಸೀಯನಪ್ಪ ಗೇಯರಸಾಬ್ಧಿಪೂರ
ದೊಳಿಳ್ಮಾಡಿ ವುಳುಗಾಡುತ್ತಂ ನಿವಿುಳಿತನೇತ್ರನುಂ ರೋವಾಂಚಕಂಚುಕಿತ
ಗಾತ್ರನುವಾಗಿರ್ದ್ದಪರಾಜಿತನೆವ್ಮ ಬಂದುದುವುನಿರ್ದ್ದುವುನಱಿಯದಿಱೆ
ಯುಂ ಕಿಱಿದು ಲೋಕಜ್ಞತೆಯೊಂದಿಪ್ಪುದಱಿಂ ರಸಭಂಗವಾಡದೆ ಗಜೋ
ನ್ಮೀಲನಂಗೆಯುದ್ದ ವಿಷಯಾಸಕ್ತಪುರುಷೇಂದ್ರಿಯಪಂಚಕಂ ಚಿತ್ರಗತರೂಪೇಂದ್ರಿ
ಯಪಂಚಕಪ್ರಪಂಚಸವೂನವುಕ್ಕುವೆಂಬಂ ಬಗೆದೆದ್ದುಬಂದೆವದಱಿಂದವೂ
ಗಾಯಿಕಾರತ್ನದ್ವಯಂ ಸರ್ವರತ್ನಭೂಜನನುಂ ಚಕ್ರವರ್ತ್ತಿಯುವಪ್ಪ ನಿನಗಲ್ಲದೆ
ಯೋಗ್ಯವುಲ್ಲೆವ್ಮಱಿವುದುವುನಿತೆ; ವುತ್ತುಳಿದುವೆವುಗೇನೆಂದಱಿಯಲ್ಬಾರದೆಂ
ದು ನುಡಿದುಖಚರೇಂದ್ರನ ವುನವುನಾವರ್ಜ್ಜಿಸಿಯುಂ ತನ್ನಂ ವಿಸರ್ಜ್ಜಿಸಿಯುಂ
ನಾರದಂ ಪೋದನಿತ್ತೆವ್ಮರಸಂ ಬರ್ಬ್ಬರೆಯುಂ ಕಿರಾತೆಯುವೆಂಬೀರ್ವ್ವರ್ಗಾ
ಣತಿಯರುವುಂ ಪೇಡಿಯಂಟ್ಟಿದನೆನ್ನ ಹೆಸರುವುವಿುತನೆಂಬುದೆಂದು ತನ್ನ ಬಂದ
ಬರವನಱಿಯೆ ಬಿನ್ನಪಂಗೆಯ್ದು ತನ್ನ ತಂದ ಪಾವುಡವುನಾನನ್ನವರ್ತ್ತಿಯು
ವುಭಿರಾವುವೂರ್ತ್ತಿಯುವುಪ್ಪನೂತ್ಯೋತ್ತತ್ತವುನ ಕೆಯ್ಯೊಳ್ಕುಡುವುದುವು

ಪರಾಜಿತಂ ಯಥೋಕ್ತಪ್ರತಿಪತ್ತಿಯಿಂ ದೂತನಂ ಬೀಡಿಂಗೆ ಪೊಗಲ್ವೋಳ್ವುದು ಮುರಸಂಗೆ ಮನೆಪೆಗ್ಗಡೆ ಮುದ್ರಾಂಕಿತಮಪ್ಪ ಪಾನುಡದನುದ್ರೆಯಂ ಕಳೆದು ನುತ್ತನಳದು ಬಿತ್ತರಿಸತೋಱನುದುಂ ॥

ಮ ॥ ನಯನಾನಂದನಮಾಗಿಯುಂ ತನುಮನಸ್ಸಂತೋಷಸಂಪಾದಿಯಾ
ಗಿಯು ಮಾಕಾರುಚಿಯಾಗಿಯುಂ ವಿಶದಸುಶ್ರೀಚಂದ್ರಿಕಾಸಾಂದ್ರಿಯಾ ।
ಗಿಯುಮಿಂದುದ್ಯುತಿ ಪದ್ಮವಂ ಕೊರಗಿಪಂತೊಡ್ಡೋಲಗಕ್ಕೆಯ್ದಿ
ವಿಸ್ಮಯಮುಪ್ಪಂತಿರೆ ಹಾರರೋಚಿ ಪಳಿಯಂ ಮೂರ್ಛಾಸ್ಪದಂಮಾಡ್ಪುದಂ ॥

ಪ ॥ ಒರಲ್ದುಕನಕಾಚಲೋಪತ್ಯಕದೊಳೊಱಗಿದ ದಿವಿಜೇಂದ್ರಕರೀಂದ್ರದಂತೆ ಚಾ
ರುಚಾಮೀಕರವೃಗೇಂದ್ರಾಸನದ ಕೆಲದ ಮತ್ತವಾರಣದೊಳ್ನಿಮ್ಮ ನಿಶ್ಚೇತನನ
ಪರಾಜಿತಮಹಾವಮಹೀಶನಿರೆ ॥

ಈಂ ॥ ತುರಿದದಿನನಂತವೀರ್ಯಂ
ಪೆರಸು ನೃಪಾಸನ್ನವರ್ತ್ತಿಗಳ್ಕೆರ್ಪೂರಾ ।
ಗರುಮಳಯರುಹವಿಮಿಶ್ರಿತ
ಕರಕಾಂಭಸ್ಸೇಕಪೂರ್ವ್ವಕಂ ಬೀಸುವುದುಂ ॥ 24 ॥

ಶಾ ॥ ನುತ್ತಿದ್ದುತ್ತವುರಾಜಯೂಥದ ಮನಕ್ಕಾನಂದಮುಪ್ಪಂತು ಯೋ
ಷಿತ್ತಾವ್ಯುತ್ಕರಿಣೀಗಣಕ್ಕೆ ಮನದೊಂದೌತ್ಸುಕ್ಯಮುಪ್ಪಂತು ಮಾ
ಡುತ್ತುಂ ಚೇತನೆ ಪುಟ್ಟಿ ಮೂರ್ಛಿತಿಳಿದೆಟ್ಟೆಂತಾನುಮೆಂತಾನು ಮೆ
ಚ್ಚತ್ತಿರ್ದ್ದಂ ಮುದದಂತಿ ನೆಜ್ಜರದಿ ನೆಚ್ಚತ್ತಿರ್ದ್ದವೊಲ್ಭೂಭುಜಂ ॥ 25 ॥

ವ ॥ ಅಂತು ಮುಚ್ಚೆಯಿಂದೆಂತಾನುಮೆಚ್ಚತ್ತು ಕದಡಿ ತಿಳಿದ ಮಾನನಸರೋವರ
ದಂತೆ ಸುಪ್ರಸನ್ನನುಮಾರ್ದ್ರಾಂತರಂಗನುಂ ವಿಕಸಿತಾಶಯಕುಶೇಶಯನುಂ ಪ್ರ
ಮೋದಿತರಾಜಹಂಸನಿಷೇವಿತನುಮಾಗಿರ್ದ್ದ ಹಲಧರನಂ ಶಾರ್ಙ್ಗಧರನುಮಾ
ಮಂತ್ರಿವರ್ಗ್ಗಮುಂ ನೋಡಿ ರಾಗಿಸಿ ಕರ್ಣಜಪದೊಳ್ಮೂರ್ಛಾವ್ಯಸಂಗಮಂ
ಬೆಸಗೊಳೆ ನೆರೆದೋಲಗಿಸುವ ಮುಕುಟಬದ್ಧರನುಚಿತಪ್ರತಿಪತ್ತಿಗಳಿಂ ವಿಸ
ರ್ಜ್ಜಿಸಿ ತತ್ಪ್ರಪಂಚಮುಂ ಸಪ್ರಪಂಚಮುಪರಾಜಿತನಿಂತೆಂದು ಪೇಳಲ್ತಗುಳ್ದಂ ॥

ಕಂ ॥ ಹಾರಮಿದನ್ಯಭವಾಲಂ
ಕಾರಮನನುಕರಿಸಿ ಮೆದ್ವಿತೀಯನ ಗತಿಸಂ ।
ಸ್ಕಾರಮನಳಿಪಿದೊಡೆನ್ನ ಕ
ರೀರಕ್ಕಿನಿತಾಯ್ತು ವೈಪರೀತ್ಯಂ ಸಭೆಯೊಳ್ ॥ 26 ॥

ವ ॥ ಈ ಖೇಚರನ ಹಾರವುಪಥ್ಯಾಹಾರದಂತೆಯುಮುಪರಿಣಾಮಿವಿಹಾರದಂತೆಯು
ಮೆನಗಿನಿತು ಜೀಗಂಪ್ರಮೋದಸಂಹಾರಮಂ ಮಾಡಿದಕಾರಣಮಿದು;—ಮೊದಲೊಂ
ಮೂಱನೆಯಭವದೊಳಮಿತತೇಜನೆಂಬ ವಿದ್ಯಾಧರರಾಜನಾಗಿ ಪುಟ್ಟಿದೆನನಂತ
ವೀರ್ಯನುಮೆನ್ನ ಮುನ್ನಿನ ತಂದೆಗೆ ಸೋದರಳಿಯಂ ಶ್ರೀವಿಜಯನೆಂಬೊನಾದ
ನೆಂದತೀತಭವವ್ಯಾಪಾರಮಂ ಪೇಳುತ್ತಮಿರೆಯಿರೆ ॥

ಶಾ ॥ ವಿದ್ಯಾಭೃತ್ತುಲಜಾತಿಸಾಧಿತನಿಸರ್ಗೋದಗ್ರಸಾಮಗ್ರಿಯಿಂ
ವಿದ್ಯಾದೇವತೆಗಳ್ನರರ್ಗೆ ನಯದಿಂ ಶ್ರೀ ಸಾಲ್ವವೊಲ್ಪುಂದದೇಂ ।
ಚಕೋರ್ದ್ಯಂ ಸಾರ್ದ್ದವೋ! ತವುಮ್ಮತೀರ್ವ್ವರುವನೀಗಳ್ ''ಸಪ್ತ ಭಿಜ್ಞ್ಯಾಯತೇ
ವಿದ್ಯಾ'' ಯೆಂಬುದು ತಪ್ಪದಾಯ್ತೆನೆ ತಗುಳ್ದಿಂತೀವುಹೀವುಂಡಲಂ ॥ 27 ॥

ವ ॥ ಅಂತು ವುನ್ನಿನ ತವ್ಮ ವಿದ್ಯಾಧರರಾದಂದಿನ ವುಹಾವಿದ್ಯೆಗಳ್ಮನ್ನೆರಪಿದಗಣ್ಯ
ಪುಣ್ಯಂ ಪುಣ್ಯವಂತನಂ ಪೊದ್ದ್ರ್ದವಂತಾನುಂ ವುಂ ಪೂಳ್ದ ನಿದಾನಂ ಸುಕೃತ
ವುನಂಗೆ ಕೊಳಪಂತಾನುಂ ಸವುಸಿಸೆ ವಜ್ರವುಂ ವುನೆದಂತೆ ತಣ್ಪು ವುನದೊ
ಳ್ಕೊಂಪುಳಿವೋಗೆ ವಾನುದೇವಂಬೆರಸು ॥

ವಂ ॥ ದಿಗಿಭೇಂದ್ರಾಜಿಗೆ ತನ್ನ ನಿರ್ಮಲಯಶೋರಾಜೀವರಾಜಂ ನೊಗಂ
ಬುಗೆ ನಾಲ್ಕುಂ ನೃಪವಿದ್ಯೆಯೊಂದುಬಲದಿಂ ಪಂಚಾಂಗವಂತ್ರಂ ವುನಂ ।
ಬುಗೆ ಜೇರೆಂದೆಡೆಗಾಣದುದ್ಧತರಿಪುಶ್ರೀಕಾಂತೆ ತನ್ನಂ ಕರ
ಣ್ಪಿಗೆ ಪೊಕ್ಕಂ ಯುತವುಂತ್ರಿ ವುಂತ್ರಗೃಹವುಂ ಸೌಜನ್ಯಕಂದಾಂಕುರಂ ॥

ಕಂ ॥ ಶ್ರೀಜಾಯಾವಲ್ಲಭ ನಪ
ರಾಜಿತನಯವಿನಯಗುಣನಿದಾನಂ ಬುಧಸಾ ।
ವೂಜಿಕವುತವುನೆ ಪೇಳ್ದ್ದ
ವಿರಾಜಿತವುನನಡರೆ ತೊಡರೆ ನುಡಿಗುಂ ನಯವುಂ ॥ 29 ॥

ವಂ ॥ ವುನನಂದಾದವಿುತ್ತಾರಿ ಗಾಣತಿಯರಂ ಪೇಳ್ವಂದದಿಂದಟ್ಟಿ ದೂ
ತನನಿಂತೀತನನೊಯ್ಯನೆವ್ಮೊಳಗನೇನಾರಯ್ವನೋ? ಹಾರವುಂ ।
ತನಗಾಂತಾವುದು ಕಜ್ಜವುಾಗಳದರಿಂದಂ ನಿವ್ಮನಿವ್ಮೊಂದು ಚೇ
ತನೆಯೊಳ್ಪಟ್ಟಿದ ಕಾರ್ಯಬೀಜವುನದಂ ನೀತಿಜ್ಞರಿರ್ಪೇಳರೇ! ॥ 30 ॥

ವ ॥ ಎಂದು ಸಚಿವೋತ್ತವುರೊಳ್ ರಾಜನೀತಿಶಾಸ್ತ್ರನಾಟ್ಯಪ್ರಾರಂಭಕ್ಕೆ ಸೂತ್ರಧಾರ
ನಾಗಿ ತತ್ಪೂರ್ವರಂಗಪ್ರಸಂಗಕ್ಕೆ ಪ್ರರೋಚನೆಯಪ್ಪ ಪ್ರಥವುಪಾತನಿಕೆಯಂ
ಪ್ರಸ್ತುತಂವಾಡಿ ವುತ್ತವೂ ದವಿುತಾರಿಯಾನುದ್ದೇಶಿಸಿ ಬಲದೇವಸಿಂತೆಂದಂ ॥

ಕಂ ॥ ಅತಿಗುಪ್ತಗಭೀರಾಲಿಂ
ಗಿತನು ವುತಿಪ್ರೌಢಗೂಢವುಂತ್ರನುವುಪ್ಪು ।
ಕ್ಷಿತಿಪನ ನೆಗಳ್ತ್ತೆಯುಂ ವಿಧಿ
ಯುತಕರ್ತವ್ಯತೆಯುವುಲ್ಲಿಯಲಲ್ಲಿದಾವಂಗಂ ॥ 31 ॥

ವೃ ॥ ಜೇಡಿದೊಡೀಯೆನೆಂದೆನಗೆ ಪಾವುಡವಟ್ಟು ವುನಕ್ಕೆ ವಂದುದಂ
ಜೇಡಿದನೋ? ಸವುರ್ಥನದನೀವನೊ! ದೈನ್ಯದ ಸಂಚಿವಾರವುಂ ।
ನೋಡಿರೆ ನಾಲ್ಕುಪಾಯವಿರೆ ಗರ್ವ್ವದಿನಕ್ಕುವೆ ಸಿದ್ಧಿ? ನಾಲ್ಕುವೊ
ಳ್ಕೂಡುಗಳಲ್ಲದೇಂ ವಾಗದೊಳಾಯ್ತೆ ಬಲಂ ದಿಗಿಭಕ್ಕೆ ವೊಕ್ಕಳಂ ॥ 32 ॥

ಕಂ ॥ ಆನೆಯುಮಗುರ್ವ್ವಾಗಿಡುಗುಮ
ದಾನಂ ಸಾಹಣಕೆ ಪುಲ್ಲನಡಕುಗುಮದಱಿಂ।
ದಾನೇತರವಭಿಮಾನ
ಸ್ಥಾನಮುಪಾಯದೊಳನೂನಮುತ್ತಮದಾನಂ ॥ 33 ॥

ಈವ ನೆವದಿಂದೆ ನಮ್ಮಂ
ತಾನಾರಯ್ಯಲ್ಕೆ ಬಗೆಪನಲ್ಲದೊಡೊಳಪೊ।
ಕ್ಕಾ ನೃಪನ ಮಂತ್ರಿ ಮಂತ್ರವಿ
ಧಾನದಿನುಯ್ಯಲ್ಕೆ ನಮ್ಮನೊಡರಿಪನಕ್ಕುಂ ॥ 34 ॥

ಆಕಸ್ಮಿಕನೃಪಕರುಣೋ
ದ್ರೇಕಕ್ಕಮಕಾಲತರುಫಲಕ್ಕಂ ವಿಬುಧಾ।
ನೀಕಂ ಬೆಳ್ಚಗುಮಬುಧನ
ದೇಕಱುಗುನೊ! ಗೂಗೆ ವೊಂಗುಮೊಂಗದೆ ರಜದಿಂ ॥ 35 ॥

ವ ॥ ಅದಱಿಂದಮರ್ತ್ಥಶಾಸ್ತ್ರದ ನಯದೊಳಂ ದ್ವಾದಶರಾಜರೊಳಂ ಸಮರ್ಥನು ವಿಭ್ಯರ್ಚಿತನುಮಪ್ಪ ವಿಜಿಗೀಷುವುಂ ವೈದ್ಯಶಾಸ್ತ್ರಸಾವಧ್ರಿಯುಂ ಸಮದೋಷನುಂ ಸಮಧಾತುವಪ್ಪ ನೀರೋಗನುಂ ಕ್ರಮಾಕರ್ತವ್ಯದಿಂ ನಯಮುಮನಾಪ್ತವರ್ತ್ತಿಯುಮನಾಸೆವಡುವರಲ್ಲರ್ದಮಿತಾರಿಯುಪ್ಪೊಡೆ ಖೇಚರಚಕ್ರವರ್ತ್ತಿಯುಮಿತವರ್ತ್ತಿಯುಮಸುರವಿಜಯಿಯುಮನೂನಮಂತ್ರಿಸಂಪನ್ನನುಮಕ್ಕುಮದಱಿಂ ಆನಾತಂಗಿನ್ನೆವಱಿಗಂ ಯಾತವ್ಯರುವಾಜ್ಞಾವಿಧಾನಸಸ್ಥಾನರುಮಪ್ಪ ನಮ್ಮೊಳಾದುದೀನಯೋಪಾಯಂ ಸವ್ಯವಹಾರಸಮಾನನುಮಪೇಕ್ಷಾಸಸ್ಥಾನನುಮಲ್ಲದಿಪ್ಪನೀಗಳಲ್ಲಿಗೇವಿಧಿಯಂ ಮಾಡುವುದೆಂದು ಪೂರ್ವ್ವಪಕ್ಷದ ಪಕ್ಷಸಿದ್ಧಿಯುವಿಸ್ತಾರಕ್ಕವಕಾಶಮಪ್ಪಂತು ನುಡಿದು ಮಾಣ್ದರನನ ನುಡಿಯಂ ಸವಿಸ್ತರಮನುವಡಿಸಿ ಸಮಸ್ತಮಂತ್ರಿನಭಾಭೂಲತಾಗ್ರಧಿತಾನೇಕೈಕಸೀತಿಬೀಜಾವಾಪವಿಜಿತಸಕಲಾರಾತಿಸಚಿವನಿರಸ್ತಸನ್ಮತಿಯೆಪ್ಪ ಸನ್ಮತಿಯಿಂತೆಂದಂ ॥

ಕಂ ॥ ನೃಪನೀತಿಶಾಸ್ತ್ರಮಂ ನೀ
ನಪೂರ್ವ್ವಮಂ ನುಡಿಯೆ ನುಡಿಯೆ ಮತ್ತದನನುವ।
ರ್ಣ್ಣಪನ ನುಡಿಗಳಾ ಪ್ರತಿಧ್ವನಿ
ಯ ಪೋಲ್ವೆಗಳ್ನಿನ್ನ ನುಡಿಗೆ ಸಮನಾದಪುವೆ? ॥ 36 ॥

ಆದೊಡವೇಂ ತ್ವದ್ವಚನ ಮ
ಹೋದಧಿಯೊಳ್ಕಱಿಪನಱಿವುದಂ ನುಡಿವೆಂ ಚಕಂ।
ದ್ರೋದಯದ ಕೆಲದ ನಕ್ಷ
ತ್ರೋದಯಮೆಸೆಯುವವೊಲೆನ್ನ ನುಡಿಯೆಸೆದಪುದೆ? ॥ 37 ॥

* * * * * *

ಸಕಲಮುಹೀಚರಖೇಚರ
ನಿಕಾಯಸೇವ್ಯತೆಗೆ ವೃದ್ಧಸೇವಿತ್ವಮೆ ಯೋ ।
ಜಕವೂದುದನಿತು ವಿದ್ಯಾ
ಪ್ರಕಾಶನಕ್ಕಾತನಂತು ನೋಂತರುವೊಳರೆ ॥ 38 ॥

ಆ ದೊರೆಯೇದೊರೆಯೊಂ ಈ
ನೇ ದೊರೆ ತದ್ದೇಶಕಾಲವೇದೊರೆಯೋ ಮಂ ।
ತ್ತೇ ದೊರೆ ತತ್ಕ್ಷಯವೃದ್ಧಿಗ
ಳೇ ದೊರೆ ತನಗೆಂದು ಮುನ್ನೆ ಪರಿಕಿಪೊದರಿಪೊಂ ॥ 39 ॥

ತಾಲುವಲುಗೆ ಜಯಂ ಜೊಂ
ಮೇಲುವ ಟೆಂಪುಗಸುವರಗನರನನೆ ವಿರಸಂ ।
ಪೇಳೆ ನಯಮಿರೆ ವಿರೋಧಿಗೆ
ಮೂಲುಂಪೊಂ ತನ್ನಮೇಲೆ ತಾಂ ಮರಗಡಿವಂ ॥ 40 ॥

ಉ ॥ ಸಾಧಿತಶತ್ರುಷಟ್ಪಲರನುಕ್ರಮದಿಂ ಚರರಂ ದ್ವಿಷನ್ನೃಪಾ
ಷ್ಟಾದಕತೀರ್ಥದೊಳ್ನಡೆಯಿಸಲ್ನಿಳೆವನ್ನಿರ್ಜಮೈರಿವಾರಸಂ ।
ಭೇದರನೂನಶೌರ್ಯವತಿಧೈರ್ಯಯುತಪರ್ವರಪಕ್ಷಕೃತ್ಯವಿ
ಚ್ಛೇದನರಾತ್ಮಕೃತ್ಯಪರಿಪಾಲನರಾ ದವಿತಾರಿಯನ್ನರಾರ್! ॥ 41 ॥

ಕಂ । ನವವಯಸನಾಗಿಯುಂ ವ್ಯಸ
ನವಿಹೀನಂ ಪೂರ್ಣನಾಗಿಯುಂ ತನುವೀಕ್ಷ್ಯೈ ।
ಕವಿಶಾರದಂ ಪ್ರಶಾಸ್ತ
ಪ್ರವೀಣವಾಗ್ವಿಭವನಾಗಿಯುಂ ಕೃತವಂತ್ರಂ ॥ 42 ॥

ಓಳಿಯೊಳಿರ್ದ್ದ ಮುಹೀಭೃ
ನ್ಮಾಳೆಯೊಳಿಸೆದಾನತಾರಿ ಸೊಗಯಿಸುಗುಂ ತಾ ।
ರಾಳಯೊಳಿಸೆವ ಹಿಮದ್ಯುತಿ
ಮೂಲಿವೊಲನಿತಿಲ್ಲದಂ ಜಿಗೀಷುಪ್ರೊ ನೃಪರೊಳ್ ॥ 43 ॥

ಒದವಿದ ರಿಪುವಂ ಸೂಳ
ಲ್ಲದಿಕ್ಕಿಗೆಲ್ದತುಳಬಲದ ಮಲ್ಲರುವೆಂಚ್ಚಾ ।
ಡಿದ ಬಿಲ್ಲುವಿರ್ದ್ದತೆಱನಿ
ರ್ದ್ದುದನಲ್ಲಿ ಪುಗುವವನವಾರ್ಯವೀರ್ಯಂ ಶೌರ್ಯಂ ॥ 44 ॥

ಆಱುಂಗುಣದೆಳೆವಟ್ಟುವ
ನಾಱುಂವುಂಡಲದ ನಾಭಿ ಷಡ್ಬಲದ ಬಲಂ ।
ಮೂಱುಂ ಸಿದ್ಧಿಯು ನೆಲೆ ನಿಲೆ
ಮೂಱುಂಶಕ್ತಿಯು ವಿಶಾಕಭೂಮಿ ದಲಾತಂ ॥ 45 ॥

ಅವಯವದಿಂದಳಗುಂ ಪಂ
ಚವಿಧಾಹಿತವರ್ಗ್ಗದುರ್ಗ್ಗ ಪಂಚಕಮುಂ ಶಾ ।
ತ್ರವಮಂತ್ರಪಂಚಕಮನೊ
ಪ್ಪುವ ತತ್ಪ್ರಭುಮಂತ್ರಶಕ್ತಿಗಳ್ತೀವ್ರಂಗಳ್ ॥ 46 ॥

ಚಂ॥ ಒಸಗೆಗಳಂದು ಬಿಟ್ಟ ಶುಕಸಾರಿಕೆಗಳ್ನಲಿವಾಲುವಾಲ್ ರಾ
ಗಿಸಿ ದಮಿತಾರಿನಾಮಪರಿಪಾಳಿಯನೋಳಿಯಿನೋದೆ ಕೇಳ್ವಕೇ ।
ಳ್ವಸಿತಪಯೋಜನೇತ್ರೆಯರತಿಪ್ರಿಯುಕಾಂತೆಯರಾಸೆವಟ್ಟು ವೀ
ಕ್ಷಿಸುವರಧೀಶ್ವರರಾಗಮನಕಾಲಮಿದರ್ದು ದಿಗಂತರಂಗಳೊಳ್ ॥ 47 ॥

ಕ್ಷಯವೃದ್ಧಿಸ್ಥಾನವಿಧಿ
ತ್ರಯಂಗಳೊಳ್ ಕ್ಷಯಮನಹಿತರೊಳ್ ಶೇಷವಿಧಿ ।
ದ್ವಯಮುಂ ತನ್ನೊಳ್ನಿಲಿಸುವು
ದೆ ಯಥಾವಿಧಿಯಿಂದವಮಾದುದಯಮುಂ ಜಯಮುಂ ॥ 48 ॥

ಕಂ॥ ಅನುಕೂಲಮಿತ್ರನನುರ
ಕ್ತನಾಯಕಾನೀಕನನುಗತಪ್ರಕೃತಿ ಚಿರಂ ।
ತನರೆನಿಪ ಚಕ್ರವರ್ತ್ತಿಗ
ಳ ನೆಗಳ್ವ ನೆಗಳ್ದೆ ತನ್ನಭಕ್ಷರಪತಿಯಾ ॥ 49 ॥

* * * * *

ವ॥ ಅಂತುಂ ಪ್ರಕೃತಿಯೊಳ್ನತ್ಯೋದಯನುಂ ಸಮಸರ್ಗ್ಗದೊಳ್ ವಿಪುವರ್ಗ್ಗದುರ್ಗ್ಗ ನಿರ್ಭೇದಿಯುಂ ಸ್ವಭಾವದೊಳ್ಪ್ರೌರವಿಚಾರಿಯುಂ ಸಹಜದೊಳ್ಬಹುಸಾಹಸರಾಸುರ ವಿಜಯಿಯುಮಮಜೇಯನುಮಪ್ಪ ದಮಿತಾರಿಗೆ ಷಾಡ್ಗುಣ್ಯದೊಳ್ ಯಾನಮುಂ ಮುಷಾಯಚತುಷ್ಟಯದೊಳ್ ದಂಡಮುಮಲ್ಲದಳಿದ ಗುಣಪಂಚಕಮುಂ ಮುಷಾಯತ್ರಯಮುಂ ದೊರೆಯಲ್ಲವು ನೀನುಂ ತನ್ನೊಳ್ ಸಮಾನಸ್ಕಂಧನೆಯಪ್ಪುದಱಿಂ ನಿನ್ನೊಳ್ಸಮಾನಗುಣಂಗಳಂ ಸಾಮಾದ್ಯುಪಾಯಂಗಳುಮನೊಡರ್ಚ್ಚಿ ತದ್ವ್ಯಾಜದಿನಂತರಂಗವೇಷಣನಿಮಿತ್ತಂ ದೂತಚ್ಛದ್ಮಪ್ರಣಿಧಿಯಂ ಗಾಯಿಸಿಕಾಪ್ತಾರ್ಥನದ್ವಾರದಿ ನಟ್ಟಿದನದಱಿಂ ನೀನು ಮಾತಂಗೆ ಸಾಮಪುರಸ್ಸರಂ ಪ್ರತ್ಯುಪಾಯನಂಬೆರಸು ಅನುಮತನುಮಾಪ್ತನುಮಧಿಗತಶಾಸ್ತ್ರನುಂ ಚತುರ ವಚನರಚನಾಪ್ರಪಂಚ ನಿತರೋಮಾಂಚಕಂಚುಕಿತ ಸಭಾಜನಶರೀರನುಮಪ್ಪ ದೂತಮುಖ್ಯನನಟ್ಟಿ ಬಳಿಯಂ ನೆಳಲಂತಾನುಂ ತಾನಾಡುವುದನಾಡುವುದೆಂದು ವಚನಸಂಕ್ಷೇಪಮುಮನಱಿಯೆ ನುಡಿದು ಮಾಣ್ದ ಸನ್ಮತಿಯು ನುಡಿಯಂ ಕೇಳ್ದು ಮುಳಿದು ಸಂವೃತಾಕಾರನುಂ ನಿಭೃತೇಂಗಿತನುಮಾಗಿ ವಕ್ಷಜನೋಪಲಕ್ಷಿತಾಕೂತನಪರಾಜಿತಾನುಜನ್ಮಂ ನುಡಿವಾಗಳ್ ।

ವೃ॥ ಸುಕಥತರಂ ವಚೋನಿಚಯಮಾರಯೆ ದುಃಖಿದವರ್ಥಸಾರ್ಥ ಮು
ತ್ಯಕುಟಿಲವಾಸ್ಥದೊಡ್ಡಭಿವಂತಂ ಕುಟಿಲಂ ಋಜು ಬಾಹ್ಯವೃತ್ತಿ ಪ।
ಕ್ರಕಲುಷಮಂತರಂಗವನಿನೆ ಮೆಲ್ನುಡಿ ಪೊಣ್ಮಿರೆ ದಂತಸಾಂದ್ರಚಂ
ದ್ರಿಕೆ ಪರಿಷತ್ಕವಿದ್ವತಿಗೆ ಕಾಂತಿಯನಾಂತುದನಂತವೀರ್ಯನಾ ॥ 50 ॥

ಕಂ॥ ಒದವಿದ ನವಜಲದಂ ಮೊಳ
ಗಿದಪುದು ನವಜಲದರುತಿಗೆ ಶಿಖಿಕಳಭವಿಂ ಕೇ।
ಗಿದಪುದೆನಿಸಿದುದು ಮುಧುರ್ಮ
ವ್ಯದು ಗಂಭೀರಂ ರಥಾಂಗಪಾಣಿಯನಾದಂ ॥ 51 ॥

ವೃ ಭಾಸ್ವರಶೋಭ ನೀನಱಿಪಿದ್ಯೆ ನುಡಿಯೊಳ್ನೃಪನೀತಸಾರಸ
ರ್ವಸ್ವವನೋದುಗಳ್ನಿನಗೆ ವಾಚಕವಲ್ಲದುದಿಲ್ಲದೀಕೆ ಪೇ,
ಳೀಸ್ವನೃಪಾಂತರಂಗವನಿದೊಂದನೆ ಭಾವಿಸಲೊಲ್ದೆಯಿಲ್ಲ? ಸಾ
ರಸ್ವತನಾಗಿ ಚಿಕೋದ್ಯಮೆನಗಂತಿದೆ ರಾಜಸಮಾನಪೂಜಿತಾ ॥ 52 ॥

ಕಂ॥ ಉದಯಿಸಿದ ಚಕ್ರವರ್ತ್ತಿ
ತ್ವದ ಮುದಮಂ ಬಂದ ದೂತನೊಯ್ಯನೆ ಮೊದಲೊ।
ಳ್ವಿದಿತಂ ಮಾಡಿದನವನಱಿ
ವುದು ನಿನಗವಂದೆನಗವುಮರವುಂತ್ರಿಗವುಱಿದೇ ॥ 53 ॥

ಅಂತಃಕಲುಷಿತನಂತ
ಶ್ಯಾಂತಂ ದಮಿತಾರಿಯೆಂಬುದಂ ದೂತವುಖೋ।
ದಂತಂಗಳಿನಱಿನ್ನುದು ವಂತಿ
ವಂತನಿದಂ ತಿಳಿದನಲ್ತೆ ಬಾಯ್ವಿಱಿದಾತಂ ॥ 54 ॥

ಆದಿಯಲಿ ದಂಡನುಡಿಗಳ
ನಾದೂತಂ ಮುನ್ನೆನುಡಿದು ಬಳಿಯಂ ಸಾವು।
ಪಾದುರ್ಭಾವಂಗೆಯ್ದುದ
ನೇ ದೊಱೆಯರುವಂಱಿಯರೆನಲದೇಂ ಪರಿಣತನೋ ॥ 55 ॥

ಇನಿವಿರಿದು ಸಭೆಯೊಳಾವನ
ಮನೋಭಿಮತವಾವುದದನೆ ವದನೇಂಗಿತದಿಂ।
ಮನದಿಂ ಮುನ್ನಱಿವನದೇ
ನನೂನಸಿಶಿತಾಗ್ರಮತಿವಿನೂತನೊ ದೂತಂ ॥ 56 ॥

ದಾನದೊಳಂ ಸಾವಂದೊಳವು
ನೂನಂ ನಿನಗರ್ಥಿ ಚಕ್ರವರ್ತ್ತಿಗವುದೆ ಚೀ।
ತೋನಿಚಿತವುಳಿದುದಂ ನೃಪ
ನೀನಱಿವೈ! ನಯವುನೊಂದೆ ವಾಳ್ಳುದೆ ಚದುರಂ ॥ 57 ॥

ಆತನುಸಿರ್ದ ದಱೊಳಿನಿಸಾ
ಕೂತವನಾಂಜಡನೆನಱಿದೆನೆಂದೊಡೆ ನೀತಿ।
ಖ್ಯಾತರಿರಗಾಧಬೋಧನ
ವೇತರಿರಱಿವವರಿರಿನಿತನಱಿಯಲಿವೇಡಾ! ॥ 58 ॥

ಇದನಟ್ಟಲೆ ನೆಟ್ಟನೆ ವೇ
ಱಿದೆಂದು ಸಾವೈಕಗರ್ಭದಂಡೋಕ್ತಿಯಿನ।
ಪ್ಪಿದುದಿದುವೆ ವೇಳೆದೇಂ ಪಡೆ
ಯದೊಡಾತನ ಮುನಿಸನಿನಿತನಱಿಯದರೊಳರೆ ॥ 59 ॥

ಗಾಣತಿಯರೀರ್ವ್ವರುಂ ವಂ
ತ್ರಾಣದಿನಗ್ಗಳವನವಳ್ವರಂ ಭಯಭರದಿಂ।
ಕ್ಷೋಣೀಶಂ ಕುಡೆ ಕೊಳ್ಳದೆ
ವಾಣಿಂ ಹಲಿಯಾಣೆ ಪರವುದೀಕ್ಷೆಯನಾಗಳ್ ॥ 60 ॥

ವ ॥ ಎಂದಿಂತು ವುಳಿದು ವಿಳಯವಿಳಸನವಿಲಗ್ನಪೌರುಷವೃತ್ತಿವಿಷಣ್ಣನಾಗಿ ಮೊಳಗಿ
ವಾಣ್ದ ವುಗಿಲಂತನಿತಂ ನುಡಿದು ವಾಣ್ದುವತ್ತವಣ್ಣನಭಿವ್ಯಾಯವುನಾರ
ಯ್ಯಲೆಂದನಂತವೀರ್ಯನುಸಿರದಿರೆ ॥

ಚಂ॥ ಈಕುಲವೃದ್ಧವುಂತ್ರಿಯ ವುತಂ ನೃಪನೀತಿಯೊಳೊಂದಿಸಿಂದುದ
ವ್ಯಾಕುಲವಿಸಿಕುವೂರನ ವುತಂ ಚಲವಂ ಪುದಿದಿರ್ದ್ದುದಿಂತಿದೇ।
ಕೈಕವಿರುದ್ಧವೆಂದುಭಯಪಕ್ಷವಿಲೋಭನದಿಂ ವಿಲೋಲಡೋ
ಲಾಕುಲವೃತ್ತಿಯಾದುದಪರಾಜಿತರಾಜ ವಿರಾಜವಾನಸಂ ॥ 61 ॥

ವ ॥ ಅಂತು ಸುಪ್ತವಿವಾನಾಚ್ಛೋದವಾನನನರೊವರೋಪವಾನಂ ನಿವಿಲಿತಲೋಚ
ನಂ ಪ್ರಸನ್ನಾರ್ದ್ರಾಶಯಂ ಕಿಱಿದುಬೇಗವುನಿರ್ದ್ದ ತನ್ನ ವುನವೆಂ ವುಧ್ಯಸ್ಥ
ವುಂತ್ರಿಯಾಗಾಳೋಚಿಸಿ ನಿಶ್ಚಯಿಸಿ ॥

ಕಂ ॥ ಅತಿಕಯವರ್ಣ ಕ್ರಮವೊಂ
ದುತೆಱಂ ಪದರಚನೆಯೊಂದುತೆಱನರ್ಥವುದೊಂ।
ದುತೆಱಂ ಬೆಡಂಗು ಜೇರೆಂ
ದುತೆಱಂ ನುಡಿಗೆನೆ ವನಕ್ಕೆ ಬರೆ ಹಳಿ ನುಡಿದಂ ॥ 62 ॥

ವು ॥ ಭುವನೈಶ್ವರ್ಯದಿನರ್ಥಶಾಸ್ತ್ರಪರಿಪಾಟೀ ಪಾಠವಾಚಾಲಪಾ
ಟವದಿಂ ಗೊಟ್ಟಿಗೆಯಲ್ತೆ ನವ್ಮ ಸಭೆಯೆಲ್ಲಂ ಜೇಯಜೇಯೆಂಬ ಕೈ।
ತವದಾದಿಚ್ಛೆಯಿನಾನಿದಂ ನುಡಿಯೆನೆನ್ನೆಂಬುಕ್ತಿಗಳ್ಮೆಚ್ಚಲ
ಪ್ಪುವೊ! ವೇಣಾಗವೊ! ವುನ್ನೆ ಕೇಳ್ದ ಬಿನುಡಿಂ ಕೈಕೊಳ್ಳಿವಾವುಂತ್ರವುಂ॥

ವ ॥ ಆಂ ವಿದ್ಯಾಧರರಾಜನಾದಂದಿನ ವಿದ್ಯಾದೇವತೆಗಳ್ಬಯ್ತಿಟ್ಟ ನಿಧಿಗಳಂತೀಭವದೊಳವೆನಗೆ ಪೆಸಕೆ ನಿದ್ದೊರೆಗಳಾಗಿ ಬಂದು ನಿಂದುವನಂತವೀರ್ಯಂಗಂತಜ್ಜನ್ಮ ವಿದ್ಯಾದೇವತೆಗಳ್ಮೊಳಗಿನ ಬಳಿಯು ಮಿಂಟಿನಂತೆ ಬಳವಳಿಯನೆ ಬಂದುವದು ಕಾರಣದಿಂದಾನುಮಿತನುಂ ॥

ಮ ॥ ಉಪಮಾತೀತವೆನಿಪ್ಪ ಗಾಣತಿಯರೊಂದಾಕಾರದಿಂ ತಾಳ್ದಿ ರೂ
ಪಪರಾವರ್ತನವೆಂಬ ವಿದ್ಯೆಯನಭಿಪ್ರಾಯಂ ವಿಯದ್ಗಾಮಿಭೂ।
ಮಿಪರೊಳ್ತೊಟ್ಟುದನಿಂತುಟೆಂಬಿನಿತನಾರಯ್ದೆಮ್ಮ ಬರ್ಪನ್ನವಾ
ತ್ಮಪುರಂ ಮುಂಡಲವೆಂಬಿವಕ್ಕೆ ನಿಮಗಲ್ತೀ ಶಿಕ್ಷೆಯುಂರಕ್ಷೆಯುಂ ॥ 64 ॥

ವ ॥ ಪೋದೆಡೆಯೊಳಗ್ಮದೀಯಕುಶಲವಾರ್ತೆಗೆ ತಲ್ಲಣಿಸಲ್ಬೇಡೆಂದು ತನ್ನ ಮನೋಹಿತ ಕಾರ್ಯನಿಶ್ಚಯವನಱಿಯೆ ನುಡಿದು ಮಂತ್ರಿಗಣದ ಮಂತ್ರಮಂ ಮೂಡಲೆಣಿಸಿ ಕುಶಾಗ್ರಿಯಮತಿಪ್ರಭಾವಂ ಬಲದೇವಂ ನಿಜಾನುಜಸವೇತಂ ಗಮನೋದ್ಯುಕ್ತನಾಗಿರೆ ತದೀಯಪ್ರಾಜ್ಯಸಾಮ್ರಾಜ್ಯಕರ್ಣಧಾರಾಯಮಾಣನುಂ ಮಂತ್ರಿಸಂದೋಹವಿಶ್ರುತನುವಪ್ಪ ಬಹುಶ್ರುತನೆಂಬ ಮಂತ್ರಿಯೆಂತೆಂದಂ ॥

ಮ ॥ ಇದೆ ಮುಂತೊೞ್ತ್ತ ಮವಶ್ಯಮಿನ್ನುಳಿದಮಾತಂ ಮುಂತ್ರದೊಳ್ಬಪ್ಪುದೇ
ವುದೊ? ವೇಳ್ದೀವ! ನಭಶ್ಚರೇಂದ್ರನೊಳಗಂ ನಿಶ್ಶೇಷಮಾರಯ್ದು ಮಾ।
ಣದೆ ತದ್ರಾಜಿತರಾಜ್ಯಲಕ್ಷ್ಮಿಯೆರಸೆಯ್ದಾತವ್ಮನುಂ ನೀನುಮು
ಭ್ಯುದಯುಕ್ಕಂ ವಿಜಯುಕ್ಕಮಿರ್ವ್ವರೆ ವಿಶೇಷಸ್ಥಾನಮುರ್ವ್ವೀಶ್ವರಾ ॥ 65 ॥

ಕಂ ॥ ಮೊದಲೊಳೆ ದೈವಜ್ಞರಿನಾ
ನಿದನಱಿದೆನಶೇಷಖಚರನಿಕರಂ ನಿನ್ನ।
ಭ್ಯುದಯದಿನಂತಿಗುಂ ಜಂದ್ರಮ
ನುದಯದಿ ನಳುಱುವವೊಲತುಳತಿಮಿರಪ್ರಸರಂ ॥ 66 ॥

ಜನಪತಿ! ಬರವೇಳ್ದ ಮೂ
ತನ ಮನಮಂ ಕೊಂಡು ದಾನನನ್ಮಾನದಿನಿಂ।
ದಿನದಿವಸವೆಂ ಬೇಡುವುದಿರ
ದನಂತವೀರ್ಯಂಗೆ ಗಗನಚರಪತಿನುತೆಯಂ ॥ 67 ॥

ಇದರ ತದನಂತರಂ ಮಾ
ಣದೆ ವಿಜಯಂಗೆಯ್ದ ನೀವೆ ತಪ್ಪುದು ವಧುವಂ।
ಚದುರುಳ್ಶೃಡೊರ್ವ್ವನಿಂ ದಳಿ
ವುದು ಮಾರ್ಬ್ಬಲಮಿರ್ಬ್ಬರಿಂದ ಮಾಗದುದುಂಟೆ ॥ 68 ॥

ವ ॥ ಎಂದಪರಾಜಿತಾನಂತವೀರ್ಯರ ಮತನೊಡಂಬಡಿಸಿಟ್ಟು ರಹಸ್ಯದೊಳ್ನಿಶ್ಚಸಿದ ಬಹುಶ್ರುತನ ಮಂತ್ರನಿಶ್ಚಯಮುಮಂ ದೂರದರ್ಶಿತ್ವಮುಮಂ ಪ್ರತಿಭಾಗುಣಮುಮಂ ಪ್ರಾಜ್ಞರುಂ ನಿರ್ಮ್ಮತ್ಸರರುಂ ಗುಣಗ್ರಾಹಿಗಳುಮಪ್ಪುದಱಿಂ ಸಚಿವ

ಸಮೂಹಂ ಮೆಚ್ಚಿ ಸಮೂಲೋಚನಗೋಚರಚರಾಚರಂಗೆ ಪರೋಕ್ಷಮೆ ಪ್ರತ್ಯಕ್ಷಮುಲ್ತೆ ಯೆಂದು ಪರಮಾನಂದದಿಂ ದಭಿವಂದಿಸೆ ನಿರ್ಜೀತಮಂತ್ರರಾದ ಮಂತ್ರಿಗಣಮುಂ ಸನ್ಮಾನಪುರಸ್ಸರಂ ಕ್ರಮಂದಪ್ಪದೆ ವಿಸರ್ಜಿಸಿ ಮಂತ್ರಶಾಲೆಯುಂ ಪೊರಮಟ್ಟು ಬಂದು ಸಭಾಭವನಮಂ ಪೊಕ್ಕು ಸಿಂಹವಿಷ್ಟರಾರೂಢನಾಗಿ ಕೋಶಾಧ್ಯಕ್ಷನಂ ಬರಿಸಿ ಕಿವಿಯೊಳ್ಪೇಳ್ವುದುಮಾತನಪಗತಾಶೇಷನಾಗಿ ಖೇಚರದೂತನಿವೇಶಮಂ ಪುಗೆ ದೂತನಾತಂಗಿದಿರೆದ್ದು ನಿಜಾಸನಾರ್ಧದೊಳ್ಕುಳ್ಳಿರಿಸಿ ಕರ್ಪೂರವಾರಿಪರಿಮಿಶ್ರಿತತಾಂಬೂಲದಾನಸಮೇತಂ ಸಂಭಾಷಿಸುತ್ತುಮಿರೆ ತನ್ನ ತಂದ ದುಕೂಲಾಂಬರವಿಲೇಪನಮೂಲ್ಯಪೂರ್ವ್ವಕಂ ॥

ಕಂ ॥ ತ್ರಿಜಗದ್ಭೂಷಣಮೆಂಬುದಿ
ದಜಾತಪೊರ್ವ್ವಿಂಶುಮೂಲಿ ಕಂಠಾಭರಣಂ ॥
ವಿಜಿತಶಶಿತಪನರೋಚಿಃ
ಪ್ರಜಂ ಪ್ರಭಾಸ್ಫುರಿತಗಗನದಿಗವನೀವಳಯಂ ॥ 69 ॥

ವ ॥ ಎಂದು ಪಟಳಕನಿಹಿತಪರಾರ್ಘ್ಯರತ್ನಾಭರಣಮಂ ಮುಂದಿಟ್ಟುದಪ್ಪೊಡೆವ್ಯಾಕರಸನನ್ವಯಾಗತಂ ಕುಲಧನಮಾಗ್ನೇಯಮದೇಯಮುಮದ್ವಿತೀಯಮುಮಿದು ನಿನ್ನ ಬರವಿಂಗಂ ಚಕ್ರವರ್ತ್ತಿಯನುರಾಗಕ್ಕಂ ತಕ್ಕುದೆಂದು ಮದೀಯನಾಥನಟ್ಟಿದನದರಿಂದಂ ಪ್ರಭುಗೆ ಪ್ರೀತಿಭಂಗಮಾಡದೆ ಕೊಳ್ವುದೆಂದು ನಿಜಕರಪಲ್ಲವದಿಂ ದೂತನ ಹಸ್ತಕಿಸಲಯಕ್ಕೆ ನೀಡುವುದುಮಾತನದಂ ಕೈಕೊಂಡು ನೀಡುಂ ಭಾವಿಸಿನೋಡಿ ॥

ಮ ॥ ಮನದೊಳ್ಸಂತಸಮುಣ್ಮೆ ಮೊಣ್ಮೆ ಮೊಗದೊಳ್ಕಯ್ಗಣ್ಮೆ ರಾಗಂ ವಿಲೋ
ಚನಮಾನಂದಜಲಾರ್ದ್ರಮಾಗೆ ವಿಭು ಮುನ್ನಾವಂಗಿದಂ ಕೊಟ್ಟನಾ ।
ವನುದಾರಂ ಪೆರಱೋಧರಾಧಿಪತಿಯಿಂ ಮತ್ತೋರ್ವ್ವರಿಲ್ಲಿಂದಱೀ
ತನಭೂತಂ ಪರಗಾಗಿ ತೂಗಿ ತಲೆಯಂ ಜೋದ್ಯಂಬಡುತ್ತಿರ್ಪ್ಪನಂ ॥ 70 ॥

ಕಂ ॥ ಕೊರಳೊಳಿಮರ್ದಿಕ್ಕೆ ಕಂಠಾ
ಭರಣಂ ಮದಧೀಶಗುಣವಿಭೂಷಣವೆರ್ದೆಯೊಳ್ ।
ಸ್ಥಿರಮಿರ್ಕೆಂದಧ್ಯಕ್ಷದ
ಕರಣಂ ಬರೆ ದೂತನೊಡನೆ ಬಂದೋಲಗದೊಳ್ ॥ 71 ॥

ವಿನಯಭರದಿಂದವೆಱಗಿದ
ನೆನೆ ನರಪತಿಗೆಱಗಿ ವಿಭು ನಿಸೃಷ್ಟಾರ್ಥನನಾ ।
ಸನದೊಳ್ಕುಳ್ಳಿರಿವೆನೆ ದೂ
ತನುಮೊನೆದು ಮಹಾಪ್ರಸಾದವೆಂದಭಿಜಾತಂ ॥ 72 ॥

ವ ॥ ಕುಳ್ಳಿದ್ದು ಕಿಱಿದುಬೇಗದಿಂ ಭಕ್ತಿಭರಾನತೋತ್ತಮಾಂಗನಿಂತೆಂದು ಬಿನ್ನವಿಸಿದನಿನಿರಿದು ಸತ್ಕಾರಮಂ ಪೆಗ್ಗಡೆತನಂಬಂದನಾವನುಂ ದೇವರ ದೊರೆಯರಾಜಾಧಿರಾಜನೆಳ್ಪಡೆಯನ್ೊದಾರ್ಯಮುಸಾಧಾರಣಮಿದೆಲ್ಲಂ ಚಕ್ರವರ್ತ್ತಿಯೊಳಪ್ಪ ನಿಮ್ಮ ನಿರತಿಶಯನಿರ್ಭರಾನುರಾಗವೆಂತೆನೆ ತಂದೆಗೆ ಪುತ್ರವ್ಯೋಹಂ ಕಳತ್ರ ಸ್ನೇಹಮಂ ಪ್ರಕಟಿಸುವವೊಲೆವ್ೊಳಪ್ಪ ಪರಮಾದರಮೆ ಪೇಳ್ಗುಂ ನಿಮಗೆ ದಮಿತಾರಿಯೊಳಪ್ಪವ್ಯವಚ್ಛಿನ್ನಪ್ರೀತಿಯುಂ ದಮಿತಾರಿಗಂ ನಿಮಗಮಿನ್ನಖಮಾಂ ಸಪ್ರೀತಿಯುಮುಂ ಕ್ಷೀರನೀರನ್ಯಾಯವುಮುಂವಮಾಡಿ ತಡೆಯದೆನ್ನಬಪ್ಪುದನುಕ್ತಸಿದ್ಧಮೆಂದು ಬೀಳ್ೊಳ್ವುದುಂ ಬಹುಶ್ರುತನಿಂತೆಂದಂ ॥

ಕಂ ॥ ಆರಸನಱಿಂದೇಂ ಮಹಾ
ಪುರುಷರತ್ನದೊಳ್ ರತ್ನಮುಂ ತಗುಳ್ದಪ್ಪುದನೊ! ಕರಂ।
ದೊರೆನೆತ್ತುವರಡುಮಿದೆ ಜೇ
ವರತ್ನಮಿಂತಜೀವರತ್ನವೆಂಬಿನಿತೆವಲಂ ॥ 73 ॥

ನೆಱೆದಿಱೆ ಗಾಂಭೀರ್ಯಮುಂ ಕಂ
ಡಱಿಯುವ ಪುರುಷಂಗೆ ಮಾಳ್ಪನೊಳ್ಸಜನತೆ ಕ।
ಣ್ಣಿಱೆದೆದುರು ಕಂಡಱಿದುಂ ಕೇ
ಳ್ದಱಿದುಂ ಮಾನ್ಯರನೆ ಖಲನುಮೇಂ ಮನ್ನಿಸನೇ ॥ 74 ॥

ಖರಕಿರಣಂ ತೀವ್ರಂ ಶೀ
ತರೋಚಿ ಜಡವಮೂರ್ತ್ತಿ ಕಲ್ಪವೃಕ್ಷಂ ಸ್ತಬ್ಧಂ।
ನಿರತಿಶಯಗುಣಂಗೀ ನೃಪ
ವರಂಗೆ ದೊರೆಯಲ್ಲದಿಪ್ಪುದೊಂದಚ್ಚರಿಯೇ ॥ 75 ॥

ವ ।. ಅದಱಿನಪರಾಜಿತಂಗೆ ಕಂಡಱಿವಱೊಳಮಱಿಯದರೊಳಂ ಗುಣಸ್ವೀಕಾರ ಪರಿತ್ಯಾಗದೊಳ್ಕೈಕರೂಪ್ಯಮಲ್ಲದನ್ಯೈಕರೂಪ್ಯಮಿಲ್ಲ ತ್ಕಸ್ವಾಮಿಗುಣವರ್ಣನ ಮೆಮ್ಮೊಂದಿಗರ್ಗ್ಗೆ ಪ್ರತ್ಯಕ್ಷದೊಳ್ತಕ್ಕುದಲ್ಲವಾದೊಡವೇನಸ್ಮನ್ಮಹೀಪಾಲಾನ್ವಯಕ್ಕಂ ದಮಿತಾರಿಮಹಾರಾಜಾಧಿರಾಜವಂಶಕ್ಕಮನಂತವೀರ್ಯಸಂಬಂಧಮುಂಟದನಱಿದು ತದೀಯಕುಲವೈದ್ಧರ್ನಿಮಿಚ್ಛರ್ಲಂ ನಿರ್ವ್ಯಹಿಸಲುಂಪೇಳ್ವರುಭಯಕುಲಸಹಾಯತ್ವಮಿತರೇತರೋಪಕಾರದಿಂ ಸಂಗತದೊಳಾದುದುಮನಲ್ಲಿಯವಯೋಧಿಕರ್ಗಳುಮಾಗಳುಮಱಿವರಾದೊಡಮಿನಿಸೆಡೆಯಾಗಿರ್ದ ಸಂಬಂಧಮುಂ ನೀನಿರ್ದ್ದೊಸೆಯಿಸುವುದನಂತವೀರ್ಯಕುಮಾರಂಗೆ ಚಕ್ರವರ್ತ್ತಿಸುತಾಪರಂಪರೆಯೊಳೀರ್ವ್ವಳನಪೂರ್ವ್ವಸರಖ್ಯಂಗೀಣವಸ್ತು ತ್ವಳಖಾಜನೆಯಂ ಕುಡಿಸುವುದು ಚಕ್ರಯುದ್ಧಕ್ಕೆ ದುಸ್ಸಾಧ್ಯಮಪ್ಪುದೊಂದು ಮಂಡಳಮುಳ್ಳೊಡವಿಮಾಯಿಯಾರ್ವರಿಂದಮೆ ಸಾಧ್ಯಮಂಕ್ಕುಮದಱಿಂ ಖೇಚರರಾಜಂಗೆ ಕೃಪ್ತಸಾಧ್ಯ

ಕ್ಕಮಿವರೀರ್ವ್ವರುಮಪಾರಭುಜಾಯುವಮಾನರೆಂಬುದನೆ ನಂಬುವುದಿಲ್ಲಿಂದಿತ್ತಿವರ
ಯೋಗಕ್ಷೇಮಮಟಿಂತಾಂತರವುಂ ನೀನೆಯಱಿವೆಯೆಂದುಬಹುಶ್ರುತನುಸಿರದಿಪ್ಪು
ದು ಮದೆಲ್ಲಮನವಧಾರಿಸಿ ದೂತನಿಂತೆಂದಂ ॥

ವು ॥ ಇದು ಮಚ್ಚಿತ್ತದೊಳೆತ್ತಮಱಿಕ್ಕೆರೆದವೋ ಲುತ್ಪನ್ನಮೂಯ್ತನ್ನ ತ
ನ್ನುದಯಪ್ರಾಪ್ತಿಗೆ ಚಕ್ರಿ ತಕ್ಕೆಡೆಗಳೊಳ್ವೈವಾಹಿತಂಕೂಡಿ ಬ ।
ರ್ದುದನಾವೇಕ್ಷಿಸುವಂ ಸಹಾಯರುಚಿ ವಿಶ್ವಾಧಾರ ನುತ್ತುಂಗಭೂ
ಭೃದಪಾರಾಂಬುಧಿವಸ್ತುಗಳ್ಬೆರೆವೋಡೀಲೋಕಕ್ಕಸಾಧಾರಣಂ ॥ 76 ॥

ಕಂ ॥ ಆವಂ ಕುಡುವೊಂ ಕಾಡಿಸುವೊ
ನಾವೊಂ ಕಾಡೆ ಪಡೆವನಾವೊನೀರ್ವ್ವರುಮೇಕೀ ।
ಭಾವದೆ ನಿಲಿ ನಿಮ್ಮೊಳಗಿಸಿ
ತಾವುದು ಭೇದಕ್ಕೆ ಪಕ್ಕುಸೆರತೇಂ ನೃಪತೀ ॥ 77 ॥

ಮ.ಸ್ರ॥ ಮೊದಲೊಳ್ಪೊಣ್ಮಿಂದುಂ ಕಜ್ಜಕ್ಕಧಿಪನ ಬೆನದಿಂ ಬಂದು ಜೇರೊಂದುಂ ಕಜ್ಜ
ಕ್ಕಿದನೀಗಳ್ಗೊಟ್ಟಗೆಯ್ವಂದನುಚಿತಮೆನಗಿನ್ನೀಕಾವಾರಂಗೆ ಲಕ್ಷ್ಮೀ ।
ನದನಂಗಾಕಸ್ಮಿಯಂ ವುಂಕೊಡಿಸುವೆನದಸಿಲ್ಲಿರ್ದ್ದ ಪೂಣ್ದಿಂ ನೃಪಂ ತ
ಕ್ಕುದನೇ ನಾಂ ಪೇಳೆ ಮಾರ್ಕೊಂಡಪನೆ ಶಿಶುಗಳಿಂ ಪೇಳೆ ಮಾರ್ಕೊಳ್ವದಾತಂ

ವ ॥ ಎಂದು ಮಾರ್ಕೊಂಡನಂ ವಿಸರ್ಜ್ಜಿಸಿ ಕಿಱಿದಾನುಂ ಬೇಗದಿಂ ॥

ಕಂ ॥ ಬಲದೇವವಾಸುದೇವರ್
ವಿಲಾಸನೀಯುಗದ ರೂಪವುಂ ನಿಜವಿದ್ಯಾ ।
ಬಲದಿಂ ಕೈಕೊಳೆ ಪರಿ ಜ
ರ್ಕ್ಕಳಿಗೊಂಡುದು ನೋಳ್ಪ ನೋಟಕರ್ಕ್ಕಳ ಮನವುಂ ॥ 79 ॥

ವ ॥ ತದನಂತರಮೆ ಬಹುಶ್ರುತವುಂತ್ರಿವುಂತ್ರರೂಪನಿಷ್ಪಾದಿತಮಾಯಾಗಾಣಿಕೆಯ
ರನವಿತಂಗೆ ತರಿಸಿಕೊಟ್ಟು ''ಇವರಪ್ಪೊಡೆ ವಿದ್ಯಾದೇವತಾತ್ಮಿಕೆಯರ್ ಶ್ರವ
ಣೀಯೆಯರಲ್ಲದನುಭವನೀಯೆಯರಲ್ಲರತ್ಯಂತರುಚಿಗಳೇಕಾಂತನಿವಾಸನಿರತೆಯರ್
ನಿರತಿಶಯಚರ್ಯಾನುಪೂರ್ವ್ವಕವುನುಗ್ರಾಹ್ಯರಾಗ್ಗರ್ವಮೆಱಗುವರಲ್ಲರಿ
ಸ್ಥಿತಿಯೊಳ್ಮದೀಯಧರಣೀವಲ್ಲಭನುಂ ಪ್ರತಿಪಾಲಿಸುವನದಱಿಂ ಯಥೋಚಿತ
ವಿಧಿಯಿಂದವೆ ಕೈಕೊಳ್ವು''ದೆಂದೊಪ್ಪಿಸಿ ಕಳುಪಿ ಮಗುಳ್ದ ಬಂದು ನಿಜ
ನೃಪರಾಜ್ಯರಕ್ಷಣದೊಳಿರ್ದ್ದಂ ದಮಿತಾರಿದೂತನುಂ ನಿಜವಿಮಾನಾರೂಢನಾಗಿ
ಗಾಯಿಕಾದ್ವಯಮುವುಂ ಬಂದೇಱುವೆನೆ ॥

ಉ॥ ಏಱೆ ವಿಮಾನಮುಂ ಕೃತಕಗಾಯಿಕೆಯುರ್ದ್ದವಳಾಭ್ರಕೂಟದೊ
ಳ್ತೋಱುವ ವಿುಂಚಿನಂತೆ ವುಗಿಲೊಡ್ಡೊಡೆದಿಟ್ಟುಗಿಯಾಗಿ ನಿರ್ಭರಂ ।
ಪಾಱೆ ಪತಾಕೆಗಳ್ಮಗುಳ್ದ ವಿುಳ್ಪಿನದಳ್ಪಿಱಿದಾಡೆ ಯಾನವೀಂ
ಕೀಱಿದುದೋ! ನಭಃಪ್ರಸೃತಿಗಟ್ಟಿಡೆಯಿಟ್ಟಿಡೆಯಾದುದೆಂಬಿನಂ ॥ 80 ॥

ಕಂ ॥ ಮನವಮನಳವಡಿಸಿ ಗರುಡನು
ಮನಿಲನುಮಂ ಜವವನುಳಿಯಿವೆಂಬಂತೆ ನಭೋ
ವನನಿಧಿಯೊಳ್ಪುದಿದುದು ಪರಿ
ವ ನಾವೆಯಂತಿರೆ ವಿಭುನವಮಾನವಿಮಾನಂ ॥ 81 ॥

ವ ॥ ಅಂತು ಪರಾರ್ಥ್ಯವುಪ್ಪ ಸ್ತ್ರೀರತ್ನವುಂ ಪೇಳ್ದಿದ ಪಾಲಿನೆ ಪೋಲ್ತು ಕೀಳ್ ಪಾಲುವ ॥

ಕಂ ॥ ಅವಿತರಯಗವುನ ಖೇಚರ
ವಿಮಾನಕೇತನದ ಕೋಳೊಳಂಬುದವುಕ್ಕಾ ।
ನವುದಯವುದಿರ್ದೊಪ್ಪುವ
ಭ್ರಮಾರ್ಗ್ಗದಿಂ ಸುರಿವ ಕರಕನೃಷ್ಟಿವೊಲಿಸಂ ॥ 82 ॥

ಆ ವಿತತವಿಮಾನವಿಟಂ
ಕಾವಳಿ ಕೊಳೆ ಪಲ್ಲದ ವುಗಿಲ ಜಲಕಣಗಣಕ್ಕೆ ।
ತ್ಯಾವಿಷ್ಕೃತಪವನಂ ನಾ
ನಾವಿಧದಿಂ ಕಳೆದುದವರ ಗವುನಶ್ರವುವುಂ ॥ 83 ॥

ವ ॥ ಅಂತಾಗಾಯಿಕಾಳಧ್ಮ ಬ್ಬ್ರಲದೇವವಾಸುದೇವಬ್ಬರೆವರೆ ॥

ಕಂ ॥ ಅವುರವ್ಯದಂಗಂ ತನ್ನಿಂ
ದವಿಂ ತಾನುಲಿದತ್ತು ಸುರರ ಸುರಿಯುದೆ ಸುರಿಯಿ ।
ತ್ತಮೃತಪ ಸರಿ ಸಂತಾನಕ
ನವೀರುವುಂದಾರಪಾರಿಜಾತನವೀತಂ ॥ 84 ॥

ಎಸೆದುವು ದಶದಿಶೆ ಪವನಂ
ಕನವಂ ಕನಗಳೆದು ವೆಲ್ಲವೆಲ್ಲನೆ ತೀಡಿ ।
ತ್ತೊಸಗೆಯುವುಮುತ್ಸವವುಂ
ಸಂತನವುಂ ಸಚರಾಚರಕ್ಕೆ ಪಿರಿದಾಯ್ತಾಗಳ್ ॥ 85 ॥

ವ ॥ ಅಂತಪೂರ್ವವುಂಗಳಾಶ್ಚರ್ಯಂಗಳಪರಾಜಿತಾನಂತವೀರ್ಯರ ಬರವನುಪಲಕ್ಷಿಸಿ ತಾವುನುಪಲಕ್ಷಿತಂವಾಡೆ ಗಗನಗವುನದಿಂ ವುನಃಪವನಜವದಿನೈದಿ ರಜತಾಚಲದ ನಿತ್ಯಾಭಿನವನವಕೂಟಕೋಟವಿಟಂಕಕವುನೀಯಶೋಭಾಲಕ್ಷ್ಮಿಯುನನ ತಿದೂರಾಂತರದೊಳ್ಕಂಡವಿಂತಂ ಕೃತ್ರಿವುಗಾಯಿಕಾವುಖಕವುಲವಿಲೋಚನಾನಂತರವಿಂತೆಂದಂ ॥

ವೃ ॥ ಗಗನಾಭಾಗವುನೆಯ್ದಿ ವೂಣ್ದುದಿದು ವುತ್ತೆನ್ನಂತೆ ಪೂರ್ವಾಪರಾ
ಬ್ಧಿಗಳಂ ವುಟ್ಟದುವಿಲ್ಲ! ಕಕ್ಕಭವನಾಧಿಷ್ಠಾನವೂಗಿದ್ದುದಾ ।
ನಗರಾಜಂ ಜಿನಚೈತ್ಯಕೋಟಿ ಗಡಿಗಳ್ತಾನೆಂದು ರೂಪ್ಯಾಶ್ಮರ
ಶ್ಮಿಗಳಂವೆಂ ನಗುವಂತುಟಾಯ್ತು ವಿಜಯಾರ್ದ್ಧಿಶ್ರೇಂದ್ರವುದ್ರೇಂದ್ರನಂ ॥ 86 ॥

ಅದಲ್ಲದೆಯುಂ ॥

ಕಂ ॥ ಈ ಗಿರಿಯು ದಕ್ಷಿಣೋತ್ತರ
ಭಾಗಂಗಳೊಳಮರಪುರಮೆ ಬೀಳ್ಪಿಟ್ಟಂ ।
ತಾಗಿರ್ದರ್ಂಬರಚರಪುರ
ಭಾಗವೆಂ ಪರಭಾಗವೆಂನಿಪುವುದ್ಯಾನಂಗಳ್ ॥ 87 ॥

ಅಳ ಮುತ್ತಾಳಯೆ! ಗಿಳಯರ
ಗಿಳಯೆ! ನವಿಲ್ಗೋಗೆನವಿಲೆ! ಸುಳದೆಸೆವನಿಲಂ ।
ಮುಲಯಾನಿಳನೆ! ಕೊಳಂ ತಿಳ
ಗೊಳನೆ! ಕುಜಂ ಕಲ್ಪಕುಜವೆಂ! ಸುತ್ತಲುಮಿದಱಾ ॥ 88 ॥

ವೃ ॥ ಎಳನೀರುಂ ಶಶಿಕಾಂತಕಾಂತಜಳವುಂ ತಳ್ಪಾಯ್ದು ಕೇಳೀವನಾ
ವಳಿಗಂ ಶಾಳವನಾಳಿಗಂ ವರಿಯೆ ಶೈಳೇಂದ್ರಾನಿಳಂ ತೀಡೆ ಬ ।
ಳ್ವಳನಿತ್ತೆಯ್ದಿ ಪೊದಳ್ದು ತಳ್ತೆಳಸಿ ವುಱುಂಕಾಲವುಂ ಕುಂದದೇಂ
ಬೆಳೆಯುತ್ತಂ ಬಳೆಯುತ್ತುಮಿರ್ಪವೊ! ಗಿರೀಂದ್ರೋಪತ್ಯಕೋತ್ಸಂಗದೊಳ್ ॥

* * * * * *

ಅಂತಲ್ಲದೆ ॥

ಕಂ ॥ ಕೆಲವಡೆಯೊಳಿಂದ್ರನೀಲೋ
ಪಲರುಚಿ ಕಾರಿರುಳ ತಿರುಳನನುಕರಿಸುವುನ್ನು ।
ಜ್ವಲಪದ್ಮರಾಗಕಿರಣಂ
ಕೆಲವೆಡೆಯೊಳ್ಪಗಲ ಬೀಜವುಂ ಪ್ರೋಲ್ತಿಕ್ಕುಂ 90 ॥

ಈನಗದ ನೆಗೆದ ಶಶಿಮಣಿ
ಸಾನುಗಳಿಂದೊಱೆದು ಪಱುವ ಬರಿಪೊನಲನಿರಂ ।
ಳ್ತಾನೆಡೆಯರಿಯದೆ ಶಿಖಿ ಸಂ
ತಾನಂ ಫಣಿಗೆತ್ತು ಕಚ್ಚಿ ಬೆಚ್ಚನೆ ಸುಯ್ದುಂ ॥ 91 ॥

ಓರೊಂದೆಡೆಯೊಳ್ ॥

ಎಸೆವ ಕಿಸುಗಲ್ಲ ತೇಜಃ
ಪ್ರಸರಂ ದಾವಾಗ್ನಿಶಂಕೆಯಂ ಮನದೊಳ್ಪು ।
ಟ್ಟಿಸೆ ಮೃಗಯೂಥಂಗಳ್ಬೆ
ರ್ಚ್ಚಿ ಸಾರವೇಂ ಜಡತೆ ತಿರಿಕರೊಡವುಟ್ಟಿದುದೋ! ॥ 92 ॥

ಹರಿನೀಳೋಪಳವುಂ ಕಾ
ಱ್ಗರಡಿಯುಮಿರೆ ನೀಳಯುಗಳವೆಂದೆಳಸೆ ನಭ ।
ಶ್ವರಯುಗಳವುದಕೆ ನಗೆಯೊ
ಳ್ಳರಿವಂತಿರೆ ಬಿರಿವುವಲ್ಲಿ ಪೊಸವುಲ್ಲಿಗೆಗಳ್ ॥ 93 ॥

ಬೀರೊಂದೆಡೆಯೊಳ್ ॥

ಒಳಗರಿಯದೆ ಪಚ್ಚೆಯ ಸಿಲೆ
ಗಳನಂಚೆಯ ಪಿಂಡು ಕಂಡು ಪಾವಸೆಗೆತ್ತ ।
ವ್ವಳಿಸಿ ಕದ್ದರ್ಕುತ್ತಮೀಂ ತಳ
ವುಳಿಗಪ್ಪುವೊ! ನಗೆ ಖಗೇಂದ್ರವಿಘುನಶತಂಗಳ್ ॥ 94 ॥

ಥಳಥಳಿಪ ಸೂರ್ಯಕಾಂತದ
ಬೆಳಗಿರುಳದು ಪಗಲಿದೆಂಬ ಭೇದವನೆತ್ತಂ ॥
ಕಳೆಯೆ ರಥಾಂಗಯುಗಂ ನಿ
ಶ್ಚಲವಿರುಳುಂ ಪಗಲುವಂಗಲದೀ ಗಿರಿವರದೊಳ್ ॥ 95 ॥

ಸ್ಫುರಿಯಿಸುವ ಮಾಣಿಕಂಗಳ
ಕಿರಣಂ ಸುರಚಾಪರುಚಿಯನಂಬರತಳದೊ ।
ಳ್ವಿರಚಿಸೆ ಕಾರ್ಗೆತ್ತು ನಿರಂ
ತರಮಿಲ್ಲಿ ಶಿಖಂಡಿತಾಂಡವಕ್ರೀಡರಿಸುಗುಮಂ ॥ 96 ॥

ಏಪೊಳ್ತುಂ ಮುಧುಪಕಳಾ
ಳಾಪನೆ ಮೃದುಗೀತಿ ಮುರ್ಮ್ಮರಧ್ವನಿ ಸಱೆ ತಾ ।
ನೀ ಪವನಂ ಲತಿಕಾಲಾ
ಸ್ಫೋಪಾಧ್ಯಾಯತೆಯನಳ್ಕಿಪ ತೀಡುಗು ವುಗದೊಳ್ ॥ 97 ॥

ಅಂಬರಚರವಿಘುನರತಾ
ಡಂಬರದೊಡನೊಡೆದ ಗುಹೆಯ ಮೂರ್ದ್ದನಿ ಕವಿಯಂ ।
ತುಂಬಿ ವುನೋಜ್ಞಾಗವುಗುರು
ವೆಂಬುದನೊಡನೆಂಬ ಶಿಷ್ಯನಂ ಪೋಲ್ತಿಕ್ಕುಂ ॥ 98 ॥

ಪೊಸವಳ್ಳಿಕಿನ ಸೆಲೆಯೊಳ್ನಿಳ
ಲಿಸೆಯೆ ವೊಗಂಬೊಕ್ಕು ಪಾಯ್ದು ಕರಿಯುಂ ಹರಿಯುಂ ।
ಪೊಸಪೋತ್ತರ್ವನಳಿಯನೆ ಪು
ಟ್ಟಿಸೆ ನೆಳಲೊಳ್ಪೊದ್ದು ಸೇದೆಗಿಡುವುವು ನಗದೊಳ್ ॥ 99 ॥

ವ್ಯಾಳವನಗಜದ ಪೋತ್ತರ್ದ
ಕೇಳಗೆ ವಿಜಯಾರ್ದ್ಧಶೈಲಪತಿ ನನೆಯಿಸಿ ತಂ ।
ದೋಳಯೆ ನಿರಿಸಿದ ಪೆಳ್ಳಯ
ಲಾಳವಿಂಡಿಗೆವೊಲಿಪ್ಪುವಿದರ ಮಡಲ್ಗಳ್ ॥ 100 ॥

ಚಂ॥ ವನಗಜಯೂಥವಂಲ್ಕೆ ನೆಲೆಗಿರ್ದಿರದೊಡ್ಡಳದೋಡುವಲ್ಲಿ ದಂ
ತಿನಿ ವೊಲೆಯೂಡೆ ನಿಂದು ನಿಜಪೋತವನಲ್ಕುಳಿನೆಯ್ದಿ ಹ ।
ಸ್ತಿನಿಯನವಜ್ಞೆಗೆಯ್ದು ಕರಿಯೂಥವನಟ್ಟುವುದಿಲ್ಲಿ ತದ್ವಶಾ
ತನಯುವಿವೋಹವುಂ ಹರಿಯ ವಿಕ್ರಮುದಾಯುವುವೇನುದಾತ್ತವೋ॥ 101 ॥

ಮತ್ತವುಲ್ಲಿ ॥

* * * * * *

ನಡೆ ನಖಮುಂ ಕೋಡುಂ ಕೊಳೆ
ಕುಡಿದಾಡೆಯುವುಗುರುವುಳಯೆ ವುಳಿಸಿಂದೆರಡುಂ ।
ಕಡುಗಡುಪಿನಂಕದಾಂತೊಡ
ಮಡಿದುನ್ನ ಗಿರಿವರದೊಳುಗ್ರಕರಿಯುಂ ಹರಿಯುಂ ॥ 102 ॥

ಮತ್ತಂ ॥

ಕಾದಿದಿರದೆಡೆಯಿಂ ಕೊಲಲೋ
ಡಿದ ಹರಿಯನದಂಟದಂತೆ ಪೊಕ್ಕಡಿಗಿಡಿ ಸಾ ।
ಚ್ಚಿರ್ದ ಮದರದನಿಗೆ ಹರಿ ನಿ.
ಲ್ಲದೆ! ನಿಚ್ಚಟಗಲಿಗೆ ಪೆಸರಕ್ಕಲಿ ನಿಂದಪನೆ ॥ 103 ॥

ವ ॥ ಮತ್ತಂ ಕೆಲವೆಡೆಯೊಳ್ ನಾಗರಕಗಗನಚರಕ್ರೀಡನಶೀಲಕುಮೂರಕಸರ್ಮಕು
ಮೂರವಚನರಚನೆಗಳಿನುಪಲಾಲನೆಗೆಯ್ದು ॥

ಕಂ ॥ ಅಪ್ಪಳಿಸಣ್ಣನನಪ್ಪಳಿ
ಸಪ್ಪಳಿಸೆಂದಿರದೆ ತನ್ಮ ತೊಡೆಯುಂ ತಳೆದಿಂ ।
ದಪ್ಪಳಿಸೆ ಪೋರ್ದು ಪಲುವಲು
ಯಪ್ಪುವು ವನಕರಿಗಳರ್ಥಿಗಂಬರಚರರಾ ॥ 104 ॥

ಅಂತುವುಲ್ಲದೆಯುಂ ॥

ವು ॥ ಕರವುಂ ವೇಲು ರದಂಗಳೊಳ್ ತೆಳ್ಪೆವು ಕರ್ಣದ್ವಂದ್ವವುಂ ತಾವ್ರಭಿ
ಕರವುಂ ಬಿಚ್ಚನೆ ಬಿಟ್ಟು ಕಣ್ಣನೆರಡಂ ನೀಳಂಬಿನುತ್ತೊಳ್ದಾಡಂ ।
ಬರದೊಳ್ನಿಂದು ಗಜಪ್ರಿಯಾಂಬರಚರಜ್ಯೇಯಯ್ಯ! ಭಾವೆಂದು ಜೇಂ
ಕರಿಪನ್ನಂ ವನವಂತಿ ಪೋರ್ದುದು ನಿಷಾದ್ಯಾರೂಢದಿಂ ಪೋರ್ವವೊಲ್ ॥

* * * * * *

ಕಂ ॥ ಕೆಲವೆಡೆಯ ತವಾಳದ ಕ
ತ್ತಲೆಗರ್ಕ್ಕವುರೀಚಿವಾಲಿ ತಲೆದೋರವು ಕ ।
ಣ್ಣೊಲದೊಳವಿರುಳೊಳೆಯ್ದಾಲಗ
ತ್ತಲೆ ಚಂದ್ರದ್ಯುತಿಗೆ ಕಾಳತಾಳೀವನದೊಳ್ ॥ 106 ॥

ಕೆಲಕೆಲವೆಡೆಯೊಳ್ಕಂಚನ
ಶಿಲೆ ಸುರಗಿರಿ ಪೆಸರೆ ಪರಿವಿುತಾರ್ಥಂ ಬಂದೇಂ ।
ನೆಲಸಿದುವೊ ಪೇಳವಿುತ
ಳ್ವಲೊಳೆನಿಪುವು ವುಂವೆುಗಿಂತು ನೋಂತಗವೊಳದೇ ॥ 107 ॥

ಅಂತಲ್ಲದೆಯುಂ ಧನದನ
ಗಂ ತನಗಿಷ್ಟದೊಡೆ ರಾಯಭೂರಿತನಂಬಂ ।
ದಂತಿಪ್ಪುವಿದರ ಕುಂಜೋ
ದ್ಯಾಂತಂ ಥಳಥಳಿಸಿ ಪೆಳಗೆ ಕುಳಿಶಾಕ್ಷಂಗಳ್ ॥ 108 ॥

ವ ॥ ಅಂತಾರ್ಚ್ಯಭೂತೋಚ್ಚಾವಚಕೋಪಚಿತಾನೇಕವಸ್ತುವಿಸ್ತಾರಪರಂಪರೋದಾರವುಪ್ಪು ॥

ಕಂ ॥ ಇದಱುಭಯಶ್ರೇಣಿಗಳೊಳ ।
ವುದಭ್ರರಜತಾಶ್ಮಕೂಟಕೋಟಿಗಳ ಪೆಱಂ ।
ಗೊದವಿ ನಿಲೆ ನೆಱೆಯೆ ಕಣ್ಗೊ
ಪ್ಪುದುವು ಸುಧಾಚ್ಛುರಿತರವ್ಯಹವ್ಯೂವಳಿಗಳ್ ॥ 109 ॥

ವ ॥ ಈ ವಿಜಯಾರ್ದ್ಧಪರ್ವ್ವತದೆಱಂಕೆಗಳೆನಿಸಿದ ॥

ವು.ಸ್ರ ॥ ಎರಡುಂವಿದ್ಯಾಧರ ಶ್ರೇಣಿಗಳೆಡೆಯೆಡೆಯೊಳ್ಪ್ರೃಸಜಕೈತ್ಯಾಳಿ ತಳ್ಪಂ
ಬರವುಂ ತಕ್ಕೈರ್ಕೆಸೆ ನಾನಾವರ್ಣಕಿರಣಗಣಜ್ಯೋತಿಗಳ್ ಜ್ಯೋತಿರಂಗ ।
ಸ್ಫುರಣಕ್ಕಾಸ್ಫೋಟಿಸುತ್ತುಂ ಪೆಳಗೆ ರಜತಶೈಲೇಂದ್ರವುನ್ನೀತಭಂಗಂ
ಗಿರಿರಾಜಂಗೊಟ್ಟಜಂಗೊಟ್ಟವೊಲೆಸೆವುದದೇಂ ದಿವ್ಯವೋ ಜೈನಗೇಹಂ ॥ 110 ॥

ಕಂ ॥ ಅವುರಾಭ್ಯರ್ಚ್ಯಂಗಳ್ಪುರ
ವಿವುಾನಪರಿವೇಷ್ಟನಾಭಿರಾವುಂಗಳನು
ಕ್ರವುದಿಂದೆಸೆದಿರ್ದ್ದುವ ಕೃ
ತ್ರಿವುಂಗಳೀ ನಿರಿಯ ಜೈನಕೈತ್ಯಾವಳಿಗಳ್ ॥ 111 ॥

ವೃ ॥ ಎನೆ ರೂಪ್ಯಾಚಲರವ್ಯಸೌವ್ಯನವಕೂಟಾಗ್ರಂಗಳೊಳ್ತೋರ್ಪ್ಪ ಕಾಂ
ಚನವರ್ಣಾಂಚಿತ ಪಂಚರತ್ನವುಯ ಶೋಭಾಭಾಸಿಗಂಭೋದವ್ಯಂ ।
ದ ನಿಕೀರ್ಣ ಧ್ವಜರಾಜಿಗತ್ಯವುಲ ಜೇತಶ್ಯಕ್ತಿಭಕ್ತಿಪ್ರಭೋ
ಧನೆಯಿಂ ಜೈನಗೃಹಾಳಿಗಂದೆಱಗಿದಂ ಸೌಜನ್ಯಕಂದಾಂಕುರಂ ॥ 112 ॥

ಗದ್ಯ ॥ ಇದು ಜಿನೇಂದ್ರಚರಣಸರಸೀರುಹಶಿಲೀವುುಖಾಯವುಾನಶ್ರೀವುದುಭಯಕವಿಚಕ್ರವರ್ತ್ತಿನಿರ್ವ್ವರ್ತಿತವುವುವ್ಯನಭಕ್ತಾಭಿಧಾನವಿದ್ಯಾನಿಧಾನವುಲ್ಲಪಾರ್ಶ್ವತದನುಜಾತಾಭಿಜಾತಸೂರಸ್ವತಪುನ್ನ ವಾರ್ಯಕಾರಿತವುವುಪ್ಪ ಪುರಾಣಚೂಡಾವುಣಿಯ ದ್ವಿತೀಯಾಶ್ವಾಸಂ ॥

*

ಕರ್ಣಾಟಕ ಕಾದಂಬರಿ.

(ನಾಗವರ್ಮಕವಿ. ಕ್ರಿ. ಶ. ಸು. 990.)

ಮಹಾಶ್ವೇತಾವೃತ್ತಾಂತಂ, ಪೂರ್ವಭಾಗಂ.

ವ ॥ ಅಂತು ಚಂದ್ರಾಪೀಡಂ ಕಿಱಿದುಂ ನಿದ್ರೆಗೆಯ್ದು ಬೆಳಗಪ್ಪುದುಮೇಳ್ದ ॥

ವೃ॥ ಧರೆಯಂ ಪೊಳ್ಪಾಗಿಸುತ್ತಂ ನಡುಗಿಸುತುಮಗವ್ರಾತವಂ ತುಳ್ಕಿಸುತ್ತಂ
ತೊರೆಯಂ ದುರ್ಗಂಗಳಂ ಪಾಳ್ಗಳಿಸುತವುಟವೀವ್ರಾತವಂ ಚೂರ್ಣಿಸುತ್ತಂ।
ನೆರಪುತ್ತಂ ನಿವ್ಮನವುಂ ನಿವ್ಮನವ ತೆವುರನೊಡಚ್ಚುತ್ತ ಮಾತ್ಮೀಯಸೈನ್ಯೋ
ತ್ಕರದಿಂದಂ ರಾಜವರ್ಗಂ ಬೆರಸಿರೆ ಪೊರವಂಟ್ಟಂ ಮಹೀಭೃನ್ಮಹೇಂದ್ರಂ ॥ 1 ॥

ದುರುಳರನೊಕ್ಕಲಿಕ್ಕಿ ವುರೆವೊಕ್ಕರ ರಕ್ಷಿಸಿ ದೇಶದೇಶದೋ
ಳರಗುವರರ್ಗೊಡಚ್ಚಿ ನೃಪಪಟ್ಟವನಾರ್ಜಿಸಿ ರತ್ನರಾಶಿಯಂ।
ನಿರವಿಸಿ ನಾಡ ನೇಪ್ಪ ನಿಜಮುದ್ರೆಯನೇರಿಸಿ ಶಾಸನಂಗಳಂ
ಬರೆಸಿ ಬುಧರ್ಗೆ ಬಿತ್ತರಿಸಿದಂ ಜಸವಂ ಯುವರಾಜಚಂದ್ರಮಂ ॥ 2 ॥

ವೃ॥ ನೆಲನೆಲ್ಲಂ ಬಲವಂದು ಗೆಲ್ದಖಿಲಧಾತ್ರೀನಾಥರಂ ತನ್ನ ದೋ
ರ್ಬಲದಿಂ ಪೂರ್ವಸಮುದ್ರತೀರದೆ ನಿವಾಸಂಗೆಯ್ದುರಂ ವ್ಯಾಧರಂ।
ಪಲರಂ ಪೊಂದಿಸಿ ತತ್ಸುವರ್ಣಪುರವಂ ಕೈಲಾಸಶೈಲಾಂತರ
ಸ್ಥಲದೊಳ್ ಶೋಭಿಸುತಿರ್ಪ್ಪುದಂ ನೃಪಸುತಂ ಕೈಕೊಂಡನುತ್ಸಹದಿಂ ॥ 3 ॥

ಕಂ ॥ ಜಲನಿಧಿಪರಿವೃತಧಾತ್ರೀ
ತಲಮಂ ಬಲವಂದು ಪಿರಿದುವಾಸತ್ತ ಬಲಂ।
ನಿಲವೇಳ್ಕುಮೆಂದು ನೃಪಕುಲ
ಲಲಾವನಂತಲ್ಲಿ ಪಲವುದಿವಸಮುಸಿದ್ದಂ ॥ 4 ॥

ವ ॥ ಅಂತಿರುತ್ತಮುದೊಂದುದಿವಸಂ ಯುವರಾಜನಿಂದ್ರಾಯುಧಮನೇಱಿ ಬೇಂ
ಟೆಯ ವಿನೋದದಿಂ ತೊಳಲುತ್ತಮಿರೆಯಿರೆ ॥

ಕಂ ॥ ಪಿರಿದಪ್ಪಾಕ್ಷೌರ್ಯಪರಂ
ಪರೆ ಸವುನಿಸಲದ್ರಿಶಿಖರದಿಂದಿಳದಾಡು।
ತ್ತಿರೆಯಿರೆ ನಿಜೇಚ್ಛೆಯಿಂ ಕಿ
ನ್ನರಮಿಥುನಮುನವನಿಪಾಲತನಯಂ ಕಂಡಂ ॥ 5 ॥

ವ ॥ ಆಗಳ್ ನವಮುಪಜಾತಕುತೂಹಲಂ ವಿಸ್ಮಯಾಕ್ಷಿಪ್ತ ಚಿತ್ತನಾಗಿ ॥

ಕಂ ॥ ಜಗದೊಳಗಪೂರ್ವವೆಂಬೀ
ಬಗೆಯಿಂ ತಾಂ ಪಿಡಿವ ತವಕದಿಂ ಭೋಂಕನೆ ಬಂ ।
ದಗಣಿತಜವವಂ ಕಿನ್ನರ
ಯುಗದ ನವಿೂಪಕ್ಕೆ ಬಿಟ್ಟನಿಂದ್ರಾಯುಧವಂ ॥ 6 ॥

ವ ॥ ಆಗಳ್ತವ್ಮೆಡೆಗೆಯ್ತುಪ್ಪುದಂ ಕಂಡದೃಷ್ಟಪೂರ್ವವಪ್ಪುದಱಿಂ ಕಿನ್ನರದ್ವಯವತಿಭೀತಿಯಿಂ ಪರಿಯೆ ॥

ವೃ ॥ ಪಿಡಿದಪನೀಗಳಾ ಪಿಡಿಯಲೆಯಿದನಾ ಪಿಡಿದಪ್ಪನೀಗಳಾ
ಪಿಡಿದನೆ! ಕಿನ್ನರದ್ವಯವುನೆಂಬಿನೆಗಂ ಬಳಸಂದು ತನ್ನಸಂ ।
ಗಡಣವರುಂ ಪರಿಗ್ರಹವುಮೆಯ್ತರಲಾಱದೆ ಪಿಂದೆ ನಿಲ್ವಿನಂ
ಕಡುಪಿನೊಳಂದು ಬಿಟ್ಟನತಿಕೀಳ್ಪದೆ ವಾಜಿಯುನಾನೃಪೋತ್ತಮಂ ॥ 7 ॥

ಮಡದಲಿ ನೂಂಕೆ ವಾಜಿ ಗರುಡಂಗವುದಿರ್ಮ್ಮಡಿ ವಾಯುವಿಂಗೆ ವುೂ
ರ್ಮ್ಮಡಿಯೆನಿಪೊಂದು ತನ್ನಜವದಿಂ ಪರಿಯಲ್ಕೆ ಮುಹೂರ್ತಮಾತ್ರದೊಳ್ ।
ಗಡವದಿನೈದುಯೋಜನವುನೊರ್ವನೆ ನಂದಿಸಿ ಪೋದನಂದು ವೆ
ರಡವಿಯೊಳಾತುರಂಗವದನರ್ಕ್ಕಳ ಬೆಂಬಳಿಯಂ ವುಹೀಭುಜಂ ॥ 8 ॥

ಕಂ ॥ ಛಲದಿಂದರಸಂ ತಾಂ ಬೆ
ನ್ನೊಳೆ ಪರಿದೆಳ್ಚಿಟ್ಟು ಪಿಡಿಯಲನುಗೆಯ್ವುದುವು ।
ಸ್ಖಲಿತಂ ವುಂದಣತಾರಾ
ಚಲಶಿಖರವುನೇಱಿ ಪತ್ತು ಕಿನ್ನರವಿಷ್ಠಾನಂ ॥ 9 ॥

ವೃ ॥ ಏಕೆ ನಿರರ್ಥಕಂ ವುಗುವಿನಂದದೆ ಕೋಟಲೆಗೊಂಡೆನಕ್ಕಟಿಂ
ತೇಕೆಯೊ ಕಿನ್ನರದ್ವಯದ ಪೆಂಬಳಿಯಂ ತಗುಳುತ್ತೆ ಬಂದೆ ನಿಂ ।
ತೇಕೆಯೊ ವುೂರ್ಖನಂತೆ ವುತಿಗಟ್ಟಿನಿದಂ ಪಿಡಿದಲ್ಲಿ ಬಪ್ಪುದೇಂ
ವ್ಯಾಕುಲನಾಗುತಂ ಪಿಡಿಯದಿರ್ದ್ದೊಡೆ ಪೇಳ್ಕಡುವೊಂದು ವಸ್ತು ವೇಂ ॥ 10 ॥

ಏನಾನೊಂದನೆ ವೂಡಿದೆಂ ವುಗುವಿನಂತೇನಾನುವೊಂದಕ್ಕೆ ಪೇ
ಳ್ವೇನೋ ಕಾತುಕದಿಂದೆ ಬಂದೆನೆನಗೀ ದುರ್ಯೋಹದುದ್ಯೋಗವಿಂ ।
ತೇನಾನೊಂದನೊಡಚ್ಚಿ ತಿಂತಿದೆನುತಂ ತದ್ಖೇದದಿಂ ವಿಸ್ಮಯ
ಧ್ಯಾನಾಧೀನವುನಸ್ಕನೊಂದಿನಿಸುಬೇಗಂ ನಿಂದನುರ್ವೀಶ್ವರಂ ॥ 11 ॥

ಅಂತುನಿಂದು ॥

ಕಂ ॥ ಪಿರಿದುಜವವುಳ್ಳದಱಿಂ
ಹರಿ ನಿವಿಷಕೆ ಪಿರಿದುವರಿಗುವುನಿತಱೊಳಿನಿತಂ ।
ತರವುನೆಡೆವರಿಗುವೊ! ಚಕ
ಚ್ಚರದಿಂ ಬಳಸಂದು ವುಱುಗಿ ಬಪ್ಪೆನ್ನ ಬಲಂ ॥ 12 ॥

ಎಂದುವುತ್ತಂ.

ವೃ॥ ತಲುಗೆಲೆಬಳ್ಳಿಯೆಂಬಿವಳು ತಿಂತಿಣಿಯೊಳ್ತುರಗಾತಿವೇಗದಿಂ
ದಲ್ಲಿಯಲೆ ಬಂದುವಿಲ್ಲ ಪಥವುಂ ಬರುತಂ ವುಗುಳ್ವಂದವೆಂತೊ ವೇ।
ಣ್ಮಲೆದುವರಣ್ಯದೊಳ್ಸುಳವನಿಲ್ಲ ನರಂ ನರದೋಱುವನ್ನನೇ
ತಲುದೊಳುನೆಂತು ಪೋವೆನೊ! ಸುವರ್ಣಪುರಕ್ಕೆನುತಂ ನರಾಧಿಪಂ ॥ 13 ॥

ವ॥ ಅನ್ತ ಚಿಂತಿಸುತನಿಪ್ಪುದುಂ—

ಕಂ॥ ವಸುಧೆಯ ಬಡಗಣದೇಶ
ಕ್ಕೆ ಸೀವೆಯೆನಿಪುದು ಸುವರ್ಣಪುರವುತ್ತಲ್ಯಾ।
ನಿಸರಿಲ್ಲದಡವಿ ಬಳಿಕ
ತ್ತಸೆವುದು ಕೈಲಾಸವೆಂಬುದಾ ನಗವಿದಿರೊಳ್ ॥ 14 ॥

ವೃ॥ ಅದಱಿಂದೋರ್ವನೆ ತೆಂಕಲಾವುದೆನುತಂ ನೋಡುತ್ತವಿಂ ಪೋಗವೇ
ಳ್ಪುದಿದಂತಲ್ಲದೆ ಬೇಱುಪಾಯವುಣವಿಲ್ಲಂತಲ್ತೆ ತಂತವ್ಯ ಮಾ।
ಡಿದುದಂ ತಾವುಣವೇಳ್ಕುವೆಂದು ಪರಿದೊಂದುದ್ವೇಗದಿಂದಂ ವುಗು
ಳ್ಚಿದನಿಂದ್ರಾಯುಧವುಂ ನೃಪಾಲತನುಜಂ ರಾಜಾಧಿರಾಜಾತ್ಮಕಂ ॥ 15 ॥

ವ॥ ಅಂತು ಕುದುರೆಯುಂ ವುಗುಳ್ಚಿ ವುತ್ತವಿಂತೆಂದಂ—

ವೃ॥ ದಿನಲಕ್ಷ್ಮೀರಸನೈಕವುಧ್ಯವುಣಿಯಾದಂ ಭಾಸ್ಕರಂ ಶ್ರಾಂತಿಯುಂ
ಘನವೂದತ್ತು ತುರಂಗವುಕ್ಕದಱಿನಾಂ ನೀರ್ದ್ದಾಣವುಂ ನೋಡಿ ವೆ।
ಲ್ಲನೆ ಸಾರ್ದ್ದಲ್ಲಿ ಬಳಲ್ಕೆಯುಂ ಕಳೆದು ಪೋಪೆಂ ಬಳಿಕ್ಕೆಂದು ವಾ
ರಿನಿವಾಸಂಗಳನಲ್ಲಿ ನಾಲ್ದೆಸೆಗಳೊಳ್ನೋಳ್ಕುಂ ವುಹೀವಲ್ಲಭಂ ॥ 16 ॥

ವ॥ ಅಂತು ನೋಡುತ್ತ ವಿುರೆಯಿರೆ॥

ವೃ॥ ಕೊಳದಿಂದಂ ತೆಗೆದೊಪ್ಪಿಕೊಂಡ ಕುವುದಾಂಭೋಜಾತಕಲ್ಹಾರಕು
ವ್ಮಲಶಾಲೂಕವೃಣಾಳಜಾಲವುನಿಡುತ್ತೀಡಾಡುತಂ ಪಾದಪಂ।
ಗಳ ಪುಷ್ಪಸ್ತಬಕಂಗಳಂ ವುಱುವುತಂ ಪೋಗಲ್ಕದೇಭಂಗಳಾ
ಗಳದೇಂ ತೀಡಿದುದೋ! ಸುಗಂಧಬಹುಳಂ ಬಂದೊಂದು ವುಂದಾನಿಲಂ ॥ 17 ॥

ವ॥ ಅಂತುನಿರೀಕ್ಷಿಸುತ್ತಂ ಬಂದ ಸುರಭಿಗಂಧವಹಸೂಚ್ಯವಾನ ಗಜಯೂಥ
ವೂರ್ಗಂಬಿಡಿದನೇಕಚಮತ್ಕಾರಿಯಪ್ಪ ಕೈಲಾಸತಟದೊಳ್ ಪೋಗೆಪೋಗೆ॥

ಕಂ॥ ಗಿರಿಶಾದ್ರೀಂದ್ರದ ಪೂರ್ವೋ
ತ್ತರದಿಶೆಯೊಳ್ಕವ್ಮರ್ಗಿಲ್ಲಳಿಅಗಿವುವೆನೆ ಕಾ।
ರಿರುಳೆಳಸಿತೆನೆ ಕಱುಂಗಿದ
ತರುಷಂಡವುನವನಿಪಾಲತನಯಂ ಕಂಡಂ ॥ 18 ॥

ವ॥ ಅಂತು ನಿರೀಕ್ಷಿಸುತ್ತಂ ಪೋಗೆಪೋಗೆ॥

ವೃ॥ ಕುಮುದರಜಂಗಳೊಳ್ಕೊರೆದು ವಾರಿಕಣಜಾಲವು ನಾಂತು ಕೂಡೆ ವಿ
ಶ್ರಮಿಸಿ ತರಂಗವಾಲಿಕೆಗಳೊಳ್ಕಲಹಂಸನಿನಾದಬಂಭ್ರವಂ ।
ಭ್ರಮರರವಂಗಳೊಳ್ಬೆರಸಿ ಮೂರುತನೊಯ್ಯನೆ ಬಂದು ತೀಡಿದ
ತ್ತಮದರ್ಶನೆದಪ್ಪಿಕೊಂಡು ಕರೆವಂತೆವೊಲಾ ವನುಜೇಂದ್ರಚಂದ್ರನಂ ॥ 19 ॥

ವ ॥ ಅನ್ತಾತರುಷಂಡವಂ ನೋಳ್ಪನ್ನೆಗವಲ್ಲಿ ॥

ವೃ॥ ಎಲೆ ತಾರಾಗಂಧರಂಕಣ್ಣಿಡೆ ಕರಗಿದುದಂತಲ್ತು! ರುದ್ರಾಟ್ಟಹಾಸಂ
ಜಲವೂಡತ್ತಲ್ತು! ಚಂದ್ರಾತಪವುವ್ಯತರಸುಕಾರವೂಯ್ತಲ್ತು! ಪೃಥ್ವಾ ॥
ಚಲವುಂಭೋರೂಪದಿಂದಂ ಪರಿಣಮಿಸಿದುದಂತಲ್ತು! ನೈರ್ಮಲ್ಯಕೋಭಾ
ಕಲಿತಂ ತ್ರೈಲೋಕ್ಯಲಕ್ಷ್ಮೀವಣಿವುಕುರವೆ ನಲ್ಬೆಲ್ವುದಾಯ್ತಬ್ಜಷಂಡಂ॥ 20 ॥

ಅದಲ್ಲದೆಯುಂ ॥

ವೃ॥ ವಸುಧೆಯ ಚಂದ್ರಕಾಂತವಣಿಭೂಗೃಹವೆನ್ನದೆ ಘೂರ್ಣಿತಾರ್ಣವ
ಪ್ರಸವನವುಗ್ರಸಿರ್ಗವುನವೂರ್ಗವಿದೆನ್ನದೆ ನೋಡೆ ಪರ್ವಿದಾ ।
ಗಸದವತಾರವೆನ್ನದೆ ಜಗತ್ತ್ರಯಸಂಚಿತಪುಣ್ಯಸಂಚಯಂ
ರಸವುಯವೂದುದೆನ್ನದೆ ನರೋವರೆವುಂ ಪೆಱುತೇನನೆಂಬುದೋ ॥ 21 ॥

ವ ॥ ಮತ್ತವುದು ತೆಕ್ಕನೆ ತೀವಿಯುವುತಿನಿರ್ಮಲತೆಯಿಂ ರಿಕ್ತವೂದಂತಿಪ್ಪು
ದಂತುವುಲ್ಲದೆಯುಂ ॥

ಕಂ ॥ ಎಸಗುವ ವುಂದಾಸಿಲನಿಂ
ಕುಸುವುರಜಂಬೊರೆದು ಪೊಣ್ಮುವಳದಱೆಗಳನೇ ।
ನಿಸೆದುದೊ! ಸುರಚಾಪಂಗ
ಳ್ಪಸರಿಸಿದಂಬರವೆನಲ್ಸರೋವರವೂಗಳ್ ॥ 22 ॥

ಪ್ರತಿಬಿಂಬದ ನೆವದಿಂ ವನ
ತತಿ ಕೈಲಗ್ರಹನಿಕಾಯತಾರಾಂಕಜಗ ।
ತ್ಪ್ರಿತಯವುನಬ್ಜೋದರನಾ
ಕೃತಿಯಂ ತನ್ನೊಳಗೆ ತಳೆದು ತಿಳಿಗೊಳನೆಸೆಗುಂ ॥ 23 ॥

ವೃ॥ ತಡಿವಿಡಿದೊಪ್ಪಿ ತೋಱುವ ತವೂಲವನಂಗಳ ವುನ್ಪೂರ್ವ ಪರ್ವಿ ಕ
ರ್ಮ್ಮಡುಗಳೊಳೆಯ್ದಿ ವೂತ್ತೊಳಗೆ ನೀಲನರೋಜವನಂಗಳಲ್ಲಿ ತ ।
ಳ್ತಡಿದಿರೆ ಕಾಳಗತ್ತಲೆ ತಗುಳ್ದರುಳಾದುದೆಗೆತ್ತು ತವ್ಮೊಳ
ರ್ದ್ದೆಡೆಯಿನಗಲ್ವುವಂಜಿ ಕೆಲವುಂ ಪೊಣರ್ವಕ್ಕಿಗಳಬ್ಜಷಂಡದೊಳ್ ॥ 24 ॥

ವ ॥ ಅಂತುವುಲ್ಲದೆಯುಂ ॥

ಪೃಥ್ವೀವೃತ್ತ ॥

ಅದೊಂದೆಡೆ ಜಲೇಶಹಂಸನವಮುಖದಾರಿತಾಂಭೋಜ ಮುಂ
ತದೊಂದೆಡೆ ದಿಶೇಭಜಾರ್ಜುರಿತನೀಲಶೀರೋಜವುಂ ।
ತದೊಂದೆಡೆ ವೃಷಾಂಕಪುಂಗವ ವಿಘುಟ್ಟಿತೋತ್ತೀರವುಂ
ತದೊಂದೆಡೆ ಕೃತಾಂತಸೈರಿಭವಿಕೀರ್ಣಫೇನೋತ್ಕರಂ ॥ 25 ॥

ಅಂತುಮುಲ್ಲದೆಯುಂ ॥

ಕಂ॥ ವಿರಹಿಗಳಂತೆ ವೃಷಾಳೋ
ತ್ಕರವಲಯಾಂಕಿತವರಣ್ಯಬಂತೆ ವಿಜೃಂಭೋ ।
ದ್ದುರಪುಂಡರೀಕನಂಕಾಳೆ
ಮುರಗಾನ್ವಯಾದಂತನಂತಪದ್ಮೋಪೇತಂ ॥ 26 ॥

ವೃ॥ ದಿವಿಜರಗೇಂದ್ರದಿಂ ಕಡಿದ ಪಾಲ್ಗಡಲಂತಿರೆ ನೀಲಕಂಠಮೀ
ತವಿಷವನಂಗಕೇತನದವೊಲ್ಮಕರಾಂಕಿತಮುರ್ವರೇಶ್ವರಾಂ ।
ಭ್ಯವೊಲಿವೇಷಕೂರ್ಮಲಲಿತಂ ಮುಲಯಾದ್ರಿನಿಕುಂಜದೇಕದಂ
ತೆವೊಲತಿಸೌರಭಾಕಲಿತಚಂದನಶೀತವನಂ ಸರೋವರಂ ॥ 27 ॥

ಕಂ॥ ಆವುವುಳದೆಡೆಗಳೆಂದು ಸ
ರೋವರಮಂ ನೋಡುತಿರ್ಪಬಗೆಯಿಂ ಕೈಲಾ ।
ಸಾವಾಸಮಂ ಬಿಡಂ ಗಾ
ರೀವಲ್ಲಭನೆಂದೊಡಾರಿದಂ ನೆರೆ ದ್ರೋಗಳ್ವರ್ ॥ 28 ॥

ಅಳವಲ್ಲಿಯದೆ ತುರಗಮುಖ
ಕ್ಕಳ ಬಳವಳಯನೆ ತಗುಳ್ದು ಬಂದುದುವಿಗ ।
ಳ್ಪೆಳವಾದತ್ತೊಂದಲ್ಲೊಳೀ
ಕೊಳನಂ ಕಂಡುದಲ್ಲೊಳೆನುತೆ ಮುತ್ತಂ ಭೂಪಂ ॥ 29 ॥

ವ॥ ಆಗಳುಮಾವಲ್ಲಭಪದ್ಮವುದ್ರಾಂಕಿತಮುಂ ದಿವಿಜರಾಜಗಜಗಂಡಸ್ಥಳಗಳ
ತವುದಜಲಸಿಕ್ತವುಂ ಭಗವತೀಸಿಂಹಾವತರಣಮಾರ್ಗವುಮುಮಪ್ಪ ದಕ್ಷಿಣತೀರದ ಕಾ
ಸುಮುಲತಾವುಂಟಪದ ಮುಂದೆ ತುರಂಗದಿಂದವನಿತಳಕ್ಕವತರಿಸಿ ಪಲ್ಲಣಮುಂಬಿಟ್ಟು
ತದನಂತರದೊಳ್ ॥

ಕಂ ॥ ಮಹಿತಳಲುಠಿತೋತ್ಥಿತಮುಂ
ಗೃಹೀತಕತಿಪಯತೃಷಾಂಕುರಗ್ರಾಸಮುಂ ನಾ ।
ಮಹಿಪಂ ಪೀತಾಂಬುವನಂ
ದು ಹಯವನಾಸನ್ನವಿಟಪಿಯೊಳ್ನಿಯಮಿಸಿದಂ ॥ 30 ॥

ಲಲಿತನಿಜಕನಕಮುಖ್ಯಂ
ಖಲಿಯಿಂ ಹರಿಚರಣಯುಗಳವಂ ನಿಯಮಿಸಿ ಶಾ ।
ಡ್ವಲತೃಣತತಿಯುಂ ಖಡ್ಗದಿ
ನಿಳಾಧಿಪಂ ಕುಯ್ದು ವುಂದೆ ಸಾಚ್ಚಿದನಾಗಳ್ ॥ 31 ॥

ವ ॥ ಅನಂತರವಾವಿಬುಧಕಮಳಾಕರರಾಜಹಂಸನಾಕಮಳಾಕರದೊಳ್ ಕರಚರಣವದನಪ್ರಕ್ಷಾಲನಂಗೆಯ್ದು ಚಾತಕನಂತೆ ಕೃತಜಲಾಹಾರನಾಗಿ ಚಕ್ರಾಹ್ವಯದಂತೆ ಮೃಣಾಳನಾಳಂಗಳಂ ವೆಲ್ದು ವಿಯೋಗಿಯಂತೆ ನಳಿನದಳಂಗಳನುಂದೊಳ್ಕೊತ್ತಿ ಕೊಂಡು ತನ್ನೊಳಿಂತೆಂದಂ ॥

ಕಂ ॥ ಅಂಜಿಕೆಗಳಿಂಜರದಿಂ ತ
ಣ್ಪಿಂ ಜೆಲ್ವಂ ನವಿಯಿನಬ್ಜಘನಸಾರಭದಿಂ ।
ಕಾಂಚನಕಮಳಾಕರಮಿದು
ಪಂಚೇಂದ್ರಿಯಸುಖವನೆನಗೆ ಪಡೆದಪುದೀಗಳ್ ॥ 32 ॥

ವ ॥ ಎನುತವಲ್ಲಿಂ ಪೊಱವಮಟ್ಟು ॥

ಕಂ ॥ ಲಲಿತಲತಾಗೃಹದಿಂದೂ
ಪಲವುಂ ಸಾದ್ದ್ರಂಡೆಸುತ್ತಿ ವೇಲುದನಾಗಳ್ ।
ತಲೆಗಿಂಬುಮಾಡಿ ನೃಪಕುಲ
ತಿಲಕಂ ಪಟ್ಟಿರ್ದ್ದನಿಪ್ಪುದುಂ ತತ್ಕ್ಷಣದೊಳ್ ॥ 33 ॥

ವೃ ॥ ಮುರಿದಕೊರಲ್ಬಳಲ್ದೆಳಸಲಾಪಿಪವೆಂಯ್ಯಡೆವಾಯ ಲೋಳೆಯೊ
ಳ್ಕೊರೆದುಗುತಪ್ಪ ಪಚ್ಚಪಸಿಯುಚ್ಚಗಳುಂಕೆ ಮರಲ್ವದಿಪ್ಪ ಕ ।
ತ್ತರಿಯೊನಗೊಂಡೆಳಲ್ವ ಕಿವಿ ಸೂಚಿಸಿದಪ್ಪುದು ಸೋಲ್ತ ಭಾವಮಂ
ತುರಗವಿದೇನನಾಲಿಸುತಮಿರ್ದ್ದಪುದೆಂದು ನರೇಂದ್ರಜಂ ಪ್ರಮಂ ॥ 34 ॥

ವ ॥ ಅಂದದನಚ್ಚರಿವಟ್ಟು ವೀಣಾವಿದ್ಯಾಧರಂ ಭಾವಿಸಿ ನೋಡುತ್ತಮಿರ್ದ್ದನನ್ನೆಗಂ ॥

ವೃ ॥ ಎಲೆ ಪೆಣ್ದಂಬಿಯ ಗಾವರಂಬೊರೆದು ಪೊಣ್ಮಾತಿರ್ದ್ದ ಪುಷ್ಪಾಸ್ತ್ರಚಾ
ಪಲತಾಜ್ಯಾರವದಂತವಾನುಷನೆನಿಪ್ಪೊಂದೋಜೆಯೊಳ್ಪುಂದ ಕಾ ।
ಕಲಿಯಿಂದಂ ಪುದಿದೊಯ್ಯನೊಯ್ಯನೆ ವಿಪಂಚೀನಾದವಿರಾಗಳ್ಪಳಂ
ಚಲೆವುತ್ತಿರ್ದ್ದಪುದಲ್ತೆ ಸಾಲ್ವುದಿದೆ! ತದ್ಗಂಧವರಂ ಸೋಲಿಸಲ್ ॥ 35 ॥

ಇದು ಮನುಜಗ್ಗಗೋಚರವೆನಿಪ್ಪ ಹರಾದ್ರಿಯ ತಪ್ಪಲಲ್ಲಿಗೇ
ಯುದದನಿ ನುಣ್ಪನೆತ್ತೆಸೆಯುತಿರ್ದ್ದಪುದೀಗಳೆ ಪೋಗಿ ನೋಳ್ಪೆನಾ ।
ನಿದನೆನುತಂ ಕುತೂಹಲಿತಮಾನಸನಂದು ನರೇಂದ್ರನಂದನಂ
ಕುದುರೆಯ ಜಿಂಗೆಯಂದು ನಡೆದಂ ವೃಗನಾಭಿತಗೇಯವಾರ್ಗದಿಂ ॥ 36 ॥

ವ ॥ ಅಂತು ಪೋಗೆವ್ಪೋಗೆ ॥

ವೃ॥ ಗಿರಿಜಾಕರ್ಣಾವತಂಸೋತ್ಪಲಮನಲಿಯುತಂ ಪಾರಿಜಾತಪ್ರಸೂನೋ
ದರದಿವ್ಯಾಮೋದವುಂ ಬೀಱುತುಮಭವವೃಷಾಧೀಶರೋವುಂಥಪೇನೋ ।
ತ್ಕರದೊಳ್ತಳ್ಪಾಯ್ಯುತಂ ಧೂರ್ಜಟಿ ನಿಬಿಡಜಟಾಹೀಂದ್ರ ಪೀತಾವಶೇಷಂ
ಪರಮಾನಂದಾವಹಂ ಬಂದೆಸಗಿದುದಭವಾದ್ರೀಂದ್ರಚಾರಂ ಸವಿಸ್ತಾರಂ ॥ 37 ॥

ವ ॥ ಅಂತು ಬಂದ ವುಂದವಮಾರುತನಂ ನರೇಂದ್ರನಂದನನಿದಿಗ್ಗೊಂಡು ಪೋಗೆ ವೋಗೆ ತದ್ಗಿರೀಂದ್ರದ ಜಂದ್ರಪ್ರಭವೆಂಬುಪಾಂತಪರ್ವತದ ಪಶ್ಚಿಮಪಾರ್ಶ್ವಾಂತದೊಳ್ ವಿಕೀರ್ಯಮಾಣಬಹುಳಕುಸುಮಂಗಳಪ್ಪ ಕನಕಕೇತಕೀವ್ರಜಂಗಳೊಳಂ ಮತ್ತಮಧುಕರಶ್ರೇಂಕಾರಂಗಳಪ್ಪ ಸಹಕಾರಂಗಳೊಳಗಂ ಪರಿವೇಷ್ಟಿತಮಧುವ್ರತಂಗಳಪ್ಪ ತಮಾಲಂಗಳೊಳಂ ಅನ್ಯೋನ್ಯಕಲಹಕುಪಿತಕಪೋತಪೋತಪಾತಿತಂಗಳಪ್ಪ ಪೂಗಳೊಳಗಂ ನಯನಾನಂದನಂಗಳಪ್ಪ ಜಂದನಂಗಳೊಳಂ ಕುಂಕನಿಕರಾವೃತಂಗಳಪ್ಪ ಫಲಭರಿತದಾಡಿಮಿನೀಡಂಗಳೊಳಂ ವಸಂತಸಾಮಜಘಟಾಪಿನದ್ಧಕದಳಕಾನಿಕಾಯಾಯಮಾನಂಗಳಪ್ಪ ಕದಳೀವನಂಗಳೊಳಂ ಹರಿದ್ವಿತಾನೋಪಮಾನಂಗಳಪ್ಪ ಲತಾಪ್ರತಾನಂಗಳೊಳಂ ನಿಜಸೌರಭಾಕೃಷ್ಟಮಧುಕರಕುಲಂಗಳಪ್ಪ ವಕುಳಂಗಳೊಳಂ ಕೃತಫಲಕಂಗಳಪ್ಪ ತಿಲಕಂಗಳೊಳಂ ಕಂಗೊಳಿಪ ಕೈಲಾಸತರಂಗಿಣೀತರಂಗಿತಕಾಂಚನಸಿಕತಿಲಭೂಭಾಗದೊಳ್ ಸೂರ್ಯಕಾಂತಮಣಿಮಯಕೂಲಪಾಣಿದೇವಾಯತನವಿದ್ದ ದನನತಿದೂರದೊಳ್ ನೋಡಿ ॥

ವೃ॥ ಇದುಸಿದ್ಧಾಯತನಂ ಮನಂಗೊಳಿಸಿ ತೋಱುತ್ತಿಪ್ಪುದಿಲ್ಲಿಂದೆ ಬಂ
ದುದು ವೀಣಾಧ್ವನಿ! ತಪ್ಪದೀಯೆಡೆಯೊಳದ್ಭಾರ್ಗ್ಗವಜಿನುತ್ತಿರ್ದ್ದಪಂ ।
ಬುದನಾಂ ನೋಡುವೆನೀಗಳೆಂದು ಮನದೊಳ್ ನಿಶ್ಚೈಸುತಂ ಮೆಲ್ಲನೆ
ಯ್ದಿದನಾಸ್ಥಾನಮನಂದನಂತಮಹಿಮಂ ಭೂಪಾಲವಿದ್ಯಾಧರಂ ॥ 38 ॥

ವ ॥ ಅಂತದನೆಯ್ದಿ ನೋಳ್ಪನ್ನೆಗಮಲ್ಲಿ ॥

ವೃ॥ ಹರಹಾಸಾವಯವಂಗಳಂತಿರಲನಂತಾನಂತಭೋಗಂಗಳಂ
ತಿರೆ ಪೂರ್ಣೇಂದುಕಲಾಳಯಂತಿರೆ ಸಿತಾಬ್ಜಾನೀಕವೊಪ್ಪಲ್ ಶಿಖಾಂ ।
ತರದೊಳ್ನಿರ್ಮಲದಿವ್ಯಮೌಕ್ತಿಕಶಿಲಾಲಿಂಗಂ ಚತುರ್ವಕ್ತ್ರಸಂ
ದರಮುಲ್ಲಸ್ಸದು ರತ್ನಪೀಠಘಟಿತಂ ದೇದಿಪ್ಯಮಾನಪ್ರಭಂ ॥ 39 ॥

ವ ॥ ಅಂತಿರ್ದ್ದ ಚರಾಚರಗುರುವಪ್ಪ ಕೂಲಪಾಣಿದೇವರಂ ಕಾಣ್ದುದುವಾಪರಮೇಶ್ವರನ ಸಕಳಜಗದಭೀಷ್ಟಫಲದಾಯಕವುಪ್ಪ ದಕ್ಷಿಣಾಮೂರ್ತಿಯನಾಶ್ರೈಸಿ ॥

ವೃ॥ ಅವ್ಯಕ್ತಾಂಭೋರಾಶಿಪೂರಪ್ರತಿಮನಿಜತಪಸ್ಸಂಚಯಂ ಪರ್ವ್ವತೇಂ ಲೋ
ಕಮನೆಂಬಂತಿರ್ದ್ದ ದೇಹಾಂಕುಗಳ ಬಳಗದಿಂ ಕಾನನಾನೀಕಮಂ ದಂ ।
ತಮಯಂವಾಳ್ವಂತೆ ಕಾರಾಜಳವನಸದಳಂ ಸುಣ್ಣಿಪಂತೋರ್ವ್ವಳತ್ಯ್ಯ
ತ್ತಮದಿವ್ಯಾಕಾರೆ ಕುಳ್ಳಿರ್ದ್ದತನುಹರನನಾರಾಧಿಸುತ್ತಿರ್ದ್ದಳಾಗಳ್ ॥ 40 ॥

ಅಂತುಮುಲ್ಲದೆಯುಂ—

ಕಂ॥ ತಳತಳಿಸಿ ಪೊಳೆವ ಪಳುಕಿನ
ನಿಲಯದೊಳಮೃತಾಬ್ಧಿಜಲದೊಳಭ್ರಕಪಟಲಂ।
ಗಳವುಱೆಯೊಳಿರ್ದ್ದಳೆನೆ ಮು
ಯ್ವೆಳಗಿಂ ನೆಱೆಯಱಿಯಲಾದುದಿಲ್ಲಂಗನೆಯಂ ॥ 41 ॥

ಸೊಗಯಿಸವೆಂದು ಪೃಥಿವ್ಯಾ
ದಿಗಳೆನಿಸುವ ಪಂಚಭೂತಮೆಲ್ಲವನುಳಿದಾ।
ವಗವುಜ್ವಳಾಂಗಿಯಂ ಧವ
ಳಗುಣದೆ ನಿರ್ಮಿಸಿದನಾಗನೇಳ್ಕುಂ ಧಾತ್ರಂ ॥ 42 ॥

ಅಂತುಮುಲ್ಲದೆಯುಂ —

ವೃ॥ ಪತಿಯನೆ ಬೇಡಿ ರುದ್ರನ ನಯಿಸಪದೊಳುಗ್ರತಪಕ್ಕೆ ನಿಂದಳೋ
ರತಿ! ಕಶಿಲೇಖೆಯುಂ ನೆನೆದು ಬಂದಳೊ ವೇಣವ್ಯಮೃತಾರ್ಣವಾಧಿದೇ।
ವತೆ! ಶಿತಿಕಂಠಕಂಠತವುಮುಂ ಕಳೆವಾಗ್ರಹದಿಂದೆ ಬಂದಳೋ
ಕ್ಷಿತಿಗವತಾಂಕವೂರ್ತಿಯೆನಲೇನೆನೆದಿರ್ದ್ದಳೊ! ರೂಪು ಕಾಂತೆಯಾ ॥ 43 ॥

ಪ॥ ಹರಹಾಸದ್ಯುತಿ ಮೂರ್ತಿಗೊಂಡುದೊ! ವಿರಿಂಚಖ್ಯಾತಿ ಲೋಕಂಗಳೊ
ಳ್ಪರಿದಾಯಾಸದೆ ನಿಂದುದೋ! ಕಲಿಯುಗಂ ನಿರ್ಮೂಲಿಸಲ್ದರ್ಮವುಂ।
ಪರಿದುಂ ಶೋಕದೊಳುತ್ರಯೋವಧು ವನಂಬೊಕ್ಕಿರ್ದ್ದಳೋ ವೇಳವು
ಚ್ಚರಿಯೆಂಬಂತೆ ದಿವ್ಯಸುಂದರಿ ವನಕ್ಕಾನಂದವುಂ ಮಾಡಿದಳ್ ॥ 44 ॥

ಕಂ॥ ಬರಲಿರ್ದ್ದ ಕೃತಯುಗದ ಬೀ
ಜರುಚಿರಕಳೆ ವೆಣ್ಣರೂಪದಿಂದಿರ್ದ್ದೊ! ಭೂ।
ಸುರಶೇಷದೇಹರುಚಿ ತಾಂ
ಧರೆಗವತರಿಸಿರ್ದ್ದೆನೆ ಈರಂ ಸೊಗಯಿಸಿದಳ್ ॥ 45 ॥

ದಕವದನೋನ್ಮೂಲನಭಯ
ವಕದಿಂ ಕೈಲಾಸಲಕ್ಷ್ಮಿ ಬಂದಳೊ ಬಳಿಕ।
ದ್ರುಕರೀರಕಾಂತಿ ಮಧುಮುದ
ವಿಶೇಷಘೂರ್ಣನದಿನಳ್ಕಿ ಬಂದಿರ್ದ್ದಪಳೋ ॥ 46 ॥

ದ್ವೀಪಾಂತರವುಂ ಶ್ವೇತ
ದ್ವೀಪಸ್ತ್ರೀ ನೋಡಲಿಂದು ಬಂದಳೊ! ಭುವನ।
ವ್ಯಾಪಿಸಿತಪಕ್ಷ್ಮಸಂತತಿ
ರೂಪಂ! ಕೈಕೊಂಡು ನಿಂದುದೆನೆ ಸೊಗಯಿಸುಗುಂ ॥ 47 ॥

ವೃ॥ ಕಡೆದರೊ ಶಂಖದಿಂ ತೆಗೆದರೋ ನವಮೌಕ್ತಿಕದಿಂ ವ್ಯಣಾಳದಿಂ
ಪಡೆದರೊ ದಂತದಿಂದೆಸೆಯೆ ಮಾಡಿದರೋ ರಜಿರೋಜ್ವಲಾಂಗವಂ ।
ಬಿಡದವ್ಯಾಜಶರಶ್ಮಿಗಳಕುಂಚಿಗೆಯಿಂದವೆ ಕಚ್ಚಿಪಾಗದಂ
ದೊಡೆದರೊ ಪೇಳೆನಲ್ಕರವೆಂಕಣ್ಗೆಸೆದಿರ್ದುದು ರೂಪು ಕಾಂತೆಯಾ ॥ 48 ॥

ಕಂ॥ ಪೊಳೆವ ರಜತಾಭ್ರಕದ್ರುತಿ
ಗಳನವ್ಯತರನಪ್ರವಾಹದಿಂದಭಿಷನವು ।
ಗ್ಗಳಿಸೆ ತಳತಳಿಸಿ ತೊಳಗುವ
ಪಳುಕಿನ ಪುತ್ಥಳಿಕೆಯಂತೆ ಕರಮೆಸೆದಿರ್ದಳ್ ॥ 49 ॥

ವೃ॥ ಪೊಳೆವೆಳೆನೇಸಱಿಂ ತೆಗೆದ ರಶ್ಮಿಗಳಂತೆ ಮಡಲ್ತು ಕಾಂತಿಯಂ
ತಳಿದೆಳೆಮಿಂಚಿನೊಳ್ದಳಿರ್ಗಳಂತೆ ಕವಲ್ತು ಮೃಗಾಂಕಮೌಳಿನಿ ।
ರ್ಮಳ ಪದಭಸ್ಮರೇಣುಗಳಿನಲ್ಲವಮಜ್ಜನವಾಃಕಣಂಗಳಂ
ತಳೆದು ವೆಗಲ್ವರಂಬಳೆದು ರಂಜಿಸುಗುಂ ಜಡೆಗಳ್ಕ್ಯಗಾಕ್ಷಿಯಾ ॥ 50 ॥

ಕಂ॥ ಶಿವನಾಮಾಂಕಿತವಂ ರ
ತ್ನವಿರಚಿತವನುತ್ತಮಾಂಗದೊಳ್ಪುದೂಯು ।
ಗ್ಮವನೆಸೆಯೆ ತಳೆದು ಭಕ್ತಿಯೆ
ಭವಸನ್ನಿಧಿಯಲ್ಲಿ ರೂಪುಗೊಂಡಂತಿರ್ದಳ್ ॥ 51 ॥

ತೊಳಗುವ ತಾರಾಚಕೂಟೋರ್ವ
ಜ್ಜ್ವಳಭಸಿತಲಲಾಮದಿಂದೆ ಪೆಱೆವೆರಸು ತಳ ।
ತ್ತಳಸುವ ಹೇಮಾಚಳವೇ
ಖಳೆಯಂತಿರೆ ಕಾಂತೆಕಣ್ಗೆ ಕರನೆಸೆದಿರ್ದಳ್ ॥ 52 ॥

ಪರಿದೆನಿಪ ಭಕ್ತಿ ಭರದಿಂ
ದರಲ್ದು ಸಿರಿನೆಲಸಿತೋರ್ಪ ಕಣ್ಮಲರ್ಗಳ್ನ ।
ಟ್ಟಿರೆ ಮಗುಳೆ ದೇವನಂ ಪುಂ
ಡರೀಕವಾಲೆಗಳನರ್ಚಿಪಂತೆಸೆದಿರ್ದಳ್ ॥ 53 ॥

ವೃ॥ ರಸವೊಸರ್ವಂತು ಪಾಡುತಿರೆ ಶುದ್ಧವನೋವಣೆದೀಪ್ತಿ ಪೊಣ್ಮೆ ರಾ
ಜಿಸಿದಪುದೋ! ಸ್ತುತಿಪ್ರಕರಸರ್ವಳವರ್ಣನಮೂಹವೊತ್ತುಗೊಂ ।
ಡೆಸೆವುದೊ ಪೇಳೆನಲ್ಪೊಳೆವ ದಂತವರೀಚಿಗಳಿಂದವಿಸ್ಫುರಂ
ಗೊಸೆದಭಿಷೇಕಮಂ ಮಗುಳೆಮಾಡುವವೋಲ್ಪಗೆಗೊಪ್ಪಿ ತೋಱಿದಳ್ ॥ 54 ॥

ವನರುಹನಾಭನಾಭಿಸಿತಪಂಕಜಬೀಜಮೊ ಪದ್ಮಗರ್ಭನಾ
ನನದೆ ಪೊದಳ್ದ ವೇದವಿಮಳಾಕ್ಷರಮಾಲೆಯೊ ಕಯ್ಯಸೋಂಕು ಪಾ ।
ವನತರನೆಂದು ಸರ್ವಮುನಿಮಂಡಲಮಿಪ್ಪುದೊ ಬಂದುಪೇಳೆನ
ಲ್ವನಿತೆಯ ಮೌಕ್ತಿಕಾಕ್ಷವಲಯಂ ಕೊರಲೊಳ್ಕರವೊಪ್ಪಿ ತೋಱುಗುಂ ॥ 55 ॥

ಕಂ॥ ಎಳವೞಯೊಳ್ಗಿರ್ಗಳ್ದಂ
ದೆಳಸಿದುವೀಕ್ಷ್ವರನ ಸನ್ನಿಧಾನದೊಳೆಸೆವೀ ।
ಲಲಿತಾಂಗಿಯನೆಂಬಿನೆಗಂ
ಪೊಳೆಯುತ್ತಂ ಬ್ರಹ್ಮಸೂತ್ರವೇನೊಪ್ಪದುದೋ ॥ 56 ॥

ಸತಿ ಪದ್ಮಾಸನದೊಳಿರ
ಲ್ಕತಿರುಚಿರೋತ್ತಾನಚರಣತಳರುಚಿಯಿಂ ಲೋ ।
ಹಿತವಾದ ದುಗುಲದಿಂ ದಂ
ನಿತಂಬವಿಸ್ತಾರಮೇಂವನಂಗೊಳಿಸಿದುದೋ ॥ 57 ॥

ವ॥ ಮತ್ತಂ ಹಾರಲತೆಯಂತೆ ಕಂಠಯೋಗ್ಯಮುಂ ಗ್ರಹಪಙ್ಕಿ ಯಂತೆ ಧ್ರುವಪ್ರತಿ ಬದ್ಧಮುಂ ಮತ್ತನಂತೆಳೂರ್ಜಿತವಂಭ್ರಾತಾರಮುಂ ವಿಭಾವಂಸೆಯಂತೆ ಭಾವನಾನು ವಿದ್ಧಮುವಮಪ್ಪ ಗೀತಿಯಿಂ ವೀಣೆಯಂ ಬಾಜಿಸುತ್ತಮಿರ್ದಳಿಂತುವುಲ್ಲದೆಯುಂ ॥

ಕಂ॥ ಪಳುಕಿನ ಭಿತ್ತಿಗಳೊಳ್ಮ
ತ್ತೊಳಗುವ ನಿಜತನುಗಳಿಂದೆ ತನ್ನಂದದ ಕೋ ।
ಮಳೆಯಂರ್ವೆರಸೀಕನ ಪದ ।
ನಳನವನಾರಾಧಿಪಂತೆ ಸತಿ ಸೊಗಯಿಸಿದಳ್ ॥ 58 ॥

ಒದವಿದ ಭಕ್ತಿಯಿನೀಕನ
ಹೃದಯದೊಳಿರ್ದಪಳೆನಲ್ಕೆ ನವವ್ಯಕ್ತಿಕಲಿಂ ।
ಗದ ನಡುವೆ ರೂಪು ವಾರ್ತೊಳ
ಗಿದುದೆತ್ತಂ ವಿವುಲಕವುಲವಳಲೋಚನೆಯೂ ॥ 59 ॥

ದಿವಿಜತೆಯಿಂ ದಿವಸಂಗಳ
ಪವಣರಿಯಲ್ಬಾರದಾದೊಡಂ ಸೊಗಯಿಸಿ ತೋ ।
ರ್ಪುವಯವದಿಂದಂ ಪದಿನೆಂ
ಟುಬರಿಸದಾಕೃತಿಯಿನಬ್ಜವುಖಿ ಕಣ್ಗೆಸೆದಳ್ ॥ 60 ॥

ವ॥ ಅಂತುವಿರೂಪಾಕ್ಷದೇವರನಾರಾಧಿಸುತ್ತಮಿರ್ದ್ದ ॥

ಕಂ॥ ಅತಿಗಂಭೀರೆಯನೂರ್ಜಿತ
ಮತಿಯಂ ನಿರ್ಮಳೆಯನಮಳಧೈರ್ಯಾದಿಗುಣಾ ।
ನ್ವಿತೆಯಂ ದೃಢವಾಕುಪತ
ವ್ರತೆಯಂ ಕನ್ಯಕೆಯನಂದು ಕಂಡಂ ಕ್ಷಿತಿಪಂ ॥ 61 ॥

ವ॥ ಅಂತುಕಂಡವನಿತಳಕ್ಕವತರಿಸಿ ತುರಂಗವನೊಂದುತರುಶಾಖೆಯೊಳ್ಕಟ್ಟಿ ಭಗವದಿಂದುವ್ಯಾಳಯಪುರೋಭಾಗದೊಳ್ನಿಂದು ಪೊಡವಟ್ಟು ದಿವ್ಯಕಾಂತೆಯ ರೂಪ ಸಂಪತ್ತಿಗಂ ಕಾಂತಿಗವುಪಶಾಂತಿಗಂ ವಿಸ್ಮಯಂಬಟ್ಟು ನೋಡುತ್ತಮಿರ್ದ್ದ ॥

ವೃ॥ ಕಿನ್ನರಯುಗ್ಮವೆಂತ್ತ! ವನವೆಂತ್ತ! ನರೋರುಹಷಂಡವೆಂತ್ತಗೀ
ತನ್ನಯದಿಂದೆ ಬಂದೆನವುದೆತ್ತ! ಭವಾಲಯವೆಂತ್ತ ಭೋಂಕನೀ।
ಕನ್ನೆಯ ಕಾಣ್ಕೆಯೆತ್ತ! ವನುಜಂಗೆನಗೆಂದು ನರೇಂದ್ರನಂದನಂ
ತನ್ನೊಳೆತಾನೆ ವಿಸ್ಮಯದೆ ಭಾವಿಸುತಿರ್ದ್ದನದೊಂದುಜಾವಮಂ ॥ 62 ॥

ಅನ್ತು ಭಾವಿಸುತ್ತಮಿರ್ದ್ದು ॥

ವೃ॥ ವನುಜನನೆನ್ನನೀಕ್ಷಿಸಿ ಭವಾದ್ರಿಯನೇರದೆ ನಾಡೆನೋಡಿತೊ
ಟ್ಟನೆಕೊಳೆ ಮಾಯುವಾಗದೆ ನಭಕ್ಕೊಗೆದಾಗಳೆ ಪೋಗದಿರ್ದ್ದೊಡೊ।
ಯ್ಯನೆ ಪೆಸಗೊಳ್ವೆನಾರ್ಗ್ಗೆ ಸತಿ! ಬೀಂ ಪೆಸರೇಂ ನಿನಗಿಂತು ತೋರ್ಪ್ಪಜ
ವ್ವನದೊಳಗೀತಪಕ್ಕೆ ಗುಱುವಾಡಿಸಿದಂಬ್ಗೆಗವಾವುದೆಂಬುದಂ ॥ 63 ॥

ವ ॥ ಎಂದುಭಾವಿಸುತ್ತ ವಾರವಣೀಯದೇವಾಯತನ ನಾತ್ಮಸ್ತಂಭವಂ ನೆವಿಮ್ಮ ನಿಂದಿರ್ದ್ದು ತದಂಗನಾಗೀತಾವಸಾನಸಮಯಮಂ ಪಾರುತ್ತವಿಪ್ಪುದುಂ ॥

ಕಂ॥ ಮೃದುಮಧುರವಲ್ಲಕೀಗೇ
ಯದ ದನಿ ಮಾಣಲ್ಕೆ ಗೀತಪವಸಾನದೊಳು।
ನ್ಮದಮಧುಕರಸ್ವನಂ ಮಾ
ಣ್ದಿದ ಕುಮುದಿನಿಯಂತೆ ಕಾಂತೆಕಣ್ಗೆಸೆದಿರ್ದ್ದಳ್ ॥ 64 ॥

ವ ॥ ಅನಂತರಮಾತ್ರೈಲೋಕ್ಯರಕ್ಷಾಮಣಿಯಂ ಪ್ರದಕ್ಷಿಣೀಕರಣ ಪೂರ್ವಕಂ ನಮಸ್ಕರಿಸಿ ॥

ವೃ॥ ಒಸೆದಾಶ್ವಸಿಸುವಂತೆ ಸೌಖ್ಯತತಿಯಿಂದಂ ಮುಟ್ಟುವಂತಚ್ಛ ತೀ
ರ್ಥಸಮೂಹಾಂಬುಗಳಿಂದಮುಂಪಭಿಷವಂಮಾಳ್ಪಂತೆ ಪೂತತ್ವಮಂ।
ಪಸರಿಪ್ಪಂತೆ ಬರಂಗಳಂ ಪದಪಿನಿಂದೀವಂತೆ ದೈಕ್ಕೃಪ್ತಿ ರಾ
ಜಿಸೆ ದಿವ್ಯಾಂಗನೆ ನೋಡಿದಳ್ಳಿಗುಳ್ದ ಚಂದ್ರಾಪೀಡಭೂಪಾಲನಂ ॥ 65 ॥

ಕಂ॥ ಸ್ವಾಗತಮೇ! ನಿನಗೆ ಮಹಾ
ಭಾಗನೆ ವುದ್ಭವಿಗೆಂತು ಬಂದಯಿನ।
ಭ್ಯಾಗತನಾಗಲ್ವೇಳ್ಕುಂ
ದಾಗಳ್ ನೃಪಸುತನನಳ್ಕಿಯುಂ ಸತಿನುಡಿದಳ್ ॥ 66 ॥

ವ ॥ ಅಂತುನುಡಿದನಿತಱೊಳೆ ಕೃತಾರ್ಥನಾದೆನೆಂದು ಬಗೆಯುತ್ತಂ ದೇವಿಯ ಬ್ಬೆಸಸಿದಂತೆ ಗೆಯ್ವೆನೆಂದಾಕಾಂತೆಯಪೆಂಬಳಿವಿಡಿದು ನಡೆವಶಿಷ್ಯನಂತೆ ಸ್ವೋಗೆವೋಗೆ ಕಿಱಿದಂತರದೊಳ್॥

ವೃ॥ ಕಾಲದ ಮವ್ವು ಪರ್ವ್ವಿದವೊಲಿರ್ದ್ದ ತಮಾಲವನಂಗಳಿಂದೆ ಭೃಂ
ಗಾಳಿಯ ಗಾವರಂ ಪುದಿದಪುಷ್ಪಲತಾಗೃಹದಿಂದೆ ಚಂದ್ರಿಕಾ।
ಜಾಲದನೊಲ್ಕೆಲಂಬಿಡಿದು ಭೋಗ್ಯರೆಯಲ್ಲುರಿತರ್ಪ್ಪ ನಿರ್ಝರ
ಸ್ಫಾಲನಶೀಕರ ಪ್ರಸರದಿಂದೆಸೆದತ್ತು ಬೃಹದ್ಗೃಹಾಂಗಣಂ ॥ 67 ॥

ವ ॥ ಅಂತಾಗುಹಾಂಗಣದ ಮುಂದೆನಿಂದು ನೋಳ್ಪಲ್ಲಿ ॥

ವೃ॥ ಅದು ನರಭೂಜವಲ್ಕವಸನದ್ವಯಮಂತದು ದಂಡಮಲ್ಲಿನೇ
ಲಿದುದದು ಜೋಗವಟ್ಟಿಗೆ ಕಮಂಡಲುವಂತದು ಭಸ್ಮಕಯ್ಯೆಯಂ ।
ತದು ಶಶಿಮಂಡಲಾಕೃತಿವೊಲಿದ್ದುದು ಶಂಖದಪಾತ್ರೆಯೆಂದು ನೋ
ಡಿದನತಿವಿಸ್ಮಯಂಬೆರಸು ತದ್ಗುಹೆಯಂ ನೃಪರೂಪಚಂದ್ರಮಂ ॥ 68 ॥

ವ ॥ ಅನಂತರಮಾದಿವ್ಯತಪಸ್ವಿನಿ ಮಾಳ್ಪತಿಥಿಪೂಜೆಯಂ ವಿನಯಪುರಸ್ಸರಂ ಕಯ್ಕೊಂಡು ದರ್ಭಾಸನದೊಳ್ಕುಳ್ಳಿರಲಾನಿತಂಬಿಸಿ ॥

ಕಂ ॥ ರಕ್ಷಾಂಕಿತತನು ಮೆಲ್ಲನೆ
ವೃಕ್ಷಂಗಳ ಕೆಳಗೆ ಪೋಗಿಸಿಂದಿದ್ದಾಗಳ್ ।
"ಭಿಕ್ಷಾಂದೇಹಿ"ಯೆನಲ್ಕಂ
ತಾಕ್ಷಣದೊಳ್ತೀವಿದತ್ತು ಭಿಕ್ಷಾಪಾತ್ರಂ ॥ 69 ॥

ವ॥ ಅಂತುತೀವಿದ ಭಿಕ್ಷಾಪಾತ್ರದ ಪಣ್ಪಲಂಗಳಂ ತಂದುಕುಡಿಸಿರ್ಪುರಜಲಂಗ
ಳೊಳ್ಕೊಂದು ಅಮೃತರಸಸ್ವಾದುಗಳಪ್ಪ ತತ್ಫಲಂಗಳಂವೆಲ್ಲ ಸೇರಂಕುಡಿದೊಂದುದೆಸೆ
ತೊಲಗಿರ್ಪುದುಮಾಕನ್ನಿಕೆಯುಂ ಕೃತಫಲಜಲಾಹಾರೆಯಾಗಿ ಬಂದೊಂದು ಶಿಲಾತಳ
ದೊಳ್ ಕುಳ್ಳಿರ್ದ್ದು ನೋಡುತ್ತಮಿರ್ಪುದುಮಾಗಾಂಭೀರ್ಯ್ಯರತ್ನಾಕರನುವಂತಿದೂ
ರವಪ್ಪ ಶಿಲಾತಲದೊಳ್ವಿಶ್ರಮಿಸಿ ತನ್ನ ಬಂದವೃತ್ತಾಂತವನೆಲ್ಲಮಂ ನೆಱೆಯೆಪೇಳ್ದ
ಮತ್ತ ಮಾದಿವ್ಯಕಾಂತೆಯುಸಿಂತೆಂದಂ ॥

ವೃ॥ ಪಿರಿದೆಸಿಸಿದ್ದ ಸಿನ್ಮಯ ಹಸಾದವನಾಂ ಪಡೆದೊಂದುಗರ್ವದಿಂ
ಪರಿಚಿತನಂತೆ ಬಿನ್ನವಿಸಲುಂ ಬಗೆದಂದದೆನಂತುಟಲ್ತಿ ಬಿ।
ತ್ತರಿಪೊಡಧೀರರಪ್ಪವನುಜಪ್ರಭುಗಳ್ವಿಯೆಯಿಂದೆ ತವ್ಮನಾ
ದರಿಸಿದೊಡಾಗಳಂತೆ ಗಳಪಲ್ಪಗೆದಪ್ಪುದಿದಾವವಿಸ್ಮಯಂ ॥ 70 ॥

ಆದೊಡಂ ॥

ಕಂ ॥ ವನುಜಂಗೆ ಕೀರ್ತುಕಾವಹ
ಮಿನಿತೊಂದಾಶ್ಚರ್ಯ್ಯಮದಱಿಂದಿಜೆನಗೊಳ್ಳ ।
ಲ್ತನುಗೆಯ್ಯುತ್ತಿರ್ದ್ದಪುದೀ
ವನವನನನುಗ್ರಹಿಸಿ ದೇವಿ ಪೇಳಲ್ವೇಳ್ಕುಂ ॥ 71 ॥

ವೃ॥ ಸುರವುನಿಸಿದ್ಧಖೇಚರರೊಳಾವಕುಲಂ ನಿಜಜನ್ಮದಿಂದಲಂ
ಕರಿಸಿತೊ! ಪಂಚಭೂತವಯವಾಗಿಯುಮಿತನವಿಂವುಕಾಂತಿಯಂ ।
ತಿರೆ ಪೊಳೆಯುತ್ತಮಿರ್ದ್ದಪುದಿದೇಂ ಪೊಸಜವ್ವನದೇಳ್ಗೆಯೊಳ್ತಪ
ಶ್ಚರಣವಿದೇಂ ಪೊದಳ್ದಿಡಿದ ಕಾನನದೊಳ್ಬಿಡದೊರ್ಬ್ಬಳಿಪ್ಪುದೇಂ ॥ 72 ॥

ವ ॥ ಎಂದುಜೆನಗೊಳ್ವುದುಂ ಕಿಱುದುಜೋಗಂ ತನ್ನೊಳ್ತಾನಭಾವಿಸಿ ॥

ವೃ॥ ಪೊಳೆವಲರ್ಗಂಗಳಂ ಮಿಳರ್ವಬೆಳ್ಪು ರಸಾತ್ಮಕಮಾಗಿ ಗಂಡಮಂ
ಡಳತಳದಿಂದಮಂದಿಳಿಯುತಿರ್ದುದೆನಲ್ನಯನಾಂಬುಲೋಚನಂ।
ಗಳನಿರದುಣ್ಮಿ ಕಬ್ದಮಣವಿಲ್ಲದೆ ತೊಟ್ಟನೆ ಕಣ್ಮಗುಳ್ದಳ
ಗ್ಗಳಪಳವಿಂದೆ ಮಾನಿನಿ ಮನಕ್ಕತಿವಿನ್ನಯಮಾಗೆ ಭೂಪನಾ ॥ 73 ॥

ವ॥ ಅಂತಾಕಾಂತೆ ಶೋಕಾಕ್ರಾಂತೆಯಾಗಿ॥

ವೃ॥ ರಸೆಯಂ ತಾಂತಾಂಕಿ ಕಲ್ಪಿಂತದ ಬಱಸಿಡಿಲಿಯ್ತಂದು ಪೊಯ್ಯಲ್ನಿಲಂ ಕಂ
ಪಿಸುವಂತತ್ಯಂತಶೋಕಾಕುಲತೆಯಿನಳುತಿರ್ದ್ದಪ್ಪಳೋರಂದದಿಂ ಮಾ।
ಗ್ಗಿಸಲಿನ್ನಾರಾರ್ಪರೀಶೋಕವನೆನುತೆ ಭಯಂಗೊಂಡಿದೆತ್ತತ್ತಲೀಗ
ಳ್ಬೆಸಗೊಂಡೆಂ ಕೆವ್ಮನೆಂದುವ್ಮಳಿಸಿ ಪಿರಿದುಮಂದಾನೃಪಂ ವ್ಯಗ್ರನಾದಂ ॥ 74 ॥

ವ॥ ಅಂತುನೃಪನತಿವ್ಯಗ್ರನಾಗಿ ಮುಖಪ್ರಕ್ಷಾಳನಾರ್ಥಂ ಪೇರಡವಿಯೊಳಂ ಜಾಳಯಿಂ ಜಲಮಂ ತಂದು ದೇವಿಯರವಧಾರಿಸುವುದೆಂದು ಭೂಪನಿಳಂಪನುಪರೋಧಿಸುತ್ತಮಿರ್ಪೆಯೆ॥

ಕಂ॥ ಅಳವಿಲ್ಲದಳುತ್ತಿರೆ ಕೆಂ
ವೆಳಸಿದ ಬಾಷ್ಪಾಂಬುಪೂರ್ಣಲೋಚನಮಂ ತ।
ಜ್ಜ್ವಳದಿಂದೆ ಕಚ್ಚಿ ವಲ್ಕಾಂ
ಚಲದಿಂ ನಿಜವದನಬಿಂಬಮಂ ಸತಿತೊಡೆದಳ್ ॥ 75 ॥

ವ॥ ಅಂತಾಕಾಂತೆ ಶೋಕಾಕ್ರಾಂತೆಯಾಗಿಪ್ಪುದಂ ಕಂಡಿಂತಪ್ಪವರುಮುಳುಮಂದಮದ್ಭುತಮೆಂದು ಮನದೊಳ್ಭಾವಿಸುತ್ತಮಿರೆ॥

ವೃ॥ ಉರಗಮುಲ್ಬೋಗ್ರದಂಪ್ಪ್ರಸಹಜಾತೆಯನಾರ್ಜಿತಕಾಲಪಾಕಸಿ
ಪ್ಮರತರರೂಪೆಯಂ ಸಹಜಶಾಕಿನಿಯಂ ವಿಷಕನ್ಯಕಾಸಹೋ।
ದರಿಯನಪಾರಘೋರದುರಿತಾರ್ಣವಜಾತೆಯನಾತ್ಮವಲ್ಲಭಾಂ
ತರಿತೆಯನೆನ್ನನಣ್ಣ! ಜಸಗೊಳ್ವುದೆ ಪೇಳ್ವೆನೆತತ್ಪಪಂಚಮಂ ॥ 76 ॥

ಕಂ॥ ಗತಭಾಗ್ಯೆಯೆನಿಪ ಪಾಪಾ
ನ್ವಿತೆಯಂ ಪತಿದುಃಖಭಾಜನೆಯವೃತ್ತಾಂತ।
ಸ್ಥಿತಿಯನದೇಂ ಕೇಳ್ದಪೆನೃಪ
ಸುತ ಕೌತುಕಮೆಂಬೆಯಪ್ಪೊಡುಸುರ್ದಪೆನೀಗಳ್ ॥ 77 ॥

ಅದೆಂತೆಂದೊಡೆ॥

ಕಂ॥ ತ್ರಿದಿವದೊಳಚ್ಚರಿಸಿಯರಿ
ಪ್ಪುದುವಿದಿತಂ ನಿಮಗಮಂತವರ ವಂಕಂಗ।
ಳ್ಪದಿನಾಲ್ಕೆನೆ ಪೆಸರಿಂ ನೆಗ
ಳ್ದುದಯಿಸಿದುವು ಬೇಱೆಬೇಱೆ ನೃಪಕುಲತಿಲಕಾ ॥ 78 ॥

ಅದೆಂತೆನೆ ॥

ಧರೆಯಿಂ ಕಡಲಿಂದೆಲರಿಂ
ಹರಿಯಿಂದಮರ್ದಿಂದೆ ವ್ಯತ್ಯಯಿಂದಬ್ಜಜನಿಂ ।
ಸ್ಮರನಿಂ ಜಲದಿಂ ವೇದೋ
ತ್ಕರದಿಂ ವಿದ್ಯುನ್ನಿಕಾಯದಿಂ ಹುತವಹನಿಂ ॥ 79 ॥

ವ ॥ ಅವೆಲ್ಲದೆಯುಂ ದಕ್ಷಪ್ರಜಾಪತಿಗೆ ಪುಟ್ಟಿದ ಮುನಿಯುಮರಿಷ್ಟೆಯುಮೆಂಬೀರ್ವರ್ಕ್ಕನ್ನೆಯರಿಂ ಗಂಧರ್ವಕುಲಮುದಯಿಸಿದುದಲ್ಲಿ ಚಿತ್ರಸೇನಾದಿಗಳಪ್ಪ ಪದಿನ್ಮೆವರಿಂ ಪಿರಿಯನೆನಿಸಿ ॥

ಕಂ ॥ ಚಿತ್ರರಥನೆಂಬನೊರ್ವಂ
ಪುತ್ರಂ ಗಂಧರ್ವರಾಜನಮರೇಂದ್ರಂಗಂ ।
ಮಿತ್ರನೆನೆ ಪೆಂಪುವಡೆದು ಜ
ಗತ್ತ್ರಯವಿಖ್ಯಾತಕೀರ್ತಿ ಮುನಿಗುದಯಿಸಿದಂ ॥ 80 ॥

ವ ॥ ಅಂತಾಚಿತ್ರರಥನಿಂ ಚೈತ್ರರಥಮೆಂಬ ಬನಮುಮಂಚಿಲ್ಲೋದವೆಂಬ ಸರೋವರಮುಮಾದುದಲ್ಲದೆಯುಂ ತುಂಬುರುಪ್ರಭೃತಿಗಳಪ್ಪಱುವರಿಂ ಪಿರಿಯನನಿಸಿ ॥

ಕಂ ॥ ಪುರುಷಾರ್ಥನಿಧಿ ಪುರಂದರ
ಪರಮಪ್ರಿಯಮಿತ್ರನೋರ್ವನುದಯಿಸಿದಂಸುಂ ।
ದರರೂಪನರಿಷ್ಟೆಗೆ ಚಿ
ತ್ರರಥಾನನಪುಂಡರೀಕಹಂಸಂ ಹಂಸಂ ॥ 81 ॥

ವ ॥ ಅದಲ್ಲದೆಯುಮಲ್ಲಿ ಗನತಿದೂರದೊಳ್ ಹೇಮಕೂಟವೆಂಬ ನಗೇಂದ್ರಂ ಕಿಂಪುರುಷಾವಾಸಸ್ಥಾನಮಾಗಿಪ್ಪುದಲ್ಲಿ ॥

ಕಂ ॥ ಆತ್ತಯಶರ್ಗ್ಗಂಧರ್ವಕು
ಲೋತ್ತಮರಾತಮಮ್ಮತೀರ್ವ್ವರುಂ ನಿಖಿಲಗುಣಿಯೋ ।
ದಾತ್ತರೆನಲ್ ರಾಜ್ಯಂಗೆ
ಯ್ಯುತ್ತಂ ಸುಖಸಂಕಥಾವಿನೋದದಿನಿರ್ಪ್ಪರ್ ॥ 82 ॥

ವ ॥ ಮತ್ತಮಾಸೋಮಮಯೂಖಸಂಭವೆಯರಪ್ಪಚ್ಚರಸಿಯರೊಳಗೆ ॥

ಕಂ ॥ ಅಮೃತಕರಭಾಸುರೋದ್ಯ
ತ್ಕಮನೀಯಕಲಾಕಲಾಪಲಾವಣ್ಯಾಢ್ಯರೀ ।
ಸಮುದಿತೆಯೆನಲ್ಕೆ ಪುಟ್ಟಿದ
ಳಮೃತಾಂಕನಿಭಾಸ್ಯೆ ಗೌರಿಯೆಂಬಪ್ಸರಿಂ ॥ 83 ॥

ಇಂಗಡಲಿಂಗವುರನದೀ
ಸಂಗಂ ಸಂಘಟಿಪ ತೆಱದೆ ಗಂಧರ್ವಕುಲೋ ।
ತ್ತುಂಗನೆನಲ್ನೆಗಳ್ದಾ ಹಂ
ಸಂಗಾದುದು ಗೌರಿಯೊಳ್ವಿವಾಹೋತ್ಸಾಹಂ ॥ 84 ॥

ಸವುವಂಶದೆ ಸವುರೂಪದೆ
ಸವುವಿಭವದೆ ಸವುವಯೋವಿಲಾಸದೆ ಸವುನ ।
ತ್ಸವುನದೆ ಸವೂನುರಾಗದೆ
ಸವುಸಂದತ್ತ ವರ್ಗೆ ಸವುವಯೋಯೋಗಸುಖಂ ॥ 85 ॥

ವೃ ॥ ನಿನಗೇಂ ಪೇೞ್ದಪೆನಾಂ ವುಹುತ್ಕರೆನಿಸಿದ್ದಾ ತಂದೆಗಂ ತಾಯ್ಗಮೋ
ರ್ವೆನೆ ನಿರ್ಭಾಗ್ಯನಿವಾಸೆಯೆಂ ನಿಖಿಲಪಾಪಾಕಾರೆಯೆಂ ದುಃಖಭಾ ।
ಜನೆಯೆಂ ಪುಟ್ಟದೆನೆನ್ನನೀಕ್ಷಿಸಲೊಡಂ ತಾತಂ ವುಹಾಶ್ಚೇತೆಯೆಂ
ದನುರಾಗಂಬರಸಿಟ್ಟನೆನ್ನ ಪೆಸರಂ ಗಂಧರ್ವಜಕ್ರೇಶ್ವರಂ ॥ 86 ॥

ವ ॥ ಅಂತು ನಿಜಜನನೀಜನಕಪ್ರಲಕಾಲವುನಪತ್ಯರಪ್ಪುದಱಿಂ ಪುತ್ರನಿಂದ
ಗ್ಗಳವುಪ್ಪ ಪರವುಪ್ರೀತಿಯಿಂ ನಡೆವುತ್ತವಿರೆ ಕೆಲನ್ನುದಿವಸದೊಳಿವಿದಿತಸ್ನೇಹಶೋಕಾ
ಯಾಸವುಪ್ಪ ಶೈಶವಂ ಪತ್ತುವಿಡುವುದುಂ ॥

ವೃ॥ ಎಸೆವ ವಸಂತವೂನದೆ ವಸಂತವುನಾಂತ ಕುಜಾತಪಲ್ಲವ
ಪ್ರಸರದಿನಾವಸಂತಸವುಯುಂ ಕುಸುವೂವಳಯಿಂದೆ ಪಲ್ಲವಂ ।
ವಿಸುಪಳವೂಲೆಯಿಂ ಕುಸುವುವುಂಜರಿ ರಂಜಿಸುವಂತಿರಲ್ವಿಜೃಂ
ಭಿಸಿದುದು ಯೌವನೋದಯವಿಲಾಸವುನುಕ್ರವುದಿಂ ವುದಂಗದೊಳ್ ॥ 87 ॥

ತದನಂತರಂ ॥

ವೃ॥ ಸ್ಮರರಾಗಾಂಧತ್ವದಿಂದಂ ಪಗಲೊಳವುಸತೀಕೇಳಿ ಪೊಣ್ಮಲ್ ವಿಯೋಗಾ
ತುರಜೀವಾಹಾರದಿಂದಂ ರತಿಪತಿ ತಣಿಯಲ್ಪಪ್ಪುಚಾವೂನ್ತಟಂಕಾ ।
ರರವೋದ್ಭಿನ್ನಪ್ರಪಾಂಥಪ್ರಕರಹೃದಯರಕ್ತಾಂಬುಗಳ್ಕೂಡೆ ವೂರ್ಗಾಂ
ತರದೊಳ್ವಾಸುತ್ತಿರಲ್ಪಂದುದು ಶಿಶಿರನೃಪೋದ್ಯತ್ಕೃತಾಂತಂ ವಸಂತಂ ॥ 88 ॥

ವ ॥ ಅಂತು ಬಂದ ವಸಂತದೊಳಾಳ್ಗಲರ್ದ ನವನಳಿನಕುವುದಕುವಲಯುಕ
ಲ್ಹಾರಂಗಳಿಂ ಕಂಗೊಳಪಚಕ್ರೋದಸರಸಿಗೆ ಜನನಿವೆರಸು ವುಜ್ಜನಕ್ಕೆಂದು ನಡೆತಂದು
ನೋೞ್ಪಲ್ಲಿ ಶಿಖರಿರಾಜನಂದಿಸಿ ಪೂಜಿಸಲೆಂದು ತಟಶಿಲಾತಲದೊಳ್ ಬರೆದ ವ್ಯಡನ
ಪಡಿವರಿಜಂ ಕಂಡು ಕುಂಬಿಟ್ಟುನರಸ್ತೀರದೇಶದಲ್ಲಿ ॥

ವೃ॥ ಇದು ವುದಭೃಂಗಕೀರ್ಣಕುಸುವೋತ್ಕರರವ್ಯಲತಾವಿತಾನವಿಂ
ತಿದು ಪಿಕತುಂಡಖಂಡಿತಗಳದ್ರುನಕೋಶರಸಾಲಸಾಲವಿಂ ।
ತಿದು ಶಿಖಿನಾದಭೀತಫಣಿವರ್ಜಿತಚಂದನಭೂಜರಾಜಿಯಿಂ
ದೊದವಿದ ರಾಗದಿಂದವನಭೀಕ್ಷಿಸುತಾಂ ಚರಿಸುತ್ತವಿರ್ಪ್ಪನಂ ॥ 89 ॥

ಕಂ ॥ ಇಳಕೈದುಳಿದಲರ್ಗಳ ಪರಿ
ಮಳವಂ ಘ್ರಾಣೈಕತರ್ಪಣಂ ವಿಳದಳಿಸಂ ।
ಕುಳವೆಂನಿಸಗಿತ್ತೊ ! ವನಾ
ನಿಳನೀತಂ ಕುಸುಮಗಂಧವೋರೊಂದೆಡೆಯಿಂ ॥ 90 ॥

ವ॥ ಅಂತುಬಂದವಾನುಷಕುಲೋಚಿತವುಮನಾಘ್ರಾತಪೂರ್ವವುಮೆನಿಪ ಕುಸುಮಗಂಧವನಾಘ್ರಾಣಿಸುತವಿದೆತ್ತಣದೆಂದು ಕೌತುಕಂ ಮಿಗಲುರಬಳವಿಡಿದು ॥

ಕಂ ॥ ಅರಸಂಚೆಗಳೊಡವರೆ ನೇ
ವ್ಗರದಿಂಚರಕೊಲ್ಪು ಪೊಗಲಾಂ ಕಿರದೆಡೆಯಂ ।
ಸರಸಿಗೆ ನಿಯಲ್ಕೆಂದ್ಯೆ
ತರುತಿರ್ದ್ದಂ ಮುಂದೆ ಮುನಿಕುಮಾರಕನೋರ್ವಂ ॥ 91 ॥

ಗಿರಿಶನಯನಾನಲಾರ್ಚಿಯಿ
ನುರಿದಂ ಸ್ಮರನೆಂದು ದಂದುಗಂ ನಿಗೆ ತಪಮಂ ।
ಚರಿಯಿಪ್ಪ ವಸಂತನವೊಲ್
ಕರಮೆಸೆದಂ ರವ್ಯಗಾತ್ರನಾವುನಿಪುತ್ರಂ ॥ 92 ॥

ಮತ್ತಂ.—

ಪರಿಪೂರ್ಣಬಿಂಬದೊಂದ್ಯೆ
ಸರಿಯಂ ಪಡೆಯಲ್ಕೆ ಬಯಸಿ ಪಿರಿದುಂ ವ್ರತಮಂ ।
ಧರಿಸಿದ ಗಿರಿಶಶಿರಶ್ಚೇ
ಖರೇಂದುವೆನೆ ಮೆರೆದನಾವುನೀಂದ್ರಕುಮಾರಂ ॥ 93 ॥

ವ ॥ ಅಂತುಮಲ್ಲದೆಯುಂ—

ಕಂ ॥ ಜ್ವಲದನಲಶಿಖಾಂತರದೊ
ಳ್ಪೊಳೆವ ತಪಿಲ್ಲತೆಯೊಳುಪ್ಪ ಕರಮಂಡಳದೊ ।
ಳ್ಪೊಳೆದಪನೆನೆ ದೇಹದ್ಯುತಿ
ಬಳಸಿರೆ ನೆಱೆಯಲ್ಲಿಯಲ್ಲಾದುದಿಲ್ಲಾವುನಿಯಂ ॥ 94 ॥

ಸೊಡರಂ ಪಚ್ಚಿಸಿದಂತಿರೆ
ಪೆಡಂಗುವಡೆದೆಸೆವ ಮುನಿಯ ದೇಹದ್ಯುತಿಯಿಂ ।
ಕಡುಗವಿಲವಾಗಿ ಕಾಂಚನ
ದಡವಿಯನನುಕರಿಸಿ ತದ್ವನಂ ಸೊಗಯಿಸುಗುಂ ॥ 95 ॥

ಎಸೆವಂತಿರೆ ಗೋರೋಚನ
ರಸದಿಂದಂ ತೊಯ್ದ ನೇತ್ರಸೂತ್ರದ ತೆಱದಿಂ ।
ಮಿಸುಗುವ ಕೆಂಜೆಡೆಗಳಿ ರಂ
ಜಿಸುತಿರ್ದ್ದನು ಭಾವಿನಲ್ಕೆ ತನ್ಮುನಿವರನಾ ॥ 96 ॥

ಕಂ॥ ಮೊದಲೊಳ್ವಾಗ್ದೇವಿಯನೊಲಿ
ಸಿದ ತಿಲಕಂ ತಾನಿದೆನಿಪ ತಿಲಕಂ ನವಭ।
ಸ್ಮದಿನಿಸಿಯಲದು ಪುಳಲ್ಗ
ಟ್ಟಿದ ಗಂಗೆಯ ಪೊನಲನಿನಿಸನನುಕರಿಸಿರ್ದ್ದಂ ॥ 97 ॥

ವನಹರಿಣಕುಲಂ ನಿಜಲೋ
ಚನಶೋಭಾಸಂವಿಭಾಗವುಂ ಕೊಟ್ಟುದೊ! ಲೋ।
ಚನವೂಲಿ ನಿಮಿರ್ದುದೋ! ಮೇ
ಣಿನ ಮುನಿಪನ ದೀರ್ಘಲೋಚನದ್ವಯವೆಸೆಗುಂ ॥ 98 ॥

ನವಯೌವನರಾಗಂ ಚಿ
ತ್ತವನೆಂದುಂ ಪುಗಲಿ ಪಡೆಯದಿರ್ದ್ದುದೊ! ಪೊಲಿಗೆಂ।
ಬವೊಲೆಸೆದು ಪಕ್ಷ್ಮಬಿಂಬ
ಚ್ಛವಿಯಂ ಮೂರ್ಕ್ಕೊಳ್ವುದಧರಮಣಿ ಮುನಿವರನಾ ॥ 99 ॥

ಮೊಗವಿಸಿ ಬಾರದಿರ್ದ್ದಂ
ಸೊಗಯಿಪ ತನ್ಮನಿಕುಮಾರವದನಾಬ್ಜಂ ದಿ।
ಟ್ಟಿಗೆ ಚಿಲ್ಲುವೆತ್ತು ಮುಱಿದುಂ
ಬಿಗಳಿಲ್ಲಗದ ಕನಕಕಮಲವಂ ನೆನೆಯಿಸುಗುಂ ॥ 100 ॥

ಅದು ಮದನಚಾಪಗುಣಮಂ
ತದು ಪರಮತಪಸ್ತಟಾಕಕಮಲಿನಿಯೊಳಗು।
ಣ್ಮಿದ ನವಮೃಣಾಳವೆನಲೆಸೆ
ದುದು ಮುನಿಗತ್ಯಂತಥವಳನೆನಿಪುಪವೀತಂ ॥ 101 ॥

ವೃ॥ ಕರತಳವೊಂದಱೊಳ್ ಮಣಿಕಮಂಡಲುನಾಳಸವೇತವುಪ್ಪ ಕೇ
ಸರಫಲದಂತಿರಿದ್ದುದು ಮನೋಜವಿನಾಕದಿನಳ್ವ ತನ್ಮನೋ।
ಹರಿಯ ಪೊದಳ್ದ ಕಣ್ಣಿನಿಗಳಂತವುಲಸ್ಫಟಿಕಾಕ್ಷಮಾಲೆ ಸುಂ
ದರತರವಾದುದೊಂದು ಕರಪಲ್ಲವದೊಳ್ಮನಿಪಾಗ್ರಗಣ್ಯನಾ ॥ 102 ॥

ಕಂ॥ ನಿರವದ್ಯನಿಖಿಲವಿದ್ಯಾ
ತರಂಗಿಣೀಸಂಗದಲ್ಲಿ ತೋಱುವ ಸುಳಯುಂ।
ತಿರೆ ಸುರುಳ್ದ ಮುನಿಕುಮಾರನ
ಸುರುಚಿರಗಂಭೀರನಾಭಿಮಂಡಲವೆಸೆಗುಂ ॥ 103 ॥

ಇಂಬಾಗಿರೆ ಬಾಂದೊಱೆಯೊಳ
ಲುಂಬಿದ ಮುಂದಾರವಲ್ಲ ವಿರಚಿತನವದಿ।
ವ್ಯಾಂಬರವಾಮುನಿವರನೊ
ಳ್ಪುಂಬಿಸಿತು ಜರಚ್ಚಕೋರಲೋಚನರುಚಿರಂ ॥ 104 ॥

ವ ॥ ಅನ್ಯಾದೃಮಲ್ಲದೆಯುಂ ಬ್ರಹ್ಮಚರ್ಯಕ್ಕಲಂಕಾರವುಂ ಧರ್ಮಕ್ಕೆ ನವಯೌವನವುಂ ಸರಸ್ವತಿಗೆ ಲೀಲಾವಿಲಾಸವುಂ ವಿದ್ಯಾಪ್ರತತಿಗೆ ಸ್ವಯಂವರಪತಿಯುಂ ಸಮಸ್ತ ಶ್ರುತಿಗಳಿಗೆ ಸಂಕೇತನಿಕೇತನವುಮೆನಿಸಿದನದೆಲ್ಲದೆಯುಂ ॥

ವೃ॥ ತನಗನುರೂಪವೆಂಬಿನೆಗವೊರ್ವ್ವ ಕುಮಾರತಪಸ್ವಿ ದೇವತಾ
ರ್ಚನೆಗೆ ವನಕ್ಕೆ ಬಂದು ಪೊಸವೂಗಳನಟ್ಟಿಯೊಳಾಯ್ದು ಕುಯ್ದುಜೆ ।
ನ್ನನೆ ಬರಲೀವನಾಂತರನರೋವರದಲ್ಲಿಗೆ ವಿಾಯಲಿಂದು ಮೆ
ಲ್ಲನೆ ಬರುತಿರ್ದ್ದ ತನ್ಮುನಿಕುಮಾರನನಾಂ ಬಿಡೆನೋಡಿದೆಂ ನೃಪಾ ॥ 105 ॥

ಅಂತನುನೋಳ್ಪನ್ನೆಗಂ —

ವೃ॥ ಸ್ಮರಕಾಂತಾರತಧರ್ಮಬಿಂದುಚಯವೋ! ವಿಾನಾಂಕವುತ್ತೇಭಟಾ
ವುರವೋ ನಂದನಲಕ್ಷ್ಮಿಯೊಳ್ನಗೆಯೊ! ತಾಂ ಮುಂದಾನೀಂ ತೆಂಕಣಿಂ ।
ಬರೆ ಚೈತ್ರಂ ಕುಡುವರ್ಘ್ಯಲಾಜತತಿಯೋ! ಪೇಳೆಂಬಿನಂ ಪುಷ್ಪವುಂ
ಜರಿಯುಂ ತನ್ಮುನಿಕರ್ಣಪೂರಕವುನತಾಶ್ಚರ್ಯ್ಯದಿಂ ನೋಡಿದೆಂ ॥ 106 ॥

ಕಂ ॥ ಗುಂಜನ್ಮದಾಳಿಮೂಲಾ
ವುಂಜರಿ ಪೆನ್ನಟ್ಟಿಬಂದ ನವಸೌರಭವುಂ ।
ರಂಜಿಸಿ ತೋಱುವ ಸುವುನೋ
ವುಂಜರಿಯಿಂ ಬಂದುದೆಂದು ಪರಿಭಾವಿಸಿದೆಂ ॥ 107 ॥

ವ ॥ ಅಂತುಭಾವಿಸುತ್ತ ವಿಾವುನಿಕುಮಾರವದನೇಂದುಬಿಂಬವುಂ ನೋಡಿ ॥

ವೃ ॥ ಸಿರಿ ನಲವಿಂದವಿರ್ಪ್ಪ ನೆಲೆ ಕಣ್ಗಳ ಪರ್ವ್ವವೆನಿಪ್ಪ ಪಂಕಜೋ
ತ್ಕರವುವುನಿಂದುವಂಡಲವುವುಂ ವೊದಲೊಳ್ಪನೆಂದಬ್ಜಜಂ ವುನೋ ।
ಹರವೆನೆ ವಾಡಿದೀವೊಗದ ಪೋಲ್ವೆಗೆ ವುನ್ನೆಗಳಲ್ತಗುಳ್ಚಿ ಬೆ
ತ್ತರಿಸಿದನಲ್ಲದಿಂತು ಸವುವಸ್ತಗಳಂ ಪಡೆವಂತು ಗಾಂಪನೇ ॥ 108 ॥

ವುತ್ತಂ —

ವೃ॥ ಕೇಳ ಸುಪುಂಪ್ಮನೆಯೆಂಬ ಕರದಿಂ ಗಡ ಚಂಪ್ರಕಲಾಕಲಾಪವುಂ
ಕಾಲದೊಳಂಶವೂಳಿ ತೆಗೆದೀಂಟುವನೆಂಬುದನತ್ಯವಾಪ್ರಭಾ ।
ಜಾಲಕವೆಲ್ಲವಿಾತನುನಿನೊಳಪ್ಪಗುತಿಪ್ಪುದು ತಪ್ಪದಲ್ಲದಿಂ
ತ್ರೀಲಲಿತಾಂಗವಿಾತಪದೊಳಂತಿರೆ ಕಾಂತಿಯನಪ್ಪುಕೆಯ್ದುವೇ ॥ 109 ॥

ವ ॥ ಎಂದು ರೂಪೈಕಪಕ್ಷಪಾತವುಂ ಭಾವಿಸುತ್ತವಿರ್ಪ್ಪುದುಂ ॥

ಕಂ ॥ ನವಯೌವನದೊಳ್ಗುಣದೋ
ಷವಿಚಾರವುನಿಂತು ವಾಡಲೀಯದ ಭಾವೋ ।
ದ್ಭವನಿಂ ಪರವಶೆಯಾದೆಂ
ನವಕುಸುವಾಸವದೆ ಸೊಕ್ಕಿದಳಿಯು ತೆಱದಿಂ ॥ 110 ॥

ವ॥ ಅನಂತರವುಸಿರೊಡನೆವೆಯಿಕ್ಕುನುದಂ ಮಱೆದು ಪರಿದು ಪತ್ತಲವ್ವಳಿಸಿ ಕಳವಳಿಸಿ ಕೊಂಕಿ ಬಳಸುವೆಳವುವಲಗರ್ಗಂಗಳಿಂ ತದ್ರೂಪಲಾವಣ್ಯರಸವುನಳ್ಕಿ ಱುಂ ಬರೆಪೇರ್ವಂತೆ ನಿನಗೊಳಗಾದೆನೆಂಬಂತೆ ಮನವುನಂಗಯ್ಯ್ಗಕ್ಕಿ ತೋರ್ಪೆನೆಂಬಂತೆ ತನ್ಮಯವೂಗಲೊಡರಿಪೆನೆಂಬಂತೆ ಮದನನಲೆದಪಂ ಕಾಯೆನ್ನನೆಂಬಂತೆ ಶರಣ್ಬುಗುವೆನೆಂಬಂತೆ ಮನದೊಳೆಡೆಗುಡೆಂದಳುಪಂ ತೋಱುವಂತೆ ಕುಲಹೀನಕನ್ಯಕಾಜನೋಚಿತವುತಿಲಜ್ಜಾಕರವುನೋರಥವಿದೆನಗೆ ತಕ್ಕುದಲ್ಲದುದಂ ನೆಗಳ್ದೆನಂದಱಿವೆನಾಗಿಯುಂ ಅತ್ಯಾಸಕ್ತಿಯಿಂ ಮಱುವಟ್ಟರಂತೆಯುಂ ಚಿತ್ರಿಸಿದರಂತೆಯುಂ ಮೂರ್ಛೆವೋದರಂತೆಯುಂ ಆರ್ಗ್ಗನುಂ ಪಡಿಕೆವೆತ್ತರಂತೆಯುಂ ಮಿಡುಕದ ನೋಡುತಿರ್ದ್ದೆನನ್ನೆಗಂ॥

ವೃ॥ ಪೂಗಣೆ ನಾಂಟಿದಂತೆ ತನುಕಂಪಿಸುತಿರ್ದ್ದುದು ಘರ್ಮವಾರಿಯಿಂ
ದಾಗಳೆ ಕಚ್ಚಿರ್ದಂತೆ ನೆಱೆಪೋದುದು ಲಜ್ಜೆ ವುರಳ್ದು ತನ್ಮಹಾ।
ಭಾಗನ ರೂಪನೀಕ್ಷಿಸುವವೋಲ್ಪುಳಕಂ ತಲೆದೋಱೆ ಮೆತ್ತು ಕಾ
ಮಾಗವುನಕ್ಕೆ ಪಕ್ಕುಗುಡುವಂತೆವೊಲಿರ್ದ್ದುದು ಸುಯ್ನಿರಂತರಂ ॥ 111 ॥

ಕಂ॥ ಇನ್ನುವೊದಲಾಗೊಮ್ಮೆಯೆ ಮದ
ನವಿಕಾರಂ ಪಲವುಮಾಗಳಾಗುತ್ತಿರೆ ಮು।
ನ್ನವನಱಿಯದವಳೆನತ್ಯಭಿ
ನವಸಾಧ್ವಸಮಾಗಲಳ್ಕಿ ತಳವೆಳಗಾದೆಂ ॥ 112 ॥

ಅನ್ತು ಬೆಗಡುಗೊಂಡು--

ಕಂ॥ ನಿಯತೇಂದ್ರಿಯುನೊಳ್ತೀಜೋ
ಮಯನೊಳ್ ರೂಪ್ಯೈಕಪಕ್ಷಪಾತದೆ ನೆಱೆ ನೀ।
ತಿಯುನುಳದು ಮುನಿಪನೊಳ್ನಿ
ರ್ಭಯನಂಗಜನೆನ್ನಿಂತಿರಲ್ಸೀಲಿಕುನೇ ॥ 113 ॥

ಕೂರ್ತ್ತಂಗನೆಯಸ್ನಿರ್ಕತಿಯ
ವಾರ್ತೆಯುಮುಂ ಪಿಸುಟು ಪತ್ತುವರ್ಪತ್ತಲೊಡಂ।
ಧೂರ್ತ್ತಯಿವಳೆಂಗುವೋ ಎಂ
ತಾರ್ತ್ತಪೆನಿಲ್ಲಾವತೆಱುದೊಳಂ ನಿಲೆಪಡಿಯಲ್ ॥ 114 ॥

ವೃ॥ ಪಲಬಕ್ಕಾಂತೆಯರೊಲ್ದು ಪೋದರೊಳರೆಂತುಂ ಕಾಂತರೊಳ್ಪೋಟವ
ಗ್ಗಳಿಸಲ್ಕಾಣದೆ ಲಜ್ಜೆಗೆಟ್ಟರೊಳರಿಂತೀಲೋಕದೊಳ್ ರೂಪ್ಯಗಾ।
ಣಲೊಡಂ ತೊಟ್ಟನ ಲಜ್ಜೆಗೆಟ್ಟಱಿವುಗೆಟ್ಟೆನ್ನಂತೆ ಕಣ್ಗಿಟ್ಟು ವೇ
ಳೊಲವಿಂದಿಂತೆರ್ದೆಗೆಟ್ಟರಾರೆನುತುಮತ್ಯಾತ್ಸಕ್ಯಮಂ ತಾಳ್ದಿದೆಂ ॥ 115 ॥

ವ॥ ಅಂತಾಶ್ಚರ್ಯಮಂ ತಳೆದು ನನ್ನನಾನೆ ಸಂತೈಸಿ॥

ವೃ॥ ಎನ್ನ ವರಂ ಸಚೇತನೆಯೆನೆನ್ನ ವರಂ ಲಘುವಾಗದಿರ್ಪ್ಪಿನೋ
ಅನ್ನೆಗವಿಶ್ವಾಗಳೀಯೆಡೆಯಿನಾಂ ತೊಲಗಿರ್ಪ್ಪುದು ಕಜ್ಜವಲ್ಲದಂ।
ದೆನ್ನಯ ಮನ್ಮಥೋಚಿತವಿಕಾರಮನೀಕ್ಷಿಸಿ ಸೋಲ್ಲಳಕ್ಕಟಾ!
ಎನ್ನದೆ ಶಾಪಮಂ ಕುಡುವನಂತುಟೆ ಕೋಪಿಗಳಲ್ತೆ ತಾಪಸರ್ ॥ 116 ॥

ವ॥ ಎಂದು ಪೋಗಲುದ್ಯೋಗಂಗೆಯ್ದು ನಿಖಿಳಜನಪೂಜಾರ್ಹರನವಜ್ಞೆಗೆಯ್ಯಲಾಗದೆಂದು ॥

ವೃ॥ ತೊಳಗುವ ಚೆನ್ನಪೂಗಳಲಕಾವಳಿಯೊಳ್ಮಿಂಗಲ್ಕ ಪೋಲವುಂ
ಡಳತಲದೊಳ್ತೆಂಬೊಳೆಯೆ ಕೋವುಲಪಲ್ಲವಕರ್ಣಪೂರಮಂ।
ಜುಳವುಣಿಕುಂಡಲಂ ಪೆಗಲೊಳಾಡೆ ಮುರಳ್ದೆವೆಯಿಕ್ಕದಾಂ ಮುನಂ
ಗೊಳಿಪ ಮುನೀಂದ್ರನಾನನಮನೀಕ್ಷಿಸುತಂ ಪೊಡವಟ್ಟೆನಳ್ಕಱಿಂ ॥ 117 ॥

ತದನಂತರಂ—

ವೃ॥ ಮದನಂ ದುರ್ಜಯನಿಂದ್ರಿಯಂಗಳಸಿವಾರ್ಯಂಗಳ್ವಸಂತಂ ಮದೆ
ಪ್ರದನಾಸ್ಥಾನವತೀವರಮ್ಯಮೆನಗಂ ದುಃಖಂ ಬರಲ್ತೇಳ್ಕುಮ।
ಪ್ಪುದಱಿಂ ಭಾವಿಸಿ ವಂದ್ಯಿಕಾರಮನೆ ನೋಡುತ್ತಿರ್ಪ್ಪುದುಂ ಗಾಳಿಗೊ
ಡ್ಡಿದ ದೀಪಾಂಕುರದಂತೆ ತನ್ಮನಿಯುಮುಂ ಕಾವುಂ ಚಲಂವಾಡಿದಂ ॥ 118 ॥

ಅನ್ತುವಾಡೆ—

ವೃ॥ ಮನಮೆನ್ನಂ ಮುಂಬರಲನ್ಮಂದುವರಿನ್ನುದನೆ ತೋರ್ಪ್ಪಂತೆ ನೀಳ್ದತ್ತು ಸುಯೊಳ್ಬೀಂ
ಕೆನಲಂತೆಯ್ದುರ್ಪ್ಪ ಕಾವುಂಗೊಲವಿನೊಳಿರೇಳ್ವಂತೆ ರೋಮೋದ್ಗಮಂ ತೊ।
ಟ್ಟನೆ ಮೆಯ್ಗೊಳ್ತು ವೀರವ್ರತವಳವದಪುದಿನ್ನೆಂದು ತಾನಂಜಿದಂತಾ
ತನ ಕಯ್ಯೊಳ್ ರಂಜಿಪರಕ್ಷಾವಳಿ ನಡುಗಿದುದತ್ಯಂತವಾಶ್ಚರ್ಯವಾಗಲ್॥ 119 ॥

ಅಂತಾವುಲ್ಲದೆಯುಂ—

ಕಂ॥ ಕರವೆಸೆದು ತೋಱುತಿರ್ದ್ದಪು
ದೆರಡನೆಯ ವತಂಸಕುಸುಮಮುಮಂಜರಿಯೆಂಬಂ।
ತಿರೆ ತತ್ಕಪೋಲದೊಳ್ಬಿ
ತ್ತರಿಸಿದುವು ಕೊನತ್ತ ಬೆಮರ ಬಿಂದುಗಳಾಗಳ್ ॥ 120 ॥

ವೃ॥ ಮನದೊಂದಳ್ಕಱೊಳೆನ್ನ ನೊಲ್ದಡರೆ ನೋಡುತ್ತಿರ್ಪ್ಪುದುಂ ಕಣ್ಣ ಚೆ
ಲ್ವಿನಗುರ್ವ್ವಾಸ್ಥಳಮಂ ಸಿತಾಬ್ಜವಯವೆಂಬಂತಾಗೆಯುಂ ಮಾಡಿ ಭೋಂ।
ಕೆನಲಚ್ಛೋದಸರೋಂಬುವಂ ಕುಮುದಷಂಡಂ ಬಿಟ್ಟು ತಳ್ತತ್ತು ಮೇ
ಲೆ ನಭೋಭಾಗವನೆಂಬಿನಂ ಪಸರಿಸಿತ್ತಾಗಳ್ದ ಶಾಚಕ್ರಮಂ ॥ 121 ॥

ವ॥ ಅಂತೆಯ್ದಿನಾಂ ಮುತ್ತ ಮೆನ್ನೊಳ್.....ಭಾವಿಸಿ ನೋಡುತ್ತಾ ತನೊಳವಸರಂಬಡೆದು ಮೆಲ್ಲನೆಯ್ದಿವಂದು ॥

ವೃ॥ ಪೆಸರೇನಾಗ್ಗೀತನೀಜವ್ವನಿಗತವಸಿ ತೊಳ್ಪಿಪ್ಪ ಕರ್ಣಾವತಂಸಂ
ಪೊಸತೀಲೊಕಕ್ಕಿದಾವಂಪ್ರಿಪದ ಪೊಳೆವ ಪೂಗೊಂಚಲಿಂದಾದುದೋ! ನೀಂ ।
ಪೆಸನಲ್ವೇಳ್ಕಂತಿದಂ ಕೌತುಕವುನೆನಗೆನುತ್ತಂ ನಮಸ್ಕಾರಪೂರ್ವಂ
ಪೆಸಗೊಂಡೆಂ ತನ್ಮನೀಂದ್ರಾನುಚರವುನಿಯನಾನಂದತಿಪ್ರೀತಿಯಿಂದಂ ॥ 122 ॥

ಅನ್ತು ಪೆಸಗೊಳೆ —

ಕಂ॥ ಪೆಸಗೊಳ್ವುದಱಿಂದಿದನು
ದ್ದೆಸವಾವುದು? ತರುಣಿ ನಿನಗೆ! ಕೌತುಕಮೆನೆ ಕೇ ।
ಳಿಸಿರ್ದಪೆನೆಂದಾವುನಿಪಂ
ನಸುನಗುತಂ ಪೇಳಲಾಗಳಿಂದ್ಯತನಾದಂ ॥ 123 ॥

ವ॥ ಅದೆಂತೆನೆ ಸಕಲವುನಿವೃಂದವಂದಿತಚರಣನುವುಖಿಲವುನಿಜನಾನಂದನನುಂ ವಿದಿತನಿರವದ್ಯವಿದ್ಯಾಕಲಾಪನುವುಪ್ರತಿವುರೂಪನುವುಪ್ಪೂರ್ವಂ ಶ್ವೇತಕೇತುವೆಂಬ ಮಹಾವುನಿಯವರಲೋಕದೊಳಿರ್ಪನಾತನೊಂದುದಿವಸಂ ಪುಂಡರೀಕವೆಂಬ ಸರೋವರವುಂ ವಿೂಯಲೆಂದು ಬಂದಿರೆ ।

ವೃ॥ ಅರವಿಂದಾಕರಸಾಂಪ್ರ ಪದ್ಮವನವುಧ್ಯೋದ್ವೇಕದೊಳ್ ಲಕ್ಷ್ಮೀ ಭಾ
ಸುರವಿಸ್ತೀರ್ಣಸಿತಾಬ್ಜದಲ್ಲಿ ನಪಪಂ ಪ್ರತ್ಯಕ್ಷವಿರ್ಪಳ್ನಿರಂ ।
ತರವಾಕೋವುಳಿ ಪದ್ಮನದ್ಮತಟದೊಳ್ನಿಂದಿರ್ದ ನರ್ವಾಂಗನುಂ
ನರನಂ ದಿವ್ಯವುನೀಂದ್ರನಂ ಪಿರಿದುವೊಂದಾಸಕ್ತಿಯಿಂ ನೋಡಿದಳ್ ॥ 124 ।

ಅಂತುನೋಡೆ —

ವೃ॥ ನೋಡಲೊಡಂ ರತಾಂತನುಖವಾಗೆ ನಿಜಾಸನಪುಂಡರೀಕದೊ
ಳ್ನೋಡೆ ಕೃತಾರ್ಥೆಯಾದಳದಲುತ್ತಣಿನಾಗಳೆ ಗಾಡಿ ನಾಡೆ ಕ ।
ಣ್ಗೂಡಿರಲೋರ್ವ್ವನುದ್ಭವಿಸೆ ಕಂಡು ನಿಜಾತ್ಮಜನೀತನೆಂದವ
ಳ್ನೀಡಿದಳಾಕುವಾರಕನನಾವುನಿಪಂಗೆ ವುನೋನುರಾಗದಿಂ ॥ 125 ॥

ವ॥ ಆಗಳಾತಂ ಯೋಗದೃಷ್ಟಿಯಿಂ ನೋಡಿ ತತ್ಕುವಾರನಂ ಕೈಕೊಂಡು ಬಾಲಜನ್ಮೋಚಿತಕ್ರಿಯೆಗಳಂ ಮಾಡಿ ಜನ್ಮಾನುರೂಪವಾಗೆ ಪುಂಡರೀಕನೆಂದು ಪೆಸರನಿಟ್ಟು ಶೈಶವವುಂ ಪತ್ತುವಿಡಲೊಡವುಖಿಳವಿದ್ಯಾಕಲಾಪದೊಳ್ಪರಿಣತನಂ ಮಾಡಿ ಯತಿತ್ವವುಂ ಕಯ್ಕೊಳಿಸೆ ತದನುಷ್ಠಾನಪರಾಯಣನಾದ ವುಹಾನುಭಾವನೀತಂಗೀವ್ರತವಿರುದ್ಧವುಪ್ಪ ಕಾನುವುವುಂಜರಿಯೆಂತು ಬಂದುದೆಂಬೆಯಪ್ಪೊಡೆ ॥

ಕಂ॥ ಇಂದು ಚತುರ್ದಶಿಯಪ್ಪುದ
ಱಿಂದಂ ಕೈಲಾಸವಾಸಿಯಂ ಕಾಣಲ್ಕಾ ।
ನಂದದೆ ದಿವದಿಂದಿಬ್ಬರು
ವೊಂದಾಗಿ ಬರುತ್ತವಿಪ್ಪುದಂ ತತ್ಕ್ಷಣದೊಳ್ ॥ 126 ॥

ವೃ ॥ ಕುಸುಮಾವಿಭೂಷಣಾನ್ವಿತೆ ನವಪ್ರಸವಾನವಯಾನಮತ್ತೆ ರಂ
ಜಿಸುವ ವಸಂತಲಕ್ಷ್ಮಿಯ ಕರಾಗ್ರದೊಳಿಕ್ಕಿ ನಖಾಂಕಜಾಲವಂ ।
ಪಸರಿಸುತಿರ್ಪ್ಪ ತನ್ನ ಕರವಂ ವನದೇವತೆ ಪಾರಿಜಾತದೊಂ
ದೆಸೆವಲಗೊರ್ಂಜೆಲಂ ಪಿಡಿದು ನಂದನದೊಳ್ಪರುತೊರ್ವ್ವಳೊಪ್ಪಿದಳ್ ॥ 127 ॥

ವ ॥ ಅನ್ತು ಬಂದು ಪೊಡವಟ್ಟು ಭುವನತ್ರಯಾಭಿರಾಮಮಪ್ಪ ನಿನ್ನ ಸೌಕು ಮಾರ್ಯಕ್ಕೆ ತಕ್ಕಲಂಕಾರಮಿಾದಿವ್ಯಕುಸುಮಮಂಜರಿಯನವತಂಸಂಮಾಡಿ ಪಾರಿಜಾತ ಜನ್ಮಮಂ ಸಫಲಂಮಾಳ್ಪುದೆಂದು ಬಿನ್ನಿಸಿ ನಿಜರೂಪಸ್ತುತಿಗೆ ಲಜ್ಜಿಸಿ ಕೇಳದಂತೆ ಪೋಗೆ ವರ್ತ್ತಂ ಪೆನ್ನನೆ ಪತ್ತಿ ಬರುತಿರ್ಪ್ಪುದುಮಾಂ ಕಂಡು ಕಾರುಣ್ಯದಿಂದೀಕಾಂತೆಗೆ ಸಂತೋಷಂಮಾಡಿವೆನಲಿದೇಕೆ ಜೇಡವೆಂಡೆನೆಯುಂ ಕಿವಿಯೊಳ್ತೊಡಚ್ಚಿ ಪೋದಳ್ಕಾ ಸುಮಮಂಜರಿಯನೆಂದು ಸಹಚರವುನಿ ಪೇಳೆ ಪುಂಡರೀಕಂ ದರಹಸಿತಾಧರಕಪೋಲತಲನಾಗಿ ॥

ವೃ ॥ ಎಳೆಸುತ್ತಿರ್ದ್ದಪೆ! ಪುಪ್ಪವಂಜರಿಗೆ ಕೊಳ್ಳೀ ಸುತ್ತಿದೇಕೆಂದು ಸಂ
ಚಳಿಸುತ್ತಂ ನಿಜಕರ್ಣದಿಂ ತೆಗೆದು ಸೋಲ್ತಿಂ ಕೂಡು! ನೀನೆನ್ನೊಳಿಂ ।
ದಳಮಾಲಾರವದಿಂದೆ ಪೇಳ್ವ ತೆಱದಿಂ ಮುತ್ಕರ್ಣದೊಳ್ತೂರಕೋ
ಜ್ಜ್ವಲವಂ ರಂಜಿಪ ಪುಪ್ಪವಂಜರಿಯನತ್ಯೌತ್ಸುಕ್ಯದಿಂದಿಕ್ಕಿದಂ ॥ 128 ॥

ಕಂ ॥ ಇಂ ಪೇಳ್ವುದೇನನೆನ್ನಕ
ದಂಪಿನ ನಸುಸೋಂಕಿನೊಂದು ಸುಖದಿಂದುದಂ ।
ಕಂಪಿಸುತಿರೆ ಕರತಳದಿಂ
ದಂ ಪೋದತ್ತಕ್ಷಿಮೂಲೆ ನಾಟ್ಟರಸಾಗಳ್ ॥ 129 ॥

ವ ॥ ಅಂತು ಪೋದೊಡವುಱಿಯದಿರೆ ॥

ಕಂ ॥ ತೊಳಗುವ ಹಾರಮನಾಗ
ಳ್ತಳಿವಂತಿರೆ ನೆಲಕೆ ಬೀಳ್ವನಂ ಪಿಡಿದಕ್ಷಾ ।
ವಳಯಂ ಕೊರಲೊಳ್ತಳಿದಾಂ
ತಳಿದೆಂ ಮುನಿಪತಿಯು ತೋಳ ತಳ್ಕಿನ ಸುಖವುಂ ॥ 130 ॥

ವ ॥ ಅಂತಾವ್ಯತಿರೇಕದೊಳೆನ್ನಂ ಛತ್ರಧಾರಿಣಿ ನೋಡಿ ॥

ವೃ ॥ ತಡೆದಿರಲಾಗದಿನ್ನು! ವೊಗವುಜ್ಜ್ವನವುಂ ನೆಱೆ ವಾಡಿ ದೇವಿಯ
ನ್ನಡೆಗೊಳಲಿರ್ದ್ದಪದ್ಮಕನೆಗೆ ವುಜ್ಜ್ವನಕೀಗಳೆ ರಾಜಪುತ್ರಿ! ನೀಂ ।
ನಡೆವುದೆನುತ್ತ ಮಿಚ್ಚಿಯಣಮಿಲ್ಲದೊಡಂ ತೆಗೆದಳ್ಕರಂ ವುನಂ
ಕಿಡೆ ಪೊಸತಪ್ಪದೊಂದು ಪಿಡಿಗಂಕುಕನಿಟ್ಟು ವುರಳ್ಚುವಂದದಿಂ ॥ 131 ॥

ವ ॥ ಅಂತವಳೆನ್ನನೆಂತಾನುಂ ತೆಗೆಯೆ ॥

ವೃ ॥ ಮದನಾಸ್ತ್ರವಳಯಿಂದೆ ಕೀಲಿಸಿದುದೋ! ತದ್ವಕ್ತ್ರಲಾವಣ್ಯ ಪಂ
ಕದಿನಾಳ್ದತ್ತೊ! ಕಪೋಲಕಂಟಕನಿಕಾಯಾಗ್ರಂಗಳಂ ಕೂಡೆ ನಾಂ ।
ಟಿದುದೋ! ಮೆಂಜ್ಞುಭಗತ್ವವೆಂಬ ಗುಣದಿಂ ಪೊಲ್ದತ್ತೊ! ಮೇಣೆಂಬಿನಂ
ಪದಪಿಂ ನಟ್ಟಿರೆ ದಿಟ್ಟಿಯುಂ ತೆಗೆದೆನೆಂತೆಂತಾನುಮುದ್ವೇಗದಿಂ ॥ 132 ॥

ವ ॥ ಅಲ್ಲಿಂ ತಳರ್ವುದು ಮತ್ತಲೊಡನೆಯೆ ಕುಮಾರನಾತನ ಧೈರ್ಯಸ್ಖಲನೆಯಂ ನೋಡಿ ॥

ವೃ ॥ ಎನಗನುರೂಪಮಲ್ತಿದು ಬಿಕ್ಕಪ್ಪಜನೋಚಿತವಾರ್ಗವೆಂಬಿದಂ
ಮನದೊಳಣಂ ವಿಚಾರಿಸದೆ ಸೈರಣೆಗೆಟ್ಟಲ್ಲಿವೆತ್ತವೋದುದೆಂ ।
ಬಿನದೊರ್ದೆಗೆಟ್ಟ ಮೆಯ್ಯಲ್ಲಿಯದಂತಿರಲಕ್ಕುಮೆ! ಪುಂಡರೀಕ! ಭೋಂ
ಕನೆ ಬಿನಗೀಗಳಂದ್ರಿಯದ ಡಾವರವೆತ್ತಣಿನೆತ್ತ ಬಂದುದೋ ॥ 133 ॥

ಕಂ ॥ ಎಲ್ಲಿತ್ತೊ! ಧೈರ್ಯ ಮುಪಕ್ರಮ
ಮೆಲ್ಲಿತ್ತೊ! ಜಿತೇಂದ್ರಿಯತ್ವಗುಣಮೆಲ್ಲಿತ್ತೋ ।
ಎಲ್ಲಿತ್ತೊ! ಬಿನ್ನ ಶೌರ್ಯಮ
ದೆಲ್ಲಿತ್ತು ಪಭೋಗರಾಗನಿಷಯದ್ವೇಷಂ ॥ 134 ॥

ಎಲ್ಲಿತ್ತೊ! ವೇದನಮುಪಯ
ಮೆಲ್ಲಿತ್ತೋ! ಬ್ರಹ್ಮಚರ್ಯ್ಯ ವಲ್ಲಿವೆಲ್ಲಿತ್ತೋ ।
ಎಲ್ಲಿತ್ತೊ! ಯತಿವರತ್ವಮ
ದೆಲ್ಲಿತ್ತೋ! ಯೌವನಾನುಶಾಸನವಿಗಳ್ ॥ 135 ॥

ಎಂದು ಮಾಣದೆ ॥

ಕಂ ॥ ಅತಿಕಠಯದಿಂ ವಿಷಯಾನ
ಕ್ತತೆ ನಿನ್ನನ್ನರುಮನಿಂತು ಮಾಡಿತ್ತೆನಲಿಂ ।
ಮತಿ ನಿಷ್ಫಲಮಾಗಮನಂ
ತತಿ ನಿರ್ಗುಣಮಲ್ತೆ ನಿಷ್ಪ್ರಯೋಜನವುಲ್ಕೆ! ॥ 136 ॥

ಅಂತುಮನುಲ್ಲದೆಯುಂ ॥

ಕಂ ॥ ಎಂತುಗಡ! ನಿನ್ನ ಕೈಯಿಂ
ದಂ ತೊಟ್ಟನೆ ಬಿಳ್ದ ಜಪದ ಮಣಿಯುಮನೆಲೆ! ಮುಂ ।
ದಂತೊಯ್ಯಲಲ್ಲಿಯೆನೆನಲಿ
ನ್ನಿಂತಿರೆ ನಿನ್ನಂತೆ ವಿಗತಚಿತ್ತರುಮೊಳರೇ ॥ 137 ॥

ವ ॥ ಅದಲ್ಲಿನಿನ್ನಾದೊಡಂ ನಿನ್ನ ಮನಮುಂ ನೀಂ ನಿಲಿಸಿಕೊಳ್ಳೆಂದು ನುಡಿಯೆ ಲಜ್ಜಿತನಾದಂತೆಗೆಯ್ದು ॥

ಕಂ ॥ ಪೆಸೆದು ಕಪಿಂಜಲ! ನೀಂ ಭಾ
ವಿಸದಿರ್ಪ್ಪೆರೊಂದುತೆಱನನವಳೆನ್ನಂ ವಂ ।
ಚಿಸಿದಪರಾಧವನಾಂ ಸೈ
ರಿಸುವೆನೆ! ನೋಡೆನುತವೆಳ್ದು ಪುಸಿವಮುಳಿಸಿಂದಂ ॥ 138 ॥

ಪಿರಿದುಂ ಪ್ರಯತ್ನದಿಂದನೆ
ವಿರಚಿಸೆ ಕಣ್ಗಿಸವ ಭೀಷಣಭ್ರುಕುಟಿ ಪೊದ ।
ಳ್ದಿರೆ ಚುಂಬನಾಭಿಲಾಷ
ಸ್ಫುರಿತಾಧರನಾಕುಮಾರತಾಪಸನೆನ್ನಂ ॥ 139 ॥

ಕುಡು ಚಪಳೆ! ಜಪದ ಮಣಿಯಂ
ಕುಡದಿನ್ನೊಂದಡಿಯನಪ್ಪೊಡಂ ಪೋಗದಿರೆಂ ।
ದೊಡೆ ಕೇಳ್ದು ಜಪದ ಮಣಿಗೆ
ತ್ತೊಡನೆಯೆ ಹಾರಮನೆ ತೆಗೆದೆನೆನ್ನಯ ಕೊರಲಿಂ ॥ 140 ॥

ವ ॥ ಅನ್ತು ಮಕರಧ್ವಜಲಾಸ್ಯಾರಂಭಲೀಲಾಪುಷ್ಪಾಂಜಲಿಯೆನಿಸಿದೇಕಾವಳಿಯಂ ತೆಗೆದುಕುಡುವುದುಮಾತನುಂ ಮನ್ಮುಖಾಸಕ್ತದೃಷ್ಟಿಯಿಂ ಮೆಯ್ಯಱಿಯದಕ್ಷಾವಳಿಗೆತ್ತು ಕಳೆದುಕೊಳ್ವುದುಮಾನಾಗಳಲ್ಲಿಂತಳೆದರ್ ॥

ಕಂ ॥ ಕಳವಳಿಸಿ ಬೆಮರ್ತ್ತಾರ್ಗ
ಳ್ಕೊಳೆದೊಳ್ಮೀಯಲ್ಕತಿಪ್ರಯತ್ನದಿನೊಯ್ದು ।
ಕ್ಕೆಳದಿಯರೆಂತಾನುಂ ತೆಗೆ
ದಳವಿಲ್ಲದೆ ಬಂದನದಿಯನಿದಿರೇಱುವವೊಲ್ ॥ 141 ॥

ವ ॥ ಅಂತಾಯ್ಯನ್ನಿಜಜನನಿಯೊಡನೆಂತಾನುಮರವನೆಗೆ ಬಂದು ಮುದೀಯ ವುಂದಿರವುಂ ಪೊಕ್ಕು ತದ್ವಿಯೋಗದೊಳ್ಮೈಯ್ಯಱಿಯದೆ ॥

ವೃ ॥ ಮನೆಗೇಂ ಬಂದೆನೊ! ಬಾರೆನೋ! ಸಖಿಯರೊಳಾಡಿರ್ದ್ದೆನೋ ಕೂಡದಿ
ರ್ದ್ದೆನೊ! ವೇಣ್ಮೆದ್ರೆಯೊಳರ್ದ್ದೆನೋ ಪಿರಿದುಮೆಚ್ಚತ್ತಿರ್ದ್ದೆನೋ! ಮೌನಮಿ
ರ್ದ್ದೆನೊ ಮಾತಾಡುತಮಿರ್ದ್ದೆನೋ! ವ್ಯಸನದೊಳ್ಸಂದಿರ್ದ್ದೆನೋ ರಾಗಮಿ
ರ್ದ್ದೆನೊ! ಪೇಳಾಂ ನಗುತಿರ್ದ್ದೆನೋ ಮನದೊಳಂದಾಸತ್ತಳುತ್ತಿರ್ದ್ದೆನೋ ॥

ಕಂ ॥ ಇದುದಿವವೋ ರಾತ್ರಿಯೊ! ವೇ
ಣಿದು ದುಃಖವೊ ರುಜೆಯೊ ಕಳವಳವೊ! ಪೇಳದು ಪೊ ।
ಲ್ಲದೊ ತಾನಿದೊಳ್ಳತೋ! ವೇ
ಣಿದೆಂಬುದಂ ಬಗೆಯಲಾರ್ತ್ತೆನಿಲ್ಲಾಕ್ಷಣದೊಳ್ ॥ 143 ॥

ಪೃ॥ಅದಾವಡೆಗೆ ಪೋಪುದಿಂನುಡಿವುದಾರೊಳಿನ್ನಳ್ಕಲ್ಲಿಂ
ದದಾವುದನೆ ಕೇಳ್ವೆನಿಂ ಪದೆದು ನೋಳ್ಪುದಿನ್ನೇನನಿ ।
ನ್ನದಾರ್ಗಿದನೆ ಪೇಳ್ವೆನಿನ್ನೆನಗೆ ಬಾಳ್ಕೆ ಪೇಳಾವುದೆಂ
ದದೇನುವುರಿಯಲ್ಕೆ ಬಾರದೆ ಮನೋಭವೋದ್ರೇಕದಿಂ ॥ 144 ॥

ವ ॥ ಅನಂತರಂ ಸಖೀಜನಮುಮನಕೇಷಪರಿಜನಮುಮಂ ಬಾಗಿಲೊಳ್ನಿಲಿಸಿ ಕನ್ಯಾಂತಃಪುರಪ್ರಾಸಾದಮನೇಱಿ ತದೀಯಮುಣಿಗವಾಕ್ಷನಿಕ್ಷಿಪ್ತಮುಖಿಯೆನಾಗಿ ॥

ವೃ ॥ ಅದು ಏಯೂಷಸಯೋಧಿಪೂರಲಹರೀಸಂತಾನದಿಂ ಚೆಲ್ವುವೆ
ತ್ತುದೊ! ವಾಣಿಕ್ಯಸಿಧಾನದಿಂ ಸಮೆದು ತೋಱುತ್ತಿರ್ದ್ದುದೋ! ಚಂದ್ರಬಿಂ ।
ಬದಿನೊಪ್ಪುಂಬಡೆದತ್ತೊ! ವೇಣ್ಪಸದನಂಗೊಂಡಿರ್ದ್ದುದೋ! ಪೇಳಿನ
ಲ್ಪದೆದಾಂ ನೋಡಿದೆ ನಾತಸಿರ್ದ್ದ ದೆಸೆಯಂ ನಟ್ಟಾಲಿ ಬೀಳ್ವನ್ನೆಗಂ ॥ 145 ॥

ಅದಲ್ಲದೆಯುಂ ॥

ಕಂ ॥ ಆದೆಸೆಯಿಂ ಬಪ್ಪೆಲರುಮ
ನಾದೆಸೆಯಿಂದೆಸೆವ ಕುಸುಮಪರಿಮಳಮುಮನಂ ।
ತಾದೆಸೆಯಿನೆಸೆವ ವಿಹಗನಿ
ನಾದಮುಮಂ ವಾರ್ತೆಗೇಳಲಾನೊಡರಿಸಿದೆಂ ॥ 146 ॥

ವ ॥ ಮತ್ತವಾತಂ ಕೈಕೊಂಡುದಱಿಂ ಋಷಿವೇಷಗ್ರಾವ್ಯತೆಯುಂ ಆತನಂ ಪೊರ್ದ್ದಿದ ಜವ್ವನಕ್ಕೆ ಸೌಂದರ್ಯಮುಂ ಆತನ ಕಿವಿಗವತಂಸಮಾದ ಪಾರಿಜಾತ ಕುಸುಮಮುಮಂಜರಿಗೆ ಮನೋಹರತೆಯುಮಾತನಿರವಿಂದಮೆ ಸುರಲೋಕಕ್ಕೆ ರಮಣೀಯತೆಯುಮಾತನ ರೂಪಸಂಪತ್ತಿಯಿಂ ಕುಸುಮಾಯುಧಂಗೆ ದುರ್ಜಯತ್ವಮುಮಾದುದೆಂದು ಬಗೆಯುತ್ತವಾಸೌಭಾಗ್ಯಸಿಧಿಯ ವಿಯೋಗದಿಂ ಜೀವವಿಯೋಗಮಾಗದಿರ್ಕ್ಕೆಂದು ತಗುಳ್ಚಿದ ರಕ್ಷಾವಳಿಯಂತೆ ಕೊರಲೊಳಿಕ್ಕಿರ್ದ್ದಕ್ಷಾವಳಿಯುಂ ಆತನ ರಹಸ್ಯಾಲಾಪದಂತೆ ಕಿವಿಗೆವಂದು ರಾಜಿಸುವ ಪಾರಿಜಾತಕುಸುಮಮುಂಜರಿಯುಮಾತನ ಕರತಲಸ್ಪರ್ಶನಸುಖದಿಂ ಕಪೋಲತಲಕವಂಬಮುಂಕುಳಕರ್ಣಪೂರದಂತುಣ್ಮಿರ್ದ್ದಪುಳಕಮುಂಬೆರಸು ಗದ್ಗದಚಿತ್ತೆಯೆನೇಕಾಕಿಯಾಗಿಪ್ಪುದುಮನ್ನೆಗವೆನ್ನ ತಾಂಬೂಲಕರಂಕವಾಹಿನಿ ಮಕರಿಕೆಯೆಂಬಳ್ ಪೇೞಿಗೆ ಕಿಱಿದುಬೇಗಂ ವಿಯಾಲಿಂದು ನಿಂದನಂತರಂ ಮತ್ಸಮಿಪಕ್ಕೆ ಬಂದು ಮೆಲ್ಲನಿಂತೆಂದಳ್ ॥

ವೃ ॥ ತೊಡಿಸಿದನಾವನೀ ಕುಸುಮಮುಮಂಜರಿಯಂ ನಿನಗಾತನಕ್ಕ! ತ
ನ್ನೊಡವರುತಿರ್ದ್ದ ತಾಪಸಕುಮಾರನನಾಗಳೆ ವಂಚಿಸಲ್ಕೆ ತ ।
ಳ್ತಡಿದಲತಾಪ್ರತಾನದೊಳಪೊಕ್ಕುಳದೊಯ್ಯನೆ ಸಾರ್ದ್ದು ಮೆಲ್ಲೊಡಂ
ಬಡೆ ಪಿನಗೊಂಡನೆನ್ನನನುರಾಗದಿನೆಯ್ದೆ ಭವತ್ಪ್ರಪಂಚಮಂ ॥ 147 ॥

ಆದೆಂತೆನೆ ॥

ಕಂ ॥ ಈಕನ್ನೆಯೂರ್ಗ್ಗೆ! ಪೆಸರೇ
ನೇಕಿಲ್ಲಿಗೆ ಬಂದಳಾರ ಮಗಳಿಸೆವಲರ್ದ ।
ಬ್ಜಾಕರದಿನೆತ್ತ ಪೋದಪ
ಳೀ ಕೆಯಿನಲ್ಮನಿಕುಮಾರಕಂಗಿಂತೆಂದೆಂ ॥ 148 ॥

ವ ॥ ಆದೆಂತೆಂದೊಡೆ ದಿನಕರಮರೀಚಿಯಿಂದಾದಪ್ಸರಸೆಯೊಳುದಿಸಿದ ಗೌರಿಗಂ ಗಂಧರ್ವಲೋಕಾಧಿಪತಿಯುಪ್ಪ ಹಂಸಂಗಂ ಮಗಳಾಗಿ ಮಹಾಶ್ವೇತೆಯೆಂಬ ಪೆಸರಿಂ ನೆಗಳ್ತೆ ನೆತ್ತಳದಲ್ಲದೆಯುಂ ಇಂದು ಜನನಿಯೊಡಬೀಸರೋವರವಂ ವಿಾಯಲೆಂದು ಬಂದಾತ್ಮನಿವಾಸಮುಪ್ಪ ಹೇಮಕೂಟಾಚಲಕ್ಕೆ ಪೋಗುತಿರ್ದ್ದಪಳೆಂಬುದುಂ ಕಿಱಿದು ಬೇಗನೀನಾನುವಂ ತನ್ನೊಳೆ ಬಗೆಯುತ್ತಮಿರ್ದನಂತರಮೆನ್ನನಿಂತೆಂದಂ ॥

ಕಂ ॥ ಎಳವೆಯೊಳಂ ಗಾಂಭೀರ್ಯ್ಯಮ
ನೊಳಕೊಂಡ ಭವತ್ಸ್ವರೂಪಮಂ ಕಂಡೀಕೋ ।
ಮಳೆಯಂ ಪ್ರಾರ್ಥಿಸಿದೊಡೆ ನಿ
ಷ್ಫಳಮಾಗದೆನುತ್ತೆ ಬಂದೆನಾನಿಂದುಮುಖೀ ॥ 149 ॥

ವ ॥ ಎಂದು ನುಡಿಯಲಾನಾಗಳಾದರಂಬೆರಸು ಕೈಗಳಂ ಮುಗಿದು ॥

ವೃ ॥ ಪೆಸರುನ್ನುದಂತದಿಕ್ಕೆಯಮ! ಭವದ್ವಿಧರಪ್ರತಿಮಪ್ರಭಾವರೀ
ಹ್ಷಿಸುವರೆ! ಮುನ್ನ ಮದ್ವಿಧರನೆನ್ನೊಲಾದವೆ ನೋಂತಳಾವಳ ।
ನ್ನುಸುರ್ವುದು ನನ್ನಿಯಂ ನುಡಿಯೆ ಕಾರ್ಯವನೆನ್ನವಳೀಕೆಯೆಂದು ಭಾ
ವಿಸಿ ಕೃತಕೃತ್ಯೆಯಪ್ಪೆನೆನಲಾಗಳೆ ಸಂತಸವಂ ನೆಗಳ್ಚಿದಂ ॥ 150 ॥

ಅಂತುಮಲ್ಲದೆಯುಂ ॥

ವೃ ॥ ಕೆಲದೊಳಳುತ್ತು ಕಾವುರ್ಮ್ಮಗಿಲೆ ಪರ್ವಿದುದೆಂಬಿನೆಗಂ ಕಱುಂಗಿಕ
ತ್ತಲಿಪ ತವಾಲಪಾದಪದ ಪಲ್ಲವಮಂ ಹಿಳದೊಂದು ನಿರ್ಮ್ಮಲೋ ।
ಪಲತಲದಲ್ಲಿ ತದ್ರಸದಿನಾಗಳೆ ನೋಡಿ ನಿಜೋತ್ತರೀಯವ
ಲ್ಕಲವಸನೈಕದೇಶಮನೆ ಸೀಳ್ದದರೊಳ್ಬರೆದಂ ತಳೋದರೀ ॥ 151 ॥

ಅನಂತರಂ ॥

ಕಂ ॥ ಏಕಾಂತದೊಳೀಲೇಖಮ
ನಾಕನ್ನೆಗೆ ಪೋಗಿ ಕುಡುನ್ನುದೆಂದಟ್ಟಿದನೆಂ ।
ದಾಕೆ ನುಡಿವುತ್ತಮಂದ
ಪ್ರಕಟವದನಡಪದೊಳಗಣಿಂ ತೆಗೆದಾಗಳ್ ॥ 152 ॥

ವೃ ॥ ಅದು ಶಬ್ದಾತ್ಮಕಮಾಗಿಯುಂ ಪಿರಿದುಮಂದಂತರ್ಗತಸ್ಪರ್ಶಸಾ
ಖ್ಯದಪೊಲ್ಮಾಡುತಮಾಗಳಂತೆ ಕಿವಿವೊಕ್ಕುಂ ಮೆಯ್ಯೊಳಂತೆಯ್ದಿಪೊ ।
ಕ್ಕುದನುದ್ಯತ್ಪುಳಕಾಂಗಳಂದಲಿಯಿಸುತ್ತಂ ಮನ್ಮಥಾವೇಶಮಂ
ತ್ರದಪೋಲಾತನ ವಾರ್ತೆ ನೆಯ್ಯಲಿಯದಿರ್ಪಂತೆನ್ನನೇಂ ಮಾಡಿತೋ ॥

ವ ॥ ಅನಂತರಮಾಲೇಖನಮಂ ಕಳೆದುಕೊಂಡು ನಿಮಿಚ್ಚಿ ನೋಳ್ಪನ್ನೆಗ ಮಲ್ಲಿ ॥

॥ ಆರ್ಯಾವೃತ್ತಂ ॥

"ದೂರಂ ಮುಕ್ತಾಲತಯಾ
ಬಿಸಸಿತಯಾ ವಿಪ್ರಲೋಭ್ಯಮಾನೋ ಮೇ ।
ಹಂಸ ಇವ ದರ್ಶಿತಾಶೋ ಮಾ
ನಸಜನ್ಮಾ ತ್ವಯಾ ನೀತಃ" ॥ 154 ॥

ಕಂ ॥ ಎನಗಾಸೆದೋಱೆ ಬಿಸಸಿತ
ಮೆನಿಸುವ ನಿಜತಾರಹಾರಲತೆಯಿಂದಂ ಹಂ ।
ಸನವೊಲ್ಮಾನಸಸಂಭವ
ನೆನಿಪ ವುದೀಯಾಭಿಮಾನಮಂ ಕಟ್ಟುಯ್ದೌ ॥ 155 ॥

ವ ॥ ಎಂಬೀ ಆರ್ಯೆಯಂ ಭಾವಿಸಿ ನೋಡೆ ॥

ವೃ ॥ ನೊದಲೊಳೊಸ್ಸಿಕ್ಕಿದವಂಗೆ ಕಳ್ ವಿಷದಿನಳ್ಕಿರ್ದಂಗೆ ದುರ್ವಿದ್ರೆ ಕಾ
ಣದವಂಗುರ್ವಿದ ವುನ್ವ್ರ್ವು ದಿಗ್ಭ್ರುನೆ ಪದಂಗೆಟ್ಟುಂಗೆ ಪೈಶಾಚಿಕಂ ।
ಗೆ ದುರಾವೇಶವುಧಾರ್ಮಿಕಂಗೆ ಕುವುತಂ ತತ್ವಪ್ರವುಾಢಂಗೆ ಬೀ
ಸಿದ ಕಣ್ಣಾಯುದ ಕುಂಚದಂತಿರೆನಗಾದತ್ತಾಗಳೇನೆಂಬುದೋ ॥ 156 ॥

ತದನಂತರಂ ॥

ವೃ ॥ ಅವುರ್ದಂ ಪೀರ್ದ್ದಳೊ! ನೋಣ್ವರೆಂಬಡೆದಳೋ! ಪುಣ್ಯೋದಯಂ ತನ್ನೊಳೇಂ
ಸವುಸಂದಿದ್ದುದೊ! ನಾಕಲೋಕಸುಖವುಂ ಕೈಕೊಂಡಳೋ ದೈವವೀ ।
ರವುಣೀರತ್ನದ ವೇಲೆ ವೇಣ್ಣಿಲಸಿತೋ! ತ್ರೈಲೋಕ್ಯರಾಜ್ಯಾಭಿಷೇ
ಕವೆಂ ಕೈಸಾರ್ದುದಿವಳ್ಗೆನುತ್ತೆ ಪದಪಿಂದಾನಾಕೆಯಂ ನೋಡಿದೆಂ ॥ 157 ॥

ವ ॥ ಅಂತು ನೋಡಿ ಪರಿದುವುಳ್ಳುಂ ಕೆಲಕ್ಕೆ ಕರೆದು ಕುಳ್ಳಿರಿಸಿ ॥

ಕಂ ॥ ಪರೆದಿರ್ದ್ದ ಕುರುಳ್ಗಳನೋ
ಸರಿಸಿ ಕದಂಪುಗಳನೊಯ್ಯ ನೆಳವೊತ್ತಂದಾ ।
ಳರಸೆಂಬ ಭೇದವೆಮ್ಮಿ
ಬ್ಬರೊಳೆಂ ಪಲ್ಲಟಿಸಿತೆಂಬಿನಂ ವುನ್ನಿಸಿದೆಂ ॥ 158 ॥

ಅಂತಾದರಿಸುತ್ತವಿರ್ದ್ದ ॥

ಕಂ ॥ ಎಂತೆಂತು ಕಂಡೆ ಕಣ್ಬರಿ
ವೆಂತೆಂತೇನೆಂದು ನುಡಿದನಾತನ ಕೆಲದೊ ।
ಳ್ನೀಂ ತಡೆದ ಜೇಗವೆನಿತೆನಿ
ತಂತರವುಂ ಬರುತಲಿರ್ದ್ದನೆಮ್ಮಯ ಬಳಿಯಂ ॥ 159 ॥

ಎಂದುಂ ॥

ಕಂ ॥ ಒಡನೆಯವರೆಲ್ಲರುಮನುಳಿ
ದಡಪದವಳುಮಾನುವೊಂದು ಮಾಡದ ನೆಲಿ ।
ದ್ದಡಿಗಡಿಗೆ ಮಗುಳ್ದು ಮಗುಳ್ದಾ
ನುಡಿಯನೆ ಕೇಳುತ್ತೆ ಕಳಿದೆನಂತಾಪಗಲಂ ॥ 160 ॥

ಅನ್ನೆಗಂ ॥

ಕಂ ॥ ಮುದನಾತುರೆಯಪ್ಪೆನ್ನೀ
ಹೃದಯದ ರಾಗವನೆ ಪಚ್ಚಿಗೊಂಡಂತಿರೆ ಕೆಂ ।
ಪೊದವಿದ ಪಡುವಣದೆಸೆಗೆ
ಯ್ದಿದನರುಣರುಚಿಪ್ರಕಾಶನಪ್ಪ ದಿನೇಶಂ ॥ 161 ॥

ಕೆಂದಾವರೆಗಳ್ಮಧುಕರ
ವ್ರಂದವನುನೊಳಿಕೊಂಡು ಮುಗಿಯೆ ರವಿವಿರಹದ ನೋ ।
ವಿಂದರವಿಂದಿನಿ ಮೂರ್ಛೆಗೆ
ಸಂದೆರ್ದಕತ್ತಲಿಸಿದಂದಮುಂ ಪ್ರಕಟಿಸುಗುಂ ॥ 162 ॥

ವೃ ॥ ಇಂದುಕಳಾಮರೀಚಿರುಚಿರೋಜ್ಜ್ವಲಬಾಲವೃಕಾಳಮುಂ ಮರು
ಳ್ಕೊಂದನೆ ಕಚ್ಚಿ ತದ್ವಿವರದಿಂದೆರಡುಂ ಬರೆಪೀರ್ವ್ವೊಲ್ನಿಗ ।
ಳ್ಕೊಂದಲು ಚಿತ್ತಮುಂ ತೆಗೆದುಕೊಂಡು ವಿಯೋಗದಿನಾದದೊಂದು ಕಿ
ಚ್ಚಂದಳುರಲ್ಕಗಲ್ದುವು ರಥಾಂಗಯುಗಂಗಳನಂಗತಾಪದಿಂ ॥ 163 ॥

ವ ॥ ಆಗಳೆನ್ನ ಕೊಡೆವಿಡಿದವಳ್ ಬಾಗಿಲಿಂ ಪರಿತಂದು ॥

ಕಂ ॥ ಕೊಳನ ತಡಿಯಲ್ಲಿ ಕಂಡಾ
ಗಳನಿಬ್ಬರೊಳೊಬ್ಬನುನಿಕುಮೂರಂ ಭೂಭೃ ।
ನ್ನಿಳಯದ ಬಾಗಿಲೊಳಕ್ಷಾ
ವಳಿಯಂ ಬೇಡಲ್ಕೆ ಬಂದು ನಿಂದಿರ್ದ್ದಪ್ಪಂ ॥ 164 ॥

ಎಂದವಳ್ ಬಂದು ವೇಳ್ವುದುಂ ॥

ಕಂ ॥ ನಿನಗೇವೇಳ್ದಪೆನಾಂ ಭೋ
ಕೆನಲಾ ತಾಪನಕುಮೂರವೆನಗೊರ್ಳ್ವುದುಮೂ ।
ತನೆಗೆತ್ತು ಬಾಗಿಲೊಳ್ಕೊ
ಟ್ಟನೆ ಬಂದಿರ್ದ್ದಂತಿರಾದೆನಿರ್ದ್ದಂತಿರ್ದ್ದುಂ ॥ 165 ॥

ವ ॥ ಆಗಳೊವ್ವ ಕಂಚುಕಿಯಂ ಕರೆದು ಬೇಗವೊಡಗೊಂಡು ಬಾಯೆಂದು ವೇಳಲೊಡನೆ ॥

ಕಂ ॥ ಎಳವಿಸಿಲೊಲವಿಂ ಬೆಳ್ದಿಂ
ಗಳ ಬಳಿಯಂ ಬರುತವಿುದ್ದುದೆಂಬಂತೆ ಕಪಿಂ ।
ಜಳನಾಗಳು ಜರಾನಿ
ರ್ಮಳನೆನಿಸಿದ ಸೌವಿದಲ್ಲನೊಡವರುತಿರ್ದ್ದಂ ॥ 166 ॥

ವ ॥ ಅಂತು ರೂಪಿಂಗೆ ಯೌವನವುಂ ಯೌವನಕ್ಕೆ ಕಾವುನುಂ ಕಾವುಂಗೆ ವಸಂತಸವುಯವುಂ ವಸಂತಸವುಯಕ್ಕೆ ತಂಬೆಲರುವೆಂಬಂತೆ ಪುಂಡರೀಕಂಗೆ ಸಹಾಯನಪ್ಪ ವುುನಿಕುವಾರನಂ ಕಂಡೆನನ್ನೆಗಂ ವುುನಿಪಂ ವ್ಯಾಕುಲನಂತೆ ಕೂನ್ಯನಂತೆ ದುಃಖಿತನಾಗಿರ್ದ್ದಂತೇನಾನುಂ ಪ್ರಾರ್ಥಿಪನಂತೆ ಬರುತಿರ್ದ್ದನಿಪ್ಪುದುವಾಕ್ಷಣದೊಳ್॥

ಕಂ ॥ ಇದಿರೆದ್ದು ಪೊಡವಡುತ್ತೇ
ಱಿದ ಕನಕಾಸನವುನಿತ್ತು ಬೇಡೆನೆಯೆನೆ ತ ।
ತ್ಪದಯುಗವುಂ ಕಚ್ಚಿ ಪದಾ
ಬ್ಜದಿಪ್ಪನಾಂತೊಡೆದೆನುತ್ತರೀಯಾಂಕುಕದಿಂ ॥ 167 ॥

ನುಡಿಯಲ್ಮುನಿಪಂ ಬಗೆದೆ
ನ್ನಡಪದವಳ್ ಕೆಲದೊಳದ್ದೊಡಾಕೆಯ ದೆಸೆಯುಂ ।
ಕಡೆಗಣ್ಣಿಂ ನೋಳ್ಪುದುವಾ
ಗಡೆ ಲಜ್ಜಿಸಿದಪ್ಪನೆಂದು ನೋಟದಿನಱಿದೆಂ ॥ 168 ॥

ವ ॥ ಆಗಳಱಿದವಳೆನ್ನ ಶರೀರದಿಂ ಬೇಱುಲ್ಲಳ್ಮುನಿಶಂಕರಾ! ನೀಂ ಬೆಸಸಿವುೆಂಬುದುಂ ॥

ಕಂ ॥ ನುಡಿವೊಡೆ ಲಜ್ಜಿಸಿ ನಾಲಗೆ
ಪೊಡದರ್ದಪುದಿಲ್ಲಕ್ಕು ಬಿಕ್ಕೆಯಂ ಬೇರುವಾನುಂ ।
ಡಡವಿಯೊಳಗಿರ್ಪ್ಪವುುನಿಗಳ
ನಡೆವಳಿಯೆತ್ತೆತ್ತಯುವತಿಜನದನುರಾಗಂ ॥ 169 ॥

ಅದಲ್ಲದೆಯುಂ ॥

ವೃ ॥ ನಗೆಗೆಡೆಯಾಗೆ ದೈವವಿನಗೇನನೊಡಚ್ಚಿಸಿತೀಗಳಕ್ಕ! ರಾ
ಗಿಗಳ ನಿಕೃಷ್ಟಜೇಷ್ಟೆಗನುಗೆಯ್ದುವೆನೆಂತಿದನಿನ್ನವುುಂದೆ ಪೇ ।
ಳ್ಚಗವೊಡೆ ಕಟ್ಟುದೀಜಡೆಗೆ ತಕ್ಕುದೊ! ವೇಣಿಯೊಪ್ಪದೆದಿರ್ದ್ದ ನಾರಸೀ
ರೆಗೆ ದೊರೆಯೋ! ತಪಕ್ಕಿದನುರೂಪವೊ! ವೇಣ್ಮುಕೃತಕ್ಕುಪಾಯವೋ ॥

ಆದೊಡಂ ॥

ವೃ ॥ ಪೇಳಲೆವೇಡಿದಪ್ಪುದು ಶರಚ್ಛಿಖಿತಾನ್ವುದುವಿಲ್ಲ! ಕೇವಲಂ
ಪೇಳದಿರಲ್ಕನರ್ಥವುದಱಿಂದಸುವಂ ನೆಱೆಬಿಟ್ಟುವಿೂಗಳಾಂ ।
ಪಾಲಿಸವೇಳ್ಕುವೆನ್ನಯ ಸಹಾಯನ ಜೀವವುನೊಂದ ಲಜ್ಜೆಯಂ
ಪಾಲಿಸದೆಯ್ದೆ ಪೇಳಲನುಗೆಯ್ವುವೆನುತ್ಪಲಲೋಲಲೋಚನೇ ॥ 171 ॥

ಅದೆಂತೆನೆ ॥

ಕಂ ॥ ಒದವಿದ ಮುನಿಸಿಂದಂ ನಿ
ನ್ನಿದಿರೊಳ್ಬಿಡೆ ನುಡಿದು ಬಿಟ್ಟು ಮುನಿಪನ ಪೊಗೊ ।
ಯ್ವುದುಮಂ ಬಿಸುಟ್ಟು ನಿಲಲಾ
ಱದೆ ಮತೊಂದೆಡೆಗೆ ಪೋದೆನುಬ್ಬೆಗದಿಂದಂ ॥ 172 ॥

ವ ॥ ಅನ್ನೆಗಂ ನೀಮುಂ ನಿಜಾವಾಸಕ್ಕೆ ವಂದಿರಾಗಳಾನೇಕಾಕಿಯಾಗಿದ್ದು ನೆಗೆಯುತ್ತಿರ್ದಪನೆಂದು ಕುತೂಹಲಂಬೆರಸು ಮುನ್ನಿನೆಡೆಗೆ ಬಂದು ನೋಡಿ ಕಾಣದೆ ವ್ಯಗ್ರಮನನಾಗಿ ॥

ವೃ ॥ ತರುಣಿಯ ಬೆನ್ನೊಳಂಗಭವನಾಡಿಸಿದಂದದೊಳಾಡಿ ಗೋರಿಗೊಂ
ಡೆರಳೆವೊಲಾಗಿ ಪೋದನೊ! ಭಯಂಬೆರಸೆನ್ನ ವೊಗಕ್ಕೆ ನಾಣ್ಚಿ ವೆ ।
ಯ್ಗರೆದನೊ! ಕೋಪದಾಗ್ರಹದಿನೆನ್ನನಗಲ್ದನೊ! ಕಾಣದೆನ್ನನೆ
ಲ್ಲಿರದಱುಸುತ್ತಮಿದ್ದಪನೊ! ಬಾಲತಮಾಲವನಾಂತರಾಳದೊಳ್ ॥ 173 ॥

ಎಂದು ವಿಕಲ್ಪಿಸುತ್ತಮಿದ್ದು ॥

ಕಂ ॥ ಕಿಱುದೊಂದು ಪೊಳ್ತಗಲ್ದಿರ
ಲಱಿಯದನಂ ಕ್ಷಣಮಗಲ್ದು ನಿಲಲಾಱದೆ ವೆ ।
ಯ್ಮಱುಗಿ ಮುದೀಯವಯಸ್ಯನ
ನಱಸುತ್ತುಂ ವುಗುಳೆ ಮುನದೊಳಾಂ ಚಿಂತಿಸಿದೆಂ ॥ 174 ॥

ಮುದನವುದೋದ್ರೇಕದಿನೆ
ನ್ನಿದಿರೊಳ್ ಧೃತಿಗೆಟ್ಟು ಸಿಗ್ಗಿಸಿಂ ತನ್ನೊಳ್ಳಿಪ ।
ಲ್ಲದನೆತ್ತಾ ಚರಿಸುಗುವೋ!
ಒದವಿದ ಸಿಗ್ಗಿಂದವಾರುವೀನನೊಡಬ್ಚರ್ ॥ 175 ॥

ವ ॥ ಎಂದಱಿಸಿ ನೋಡುತ್ತಮೆಂತೆಂತು ಕಾಣದಿರ್ಪೆನಂತಂತೇನುಮುಂ ಮುನದೊಳ್ಬವಿಸುತ್ತಮಿದ್ದು ॥

ವೃ ॥ ಇರಿಪುದಯುಕ್ತಮಿನ್ನೆನಗರಣ್ಯದೊಳೊರ್ವನನೆಂದು ಶಂಕೆಯಿಂ
ತರುತಳದೊಳ್ತ ಮಾಲವನದೊಳ್ಪನಚಂದನವೀಧಿಯೊಳ್ನಿರಂ ।
ತರಲತಿಕಾಗೃಹಂಗಳೊಳನೇಕಲತಾಭವನಂಗಳೊಳ್ಸರೋ
ವರತಟದೊಳೊಳಲ್ದಱಸಿ ನೋಡಿದೆನುತ್ಪಲಲೋಲಲೋಚನೆ ॥ 176 ॥

ವ ॥ ಅನ್ತು ನೋಡುತಿರ್ಪನ್ನೆಗ ವೊಂದುನರಸ್ಸಮೀಪದೊಳ್ ವನನಿರಂತರತೆಯಿಂ ಕುಸುಮಮಯಮುಂ ಪರಭೃತಮಯಮುಂ ಮಯೂರಮಯಮುಮಾಗಿ ವಸಂತಜನ್ಮಭೂಮಿಯುಮಾದಂತಿರಲತಿಮನೋಹರಮಾದ ಲತಾಗಹನದೊಳುತ್ಸೃ

ಷ್ಟಸಕಲವ್ಯಾಪಾರನುಂ ವಿಗತನಿಮೇಷನುಮೆನಿಸಿ ಬರೆದನಂತೆಯುಂ ಕಂಡರಿಸಿದನಂತೆಯುಂ ಮಱುವಟ್ಟನಂತೆಯುಂ ಯೋಗಸವಾಧಿಸ್ಥಿತನಂತೆಯುಮುಪರತಿವಕನಾದಂತೆಯುಮಿರ್ದ್ದನಲ್ಲದೆಯುಂ ॥

ವೃ ॥ ಹೃದಯದೊಳಿರ್ದ್ದ ವಲ್ಲಭೆಯನೀಕ್ಷಿಸಲೆಂದೊಳಪೊಕ್ಕುವೆಯ್ದಿ ಪ
ರ್ಬಿದ ಮದನಾನಲಂಗಗಿದು ಭೋಂಕನೆ ವೆಯ್ಗುರೆದಿರ್ದ್ದುವೆಂಬಿನಂ ।
ಕದಡಿದ ಚಿತ್ತಮೆಂಬ ಕಡಲೊಳ್ಪೊಡರಲ್ಕಣವಾರದಿರ್ದ್ದಡಂ
ಗಿದುವು ಶರೀರದೊಳ್ವಿರಹದಿಂದಖಿಳೇಂದ್ರಿಯವಾಮುನೀಂದ್ರನಾ ॥ 177 ॥

ಅದಲ್ಲದೆಯುಂ ॥

ಕಂ ॥ ಬಳಗೊಳಗಳುರ್ವ ಮನೋಜಾ
ನಳಧೂಮಸ್ತೋಮಮೆಯ್ದೆ ಸುತ್ತಿದುದೋ! ಕ ।
ಣ್ಗಳನೆನೆ ತಳ್ತೆಮೆದುಱುಗಲಿ
ನಿಳದುವು ಪಿಗೆ ಬಾಷ್ಪವಾರಿಧಾರಾಪೂರಂ ॥ 178 ॥

ಹೃದಯದೊಳಗುಣ್ಮಿಪೊಣ್ಮಿದ
ಮದನಾಗ್ನಿಜ್ವಾಲೆಯೆನಿಸಿದಧರಾಂಶುಗಳಂ ।
ಪುದಿದ ಬಿಸುಸುಯ್ಗಳಿಂ ಕೊರ
ಗಿದುವು ಲತಾಕುಸುಮಕೇಸರಪ್ರಸರಂಗಳ್ ॥ 179 ॥

ಒದವಿದ ಚಿಂತಾಭಾರದೆ
ಕದಪಿನೊಳಕ್ಕಿರ್ದ್ದ ಮುನಿಯು ಕರನಖರುಚಿಗಳ್ ।
ಪುದಿದಡರ್ದು ಬೆಳಗಿದುವು ಪೂ
ಸಿದ ಚಂದನರಸಲಲಾಮದಂತಿರೆ ನೊಸಲೊಳ್ ॥ 180 ॥

ವೃ ॥ ತೊಳಗುವ ಪಾರಿಜಾತದಲಗೊಂಚಲಿನೊಪ್ಪುವ ಕರ್ಣಪೂರಮಂ
ಕಳೆದೊಡವುಲ್ಲಿ ಸಂಕ್ರಮಿಸಿ ಪೋಗದ ಕಂಪನುಣಲ್ಕೆ ಕರ್ಣದ ।
ತ್ತಳಿಸಿ ಜಿನುಂಗುತಿರ್ಪ್ಪ ನೆವದಿಂ ಸ್ಮರಮಂತ್ರಮನೋದುವಂತೆ
ಕಣ್ಗೊಳಪಳಿಸಂಕುಳಂ ನೆನೆಯಿಸಿತ್ತಸಿತೋತ್ಪಳಕರ್ಣಪೂರಮಂ ॥ 181 ॥

ಕಂ ॥ ವಿರಹಜ್ವರದಿಂ ಪುಳಕೋ
ತ್ಕರವೊಗೆದುವು ರೋಮಕೂಪವೆನಿತಸಿತಶ್ರೋಳಂ ।
ಸ್ಮರನ ಸರಲ್ಗಳ್ ನಾಂಟಲ್
ಕರೀರವಂ ಪತ್ತಿನಿಂದ ಪುಂಖಂಗಳವೊಲ್ 182 ॥

ಪುಳಕಂಗಳ್ಕ್ಷಿಣಕರ
ತಳಸಂಸ್ಪರ್ಶನದಿನೊಗೆದುವನೆ ಕೆದಱುವ ನು ।
ಣ್ಬೆಳಗಿಂ ಮುಕ್ತಾವಳಿ ಕ
ಣ್ಗೊಳಿಸಿದುದಂಗಜಪತಾಕೆಯಂದದಿನುರದೊಳ್ ॥ 183 ॥

ಪೊಗೆ ಪಬ್ಬಲ್ಯಾಯ್ದ ಪುಣಾಂ
ಬುಗಳಂ ಕುಸುಮಾಸ್ತ್ರನಿಸುತನಿದ್ದಿದನೆನೆ ಸಂ।
ಪಗೆಯು ಮುಗುಳ್ಗಳ್ಕೀಲ
ಲ್ಲುಗುತಿರ್ದ್ದುವು ಬಳಸಿದಳಕುಳಂ ಪೆರಸಾಗಳ್ ॥ 184 ॥

ವ ॥ ಅದಲ್ಲದೆಯುಂ ಮುದನವಶೀಕರಣಚೂರ್ಣದಂತೆ ಮೇಲೆ ಕೆದಱುವ ಕು ಸುಮರೇಣುಗಳುಂ ಆತ್ಮರಾಗವುಂ ಸಂಕ್ರಮಿಸುವಂತೆ ಮೈಲಲಿವ ರಕ್ತಾಶೋಕಪಲ್ಲವ ಮುಂ ವನಲಕ್ಷ್ಮಿಯೊಡಱರ್ಚ್ಚಿವ ರತಾಭಿಷೇಕದಂತೆ ಸುರಿವ ಪುಷ್ಪಾಸ್ತಬಕಶೀಕರಂ ಗಳುಂ ಅತಿಬಹುಳವನಾವೋದವುತ್ತ ಮಧುಕರರುಂಕಾರಂಗಳೊಳ್ಪೊರೆದ ದಕ್ಷಿಣಾ ನಿಲನುಂ ವಸಂತಜಯಶಬ್ದ ಕೋಲಾಹಲಂಗಳಂತೆ ಕಳಕಳಿಪ ಕೋಗಿಲೆಗಳುಮಂತ್ಯ ಕುಲತೆಯುಂ ಮಾಡೆ ಜನ್ಮಾಂತರೋಪಗತನಾದಂತೆಯುಂ ರೂಪಾಂತರವುಂ ಕೈಕೊಂ ಡಂತೆಯುಂ ಮುನ್ಮಥಾವೇಗದಿಂದಱಿಯಲ್ಕೆ ಬಾರದಾಕಾರವುಂ ಭಾವಿಸಿನೋಡಿ ॥

ಕಂ ॥ ಏನಂ ವಿಧಿ ಮಾಡಿದನೋ!
ತಾನಿಲ್ಲಿಗುಪಾಯಮೆಂತು ಭೋಂಕನೆ ಬಱ್ದೀ ।
ಜ್ಞಾನನಿಧಿ ಸೂರೆವೋ
ದಪುದಾನಿನ್ನೀಗೆಯ್ವೆನೆಂದು ತಳವೆಳಗಾದೆಂ ॥ 185 ॥

ಅದಲ್ಲದೆಯುಂ ॥

ಕಂ ॥ ಗುಣಿಯೆನಿಸಿದ ಚಾತುರ್ಯ್ಯದ
ಕಣಿಯೆನಿಸಿದ ಮುನಿಕುಮಾರಕಪ್ರತತಿಯೊಳ ।
ಗ್ರಣಿಯೆನಿಸಿದ ಮತ್ಸಖನಂ
ಕ್ಷಣಮಾತ್ರದಿನಿಂತಿರೆಳೆದು ಪೊಸೆಗುವೆ ಮುದನಂ ॥ 186 ॥

ವ ॥ ಎಂದಾತನಿರ್ಪ್ಪ ಲತಾಮುಂಟಪದೊಳಗಣ ಚಂದ್ರಕಾಂತಶಿಲಾತಳಕ್ಕೆ ಬಂದು ॥

ಕಂ ॥ ಪೊರೆಯೊಳಕ್ಕಳ್ಳಿರ್ದ್ದೊರ್ದ್ದಯ್ಯನೆ
ಕರತಳದಿಂದೆಳವಿ ತನುವನೀಗಳ್ನೀನಿ ।
ಪ್ಪರವಿನ ಪರಿಯೇನೆಂದುಂ
ಸರೋಜಮುಖಿ ಮುಕುಳತಾಕ್ಷನಂ ಪೆಸಗೊಂಡೆಂ ॥ 187 ॥

ವ ॥ ಅಂತು ಪೆಸಗೊಳ್ವುದುಂ ಮೂಗಳೆಡೆವಿಡದೆ ಮುಚ್ಚಿ ಪೆಚ್ಚಂತಿರ್ದ್ದ ಕಣ್ಗಳ ನೆಂತಾನುಂ ತೆಱೆದು ॥

ಕಂ ॥ ಬಸವಲ್ಲದಳ್ತಿ ಕೆಂಪೊಡ
ರಿಸೆ ತೀವಿರೆ ಬಾಷ್ಪಸಲಿಲಮಚ್ಚುಂಬುಗಳಂ ।
ಮುಸುಕಿದ ರಕ್ತಾಂಭೋರುಹ
ದಿಸಳಂ ಪೋಲ್ತಿಸೆವ ಕಣ್ಗಳಿಂದೀಕ್ಷಿಸಿದಂ ॥ 188 ॥

ವ ॥ ಅನ್ತು ಕಿರಿದುಬೇಗವೆನ್ನಂ ಭಾವಿಸಿ ನೋಡಿ ॥

ಕಂ ॥ ನೀಂ ತಿಳಿದಿರ್ದ್ದಂ ಮುಪ್ಪಿ
ತ್ತಾಂತವನೇನೆಂದು ಕೆಳೆಯ! ಪೆಸಗೊಂಡಪೆಯೆಂ ।
ದಿಂತಿದನುಸಿರ್ದಂ ಲಜ್ಜೆಯಿ
ನೆಂತಾನುಂ ಶೀರ್ಯವಾಣವಿರಳಾಕ್ಷರದಿಂ ॥ 189 ॥

ವ । ಎಂಬುದುಮದು ನೀನೆಂದಂತೆ ನಿಶ್ಚಯವಂಪ್ಪುದಾದೊಡಂ ॥

ವೃ ॥ ಇನಿತನೆ ಪುಂಡರೀಕ! ಪೆಸಗೊಂಡಪೆನಿಂತಿದು ಧರ್ಮಶಾಸ್ತ್ರಸಂ
ಜನಿತರಹಸ್ಯವೋ! ಯಮವೊ! ಪೇಳ್ವಱಿತೇನಪವರ್ಗವಾರ್ಗವೋ ।
ಮನದೊಳಿಣಂ ವಿಚಾರಿಸದೆ ಸೈರಣೆಗೆಟ್ಟಿಱಿವೆತ್ತವೋದುದೀ
ಮನಸಿಜನೆಂಬ ಪಾತಕನಿನಿಂತಪಹಾಸ್ಯಮನೆಯ್ದುಲಕ್ಕುವೇ ॥ 190 ॥

ಅದಲ್ಲದೆಯುಂ ॥

ವೃ ॥ ಅಗರುವ ಧೂಪಧೂಮಲತೆಯಿಂದಸಿತಾಹಿಗೆ ಸಾರ್ವ್ವ ನೆಯ್ದಿಲೊ
ಳ್ಮಾಗುಳನ ಮೂಲೆಯಿಂದಸಿಯನಪ್ಪುವ ಮಾಣಿಕವೆಂದು ಕೆಂಡವುಂ ।
ನೆಗಪುವ ಪುಣ್ಯಮೆಂದು ವಿಷವಲ್ಲಿಗೆ ನೀರೆಱೆವೆಗ್ಗನಂತೆ ಕೆ
ವ್ಮಿಗೆ ಸುಖವೆಂದಸದ್ವಿಷಯಸೌಖ್ಯದೊಳಂತೆಱಗಲ್ಕೆ ತಕ್ಕುದೇ ॥ 191 ॥

ವ ॥ ಅದಲ್ಲದೆಯುಮುತಿಬಹುಳರಜದೊಳೊರೆದ ಪೊನಲ್ಗಳಂತುನ್ಮಾರ್ಗದಿಂ ಪರಿವಿಂದ್ರಿಯಂಗಳಿಂ ನಿವಾರಿಸದೆಯುಂ ಕದಡಿದ ಮನಮಂ ನಿಯಮಿಸದೆಯುಮಿಂತಿ ಪ್ಪುದುಚಿತಮಲ್ಲಮನಂಗನೆಂಬ ದುರಾಚಾರನಂ ನಿವರ್ತಿಸಲ್ವೇಳ್ಕುವೆಂಬುದನಾಕ್ಷೇ ಪಂಗೆಯ್ದಿವೆಂದುಱುಗಲಿಸಿಳಿವ ತೋರರ್ಕಣ್ಬನಿಗಳಂ ಬಸಿಯುತ್ತಮೆನ್ನನಿಂತೆಂದಂ ॥

ಕಂ ॥ ಅಪರಿಮಿತೋಕ್ತಿಯೊಳೇಂ ನ
ತ್ವಪರೀತನೆ! ಮದನದಾವದಹನಂ ತಳ್ತಿ ।
ರ್ದ್ದಪುದಿಲ್ಲ ನಿನ್ನನದಱಿಂ
ದುಪದೇಶಂಗೆಯ್ಯುತಿಪ್ಪುದಿದು ಸುಖಮುಲ್ತೇ ॥ 192 ॥

ವೃ ॥ ಅವಂಗಿಂದ್ರಿಯವರ್ಗಮುಂಟು ಮನಮುಂಟಾವಂ ದಿಟಂ ಕಾಣ್ಬನಿ
ನ್ನಾವಂ ಕೇಳ್ವನದಂತೆ ಕೇಳ್ದ ನುಡಿಯಂ ಕೈಕೊಳ್ವನಂತಲ್ಲದಿ ।
ನ್ನಾವಂ ಪೊಲ್ಲದಿದೊಳ್ಳಿತೆಂದಱಿವನಾತಂ ಕೇಳ್ದಪಂ ನಿನ್ನನ
ದ್ಭಾವಂಚಿತ್ತುಪದೇಶವಂ ಕೆಳೆಯ! ಪೇಳೆನ್ನೊಂದಿಗಂ ಕೇಳ್ವನೇ ॥ 193 ॥

ಪೆಱತೇನಾನಿರ್ವ್ವಸಸ್ಥಾಂತರದೊಳೆನಗೆ ನಿನ್ನನ್ನರಾಬ್ಜಬಂಧುಗಳ್ನೀಂ
ಪೊಱಗಾಗೀವಾರ್ಗದಿಂದಂ ನಿಯಮಿಸುವವರಾರೆನ್ನನೇಗೆಯ್ವೆನಾನಿ ।
ನ್ನಱಿಯಿಂ ನೋಡೆನ್ನ ನಾಂ ಸಂವರಿಸಲಣವುಮಾರ್ತ್ತಪ್ಪೆನಿಲ್ಲೀಗಳಂತೀ
ತೆಱನಂ ಕಂಡಿರ್ದ್ದು ನೀನೀಯೆಡೆಗಿದುಚಿತವೆಂಬಂತುಟಂ ನೀನೆ ಬಲ್ಲೈ ॥

ವ ॥ ಆದೆಂತೆಂದೊಡೆ ಕಲ್ಪಾಂತೋದಿತದ್ವಾದಶದಿನಕರಕಿರಣಾತಪತೀವ್ರಮುಪ್ಪ ಮುದನಸಂತಾಪಕ್ಕುಪಶಮನೋಪಾಯಮನಾಂ ಪ್ರಾಣಂಪರಸೆಸಿತುಬೇಗಮಿಪ್ಪೆನನ್ನೆ ವರಮುಪೇಕ್ಷಿಸಿ ನಪ್ಪೆನಲ್ಲದೆಯುಂ ॥

ವೃ ॥ ಅಡುವಂತಾದಪುದೀಗಳೆನ್ನವಯವಂಗಳ್ಗೂಡೆ ಕರ್ಣಾಲಿಗ
ಳ್ಗಡುವಂತಾದಪ್ಪುದೇವೆನೆಯೆನ್ದಿ ಹೃದಯಂ ಬೇವಂತುಟಾದಪ್ಪುದೀ ।
ಪೊಡಲೋರಂತುರಿವಂದವಾದಪುದಿದಂ ನೀಂ ಮಾಣಿಸಲ್ಕಾರ್ಪೆಯಾ
ಪ್ಪೊಡೆ ದಲ್ಮಾಣಿಪುದೆಂಬಿದಂ ನುಡಿದು ಮಾತಂ ಮಾಣ್ದನಬ್ಜಾನನೇ ॥ 195 ॥

ವ ॥ ಅಂತುಸಿರದಿರೆ ಮತ್ತಮಾನಾತನಂ ಸಂಬೋಧಿಸಲೆಂದು ॥

ಕಂ ॥ ಎನಿತು ಪುರಾಣೋಕ್ತಿಗಳಿಂ
ದೆನಿತಾಗಮನಿಷಯವಚನದಿಂದೆನಿತು ನಿದ ।
ರ್ಕನದಿನನುನಯದೆ ಪೇಳ್ದಿನ
ದನಿತುಂ ಕಿವಿವೊಕ್ಕುದಿಲ್ಲ ತನ್ಮನಿವರನಾ ॥ 196 ॥

ವ ॥ ಆಂತು ಮೆಯ್ಯುಱಿಯದಿರ್ದನ್ತಂ ಕಂಡು ಭಯಂಗೊಂಡುಪದೇಶಕ್ಕಂದೆಡೆ ಯಿಲ್ಲದೆ ಪ್ರಾಣರಕ್ಷಣೋಪಾಯಮನಾದೊಡಂ ಮೂಳ್ಪೆನೆಂದಲ್ಲಿಂದಮೆಳ್ದಜಿಹ್ವೋದನರೋವರವಂ ಪೊಕ್ಕು ಸರಸವೃಣಾಳನಾಳಂಗಳುಮಂ ಜಲಲವಲವಾಂಛಿತಂಗಳಪ್ಪ ನಳನೀದಳಂಗಳುಮಂ ಪರಾಗಪರಿಮಳವನೋಹರಂಗಳಪ್ಪ ಕುಮುದಕುವಲಯಂಗಳುಮಂ ತಂದಾಲತಾವಂದಿರದೊಳಗಣ ಚಂದ್ರಕಾಂತಶಿಲಾತಲಂಗಳೊಳ್ ಪಲವುಮನಲ್ಪ ತಲ್ಪಂಗಳನುಮಂ ಮೂಳ್ಪುದುಮಾತನಲ್ಲಿಗೆ ಮೆಯ್ಯಬೀಡಾಡಿ ಕೆಲದೊಳಿರ್ದ ಚಂದನ ಪಲ್ಲವದಿಳವಿಗರ್ಗಳಂ ಕರತಳದಿಂ ಪಿಳಿದು ನಿಸರ್ಗಪರಿಮಳಮಂ ತಳೆದ ಹೈಮದಂತೆ ಕುಳಕ್ಕೊರ್ಗಡುವ ತದ್ರಸದಿಂ ಲಲಾಟಂ ಮೊದಲಾಗಿ ಚರಣತಳಂಬರಂ ಅಂಗಚರ್ಚೆಯ ನೆಡೆವಿಡದೊಡಚ್ಚಿರ್ಚಯುಂ ಅಭ್ಯರ್ಣಪಾದಪಸ್ಫುಟಿತವಲ್ಕಲಂಗಳೊಳಂ ಕಟ್ಟಿದಕರ್ಪೂರರಜದ ಪೊಟ್ಟಣಂಗಳೊಳಂ ಸ್ವೇದಪ್ರತೀಕಾರಮನನವರತಂ ಮಾಡಿಯುಂ ತಿಳಿನೀರ ತುಂತುರ್ವನಿಗಳಿಂ ಪೊರೆದಳಿವಾಳಿಯ ಸುಳಿಯ ಬಿಜ್ಜಣಿಗೆಗಳನಡಿಗಡಿಗೆಬೀಸಿಯುಂ ಮತ್ತಮನೇಕಶಿಶಿರೋಪಚಾರಂಗಳಂ ಮಾಡಿಯುಮವೆಲ್ಲಮುಂ ಪುಂಡರೀಕಂಗುದ್ದೀಪನ ಪಿಂಡದಂತೆ ಕೇವಲಂ ಸಂತಾಪಮಂ ಮೂಳ್ಪುದುಮೆನ್ನೊಳಿಂತೆಂದೆಂ ॥

ವೃ ॥ ಜನಕಂ ಗಂಧರ್ವರಾಜಂ ತನಗೆನಿಸಿದ ವಿಖ್ಯಾತಿಯಂ ತಾಳ್ದಿ ಕಾಂತಾ
ಜನರತ್ನಂ ತಾನೆನಲ್ಸಂದತಿಚತುರೆ ಮಹಾಶ್ವೇತೆ ತಾನೆತ್ತದೆಂದುಂ ।
ವನವಾಸೈಕಾಗ್ರಚಿತ್ತಂ ಮೃಗಶಿಶುವಿನವೋಲ್ಮುಗ್ಧನಪ್ಪೀತನೆತ್ತಿಂ
ಬಿಸಿತಂ ತಾಂ ನೋಡದೇಂ ಮಾಡಿದನೊ! ವಿರಹಸಂತಾಪಮಂ ಪುಷ್ಪಚಾಪಂ ॥

ವ ॥ ಆಂತು ದುರ್ಜಶಪದಮುಂ ದುಷ್ಕರಮುಂ ದುಸಹ್ಯಮುಂ ದುರ್ಘಟಮುಮೆನಿಪೆಡೆಯೊಳೆದ್ದಗೊಟ್ಟದೊಂದವಜ್ಞೆಯಿಂದೆಸಗಿದಪಂ ವಿಷಮಾಸ್ತ್ರನದುಕಾರಣದಿಂ ॥

ವೃ ॥ ಆವುದು ಮೂಳ್ಪುದೋ! ಕರಣಮಾವುದೊ! ಪೋಪೆಡೆಯುಮಾವುದಿಲ್ಲಿಗಿ
ನ್ನಾವುದೊ! ಕೌಶಲಂ ನೆರವದಾವುದುಪಾಯಮದಾವುದೋವೊ!
ನಾವುದೊ ಬುದ್ಧಿ! ವುತ್ಸಖನ ಜೀವಮನಾಂಪಿಡಿವಂದಮಾವುದ
ನ್ನೀವೆನೆನುತ್ತಮಿಂತಿರೆ ವಿಕಲ್ಪಿಸಿದೆಂ ಪಲವುಂ ಪ್ರಕಾರಮಂ ॥ 198 ॥

ವ ॥ ಅಂತು ಚಿಂತಿಸುತ್ತಮಿರ್ದ್ದವೆನ್ನೊಳಿಂತೆಂದೆಂ ॥

ವೃ ॥ ದೆಸೆಗೆಟ್ಟೀನಾನುಮಂ ಚಿಂತಿಸುತಿರೆ ಫಲವೇಂ ಪೊಲ್ಲದಿನೊಳ್ಳಿತೇಱು
ದ್ದೆಸೆವಮಂ ಮಾಣ್ದೀಗಳೆಲ್ಲಂದದೊಳವಿನಗೆ ಮೂತೇಂ ಸುಹೃತ್ಪ್ರಾಣವಂ ರ ।
ಕ್ಷಿಸವೇಳ್ಕುಂ ಬೇಗಮಾಂ ರಕ್ಷಿಸುವ ತೆಱನುಮೆಂತೆಂದೊಡಂ ನಿಶ್ಚಯಂ ಭೂ
ವಿಸಿ ನೋಳ್ಪಂದಾ ಕೆಯಂ ತಪ್ಪುದನುಳಯೆ ಬಳಿಕ್ಕಿಲ್ಲ ಬೇಱೊಂದುಪಾಯಂ॥

ವೃ ॥ ಆಱಿಯಂ ಕೇಣದಿನೇನುವಂ ವುನಿಕುಮಾರಂ ಪೆಂಡಿರಿಂತೆಂದು ಬಾ
ಯ್ವಿಱಿಯಲ್ಕಾಣ್ಮ ವನೊಂದುವಾತನವಳತ್ತ ಲಪ್ಪುರ್ದ್ದ ಮಾತಾಡಲ ।
ಳ್ಕಱುವಿತ್ತ ಲ್ವಿಷಮೇಷು ಕೊಂದಪನಿದಂ ಕಂಡಿರ್ದ್ದ ವುತ್ತೀಗಳಾಂ
ವೆಱುತೇಂ ಭೂವಿವೆನನ್ನ ಮಿತ್ರನಸ್ತುವಂ ಕಾಯಲ್ಕೆವೇಳ್ಕುಂ ದೃಢಂ ॥ 200 ॥

ವ ॥ ಅದಱಿಂದಿನ್ನಾ ಕೆಯಲ್ಲಿಗೆಂತಾದೊಡಂ ಪೋಗೀತನವಸ್ಥಾಂತರಮಂ ಪೇಳ
ಲ್ವೋಡಿದಪ್ಪುದೆಂದು ವುತ್ತಂ ॥

ವೃ ॥ ಎನಗಂ ಕೃತ್ಯಮಿದಲ್ಲದಿರ್ದ್ದೊಡವಶ್ಯಂ ಪೋಪೆನೆಂತಾನುಮೆ
ನ್ನನಿವಂ ಕುತ್ಸಿತವೃತ್ತಿ ಕಷ್ಟವಿದು ಬೇಡೆಂದೆಂಗುವೋ! ಲಬ್ಧಚೇ ।
ತನನೆಂದಾತನ ಪಕ್ಕದಿಂದುಸಿರದಿರ್ದ್ದಾನಾಗಳೇನಾನುವೊಂ
ದು ನೆವಂಮಾಡಿ ಮಹೋತ್ಕಟತ್ವದೆ ದಿಟಂ ಬಂದೆಂ ಚಕೋರೇಕ್ಷಣೇ! ॥ 201 ॥

ಇದು ವುನ್ಮಿತ್ರನವಸ್ಥೆ! ತದ್ವಿರಹಸಂತಾಪಾನುರಾಗಕ್ಕೆ ತ
ಕ್ಕುದನಾಂ ಬಂದೆಡೆಗಂ ವೃಗಾಕ್ಷಿ! ನಿನಗಂ ಪೋಲ್ವಂತುಟಂ ನೀನೆ ಬ ।
ಲ್ಲೆ! ದಲೆಂದಿಂತಿದಕೇನನೆಂದಪಳೊ! ಕೇಳ್ವೆಂ ವಾತನೆಂದೇನುವೆ
ನ್ನದೆ ವುದ್ಭಕ್ತವುನಾಕಪಿಂಜಳಕನಾಗಳ್ನೋಡುತಿರ್ದ್ದಂ ನೃಪಾ! ॥ 202 ॥

ವೃ ॥ ಅದನಾಂ ಕೇಳ್ದಸಖಾವೃತಾರ್ಣವದೊಳಳ್ದಂತಾನುವುಂತೆಯ್ದಿಕೂ
ಟದೊಳಾದೊಂದನುರಾಗವುಂ ಪಡೆದೆನೆಂಬಂತಾನುವುಂತೆಯ್ದಿನ ।
ವ್ಮದನಂದೋಹವುನಾನೆ ವೆತ್ತೆನಿದನೆಂಬಂತಾನುವುಂತೆಯ್ದಿ ದೋ
ಹದವೆಲ್ಲಂ ನೆಱೆಬಂದು ಕೂಡಿತು ಗಡೆಂಬಂತಾನುವಾದೆಂ ನೃಪಾ ॥ 203 ॥

ವ ॥ ಅಂತತೀಂದ್ರಿಯಸೌಖ್ಯಪರವುಕೋಟಿಯನೆಯ್ದಿ ನಾಣಲಕದಿಂದಿನಿತು
ಬೇಗಂ ತಲೆಯಂ ಬಾಗಿರಲೆನೆಯುಂ ಕಪೋಲತಲವುವುಂ ಪುಟ್ಟದೊಂದಱ ಪಿಂದೊಂ
ದಡಸಿ ಗುಡುಗುಡನೆ ಸುರಿವಾನಂದಜಲಬಿಂದುಗಳೆನ್ನ ನಿರತಿಶಯಹರ್ಷವುಂ ಪ್ರಕಟಿ
ಸುತ್ತಿರಲೆನ್ನೊಳಿಂತೆಂದೆಂ ॥

ವೃ ॥ ಎನಗೆಂತಂತಿರೆ ದೈವದಿಂ ಪ್ರಿಯನೊಳಂ ಸಂತಾಪಮಂ ಮಾಡಿ ತ
ನ್ನನುಕೂಲತ್ವವನೊಂದು ಮೆಯ್ಯೊಳೆನಗೀಗಳ್ತೋಱಿದಂ ನೆಟ್ಟನಾ ।
ತನೆ ಮುಂತಾನಿನಿತೊಂದವಸ್ಥೆಗೊಳಗಾಗಲ್ಕಮನಂ ಬಿಟ್ಟು ಮು
ತ್ತಿನಗಾರ್ಬ್ಬಂಧುಗಳಾರ್ಸ್ಯಹಾಯರುಪಕಾರಂಗೆಯ್ವರಾರಿರ್ದ್ದಪರ್ ॥ 204 ॥

ಕಂ ॥ ಕನಸಿನೊಳಿಾಕಪಿಂಜಲ
ಮುನಿನದನದೊಳನೃತಭಾಷೆ ಪೊಲಮಾಡದದಲ್ಲಿಂ ।
ದೆನಗಾವುದಿಲ್ಲಿಗುತ್ತರ
ಮೆನುತುಂ ಬಗೆವುತ್ತಮಿರ್ದ್ದಿನಿರ್ಪನ್ನೆವರಂ ॥ 205 ॥

ವ । ಆಗಳೊರ್ವ್ವಳತಿಸಂಭ್ರಮಂಪರಸು ದೌವಾರಿಕೆ ಬಂದು ಪೊಡವಟ್ಟು ರಾಜಪುತ್ರಿ ನೀನಸ್ವಸ್ಥಕರೀರಿಣಿಯಾಗಿದ್ದುದಂ ಪರಿಜನದಿಂ ಕೇಳ್ದು ಮಹಾದೇವಿಯು ನ್ನಿನ್ನಲ್ಲಿಗೆ ಬಿಜಯಂಗೆಯ್ದುಪರೆಂಬುದುಂ ಕಪಿಂಜಲಂ ಕೇಳ್ದು ನೆರವಿ ಕವಿತಪ್ಪುದೆಂದಂಜಿ ಬೇಗವೆಳ್ದು ॥

ಕಂ ॥ ತಡೆದಿರಬಾರದು! ನೀನ
ಪ್ಪಡುತಂದುದು ಪೊಳ್ತು ಪೋಯ್ತು! ಪೋದಪೆನೆಂತಾ ।
ದೊಡನೆನ್ನ ಕೆಳೆಯನನುವಂ
ಪಿಡಿನ್ವುದು ಸೆಱಗೊಡ್ಡಿ ಬೇಡಿದೆಂ ವ್ಯಗನಯನೇ! ॥ 206 ॥

ವ॥ ಎಂದು ನುಡಿದು ಮಱುಮಾತಾಗುಡಲವಸರವಿಲ್ಲದಿರೆ ಮದೀಯಾಂಬಿಕೆಯು ಮುಂದೆ ಪರಿತಪ್ಪ ದೌವಾರಿಕೆಯರಿಂ ಸಹವಾಸಿಗಳಿಂ ಚಾಮರದಡಪದ ಕನ್ನಡಿಯು ಪರಿಚಾರಕಿಯರಿಂ ಕೂಡೆ ಸಂದಣಿಸಿದ ಬಾಗಿಲೊಳಿಂತಾನುಂ ನುಸುಳ್ದು ಪೋದನನ್ನೆಗ ವಿತ್ತಲ್ ॥

ಕಂ ॥ ದೀನಾಸ್ಯೆ ಜನನಿ ಬಂದೆನಿ
ತಾನುಂ ಪೊಳ್ತಿದ್ದು ಮನೆಗೆ ಪೋದಳ್ಗಡ! ತಾ ।
ನೇನೆಂದಳದೇಗೆಯ್ದಳ
ದೇನಾಯ್ತೆಂದಱಿಯೆನಾಗಳಿರ್ದೆಗೆಟ್ಟವಳಿಂ ॥ 207 ॥

ವ ॥ ಆನ್ನೆಗಮಿತ್ತಲಂಭೋಜಿನೀಜೀವಿತೇಶ್ವರನಸ್ತಂಗತನಪ್ಪುದುಂ ಪಾತಾಳಪಂ ಕಕಲುಷಿತಮುಹಾಸ್ರಳಯಜಲಧಿಗಳ್ ಮೇರೆದಪ್ಪಿ ಕವಿದು ಭುವನಂಗಳೆಲ್ಲಮನೊಳಕೆಯ್ಯಲುಕ್ಕಿದುನೆಂಬಂತಿಡಿದಡರೆಗೊಂಡು ಕಳ್ತಲೆ ಕವಿಯೆ ಕಿಂಕರ್ತವ್ಯತಾಮೂಢೆಯೆನಾಗಿ ತರಳಕೆಯನಿಂತೆಂದೆಂ ॥

ಕಂ ॥ ಮನಮುಮುಖಿಳೇಂದ್ರಿಯಂಗಳು
ವಿನಿಸಪ್ಪೊಡಮೆನ್ನವಲ್ಲವೇಗೆಯ್ವೆನೊ! ಪೇ ।
ಳೆನಗೀಗಳಾಕಪಿಂಜಲ
ಮುನಿ ನಿನ್ನಯಮುಂದೆ ನುಡಿದು ಪೋದುದನಱಿಯಾ! ॥ 208 ॥

ವ॥ ಎಂದು ತಾನಿತರಕನ್ಯಕೆಯಂತೆ ನಾಣ್ಗೆಟ್ಟು ಸ್ಮೈರಣಿಯಂ ಬಿಟ್ಟು ವಿನಯವು ನೊಕ್ಕು ಜನಾಪವಾದವಂ ವಿಕ್ಕು ನಿಜಾಚಾರವಂ ಮುಱೆದು ಶೀಲವಂ ತೊಱೆದು ಕುಲಕ್ರಮವುಮಂ ಪಾಲಿಸದೆ ರಾಗಾಂಧೆಯೆನಾಗಿ ॥

ಕಂ ॥ ಗುರುಜನವಿಯದೆಯುಂ ಮು
ನ್ನೆರೆವಾತನನೆಯ್ದಿಯೈದೆಯಪ್ಪೊಡೆ ದೋಷಂ ।
ಪರಿಭಾವಿಸಲೆನಗಿನ್ನಿದ
ಪರಿಹಾರ್ಯಮೆಸಿಪ್ಪುದೊಂದು ಮರಣಂ ಕರಣಂ ॥ 209 ॥

ವೃ ॥ ಮನೆಗೆ ಬರಲ್ಕಪಿಂಜಲಮುಹಾವುಸಿಗಂ ಮಱುವಾತನಿತ್ತೆನಿ
ಲ್ಲೆನಗವಱಿಂದವಿಂ ಪಣಮುಭಂಗವುದಾನ್ಪುದೊ! ಕೆಟ್ಟೆನತ್ತಲೋ ।
ಪನುಮಿದನಿಂತೆ ಕೇಳ್ದೊಡೆ ನಿರಾಕೆಯೊಳಕ್ಕಟ! ಸಾಗುವಂತರಿಂ
ವುಸಿವಧದೋಷವಾವತೆಱದಿಂ ಕಳೆಗುಂ ಕಮಲಾಯತೇಕ್ಷಣೇ ॥ 210 ॥

ಎಂದು ನುಡಿಯುತ್ತ ವಿಪ್ರನ್ನೆಗಂ ।

ಕಂ ॥ ಮುಳಿದು ತಿವಿರೇಭಕುಂಭ
ಸ್ಥಳವಂ ಕಿಸಿಂಹನೊತ್ತಿ ಸೀಳಲ್ಮಾಕ್ತಾ ।
ವಳಿ ನೋಗೆ ನಗೆದುನೆನೆ ಕ
ಣ್ಗೊಳಿಸಿದುವತಿವಿಮಲತರಳತಾರಾನೀಕಂ ॥ 211 ॥

ಕುಸುಮರಜದಿಂದೆ ಸೊಗಯಿಪ
ವಸಂತವನರಾಜಿಯಂತೆ ಚಂದ್ರೋದಯದಿಂ ।
ನ್ನಿಸದಪುದೆನೆ ನಸುವೆಳಗಿಂ
ವುಸಗಿದುದಿನಿಸಿಂದ್ರದಿಗ್ವಧೂವುಖಬಿಂಬಂ ॥ 212 ॥

ತದನಂತರಂ ॥

ಕಂ ॥ ಇಳೆಯಂ ನೋಡಲ್ಕೆ ರಸಾ
ತಳದಿಂ ಪೊಱವುಮಡುವ ನಾಗರಾಜನ ಪೆಡೆಯೊಳ್ ।
ಪೊಳೆವರುಣಕಿರಣಮಣಿಮಂ
ಡಳದಂದದಿನೆಸೆದುದಿಂದುವುಂಡಳವಾಗಳ್ ॥ 213 ॥

ವೃ ॥ ಪುರುಡಿಂ ಕಾಯ್ದೊದೆಯಲ್ಕೆ ರೋಹಿಣಿಯಾ ಪಾದಾಲಕ್ತಕಂ ವೆಯ್ಯೋಳಾ
ವರಿಸಿತ್ತೋ! ವಿಕಟಾಬ್ಧಿವಿದ್ರುವುವುಯೂಖಂ ತಳ್ತುದೋ! ಪೂರ್ವಭೂ ।
ಧರಸಿಂಹಂ ಪೊಯೆ ನೊಂದುದೋ! ಹರಿಣನೆಂಬಂತಾಗಳತ್ಯಂತನಂ
ದರವಾಗಿರ್ದುದು ಕಣ್ಗೆ ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ ॥ 214 ॥

ವ॥ ಅನ್ತಭಿನವೋದಯರಾಗರಂಜಿತನಪ್ಪ ರಜನಿಕರನಂ ನೋಡಲೊಡವುತ್ಯ ಜ್ವಾಲವದನಾನಲಜ್ವಾಲಾಕಲಾಪೆಯಾಗಿಯುವುಂಧಕಾರಹೃದಯೆಯೆನೆನ್ನೊಳಂತೆಂದೆಂ

ವೃ ॥ ಇತ್ತ ವಗಂತನಿತ್ತ ಮುಲಯಾನಿಲನಿತ್ತ ಮುಧುವ್ರತಾಳ ಮು
ತ್ತಿತ್ತ ಮುದೋತ್ಕಕೋಕಿಲಕದಂಬಕವೆಯ್ದೆ ವಿಜೃಂಭಿಸಿತ್ತು! ತಾ ।
ನಿತ್ತಲಡರ್ದ್ದ ಚಂದ್ರಹತಕಂ ತಲೆದೋಱುದನೋಪೊ! ಕೆಟ್ಟೆನೀ
ಚಿತ್ತಜತಾಪವಗ್ಗಲಿಸಿದಪ್ಪುದು ಮುದ್ಧೃದಯಾಂತರಾಳದೊಳ್ ॥ 215 ॥

ಉದಯಿಸಲಿಂದು ಚಂದ್ರಹತಕಂ ವಿಷಮುಜ್ಜ್ವರಿತಂಗೆ ಮತ್ತೆ ಕೆಂ
ಡದ ಮುಳಿಕೊಂಡುದಗ್ಗಲಿಸಿದೈ ಕಿಲವಂಗೆ ಹಿಮಪ್ರಪಾತವಾ ।
ದುದು! ಪರಿದಪ್ಪ ನಂಜುಪುಗುಳುಬ್ಬಿದವಂಗಸಿತಾಹಿಪಂಕಮಾ
ದುದು ದಿಟವೆಂದು ತಲ್ಲಣದಿನಾಗಳೆ ಭೋಂಕನೆ ಮೂರ್ಛೆಗೊಪ್ಪುದುಂ ॥

ವ ॥ ಆಗಳತಿಸಂಭ್ರಮಂಬೆರಸು ತರಳಕೆ ತಂದ ಚಂದನದಚರ್ಚೆಗಳಂ ಮತ್ತ
ಮನೇಕಶಿಶಿರೋಪಚಾರಂಗಳಂದುಪಚರಿಸಲದಱಿಂತಾನುಂ ಮೂರ್ಛೆಯಿಂದೆಚ್ಚತ್ತು

ಕಂ ॥ ಅಳಲಗ್ಗಳಸಲ್ಕಣ್ಣೀ
ರ್ಗ್ಗಳಗಳಿಸಿ ಕಪೋಲಯುಗಳದಿಂ ದೆರ್ದೆಯೆಡೆಗಾ ।
ಗಿಳಿತಪ್ಪಿನನೆನ್ನಂ ಪಿಡಿ
ದಳುತಿರ್ದಳಿನಿಸು ನೋಡಿದೆಂ ತರಳಕೆಯಂ ॥ 217 ॥

ವ ॥ ಅನ್ತು ನೋಳ್ಪುದುಂ ಚಂದನಪಂಕಾರ್ದ್ರಂಗಳಪ್ಪ ಕರಕಮುಲಂಗಳಂ
ಮುಗಿದು ॥

ವೃ ॥ ಇನಿತಂ ಪ್ರಾರ್ಥಿಪೆನಕ್ಕ! ನಿನ್ನನುಳ! ನೀಂ ಲಜ್ಜಾಭರಾನೇಕವಂ
ನಿನಗೀತಂದೆಯು ತಾಯೊಳಪ್ಪ ಭಯುವೇಕೇಳ್ವೋದವೂನಾಱೆನಿ ।
ನ್ನೆನಿತಂ ನೋಡುತಮಿರ್ಪೆನಿನ್ನ ಕರುಣಂ ವೇಣೊಪ್ಪೋಗು ನೀನೆಂದು ಪೇ
ಳ್ಮನದಿಂ ಮುನ್ನವೆ ಪೋಗಿ ನಿನ್ನಿಯನಂ ತಂದಪ್ಪೆನಬ್ಜಾನನೇ ॥ 218 ॥

ವ ॥ ಎಂದು ತರಳಕೆ ನುಡಿಯೆ ॥

ವೃ ॥ ಇದನೇನೆಂದಪ್ಪೆ ನಾಣೇಂ ಗುರುಗಳುಮೆನಗಿನ್ನೇಕೆ ಪೇಳ್ಮತ್ಯುಪೊಲ್ಮಾ
ಡಿದನಲ್ತೀ ಚಂದ್ರನುಂ ತಾನಿರದೆ ಕರುಣದಿಂದುಯ್ವೋಡೇಳ್ವೋಪಮಿಾದೇ ।
ಹದೊಳಂದೀಪ್ರಾಣಮುಳ್ಳನ್ನೆಗಮೆ ತಡೆಯದಾತ್ಮೇಕನಂ ಕಾಣ್ಪೆನೋ ಪು
ಣ್ಯಾದಿನೆಂದಾಂ ಜೀವ್ಪೆಗೆಟ್ಟುಂದವಳನೆ ಪಿಡಿದಲ್ಲಿಂದನೆಂತಾನುಮೆಳ್ದೆಂ॥ 219 ॥

ಅಂತೇಳಲೊಡನೆ ॥

ಕಂ ॥ ಬಿದಿ ಮತ್ತೇನನಿದಂ ತೋ
ಱುದಪನೊ! ಪಾತಕಿಗೆನುತ್ತೆ ಭಯುವುಂ ಚಿತ್ತ ।
ಕ್ಕೊದವಿಸಿ ಬಲಗಣ್ಣೆತ್ತ
ಲ್ಮೊದಲಿಕ್ಕಿತು ದುರ್ನಿಮಿತ್ತ ಸೂಚಕಮಾಗಳ್ ॥ 220 ॥

ವೃ ॥ ಅದನೇವೇಳ್ವೆನನಂತರಂ ತ್ರಿಭುವನಪ್ರಸಾದರವ್ಯುಪ್ರಣಾ
ಳದವೋಲ್ಕಣ್ಗಿಸವಿಂದುಮಂಡಲದಿನೇಂ ಗಂಗಾಪ್ರವಾಹಂಗಳು ।
ಣ್ಮಿದುವೋ! ಚಂದನವಾರಿಪೂರವಿಳದತ್ತೋ! ಕ್ಷೀರವಾರಾಶಿ ಪೊ
ಣ್ಮಿದುದೋ! ವೇಳೆನೆ ಲೋಕದೊಳ್ಕವಿದು ಪರ್ವಿತ್ತಂದು ಚಂದ್ರಾತಪಂ ॥

ವ ॥ ಅನ್ತು ಪರ್ವಿದ ಬೆಳ್ದಿಂಗಳೊಳಖಿಳಜನಮುಂ ಶ್ವೇತದ್ವೀಪದೊಳಿರ್ದ್ದಂ
ತಿರಲಾ ರಾತ್ರಿಯೊಳ್ಮದನನಿಹ್ವಲತೆಯಿಂ ಮೂರ್ಚ್ಛೆವೋದೆನ್ನನೆಚ್ಚಲಿಸಲೆಂದು ನೊಸ
ಲೊಳಕ್ಕಿದವುಂದವಪ್ಪ ಚಂದನದಣ್ಪಿನಿಂ ಪತ್ತಿ ಪಗಿಲ್ತು ಪೆಳ್ಕರಿಸಿದಳಕನಿಕರವುಂ ಮು
ನ್ನಮೆ ಕೊರಲೊಳಕ್ಕಿರ್ದ್ದಕ್ಷಾವಳಿಯುಂ ಕಿವಿಯೊಳಕ್ಕಿರ್ದ್ದ ಪಾರಿಜಾತಕಾಸುಮವುಂ
ಜರಿಯುಂ ಪದ್ಮರಾಗವಣಿಕಿರಣದಂತಿರ್ದ್ದ ರಕ್ತಾಂಶುಕವುಮೆನ್ನೊಳಳವಡೆ ಗೃಹೀ
ತವಿವಿಧಕುಸುಮತಾಂಬೂಲರಾಶಿಯುಮುಪ್ಪ ತರಳಕೆವೆರಸು ಮದೀಯಪರಿಚಿತಪ್ರಜನ
ಮುಮುಱಿಯುವಂತು ಕರುಮೂಡದಿಂದವನಿತಳಕ್ಕವತರಿಸಿ ॥

ಕಂ ॥ ಶ್ರವಣನತಪಾರಿಜಾತ
ಸ್ತವಕೋದ್ಗತ ಪರಿಮಳಕ್ಕೆ ನಂದನಭೃಂಗೀ ।
ನಿವಹಂ ಕವಿದೆನ್ನವುಸುಂ
ಕುವಿನಂ ಪೊಱವಂಟ್ಟಿಸಾಗಳತಿಸಂಭ್ರಮದಿಂ ॥ 222 ॥

ವ ॥ ಅನ್ತು ತರಳಕೆವೆರಸು ಪ್ರಮದವನಪಕ್ಷದ್ವಾರದಿಂ ಪೊಱವಂಟ್ಟು ಪೋಗು
ತ್ತಂ ಪರಿಜನವಿರಹಿತೆಯೆನೆನ್ನೊಳಿಂತೆಂದೆಂ ।

ವೃ ॥ ಸರಭಸವಾಗಲೇಱಿಸಿದ ಬಿಲ್ದೀರಸಂಗಜನೆನ್ನ ಪಕ್ಕದೊ
ಳ್ಪರುತಿರೆ ಲಜ್ಜೆ ಪಿಂದೆ ನಿಲೆ ಮುಂದೆ ಮದಿಂದ್ರಿಯವರ್ಗವಾವಗಂ ।
ಪರಿಯೆ ನಿಶಾಕರಂ ನಿಜಕರೋತ್ಕರದಿಂ ಪಿಡಿದುಯ್ಯೆ ಬೀಱಿವೇಳ್
ಪರಿಜನವೀವುದಿಂ ಮಱಿಸಿ ಪೋಪೆನಗಿಂತುಟೆ ದಲ್ ಪರಿಗ್ರಹಂ ॥ 223 ॥

ವ ॥ ಎಂದೆನ್ನೊಳ್ ಚಿಂತಿಸುತ್ತಂ ತರಳಕೆಯನಿಂತೆಂದೆಂ ॥

ಕಂ ॥ ಎಂತೀಗಳೆನ್ನನುಯ್ದಪ
ನಂತೋವದೆ ಕರಕಜಗ್ರಹಂಗೆಯ್ದು ನಿಶಾ ।
ಕಾಂತಂ ತಡೆಯದೆ ನವುಗಿದಿ
ರೇಂ ತಕ್ಕುದೆಂ! ಜೀವಿತೇಶನಂ ತರಳಾಕ್ಷೀ ॥ 224 ॥

ಎಂಬುದುಂ ತರಳಕೆ ಮುಗುಳ್ನಗೆನಗುತ್ತಮಿನ್ನನಿಂತೆಂದಳ್ ॥

ಕಂ ॥ ಎಲೆಮುಗ್ಧೆ! ಚಂದ್ರಮಂ ಕಾ
ದಲನಂ ತಂದಪನೆ ತಾನೆ ಮುನ್ನಿನ್ನಂ ಕಾ ।
ಣಲೊಡಂ ಮನ್ಮಥಶರವಿ
ಹ್ವಲಿತನವೋಲ್ಮಾಡ! ನೆಗಳುತಿರ್ದ್ದಪನಲ್ತೇ ॥ 225 ॥

* * * * * *

ವ ॥ ಅದಲ್ಲದೆಯುಂ ವಿರಹವಿಹ್ವಲತೆಯಿಂ ಚಂದನಾನುಲಿಪ್ತನಾದಂತೆ ಬೆಳಪ್ಪಿನಾವರಿಸಯುಂ ಮೂರ್ತ್ತೀಳಪ ನೆವದಿಂ ಪಳುಕಿನ ಪಾಸರೆಗಳೊಳ್ ಮೆಯ್ಯನೀಡಾಡಿಯುಂ ನೆಯ್ದಿಲ್ಗೊಳಂಗಳೊಳೋಲಾಡಿಯುಮೊಸರ್ವ ಚಂದ್ರಕಾಂತಶಿಲಾತಳಂಗಳೊಳ್ಕರಂಗಳನಿಳಿವಿಯುಂ ವಿಘಟಿತಚಕ್ರವಾಕಂಗಳಪ್ಪ ಕವುಲವನಂಗಳೊಳ್ಪಾಯ್ದುಮಿಂತು ಪಲತೆರದೆ ಕೋಟಲೆಗೊಳಂತಿರ್ದ್ದಪನಿಂತಿನ್ನುಮೊದಲಾಗಿ ತತ್ಕಾಲೋಚಿತವಚನಂಗಳಂ ನುಡಿಯುತ್ತಮಿರಲಾ ಕೆವೆರಸಾಪ್ರದೇಶವನೆಯ್ದಿ ವಪ್ಪರ್ಗಳ್ ॥

ವೃ ॥ ಮೊದಲೊಳೆ ಕೆತ್ತಿದತ್ತು ಭಲಗಣ್ಣಿನಗೇನನೊಡಚ್ಚಲಿರ್ದ್ದುದೋ
ಬಿದಿಯೆನುತುಂ ಭಯಂಪರಸು ಮುನ್ನಮೆ ಶಂಕಿಸುತಿರ್ದ್ದನೋವೊ! ಮು ।
ತ್ತಿದು ಪೆಱುತೇನೆನುತ್ತಮೆರ್ದ ಪವ್ವನೆ ಪಾಱುಲದೊಂದು ಕೇಳಲಾ
ದುದು ಪುರುಷಪ್ರಲಾಪರುದಿತಸ್ವನವಾಗಹನಾಂತರಾಳದೊಳ್ ॥ 227 ॥

ಅದೆಂತೆಂದೊಡೆ ॥

ವೃ ॥ ಉರಿದೆಂ ಬೆಂದೆನಿದೇನನಿಂತು ನೆಗಳ್ವೈ ನಿಸ್ತ್ರಿಂಶ! ಪುಷ್ಪಾಸ್ತ್ರ! ನಿ
ಷ್ಕರ! ಪೇಳ್ಪುಲ್ಲದನೇನನಾಚರಿಸಿದಳ್ಳನ್ನೊಳ್ಮಹಾಶ್ವೇತೆ ಭೀ ।
ಕರದೋಷಾಕರ ಕೂಡಿತೇ! ಬಗೆದುದುಂ ಚಂಡಾಲ! ತೆಂಗಾಳ ಪೇ
ಳ್ಪರಿದೊಂದುತ್ಸವವಾಯ್ತೆ! ಕೇಡನಱಿದೈ! ಹಾಶ್ವೇತಕೇತುವ್ರತೀ ॥ 228 ॥

ಕಂ ॥ ಶರಣಾರೊ ತಪವೆ! ಭುವನಾಂ
ತರದೊಳ್ ಕೈಕೊಳ್ವರಾರೊ ಧರ್ಮವೆ! ನಿನ್ನಂ ।
ಸುರಲೋಕವೆ ಪಾಳಾದೈ!
ಸರಸ್ವತೀದೇವಿ! ರಂಡೆಯಾದೌ ಸತ್ಯಂ ॥ 229 ॥

ವೃ ॥ ಪರಿಚಯವಿಲ್ಲ ಕಂಡಱಿಯೆಯೋ! ಸಖ ತೊಟ್ಟೆನಲಿಂತು ಬಿಟ್ಟುಪೋ
ಪರೆ! ಕಠಿನಾತ್ಮನಾದೆ ನೆರವಾರೆನಗಿರ್ದ್ದಪರೆತ್ತ ಪೋಪೆನೊ ।
ಬ್ಬರುವೆನಗಾಸೆಯಿಲ್ಲ! ದೆಸೆಪಾಳ್ಮನಗಿರ್ದ್ದಪುದಂಧನಾದೆನಾ
ರ್ಕ್ಕರಣಿನಗೆನ್ನ ಬಾಳ್ಕೆಯೆ ನಿರರ್ಥಕಮೆಂದೆನುತಂ ಪಲುಂಬುತಂ ॥ 230 ॥

ಉಸಿರದೆ ನೀನಿರಲ್ನುಡಿವೆನಾರೊಡನಾಟವನಾಡುತಿರ್ಪ್ಪೆನೀ
ಪುಸಿವುಳಿಸೇಕೆ! ಪೇಳ್ಕಳೆಯ! ನಿನ್ನಯ ಕೂರ್ಮ್ಮೆಯದೆತ್ತ ಪೋಯ್ತು ನೋ।
ಯಿಸದಿನಿಸೆಳ್ದು ನೋಡಿ ನುಡಿಯೆಂದೆನಿತುಂ ತೆಱುದಿಂ ಕಪಿಂಜಲಂ
ದೆಸೆದೆಸೆಗಂದು ಬಾಯ್ವಿಡುತವಿರ್ದ್ದುದನಾಲಿಸಿದೆಂ ಮಹೀಪತೀ ॥ 231 ॥

ಅದನಾಂ ಕೇಳ್ದೆರ್ದೆಗೆಟ್ಟು ಮೆಯ್ಮಱೆಯಾಗಿ ಸತ್ತಂತಾಗಿ ಕಣ್ಣೀರ ಪೂ
ರದಗುರ್ವಿಂ ದೆಸೆಗಾಣದಂದೆಡಪುತಂ ತಾಗುತ್ತಮೋರಂತೆ ಮೀ ।
ಲುದಱೊಳ್ಗಲ್ಲಲತಾಳಿಗಳೊಳ್ತೊಡರಲೊವ್ವಂ ನೂಂಕಿಕೊಂಡುಯ್ವ ಮಾ
ರ್ಗದೆ ಪೋದೆಂ ಬಳಕಾತನಿರ್ದ್ದೆಡೆಗೆ ಹಾಹಾಕ್ರಂದನಂಗೆಯ್ಯುತಂ ॥ 232 ॥

ವ ॥ ಅನ್ತು ಯಥಾಶಕ್ತಿತ್ವರಿತಗತಿಯಿಂ ಪೋದೆನನ್ನೆಗಂ ।

ಕಂ ॥ ಕೊಳದ ತಡಿಯಲ್ಲಿ ಸೀರ್ಪ್ಪನಿ
ಗಳ ತುಱುಗಲನುಗುಳ್ವ ಚಂದ್ರಕಾಂತದ ಶಿಲೆಯೊ ।
ಳ್ಕೊಳಿವೆಳೆದಳರ್ಗಳ ಬಳಗದ
ಕುಳವರ್ದಲರೆನಳ ಪಸೆಯ ಮೇಲೊಱಗಿರ್ದ್ದಂ ॥ 233 ॥

ಪೊಳೆವಿಂದುಗಳ್ಕೆ ಪೆಂಗುಡೆ
ವೊಳೆದುವು ಪೆನ್ನಿಂದವೆಂರ್ದೆಗೆ ಕದಿರ್ದುಱುಗಲೆನ ।
ಲ್ತೊಳಗಿದುವು ಮದನಶಿಖಿವಿ
ಹ್ವಳಹೃದಯನ್ಯಸ್ತಹಸ್ತನಖದೀಧಿತಿಗಳ್ ॥ 234 ॥

ಪದೆದಾಂ ಬರುತ್ತಮಿರೆ ಮು
ತ್ತದಕಬ್ದಮನಾಲಿಸುತ್ತಮಿರ್ದ್ದನೊ! ತನ್ನೊ ।
ಳ್ಮದನಪರಿತಾಪಮುಂ ಕೋ
ಪದೆ ಮುಳ್ಗಸೆ ಕಿಱಿದುಸುಖದೆ ಮಱೆದೊಱಗಿದನೋ ॥ 235 ॥

ಎನ್ನಿಂ ಪ್ರಿಯತರಮುಪರಜ
ನಂ ನಿನಗಾದತ್ತು ಮತ್ತಮಿರ್ಪ್ಪನೆ! ಪೇಳಾ ।
ನಿನ್ನೆಂದು ಮುನಿದತೆಱದಿಂ
ಮುನ್ನಮೆ ಪೋದತ್ತು ಪುಂಡರೀಕನ ಜೀವಂ ॥ 236 ॥

ತನಗೆ ಮದನವ್ಯಥಾಯಾ
ನಬಂಧನವನುಗಳೆಂದಿವಂ ತನ್ನಿಂ ತಾಂ ।
ತನುವಿಂದೆ ಬಿಟ್ಟು ನಿಶ್ಚೇ
ತನಸೌಖ್ಯಮನನುಭವಿಪ್ಪ ತೆಱದಿಂದಿರ್ದ್ದಂ ॥ 237 ॥

ಅದಲ್ಲದೆಯುಂ ॥

ಕಂ ॥ ಕಾಣುತ್ತೆ ಮದಾಗಮನ
ಪ್ರೀಣತಪ್ರಾಣಮನೆ ಮಚ್ಚುಗೊಟ್ಟುವೊಲಿರ್ದ್ದಂ ।
ಜಾಣಂ ಪ್ರಾಣಪ್ರಿಯರ್ಗಾ
ಪ್ರಾಣಮನೊಲಿದೀವುದೆಂಬುದೊಂದಚ್ಚರಿಯೇ ॥ 238 ॥

ವ ॥ ಮತ್ತಮನಂಗರಚಿತಚಂದನಲಲಾಟಕಾತ್ರಿಪುಂಡ್ರನುಂ ಸರಸಬಿಸಸೂತ್ರ ಯಜ್ಞೋಪವೀತನುಂ ಅಂಸಾವಸಕ್ತಬಾಲಕದಳೀದಳೋತ್ತರೀಯನುಂ ಏಕಾವಳೀ ವಿಶಾಲಾಕ್ಷಮಾಲನುಂ ಅವಿರಳಕರ್ಪೂರಪರಾಗಭಸ್ಮಪಾಂಡುರನುಂ ಆಬದ್ಧಮೃಣಾಳ ರಕ್ಷಾಪ್ರತಿಸರನುಮಾಗಿ ಮನೋಭವವ್ರತವೇಷಮುಂ ಕೈಕೊಂಡು ಮತ್ಸಮೂಗಮನುಮುಂ ತ್ರಯಮುಂ ಸಾಧಿಪಂತಿರ್ದ್ದನಂತುಮಲ್ಲದೆಯುಂ ॥

ವೃ ॥ ಸುರಿದುವು ಬಾಷ್ಪವೆಯ್ದೆ ಪೆಱಗಿಂ ಸುರಿದಪ್ಪುದು ನೆತ್ತರೆಂಬಿನಂ
ಪರೆದಿರೆ ಕೆಂಪು ಕಂತುಕರಭೇದದ ವೇದನೆಗಳ್ಕಿದಂತೆ ಕ ।
ರ್ಣ್ಣರವುಗುಳ್ದರ್ದ್ದುವಾಂ ಬಳಿಸಲಲ್ಲಡೆ ನೋಡಲಿಕಾರ್ತ್ತೆನಿಲ್ಲ ನಿ
ಷ್ಠುರೆ! ತೊಲಗೆಂದಲಂಪನೊಳಕೊಂಡಳಲಿಂ ಮುಳದೀಕ್ಷಿಪಂದದಿಂ ॥ 239 ॥

ಕಂ ॥ ನಸುದೆಱೆದಿರೆ ಬಾಯ್ದೆಱೆ ಬಂ
ದಸುವಂ ಕೊಳಲೆಂದು ಪೊಕ್ಕ ರಜನಿಕರಾಂಶು ।
ಪ್ರಸರಂ ಪೋಲ್ವಮಟ್ಟಪುದೆನೆ
ದೆಸೆಯಂ ಧವಳಿಸಿದುವೆಸೆವ ದಂತದ್ಯುತಿಗಳ್ ॥ 240 ॥

ಬಳಿಸಿ ನಿಜಕಿರಣಪಾಶದೆ
ಮುಳುಗಿಸಿ ಲೋಕಾಂತರಕ್ಕೆ ಚಂದ್ರಂ ಪಿಡಿದೇ ।
ನೆಳೆದಪನೊ! ವೇಳವೆನೆ ಕ
ಣ್ಗೊಳಿಸಿದುದು ವ್ಯೂಹಾಳನಾಳವಲಯಂ ಕೊರಲೊಳ್ ॥ 241 ॥

ಪ್ರಾಣಸಮಂ ಹೃದಯದಿಂ ಮ
ತ್ಪ್ರಾಣದೊಳೊಡಗೂಡಿ ಪೋಗಲಾಗೆಂದನ್ನಂ ।
ವೀಣೆಪವೋಲ್ ಕಯ್ಸುವನೋ
ಬಾಣಾಗ್ನಿಸ್ಫುರಿತಹೃದಯದೊಳೊಸಗಯಿಸುಗುಂ ॥ 242 ॥

ಒಸರ್ದಪುದಿದಲ್ತೆ ಚಂದನ
ರಸಮೆನೆ ವಿಂಚುಗುರ ವಿಸುಪ ನುಣ್ಬಿಳಿಗೆನಸುಂ ।
ಪಸರಿಸೆ ವರಲ್ದ ಕರವೊಂ
ದೆಸೆದುದು ಚಂದ್ರಾತಪಕ್ಕೆ ವಱೆಯೊಡ್ಡಿದವೋಲ್ ॥ 243 ॥

ಅಸು ಪೋದುದೀಗಳೆಂತೆ
ನ್ನಸಹಾಯನ ನುಳಿದೆನುತ್ತೆ ತನ್ಮಾರ್ಗವನೀ ।
ಕ್ಷಿಸುವಂತೆ ನಿರ್ಮಿರ್ದ ಕೊರಲಿಂ
ದೆಸೆದುದು ಶಶಿಕಾಂತಮಣಿಕವಂಡಲು ಕೆಲದೊಳ್ ॥ 244 ॥

ಳಿಲನೆ ಬರ್ಪೆನ್ನಂ ಕಂ
ಡಳಲಿವ್ಮಡಿಯಾಗೆ ಪತ್ತಿ ಕೆಳೆಯನ ಕೊರಲಂ ।
ಪಳವಿಸಿ ಕಪಿಂಜಲಂ ಬಾ
ಯುಳದಬ್ರಹ್ಮಣ್ಯವೆಂದು ಬಿಡೆ ಪುಯ್ಯಲ್ಗಲ್ ॥ 245 ॥

ವ ॥ ಆಗಳ್ತ್ರಿಕ್ಷಣಪಗತಜೀವಿತನಾಗಿರ್ದ್ದ ನಿಷ್ಪಾಪನೆನಿಪ ಮಹಾನುಭಾವನಂ ಮಹಾಹತಕಿಯೆನಿಪ್ಪ ವಂದಭಾಗ್ಯೆಯಂ ಭೋಂಕನೆ ಕಂಡು ಮೂರ್ಚ್ಛಿರ್ವೋಗಿ ಬೀಳ್ದು ಪಾತಾಳತಲವಿವರಮಂ ಪೊಕ್ಕಂತೆ ಮಹೋಂಧಕಾರಂ ಕವಿಯೆ ॥

ಕಂ ॥ ಏನಾದೆನೆಲ್ಲಬೀಳ್ದಿನ
ದೇನಂ ಬಾಯಳದು ಪಳವಿಸುತ್ತಿರ್ದ್ದೆನೊ! ನೇ ।
ಳೇನನೊಡಚ್ಚಿರ್ದೆನೆತ್ತಣಿ
ನಾನಾಗ್ಗೆಂದೇನುಮಱಿಯೆನಂತಾಕ್ಷಣದೊಳ್ ॥ 246 ॥

ವೃ ॥ ಪಲವುಭವಂಗಳೊಳ್ನೆರಪಿದೆನ್ನಯ ಪಾಪಮೊ! ಮೇರೆಗೆಟ್ಟ ಕೋ
ಟಲೆಗಳನುಣ್ಬೆನೆಂಬಳಲ ಸೈರಣೆಯೋ! ಕಡುಪಿಂ ತಗುಳ್ದ ನ ।
ಟ್ಟಲಿವ ಸವಾನ್ತವಕ್ರತೆಯೊ! ದೈವಿಕವೋ! ನಿನಗೇನನೆಂಬೆನ
ಗ್ಗಲಿಸಿಯೆ ನಿಂದುದೆಂತುಮನು ಪೋಗದೆ ಕಲ್ಲೆರ್ದೆಯಿಂ ಮಹೀಪತೀ ॥ 247 ॥

ಕಂ ॥ ಇನಿಸಂ ಮೂರ್ಚ್ಛೆಯಿನೆಳ್ಚ
ತ್ತನಂತರಂ ದೀರ್ಘಶೋಕವಯುಂ ಬಿಡೆ ನುಡೆ ಕಿ ।
ಚ್ಚಿನ ಕಿಡಿಯಂದದೆ ನಲನೊಳ
ಗಿನಿಸುಂ ಮಿಡುಮಿಡನೆ ಮಿಡುಕುವೆನ್ನಂ ಕಂಡೆಂ ॥ 248 ॥

ವ ॥ ಆಂತೆನ್ನ ಸಾವಿಲ್ಲದುದುಮಾತನ ಸಾವುದುದಳಲನೊದವಿಸೆ ಬಾಯು
ಳದು ಮೆಯ್ಯಱಿಯದವಳೆಂ ॥

ಕಂ ॥ ಪರಿಹರಿಸಿ ಪೋಗಲಕ್ಕುಮ
ಕರುಣಿಸದೊರ್ವ್ವಳನನಾಥೆಯಂ ಭಕ್ತೆಯನಾ ।
ತುರೆಯಂ ದುಃಖಿತೆಯಂ ಸ್ಮರ
ಪರಿಭೂತೆಯನನ್ಯಗತಿಕೆಯಂ ಬಾಲಕಿಯಂ ॥ 249 ॥

ವೃ ॥ ತರಳಕೆ ಸಕ್ಕಿಯಲ್ತೆ ಪೆಸಗೊಳ್! ಯುಗಕೋಟಿವೊಲಾದುದಾಗಳಾ
ವಿರಹದೆ ಬೆಂದಿವಳ್ಗೆ ಪಗಲೆಂಬುದನೀವುಳಸೇಕೆ! ನಿನ್ನತೊ ।
ಳ್ತರೊಳನಿತೇಕೆ ಭಕ್ತಜನವತ್ಸಲ ನಿರ್ದಯನಾದ! ನಾಥ ನೀಂ
ಕರುಣದಿನೊರ್ಮ್ಮೆಕಣ್ದೆಱೆದು ತೀರ್ಚ್ಚು ವಂದೀಯವನೋರಥಂಗಳಂ ॥

ಕಂ ॥ ಕರುಣಿಸು ದೈವಮೆ! ಪಾಲಿಸು
ಹರಾದ್ರಿ! ರಕ್ಷಿಸೆಲೆ ರಾತ್ರಿ! ಶರಣಾಗು ಸರೋ ।
ವರಮೆ! ವನದೇವಿಯರಿರಾ
ನಿರೆದೆಲ್ಲರುಮೆನಗೆ ಪುರುಷಭಿಕ್ಷೆಮನಿಕ್ಕಿಂ ॥ 251 ॥

ಆವತೆಱದಿಂದವರುಂ
ಕಾವರುಮು ಕಂಡೆನಿಲ್ಲ! ನಾಂ ಬಪ್ಪಿನಮು ।
ಕ್ಕಾವಳ ನೀನುಂ ವಲ್ಲಭ
ಜೀವಮನೇನಿನಿಸು ಪಿಡಿಯಲಾರ್ತ್ತೆಯುಮಿಲ್ಲಂ ॥ 252 ॥

ವ ॥ ಎಂದು ಮಾಣದೆ ಮತ್ತಮಿಂತನನೆತ್ತವೇಳ್ಕುಮೆಂದು ಕಪಿಂಜಲಮುಹಾ
ಮುನಿಯಡಿಯೊಳಡಿಗಡಿಗೆ ಪೊರಳ್ದುಮದವಳಲೊದವೆ ತರಳಕೆಯನಪ್ಪಿ ಪಲತೆಱದೆ
ಪಳವಿಸಿ ಪಲುಂಬಿ ಪಂಬಲಿಸಿಯುಂ ಆ ಮುನೀಂದ್ರನ ಮುಂದೈಸಿ ನಿಂದ ಚಂದನದಣ್ಪಿ
ನಿಂ ಪಗಿಲ್ತು ಪತ್ತಿ ಪೆಳ್ಕರಿಸಿ ರಂಜಿಸುವ ಕೆಂಜೆಡೆಯ ಮೊದಲಿಂ ಪೆಡಂಗುವಡೆದು ಮಿ
ಱುವ ಪೆಱೆನೊಸಲೊಳಂ ಕವಿವ ಜಡೆಯ ಹೊಂಗಳಿಂ ಸಂಗಳಿಸಿ ಪಡಂಗನೊಳಕೊಂಡ
ಗಂಡಮಂಡಲಂಗಳೊಳಂ ಕೋಮಲವ್ಯಾಳೋತ್ತಂಸಿತಂಗಳಪ್ಪಂಸದೇಕಂಗಳೊಳಂ
ಮಲಯಜರಸಲುಳಿತ ನಳನೀದಳಾವತಂಸಿತವಾದ ನೆಲ್ಗರ್ದೆಯೊಳವೋರೊವ್ಮೆ
ಕಳವಳಿಸಿ ಕರತಳದಿನೆಳವಿಯುಂ ಪುಂಡರೀಕನ ಪಕ್ಕದಿಂ ತೆರಳದೆಯುಂ ನಿಷ್ಕರುಣೆ
ಯಾದೆಯೆಂದೋರೊವ್ಮೆ ಸಂಭ್ರಮದಿನುಪಾಲಂಭನಂಮಾಡಿಯುಂ ಕೊರಲಂ ತಳ್ಕೈ
ಸಿಯುಂ ಪಿಡಿದಳಿವಿಲ್ಲದೆಡೆಯುಂಡುಗದಳ್ತು ಮೆಂದುಮನುಪದಿಷ್ಟಂಗಳುಮಂದೃಷ್ಟಪೂ
ರ್ವಂಗಳುಮಂತಿಕೃಷ್ಣಂಗಳುಮಪ್ಪ ಚಾಟುಸಹಸ್ರಂಗಳೊದವೆ ಕಣ್ಣೀರಪೂರದಿಂ ತೇಂ
ಕಾಡುತ್ತ ಮಕ್ರಿಪ್ರವಾಹಜನ್ಮಭೂಮಿಯುಂ ಪ್ರಲಾಪಶಿಖರಿಸಹಸ್ರಸಂಭೂತೆಯುಂ
ದುಸ್ಸಹದುಃಖಪ್ರಸೂತೆಯುಮಾದೆನೆಂದಾತ್ಮೀಯವೃತ್ತಾಂತಮನಾತಂಗೆ ನಿವೇದಿಸುತ್ತ
ಮಿಪ್ಪುದಂ ॥

ಕಂ ॥ ಪಿಂತಾದ ದುಸ್ಸಹಾವ
ಸ್ಥಾಂತರಸಂತತಿಯನಾಗಳನುಭವಿಸುತಮಿ ।
ಪ್ಪಂತಿರ್ದ್ದಳ ಚ್ಯೈತನ್ಯವು
ನಂತಾಗಳೆ ಹರಿಯಿಸಿತ್ತು ಮೂರ್ಚ್ಛಾವೇಗಂ ॥ 253 ॥

ವ ॥ ಅಂತು ಮೂರ್ಚ್ಛಿತೋಗಿ ಬೀೞ್ವುದುಂ ॥

ವೃ ॥ ಒದವಿದ ತಲ್ಲಣಂಬೆರಸು ಚಿಚ್ಚರದಿಂ ಪಿಡಿದೆತ್ತಿ ಕಂಕೆಯಿಂ
ನುದತಿಯ ಪಾಂಗಿದೇನೆನುತಮಾಕೆಯ ಕಣ್ಮಲರಿಂದಮುಣ್ಮಿ ಮಾ ।
ಣದೆ ಸುರಿಯುತ್ತ ಮಿರ್ಪ್ಪಜಲಧಾರೆಗಳಿಂದಮೆ ನಾಂದದೊಂದು ಮೋ
ಲುದಲಿ ಸೆಱಂಗಿನಿಂ ನಯದೆ ಬೀಸಿದನಾಮನುಜೇಂದ್ರಚಂದ್ರಮಂ ॥ 254 ॥

ವ ॥ ಅನ್ತು ಬೀಸಿ ಮೂರ್ಚ್ಛೆಯಿಂದೆಚ್ಚಱಿಸಿ ॥

ವೃ ॥ ಇನಿವಿರಿದೊಂದವಸ್ಥೆಯುಮನೆಯ್ದಿಸಿದೆಂ ಪಸಗೊಂಡ ಪಾಪಕ
ರ್ಮನೆನದಱಿಂದಮಿಾಕಥೆಯೆ ಮೂಣ್ಗಿದು! ಕೇಳಲನಹ್ಯಮೆಂಬುದೇಂ ।
ಮನಕತಿದುಸ್ಸಹಂಗಳೆನಿಸಿರ್ದ್ದ ಸುಹೈಜ್ಞನದುಃಖಸಂಕುಲಂ
ನೆನೆದೊಡವುಂತೆ ಕೇಳ್ದೊಡೆ ನವವ್ಯಥೆಯುಂ ನೆಱೆ ಮಾಡದಿರ್ಕ್ಕುಮೇ ॥

ವ ॥ ಅದಲ್ಲದೆಯುಂ ಮತ್ತಮಾಕಾಂತೆಗಿಂತೆಂದಂ ॥

ಕಂ ॥ ಎಂತಾನುಂ ನಿಲೆ ಪಿಡಿಯನು
ಸಂತತಿಯುಂ ಸ್ಮರಣಕೋಕಶಿಖಿಗಿಂಧನವ ।
ಪ್ಪಂತೆಸಗಲಾಗದಿವನೆಂ
ದಿಂತುಸುರ್ದಂ ಕರುಣದಿಂದಮುಗೆ ಕಣ್ಣಿನಿಗಳ್ ॥ 256 ॥

ವ ॥ ಎನುತ್ತಂ ನುಡಿಯೆ ನಿಡುಸುಯ್ದುಂ ಗಡುಗಡನೆ ಸುರಿವ ಕಣ್ಣನಿಗಳಂ ಮಿಡಿವುತ್ತಂ ಮತ್ತಮಿಂತೆಂದಳ್ ॥

ವೃ ॥ ಇದನೇನೆಂದಪ್ಪೆ! ಲಜ್ಜಾಕರವನರಸ! ಪೋದಾವುಹಾರಾತ್ರಿಯೊಳ್ಪೋ
ಗದ ಮುತ್ಕೃಣಂಗಳಿಂ ಪೋದಪುವೆ! ಕೊಲುತವಿರ್ಪ್ಪಂತಕಂ ನೋಡಲುಂ ಪೇ।
ಸಿದನೆನ್ನಂ ಕಪ್ಪೆಯಂ ಕಲ್ಲರ್ದಿಯವಳುಮನೆಂದಂದು ಪೇಳ್ವುವುಮೆಲ್ಲಿ
ಪ್ಪುದು! ಮತ್ತಂ ನಿಸ್ತಪಾಗ್ರೇಸರೆಯೊಡನುಡಿವಲ್ಲಿಂದಮೇಂ ಕಷ್ಟಮುಂಟೇ॥

ಕಂ ॥ ಆ ವಜ್ರಪಾತದಿಂ ಮೇ
ಲೇವೆಳ್ದಪೆನಲ್ಲಿ! ಪೇಳಲುಂ ಕೇಳಲುಮಿ ।
ನ್ನಾವಂಗಮೆನಲ್ಯಾಕ್ಷ
ರ್ಯಾವಹವೊಂದಾದುದಾಗಳದನುಸಿರ್ದಪ್ಪೆಂ ॥ 258 ॥

ಅದಲ್ಲದೆಯುಂ ॥

ಕಂ ॥ ಒದವಿದ ಕೋಟಲೆಗಳ ಬಾ
ಳ್ಮೊದಲೆನಿಸಿದ ಬಾರ್ತೆಗೆಟ್ಟ ಕೃತವುಲ್ಲಿಯದ ಮಾ ।
ಯದ ನನ್ನೀ ಪೊಡಲಂ ನಿಲಿ
ಸಿದುದಕ್ಕೇನಾನುವೊಂದು ನೆವಮುಸಿರ್ದಪ್ಪೆಂ ॥ 259 ॥

ವ ॥ ಅದೆಂತೆಂದೊಡಂತೀಯವಸ್ಥಾಂತರದೊಳೆಡೆವಿಡದಳುತ್ತಿರ್ದ್ದಡಪದವಳ ಮೊಗವುಂ ನೋಡಿ ॥

ವೃ ॥ ತರಳಕೆ! ಮಾಣದಿನ್ನೆನಸನಳ್ತಪೆ! ಸಂಗಡಿಸಿಂಧನಂಗಳಂ
ವಿರಚಿಸು! ಬೇಗಮಿಂ ಚಿತೆಯು ನೇಂತಡವೀಕ್ಷಣಮೆನ್ನ ಜೀವಿತೇ ।
ಶ್ವರನೊಡಪೋಗವೇಳ್ಕುಮೆನಗೆಂಬುದುಮೊನ್ಮೈಯೆ ಚಂದ್ರಮಂಡಲಾಂ
ತರದೊಳೆದೊರ್ವನಂದು ಪೊರಮಟ್ಟಿಳತಂದನವರ್ತ್ಯಮಾರ್ಗದಿಂ ॥ 260 ॥

ವ । ಅದೆಂತೆಂದೊಡೆ ತರಳಿತಾರಹಾರಾಲಂಕೃತನುಂ ವಿಶಾಲವಕ್ಷಸ್ಥಲನುಂ ಕೇಯೂರಕೋಟಿಲಗ್ನಪವನತರಳತರಧವಳೋತ್ತರೀಯಾಂಶುಕನುಂ ಕುಂಕುಮಪತ್ರ ಲತಾಲಾಂಛಿತಾನನದೇಶನುಮುಭಯಕರ್ಣಾಂದೋಳಿತ ಮಕರಕುಂಡಲಮಣಿಪ್ರಭಾ ರಕ್ತಗಂಡಮಂಡಲನುಂ ಅಳಕುಲನೀಲಕುಟಿಲಕುಂತಳವಿಕಟಮೌಳಿಯುಂ ಉತ್ಪಲ್ಲ ಕುಮುದಕೃತಕರ್ಣಪೂರನುಂ ದುಕೂಲಪಲ್ಲವಕಲ್ಪಿತೋಷ್ಣೀಷನುಂ ಕುಮುದಧ ವಳದೇಹನುಂ ಮಹಾಪ್ರಮಾಣಪುರುಷನುಂ ಮಹಾಪುರುಷಲಕ್ಷಣೋಪೇತನುಂ ದಿವ್ಯಾ ಕಾರನುಮೆನಿಸಿದ ಮಹಾನುಭಾವಂ ॥

ಕಂ ॥ ಧವಳಾಂಗಪ್ರಭೆ ದೆಸೆಯಂ
ಧವಳಿಸೆ ತನಿಗಂಪನಾಳ್ದ ಕಡುದಣ್ಪೆನನುಂ ।
ಕವಿತರೆ ನೀಡಿದನಾಗಳ್
ದಿವಿಜೇಭಕರಾನುಕಾರಿನಿಜಕರಯುಗವುಂ ॥ 261 ॥

ವ ॥ ಅಂತತಿಶೀತಲಸ್ಪರ್ಶಂಗಳಪ್ಪ ವೃಣಾಳಿಕೋಮಲಂಗಳಿನಿಪ ಕರಾಂಗುಳಿಗಳನೆನ್ನವುಂದುಪರತನಾದ ಪುಂಡರೀಕನನೆತ್ತಿ ಕೊಂಡು ॥

ಕಂ ॥ ಬಗೆಗೆಟ್ಟು ಸಾವ ಬಗೆಯಂ
ಮಗಳೆ! ಮಹಾಶ್ವೇತೆ! ಬಗೆಯದಿರ್ಕ್ಕುಡುವೆ ನೀಂ ।
ಮಗುಳೆಯುವಿಾತನನೆನುತಂ
ಮಗುಳ್ದುತಂಬೆರೆಸು ಗಗನಮಾರ್ಗಕ್ಕೊಗೆದಂ ॥ 262 ॥

ವ ॥ ಅಂತಾವ್ಯತಿಕರದೊಳಿನಗತಿಸಂಭ್ರಮಮುಂ ವಿಸ್ಮಯಮುಂ ಕೌತುಕಮುಮೊಗೆಯೆ ಪಿರಿದುಮಂಜೆ ಕಪಿಂಜಲನನಿದೇನೆಂದು ಬೆಸಗೊಳೆಯುಮಾತನಿನಗೆ ಮಱುಮಾತುಗುಡದುನ್ಮುಖನಾಗಿ ॥

ಕಂ ॥ ಎನಗಂ ಪೇಳದೆಯುಂ ಭೋಂ
ಕೆನಲೆನ್ನಯ ಸಖನನೆತ್ತಲುಯ್ದಪೆ! ಮಾಣೆಂ ।
ದೆನುತಂ ಕೋಪದಿನಾಪುರು
ಷನ ಪೆಱಗನೆ ತಾನುವಂತರಿಕ್ಷಕ್ಕೊಗೆದಂ ॥ 263 ॥

ವ ॥ ಅನ್ತು ಮೂವರುಂ ನೋಡೆನೋಡೆ ಚಂದ್ರಮಂಡಲಮಧ್ಯದೊಳ್ಪುಗೆ ಕಪಿಂಜಲನ ಪ್ರೋಗಿಂಗೆ ಶೋಕವಿರ್ಮ್ಮಡಿಯಾಗೆ ಕಿಂಕರ್ತವ್ಯತಾಮೂಢೆಯೆನಾಗಿ ॥

ವೃ ॥ ತರಳಕೆ ಪೇಳದೇನಱಿವೊ! ನೀನೆನಲೆನ್ನೊಲಾಗಳಳ್ಕಿಸಿಂ
ಪರವಶೆಯಾಗಿ ನಿಂದು ಮವಳೆನ್ನಯ ಸಾವಿನೊಳಾದ ಶಂಕೆಯಿಂ ।
ಕರುಣವನಪ್ಪುಕೆಯ್ದುಸಿರ್ದಳಾನಱಿಯೆಂ ಸತಿ! ಬಂದು ತಂದೆಯಂ
ತಿರೆ ಪದೆದಾಮಹಾಪುರುಷನಾಱಿಸಿದಂ ಭವದೀಯಶೋಕವಂ ॥ 264 ॥

ಕಂ ॥ ಇನ್ನರ ನುಡಿ ಕನಸಿನೊಳಂ
ನನ್ನಿಯೆನಲ್ಕೇಳ! ದಿವ್ಯಪುರುಷಂ ಪ್ರತ್ಯ ।
ಕ್ಷಂ ನಿನ್ನ ಮುಂದೆ ನುಡಿಯ
ಲ್ತನ್ನುವುದೇನೆಂಬ ಸಂದೆಗಕ್ಕೆಡೆಯುಂಟೇ ॥ 265 ॥

ವೃ ॥ ನಿನ್ನಯ ಜೀವಿತೇಶ್ವರನ ಜೀವವುನಿಂ ಪಡೆದಟ್ಟಲೆಂದೆ ಲೋ
ಕೋನ್ನತನಪ್ಪ ದಿವ್ಯಪುರುಷಂ ನಿಗತಾಸುವನುಯ್ದನಳ್ಕಱಿಂ ।
ನಿನ್ನು ಮನೀಗಳಾಱಿಸಿದನಂತಿದಱಿಂದಿದು ನನ್ನಿಯಪ್ಪುವ
ಲ್ತೆನ್ನದೆ ಮಾಣ್ಬುದರ್ಕ್ಕೆ ಪೆಱತೇಂ ಮರಣವ್ಯವಸಾಯಮೆಂಬುದಂ ॥ 266 ॥

ಕಂ ॥ ನಿನದಂ ಕಪಿಂಜಲಂ ಜೀ
ವಿಸುತಿರೆ ನಿನ್ನಲ್ಲಿಗೆಯ್ದುದಿರನದಱಿಂ ರ ।
ಹ್ಸಿನವೇಳ್ಕ್ಕಮಾವತೆಱದಿಂ
ದನುವಂ ನಿನ್ನಲ್ಲಿಗಾತನೆಯ್ತಪ್ಪಿನೆಗಂ ॥ 267 ॥

ಎಂದವಳ್ಕಾಲವೇಲೆ ಬೀಳ್ವುದುಂ ॥

ವೃ ॥ ಪಿರಿದುವಿದಿಂತುಟೆಂದು ಬಗೆದುಂ ನೆಱೆ ಬಾಳ್ಕೆಯೊಳಾದತೃಷ್ಣೆಯಂ
ಪರಿಹರಿಸಲ್ಕವೂರ್ಗವುರಿದಾಗಿಯುವುಕ್ಕೆವದಿಂದವಂತೆ ಪೆಂ ॥
ಡಿರ ಬಗೆ ಸಾಜದಿಂ ಕುಟಿಲವಾಗಿಯುವಿಂತು ದುರಾಸೆಯಿಂದವೋ
ನರಿಸದೆ ನನ್ನನಾನೆ ಬಿಡಲಾರದ ಪಾತಕಿಯೆಂ ಮಹೀಪತೀ ॥ 268 ॥

ವ । ಅನಂತರಮಾಸರೋವರದ ತೀರದೊಳೆಡೆವಿಡದೆ ಪೊರಳುತವೆ ಪರಿದವುಡಿಯೊಳ್ಪೊರೆದು ಕಣ್ಣ ನೀರಿಂ ನಾಂದು ಕದಂಪಿನೊಳ್ಪಗಿಲ್ದು ಪತ್ತಿದುತ್ತರೀಯೆಯೆಂ ಆಕ್ರಂದನದಿಂ ಗಂಟಲೊಡೆದು ದನಿ ಕಿಡೆ ತರಳಕೆವೆರಸು ಬಿಡದಳಿತ್ತವಿರಲಾಪಾಪಕಾರಿಣಿಯಪ್ಪ ಕಾಳರಾತ್ರಿಪ್ರತಿವೆಯೆನಿಸಿದ ಮಹಾರಾತ್ರಿಯಾಗಳ್ ಶೋಕೋದ್ರೇಕದಿಂಯುಗ ಸಹಸ್ರಾಯವಾನವಾಗೆ ॥

ಕಂ ॥ ಅಳುವೆನ್ನಂ ತರಳಕೆ ವೆ
ಯ್ವುಳಿಯಿಂ ಪಿಡಿದೊಯ್ಯನೆತ್ತಿ ವೆಲ್ಲನೆ ತಡಿಗಾ ।
ಗಿಳತಂದೀ ಕೊಳದೊಳ್ನೀ
ರಿಳಿಯಿಸೆ ನೀರಿಳಿದೆನಿಲ್ಲಿ ಬೆಳಗಪ್ಪಾಗಳ್ ॥ 269 ॥

ಅನ್ತು ನೀರಿಳಿದು ತದನಂತರಂ ॥

ಕಂ ॥ ಆತನ ಪರಮಪ್ರೀತಿಯಿ
ನಾತನ ವಲ್ಕಲದಿನಾತನಕ್ಷಾವಳಿಯಿಂ ।
ದಾತನ ಕವುಂಡುಲುವಿನಿಂ
ದಾತನ ವೇಷವುನೆ ತಾಳ್ದಿ ತಳೆದೆಂ ವ್ರತವುಂ ॥ 270 ॥

ವ ॥ ಅನ್ತು ತಳೆದು ಮುದೀಯವುಂದಭೂಗೃತೆಯುವುಂ ದೈವದ ದಾರುಣತೆಯುವುಂ ಕೋಕೋದ್ರೇಕವುವುಂ ದುಃಖದ ದುಗ್ಧಪತೆಯುವುಂ ಪದಾರ್ಥದನಿತ್ಯತೆಯುವುಂ ಭಾವಿಸಿ ನೋಡಿ ॥

ವೃ ॥ ಮನವುಂ ನಿಗ್ರಹಿಸುತ್ತ ನದ್ವಿಷಯದತ್ತಲ್ಪೊರ್ದ್ದದಂತಾಗೆ ಮಾ
ಡಿ ನಿರುದ್ರೇಂದ್ರಿಯೆಯಾಗಿ ಬಂಧುಜನವುಂ ತಾಯ್ತಂದೆಯಂ ಪತ್ತುವಿ ।
ಟ್ಟಿನಗಿನೊನ್ನರ್ವ್ವರುವೇವರೆಂಬ ಬಗೆಯುಂ ನಿಶ್ಚೈಸಿ ಲೋಕೈಕನಾ
ಥನ ನಾನಾಗಳನಾಥೆಯೆಂ ಶರಣಿನುತ್ತಾ ಶೈಸಿದೆಂ ಸ್ಥಾಣುವಂ ॥ 271 ॥

ಕಂ ॥ ಜನನೀಜನಕಬ್ಬಾಂಧವ
ಜನಸಹಿತತ್ತಳುತೆ ಬಂದು ನಾನಾವಿಧಸಾಂ ।
ತ್ವನವಚನಸಹಿತವುಸಿರ್ದ
ಪ್ಪರ್ಕನೆಗೊಡಗೊಂಡುಯ್ಯಲೆಂಬ ಬಗೆಯೀದನ್ನಂ ॥ 272 ॥

ಅಂತೆರವುಗೊಂಡಿದೇನಿವ
ಳೆಂತುಂ ಪೋ! ಬಾರಳೇವೆನೆನುತಂ ದುಃಖಾ ।
ಕ್ರಾಂತಂ ಪಲವುಂ ದಿನಮಿ
ರ್ದೆಂತಾನುಂ ಮನೆಗೆ ಪೋದನೆನ್ನಯ ಜನಕಂ ॥ 273 ॥

ಅನ್ತು ಪೋಗೆ ॥

ಕಂ ॥ ಜಪದಿಂ ತಪದಿಂದೊಡಲಂ
ಕ್ಷಪಿಯಿಸಿದಪೆನೆಂಬೊಡದು ಕೃತಜ್ಞತೆಗಡ! ಚಿಃ ।
ಜಪವೆಣಿಸುವ ನೆವದಿಂದಂ
ನೃಪ ತದ್ಗಣಗಣವನೀಗಳೆಣಿಸುತ್ತಿರ್ಪೆಂ ॥ 274 ॥

ವೃ ॥ ಅದುಶಕ್ಯೀಡಾದ ನಿರ್ಲಕ್ಷಣೆಯನಕಂಭಿಯಂ ನಿಷ್ಫಲೋತ್ಪನ್ನೆಯಂ ನಿ
ರ್ದಯೆಯಂ ನಿಸ್ನೇಹೆಯಂ ನಿಸ್ತ್ರಪೆಯನಸುಖೆಯಂ ನಿಂದ್ಯೆಯುಂ ನಿಷ್ಫಲಪ್ರಾ ।
ಣಿಯನಾದಂ ಕ್ರೂರೆಯಂ ಬ್ರಾಹ್ಮಣಹನನವಮಹಾಪಾಪವಂ ಗೆಯ್ದ ನಿಸ್ತಿಂ
ಕೆಯನೆನ್ನಂ ಪಾಪೆಯಂ ನೀಂ ಪೆಸಗೊಳೆ ಫಲವೇಂ ಪೇಳ್ಮಹೀಪಾಲಚಂದ್ರಾ ॥

ಎಂದು ಪೇಳ್ದ ॥

ಕಂ ॥ ಸೊಗಯಿಪ ಸಸಿ ಶರದದ ಬೆ
ಳ್ಮಿಗಿಲೊಳ್ಪೊರೆಯಿಂದವೆಯ್ದೆ ಮುಸುಕಿರ್ದ್ದೆನಲ್ ।
ಸೊಗಯಿಪ ದುಗುಲದ ಸೆಱಗಂ
ಮೊಗಕ್ಕೆ ತೆಗೆದಾಗಳರಿದೆ ಗೋಳಿಟ್ಟಳ್ತಳ್ ॥ 276 ॥

ವ ॥ ಅನ್ತಳುತ್ತಿರ್ದ್ದಳನೆಂತಾನುಂ ಸಂತೈಸಿ ॥

ಕಂ ॥ ಮೊದಲೊಳ್ಸಾರವಮಂ ಮಾ
ಡಿದುದಲ್ಲದೆ ತನ್ನ ವಾರ್ತ್ತೆಯಂ ನೆಱೆ ಸದ್ಭಾ ।
ವದಿನಾದ್ಯಂತಂ ಸತಿ ಪೇ
ಳ್ದುದಕ್ಕೆ ಹೃತಹೃದಯನಾಗಿ ಚಂದ್ರಾಪೀಡಂ ॥ 277 ॥

ವೃ ॥ ಇನಿಸೊಗೆತರ್ಪ ಕಣ್ಬನಿಗಳಿಂದಮೆ ನೇಹಮನುಂಟುಮಾಡುವಂ
ಗನೆಯರೊಳೇನಪಾರಭವಭೋಗವುನಿಂತಿರೆ ಪತ್ತು ವಿಟ್ಟು ಕಾ ।
ನನದೊಳೆ ನಟ್ಟು ನಿಂದು ಸುಕುಮಾರವೆನಿಪ್ಪ ಕರೀರವಂ ಕಲಿ
ತ್ತಿನಿರಿದೊಂದು ಘೋರತಪಕೊಡ್ಡಿದೆ ನಿನ್ನವೊಲಾರ್ಯ್ಯತಜ್ಞೆಯರ್ ॥ 278 ॥

ಕಂ ॥ ಸತ್ತವರೇಳ್ವರೆ! ಪೇಳೊಡ
ಸತ್ತರೆ ತಮ್ಮಳಲಿನಳವಿಯಂ ಮುಳ್ಗಸಲಿಂ ।
ದುತ್ತವಳಕೆಯೊಳ್ ಸಾವ
ರ್ಸ್ಸತ್ತವರವರ್ಗಾವ ಹಿತವನಾಚರಿಸುವರೋ ॥ 279 ॥

ವೃ ॥ ಅವರವರ್ಗಾದ ಕರ್ಮಫಲವಿರ್ಪೆಡೆ ಪೇಳುದಱಿಂದೆ ಮೇಲೆಕೂ
ಡುವರೊಡನತ್ತರೆಂಬೊಡದು ಕೂಡದು! ಕೇವಲಮಾತ್ಮಘಾತದೋ ।
ಪವೆ ಸೆಱತಿಲ್ಲ! ನತ್ತರೊಡನಾಯದೆ ನಿಂದೊಡೆ ಮಾಡಲಕ್ಕುಮಿ
ತ್ತವರ್ಗೆ ಜಲಾಂಜಲಿಪ್ರಭೃತಿದಾನವಿಶೇಷಮಹೋಪಕಾರಮಂ ॥ 280 ॥

ನತ್ತಳೆ ಕಾಮುದೇವನ ಪರೋಕ್ಷದೊಳಾರತಿ! ಪಾಂಡುನತ್ತೊಡಂ
ನತ್ತಳೆ ಕುಂತಿ! ಮತ್ತವುಭಿಮನ್ಯುಕುಮಾರಕನಂದು ನತ್ತೊಡೇ ।
ನುತ್ತರೆ ನತ್ತಳೇ! ನೆಗಳ್ದ ಸಿಂಧುನೃಪಾಲಕನಂದು ನತ್ತೊಡಂ
ನತ್ತಳೆ! ದುಶ್ಶಳಾವನಿತೆ? ಯಿಂತಿವು ನೀವಱಿದಂದವಲ್ಲವೇ ॥ 281 ॥

ಅನ್ತುಮಲ್ಲದೆಯುಂ ॥

ಕಂ ॥ ಆನಾಶ್ವಾಸಿಸಿದನಿತಱೊ
ಳೇ ನಾಜಕಂದ್ರಮನೆ ನಿನ್ನನಾಶ್ವಾಸಿಸಿದಂ ।
ತಾನೆಂದೊಡದೇನೆಂಬುದೊ!
ಮಾನಿನಿ ತದ್ವಿಧರ ವಚನಮುಪಿತಥವೆಂ ವಲಂ ॥ 282 ॥

ವ ॥ ಅದಱಿನನಿಂದ್ಯಮಪ್ಪ ನಿಜಚರಿತಮಂ ನಿಂದಿಸಲಾಗದೆಂದನೇಕಪುರಾಣಕಥಾ
ಪ್ರಕಥನದೊಳಂ ಬಹುಪ್ರಕಾರಸ್ವಾಂತವಚನದೊಳೆಯೆಂತಾನುಮರಸಂ ಸಂತೈಸಿ ॥

ಕಂ ॥ ವಿನಯದೊಳೆ ಮತ್ತಮಂದೊ
ಯ್ಯನೆ ನಿರ್ಘರವಾರಿಯಂ ನಿಜಾಂಜಲಿಯಿಂ ತಂ ।
ದನುವಿಸಿ ವದನಪ್ರಕ್ಷಾ
ಳನಮಂ ಮಾಡಿಸಿದನಂದು ಜೆಂದ್ರಾಪೀಡಂ ॥ 283 ॥

ಅವಧರಿಸಿ ಮಹಾಶ್ವೇತಾ
ಪ್ರವೃತ್ತಿಯಂ ಶೋಕಭಾರಮಂ ತಾಳ್ದಿದವೊಲ್ ।
ರವಿಯುಂ ದಿವಸವ್ಯಾಪಾ
ರವೆಲ್ಲಮಂ ಪತ್ತುವಿಟ್ಟಧೋಮುಖನಾದಂ ॥ 284 ॥

ವ ॥ ಅನಂತರಂ ರವಿಬಿಂಬಮಪರಾಂಭೋಧಿಗೆ ವಿಲಂಬಿಸುವುದುಂ ॥

ಕಂ ॥ ಜಳಜಭವಾಂಡಂ ಜಂಬೂ
ಫಳರಸದಿಂ ತೀವಿತೆಂಬಿನಂ ಜಗವುಂ ಕೋ ।
ಕಿಳನಯನರುಚಿರರುಚಿ ಕ
ಣ್ಗೊಳಿಸಿರೆ ಪರ್ವಿದುದು ಸಾಂದ್ರಸಂಧ್ಯಾರಾಗಂ ॥ 285 ॥

ಆ ಸಂಧ್ಯಾಸಮಯದೊಳ್ ॥

ಕಂ ॥ ಬಳಿಕ ಪದಮಂ ಕವಂಡಲು
ಜಳದಿಂದಂ ಕರ್ಚಿ ತೀರ್ಚಿ ಸಂಧ್ಯಾನಿಯಮಂ ।
ಗಳನೆಯ್ದಿ ಭಸ್ಮಕಯ್ಯಾ
ತಳದೊಳ್ಪಿಸುಸುಯ್ದು ಮೆಯ್ಯನಿಕ್ಕಿದಳಾಗಳ್ ॥ 286 ॥

ವ ॥ ಇತ್ತ ಕೃತಸಂಧ್ಯಾವಂದನಂ ನರೇಂದ್ರನಾತ್ಮೀಯಪ್ರಕಲ್ಪಿತಲತಾಪಲ್ಲವ ಶಯನತಲದೊಳ್ಕುಳ್ಳಿರ್ದ್ದ ಮನೋಭವವಿಜೃಂಭಿತಂಗಳಂ ಮನದೊಳ್ಬಿಸುತ್ತಂ ವಿಸ್ಮಯಾಕ್ಷಿಪ್ತಚಿತ್ತನಿಂತೆಂದಂ ॥

ಕಂ ॥ ತರಳಕೆಯೆಂಬುನ್ಮಾಯಾ
ಪರಿಚಾರಿಕೆಯೆತ್ತವೋದಳೆಲ್ಲಿರ್ದ್ದಪಳೆಂ ।
ದರಸಂ ಪೆಸಗೊಳ್ವಮಾ
ದರದೆ ಮಹಾಶ್ವೇತೆ ಪೇಳಲುದ್ಯತೆಯಾದಳ್ ॥ 287 ॥

ಅದೆಂತೆನೆ ॥

ಕಂ ॥ ವೊದಲೊಳ್ನಿನಗಾಂ ಪೇಳ್ದಾವೃ
ತದಿನುದಯಿಸಿದಪ್ಸರೋಂಗನಾನ್ವಯದೊಳ್ಪ ।
ಟ್ಟಿದಳಲ್ಲಿ ವಂದನವಂದವತಿ
ಮದಿರೇಕ್ಷಣೆ ಮದಿರೆಯೆಂಬ ಕನ್ಯಾರತ್ನಂ ॥ 288 ॥

ಆ ಕನ್ನೆಯು ಕೈವಿಡಿದಂ
ಸ್ವೀಕೃತಗಂಧರ್ವರಾಜ್ಯಮಹಿಮೋದಯನ ।
ಪ್ರಾಕೃತನಿಜವಿಭವಕೃತಾ
ಭೀರ್ಕೃತಬುಧಜನಮನೋರಥಂ ಚಿತ್ರರಥಂ ॥ 289 ॥

ಆ ವಿಭುಗಂತಃಪುರಕಾಂ
ತಾವಿಭವಮದೆಂತುಮುಳ್ಕೊಡಂ ತನಗೆ ವಶಾ ।
ದೇವಿವೆಸರೆಸೆಯೆ ಮದಿರಾ
ದೇವಿಯೆ ಪಟ್ಟಕ್ಕೆ ತಾನೆ ವೊದಲೆನಿಸಿರ್ದ್ದಳ್ ॥ 290 ॥

ಆ ದಂಪತಿಗಧಿಕಪ್ರೇ
ಮೋದಯಮೊದವಲ್ಕೆ ಪುಟ್ಟಿದಳ್ಬುವನಜನಾ ।
ಹ್ಲಾದಂ ಜನಿಯಿಸುವಿನೆಗಂ
ಕಾದಂಬರಿಯೆಂಬ ಪೆಸರ ಕನ್ಯಾರತ್ನಂ ॥ 291 ॥

ಒಡನುಂಡೊಡನಿರ್ದ್ದೊಡವಳೆ
ದೊಡನಾಡಿಗಳಾಗಿ ನೃತ್ಯಗೀತಂ ವೊದಲಾ ।
ಗೊಡನೊಡನೆ ಕಲ್ತು ಕಲೆಗಳ
ನೆಡೆವಿಡದಿರ್ವ್ವರ್ಗ್ಗವೂಯ್ತು ಪರಮಪ್ರೇಮಂ ॥ 292 ॥

ವ ॥ ಅನಂತರಂ ಶೈಶವಮಂ ಪತ್ತುವಿಟ್ಟಪ್ಪುದುಮಾಕಾದಂಬರೀದೇವಿಯುಂ ಮದೀಯಹತವೃತ್ತಾಂತಮಂ ಕೇಳ್ದತ್ಯಂತಶೋಕಾಕ್ರಾಂತೆಯಾಗಿ ॥

ವೃ ॥ ಇರಲಿಂತಪ್ಪೊಂದು ಶೋಕಾಕುಲತೆಯೊಳೆ ಮಹಾಶ್ವೇತೆ ಮತ್ತೊರ್ವನಂ ತಾಂ
ನೆರೆದೇನಾನಿಂತು ಕನ್ಯಾವ್ರತದೊಳೆ ಕಳೆವೆಂ ಕಾಲಮಂ ತಂದೆಯಿಂ ತಾ ।
ನಿರದಾವಂಗೆನ್ನನೀಯಲ್ಪಗೆದು ಮನದೊಳಂತುಜ್ಜಗಂಗೆಯೆರ್ದಿಡಂ ಚಿಕೆ
ಚ್ಚರಮಿನ್ನೀಪ್ರಾಣಮಂ ತಾಂ ಬಿಡದಿರೆನೆನುತಂ ನಿಶ್ಚಯಂಗೆಯ್ದಳಾಗಳ್ ॥

ವ ॥ ಅನ್ತು ಪಾರೂಢಯೌವನೆಯಪ್ಪ ಮಗಳ ನಿಶ್ಚಯಮಂ ಮದಿರಾಮಹಾದೇ
ವಿಯುಮರಸು ಚಿತ್ರರಥನುಂ ಕರ್ಣಪರಂಪರೆಯಿಂ ಪರಿಜನದತ್ತಣಿಂ ಕೇಳ್ದು ಪಿರಿದು
ಮಳಲ್ದು ಕ್ಷೀರೋದನೆಂಬ ಕಂಚುಕಿಯಂ ಕರೆದೆನ್ನಲ್ಲಿಗಟ್ಟಿದೊಡಾತಂ ಬಂದು ॥

ಕಂ ॥ ತನ್ನ ಮಹಾವ್ಯತಿಕರದೊ
ಳ್ಮನ್ನಿವೆ ಬೆಂದವರ್ಗೆ ಮತ್ತೆ ಕಾದಂಬರಿಯಿಂ ।
ದಂ ನೋನ್ಪು ಬಂದುದದಱಿಂ
ದಿನ್ನನುವಿಸೆ ನೀನೆ ಕರಣಮೂವ್ಯತಿಕರದೊಳ್ ॥ 294 ॥

ವ ॥ ಎಂದು ಜನನೀಜನಕರಟ್ಟಿದರೆಂದು ನುಡಿಯೆ ॥

ವೃ ॥ ಗುರುಗಳ್ತಾವೇನನೊಂದಂ ಬೆಸಸಿದರದನೇ ಕೊಳ್ವುದಿನ್ನೆನ್ನ ಜೀವಂ
ಪರಸಾನಿಂತಿಪ್ಪುದಂ ನೀಂ ಬಯಸುವ ಬಗೆಯಿಂದಿರ್ಪೊಡೆಂದಿಂತು ಕಾದಂ ।
ಬರಿಗಾದಂ ಬುದ್ಧಿವೇಳ್ಪಟ್ಟೆದನನವಧಿಕಪ್ರೇಮದಿಂ ಸೌವಿದಲ್ಲಂ
ಪರನತ್ತಲ್ಪೋಪಳಂತಾಗಳೆ ತರಳಿಕೆಯುಂ ನೀನ್ವುವೆಳ್ತಂದಿರೀಗಳ್ ॥ 295 ॥

ವ ॥ ಎಂದು ಪೇಳ್ದಳನ್ನೆಗಮಿತ್ತ ಲಾಂಛನಚ್ಛಲದಿಂ ಶೋಕಾನಲಪರ್ಯಟಮಪ್ಪ
ಮಹಾಶ್ವೇತಾಹೃದಯಮಂ ವಿಡಂಬಿಸುವಂತೆಯುಂ ಮುನಿಕುಮಾರವಧಮಹಾಪಾತ
ಕಮಂ ತಾಳ್ದಂತೆಯುಮಾಗಿ ನಿಖಿಲಲೋಕನಿದ್ರಾಮಂಗಲಕಲಶದಂತೆ ಕಾಮುಂದಿನೀ
ಬಾಂಧವಂ ಗಗನಾಂಗಣದೊಳೆಸೆಯೆ ಗುಪ್ತೆಯಾದ ಮಹಾಶ್ವೇತೆಯಂ ನೋಡಿ ಚಂದ್ರಾ
ಪೀಡಂ ಪಲ್ಲವಕಯನತಲದೊಳ್ ನೆಯ್ಯನಿಕ್ಕಿ ಪೀಡಂ ನೆನೆದು ॥

* * * * * *

ಕಂ ॥ ಈಯವಸರದೊಳ್ವೈಶಂ
ಪಾಯನನಂ ಪತ್ರಲೇಖೆಯುಂ ಭೂಪರುಮಾ ।
ನೀಯಂದದಿನಗಲಲ್ಕೆಸಿ
ತಾಯಸಮಂ ಪಡುವರೆಂದು ಚಿಂತಿಸುತಿರ್ದ್ದಂ ॥ 297 ॥

ವ ॥ ಅಂತು ಚಿಂತಿಸುತಿರ್ದ್ದಿರುಳಂ ಕಳೆದು ಬೆಳಗಪ್ಪುದುಂ ಕೃತಪ್ರಾಭಾತಿಕನಿ
ಯಮನಾಗೆ ಮಹಾಶ್ವೇತೆಯುಮುಳುಮರ್ಷಣನಿಯಮಜಪಂಗಳಂ ಮಾಡುತಿರ್ದ್ದಳನ್ನೆ
ಗಮಿತ್ತ ಷೋಡಶವರ್ಷವಯಸ್ಕನುಂ ಉದಾತ್ತಾಕಾರನುಂ ವಿಭಕ್ತಮಧ್ಯಾಕಾರನುಂ
ವಿಮಲವಕ್ಷಸ್ಥಲನುಂ ದೀರ್ಘಾಯತಬಾಹುಯುಗಳನುಂ ಪರ್ಯುಷಿತಚಂದನಾಂಗರಾಗ
ಧೂಸರೋರುದಂಡನುಂ ಕುಂಕುಮಾಂಗರಾಗಪಿಂಜರರೂಪನುಂ ಚಾಮೀಕರಶೃಂಖಲಾ

ಕಲಾಪನುಂ ನಿಬಿಡನಿಯುಮಿತಕಕ್ಷಬಂಧಾತಿರಿಕ್ತಪ್ರೇಂಖದ್ದ್ರಕೂಲಪಲ್ಲವನುಂ ವಾಮ ಪ್ರಕೋಷ್ಠಡೋಲಾಯಮಾನವಾಣಿಕ್ಯವಲಯನುಂ ಕರ್ಣಾಭರಣವಿಕೀರ್ಯಮಾಣ ಕಿರಣೇಂದ್ರಚಾಪಪ್ರಭಾಜಾಲನುಂ ಅನವರತತಾಂಬೂಲಬದ್ಧರಾಗಾನುಕಾರಿಬಂಧುರಾಧರ ನುಂ ದೀರ್ಘದಳಲೋಚನನುಂ ಕನಕಪಟ್ಟಗ್ರಥಿತಪೃಥುಲಲಲಾಟಪಟ್ಟನುಮುಳಕುಲ ನೀಲಕುಟಿಲಕುಂತಳನುಂ ಅಗ್ರಾವ್ಯಾಕೃತಿಯುಂ ರಾಜಕುಲಸೇವನಾತಿಚತುರನುಮಪ್ಪ ಕೇಯೂರನೆಂಬ ಗಂಧರ್ವಕುಮಾರಂ ಪರಸಂ ತರಳಕೆ ಮಹಾಶ್ವೇತೆಯಲ್ಲಿಗೆ ಬಂದಿ ರ್ವರುಂ ದೂರಾವನತೋತ್ತಮಾಂಗರಾಗಿ ಪೊಡವಟ್ಟು ಕುಳ್ಳಿರ್ದರ್ ॥

ಕಂ ॥ ನಾಡಾಡಿಯಲ್ತು! ರೂಪಿನ
ಗಾಡಿಯಿದೆಲ್ಲಿರ್ದ್ದು ಬಂದಪೆನುತಂ ಚಂದ್ರಾ ।
ಪೀಡನನತಿವಿಸ್ಮಯದಿಂ
ನೀಡುಂ ನೋಡುತ್ತಮಿರ್ದ್ದನಾ ಕೇಯೂರಂ ॥ 298 ॥

ವ ॥ ಆಗಳ್ಮಹಾಶ್ವೇತೆಯುಂ ನಿರ್ವರ್ತಿತಾನುಷ್ಠಿತಯಾಗಿ ತರಳಕೆಯ ಮೊಗ ಮುಂ ನೋಡಿ ॥

ಕಂ ॥ ನುಡಿದಾನಪ್ಪಿದುದನೋಡಂ
ಬಡಿಸಿದೊ! ಮುತ್ಪಲಿಯನೆಂದೊಡೀತಂಗೀಗಳ್ ।
ನುಡಿ ಪೋಗು! ನೀನೆನುತ್ತೆ
ನ್ನೊಡನಪ್ಪಿದಳಿಲ್ತೆ ತನ್ನ ನೀಣಾಧರನಂ ॥ 299 ॥

ವ ॥ ಎಂಬುದುಮಾತನಂ ಪೆಸಗೊಳೆ ॥

ವೃ ॥ ಮನಮಂ ನೋಡಲಿದೇಕೆ ತವ್ಮ ಮನಮಂ ತಾಂನೋಡಲೇನಾಂ ತಪ್ಪೋ
ವನದೊಳ್ಕೋಟಲೆಗೊಂಡು ದುಃಖದೆ ತಪಂಗೆಯ್ಯುತ್ತಿರಲ್ಮತ್ತೆಯುಂ ।
ಮನದೊಳ್ತಾಂ ಸುಖವಿಂದವಿರ್ವ್ವಳವಳಿಂಬುದ್ವೇಗದಿಂದಕ್ಕನಿಂ
ತಿನಿತೊಂದಂ ನುಡಿದಪ್ಪಿದಳ್ಪರಿಭವುಂತೇನಟ್ಟಲೇಂ ತಕ್ಕುದೋ ॥ 300 ॥

ವ ॥ ಎಂದಿನ್ನುವೊದಲಾಗಿ ಕಾದಂಬರಿ ನುಡಿದ ನುಡಿಗಳಂ ಕೇಯೂರಕಂ ಪಿನ್ನ ವಿಸಲದಂ ಕೇಳ್ದು ತನ್ನೊಳೆ ತಾನೆ ಭಾವಿಸಿ ॥

ಕಂ ॥ ಬಂದಾನೆ ಪೇಳ್ದಪೆಂ ನಯ
ದಿಂದಲ್ಲಿಗೆ ತಕ್ಕುದೆಲ್ಲಮುಂ ಮುನ್ನೀಂ ಪೋ ।
ಗೆಂದು ಕಳುಪಲ್ಕೆ ಪೋದಂ
ಮುಂದಾ ಕೇಯೂರಕಂ ಸುವಿಲುಳಿತಹಾರಂ ॥ 301 ॥

ವ ॥ ಅನ್ತಾತಂ ಪೋಗೆ ಚಂದ್ರಾಪೀಡನನಿಂತೆಂದಳ್ ॥

ವೃ ॥ ಇದೆ ನಾರಿಪ್ಪುದು ರಾಜಧಾನಿ! ಪರಿದುಂ ಚಿತ್ರಾವಹಂ ಬಂದು ನೋ
ಳ್ಪುದು! ನೀನೆನ್ನೊಡನಂದು ಮತ್ಸಖಿಗವುಂತುಂ ಬುದ್ಧಿವೇಳಲ್ಕೆವೇ ।
ಳ್ಪುದು! ಮತ್ಪ್ರಾಣನವಾನೆಯಾಕೆ ನಿಜದಿಂದಸ್ವಸ್ಥೆ ಗಂಧರ್ವಲೋ
ಕದೊಳಿಂದಕ್ಕೆ ಭವದ್ವಿಲೋಕನಸುಖಂ ಭೂಪಾಲವಿದ್ಯಾಧರಾ ॥ 302 ॥

ವ ॥ ಅದಲ್ಲದೆಯುಂ ಮದೀಯಪ್ರಾರ್ಥನೆಯುಂ ನಿರರ್ಥಕಂಮಾಡದಿಂದು ಬಂ
ದಲ್ಲಿ ವಿಶ್ರಮಿಸಿ ನಾಳೆ ಬೀಡಿಂಗೆ ಬಿಜಯಂಗೆಯ್ವುದೆಂದು ಮತ್ತಮಿಂತೆಂದಳ್ ॥

ಕಂ ॥ ನಿನ್ನನಕಾರಣಬಾಂಧವ
ನಂ ನೋಡಿಯೆ ಶೋಕವಾಱ್ದುದು ಸುಜನರ ಲೋ ।
ಕೋನ್ನತರ ಪರಹಿತರ ನಿ
ವ್ಮನ್ನರ ಬರವಾರ್ಗ್ಗೆ ಸುಖಮನುತ್ಪಾದಿಸದೋ ॥ 303 ॥

ವ ॥ ಎಂದು ನುಡಿದೊಡೆ ॥

ಕಂ ॥ ಇನಿತಂ ಪ್ರಾರ್ಥಿಸಲೇಂ ನೀ
ನಿನಿತೆಸಗುವುದೆಂದು ಪೆಸಸುವುದು ಸಾಲ್ಗಂ ನೀ ।
ಮೆನಗೆಂದು ವಿನಯದೊಳ್ಕಾ
ಮಿನಿ ಪಿಂತನೆ ನಡೆದನಂದು ಚಂದ್ರಾಪೀಡಂ ॥ 304 ॥

ವ ॥ ಅನ್ತು ಬರುತ್ತಂ ಹೇಮಕೂಟಮನೆಯ್ದಿ ವಿಚಿತ್ರವೆನಿಸಿದ ಚಿತ್ರರಥರಾಜ
ಧಾನಿಯಂ ಪೊಕ್ಕು ಸಪ್ತಕಕ್ಷ್ಯಾಂತರಂಗಳ ಕಾಂಚನಮಯತೋರಣಂಗಳಂ ನುಸುಳ್ದು
ಕನ್ಯಾಂತಃಪುರದ್ವಾರಮನೆಯ್ದಿ ವಪರ್ಯ್ಯಂಗಳ್ ॥

ಕಂ ॥ ಪರಿತಂದು ಮಹಾಶ್ವೇತಾ
ನಿರೀಕ್ಷಣೋತ್ಸುಕದೊಳೆಮಗೆ ತಮಗೆನುತಂ ತ ।
ಚ್ಚರಣಸರಸಿರುಹಯುಗದೊ
ಳ್ಪರಭಸಮಿದಿರೆಱಗಿದರ್ಪ್ರತೀಹಾರಕಿಯರ್ ॥ 305 ॥

ವ॥ ಅಗಳರಸನುಂ ತತ್ಪ್ರತೀಹಾರಿಕಾಜನೋಪದಿಶ್ಯಮಾನಮಾರ್ಗನಾಗಿ ಪೊಕ್ಕು
ನೋಳ್ಪನ್ನೆಗಮಲ್ಲಿ ॥

ವೃ ॥ ಇದು ನಾರೀಮಯಮಪ್ಪ ಲೋಕಮಿದು ಜೀಱೊಂದಂಗನಾದ್ವೀಪಮಿಂ
ತಿದು ನಿಷ್ಪೂರುಷಜೀವಲೋಕಮಿದು ಸರ್ಗಕ್ಕೆಂದು ಪದ್ಮೋದ್ಭವಂ ।
ಸುದತೀರತ್ನಸಮೂಹಮಂ ಪದಱನಿಂ ಬೈಚಿಟ್ಟ ಭಂಡಾರಮಾ
ಪ್ಪುದೆನಲ್ಕುಂದಣಿಸಿರ್ದ್ದ ಸುಂದರಿಯರಂ ಕಂಡಂ ನರೇಂದ್ರಾತ್ಮಜಂ ॥ 306 ॥

ಕಂ ॥ ಭುವನಾಂತರವಂ ಸಿಂಪಿನು
ವವೊಲಾಕಾವನಿತೆಯರುಮನೋಲಾಡಿಸುವಂ ।
ತೆವೊಲೆಸೆದರಂಗನೆಯರು
ಣ್ಮೆವ ನಿಜಲಾವಣ್ಯರಸದ ಪೆವ್ವೆರ್ಬನಲಿಂದಂ ॥ 307 ॥

ವ ॥ ಅನ್ತು ವದನದ್ಯುತಿಯಿನಿಂದುಬಿಂಬವೃಷ್ಟಿ ಸುರಿವಂತೆಯುಂ ಅಪಾಂಗವಿ
ಕ್ಷೇಪಂಗಳಿಂ ಕುವಲಯವನವಿಕಾಸವಾದಂತೆಯುಂ ಕಪೋಲತಲಂಗಳ ಬೆಳಗುಗಳಿಂ
ಮಣಿದರ್ಪಣಂಗಳೊಳ್ಪಳಿವಂತೆಯುಂ ಭೂಲತಾವಿಭ್ರಮಂಗಳಿಂ ಕಾಮುಕಾರ್ಮುಕವಿ
ಸರಂ ಪಸರಿಸಿದಂತೆಯುಂ ಕೇಕಕಲಾಪಾಂಧಕಾರದಿಂ ಕಾರಿರುಳ್ಕವಿದಂತೆಯುಂ ಸುರ
ಭಿನಿಶ್ವಾಸಂಗಳಿಂ ಮಲಯಮಾರುತಂ ತೀಡಿದಂತೆಯುಂ ಮುಗುಳ್ನಗೆಯ ಬೆಳಗುಗಳಿಂ
ವಸಂತಸಮಯಮಾದಂತೆಯುಂ ಕರತಲರಾಗದಿಂ ಕೆಂದಾವರೆಗಳರ್ದಂತೆಯುಂ ಕರ
ನಖಕಿರಣಂಗಳಿಂ ಕುಸುಮಾಯುಧಕರಕತಂಗಳ್ ಸುರಿವಂತೆಯುಮಾದುದಂತುಮ
ಲ್ಲದೆಯುಂ ॥

ಕಂ ॥ ಮಣಿಮಾಲಾರಂಜಿತಭೂ
ಷಣರುಚಿ ರುಚಿರೇಂದ್ರಚಾಪಲತೆಗಳ್ಗಗನಾಂ ।
ಗಣದೊಳ್ಪಳಿಯಲ್ಸುತ್ತುಂ
ಕಾಣಿನ್ನುವು ನಲಿದಾಡಿ ಗೃಹವನಯೂರನಿಕಾಯಂ ॥ 308 ॥

ವೃ ॥ ಕಡೆಗಣ್ಕೂರ್ಣವತಂಸಂ ಕರತಲರುಚಿ ಲೀಲಾರವಿಂದಂ ನಖಂ ಕ
ನ್ನಡಿ ಪಾದಾಂಭೋಜರಾಗಂ ಮಿಸುಪಲತಗೆ ಮಂದಸ್ಮಿತಂ ಚಂದನಂ ಮೆ :
ಲ್ನುಡಿ ವೀಣಾನಾದವಂಗಪ್ರಭೆ ಪೊಸದುಗುಲಂ ಪಕ್ವಬಿಂಬೋಷ್ಠರಾಗಂ
ಕಡುಚೆಲ್ವಾದಂಗರಾಗಂ ಚರಣನಖಮಯೂಖಾಳಿ ಪುಷ್ಪೋಪಹಾರಂ ॥ 309 ॥

ವೃ ॥ ಲಲನೆಯರ್ಗಂಗರಾಗವುದು ದುರ್ವಹಮಂಕುಕಭಾರವಂಗಸಂ
ಚಲತೆಗೆ ಕಾರಣಂ ಕುಸುಮಮಾಲಿಕೆಯುಂ ಪೊಱೆ ಪುಷ್ಪದಾಮಮೇ ।
ಖಲೆ ನಡೆಗಡ್ಡಿ ಕಣ್ಮಲರ್ಗೆ ಕಾಡಿಗೆ ಬಿಣ್ಣಿತು ಪಾದಪಂಕಜ
ಕ್ಕಲತಗೆ ಭಾರಮೆಂಬೊಡಱಿಯೆಂ ಪೊಗಳಲ್ಕುಮಾರವೃತ್ತಿಯಂ ॥ 310

* * * * * *

ಕಂ ॥ ಕಲಲೆಂದತಿ ಕೌತುಕದಿಂ
ದಲರ್ಗಟ್ಟುವೆವೆಂಬದೊಂದು ಸಾಹಸಮಂತಿ ।
ಕ್ಕಲರಾಯ್ವ ಪದದೊಳಿರಡನೆ
ಯಲರ್ಗಂ ಕೈಸೀಡಿ ಸೇದೆವಡುವರ್ಸ್ಸತಿಯರ್ ॥ 312

ವ ॥ ಮತ್ತಮಂತ್ತಿತ್ತ ಪುಗುತರ್ಪಲ್ಲಿ ಲವಲಿಕೆಯುಂ ಕೇತಕೀಧೂಳಿಯೊಳಾಲ
ವಾಲಮುಂ ಸಮಿಯಲುಂ ಸಾಗರಿಕೆಯುಂ ಗಂಧೋದಕಕನಕದೀರ್ಘಿಕೆಗಳೊಳ್ ರನ್ನದ
ಮಳಲ್ಗಳಿಂ ಸುರಿಯಲುಂ ವೃಣಾಳಿಕೆಯುಂ ಕೃತ್ರಿಮಕಮಲಿನಿಯೊಳಾಡುವ ಜಕ್ಕವಕ್ಕಿ
ಗಳವೀಲೆ ಕುಂಕುಮರಜವುಂ ಕೆದಱಲುಂ ಮುಕರಿಕೆಯುಂ ಗಂಧಪಾತ್ರಂಗಳೊಳ್
ಕರ್ಪೂರರಸವುಱಿ ವಾಸಿಸಲುಂ ರಜನಿಕೆಯುಂ ತವಮಲವೀಧಿಯನವುರ್ದ ಕತ್ತಲೆ
ಯೊಳ್ ಮಾಣಿಕದ ಸೊಡರ್ಗಳಿಂ ಬೆಳಗಲುಂ ಕುಮುದಿಕೆಯುಂ ಗಿಳಿ ಪಾಯುದಂತು
ದಾಡಿವಿಘಾಫಲಂಗಳವೀಲೆ ಮುತ್ತಿನ ಝಂಪಾಳಂಗಳಿಂ ಕವಿಯಲುಂ ನಿಪುಣಿಕೆಯುಂ

ಮಣಿಸ್ತಂಭಂಗಳೊಳ್ ರಂಜಿಸುವ ಸಾಲಭಂಜಿಕೆಯ ಕಪೋಲಂಗಳೊಳ್ ಕುಂಕುಮರ
ಸದಿಂ ಪತ್ರಭಂಗಂಗಳಂ ಚಿತ್ರಿಸಲುಂ ಉತ್ಪಲಿಕೆಯಂ ಕದಳೀಗೃಹವಾರಕತವೇದಿಯಂ
ಕಮಲದಳಂಗಳಂ ತೊಡೆಯಲುಂ ಕೇಸರಿಕೆಯುಂ ವಕುಳಕುಸುಮಮಾಲಾಮಂಟಪಂ
ಗಳಂ ಮದಿರಾರಸದಿಂ ಸಿಂಪಿಸಲುಂ ಮೂಲತಿಕೆಯುಂ ಕಾಮದೇವಗೃಹದೋಲಗಶಾ
ಲೆಯುಂ ಸಿಂದೂರರೇಣುಗಳಂ ಬೆಳರ್ಗೆಂಪಂ ಮಾಡಲುಂ ನಳಿನಿಕೆಯುಂ ಭವನಕಲಹಂ
ಸಂಗಳ್ಗೆ ಕಮಲಮಧುರಸವನೆಱೆಯಲುಂ ಕದಳಿಕೆಯುಂ ಧಾರಾಗೃಹಕ್ಕೆ ಗೃಹವಾ
ಯೂರಂಗಳನುಯ್ಯಲುಂ ಕಮಲಿನಿಯುಂ ಜಕ್ಕವಕ್ಕಿಗಳಂ ವೃಣಾಳಕ್ಷೀರರಸವುಂ
ಕುಡಿಯಿಸಲುಂ ಚೂತಲತಿಕೆಯುಂ ಪಂಜರದ ಗಂಡುಗೋಗಿಲೆಗಳ್ಗೆ ಚೂತಾಂಕುರದ
ಕುಟುಕನಿಕ್ಕಲುಂ ಪಲ್ಲವಿಕೆಯುಂ ಭವನಹರಿಣಂಗಳ್ಗೆ ಮರೀಚಪಲ್ಲವದಳಿಂಗಳಂ
ನೀಡಲುಂ ಲವಂಗಿಕೆಯುಂ ಚಕೋರಪಂಜರಂಗಳೊಳ್ ಪಿಪ್ಪಲೀತಂಡುಲಂಗಳ ಕುಟು
ಕಂ ನೂಸಲುಂ ಮಧುಕರಿಕೆಯುಂ ಪೂದೊಡಿಗೆಯಂ ಮಾಡಲುಂ ಮಯೂರಿಕೆಯುಂ
ಕಿನ್ನರಮಿಥುನಂಗಳಿಂ ಸಂಗೀತಶಾಲೆಗೆ ಕಳುಪಲುಂ ಕಂದಳಿಕೆಯುಂ ಜೀವಂಜೀವಕ
ಮಿಥುನಂಗಳಿಂ ಕ್ರೀಡಾಪರ್ವತವನೇಱಿಸಲುಂ ಹರಿಣಿಕೆಯುಂ ಶುಕಶಾರಿಕೆಗಳ
ನೋದಿಸಲುಂ ಪೆಸರ್ವೆಸರೊಳ್ ಕರೆದು ಪೇಳ್ವ ವನೋಹರಾಲಾಪಂಗಳಂ ಕೇಳುತ್ತಂ
ಪೋಗೆಪೋಗೆ ॥

* * * * * *

ವೃ ॥ ಪಳುಕಿನ ಭಿತ್ತಿಯೊಳ್ಪೊಳೆಯುತಿರ್ದ್ದ ನಿಜಪ್ರತಿಬಿಂಬದೊಳ್ಮ
ನಂಗೊಳೆ ನುಡಿದೇಕೆ ಪೇಳ್ನಗಿಸುವಯ್ವನನಾಂಚಲಮೆಂದು ಮೌಕ್ತಿಕಾ ।
ವಳಗಳ ಕಾಂತಿಯುಂ ತೆಗೆದಿದೇಕೆ ಬಳಲ್ವೆ! ಗವಾಕ್ಷರಂಧ್ರದೊ
ಳ್ವೆಳಗನಿನಾಂಶುವೆಂದು ಬಗೆದೇಕೆ ಕರಾಬ್ಜವನಡ್ಡವೊಡ್ಡುವಯ್ ॥ 314 ॥

ಕಂ ॥ ಪಿರಿದುಂ ಬಳಲ್ಕೆಯಿಂ ಚಾ
ಮರವುದು ಕರದಿಂದೆ ನುಣ್ಚಿಯುಂ ನಖಕಿರಣೋ ।
ತ್ಕರವನೆ ಚಾಮರವೆಂದೆಲೆ
ಸರೋಜವುಖಿ! ಬೀಸಿ ನಗಿಸದಿರ್ಕ್ಕೆಳದಿಯರಂ ॥ 315 ॥

ವ ॥ ಎಂದಿನ್ನು ಮೊದಲಾಗಿ ಪರಿಹಾಸಜಲ್ಪಿತಂಗಳಂ ಕೇಳುತ್ತಂ ಪೋಗಲುಪವ
ನಲತೆಗಳಂ ದುರ್ದಿನಲರ ಧೂಳಿಯಿಂ ಪುಳಲ್ಗಟ್ಟಿದಂತೆಯುಂ ಕೋಗಿಲೆಗಳೆಡೆವಿಡದು
ಗುರ ಮೊನೆಯೊಳಳ್ಳಿರಿಯೆ ಸುರಿವ ಸಹಕಾರಫಲರಸದ ಸೋನೆಗಳಂ ದುರ್ದಿನಂ ಮನ
ಗಿದಂತೆಯುಂ ವಕುಳದ ಮರಂಗಳೆಲರಲೆಪದಿಂ ಕೆದಱಿದ ಸೀಧುಧಾರಾಪ್ರಸರದಿಂ
ತುಂತುರ್ಮ್ಮನಗಿದಂತೆಯುಂ ಪೂವಲಿಗೆದರ್ದ ಸಂಪಗೆಯೆಸಳ ಪ್ರಸರದಿಂ ಸುವರ್ಣ
ದ್ವೀಪದಂತೆಯುಂ ಎಡೆಯಾಡುವೆಳೆವೆಂಡಿರ ಮೆಲ್ಲಡಿಗಳೆಲತಗೆಗಳಂ ರಾಗಸಾಗರಂ ಕವಿ
ದಂತೆಯುಂ ಅಂಗರಾಗಾಮೋದಂಗಳಂ ಪಾರಿಜಾತಜನ್ಮದಿನದಂತೆಯುಂ ತೊಳಗುವ
ಮುತ್ತಿನ ತೊಡವುಗಳ ಬೆಳಗುಗಳಂ ಬೆಳ್ದಿಂಗಳಾದಂತೆಯುಂ ಕೃಷ್ಣಾಗರುಪತ್ರಭಂ

ಗಂಗಳಿಂ ನೀಲಾಯವಮಾನವಮುಂ ಕರ್ಣಪೂರಾಶೋಕಪಲ್ಲವಂಗಳಿಂ ಲೋಹಿತಾಯ
ಮಾನವಮುಂ ಚಂದನಲೇಪಂಗಳಿಂ ಧವಳಾಯಮಾನವಮುಂ ಶಿರೀಷಕುಸುಮಾಭರಣಾ
ಗಳಿಂ ಹರಿತಾಯಮಾನವಮುಮಪ್ಪ ಮಾರ್ಗವಂ ನೋಡುತೆ ಬರ್ಪನ್ನೆಗಮಲ್ಲಿ ॥

ವೃ ॥ ಎರಡುಂ ಪಕ್ಕದೊಳೋಲಗಕ್ಕೆ ಪದಪಿಂ ಬಂದಿರ್ದ್ದ ಕಾಂತಾಜನೋ
ತ್ಕರ ರತ್ನಾಭರಣಪ್ರಭಾಪ್ರಸರವಾದಂ ತಳ್ದು ತದ್ವೀಥಿಕಾಂ ।
ತರದೊಳ್ಪೆರ್ಚ್ಚಿರ್ಚ್ಚಿನಲಂದದಿಂ ಪರಿಯೆ ಕಂಡಂತಾಪ್ರಭಾಪೂರದೊ
ಳ್ಬರದಿಂ ತಾನಿದಿರೀಸುವಂತೆ ನಡೆದಂ ಭೂಪಾಲವಿದ್ಯಾಧರಂ ॥ 316 ॥

ಕಂ ॥ ರಾವಮಾಭಿರಾವವಮಂ ಜಗ
ತೀವಮಂಡನಮಂ ಮಣಿಪ್ರಭಾಪ್ರೇಂಖಿತರ ।
ಥ್ಯಾವಮಂಡನಮಂ ಕಂಡಂ
ಶ್ರೀವಮಂಟಪಮಂ ವಿಚಿತ್ರರತ್ನಾತಪಮಂ ॥ 317 ॥

ವ ॥ ಆವಮಣಿಮಯಮಂಟಪಮಧ್ಯಭಾಗದೊಳನೇಕಕನ್ಯಕಾಪರಿಜನವೃತೆ
ಯಾಗಿ ॥

ವೃ ॥ ಪೊಳೆಯುತ್ತಿರ್ಪ್ಪ ಮಹಾವಮಾಹವದನೋದ್ಯದ್ದಂಷ್ಟ್ರಮಂ ನೆವಿಸ್ಸಿ ನಿಂ
ದಳೊ! ಭೂಕಾಂತೆಯೆನಲ್ಕೆ ನೀಲವಸನಪ್ರಚ್ಛನ್ನಪರ್ಯಂಕಮಂ ।
ಡಳದೊಳ್ಪೆಚ್ಚಿಪ್ಪೆಸೆದಿರ್ದ ಕಾಳ್ಮಡೆಯನೊಂದಂ ನೆವಿಸ್ಸಿ ಕುಳ್ಳಿರ್ದ್ದ ಕೋ
ಮಳೆಯಂ ದೂರದೆ ನೋಡಿ ಕಂಡನರಸಂ ಕಾದಂಬರೀದೇವಿಯಂ ॥ 318 ॥

ಉರಗನಿಕಾಯ ದಿಕ್ಪತಿನಿಕಾಯ ನಿಲಿಂಪನಿಕಾಯಮೆಲ್ಲಮಾ
ದರದೊಳೆ ತಮ್ಮತಮ್ಮ ನಿಳಯಕ್ಕಿರದುಯ್ದುಪರೊಲ್ದು ಕನ್ನೆಯಂ ।
ಪಿರಿದುಮೆನಲ್ಕೆ ಹರ್ಮ್ಯಮಣಿಕುಟ್ಟಿಮಭಿತ್ತಿನವಾಹವಮಂಟಪೋ
ಪರಿವೃತಲಂಗಳೊಳ್ಸಾಗಯಿಸಿದ್ದುದು ರೂಪಮೃತಾಂಶುವಕ್ತೆಯಾ ॥ 319 ॥

ಕಂ ॥ ಮಂಡಪದುಪರಿವೃತಲದೊ
ಳ್ಕಂಡರಿಸಿದ ಖಚರಮಂಡಲಂ ಪದೆದಬಲಾ ।
ಮಂಡಲಮಂ ಗಗನಕ್ಕೊಡ
ಗೊಂಡುಯ್ದುಪುದೀಗಳೆಂಬಿನಂ ಸೊಗಯಿಸುಗುಂ ॥ 320 ॥

*

ಸಾಹಸಭೀಮವಿಜಯಂ.

ರನ್ನಕವಿ—ಕ್ರಿ ಶ ಸು. 993.

ಭೀಮ ದುರ್ಯೋಧನ ಗದಾಯುದ್ಧಪ್ರಕರಣಂ.

ಕಂ ॥ ಶ್ರೀಕಾಂತಂ ಸಮರಜಯ
ಶ್ರೀಕಾಂತಂ ಕುರುಕುಲಾಂತಕಂ ರಿಪುದರ್ಪೋ ।
ದ್ರೇಕಹರಂ ವ್ಯಗರಾಜಪ
ತಾಕಂ ಕೇವಳಮೆ ಸಮರಸಾಹಸಭೀಮಂ ॥ 1 ॥

ವ ॥ ಅಂತು ..... ಭೀಮಸೇನನು ಗದಾಪರಿಘಪ್ರಹರಣದಿಂ ರುಧಿರಪ್ರವಾಹವಶಂ ಗತನಾಗಿರ್ದ ಯುವರಾಜನಿರ್ದೆಡೆಯಂ ಕುರುರಾಜನೆಯ್ದಿವಂದಾಗಳ್ ॥

ಮ. ಸ್ರ ॥
ಇದು ಭೀಮಂ ದೇವ! ಕಾಳಿಂಗನ ಗಜಘಟೆಯಂ ಕೊಂದ ತಾಣಂ ಭರಂಗೆ
ಯ್ದಿದು ಭೀಮಂ ದೇವ! ಕೌರವ್ಯರನನಿಬರುಮಂ ತಿಂದ ತಾಣಂ ವೊಗೆಂಬೊ ।
ಕ್ಕಿದು ಭೀಮಂ ದೇವ! ದುಶ್ಶಾಸನರುಧಿರಮುಮಂ ಪೀರ್ದ ತಾಣಂ ಛಲಂಬ
ಟ್ಟಿದು ಭೀಮಂ ದೇವ! ಧಾತ್ರೀಸುತನಿಭದೊಳಿಭಂ ಪೋರ್ವವೋಲ್ಪೋರ್ದತಾಣಂ

ಕಂ ॥ ಪುಡಿಯೊಳೊಪ್ಪಿರಳ್ಚಿಯುಂ ವೆ
ಯ್ಯಡಗಂ ಕೊಱಲೆಕೊಱಲೆದು ತಿಂದು, ಗೋಣ್ಮುರಿದೆಳೆದುಂ ।
ಕುಡಿದುಂ ನೆತ್ತಱನೆಂತುಂ
ಹಿಡಿಂಬರಿಪ್ಪು ತಣಿದನಿಲ್ಲ ದುಶ್ಶಾಸನನಂ ॥ 3 ॥

ವ ॥ ಎಂದು ಸಂಜಯಂ ಪೇೞೆ ಕೆಳಗಿವಿಗೇೞ್ದ ಕಿಱಿದೆಡೆಯಂ ಪೋಗೆವೋಗೆ ತನ್ನ ತಮ್ಮನ ಕಣ್ಣಂ ಕರ್ದುಂಕುವ ಕಾಗೆಗಳುಮಂ, ಕರುಳೆ ಪಿಣಿಲಂ ತೆಗೆವ ಪರ್ದುಗಳುಮಂ, ಬರಿಯಂ ಬೞಸಿ ಬಂದು ಕಾಡುವ ಬೞ್ಗುಗಳುಮಂ, ನರವನುಗಿವ ನರಿಗಳುಮಂ, ಸೆರೆಯಂ ತೆಗೆವ ಸೀಳ್ನಾಯ್ಗಳುಮಂ, ಕೊರಲಂ ಪತ್ತಿ ಮುಱುವ ಕೋಕಂಗಳುಮಂ ಪುಡಿಯೊಳೊಪ್ಪಿರಳ್ಚುವ ಪುಲ್ಕರುಳ್ಗಳುಮಂ, ಪೆನ್ನ ಬೀಮಂ ತೆಗೆವ ಬೇತಾಳರುಮಂ ಕತ್ತಿಗೆಯಂ ಕೊಂಡು ಕಪಾಲವಂ ಕಡಿವ ಕಾಳರಕ್ಕಸಿಯರುಮಂ ಪುಣ್ಣಬಾಯೊಳ್ತಮ್ಮ ಬಾಯನಿಟ್ಟು ಭೀಮಂ ಕುಡಿದುಮಿೞಿದ ನೆತ್ತಱಂ ಕುಡಿಯಲೆದೆಯನಡವಂಡಿಸಿ ಪುಯ್ಯಲಿಡುವ ಪ್ರೇತನಿಯರುಮಂ ಕಂಡುಸ್ಮೆರಿಸಲಾಱದೆ ॥

ಚಂ ॥ ನಡುವುಡಿವನ್ನ ವೇಱೆ ಬರಿಯೆಲ್ಬುಡಿವನ್ನೆಗವೊತ್ತಿ ಮೆಟ್ಟಿ ವೆ
ಯ್ಯಡಗಡಗಾಗೆ ಮುನ್ನುರವುನಿರ್ಬಗೆಯಾಗಿರೆ ಪೊಳ್ದ ನೆತ್ತಱಂ ।
ಕುಡಿಯದೆ ಭೀಮಸೇನನೊಳಗನ್ನೆಗವೆನ್ನಲಿಲೆಂತು ಪೋಕುಮೆಂ
ದಡಿಗಡಿಗಱ್ತು ತನ್ನಣುಗದವ್ಮನನೀಕ್ಷಿಸಿದಂ ಸುಯೋಧನಂ ॥ 4 ॥

ವ ॥ ಅಂತು ನಿಂದು ನೋಡಿ ಪಲುಂಬಿ ಪಲವಾಡಿ ॥

ಮ. ವಿ॥ ನಿಜಜೀವಂ ಪರಲೋಕದೊಳ್ನಿಜಮುಹಾವಾಂಸಂ ಪಿಶಾಚಾನ್ಯದೊಳ್
ನಿಜರಕ್ತಂ ರಿವುಕುಪ್ಪೆಯೊಳ್ನಿಜಶರಂ ನಕ್ತಂಚರೀಹಸ್ತದೊಳ್ ।
ನಿಜಕಾಯಂ ಕುರುಭೂಮಿಯೊಳ್ನೆಲಸೆ ಗಾಂಧಾರೀಜ! ದುರ್ಯೋಧನಾ
ನುಜ! ದುಶ್ಶಾಸನ! ಭೀಮಭೀಮಗದೆಯಿಂ ಪಂಚತ್ವಮಂ ಪೊರ್ದಿದ್ದೈ ॥ 5 ॥

ವ ॥ ಎಂದತಿಪ್ರಳಾಪಂಗೆಯ್ದು ॥

ಕಂ ॥ ನಿನ್ನಂ ಕೊಂದಂ ಗಡವೊಳ
ನಿನ್ನುಂ ಕೊಂದವನ ನೀಳ್ಕ ಕೊಲ್ಲದೆ ಮಾಣ್ದಾ ।
ನಿನ್ನುವೊಳೆಂ ಗಡ! ಸಾಲದೆ
ನಿನ್ನಯ ಕೂರ್ಮೆಗವುದೆನ್ನ ಸೌಧರ್ಮಿಕೆಗಂ ॥ 6 ॥

ಮ. ವಿ। ಜನನೀಸ್ತನ್ಯವುನುಂಡೆನಾಂ ಬಳಿಕ ನೀಂ ಸೋವೂವ್ಮತಂ ದಿವ್ಯಭೋ
ಜನವುಂಬಿೞತಿವನುಂಡೆನಾಂ ಬಳಿಕ ನೀಂ ಬಾಲತ್ವದಿಂದೆಲ್ಲಿಯುಂ ।
ವಿನಯೋಲ್ಲಂಘನವಾದುದಿಲ್ಲ! ಮುರಣಕ್ಕೆನ್ನಿಂದೆ ನೀಂ ವುಂಚಿದ
ಯ್ಮೊನೆಯೆಳಳ್ಸಾಲ್ತಿಡವಾಯ್ತಿದೊಂದೆಡೆಯೊಳಂ ಹಾ! ವತ್ಸ ದುಶ್ಶಾಸನಾ! ॥

ವ ॥ ಎಂದು ಪ್ರಳಾಪಂಗೆಯ್ದು ॥

ಕಂ ॥ ಅನುಜನ ನೆತ್ತಱನೀಂಟಿದ
ವನ ನೆತ್ತಱ ಜೀವಸಹಿತವಿಾಂಟದೆ ದುರ್ಯೋ ।
ಧನನೆಂಬ ಪೆಸರ್ಗೆ ವುಯಕ್ಕಿಂ
ಪೆನೆ! ದುಶ್ಶಾಸನನ ಬನ್ನವಂ ನೀಗುವೆನೇ! ॥ 8 ॥

ವ ॥ ಎಂದು ಪಿಂಗಾಕ್ಷಂ ಕೋಪಾರುಣೀಕೃತನೇತ್ರನಾಗಿ ತನ್ನ ತವ್ಮನ ಕಳೇಬರ ವುಂ ನೋಡಲಾಱದೆ ಅಲ್ಲಿಂ ತಳರ್ದು ॥

ಕಂ ॥ ಕರಿತುರಗನಗಕಳೇಬರ
ಕರಾಳಸಂಘಟ್ಟದಲ್ಲಿ ಬರೆವರೆ ಕಂಡಂ ।
ನರಕರವಿಮುಕ್ತಕರಜ
ರ್ಝರಿತಾಂಗನನಂಗರಾಜನಂ ಕುರುರಾಜಂ ॥ 9 ॥

ವ ॥ ಆಗಳಿದಂ ಕಂಡು ಸಂಜಯಂ "ಗಂಡಸ್ಯೋಪರಿ ಸ್ಫೋಟಕ"ಮೆಂಬಂತೆ ನಿಜ ಪ್ರಿಯತನೂಜಾನುಜರ ಶೋಕದಿಂ ವಿಪ್ಲಳೀಕೃತನಪ್ಪ ಭೂತಳೇಶ್ವರಂಗೆ ನಿಜಪ್ರಿಯಸಖ ನಪ್ಪ ಕರ್ಣದರ್ಶನದಿಂ ದುಃಖಂ ಮಱುಕೊಳಿಸುಗುಮೆಂದು ಮನದೊಳ್ ಬಗೆದಿರೆ ॥

ಚಂ ॥ ನೆಗಪ ವರೂಥಮಂ ವಸುಧೆ ನುಂಗಿದುದಂ ನವಮಪ್ಪದಾಸನಂ
ಬಗೆಗೊಳೆ ತನ್ನ ಮುಂತೆಗೆದ ಮುಪ್ಪಿಯೆ ದಕ್ಷಿಣಕರ್ಣಮೂಲದೊಳ್ ।
ಸೊಗಯಿಸೆ ಪಾಳಯಂ ನೆಱಪದಾಳ್ದನ ಕಜ್ಜಮನೊಕ್ಕ ಸತ್ತರಂ
ನಗುವವೊಲಿರ್ದನಂಗಪತಿ ನಿಮ್ಮಿ ನಿಜೋನ್ನತಕೇತುದಂಡಮಂ ॥ 10 ॥

ವ ॥ ಅಂತಿರ್ದ ದಿನಕರತನೂಜನಂ ರಾಜರಾಜಂ ನೋಡಿ ಬಾಷ್ಪವಾರಿಧಾರಾಪ್ರೋ ಕ್ಷಿತಶೋಚನನುಂ ಮನ್ಯೂದ್ಭತಕಂಠನುಮಸಹ್ಯಶೋಕಾನಲದಹ್ಯಮಾನಾಂತಃಕರಣ ನುಮಾಗಿ ॥

ಕಂ ॥ ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕಳಿದ ಬೞಿ ।
ಕ್ಕಾನುಂ ನೀನೆ ದಲೀಗ
ಳ್ನೀನುಮುಗಲ್ದಿತ್ತವೋದೆಯಂಗಾಧಿಪತೀ! ॥ 11 ॥

ನಿನ್ನ ಮಗಂ ವೃಷಸೇನಂ
ತನ್ನ ಮಗಂ ಸತ್ತನಣ್ಮ ಲಕ್ಷ್ಮಣನುಂ ನೀ ।
ನೆನ್ನಂ ಸಂತೈಸುವುದಾಂ
ನಿನ್ನಂ ಸಂತೈಸೆ ಬಂದೆನಂಗಾಧಿಪತೀ ॥ 12 ॥

ಪಳಯಂ ಕೇಳ್ದೆನೊ! ವೇೞ್ಮುಡಿ
ವಳಿಯಂ ತಪ್ಪಿದೆನೊ! ಕಾಣೆ ಕಡೆಗೆಯೆ್ದಿನೊ! ಕೂ ।
ರ್ತಳಲಿವರಂ ಬಗೆದೆನೊ! ಮ
ಚ್ಚಳಿದೆನೊ! ವೇಳೊಂದಿ ನಿನ್ನೊಳಂಗಾಧಿಪತೀ? ॥ 13 ॥

ಅಱಿಯೆನಿದಂ ನಿನ್ನಿಂದಿನ
ತೆಱಿನಂ ನೀನೆನಗದೇಕೆ ವಮಳಿದಿರ್ಪೆಯೊ! ವೇ ।
ೞ್ಮೀಱುವಾತುಗುಡದೆ ರವಿಸುತ
ಮಱುವಿಂದಿರ್ದವೆಯೊ! ವೇೞ್ಮುಳಲ್ದಿರ್ದಪೆಯೋ 14 ॥

ನಿನ್ನ ಕೆಳೆಯಂ ಸುಯೋಧನ
ನನ್ನೋಡದೆ ನುಡಿಯದಪ್ಪಿಕೊಳ್ಳದೆ ಪೆಸನೇ ।
ನೆನ್ನದೆ ಜೀಯೆನ್ನದೆ ದೇ
ನೆನ್ನದದೇಕಾಸಿರದಿರ್ಪೆಯಂಗಾಧಿಪತೀ ॥ 15 ॥

ಅನೃತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ ।
ದನ! ಸತ್ಯ ತ್ಯಾಗವಂಶ್ಮೆಂ
ಬಿನಿತರ್ಕಂ ನೀನೆ ಮೊತ್ತ ಮೊದಲಿಗನಾದ್ಯೆ ॥ 16 ॥

ಆನಱುವೆಂ ಪೃಥೆಯಱುವ
ಳ್ವಾನವರಿಪುವಱುವ ನರ್ಕನಱುವಂ ದಿವ್ಯ ।
ಜ್ಞಾನಿ ಸಹದೇವನಱುವಂ
ನೀನಾರ್ಗೆಂದಾರುಮಱಿಯರಂಗಾಧಿಪತೀ ॥ 17 ॥

ಒಡವುಟ್ಟಿದನೆಂದಱಿದೊಡೆ
ಕುಡುಗುಂ ರಾಜ್ಯಮನೆ ಧರ್ಮತನಯಂ ನಿನಗಾಂ ।
ಕುಡಲಾರ್ತೆನಿಲ್ಲ! ರಾಜ್ಯ
ಕ್ಕೊಡೆಯನನಱಿಯುತ್ತುಮಿರ್ದೆನಂಗಾಧಿಪತೀ ॥ 18 ॥

ನೀನುಳ್ಕೊಡುಂಟು! ರಾಜ್ಯಂ
ನೀನುಳ್ಕೊಡೆ ಪಟ್ಟಮುಂಟು! ಬೆಳ್ಗೊಡೆಯುಂಟ್ಮೆ ।
ನೀನುಳ್ಕೊಡುಂಟು! ಪೀಱುಗೆ
ನೀನಿಲ್ಲದಿವೆಲ್ಲವೊಳವೆಯಂಗಾಧಿಪತೀ ॥ 19 ॥

ಇನಸುತ! ಗಾಂಡಿವಿ ಸಂಮೋ
ಹನಾಸ್ತ್ರದಿಂದೆಚ್ಚು ನಿದ್ರೆಯಂ ಮಾಡಿದನಂ ।
ದಿನ ಗೋಗ್ರಹಣದೊಳೀಗಳ್
ನಿನಗಿಂತೀ ದೀರ್ಘನಿದ್ರೆಯಂ ಮಾಡಿದನೇ ॥ 20 ॥

ವಸುವಂ ದ್ವಿಜನ್ಮದಾನದೆ
ಪೊಸಜೌವನಮಂ ಸದಾರಸಂತೋಷದೆ ನಿ ।
ನ್ನಸುವಂ ಪತಿಕಾರ್ಯದೆ ವ
ರ್ಜಿಸಿದ್ಯೆ ನಿನ್ನನ್ನನಾವನಂಗಾಧಿಪತೀ ॥ 21 ॥

ಹರಿ ಬೇಡೆ ಕವಚಮಂ ನೀ
ನಿರದಿತ್ತೆ! ಕುಂತಿ ಬೇಡೆ ಬೆಗಡದೆ ಕೊಟ್ಟೆ ।
ಸುರಿಗಣೆಯಂ ನಿನಗೆಣೆ ಕಸ
ವರಗಲಿ ವೆಯ್ಗುಲಿಯುಮಾವನಂಗಾಧಿಪತೀ ॥ 22 ॥

ನಯನದೊಳವೆರ್ದೆಯೊಳಂ ನಿ
ನ್ನಯ ರೂಪಿರ್ದಪುದು! ನಿನ್ನ ಮೂರ್ತಿರ್ದಪುದೆ ।
ನ್ನಯ ಕವಿಯೊಳಗಿನನಂದನ!
ವಿಯೋಗವೆಂತಾವುದಱಿಯೆನಂಗಾಧಿಪತೀ ॥ 23 ॥

ನಿನ್ನಂ ಕೊಂದ ಕಿರೀಟಿಯು
ಮೆನ್ನನುಜನನಿಕ್ಕಿ ಕೊಂದ ಭೀಮನುಮೊಳನಾ ।
ನಿನ್ನುಮೊಳೆಂ ಗಡ! ಸಾಲದೆ
ನಿನ್ನಯ ಕೂರ್ಮಿಗವುದೆನ್ನ ಸೌಥರ್ಮಿಕೆಗಂ ॥ 24 ॥

ಪರಶುಧರಂ ಚಕ್ರಧರಂ
ಸುರಪತಿ ಭೂಕಾಂತೆ ಕುಂತಿಯೆಂದೀವೇಳ್ದಿ ।
ಯ್ವರೆ ಕೂಡಿ ನಿನ್ನ ಕೊಂದ
ರ್ನರನೊರ್ವನೆ ಕೊಂದನಲ್ಲನಂಗಾಧಿಪತೀ ॥ 25 ॥

ಇಂದಾನಾದೆಂ ಮೇಣಿನ
ನಂದನ ಕೇಳ್ಪಂಡುತನಯರಾದರ್ನಿನ್ನಂ ।
ಕೊಂದುಂ ದುಶ್ಶಾಸನನಂ
ಕೊಂದುಂ ಬರ್ದುಕುವನದಾವನಂಗಾಧಿಪತೀ ॥ 26 ॥

ವ ॥ ಎಂದು ವಿಪ್ರಳಾಪಂಗೆಯ್ದು ॥

ಕಂ ॥ ಇನಸುತನಿರವಂ ದುಶ್ಶಾ
ಸನನಿರವಂ ಕಂಡುಮಿನ್ನುಮೆನ್ನ ಸುವಿದು ನೆ ।
ಟ್ಟನೆ ಪೋದುದಿಲ್ಲ! ಕಲ್ಲೆರ್ದೆ
ತನದಿಂದೆನ್ನಂತು ಬರ್ದನಾವನುಮೊಳನೇ ॥ 27 ॥

ವ ॥ ಎಂದು ತನ್ನಂ ತಾನೆ ನಿಂದಿಸಿಕೊಂಡು ॥

ಕಂ ॥ ಸೂನುಗಳಟ್ಟುವಂ ಪ್ರಿಯಮಿ
ತ್ರಾನುಜರಟ್ಟುವಂ ವಿಧಾತ್ರ! ನೀಂ ಕಾಣಿಸಿಯಿ ।
ನ್ನೇನಂ ಕಾಣಿಸಲಿರ್ದಪೆ!
ನೀನೆನ್ನಂ ಪಾಪಕರ್ಮನಂ ನಿರ್ಗುಣಿಯಂ ॥ 28 ॥

ವ ॥ ಎಂದು ವಿಧಾತ್ರಂಗೆ ಪಲುಂಬಿ ರಾಧಾನಂದನನ ಮೊಗವುಂ ನೋಡಿ ಸಂಜಯು ನನಿಂತೆಂದಂ ॥

ಕಂ ॥ ಆರೊಡನೆ ನುಡಿವೆನಟ್ಟಿಯೊ
ಳಾರೊಡನೋಲಗದೊಳರ್ಪೆನಾರೊಡನೆ ನವುಂ ।
ತಾರೋಗಿಪೆನೇಱುವೆನಾ
ನಾರೊಡನೆನ್ನಣುಗರಿಲ್ಲದಿಭವಾಜಿಗಳಂ ॥ 29 ॥

ಮ. ವಿ॥ ಕೆಳೆಯಂಗಾಯ್ತು ಸುಮೋಕ್ಷಮಾಗದೆನಗಂ ಬಾಷ್ಪಾಂಬುಮೋಕ್ಷಂ ಧರಾ
ತಳವುಂ ಕೊಟ್ಟುನಿವಂ ಜಳಾಂಜಳಿಯುವುಂ ನಾಂ ಕೊಟ್ಟೆನಿಲ್ಲನ್ಯವುಂ ।
ಡಳವುಂ ಸುಟ್ಟುನಿವಂ ಪ್ರಕೋಪಶಿಖಿಯಿಂದಾನೀತನಂ ಸತ್ಕ್ರಿಯಾ
ಸಲನಿಂ ಸುಟ್ಟಿನುಮಿಲ್ಲ! ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ ॥

ವ ॥ ಎಂಬುದುಂ ದೇವಾ! ನೀವಿಂತೇಕೆ ಪಳಯಿಸುವಿರೆಂದು ಸಂಜಯನಿಂತೆಂದಂ ॥

ಕಂ ॥ ಜಲದಾನಕ್ರಿಯೆಯುಂ ವಾ
ಗ್ಜಲದಿಂ ಕೋಪಾಗ್ನಿಯಿಂದೆ ದಹನಕ್ರಿಯೆಯಂ ।
ಕೆಳೆಯಂಗೆ ಮಾಡಿದ್ಯೆ! ಕುರು
ಕುಲಪರ್ಪಣ! ಮಱುನುದಿನ್ನಹರ್ಪತಿಸುತನಂ ॥ 31 ॥

ಪೆಂಡಿರ್ಪಳಯಿಸುವಂದದೆ
ಗಂಡರ್ಪಳಯಿಸುವುದಾಯವೋ! ಛಲವೋ! ಕೈ ।
ಕೊಂಡೆಸೆಪರಾರೊ! ಕುರುಕುಲ
ವುಂಡನ! ನೀನೆತ್ತಿ ಕೊಂಡ ಛಲವುನೆ ಮೆಱೆಯಾ ॥ 32 ॥

ವ ॥ ಎಂದು ಸಂಜಯಂ ನುಡಿದ ನುಡಿಯನವಧಾರಿಸಿ ॥

ಕಂ ॥ ದರಹಸಿತವುಖನ ಸುರಕುಂ
ಜರಗವುನನ ಕನಕಪರ್ವತಪ್ರಭನ ದಿನೇ ।
ಶ್ವರಸುತನ ರೂಪು ಚಿತ್ರಂ
ಬರೆದಂತಿರ್ದಪುದು ಚಿತ್ತ ಭಿತ್ತಿಯೊಳೆನ್ನಾ ॥ 33 ॥

ವಂ. ವಿ॥ ಗುರು ದೀಕ್ಷಾವಿಧಿಗಳ್ಗೆ ವುಂತ್ರಿ ಹಿತಕಾರ್ಯೂಳೋಚನಕ್ಕಾಳ್ದನು
ರ್ವರೆಯುಂ ಕಾವ ಗುಣಕ್ಕೆ ನರ್ವುನಚಿವಂ ಕ್ರೀಡಾರಸಕ್ಕಾನೆಯಾ ।
ಳ್ಗರುಭಾರಕ್ಕಿಳಿವಾಳ್ ರಣಕ್ಕೆ ತುಱುಲಾಳ್ಗಟ್ಟಾಯದೊಳ್ಮೇಳದಾ
ಳ್ಪರಿಹಾಸಕ್ಕೆನಿಸಿರ್ದನೆಂತು ವುಱುವಂ ದುರ್ಯೋಧನಂ ಕರ್ಣನಂ ॥ ೩4 ।

ಕಂ ॥ ದಿವಿಜತನಯುಂಗೆ ವುಖ್ಯಂ
ರವಿಜಾತನೆ! ತನ್ನನಿನ್ನು ಕಣೊಣ್ಣಳ್ಕಾಣಂ ।
ಕಿವಿಯೊಳ್ಕೇಳಂ ಕಾಣ್ಬುಂ
ದವೆಂತು ಕೇಳ್ವುದವೆಂತು ತಲೆಯಿಲ್ಲದರಂ ॥ 35 ॥

ವ । ಎಂದು ಶೋಕಾಂಧಂ ಕರ್ಣವಿರಹಿತನಪ್ಪುದಱಿಂ ಸಂಕ್ರಂದನನಂದನಂಗೆ ವುಳಿದು ॥

ಕಂ ॥ ತರಣಿಯ ತನಯನ ನೆನೆದಾ
ಸ್ಮರಣದೆ ಕೈಗಣ್ಮುವೆನ್ನ ಶೋಕವುಹಾಸಾ ।
ಗರವುಂ ತವೆ ಪೀರ್ದುದು ಭೀ
ಕರವುತ್ಕೋಪಾಗ್ನಿ ಬಾಡಬಾಗ್ನಿಯ ತೆಱದಿಂ ॥ 36 ॥

ವ ॥ ಎಂದು ಶೋಕರಸವುಂ ಕೋಪರಸದ ವೇಲಿಕ್ಕಿ ಮೂರ್ಪಡೆಯೆಯ್ದರೆ ನೋಡ
ನಡೆವ ದಂದಕೂಕಪತಾಕನ ಗೆಲ್ಲದ ವುಳಿಸಿನಂದವುನಱಿದು ಸಂಜಯನೆಂದಂ:—
ದೇವಾ! ಭೀಷ್ಮರಿತ ಲರ್ದಪರಿತ್ತ ಬಿಜಯಂಗೆಯ್ಯೆವೆಂದುಂ ನಿಜಗುರುಜನಪ್ರಾರ್ಥನಾ

ಭಂಗಂ ವಾಡಲಾಗದು! ಇಂ ನೆಗಳ್ವ ಕಜ್ಜವಾವುದುಮಂ ನಿವ್ಮಜ್ಜನೊಳಾಳೋಚಿಸಿ ನೆಗಟ್ವುದೆಂದು ಪೇಟ್ವುದುಂ ಸಂಜಯನ ವಾತಂ ವಿಾಱುದೆ ಶರಶಯನಗತನಾಗಿರ್ಪ ಗಂಗಾನಂದನನ ಚರಣಾರವಿಂದವಂದನಂಗೆಯ್ಯಲೆಂದು ಗಾಂಧಾರೀನಂದನನೆಯ್ದಿ ವಂದು ನದೀನಂದನನಂ ಕಂಡು ॥

ಚಂ ॥ ನರಶರಕೋಟಿ ಜರ್ಜರಿಸೆ ತನ್ನ ಶರೀರಮನಸ್ತ್ರವೇದನಾ
ಪರವಶನಾಗಿಯುಂ ಮುಱೆದನಿಲ್ಲ! ಮುಕುಂದನನೇಕಚಿತ್ತದಿಂ ।
ಸ್ಮರಿಯಿಸುತಿರ್ದುಮತ್ತ ರಣವಾರ್ತೆಯ ಕೇಳ್ದಕಿಂತುಟಾದುದೇ
ಕುರುಪತಿಗೆಂಬನಾಪರಮಯೋಗಿಗವಿಂತುಟು ಮೋಹವಾಗದೇ ॥ 37 ॥

ವ ॥ ಅಂತಿರ್ದ ನದೀನಂದನನಂ ರಾಜರಾಜಂ ನೋಡಿ ಮನ್ಯೂದ್ಗತಕಂಠನಾಗಿ ॥

ಚಂ ॥ ವಿನಯಮನೊಕ್ಕ ನಿವ್ಮ ಗುರುವೃದ್ಧರ ಪೇೞ್ದ ಹಿತೋಪದೇಶಮಂ
ಮನದೊಳಿಳಿಂಕೆಗೊಂಡಸಲನಂದನವೈರದೆ ನಿವ್ಮನಿಂದ್ರನಂ ।
ದನನೊಳೆ ನಾನೆ ಕಾದಿಸಿದೆನಾನೆ ಕಡಂಗಿದೆನೆನ್ನ ಪಾಪಕ
ರ್ಮನ ಕತದಿಂದವಿಾನಿವುಗವಿಾಯೆರವಾದುದೆ! ಸಂಧುನಂದನಾ ॥ 38 ॥

ವ ॥ ಎಂದು ಪಶ್ಚಾತ್ತಾಪಂಗೆಯ್ಯುತ್ತುಂ ಮುಂಬರ್ಪ ತನ್ನ ವೊಮ್ಮನ ಕಾಲ ಸೊಪ್ಪುಳಿಂ ಕೇಳ್ದು ವಿಕಚಧವಳಕುವಲಯವಿಲಾಸೋಪವಾಸಿತಂಗಳುಂ ಕರ್ಣಾಂತ ವಿಶ್ರಾಂತುಂಗಳುಮಪ್ಪ ತನ್ನ ಕಣ್ಗಳನರೆದೆಱೆದು ದರಸಿವಿಾಲಿತಕವುಲಕವುಲಾಕರ ವಿರ್ಪಂತಿರ್ದ ಶಂತನುತನೂಜನ ಕರ್ಣಾಭ್ಯರ್ಣವುಂ ಸ್ಫೋರ್ದಿ ಸಂಜಯನೆಂದಂ:— ಅಜ್ಜಾ! ನಿವ್ಮ ವೊಮ್ಮನಪ್ಪ ಕುರುಕುಲಗಗನಗಭಸ್ತಿವಾಲಿ ಬಾಹುಶಾಲಿ ದುರ್ಯೋ ಧನಂ ಬಂದನೆಂದು ವಿನ್ನಪಂಗೆಯ್ಯೆ; ಯೋಗಿಯೋಗವನುಪಸಂಹರಿಸಿ ತನ್ನ ಚರಣ ಕವಲಕ್ಕುತ್ತವಾಂಗಾನತಂವಾಡಿದ ಪನ್ನಗಪತಾಕನಂ ಕುರುಕುಲೋತ್ತಂಸನಂ ಪರ ವಾನಂದದಿಂ ಭೀಷ್ಮನಾಶೀರ್ವಚನಸಪಸ್ರಂಗಳಿಂ ಪರಸಿ ದಿಕ್ಕರಿಕರಾನುಕಾರಿಗಳಪ್ಪ ನಿಜಭುಜದಂಡಂಗಳಿಂದೆ ತೆಗೆದಪ್ಪಿ ಬಾಷ್ಪಾಂಬುಪೂರಿತಲೋಚನನಾಗಿ ॥

ಚಂ ॥ ಧವಳಗಜೇಂದ್ರಮುಂ ಧವಳಚಾಮರವುಂ ಧವಳಾತಪತ್ರಮುಂ
ಧವಳನಿಲೋಚನೋತ್ಪಲಚಧೂಜನವುಂ ಪೆರನಪ್ಪುದಿಕ್ತಟಂ ।
ಧವಳಿಸೆ ಕೀರ್ತಿಯಿಂ ಧವಳಮಂಗಳಗೇಯದಿನೊಪ್ಪಿ ಬರ್ಪ ಕಾ
ರವಧವಳಂಗೆ ದೇಸಿಗನೆ ಬರ್ಪವೊಲೊರ್ವನೆ ಬಪ್ಪುದಾವುದೇ ॥ 39 ॥

ವ ॥ ಎಂದಾಗಳ್ಕೇಕಾಕಿಯಾಗಿ ಬಂದ ಧೃತರಾಷ್ಟ್ರನಂದನನ ಬರಸನೊಳ್ ಸರಿತ್ಸುತಂ ಸಮರವೃತ್ತಾಂತಮನಱ್ಕುದು ವಿಸ್ಮಯಾಕ್ರಾಂತಸ್ವಾಂತನುಮಾಗಿ ॥

ಕಂ ॥ ಎಲ್ಲಿದುಸ್ರೊ! ಧವಳಚಾಮರ
ಮೆಲ್ಲಿತ್ತೇಕಾತಪತ್ರಮುಹಿಕೇತನ ವಿಂ ।
ನೆಲ್ಲಿತೊ! ಮೃಗೇಂದ್ರಾಸನ
ಮೆಲ್ಲಿದುವೋ! ಲೋಲವಾಳಕೇತನತತಿಗಳ್ ॥ 40 ॥

ಎಲ್ಲಿದಳೊ ಭಾನುಮತಿ! ತಾ
ನೆಲ್ಲಿತ್ತೋಲಗದ ಸೂಳೆಯರ್ಕಳ ಪಡೆ! ಮೇ ।
ಪೆಲ್ಲಿತ್ತೊ ಗೀತವಾದ್ಯಂ!
ಸಲ್ಲಲಿತವಧೂಜನಪ್ರವೃತ್ತಂ ನೃತ್ತಂ ॥ 41 ॥

ಸುತಶತಕವುಂ ಸಹೋದರ
ಶತಕವುಮೆಲ್ಲಿತ್ತೊ! ಮಂಗನೆ ಸೇಲೆಲ್ಲಿತ್ತೋ! ।
ಚತುರಂಗಸೈನ್ಯಮೆಲ್ಲಿದ
ರಥಿರಥಸಮರಥನುಹಾರಥಾರ್ಧರಥರ್ಕಳ್ ॥ 42 ॥

ವ ॥ ಎಂದು ಕೋಕಂಗೆಯ್ಯೆ ರಾಜರಾಜಂ, ನದೀತನೂಜನಂ ಮಾಣಿಸಿ ನೀವಪ್ಪೊಡೆ ವಿದಿತವೇದಿತಜ್ಞರುಂ ಭಾವಿತಾತ್ಮರುಮಾಗಿರ್ದ ಜ್ಞಾನಿಗಳ್ ಅಂತೆ ನೆಗಲಿಲಾಗದೆಂದು ನಿಜಗಮನವೃತ್ತಾಂತಮಂ ಸಮರಪರಿಚ್ಛೇದಮುಮನಱಿಪಿದೊಡೆ, ಕಿಱಿದಾನುಂ ಭೋಗಂ ಚಿಂತಾಕ್ರಾಂತನುಮಾಗಿರ್ದು—ಮಂಗನೆ ಕಮಲನಾಭನ ನಾಭೀನಳಿನಸಂಭವ ಹಿರಣ್ಯಗರ್ಭನ ಮಾನಸ್ಸಂಭವರಪ್ಪ ಸಪ್ತರ್ಷಿಗಳೊಳಗೆ ಜಗತ್ಪವಿತ್ರನಪ್ಪತ್ರಿನೇತ್ರ ಸಂಜಾತಸೋಮನಿಂ ಸೋಮವಂಶವಾದುದು; ಆ ಸೋಮವಂಶದೊಳನೇಕರರಸುಮಕ್ಕಳುಮತಿಕ್ರಾಂತರಾದರ್; ಅವರೊಳ್ ಸತ್ಯನೆಂಬನವಂಗೆ ಭರತನೆಂಬನಾದಂ; ಆತನಿಂ ಬಱಿಕೆ ಭರತಾನ್ವಯನೆಂಬುದಾದುದು; ಆಭರತಕುಲದೊಳಪ್ರತಿಮಪ್ರಬಲಪ್ರತಾಪನೆಂಬಂ ಪ್ರದೀಪಂ; ಆತಂಗೆ ಪುಟ್ಟಿರ್ದ ಶಂತನುಬಾಹ್ಲಿಕವಿನುತದೇವಾಪಿಯುಮೆಂಬೀ ನಾಲ್ವರ್ತನೂಜರಾದರ್; ಅಲ್ಲಿ ಶಂತನುಗಂ ಗಂಗಾದೇವಿಗಮಾಂ ಪುಟ್ಟಿದಂ; ಚಿರಕಾಲಂ ತೊಡಗಿ ಪರಿಗೃಹೀತಬ್ರಹ್ಮಚರ್ಯವ್ರತಪರಿಣತನಾದೆಂ; ಎಮ್ಮಮ್ಮನಪ್ಪ ಶಂತನುಗಂ, ಯೋಜನಗಂಧಿಯೆನಿಸಿದ ಸತ್ಯವತಿಗಂ, ಚಿತ್ರಾಂಗದನುಂ ವಿಚಿತ್ರವೀರ್ಯನುಮೆಂಬಿರ್ವರ್ತರ್ತನೂಜರಾದರ್; ಅವರ ಪರೋಕ್ಷದೊಳ್ ನಪ್ಪ್ಯನಂತತಿಯಾಗೆ ಕೃಷ್ಣದ್ವೈಪಾಯನನ ವರಪ್ರಸಾದದಿಂದಂಬಿಕೆಗೆ ಧೃತರಾಷ್ಟ್ರನುಂ ಅಂಬಾಲಿಕೆಗೆ ಪಾಂಡುರಾಜನುಂ ಅವರ ಸೂಳೆಯಮ್ಮಂಗೆ ವಿದುರನುಮೆಂಬ ಮಾನವರ್ಕ್ಕಳಾದರವರಿಂದಲ್ಲದೆ ನಿಮ್ಮ ಪುಟ್ಟು ಭಿನ್ನವಂಶದೊಳಾದುದಿಲ್ಲಮೆಂಬುದನಿಂಬುಕೆಯ್ವಾಯ್ದೊಡೆ ಪಾಂಡವರ ನೂಡಂಬಡಿಸಿ ಸಂಧಿಯುಂಮಾಡಿ ಪೂರ್ವಕ್ರಮದೊಳ್ನಡೆವಂತು ಮಾಳ್ಪೆಂ; ಇನ್ನುಮವರೆಮ್ಮಿಂದಾದಂ ಇಂಬುಕೆಯ್ಯದಪಿಮಾಱುವರಲ್ಲ; ನೀನುಮೆಮ್ಮ ಪೇಱ್ತುದಂ ಮಿಮಾಱದೆ ನೆಗಲ್ವೇಱ್ಕುಮೆನೆ ಸುಯೋಧನಂ ಮುಗುಳ್ನಗೆನಕ್ಕು ॥

ಕಂ ॥ ನಿವುಗೆ ಪೊಡವುಟ್ಟು ಪೋಪೀ
ಸಮಕಟ್ಟಂ ಬಂದೆನಹಿತರೊಳ್ ಸಂಧಿಯನೇಂ ।
ಸಮಕೊಳಿಸಲೆಂದು ಬಂದೆನೆ!
ಸಮರದೊಳೆನಗಜ್ಜ! ಪೇೞ್ವುಮಾವುದು ಕಜ್ಜಂ ॥ 43 ॥

ಮ. ವಿ॥ ಕಲಿಗಂ ಶಂಕೆಯೆ! ಬಾಗಿಗಂ ಬೆರಗೆ! ಮೇಣ್ ಕಟ್ಟಾಳ್ಗಳಿರಂಬಾರ್ವನೇ!
ಕುಲಜಂಗಂ ಮಱುವಾಳೆ! ಸಜ್ಜನಿಕೆಗಂ ಕಲ್ವೋಜೆಯೇ! ಧರ್ಮಿಗಂ ।
ಕೊಲೆಯೇ! ಮಂತ್ರಿಗಮಿಚ್ಚೆಗಾಱುತನವೇ! ತಕ್ಕಂ ಪಿಸುಣ್ಪೇೞ್ವನೇ
ಚಲಮಂ ಗಂಡುಮನಪ್ಪುಕೆಯ್ವೆನಗಮೂ ಕೌಂತೇಯರೊಳ್ ಸಂಧಿಯೇ ॥

ಕಂ ॥ ನೆಲಕಿಱಿವೆನೆಂದು ಬಗೆದಿರೆ!
ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ ।
ಟ್ನಿಲನೆನಗೆ ದಿನಪಸುತನಂ
ಕೊಲಿಸಿದ ನೆಲದೊಡನೆ ಮತ್ತೆ ಪುದುವಾಱ್ದಪೆನೇ ॥ 45 ॥

ಅನುಜನಮೀತನೊಳಂತಕ
ತನಯನೊಳನುಜವ್ಯಪೇತನೀಗಳ್ ದುರ್ಯೋ ।
ಧನನಱಿಪಿ ಸಂಧಿಗೆಯ್ದೊಡೆ
ಮುನಿವರ ವೆಱ್ಚದರ ಮನಕೆ ಪಕ್ಕಾಗಿರೆನೇ ॥ 46 ॥

ಉ ॥ ಕೂಡೆ ವಿರೋಧಿಯಂ ತಱಿದು ತದ್ರಸವೂಂಸದೆ ಭೂತಭೋಜನಂ
ಮಾಡದೆ ನೈರಿವಾರವನಿತಾವದನಾಂಬುರುಹಂಗಳಂ ಪೞ ।
ರ್ಮುಡದೆ ಬಂಧುಶೋಕದೊಳ್ ಸೊರ್ದಿದ ಬಂಧುಜನಕ್ಕೆ ಸಂತಸಂ
ಮಾಡದೆ ಸಂಧಿಮಾಡುವನೆ! ಪಾಂಡವರೊಳ್ ಫಣಿರಾಜಕೇತನಂ ॥ 47 ॥

ಕಂ ॥ ಬಾಡವನೈದನವರ್ಮುಂ
ಪೇಡಿದೊಡಾನಿತ್ತೆನಿಲ್ಲ! ರಾಜ್ಯಾರ್ಧವನಾಂ ।
ಪೇಡಿಯವರಲ್ಲಿಗಟ್ಟುದೂ
ಡೇಡಿಸಿ ಱೋಷಿಸನೆ! ಪವನನಂದನನೆನ್ನಂ ॥ 48 ॥

ಉ ॥ ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು
ಳ್ಳೆನ್ನಿಗವೊಲ್ಲೆನೆನ್ನೊಡಲೊಳೆನ್ನಸುವುಳ್ಳಿನವುಜ್ಜ! ಸಂಧಿಯಂ ।
ಮುನ್ನವವಂದಿರಿರ್ಬರುಮನಿಕ್ಕುವೆನಿಕ್ಕಿ ಬಲೂಕ್ಕೆ ಸಂಧಿಗೆ
ಯ್ವೆನ್ನಿಗಱ್ಪಂತಕಾತ್ಮಜನೊಳೆನ್ನಬಲಾಱೊಡಾಗದೆಂಬೆನೇ ॥ 49 ॥

ವ ॥ ಎಂದು ಮತ್ತಮಿಂತೆಂದಂ ॥

ಶ. ವಿ॥ ಪುದುವಾಳಲ್ಕಣವೂಗದೆಂತುವುವರೊಳ್ ಸಂಧಾನಮಂ ಮಾಡಲಾ
ಗದು! ನೀವಿಲ್ಲದೆಯಜ್ಜ! ಬಿಲ್ಲ ಗುರುಗಳ್ತಾಮಿಲ್ಲದಾಕರ್ಣನಿ ।
ಲ್ಲದೆ ದುಶಾಸನನಿಲ್ಲದಾರೊಡನೆ ರಾಜ್ಯಂಗೆಯ್ವೆನಾರ್ಗೆನ್ನ ಸಂ
ಪದಮಂ ತೋಱುವೆನಾರ್ಗೆ ತೋಱೆ ಮೆಱೆವೆಂ ನಾನಾವಿನೋದಂಗಳಂ ॥

ಕಂ ॥ ಖಂಡಿತವೆನಿಪವರ ವಸುಧೀ
ಮಂಡಲಧವಳಾತಪತ್ರಸಂಪದವೆನಗೇ ।
ಭಂಡನದನೊಲ್ದೆನೊಲ್ದಿನ
ಖಂಡಿತವಭಿಮಾನವದನೆ ಬಲ್ವಿಡಿವಿಡಿವೆಂ ॥ 51 ॥

ಪುಟ್ಟಿದ ನೂರ್ವರುವೆನ್ನೊಡ
ನುಟ್ಟಿದ ನೂರ್ವರುವಿದಿರ್ದ ಸತ್ತೊಡೆ ಕೋಪಂ ।
ಪುಟ್ಟಿ ಪೊದೞ್ದುದು! ಸತ್ತರ್
ಪುಟ್ಟರೆ! ಪಾಂಡವರೊಳಿಲ್ಲದು ಛಲವುನೆ ವಿಲ್ಲೆವೆಂ ॥ 52 ॥

ಕಾದದಿರೆನಜ್ಜ! ಪಾಂಡವ
ರಾದರ್ವೀಣೆಂದಿನೊಂದೆ ಸವುರದೊಳಾಂ ನೋ ।
ಣಾದೆನದಲ್ಲಿಂದೆ ಪಾಂಡವ
ರ್ಗಾದುದು! ವೀಣಾಯುಸ್ತ ಕೌರವಂಗವನಿತಳಂ ॥ 53 ॥

ವ ॥ ಎಂದು ರಾಜರಾಜಂ ನಿರ್ವ್ಯಾಜಶೌರ್ಯಾಳಂಬಿಯಾಗಿ ನುಡಿಯೆ ಗಾಂಗೇಯ ನತಿವಿಸ್ಮಯಾಕುಳೀಕೃತಚಿತ್ತನಾಗಿ ಮುಹುರ್ಮುಹುರಾಂದೋಳಿತೋತ್ತಮಾಂಗನು ಮಾಗಿ ॥

ಕಂ ॥ ಜಲಧಿಗಳೇೞುಂ ಭೂಭೃ
ತ್ಕುಲಂಗಳುಂ ರಿಪುಗೆ ಸರಿಯನೀವಂತೆತ್ತಂ ।
ತಳವುಳವಿಗಲ್ಲಿಯೆ ಕುರು
ತಿಲಕಂ ರಿಪುಗೆಂತುಮೊವನಲ್ಲಂ ಶ್ರೀಯುಂ ॥ 54 ॥

ವೃ ॥ ಜತುಗೇಹಾನಲಬೀಜಮುಗ್ರವಿಷಸಂಜಾತಾಂಕುರಂ ಕ್ರೀಡನೋ
ದ್ಧತಿಕೃದ್ದ್ಯೂತವಿನೋದಪಲ್ಲವಚಯಂ ಪಾಂಚಾಲರಾಜಾತ್ಮಜಾ ।
ಯತಕೇಶಗ್ರಹಪುಷ್ಪವಾಂತ ಬಲವದ್ವೈರದ್ರುಮಂ ಕೌರವ
ಕ್ಷಿತಿಪಾಲೋರುಕಿರೀಟಭಂಗಭಯದುಂ ಪೇೞ್ಮಾಡದೇಂ ಪೋಕುವೇ ॥ 55 ॥

ವ ॥ ಎಂದು ನಿಶ್ಚಯಿಸಿ ॥

ವೃ ॥ ಕುರುರಾಜಾನುಜರಂ ಪ್ರಭಂಜನಸುತಂ ಕೊಂದಿಕ್ಕುಗುಂ ಕೌರವೇ
ಶ್ವರನೂರುದ್ವಯಮುಂ ಗದಾಪರಿಘದಿಂ ನುಗ್ಗೊತ್ತುಗುಂ ಸಪ್ತಸಾ ।
ಗರಪರ್ಯಂತವಸುಂಧರಾತಳಮನೇಕಚ್ಛತ್ರದಿಂದಾೞ್ಗುಮೆಂ
ಬರ ಮಾತಂ ಪುಸಿಯಾಗಲೀಯನಘಟಂ ಚಾಳುಕ್ಯಕಂಠೀರವಂ ॥ 56 ॥

ಇಂತಿದು ಭೀಷ್ಮವಚನವ್ಯಾವರ್ಣನಂ
ಪಂಚಮಾಶ್ವಾಸಂ.

ಕಂ ॥ ಶ್ರೀವಧುವಂ ನಿಜಭುಜಶೌ
ರ್ಯಾವಷ್ಟಂಭದೊಳೆ ಕೈಗೆ ಮಾಡಲ್ ಜಯಲ ।
ಕ್ಷ್ಮೀವಲ್ಲಭನಿರ್ದಂ ಪೃ
ಥ್ವೀವಲ್ಲಭನುದಿತಕೀರ್ತಿ ಸಾಹಸಭೀಮಂ ॥ 57 ॥

ವ ॥ ಅಂತು ಗಾಂಗೇಯಂ ಮನದೊಳ್ ಪೊಗಟ್ಟಿ ॥

ಕಂ ॥ ಕರವುಂ ತೆಗೆದು ಕರೀರೋ
ದರದಿಂ ಲೆಕ್ಕಣಿಕೆವಾಡಿ ಗಜವುದವುಸಿಯಂ ।
ತರಿಸಿ ಪತಾಕಾಪಟದೊಳ್
ಬರೆದಟ್ಟಿದನಂಧನೃಪತಿಗಾ ಸಿಂಧುಸುತಂ ॥ 58 ॥

ವ ॥ ಅಂತು ನಿಜನಾವೂಂಕಿತಲೇಖನವುಂ ಬರೆದು,—ಮೊವ್ಮಂ ನುಡಿದ ನುಡಿಯನೆಂತುಮೊಡಂಬಡುವನಲ್ಲಂ! ನೀನುಂ ಗಾಂಧಾರಿಯುಮಿರ್ದು ಕುರುಕುಲಪ್ರದೀಪ ದುರ್ಯೋಧನನಂ ಕೌಂತೇಯರೊಳೆತ್ತಾನುಂ ಸಂಧಿಯಂ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಱ್ಪುದೆಂದು ಸಂಜಯನ ಕೈಯೊಳ್ ಕೊಟ್ಟು ಧೃತರಾಷ್ಟ್ರನಲ್ಲಿಗಟ್ಟುವುದುಂ ಕುರುರಾಜಂ ಸಿಂಧುಸುತನ ಮೊಗಮುಂ ನೋಡಿ ॥

ಕಂ ॥ ತುಂಗಕುರುವಂಶಮಯಶೋ
ಭಂಗಳಿದ್ರಿತವುದೆನ್ನ ದೂಸಱಿನಾಯ್ತಾ ।
ನುಂ ಗಡ! ಕುರುರಾಜನೆ! ನೀ
ವುಂ ಗಡ! ಸಂಧಾನವೇಱ್ದಿರೆನಗರಸು ಗಡಾ! ॥ 59 ॥

ಈಯೆರಡುವೆನ್ನ ನಿಡುದೋ
ಳ್ಗಾಯತ್ತಂ ವೀರವೃತ್ತಿ ಜಯಮೆಂಬುದು ದೈ ।
ವಾಯತ್ತವುಜ್ಜ! ಭರತಾ
ನ್ವಾಯಕ್ಕೆ ಕಲಂಕವೂಗದಂತಿರೆ ನೆಗಟ್ವೆಂ ॥ 60 ॥

ವೃ ॥ ಪೆಸಕೆಯ್ವೆಂ ಬಿಡಿವುಜ್ಜ! ವುಂಗಳವುಹಾ! ಶ್ರೀಸಂಧಿಕಾರ್ಯಕ್ಕೆ! ಲಂ
ಘಿಸಿದೆಂ ನಿವ್ಮಯ ವೂತನೊರ್ವೆಗವಿದಾಜ್ಞಾಲಂಘನಂ ದೋಷವೊ ।
ಡ್ಡಿಸೆ ನಿನ್ನಾಗ್ರಹವುಂ ಬಿನುಱ್ಪುದೆನೆ ಸತ್ಯಕ್ಕಂ ತದೀಕಾಂಗನಾ
ಹಸಕಂ ವಿಸ್ಮಯವುತ್ತು ವೆಚ್ಚಿ ಪೊಗಟ್ಟಿಂ ವುಂದಾಕಿನೀನಂದನಂ ॥ 61 ॥

ವು. ವಿ॥ ಗುರುಭೀಷ್ಮಾರ್ಕಸುತಾದ್ಯಶೇಷಸುಭಟಾನೀಕಂ ವಿನಿಶ್ಶೇಷಮಾ
ಗಿರೆ ಕೌರವ್ಯವಿಶೇಷಕಂ ಜಲಿತನಲ್ಲೀಕಾಕಿ ಕುಂತೀತನೂ ।
ಜರೊಳಿನ್ನುಂ ಪುದುವಾಳಲೊಲ್ಲನಿಱಿಯಲ್ಕೆಂದಿರ್ದಪಂ ಗಂಡನೀ
ಧರೆಯೊಳ್ ವೆಯ್ಗುಲಿಯಾವನೆಂದು ಪೊಗಟ್ಟಿಂ ವುಂದಾಕಿನೀನಂದನಂ ॥ 62 ॥

ವ ॥ ಎಂದು ಗಾಂಗೇಯಂ ಮನದೊಳ್ ಪೊಗಟ್ಟಿಂ ''ಅಶುಭಸ್ಯ ಕಾಲಹರಣಂ'' ಎಂಬ ವಾಕ್ಯಾರ್ಥಮನವಧರಿಸಿ ''ಮಗನೆ ನೀನೆಂತುಮೆಮ್ಮ ಪೇಟ್ಟುದಂ ಕೈಕೊಳ್ಳದೆ ಛಲವನೆ ಕೈಕೊಂಡು ಪಾಂಡುನಂದನರೊಳ್ ಕಾದಿದಲ್ಲದಿರೆನೆಂಬೆಯಪ್ಪೊಡೆ ತೀರ್ಥಯಾತ್ರೆಗೆ ಪೋದ ಬಲದೇವಂ ಬರ್ಪನ್ನೆಗಂ ನೀನಿರ್ದೆಡೆಯನಱಿಯದಂತು ಮೆಯ್ಗಱೆದು, ಅಕ್ಷತ್ಥಾಮಕೃಪಕೃತವರ್ಮರ್ ಬರ್ಪನ್ನೆಗಂ ಕಾಲವಂಚಸಂಗೆಯ್ವುದು, ಮೇಣ್ ಕುರುಕ್ಷೇತ್ರದುತ್ತರದಿಶಾಭಾಗದೊಳ್ ವೈಶಂಪಾಯನಸರೋವರಮಂ ಪೊಕ್ಕಿರ್ದು ಇಂದಿನೊಂದಿರುಳಂ ಕಳಿಪಿ, ನಾಳೆ ನಿಮ್ಮ ನೆಗಱ್ವುದಂ ನೆಗಱ್ಪೆಂ'' ಎನೆ; ಮಹಾಪ್ರಸಾದವೆಂದದಕ್ಕೊಡಂಬಟ್ಟು, ಆಂತೆ ಗೆಯ್ವೆನೆಂದು ಯಥೋಚಿತಹಿತೋಪದೇಶಂಬೆರಸು ಜಲವಮಂತೊಪ್ಪಿದೇಶವಂ ಕೈಕೊಂಡು, ಕುರುಕುಲಪತಾವಮಹನಂ ಬೀಳ್ಕೊಂಡು ನಿಜಭುಜಗದಾಸಹಾಯನಾಗಿ ಸಂಗ್ರಾಮರಂಗದೊಳಗನೆ ಬರುತ್ತುಂ ತನ್ನಂತರ್ಗತದೊಳ್ ॥

ಕಂ ॥ ದಿನಕರತನಯನ ದುಶ್ಶಾ
ಸನನ ವಿಯೋಗದೊಳಮಿನಿತುವರೆಗಂ ನೋವಿ ।
ಲ್ಲೆನಗಹಿತರೊಡನೆ ಪುದುವಾ
ಱೆನೆ ನೊಂದೆಂ ಸುಜನಗುರುಜನಾಭ್ಯರ್ಥನೆಯಿಂ ॥ 63 ॥

ಅರಿಗಳೆ ಪಾಂಡವರವರೊಳ್
ವಿರೋಧಮಂ ಬಿಸುಟು ಸಂಧಿಯಂ ಮಾಡುವುದೆಂ ।
ಬರ ನುಡಿಯಂ ಕೇಳ್ಕೆಂ
ದೆರಡುಂ ಕಿವಿಗಳುಮನೆನಗೆ ಬಿದಿ ಮಾಡಿದನೇ! ॥ 64 ॥

ವ ॥ ಎನುತುಂ ಬಂದು ತತ್ಸರೋವರದ ಸವಿಾಪಮಂ ಕುರುಕುಲಪ್ರದೀಪನೆಯ್ದಿ ವಂದಾಗಳ್ ॥

ಕಂ ॥ ಬಂದೆರಡುಮುಂತರಂತರ
ದಿಂದಂ ಪೊಱಮಟ್ಟು ಪಜ್ಜೆಯೆಂಬುದನೆನಿಸಲ್ ।
ಪಿಂದು ಪೆಱಗಾಗಿ ಪುಗೆ ''ಚಿಃ!''
ಎಂದವನಂ ರಾಜ್ಯಲಕ್ಷ್ಮಿ ವೇಸಿ ಬಿಸುಟ್ಟುಳ್ ॥ 65 ॥

ತುಱುವಂ ಕಳಿಸುವ ಕೃಷ್ಣೆಯ
ನಿಱಿಯಂ ಪಿಡಿದುರ್ಚವೇಱ್ವ ಕೊಳನಂ ಪಿಂದುಂ ।
ಪೆಱಗಾಗಿ ಪುಗುವ ದುರ್ನಯ
ಮಱಿಪವೆ ಕೌರವನ ರಾಜ್ಯದಾಯುವ ಕೇಡಂ ॥ 66 ॥

ವ ॥ ಅಂತು ಸರೋವರಮನೆಯ್ದಿ ವಂದು ॥

ಮ. ವಿ॥ ಗಗನಂ ಬಿಱ್ವುದೊ! ವೇಣ್ಮೆಲಕ್ಕೆ ನೆಲನೇಂ ಪುಟ್ಟಿತ್ತೊ! ವೇಣಿಲ್ಲಿ ಪ
ನ್ನಗವೃಂದಾರಕರೆಂದುವಿರ್ದ ಬಿಲನೋ! ವೇಣಪ್ಪುದಿಜ್ಞಾಗರಾ ।
ಜಿಗೆ ವೆಯ್ಗರ್ಚಿಕೊಳಲ್ಕಜಂ ಸವೆದ ತೋಯೋದ್ವೇಕವೋ! ಸಂದೆಯಂ
ಬಗೆಗಾದತ್ತನಿಸಿರ್ದುದೇಂ ಪಿರಿದೊ! ವೈಕಂಪಾಯನಾಬ್ಜಾಕರಂ ॥ 67 ॥

ವ ॥ ಅಂತು ಗಂಭೀರನೀರಾಕರವಿರ್ಪಂತಿರ್ದ ಕವುಲಾಕರವುಂ ನೋಱುತ್ತಿನವುಲ್ಲಿ॥

ಚಂ ॥ ಕುರುಪತಿ! ನಿನ್ನ ಪೊಕ್ಕ ತೊಱೆಗಳೊಮ್ಮೊದಲಾಗಿರೆ ಬತ್ತಿದಪ್ಪುವೀ
ದೊರೆಯ ದುರಾತ್ಮನಂ ಖಳನನಾನೊಳಕೊಂಡೊಡೆ ಭೀಮನೀಸರೋ ।
ವರವುವುನಿವುಮ್ಮುವುಂ ಕದಡುಗುಂ ಪುಗದಿರ್ತೊಲಗೆಂದು ಬಗ್ಗಿಪಂ
ತಿರೆ ನೆಗೆದತ್ತನೀಕಬಕಕೋಕವುರಾಳವಿಹಂಗವುಸ್ವನಂ ॥ 68 ॥

ಕಂ ॥ ಮಿಳತಶಿಳೀವುಖವುತ್ಪಳ
ಕುಳವುಂ ನವಕೋಣಕಂಜಪೂರಿತಲಹ್ಲೀ ।
ವಿಳಸಿತವೆನೆ ದೃಷ್ಟಿಗೆ ಕೊಳು
ಗುಳವುಂ ಪೋಲ್ತತ್ತು ಪೂಗೊಳಂ ಕೌರವನಾ ॥ 69 ॥

ವ ॥ ಆಗಳ್ ಕುರುಕುಳಿಸರೋರಾಜಹಂಸನಲ್ಲಿಯು ರಾಜಹಂಸಿಗಳುವುನಾವಿಶ್ವ ವಿಶ್ವಂಭರಾಧಃಕೂರ್ಮನಲ್ಲಿಯ ಕೂರ್ವಂಗಳುವುನಾಭರತಕುಲಚಕ್ರೇಶ್ವರನಲ್ಲಿಯ ಚಕ್ರವಾಕಂಗಳುವುನಾ ಮತ್ಸ್ಯಲೋಚನನಲ್ಲಿಯು ಮತ್ಸ್ಯಂಗಳುವುನಾ ಪುರುಷವರ ಪುಂಡರೀಕನಲ್ಲಿಯು ಪುಂಡರೀಕಂಗಳುವುನಾ ಕುವಲಯುಲಲಾವುನಲ್ಲಿಯು ಕುವಲಯುಂ ಗಳುವುನಾ ಶಂಖಚಕ್ರಾಂಕಿತಚರಣನಲ್ಲಿಯುಷಟ್ಚರಣಂಗಳುವುನತಿಕುತೂಹಲಂಬರನು ನೋಡಿ ವುುನ್ನಂ ತನ್ನ ಮೆಯ್ಯೊಳ್ ಕನ್ನೆಯ್ಸಿದ ಕೆನ್ನೆತ್ತರಂ ಕರ್ಚಿ ಕಳೆದು ಕರಚರಣ ವದನಪ್ರಕ್ಷಾಳನಂಗೆಯ್ದು ವುುಕ್ಕುಳಿಸಿಯುಂಗುಳ್ದಾಚವುನಕ್ರಿಯೆಗಳಂ ಮಾಡಿ ಜಲದೇವ ತಾನವುನಸ್ಕಾರಂಗೆಯ್ದು ಜಲವುಂತೋಪದೇಶದಿಂ ಜಲಜಾಕರವುನಭಿವುಂತ್ರಿಸಿ ॥

ಕಂ ॥ ನರಲೋಕವುನಲ್ಲ್ಗೇಳಿಸಿ
ನರಲೋಕದ ಸುಖವುನಾತ್ಮವಿಭವದೆ ಪೊಕ್ಕಂ ।
ಕುರುಪತಿ ವೈಕಂಪಾಯನ
ಸರವುಂ ಪುಗುವಂತೆ ನಾಗಲೋಕವುನಾಗಳ್ ॥ 70 ॥

* * * * * *

ವ ॥ ಅಂತು ಕುರುಕುಲವುಹೀಪಾಲಂ ಮಧ್ಯವುಲೋಕಪಾಲಕನಾಗಿಯುಂ ಪಶ್ಚಿ ವುಲೋಕಪಾಲಕನಂತೆ ಜಲನಿಲಯುನಾಗಿ ॥

ಚಂ ॥ ವನರುಹವಿಪ್ಪರಂ ರುಚಿರರೇಚಕಪೂರಕಕುಂಭಕಕ್ರಿಯಂ
ವುನವಿರೆ ನೆತ್ತಿಯೊಳ್ದರನಿವಿಲಿತದೃಷ್ಟಿ ನಿವಿಷ್ಟವಾಗೆ ವೂ ।
ಗಿನ ತುದಿಯೊಳ್ನಿರುದ್ಧಕರವುಂ ನಿಲೆ ವುಂತ್ರಪದಾಕ್ಷರಂಗಳಂ
ನಿನುಗುತುವಿರ್ದನಾಪರಮಯೋಗಿಯವೊಳ್ಪಣಿರಾಜಕೇತನಂ ॥ 72 ॥

ವ ॥ ಅನ್ನೆಗಮಿತ್ತಲ್ ಕಲ್ಯನ ವೇಧನೆಯಿಂಬಲ್ಲಿಯುಂ ದುರ್ಯೋಧನನ ರೂಪುಗಾಣದಿದೇನಾನುವೊಂದು ಕಾರಣಮಾಗಲ್ವೇಱ್ಕುವೆಂದು ಸೂಕ್ಷ್ಮಕ್ರಿಯೆಯಿನಂ ತಕತನಯನುಂ ಗರುಡಲಕ್ಷ್ಮನೊಳಾಳೋಚಿಸುವುದುಂ ಕುರುಕುಳಾಂತಕಂ ಕೇಳ್ದು ॥

ಮ. ವಿ॥ ತೊದಳಾಯ್ತೆನ್ನಯ ಪೂರ್ಣ ಪೂರ್ಣಕ್ಕೆ! ಸಭೆಯೊಳ್ಪಾಂಚಾಲರಾಜಾತ್ಮಜಾ
ವದನಮ್ಲಾನತೆ ಮಾಣ್ದುದಿಲ್ಲೊಗೆದ ಮದ್ದೋರ್ದಂಡಕಂಡೂತಿ ತೀ ।
ರ್ದುದುವಿಲ್ಲಿನ್ನು ವಣಂ ಸುಯೋಧನವಧಕ್ಕೇಗೆಯ್ವೆನೆಂತಕ್ಕುಮೆಂ
ಬುದನೆಂದುತ್ಸುಕಚಿತ್ತನುಮ್ಮಳಿಸಿದಂ ಭೀಮಂ ಭವತ್ಕಾರ್ಯಮಂ ॥ 73 ।

ವ ॥ ಅಂತುಮ್ಮಳಿಸಿ ಕುರುಕುಲಮುಹೀಪಾಲಬೃಹದೂರುದ್ವಂದ್ವಂಗಳಂ ತನ್ನ ಗದಾದಂಡದಿಂ ನುರ್ಗುನುಱ್ಱುಮಾಡಲುಂ ತತ್ಕಾರವೇಶ್ವರನ ಬಾಹುಶಾಖೆಗಳಂ ತನ್ನ ಗದಾಕುಠಾರದಿಂ ತತ್ತತ್ಪದಱ್ಱುಯಲುಂ ತತ್ಪಿಂಗಾಕ್ಷನ ವಕ್ಷಸ್ಸ್ಥಳವಂ ತನ್ನ ಗದಾಲಾಂಗಲದಿಂದಿರ್ಪಗೆಯಾಗೆ ಪೋಯ್ದು ಪರಪಲುಂ ತತ್ಪಣಿರಾಜಕೇತನನ ಲಲಾಟಶಿಲಾಪಟ್ಟಮಂ ತನ್ನ ಗದಾಘಾತದಿಂ ನುರ್ಚ್ಚುನುಱ್ಱುಮಾಡಲುಂ ತದ್ಭಾಪದೀದ್ರೋಹನ ಮಣಿಮಯಮಕುಟಮಂ ತನ್ನ ಗದಾಪ್ರಹರಣದಿಂದುರುಳ್ಚಿ ಪುಡಿಯೊಳ್ಪೊರಳ್ಚಲುಂ ಆಸುಯೋಧನನ ರುಧಿರಧಾರಾಪೂರದಿಂ ತನ್ನ ಗಗ್ಗದಾಯಮಾನವಿಪುಳಕೋಪಮಾವಕಶಿಖಾಕಲಾಪಮನಾಱ್ಱಿಸಲುಂ ಪಡೆಯದಡಪಡಿಸಿ ಭೀಮಸೇನಂ ಕಿಡಿಕಿಡಿಪ್ಪೋಗಿ ವಿಸಯಂ ಕಡಿದು॥

ಕಂ ॥ ವಿಱ್ಱಿದ ಪಗೆವನ ಪಟ್ಟಂ
ಬಾಱ್ಱಿಸುವೆನೊ! ಮುನ್ನಮುಮರರುಂಡಮೃತಮನೇಂ ।
ಕಾಱ್ಱಿಸುವೆನೊ! ಖಚರರ ನಡ
ರ್ದೆಱ್ಱಿಸುವೆನೊ! ವೇರುಗಿರಿಯ ತೂಱ್ಱಿಲ ತುದಿಯಂ ॥ 74 ॥

ಎತ್ತುವೆನೊ! ಮಂದರಾದ್ರಿಯ
ನೊತ್ತುವೆನೊ! ರಸಾತಳಕ್ಕೆ ನೆಲನಂ ದೆಸೆಯಂ ।
ಪತ್ತುವೆನೊ! ಪಗೆಯ ಪೆನ್ನಂ
ಪತ್ತುವೆನೊ! ದಿಶಾಗಜಂಗಳಂ ತುತ್ತುವೆನೋ! ॥ 75 ॥

ದಾಂಟುವೆನೊ! ಕಾಲನಗಂಗಳ
ನೀಂಟುವೆನೊ! ಜತುಸ್ಸಮುದ್ರಮಂ ರವಿಶಶಿಯಂ ।
ವಿೞಂಟುವೆನೊ! ಗಗನತಳವಂ
ಗಂಟಲನೊತ್ತುವೆನೊ! ಸಕಲದಿಕ್ಪಾಲಕರಂ ॥ 76 ॥

ವ ॥ ಅಂತು ಕುರುಕುಲಕೃತಾಂತನಂತಕನಂತೆ ಮಾವುಸಕಂವುಸಗಿ ಪ್ರಳಯಂಕಲ್ಪಸಂಕಲ್ಪಂಗೆಯ್ದು ॥

ಕಂ ॥ ರಸೆಗಿಱ್ಱಿದನೊ! ವೇಣ್ಮಾಲ್ಮುಂ
ದೆಸೆಗಳ ಕೋಣೆಗಳೊಳುಱ್ಱಿದೆನೋ! ಖಳನಿಲ್ಲೀ ॥
ವಸುವುತಿಯೊಳ್ಗಾಂಧಾರಿಯ
ಖಸಿಱಂ ವೇಣ್ಮಾಗುಲೆ ಪೋಗಿ ಪೊಕ್ಕಿರ್ದಪನೋ ॥ 77 ॥

ಮ. ವಿ॥ ಭುವನಂಗಳ್ಪದಿನಾಲ್ಕ್! ನಾಲ್ಕು ಪೆಸರಿಂ ವಾರಾಶಿಗಳ್ಪತ್ತು ದಿ
ಗ್ವಿವರಂ! ನೋಲ್ಪೊಡಜಾಂಡವುಂಡಲದೊಳಂದಿಲ್ಲಿಲ್ಲ! ಮತ್ತೆತ್ತಲೋ ।
ಡುವನಾರಂ ಗೆಡೆಗೊಳ್ವನಾರ ಮುಱಿಯುಂ ಪೊಕ್ಕಿರ್ಪನಿಂದಿಂತಿದಂ
ತಿವಱಿಂದಂ ಪೊಲಗೆಲ್ಲಿ ಪೊಕ್ಕು ಬರ್ದುಕಲ್ಕಕ್ಕುಂ ಭುಜಂಗಧ್ವಜಂ ॥ 78 ॥

ಕಂ ॥ ಚತುರಂತಕ್ಷಿತಿಯಂಬು
ಧಿರದೂ[illegible]ಳಿಗೆ ಸೂಡ್ಕೊಂಡಂ ತರುವಾಕರಂ ।
ಧರಪೋಳಿಗೆದ[illegible]ಡೆ ಭರತ
ಕ್ಷಿರಣ್ಯಗರ್ಭರ್ಕಳಲ್ಲಿಯುಂ ಕೊಱ್ಲದಿರೆಂ ॥ 79 ॥

ಮ. ವಿ ಚತುರಂತಕ್ಷಿತಿಕಾಂತ ಕೇಳ್! ಜಲಧಿ ಕೇಳ್! ಸಪ್ತಾರ್ಚಿ ಕೇಳ್! ತಾತ ಮಾ
ರುತ ಕೇಳ್! ಮೂರುತಮಾರ್ಗ ಕೇಳ್! ಪಗೆವನಂ ಕೊಂದೆನ್ನ ಕೋಪಾಗ್ನಿಗಾ।
ಹುತಿಮಾಳ್ಪೆಂ! ಕೊಲಲಾಱದಂದು ತಱಿಸಂದಾನೆನ್ನ ಸಂದಗ್ನಿಗಾ
ಹುತಿಮಾಳ್ಪೆಂ ಗಡವೆಂದು ಪೂಣ್ದೊದಱಿದಂ ಕೌರವ್ಯಕೋಳಾಹಳಂ ॥ 80 ॥

ವ॥ ಅಂತು ಪಂಚಭೂತಸಾಕ್ಷಿಯೊಳ್ ಪೂಣ್ದು ನುಡಿದುವುಜಾತಶತ್ರುಗೆ ಕುರುಕುಲ ಪ್ರಧಾನಶತ್ರುವೆನಿಸಿದ ಸಾಹಸಭೀಮಂ ನಮುಸ್ಕಾರಂಗೆಯ್ದಿಂತೆಂದಂ ॥

ಮ. ವಿ॥ ಎನಿತಂ ದ್ರೌಪದಿ ಮುಕ್ತಕೇಶಿ ನಮೆವಳ್! ತದ್ದುಃಖಮಂ ಕಂಡು ಕಂ
ಡೆನಿತಂ ಸ್ಮರಿಪೆನಾನುಮೆನ್ನನುಜನುಂ ಪಾಂಚಾಲಿಯಂ ನೋಡಿ ನೀಂ ।
ವನದೊಳ್ಕೊನ್ನೆವುದುಮಿಲ್ಲ! ನಿಷ್ಕರುಣಿಯೈ! ನೀವಿಂತಿರಾನನ್ನೆಗಂ
ಮುನಿಸಂ ತೀರ್ಚಿ ನರೇಂದ್ರ ವೈರಿತನುವಂ ನಿರ್ಮೂಲನಂಮಾಡುವೆಂ ॥81॥

ಕಂ ॥ ಆನುಂ ವಿಧೇಯನಲ್ಲಂ!
ನೀನುಂ ಗುರುವಲ್ಲವಿಂದಿನೊಂದೆವಸದೊಳೆ ।
ವೀರ್ಯನಾಥ! ಪರಿಯ ಬಿಡ! ಕುರು
ಸೂನುವನಿರದಿಕ್ಕಿ ವೆಂಟ್ಟಿ ಡೊಕ್ಕರಿಸಿದಪೆಂ ॥ 82 ॥

ಮುಂದಲೆಯಂ ಪಿಡಿದೆನ್ನಯ
ಮುಂದೆಱೆದನಲಜೆಯನುಸುಯ್ದ ಪರಿಭವಿಸಿಯೆ ದ ।
ಳ್ಳಿಂದುರಿದು ಸೊರ್ಕಿದವನಂ
ಕೊಂದೆಂ ಕುರುಪತಿಯುವುಂ ಕೊಲಲ್ತಡೆದಪೆನೇ ॥ 83 ॥

ವ ॥ ಎಂದು ಕುರುಕುಲಾಂತಕಂ ಕುರುಕುಳವಿಳಯಕೇತುದಂಡಭೀಕರಕ್ರೋಧಾ
ನುಕಾರಿತಮುಖನುಂ ಗಾಂಧಾರೀನಂದನಸಂಹರಣೋನ್ಮೀಲಿತಕರಾಳದಂತದಷ್ಟೋಷ್ಠ
ವಿಕಟಬದ್ಧಭೃಕುಟಿಭಂಗಭೀಷಣಲಲಾಟಚ್ಛಟನುಂ ಕುರುವಂಶದಿಶಾಪಟ್ಟನುಂ ಸಂಧ್ಯಾ
ರಾಗದುರ್ನಿರೀಕ್ಷ್ಯೈಕಟಾಕ್ಷವಿಕ್ಷೇಪಲಕ್ಷಿತನುಂ ಪಿಂಗಾಕ್ಷವಾರಣಕಾರಣನುಂ ಉತ್ಪನ್ನ
ಮಹೋತ್ಸವಚಲಾಯಮಾನಸ್ಫುರದಂಘ್ರಿಯುಗ್ಮನುಂ ಕುರುಕುಲಪ್ರಳಯಜಲಧರನಿ
ನಾದಗಂಭೀರೋದ್ಭಾಮಸಿಂಹನಾದಪತಿಮಪ್ರಚಲಿತನಿಖಿಲದಿಕ್ಕ್ರವಾಳನುಂ ಸುಯೋ

ಧನಾನುಜರುಧಿರೋದ್ಗತಧ್ವನಿವಿಶೇಷನುಂ ದುರ್ಯೋಧನವಿಶೇಷಣಾನ್ವೇಷಣಾರ್ಥಂ ಮೂವುಸಕಂಮುಸಗಿ ಕುರುಕುಲಕ್ಷಯವೆನಿಸಿದ ನಿಜವಿಜಯಗದಾದಂಡವುನೆತ್ತಿ ಕೊಂಡು ॥

ಕಂ ॥ ಕುರುಕುಲಕದಳೀಕಾನನ
ಕರಿಕಳಭಂ ಕತ್ರುಕಲಭಸಂತಾಪನವಿ ।
ಸ್ಫುರಿತಪ್ರದೀಪನಾಕುರು
ಧರೆಯೊಳ್ ಕುರುಪತಿಯನಱಸಿದಂ ಪವನಸುತಂ ॥ 84 ॥

ಗುರುಲಕ್ಷ್ಯಸಿದ್ಧಿಯಲ್ಲಿಯೆ
ಪರಿವಂಬಂ ಪರಿದು ಪಿಡಿದು ಬೇಗಂ ತರ್ಪಂ ।
ತಿರೆ ಪವನಜವದೆ ಪವನಜ
ಪರಿದಂ ಮೂಱ್ರಿರದೆಯಲ್ಲಿಯಿದಿರಂ ಬಱಿಯಂ ॥ 85 ॥

ವ ॥ ಅಂತಿದಿರುಂ ಬಱಿಯುಂ ಪಾಸುಂ ಪೊಕ್ಕುಂ ದುಗುಣಮುಂ ತಿಗುಣವುಂ ಅಡ್ಡವುಂ ತಿಗಟವುಂ ಪರಿದು ಕುರುಕ್ಷೇತ್ರದೊಳ್ ವಜ್ರಪ್ರಹರಣದಿನೆಱಂಕೆವೆರಸು ಕೆಡೆದ ಪರ್ವತಂಗಳಂತೆ ಲೋಹಪರ್ವಕ್ಕರಿಕೆಗಳ್ವೆರಸು ಕೋಡನೂಱು ಪಾಡಱಿದು ಪರಿಕಲಿಸಿ ಕೆಡೆದ ಗಂಧಸಿಂಧುರಂಗಳಡಿಯೊಳಡಂಗಿದನೆಂದವನೆತ್ತಿ ಕೈಗುತ್ತಿ ನೋಡಿಯುಂ, ತನ್ನ ಭೀಕರಗದಾಘಾತದೆ ಜಾಱುವಱಿದು ಪೆಱಗೆಡೆದು ತಾಱುವ ಱಾದ ಕಾಂಭೋಜಾವಳಿಗಳ ತುರುಷ್ಕತುರಂಗಂಗಳಡಿಯೊಳಡಂಗಿದನೆಂದುವುವನೆತ್ತಿ ಬಲವಂದು ನೋಡಿಯುಂ, ತನ್ನ ನಿಶಿತನಾರಾಚಪರಂಪರಾಭಿಘಾತದೆ ತಗ್ಗಿ ನುರ್ಗಾನು ಱಿಯಾಗಿ ಕೆಡೆದ ತೇರ ಪಲಗೆಗಳೊಳಂ ಮೆಯ್ಗಳೆದನೆಂದು ಸೋದಿಸಿ ನೋಡಿಯುಂ, ನೆತ್ತರ ಕಡಲೊಳ್ಕಲ್ಲುತ್ತಿ ನೋಡಿಯುಂ, ತನ್ನ ನಿಷ್ಕರುಣಚರಣಸಂಘಟ್ಟದೊಳ್ ಪಡಲ್ವಟ್ಟ ವೀರಭಟರ ವುಂಕುಟದ ತೆರೆಗಳೊಳಿಗೆ ತಲೆಗಱೆದಿರ್ದನೆಂದು ಜೆದಕಿ ನೋಡಿಯುಂ, ನೆಣದ ಪಳ್ಳಂಗಳೊಳ್ ಕೈದುಗುತ್ತಿ ನೋಡಿಯುಂ, ಅಡಗಿನ ಗಿಡಿವಿನೊಳ್ ಸುಱಿದು ನೋಡಿಯುಂ, ನರವಿನ ನೆಱವಿಯೊಳೊತ್ತಾಱಿಲ್ದು ನೋಡಿಯುಂ, ವುೂಳೆಯ ವೊರಡಿಗಳನೇಱು ನೋಡಿಯುಂ, ವಿಂದುಳ ಕೋಲ್ಗೆಸಱೊಳೊಳ್ಪಾಕ್ಕು, ಕರುಳ ವೆಂದೆಯಂ ಪಿಕ್ಕಿ ಪರಪಿ ನೋಡಿಯುಂ, ಪಲ್ಗಳ ಬಣಂಪೆಗಳೊಳ್ ಪರವಸಂಗೊಂಡು ವೆಂಟ್ಟಿಯುಂ, ಅಟ್ಟೆಯ ಬೆಟ್ಟಪ್ಪಟ್ಟದಿಟ್ಟಿಡೆಗಳೊಳ್ ನಿಟ್ಟಿಸಿಯುಂ, ವೈಯಾಕರಣನಂತೆ ಕಬ್ದವುನಾಲಿಸಿಯುಂ, ಜೇಂಟೆಕಾಱನಂತೆ ಅಡಿವಜ್ಜೆಯನಱಸಿಯುಂ, ಗರುಡನಂತೆ ಹಾವಿನ ಹಱವಿಗೆಯನಾರಯ್ದು ನೋಡಿಯುಂ, ವೈದ್ಯನಂತಹಿತಗದಾನ್ವೇಷಣಂಗೆಯ್ದು ನೋಡಿಯುಂ, ವುುನ್ನಂ ಪರಶುರಾವುನೀ ನೆಲದೊಳುಳ್ಳರಸುವುಕ್ಕಳೆಲ್ಲರುವುನಿರ್ಪತ್ತೊಂದು ಸೂಳ್ವರೆಗಂ ಪಿಳ್ಳೆಪೆಸರಿಲ್ಲದಂತು ಕೊಂದನವಂದಿರ ನೂರನೆತ್ತರೊಳ್ ತೀವಿ ತನ್ನ ತಾಯ್ಗಿ ನೀರಿಱಿಯವುಂ ತಂದೆಗೆ ನೀರ್ಗಡಲುವೊಂದುವಾಡಿದ ಸ್ಯವುನ್ತಪಂಚಕಂಗಳೆಂಬ ಪೆಸರ ಪೆರ್ವಡುಗಳೊಳಗೆ ವುೂಡಿ ವುಳ್ಯಾಡಿ ನೋಡಿಯುಂ, ನಾಲ್ವತ್ತೆಣ್ಣಾವುದ ಕುರುಕ್ಷೇತ್ರದೊಳೆಲ್ಲಿಯುಂ ದುರ್ಯೋಧನನಱಸಿ ಕಾಣದೆ ವಿಸ್ಮಯಂಬಟ್ಟವನ ಬಿಟ್ಟ ಬೀಡಿಂಗೆ ನಿಟ್ಟುರಿಗೊಂಡು ॥

ಚಂ ॥ ಜತುಗೃಹದೊಳ್ಸಡಲ್ಬಗೆದನೆಲ್ಲಿದನಿಕ್ಕಿ ವಿಷಾನ್ನಮಂ ಮುರು
ತ್ತುತನನುಜಾಯದಿಂ ಕೊಲಲೊಡರ್ಚಿದನೆಲ್ಲಿದನಾದುರೋದರ ।
ವ್ಯತಿಕರದೊಳ್ಪರಾಭವಿಸಿ ಕೃಷ್ಣೆಯನುಯ್ದವರಾಧಿಯೆಲ್ಲಿದಂ
ಕೃತಕಸಭಾಪ್ರವೇಕರನೆಲ್ಲಿದನೆಲ್ಲಿದನೋ ನುಯೋಧನಂ ॥ 86 ॥

ಮ.ಸ್ರ॥ ಧೃತರಾಷ್ಟ್ರಪತ್ಯನಬ್ಜಪ್ರಿಯಸುತಸಖವೇಕಾದಶಾಕ್ಷೋಹಿಣೀಕಂ
ಕೃತಕದ್ಯೂತಸ್ವನಾಥೀಕೃತಯವಸುತಭೀಮಾರ್ಜುನಂ! ದ್ರೋಣಭೀಷ್ಮೋ।
ಚಿತವಾಕ್ಯದ್ವೈಷಿ! ಕೃಷ್ಣಂಬರಕಬರಿಹರಂ! ಕೋಕತೀವಾಗ್ನಿದಗ್ಧಂ
ಸುತಶೋಕಾಕ್ರಾಂತನೆಲ್ಲರ್ದನೊ! ನೃಪತಿಲಕಂ ನಿವ್ಮ ರಾಜಾಧಿರಾಜಂ। 87 ॥

ಕಂ ॥ ಭರತಕುಲೇಂದುಕಲಂಕಂ
ಭರತಾನ್ವಯರಾಜಭವನರಾಜಕಪೋತಂ ।
ಕುರುಕೇತುವೆಲ್ಲಿದಂ ತ
ತ್ಕುರುಕುಲಲಯಕೇತು ಭೀಮಸೇನಂ ಬಂದಂ ॥ 88 ॥

ವ ॥ ಎಂದು ಶಿಬಿರರಕ್ಷಕರ ಗರ್ಭವಮುಂ ಶಿಬಿರನಿತಂಬಿನಿಯರ ಗರ್ಭವಮುಂ ಒಡ
ನೊಡನೆ ಗಳಯಿಸೆ ಸಿಂಹಗರ್ಜನೆಯಿಂ ಗರ್ಜಿಸಿ ಕುರುರಾಜದ್ವಾರೋಪಾಂತವನೆಯ್ದಿ
ವಂದಾಗಳ್ ॥

ಕಂ ॥ ಆರಾರ್ತತ್ರ್ ನವುರದೊ
ಳಾರಾರೊಳರೆನ್ನ ನೂನುಗಳ್ಗೀನಾಯ್ತಿಂ ।
ದಾರಯ್ಯರ್ ನೃಪಭವನ
ದ್ವಾರದೊಳಿರ್ದಹಿತಜನನಿ ಪರಿಜನಸಹಿತಂ ॥ 89 ॥

ಮ. ವಿ॥ ದೆಸೆಯಂ ತೆಕ್ಕನೆ ತೀವಿ ಪರ್ಬಿ ಗಗನಂ ಕೂಡಿಟ್ಟವೋಲ್ನಿಳ್ದಗು
ರ್ವಿಸೆ ಬಾಹುಸ್ಫಮಿತಾಭ್ರವಿಭ್ರಮಗದಂ ಕಾರವ್ಯರಂ ತಿಂದರ ।
ಕ್ಕಸನೋ! ಈತನೊ ಭೀಮಸೇನನೆನುತುಂ ಗಾಂಧಾರಿ ಬಳ್ಕತ್ತೆ ಪೆ
ಕ್ಕಸಮುತ್ತಳ್ಬರೆ ಕಂಡು ಪಾಂಡವಬಲಪ್ರಾಕಾರನಾಕಾರಮಂ ॥ 90 ॥

ವ ॥ ಆಂತು ಕಂಡು ಬಿಲ್ಲುಂಬೆಱಗುವನಾಗಿ ॥

ಕಂ ॥ ಎನ್ನಾತ್ಮಜರಂ ನೂರ್ವರು
ಮುಂ ನುಂಗಿದ ತೆಱದೆ ನುಂಗೆ ಬಂದಂ ಭರದಿಂ ।
ಪನ್ನಗಕೇತನನುಮನಿಂ
ತನ್ನಯವೊಯ್ತಿಂದು ಪಿರಿದುಮುವ್ಮಳಿಸುತ್ತುಂ ॥ 91 ॥

ವ ॥ ಎಂಬನ್ನೆಗಂ ವಿಜೃಂಭಿಸಿ ಕಯ್ವಿಸರದಿಂ ಗುರುಜನಕ್ಕೆ ನವುಚಿತಾಚಾರಮುಂ
ಮೆಱೆದು ಭೀಮಂ ಭೀಮನಾದಮಂ ನೆಗಟ್ಟಿ ॥

ಧೃತರಾಷ್ಟ್ರಕ್ಷಿತಿಪಾಲ ಕೇಳ್! ಜನನಿ ಕೇಳ್ ಗಾಂಧಾರಿ! ಕೊಂದೆಂ ಭವ
ತ್ಪುತ್ರರಂ ನೂರ್ವರುಮಂ ಗದಾಪ್ರಹತಿಯಿಂ! ದುಶ್ಶಾಸನೋರಸ್ಸ್ಥಳ
ಕ್ಷತಜಾಸೃಗ್ಜಲಸೇಕದಿಂ ತಣಿಪಿದೆಂ ಕೋಪಾಗ್ನಿಯಂ! ಬಂದೆನು
ದ್ಧತನಂ ಕೋಪಕೃತಾಪರಾಧಕತನಂ ನುಂಗಲ್ಕೆ ಪಿಂಗಾಕ್ಷನಂ ॥ 92 ॥

ವ ॥ ಎಂಬುದುಂ ಗಾಂಧಾರಿ ಜರಾಸಂಧಾರಿಗೆ ಬದ್ಧಾಂಜಲಿಯಾಗಿ ॥

ಕಂ ॥ ಅನಿಬರ್ತನಯರ ದುಃಖವ
ನನುಭವಿಸಿಯುಮಣವೆಂ ಪೋಗವೆವ್ಮಸುಗಳ್ ನೀ ।
ನಿನಿತನೆಮಗೊಳ್ಳಕೆಯ್! ಭೀ ।
ವಂ ನುಂಗು! ಮುನ್ನೆವ್ಮನೆವ್ಮ ಸುತನಂ ಬಲಿಯಂ ॥ 93 ॥

ವ ॥ ಎಂಬುದುಮಂಧರಾಜಂ ಪವನತನೂಜಜಂಗಭಿವುಖನಾಗಿ ॥

ಕಂ ॥ ಕುರುಸುತ! ಕುರುಕುಲವರ್ಧನ!
ಕುರುಭೂತಳವಿಪಿನದೊಳಗೆ ಕುರುಶಾರ್ದೂಲಂ ।
ದೊರೆಕೊಳೆ ನಿನ್ನಯ ಬಲಿಯಂ
ಪೊರಳ್ಚಿ ಕೊಲಲೆಂದು ಬಂದ ಭೀಮುಕಿರಾತಂ! ॥ 94 ॥

ವ ॥ ಎಂಬುದುಮನ್ನೆಗಮಿತ್ತ ತ್ವರಿತಗತಿಯಿಂ ವಿಂಧ್ಯಕನೆಂಬ ಕಿರಾತದೂತಂ ಬಂದು ದೂರಪ್ರಣತನಾಗಿ—"ದೇವಾ! ದುರ್ಯೋಧನನಂ ಕುರುಕ್ಷೇತ್ರದೊಳೆಲ್ಲಿಯುಮಱಿಸಿಯುಂ ರೂಪುಗಾಣದೆ ವಂಧ್ಯಂದಿನಸಮಯದೊಳ್ ತಪನತಾಪದಿಂ ತೃಷ್ಣಾಭಿಭೂತನಾಗಿ ಸಕಲಜಗತ್ಪಾವನಕಾರಿಯುಪ್ಪ ವೈಶಂಪಾಯನಸರೋವರಕ್ಕೆ ನೀರ್ಗುಡಿಯಲೆಂದು ಪೋಗಿ ಹಲಕುಲಿಶಕಮಲಶಂಖಚಕ್ರಲಾಂಛನಮಪ್ಪಡಿವಜ್ರೆಯಂ ಕೊಳೆದ ತಡಿಯೊಳ್ ಕಂಡೆಂ! ಅಲ್ಲಿ ಪೊಱಮಟ್ಟ ಪಜ್ಜೆಯಲ್ಲದೆ ಪೊಕ್ಕ ಪಜ್ಜೆಯಂ ಕಾಣೆಂ." ಎನೆ; ಪವನತನಯನವನನೊಡಗೊಂಡು ಬಂದು ಧರ್ಮತನಯಾದಿಗಳ್ಗೆ ತದ್ವೃತ್ತಾಂತಮನೆಲ್ಲಮನಱಿಪೆ; ಯುಕ್ತಿಯುಕ್ತವಪ್ಪ ದೂತನ ಮಾತಂ ಸಕಲಜಗದುತ್ಪತ್ತಿಸ್ಥಿತಿಪ್ರಳಯಭಾವನನೆನಿಸಿದ ವಿಷ್ಣು ಕೇಳ್ದು ಮನದೊಳ್ ನಿಶ್ಚಯಿಸಿ ॥

ಮ. ವಿ॥ ದ್ಯೂನದೀಜಂ ಕುಡೆ ತೋಯಮಂತ್ರಬಲದಿಂ ಪೊಕ್ಕಿರ್ದಪಂ ಕಾಲವಂ
ಚನೆಗೆಯ್ಯಲ್ತ್ತಳನಂ ಹಲಾಯುಧಕೃಪಾಶ್ವತ್ಥಾಮರುಂ ನಾಗಕೇ ।
ತನನೊಳ್ನಾಳೆಯೆ ಕೂಡಿ ಬರ್ಪರವರಿನ್ನುಂ ಬಾರದನ್ನಂ ಸುಯೋ
ಧನನಂ ಮುನ್ನಮೆ ಕೈಯ್ಗೆ ಮಾಱುವುದು! ಬಲಿಕ್ಕಾರ್ಗಂ ಗೆಲಲ್ಬಾರ್ಕುಮೇ ॥

ವ ॥ ಅದಱಿಂದೀಗಳೆ ಪೋಗಿ ಪೂಗೊಳನಂ ಮುಟ್ಟಿ ದುರ್ಯೋಧನನಂ ಪೊಱಮಡಿಸಿ ಪಗೆಯಂ ಪಱಿವಡಿಪುದೆಂದರಿಂದನಾಭಂ ಧರ್ಮನಂದನಾದಿಗಳನೊಡಗೊಂಡು ಬಂದು ಕಿರಾತದೂತಸಂಸೂಚಿತವಪ್ಪ ಹಲಕುಲಿಶಕಮಲಶಂಖಚಕ್ರಾಂಕಿತಲಕ್ಷಣಮಪ್ಪಡಿವಜ್ರೆಯಂ ಕಂಡು, ಸುಯೋಧನನಡಿವಜ್ರೆಯಪ್ಪುದಂ ತಪ್ಪಿಲ್ಲದಱಿದು ನಿಸ್ಸಂದೇಹಚಿತ್ತರಾಗಿ ॥

ಕಂ ॥ ಭರತಜರೊಳ್ಮನ್ನಿಲ್ಲದ
ಪರಿಭಾಷೆಯನುಂಟುಮಾಡಿ ಪೆಱಗಡಿಯಿಟ್ಟಂ ।
ಕುರುರಾಜನೆಂದು ಲಜ್ಜಾ
ಭರದಿಂದಂ ತಲೆಯನೆಱಗಿದಂ ಧರ್ಮಸುತಂ ॥ 96 ॥

ವ ॥ ಎಂದು ದುರ್ಯೋಧನನ ಮನದ ಧೈರ್ಯಕ್ಷತಿಗೆ ಮನಃಕ್ಷತನಾಗಿ ಸಿಗ್ಗಾಗಿ ತಲೆಯಂ ಬಾಗಿ ಧರ್ಮನಂದನನಿರೆ ॥

ಮ. ವಿ॥ ವಿರುವತ್ಸಾರಸರಾಜಹಂಸರವದಿಂದೇವಂದಿರೇ! ಬನ್ನಿಮಿಂ
ತಿರಿವೆಂದಾದರಿಪಂತುಟಾಯ್ತು ಪವನೋದ್ಭೂತೋತ್ತರಂಗಾಂಬುವಿಂ ।
ತರದಿಂ ಕಾಲ್ಗಳುಪಂತುಟಾಯ್ತು ವಿಕಚತ್ಪಂಕೇಜದಿಂ ಪಂಕಜಾ
ಕರಮರ್ಘ್ಯಂಗುಡುವಂತುಟಾಯ್ತು ನಿಲಜಂಗಭ್ಯಾಗತಪ್ರೀತಿಯಿಂ ॥ 97 ॥

ಕಂ ॥ ಭೂವಿನೆ ಪೋಲ್ತುದು ನಾಳಂ
ಕಾವನೆ ಕರ್ಣಿಕೆಯೆ ಕಳಕವನೆ ವರಕತಪ ।
ತ್ರಾವಳಿವಿಳಸಿತದಿಂ ಜಲ
ದೇವಿಯ ಪಿಂಛಾತಪತ್ರವನೆ ಕತಪತ್ರಂ ॥ 98 ॥

ಕಡೆಯ ದಳಂಗಳೆ ವಜ್ರಂ
ನಡುವಣ ಕರ್ಣಿಕೆಯೆ ಕೇವಣಂ ಕೇವಣದೊಳ್ ।
ತೊಡರ್ದಳಿ ನೀಲದ ಪರಲೆನೆ
ವ್ಯಡರಿಪುವುದ್ರಿಕೆವೊಲಾಯ್ತು ಕನಕಾಂಬುರುಹಂ ॥ 99 ॥

ವರಾಜಾಂದೋಳಿತಜಂಬೂ
ತರುಶಾಖಾಶೋಕಕಿಸಲಯಂ ವಿಳವಿಳರು ।
ತ್ತಿರೆ ಸರದೊಳ್ತೋಲ್ಕೆಂ
ಕರೆವವೊಲಾಯ್ತು ನಿಲಜಂಗೆ ದುರ್ಯೋಧನನಂ ॥ 100 ॥

ಭವದಹಿತನಿಲ್ಲಿದಂ ಕಾ
ರವಾರಿ ನೋಡೆಂದು ಮೂಡಿ ಮುಱಿಕ್ಕಿಡಿಯೆ ತೋ ।
ರ್ಪವೊಲಲ್ಲಿ ಮೂಡಿ ಮುಱಿಕ್ಕ
ಡುವ ವಿಹಗಾವಳಿಗಳೇಂ ಮನಂಗೊಳಿಸದುವೋ ॥ 101 ॥

ವಿಾಂಗುಲಿಗವಕ್ಕಿ ಕೊಳನೊಳ್
ವಿಾಂಗೆಱಗುವ ತೆಱದಿನೆಱಗಿ ನೋಡಿಲ್ಲಿರ್ದಂ ।
ಪಿಂಗಾಕ್ಷನೆಂದು ಪವನನು
ತ್ತಂಗಿರ್ಪೆಡೆದೋರ್ಪ ತೆಱದಿನೇಂ ಸೊಗಯಿಸಿತೋ ॥ 102 ॥

ವುರುತಾತ್ಮಜ ನಿಜರಿಪು ವಿ
ಯ್ಗರೆದಿರ್ದಪನಿಲ್ಲಿ ನೋಡು ಕೊಳಿದೊಳಗೆಂಬಂ ।
ತಿರೆ ಪೊಳೆದು ತೋರ್ಪ ಜಲಚರ
ಪರಿಕರವುಲ್ಲಿಪುದುವು ತಾವಿ ದುರ್ಯೋಧನನಂ ॥ 103 ॥

ವಂ. ವಿ॥ ಬಳಗಾದಂ ಪಗೆವಂ ನರೋವರದೊಳರ್ದಿನ್ನೆತ್ತ ಪೋಪಂ ನರೋ
ಜಲವುಂ ವುುಂ ತವೆ ಪೀರ್ದ ಪೀರ್ವೆನಸುಹೃದ್ರಕ್ತಾಂಬುವಂ ತೋರ್ವೆನೆ ।
ನ್ನಳವಂ ವುತ್ಪತಿಗೆಂದು ಸಂತಸದೆ ಬಾಹಾಸ್ಫಾಲನಂಗೆಯ್ದು ದಿ
ಗ್ವಲಯಂ ಮಾರ್ದನಿಗೆಯ್ವವೋಲ್ ಗಜಲ್ದಂ ಚಾಳುಕ್ಯಕಂಠೀರವಂ। 104 ॥

ಇಂತಿದು ಭೀವುಸೇನಾಡಂಬರವರ್ಣನಂ

ಷಷ್ಠಾಶ್ವಾಸಂ.

ಕಂ ॥ ಶ್ರೀರವುಣೀರವುಣಂ ಪೃಥು
ಳೋರಸ್ಸ್ಥಳನಹಿತಕುಂಭಿಕುಂಭಸ್ಥಳನಿ ।
ರ್ದಾರಣಪಟುಭುಜದಂಡಂ
ದಾರುಣಕೋಪಂ ಪ್ರತಾಪಿ ಸಾಹಸಭೀವುಂ ॥ 105 ॥

ವ ॥ ಆಗಳಾಕೊಳಿನಂ ಬಳಸಿ ಬಂದು ನಿರ್ಭರವಾಗಿ ಬೊಬ್ಬಿಲ್ದಾರ್ದು ಭರಂಗೆಯ್ದು ಪಲತೆಱದ ಪಱೆಗಳಂ ಪೊಯಿಸ್ಸಿಯುಂ, ಕಂಖುಂಗಳಂ ಪೂರೈಸಿಯುಂ, ಭೇರಿಗಳಂ ತಾಡಿಸಿಯುಂ, ಕಾಹಳೆಗಳನೊತ್ತಿಸಿಯುಂ, ಪಂಚವುಹಾವಾದ್ಯಂಗಳಂ ಬಾಜಿಸಿಯುಂ ಎಂತುಂ ಪೊಱವುಡಿಸಲಾಱದೆ ಸುಯೋಧನನಂ ಪೆಸಗೊಂಡು ನಕುಲನಾಸ್ಫೋಟಿಸಿ ॥

ಕಂ ॥ ಅಂಕದ ಕಲಿ! ಕುರುವಂಶಕ
ಶಾಂಕನೆ! ದುರ್ಯೋಧನಾಂಕನೆನೆ ನೆಗಳ್ದಿಯಶಃ ।
ಪಂಕದೊಳವಿಸಾರೋವರ
ಪಂಕದೊಳಂ ನೀನೆ ನಿನ್ನನಿಂತರ್ದುವುದೇ! ॥ 106 ॥

ಇಱುವ ಬೆಡಂಗನೊಳಿಱಿಯಲ್
ನೆಱೆಯೆಯ್ಯೆ! ನಿನಗಾನೆ ಸಾಲ್ವೆನಿಕ್ಕತುಳಕ್ಕಂ ।
ನೆಱೆದಿರ್ದೆನಿರದೆ ಕೊಳನಂ
ಪೊಱವುಡು! ತೋಱುದಪೆನೆನ್ನ ಕೊಂತದ ಸವಿಯಂ ॥ 107 ॥

ವ ॥ ಎನೆ ಸಹದೇವನುತ್ಕಟಿಸಿ ॥

ಕಂ ॥ ಎಂದಿಂಗೆ ನಿನಗೆ ಸಾವಿ
ಲ್ಲೆಂದಿರ್ಪಯ್ ನಿನ್ನ ವುನದೊಳಿನ್ನೆವರಂ ನೀ ।
ನೊಂದಂ ಬಗೆದೊಡೆ ವಿಧಿ ತಾ
ನೊಂದಂ ಬಗೆದತ್ತು ಸಕಲಕುರುಕುಲಕೇತೂ! ॥ 108 ॥

ಜವನ ಮಗನಿರ್ಕೆ! ಸುಭಟರ
ಜವನಿರ್ಕೆ! ಸಿತಾಕ್ಷನಿರ್ಕೆ! ನಕುಲನುಮಿರ್ಕ ।
ಣ್ಮುವೊಡೆನ್ನ ಬಾಳ ಸವಿಯಂ
ಸವಿನಯದಿಂ ನೋಡಿ ನೀರ ಸವಿಯಂ ನೋಡಾ! ॥ 109 ॥

ವ ॥ ಎಂಬುದುಮರ್ಜುನಂ ವಿಜೃಂಭಿಸಿ ॥

ಕಂ ॥ ಮಾನಧನನೆನಿಪ ನಿನ್ನಭಿ
ಮಾನಕ್ಷತಿಮಾಡಿದೈ ಸುಯೋಧನ ನೀಂ! ಮ ।
ತ್ತೀನೀರೊಳ್ ಕೆಸರಿರ್ಕುಂ
ಮಿಾನಿರ್ಕುಂ ಕಪ್ಪೆಯಿರ್ಕುಮಿರ್ದರೆ ಗಂಡರ್ ॥ 110 ॥

ಮಾನಧನ! ನಿನ್ನ ಸುತನೆ
ನ್ಯಾನುಜಕತಕಕ್ಕೆ ಕೇತುವಲ್ಲದೆ ಗಂಗಾ ।
ಸೂನು ವೊದಲಾದ ಪಲರ್ಗಂ
ನೀನೋರ್ವನೆ ಕೇತುವಾದೆ! ಕುರುಕುಲಕೇತೂ ॥ 111 ॥

ಕುವರಂಕರಾವನೃಪನೊಳ್
ಸವರಂ ನಿನಗರಿದು ತಕ್ಕುದೆನಗಂ ನಿನಗಂ ।
ಸವರಂ ನಿನ್ನಂ ನುಂಗ
ಲ್ಕವೋಘಕರವಿರ್ದವಿವಲಿ ಸವಿಯಂ ನೋಡಾ ॥ 112 ॥

ವ ॥ ಎಂಬುದುಂ ಧೃತರಾಷ್ಟ್ರನಂದನಂ ಮುನ್ನ ಗೆಯ್ದಧರ್ಮಮಂ ನೆನೆಯುದೆ ಕುಲ
ಕ್ರಮಯುಕ್ತಮುಪ್ಪ ನಿರ್ಮಲಕ್ಷತ್ರಧರ್ಮಮನೆ ಬಗೆದು ಧರ್ಮನಂದನನಿಂತೆಂದಂ ॥

ಮ. ವಿ॥ ಭರತಾನ್ವಯದೊಳಂದಿನಿಂದಿನೆಡೆಯೊಳಾಪತ್ತನೊಳ್ ಬಿದ್ದಮ
ತ್ಸರದಿಂದೆಮ್ಮನಕಾರಣಂ ಕದಡಿದೈ! ಸಾವೈದಿದೈ! ನಷ್ಟಸೋ ।
ದರಮಾಯಿತ್ತೆನಗಂ ಸ್ವಗೋತ್ರವಧೆಯಪ್ಪಪಾತಕಂ ಕಾರವೇ
ಶ್ವರ! ನೀಂ ಸಂಧಿಗೊಡಂಬಡಿನ್ನು! ಕೊಳನಂ ಪೊಕ್ಕಿರ್ದುದೇಂ ತಕ್ಕುದೇ ॥

ವ॥ ಎಂಬುದುವಿಾ ಬೂತೆನ್ನ ಸರಂಗೇಳ್ದೊಡಲ್ಲದೆ ಪೋಲುವಮಡುವನಲ್ಲಂ, ಇವಂಗಾನೆ
ಸಾಲ್ವೆನೆಂದು ಭೀಮಸೇನನುದ್ದಾಮಕೋಪಾಟೋಪಚಿತ್ತದಿಂ ಬದ್ಧಭ್ರುಕುಟಿಯಾಗಿ ॥

ಕಂ ॥ ಬಳವದ್ವಿಗ್ರಹದೊಳ್ನೀ
ರೊಳಗಿರ್ದೈ! ಮುನ್ನೆ ನಿನ್ನ ಕುಲಮೆಲ್ಲಮನಾಂ ।
ಮುಳಿದಿಲ್ಲಿದುಂ ಪಿಂದನೆ ಬರೆ
ಕೊಳದೊಳಗುಳ್ದಿದುರ್ ಮರುಳೆ! ಬರ್ದುಕಲ್ಬಗೆವಾ ॥ 114 ॥

ಭವದನುಜನರುಣಜಲಮಂ
ನವಿನೋಡಿದೆನಿಂತು ನಿನ್ನ ಬಲಜಲನಿಧಿಯಂ ।
ನವಿನೋಡಿದೆನೀ ಕೊಳನಂ
ತವೆ ಪೀರ್ದು ಬಲ್ಕೆ ನಿನ್ನ ನವಿಯಂ ನೋಲ್ಪೆಂ ॥ 115 ॥

ಸ್ವರಮಂ ಕೇಳಲ್ಕೆನ್ನು
ಗ್ರರೂಪಮಂ ನಿಂದು ನೋಡಲಣ್ಮದೆ ನವುರಾ ।
ಕರಮಂ ಬಿಸುಟ್ಟು ಕವುಲಾ
ಕರಮುಂ ಪೊಕ್ಕೆಲವೊ ವುರುಳೆ! ಬರ್ದುಕಲ್ಬಗೆವಾ ॥ 116 ॥

ವು. ಸ್ರ ॥

ಜಲದೊಳ್ ವಿಾನಿರ್ಪವೋಲ್ನೀಂ ಕೊಳದೊಳೆ ವುಟ್ಟುಗಿರ್ದಕ್ಕುಟಾ! ಕೋಡ ನೇಡಿಂ
ಗೊಳಗಾದ್ಯೆ! ನಿನ್ನ ದುರ್ಯೋಧನವೆಸಗಿದು ಲಜ್ಜಾಕರಂ ತೋಲ್ದೆ! ನಿ ।
ನ್ನಳವಂ ಚಿಃ! ನತೊಡೇಂ ಪುಟ್ಟರೆ! ಪೊಱವಡು ನೀಂ! ಕೈದುಗೊಳ್ಳಾರವೇಂದ್ರಾ
ಚಲವಜ್ರಂ ಬಂದನೀತಂ ಕುರುಕುಲವುಥನೋದ್ಭೀಕರಂ ಭೀವುಸೇನಂ ॥ 117 ॥

ವು.ವಿ॥ ಹರಿ ಸಂಧಾನಕ್ಕೆ ವಂದಂದವಗಡಿಸಿದಹಂಕಾರವೆಲ್ಲಿತ್ತೊ! ಕೃಷ್ಣಂ
ಬರಕೇಶಾಕೃಷ್ಟಿಯಂ ಪಾಡಿಸಿದ ವುದವುದೆಲ್ಲಿತ್ತೊ! ಕಾಂತೇಯರಂ ವು ।
ಚ್ಚರದಿಂ ಕಾಂತಾರದೊಳ್ತಜ್ಜಿನೆ ತಿರುಘಿದ ಸೊಕ್ಕೀಗಳೇನಾದುದೆಂದಾ
ಕುರುವಂಶಾಧೀಶನಂ ವೂದಲಿಸಿದನಥಟಂ ಭೀವನುದ್ವಾವಭೀವಂ॥ 118 ॥

ವ ॥ ಅಂತು ವುಟ್ಟಿ ವೂದಲಿಸಿಯುವೆಂತುಂ ಪೊಱವಡಿಸಲಾಱದೆ ॥

ವು. ಸ್ರ ॥

ಎನಿತುಂ ಪೊಕ್ಕಿರ್ದಯ್ಯೆ! ನೀಲ ಪೊಱವಡು! ಕೊಳದಿಂ ದ್ರೌಪದೀ ದ್ರೋಹ! ದುಶ್ಯಾ
ಸನದುಷ್ಪಜ್ಯೇಷ್ಠ! ಭೀಷ್ಮಪ್ರವುಖನಿಖಿಲಬಂಧುಕ್ಷಯೋತ್ಪನ್ನದುಃಖ ।
ಧ್ವನಿವಾರಿಚ್ಛಿನ್ನಧೈರ್ಯದ್ರುವು! ಯವುಸುತನಿಷ್ಕಾರಣದ್ವೇಷಿ! ಭೀವು
ಧ್ವನಿಯಂ ಕೇಳ್ದನ್ನವಿರ್ದ್ಯೆ! ಕುರುಕುಲವಿಲಯೋತ್ಪಾತನೋತ್ಪಾತಕೇತೂ ॥

ವ ॥ ಎಂದು ವುತ್ತವಿರದೆ ॥

ಕಂ ॥ ಒಡೆಯಲಜಾಂಡಂ ಕುಲಗಿರಿ
ಕೆಡೆಯಲ್ ಪಿಲ್ಲಿಯಲ್ಕೆ ಧಾತ್ರಿ ದಿವಿಜರ್ನಡುಗ ।
ಲ್ಕೊಡರಿಸುವಿನೆಗ ಜಟಾಸುರ
ಹಿಡಿಂಬಬಕವೈರಿ ಸಿಂಹನಾದಂಗೆಯ್ದುಂ ॥ 120 ॥

ವ ॥ ಆ ಪ್ರಸ್ತಾವದೊಳ್ ॥

ಕಂ ॥ ಆನಿಲತನೂಜನ ಸಿಂಹ
ಧ್ವನಿಯಂ ಕೇಳ್ದಲ್ಲಿ ತತ್ಪರೋವರದೆರ್ದೆ ಪ ।
ವ್ವನೆ ಪಾಱುವಂತೆ ಪಾಱಿದು
ವನಾಕುಳಂ ಕೊಳದೊಳರ್ದ ತದ್ವಿಹಗಕುಳಂ ॥ 121 ॥

ಅರೆಬೆಂದುವು ತಾವರೆ ಖಗ
ಮುರೆಬೆಂದುವು ಭೀಮಕೋಪಶಿಖಿ ಮುಟ್ಟಿ ನರೋ ।
ವರದ ಮಳಲ್ಪುರಿಗಡಲಿಗೆ
ಪುರಿದ ಮಳಲ್ಕ್ಕಯ್ವ ತೆಱದೆ ಕಾಯ್ದುತ್ತಿತ್ತಂ ॥ 122 ॥

ಬಂದಂ ಬಕಾಂತಕಂ! ಪೋ!
ಕೊಂದಂ ಬಕವೆಸರ್ಗೆ ಮುನಿದು ನಮ್ಮುಮನಿನ್ನೆಂ ।
ಟುಂದದೊಳೆ ಪಾಱಿ ಪೋದುವು
ನಿಂದಿರದುರವಣಿಸಿ ಬಕನಿಕಾಯಕವುದಱೊಳ್ ॥ 123 ॥

ಕುಪಿತವುರಂತ್ಸುತರವಕ
ಳ್ಕ ಪಯಶ್ಚರನಿಕರಸಂಭ್ರವೋಲ್ಲಹರಿಕೆ ಭಾ ।
ವಿಪೊಡೆ ಜನಕ್ಕೆ ಕೊಳಂ ಕಿ
ಱ್ತು ಪಾಱುವಂತಾಯ್ತು ಕವುಲಜಾಂಡಂಬರೆಗಂ ॥ 124 ॥

ಆಳುರ್ದು ಕೊಳೆ ಭೀಮಕೋಪಾ
ನಳನೆನವೊರ್ಮೆಯ್ದಿಟ್ಟ ಜಲದವೋಲ್ಮಱಿಯಿಗಿದುದಾ ।
ಕೊಳದ ಜಲವೆಂಯ್ದೆ ಕಾಯ್ದೆನ
ರೊಳೆ ಕೂಱುತ್ತಿದಿವಂತೆ ಕುದಿದುವನಿಮಿಷತತಿಗಳ್ ॥ 125 ॥

ವ ॥ ಅಂತು ಜಲಚರಜೀವರಾಶಿಗಳೆಲ್ಲವನುಂಗೊಳೆ ಗೋಳುಂಡೆಗೊಳೆ ಕೂಱುತ್ತಿರ್ದಿಗೊಳೆ ಮಹೋತ್ತುಂಗಸಿಂಹನಾದಂಗೆಯ್ಯೆ ॥

ಕಂ ॥ ಆರವವುಂ ನಿರ್ಜಿತಕಂ
ಠೀರವರವವುಂ ನಿರಸ್ತ ಘನರವವುಂ ಕೋ ।
ಪಾರುಣನೇತ್ರಂ ಕೇಳ್ವ
ನೀರೊಳಗಿರ್ದಂ ಜೆವುರ್ತನುರಗಪತಾಕಂ ॥ 126 ॥

ವ ॥ ಅಂತು ಜೆವುರ್ತುಮ್ಮಳಿಸಿ ಸೈರಿಸಲಾಱದೆ ಜಲಮಂತ್ರವುನೇನುವುಂ ಬಗೆಯದೆ ಕೋಪೋದ್ರೇಕವುನೆ ಬಗೆದು ॥

ಕಂ ॥ ಸಲಿಲಸ್ತಂಭನವಿದ್ಯಾ
ಬಲವುನಪೇಕ್ಷಿಸಿದನೆನ್ನದುರಗಪತಾಕಂ ।
ಬಲಹಾನಿಯಾಗೆ ಕೊಳದೊಳ್
ಪುಲಿಯುಗಿರ್ದಪನೆಂದು ನಗಲ್! ಕೂರದರೆನ್ನಂ ॥ 127 ॥

ಕಲ್ಯಂ ಸತ್ತಿಂಬಲ್ಲಿಯವು
ಖಲ್ಯಂ ಕೊಳೆದೊಳಗೆ ಪೊಕ್ಕು ಮೆಯ್ಗರೆದೈ! ಚಿಃ ।
ಖಲ್ಯನೆನೆ ಬಾರ್ತೆಗೆಟ್ಟುದ
ಮೂಲ್ಯಯುಶೋರತ್ನಮೆಂಬುದಂ ಮಾಸುವೆನೇ ॥ 128 ॥

ತೃಣವಲ್ಲ ಕ್ಷುಜ್ಜೀವಿತರ
ಕ್ಷಣಾರ್ಥದಿಂ ಕುಲದ ಚಲದ ಬಾಗವುನಾಂತುಂ ।
ಗುಣಹಾನಿಯಾಗಿ ಪುರುಷರ
ಗಣನೆಗೆ ವಂದೆನ್ನನಾನೆ ಲಘುವಾಡುವೆನೇ ॥ 129 ॥

ಮುನಿವಂ ಮೂದಲಿಸಯುವಿ
ನ್ನೆ ನಿತುಂ ಪೊಕ್ಕಿರ್ಪೆನೆಂದು ಚಿತ್ತಕ್ಷೋಭಂ ।
ತನಗಾಗೆ ಜಲಚರಕ್ಷೋ
ಭನಿನಾಥಂ ಪೊಕ್ಕು ಪೊಣ್ಮಿ ವಿಭುವಕ್ಷೋಭ್ಯಂ ॥ 130 ॥

ವ ॥ ಆಗಳಾಜಲಸ್ತಂಭವಮಂತ್ರವೆಲ್ಲಮವಿನೀತನಪ್ಪ ರಾಜಪುತ್ರನೊಳಾಳೋಚಿಸಿದ ಮಂತ್ರದಂತೆ ಪರಿಣಾಮರಮಣೀಯವಾಗದೆ ಕಿಡೆಯುಮಹಂಕಾರಂಗಿಡದೆ ॥

ಚಂ। ನಿಜಮಕುಟಸ್ಫುರನ್ಮಣಿಗಣಚ್ಛವಿಯಿಂ ಸುರಚಾಪಲೀಲೆ ಪಂ
ಕಜವನದೊಳ್ಮನಂಗೊಳಿಸೆ ತನ್ನಯ ವೀಲೆಸೆದಿರ್ದ ನೀಲನೀ ।
ರಜವನದಿಂ ಕಲುಂಗಿ ಕವುಲಾಕರದಿಂ ಪೊಲಮುಟ್ಟುನಾಗಳಂ
ಭುಜಯುಗತೋರಣಾಯಿತಗದಾಪರಿಘಂ ಫಣಿರಾಜಕೇತನಂ ॥ 131 ॥

ಕಂ ॥ ಉನ್ಮಜ್ಜತ್ಕುರುರಾಜಕ
ನನ್ಮಣಿಮಯಮಕುಟಮಣಿಗಣಾರುಣವಿಕ್ಷೇ ।
ಪೋನ್ಮಣಿಕಿರಣದ್ಯುತಿ ಜಲ
ಜನ್ಮದೆ ಬೆಳಗೆಂಪನಾಳ್ದುದಾಕವುಲವನಂ ॥ 132 ॥

ರಭಸೋನ್ನತಲಗ್ನತರಂ
ಗಭಂಗವುರುಗಳೊಳುತ್ತ ಮಾಂಗದೊಳೆತ್ತಂ ।
ಪ್ರಭವಿಸಿದುದು ಕೌರವನೂ
ರುಭಂಗವುಂ ಮಕುಟಭಂಗವುಂ ಸೂಚಿಪವೋಲ್ ॥ 133 ॥

ವು. ಸ್ರ॥ ರಸೆಯಿಂ ಕಾಲಾಗ್ನಿರುದ್ರಂ ಪೊಲಮುಡುವವೊಲಂತಾಸರೋವುದ್ಧದಿಂ ಸಾ
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಲಮಟ್ಟಿಲ್ಲಿದಂ ಭೀಮನೆಂದಿ ।
ರ್ದೆಸೆಯಂ ನೋಡುತ್ತೆ ವುತ್ತದ್ಭುತನಟನಿಪಲಾಲೋಲಕೀಲಾಕ್ಷಿವೋಲ್ ದ
ಳ್ಳಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ ॥

ವ ॥ ಅಂತು ನಿಜಭುಜಗದೆಯಂ ತೂಗುತ್ತುಮಿರ್ದ ದಂದಶೂಕಪತಾಕನ ಸೆರಗಿಲ್ಲದ ಮೆಯ್ಗಲಿತನಕ್ಕೆ ವೆಂಚ್ಚಿ ತಲೆಯಂ ತೂಗಿ ನಿಜಭುಜಪ್ರತಾಪನಿರ್ಜಿತನಿಖಿಲಭೀಮಸೇನಂ ಭೀಮಸೇನಂ ಕೌರವನಿದಿರ್ಗೆವಂದು ॥

ಕಂ ॥ ನಿನ್ನನುಜನರುಣಜಲವಂ
ಮುನ್ನಂ ತವೆ ಪೀರ್ದೊಡಂಜಿ ನೀಂ ಪುಗೆ ಕೊಳನಂ ।
ಬೆನ್ನನೆ ಬಂದಾತಂ ಶೌ
ರ್ಯೋನ್ನತನೀಯಿರ್ದನಲ್ತೆ! ಕೌರವವಲ್ಲಂ ॥ 135 ॥

ವ ॥ ಎಂದು ನೆಱನನುಂಟುಮಾಡಿ ಮೂದಲಿಸಿ ನುಡಿಯೆ ದುರ್ಯೋಧನನತಿಕ್ರೋಧಾನಲನಾಗಿ ॥

ಮ. ವಿ॥ ಯವುರಾಜಪ್ರಿಯಸೂನುಗಂ ನಿನಗವಂ ಗಾಂಡೀವಧನ್ವಂಗವಂ
ಯವಮಳ್ಳರ್ಗಂ ಪ್ರಿಯಮಪ್ಪ ಕೃಷ್ಣೆಯು ಕಚಪ್ರಾರಂಭಮಂ ಬಾಹುವಿ
ಕ್ರಮಿ ದುಶ್ಶಾಸನನೆನ್ನ ಮುಂದೆ ತಗೆವಂದಲ್ಲಿರ್ದ! ಯೀಗಂಡಗ
ರ್ವಮುಮಂದೆಲ್ಲಿಗೆ ಪೋಯ್ತು! ಷಂಡ! ನಿನಗಿಂತೀಗಂಡನಾರ್ಮಾಡಿದರ್॥136॥

ಕಂ ॥ ಅನಿಲಾತ್ಮಜ! ನಿವ್ಮಯ್ವರ
ವನಿತೆಯನಂದೋರ್ವ ನೆಲೆದೆಯಿಂದ ದುಶ್ಶಾ ।
ಸನನೆಲೆದುಕೊಂಡು ಬರಲೆಂ
ದೆನಗಖಿಳಾವನಿಯ ಲಕ್ಷ್ಮ್ಯಯಂ ಕೀರ್ತಿಯುಮಂ ॥ 137 ॥

ಅಸುರಂ ವಸುಧಾತಳವಂ
ರಸಾತಳಕ್ಕಯ್ಯೆ ಹರಿ ತರಲ್ಪೊಕ್ಕವೊಲೀ ।
ವಸುಮತಿಯನೆತ್ತೆ ನಿನ್ನಯ
ದೆಸೆಯಿಂ ತವೆ ಪೊಕ್ಕೆನಂಜಿ ಪೊಕ್ಕೆನೆ! ಕೊಳನಂ ॥ 138 ॥

ನಾಲ್ಕಡೆಗಳೆ ದಂಱೆ ಜೇರಂ
ಬಿಲ್ಕೈಯುಮಂ ತಿಂದು ರಣದೊಳಡಿಯಿಡೆ ಸೀವ್ಮು ।
ನ್ನೀಲ್ಕಿರಿಸಿ ನಿಂದುವಿಾಗಳ್
ಪೇಲ್ಕಿವೆ ಕೈಸುವರೆ ಬಿರುದುಮಂ ಜೇರವುಮಂ ॥ 139 ॥

ಪುಟ್ಟಂ ಸಟ್ಟುಗಮಂ ಕೊಂ
ಡಟ್ಟುಱಿಸಿ ಜೋನವಿಟ್ಟು ಬಂದೆಯೊ! ಗದೆಗೊಂ ।
ಡೊಟ್ಟೈಸುವಂತುಟಾದುದೆ!
ತೊಟ್ಟನೆ ಕೊಳೆ ನಿನಗೆ ಗಂಡಗರ್ವಮುಮಾಯ್ತೀ ॥ 140 ॥

ಎಸರನಿಡುವಕ್ಕಿಗರ್ಚ್ಚುವ
ಪೆಸನಂ ಕೈಗೆಱೆವ ಕಂಚುಗರ್ಚ್ಚುವ ಪೆಸನಂ ।
ಪೆಸನಕ್ಕ ಮತ್ಸ್ಯಗೃಹ ಬಾ
ಣಿಸಿಗಂಗಾರಿತ್ತರೆಲವೊ! ನಿನಗೀ ಪೆಸನಂ ॥ 141 ॥

ವ ॥ ಎಂದು ಮುಟ್ಟುಮೂದಲಿಸಿ ನುಡಿಯೆ ಭೀಮಸೇನಂ ಮುಗುಳ್ನಗೆನಕ್ಕು ॥

ಕಂ ॥ ಪಿರಿಯಣ್ಣನ ನನ್ನಿಯನಾ
ದರದಿಂ ಕಾಯಲ್ಕೆ ಪೆಱಗೆ ಬಾಣಸುಗೆಯ್ದಿಂ ,
ಕುರುವಂಕಜ! ಕೇಳ್ ನಿನ್ನೀ
ಕರಿರವಮಾಂಸದೊಳೆ ಮುರುಳ್ದಿ ಬಾಣಸುಗೆಯ್ವೆಂ ॥ 142 ॥

ವ ॥ ನೆನೆ! ಚಿತ್ರಾಂಗದನಿಂದವಂದು ನಿನಗಾದಾ ಬನ್ನವುಂ ಬನ್ನವುಂ
ನೆನೆ! ನೀಂ ಗೋಗ್ರಹಣಪ್ರಪಂಚದೊಳೆ ಮೆಯ್ವೆತ್ತಿರ್ದುದಂ ನಿನ್ನ ತ ,
ಮ್ಮನ ಕೆನ್ನೆತ್ತರನೀಂಟುವಲ್ಲಿ ಭಯದಿಂದಳ್ಕುತ್ತೆ ಪೆನ್ನಿತ್ತುದಂ
ನೆನೆ! ಪಂತಿಕ್ಕಿದ ನಿನ್ನ ಮುನ್ನಿನ ಕವಲ್ಪನ್ನಂಗಳಂ ಕೌರವಾ ॥ 143 ॥

ಜತುಗೇಹಾನಲದಾಹದಿಂ ವಿಷವಿಶೇಷಾನೀಕಗುಪ್ತನ್ನದಿಂ
ಕೃತಕದ್ಯೂತವಿನೋದದಿಂ ದ್ರುಪದಜಾಕೇಶಾಂಬರಾಕೃಷ್ಟಿಯಿಂ ।
ಧೃತರಾಷ್ಟ್ರತ್ಮಜಪಾಂಡುರಾಜಸುತರಂ ಮುನ್ನಂ ಕೊಲಲ್ಕೊಡೆ
ಗತಕಾಲಂ ಲಯಕಾಲಮಾಯ್ತು! ನಿನಗಿನ್ನಾಯ್ತುಂತ್ಯಕಾಲಂ ಗಡಾ! ॥ 144 ॥

ವ ॥ ಎಂದುರಗಧ್ವಜನಂ ಮುರ್ಮೋದ್ಘಾಟನಂಗೆಯ್ದು ಮೂದಲಿಸಿದನಿತಱೊಳೆ ನಿಂದುರಗಧ್ವಜಂ ಮುನಿದನಿಬರ ಮೊಗಮಂ ನೋಡಿ ॥

ಉಪಜಾತಿವೃತ್ತಂ ॥

ಇರಲೀಮಾದ್ರಿತನೂಜರಿರ್ಬರವರಿನ್ನೀಗೆಯ್ದುಪರ್! ಧರ್ಮಜಂ
ಪಿರಸೀಗಳ್ ಭೀಮಸೇನಂ ಪೊಣರಲಿನಿಬರುಂ ನಂದನರ್ ಮೂವರಲ್ಲೀ ।
ನರನುಂ ಬರ್ಕೆ! ಕೃತಾಂತಜಂ ಪವನಜಂ ಗಾಂಡೀವಧಾನುಷ್ಕ ಮೂ
ವರೊಳೊರ್ವಂ ಬರ್ಕೆ! ಭೀಮಂ ತೊಡರ್ದನಿಬರೊಳಂ ಬರ್ಕೆ ನೋಣ್ ಬನ್ನವಿವೆಂ

ವ ॥ ಎಂದುರಗಧ್ವಜಂ ಗರುಡಧ್ವಜನಂ ಸಂಬೋಧಿಸಿ ನುಡಿಯೆ ॥

ಕಂ ॥ ವನರುಹನಾಭಂ ದುರ್ಯೋ
ಧನನೆಂಬೊಡೆ ಕೇಳ್ದ ಭೀಮಸೇನನ ಜಡಿದಂ ।
ವಿನಯಮುನೆ ಮೆಱೆವ ದುರ್ಯೋ
ಧನನಂ ನೀನೆನ್ನ ಮುಂದೆ ನುಡಿವುದೆ ಭೀಮಾ ॥ 146 ॥

ವ ॥ ಎನೆ ಧರ್ಮನಂದನಂ ಧೃತರಾಷ್ಟ್ರನಂದನಂ ಮುನ್ನೆ ಗೆಯ್ದ ಅಧರ್ಮಮುಂ ನೆನೆಯುದೆ ನಿರ್ಮಲಕ್ಷತ್ರಧರ್ಮಮುಂ ನೆನೆದು ॥

ಕಂ ॥ ಆಗದು ನಮರಂ ಗುಣಯುತ
ನಾಗು! ಮಹಾಭೋಗಭಾಗಿ ನಿನ್ನಾಳ್ವ ಮಹೀ ।
ಭಾಗವುಮುಂ ಸಕಲಮಹೀ
ಭಾಗವುಮುಂ ನೀನೆ ಕೊಂಡು ಸುಖಮಿರಲಾಗಾ! ॥ 147 ॥

ಮ ॥ ಧರಣೀಚಕ್ರವನೊಪ್ಪುಗೊಳ್! ಬಗೆಯದಿರ್ವಿದ್ವೇಷವಂ ನಮ್ಮನೈ
ವರ ನಿನ್ನಾಳ್ವಸಕೆಯ್ಸಿಕೊಳ್ನಿನೆಯದಿರ್ಕೆಳ್ಪೊಕ್ಕಿನೊಳೊತ್ತಿಟ್ಟು ಕೊಂ ।
ದಿರದೆವ್ಮೆಂಬುದನಿಂಬುಕೆಯ್ಮನದೊಳೊಳ್ಪಿಂ ಕಾಂತಿವಿಶ್ರಾಂತಿಸೋ
ದರನೆಂಬಂತುಪಶಾಂತಿಯಂ ಕುರುಕುಲಕ್ಷ್ಮಾಪಾಲಚೂಡಾಮಣೀ ॥ 148 ॥

ಕಂ ॥ ಎನೆ ಹರಿಯೆಂದಂ ದುರ್ಯೋ
ಧನ! ಧರ್ಮತನೂಜನೊಳ್ಕಿತಂ ಪೇೞ್ದಿಪನಾ ।
ತನ ಪೇೞ್ದುದೆಸಗಿ ನೀನರ
ನನಾಗಿ ವಸುಮತಿಯನಾಳ್ವುದಾವುದು ದೋಷಂ ॥ 149 ॥

ವ ॥ ಎಂಬುದುಂ ಭೀಮಸೇನನಿಂತೆಂದಂ ॥

ಕಂ ॥ ನೀನಯ್ದು ಬೂಡದೊಳ್ಸಂ
ಧಾನಂಮಾಡಲ್ಕೆ ಪೋದೊಡೊಲ್ಲದ ಮುನ್ನೀ ।
ಮಾನಧನನೆಯ್ದಿ ನಿಜತನು
ಜಾನುಜರೊಳ್ಯಾದಿ ಸಂಧಿಯಂ ಮಾಡುವನೇ! ॥ 150 ॥

ವ ॥ ಎನೆ ದುರ್ಯೋಧನಂ ಭೀಮಸೇನನ ನುಡಿಯನೆ ಸಮರ್ಥಿಸಿ ॥

ಕಂ ॥ ಇನತನಯನ ನೇರ್ಪಿಂಗ
ರ್ಜುನನಂ ಮುಂ ಕೊಲ್ವೆನೆನ್ನ ತಮ್ಮನ ನೇರ್ಪಿಂ ।
ಗನಿಲಜನಂ ಕೊಲ್ವೆಂ ಕವು
ಲನಾಭ! ನೇರ್ಪಿಂಗೆ ನೇರ್ಪುಗೊಳ್ಳದೆ ಮಾಣೆಂ ॥ 151 ॥

ನೀಂ ಗಡ! ಮಧ್ಯಸ್ಥಂ ನುಡಿ
ವಂ ಗಡ! ಪುದುವಾಳ್ಕೆಯೆನಗಮವರ್ಗಂ ಸಂಧಾ ।
ನಂ ಗಡ! ಸಂಧಿಯ ಮಾತಂ
ಲಂಘಿಸಿದೆಂ ಮುನ್ನಮಿನ್ನೊಡಂಬಟ್ಟಪೆನೇ ॥ 152 ॥

* * * * * *

ವ ॥ ಇಂತಿವುವೊದಲಾದವಾದಪ್ರತಿವಾದಂಗಳೊಳ್ ಕಂಜನಾಭಂ ತನ್ನಂ ತೆಗೞ್ದು ನುಡಿದುದರ್ಕೆವ್ಯೆಸಿ ॥

ಕಂ ॥ ಅಂದು ಜರಾಸಂಧಂಗ
ಳ್ಕಂದುಂ ಪರಿಭವಮನೆಯ್ದಿ ಭೀಮನ ಮಱೆಯಂ ।
ಬಂದು ಪುಗೆ ಕೊಂದು ಕಾಡೆ ನೀ
ನಂದಿಂಬಱಿಕಹಹ! ದೇವ ದೊಡ್ಡಿದನಾದ್ಯೆ! ॥ 153 ॥

ಅನುಪಮಫಲದೆ ಜನಾರ್ದನ
ನೆನಲಕ್ಕುಂ ಗುರುಜನಾರ್ದನಂ ಬಂಧುಜನಾ ।
ರ್ದನನೆಂದು ಪಾಪಫಲದಿಂ
ನಿನಗೇಕೆ ಪೆಸರ್ನಿರಸ್ತ ಗುರುಬಂಧುಜನಾ! ॥ 154 ॥

ಪುರುಷಾಕಾರವುದಿಲ್ಲೈ
ಹರಿ! ನಿನ್ನೊಳ್ ಪುರುಷಕಾರವುಂ ಕಾಣೆಂ ಕಾ ।
ಪುರುಷರ ಗಣನೆಗೆ ವಂದುಂ
ನರಂಗೆ ತೇರೆಸಗಿ ಮತ್ತೆ ಪುರುಷೋತ್ತಮನೇ ॥ 155 ॥

ಬಿಲ್ದಿರುವುನಿಲ್ಲುವೆ ನೀನುಂ
ಬಿಲ್ದಿರುವುಂ ಕೊಲ್ವೆ ಕಲಹದೊಳ್ಸಾಲ್ಗುಂಗಂ ।
ದೆಲ್ದಿಡಿಯೆ ಮುನಿದಿಸುವ್ಯೆ
ಬಿಲ್ದಿನೆಯ ಕೋಡನೆರಡುನುಂ ಕಿಲ್ತೊಡುವ್ಯೆ ॥ 156 ॥

ವನವಾನವುಲಿನನಂ ಯವು
ತನಯನನುಜ್ಜ್ವಳಿಸಿ ಗೋತ್ರಧವಳನನೆನ್ನಂ ।
ಘನವುಲಿನಂವೂಡಿದೆ ಕೃ
ಷ್ಣ ನಿನ್ನವೋಲ್ ಶ್ವೇತಕೃಷ್ಣಕಾರಕರೊಳರೇ ॥ 157 ॥

ನೀನುದಧಿಯೊಳೊರ್ವನ್ನೀ
ರ್ವಾನಿಸೆಯಂ ಪಡೆದ ಗರ್ವದಿಂದಾನುಂ ಲ ।
ಕ್ಷ್ಮೀನಿಳಯನೆನೆಂದಿರ್ದಪೆ
ನಾನಲ್ಲೆಯೆನೆ! ನಿನ್ನ ಸರಿಯ ಮಹಿಮೆಯ ಪುರುಳಂ ॥ 158 ॥

ಯದುಕುಲಜಲನಿಧಿಯೊಳ್ಪು
ಟ್ಟಿದೆ ಯಮರ್ದುಂ ನಂಜುವೊಡನೆ ಪುಟ್ಟುವವೋಲಂ ।
ಕದ ಹಲಿಯುಂ ನೀನುಂ ಬಲ
ನದರ್ಕೆ ಗುಣಿಯಾದ ಮತ್ತೆ ನೀಂ ನಿರ್ಗುಣಿಯೈ ॥ 159 ॥

ವ ॥ ಎಂಬನ್ನೆಗಮಾಪ್ರಸ್ತಾವದೊಳ್ ॥

ಕಂ ॥ ಹಲಮುಸಲಪಾಣಿ ಮಧುಪಾ
ಟಲನೇತ್ರಂ ನೀಲವಸನನಾಥವಳಾಂಗಂ ।
ಬಲನೇಕಕುಂಡಲಂ ಕುರು
ಕುಲನೊಳ್ಕೂಡಲ್ಕೆ ತಾಳಲಕ್ಷ್ಮಂ ಬಂದಂ ॥ 160 ॥

ವ । ಅಂತು ಸುಯೋಧನಂಗೆ ಸೈಪು ಬರ್ಪಂತೆ ತಾನುಂ ಸಕಲಜಗತ್ಪವಿತ್ರತೀರ್ಥ ಸಲಿಲಸಂಪಾದಿತನಿಖಿಲಸಂಕರ್ಷಣಂ ಸಂಕರ್ಷಣಂ ಬಂದು ತಮ್ಮನಿಬರೊಂದಾಗಿ ಗೊಂದಣಿಸಿ ನಿಂದ ಪಾಂಡುನಂದನರುಮಂ ಏಕಾಕಿಗನಾಗಿ ಸುವಿಂಗೆ ದೇಸಿಗನಾಗಿ ನಿಂದ ಕುರುಕುಲಸ್ವಾಮಿಯುಮಂ ಕಂಡು ದೇವಕೀನಂದನನ ವದನಾರವಿಂದಮಂ ನೋಡಿ ವಿಸ್ಮಯಾಕ್ರಾಂತಚಿತ್ತನಾಗಿ ಮನದೊಳ್ಕಟ್ಟುವಡೆದು ತನಗೆಱಗಿದ ಫಣಿರಾಜಕೇತನನುಮಂ ಮನದೆಱಕದಿಂ ಪರಸಿ ಗರುಡಕೇತನನುಮಂ ಪಾಂಡವರುಮಂ ಪಗಲೊಲ್ಲದೆ ಮುಳಿದು ತಮ್ಮಯ್ವರುಮಂ ನೋಡಿ ॥

ಕಂ ॥ ಜಲರುಹನಾಭನ ನಾಭಿಗ
ಳೊಳಗುಲ್ಬದರ್ನಿನ್ನ ಮಂತ್ರಬಲದಿಂ ಬ್ರಹ್ಮರ್ ।
ಪ್ರಳಯಮನನಿಂತು ಕೌರವ
ಕುಲಕೂಡಾವುಣಿಯೊಳೇನನಾಳೋಚಿಸಿದೈ ॥ 161 ॥

ವ ॥ ಎಂದು ನುಡಿದ ಹಲಾಯುಧನ ನುಡಿಗೆ ಚಕ್ರಾಯುಧನಿಂತೆಂದಂ ॥

ಚಂ ॥ ಎನಗಭಿವಂದಿತಾರ್ಥರವಧಾರಿಸು! ಚಿತ್ತದೊಳಗ್ರಜಾತ! ನೀಂ
ಮುನಿಯದೆ ಪಾಂಡುನಂದನರ್ಗೆ ಬೂಡಮನೈದನೆ ಬೀಡೆ ಪೋಗೆ ದ್ರೋ ।
ಣನ ಧೃತರಾಷ್ಟ್ರಸಿಂಧುಸುತರೆಂದುದನಾಡದೆ ನೀವಿದಂ ಸುಯೋ
ಧನನೊಳೆ ಕೇಳ್ದ ನಂಬುವುದೆರಟ್ಟುಡಿಯಂ ಫಣಿರಾಜಕೇತನಂ ॥ 162 ॥

ಮ. ವಿ॥ ಎನೆ ದುರ್ಯೋಧನನೆಂದನೇಕೆ ಮುನಿವಿರ್! ನಿರ್ದೋಷಿಗಳ್ಪಂಡುನಂ
ದನರಾನೊಲ್ಲೆನೆ! ಮುನ್ನಮೆಂತುವಿವರೊಳ್ ಸಂಧಾನಮಂ ಪೇಳ್ವೆನೆಂ ।
ದನೆ! ಸತ್ತರ್ ತನುಜಾನುಜಾರ್ಜಲಬರುಂ ತದ್ದುಃಖಮಂ ಸೈರಿಸ
ಲ್ಕೈನಸುಂ ಬಂದಪುದೆಂದೊಡಿರ್ಕೆ ಪಗೆವರ್ ಸನ್ನದ್ಧನಾಗಿರ್ದವೆಂ ॥ 163 ॥

ಕಂ ॥ ಇವರೆನ್ನನುವರಮಂ ನೋ
ಡುವುದಲ್ಲದೆ ಬೇಱೆ ಪೆಱವು ಮಾತಿಂಗೆಡೆಯಿ ।
ಲ್ಲವಧಾರಿಪುದೆಂದೊಡೆ ಕೌ
ರವೇಂದ್ರನಂ ಮುಸಲಪಾಣಿ ಮನದೊಳ್ ಪೊಗಳ್ದಿಂ ॥ 164 ॥

ವ ॥ ಅಂತು ಪೊಗಟ್ಟು ರಾಜರಾಜನ ನಿರ್ವ್ಯಾಜಕಾರ್ಯಕ್ಕೆ ಸಂಕರ್ಷಣನಾಶ್ಚರ್ಯಂಬಟ್ಟು ಪೆಱತೇನುಮನೆನಲಱಿಯದೆ ಧರ್ಮನಂದನಾದಿಗಳ ಮೊಗಮಂನೋಡಿ– ನಿಮ್ಮಯ್ವರೊಳಾರಾಗಿಯುಮಿಂತನೊರ್ವನನೆ ಕಾದುವುದುಂ, ಕಾದಿ ಗೆಲ್ದಿಂಬಱ್ಪುದುರ್ಯೋಧನನಾಳ್ಗಿ ನೆಲನಂ! ಅತಂಗುಱ್ದ ನಾಲ್ವರ್ಬನಕೆಯುಂ ಬಾಲ್ಪೆರೆಂದು ನುಡಿಯೆ ಭೀಮಸೇನನಿದಿರ್ಗೆ ವಂದು ॥

ಕಂ ॥ ಅಲಿವುಗನಿರ್ಕರ್ಜ್ಜನನಿ
ರ್ಕಲ್ಕಿಕೆಯು ವೂದ್ರೀಸುತರ್ಕಳಿರ್ಕಲ್ಲೂವಗೆಯಂ ।
ಪಲ್ಲೂಪಡಿನಲ್ಕ್ಕೆ ಹಲಾಯುಧ!
ನೆಲ್ಲೆದಿರ್ದವೆನೆನಗೆ ತೋಲ್ಲೂ ಬಿಡು! ಕೌರವನಂ ॥ 165 ॥

ವ ॥ ಅಂತು ವುರುನ್ನಂದನಂ ರೋಹಿಣೀನಂದನಂಗೆ ನುಡಿದು ದ್ವಂದ್ವಯುದ್ಧಕ್ಕೆ ಧರ್ಮನಂದನಾದಿಗಳ ವೊಗವುಂ ನೋಡಿ ॥

ಕಂ ॥ ಪಗೆಗೆ ವೊದಲಿಗನೆ ನಾಂ! ನಿಡು
ವಗೆ ಕೌರವನಂತದರ್ಕೆ! ನೀವೆಲ್ಲಂ ದಾ ।
ಯಿಗತನವುನಿಲ್ಲಿ ತೋಲ್ಲೂ
ಲ್ತಗದೀತಂ ವುನ್ನವೆನಗೆ ದೊರೆಯಾಗಿರ್ದಂ ॥ 166 ॥

ವ ॥ ಎಂಬುದುಂ ಕುರುಕುಲಾಚಲಪ್ರಳಯಕಾಲವಜ್ರಧರನೆನಿಸಿದ ವೂರುತಿಗಂ ಪಾಂಚಾಲೀಕುಂಚಿತಕೇಶಪಾಶಾಕೃಷ್ಟಿಪಾತಕಪ್ರಧಾನನಿಹತಹತನೆನಿಸಿದ ಫಣಿರಾಜಕೇತನಂಗಂ ಧರ್ಮನಂದನಾದಿಗಳರ್ದು ಧರ್ಮಯುದ್ಧವುನೆ ನವುಕಟ್ಟಿದಾಗಳ್ ॥

ಕಂ ॥ ಕ್ರವುಗಣನೆಗೆ ತಾನುಂ ವು
ಧ್ಯವುಪಾಂಡವನಾದನಹಿತನೊಳ್ತೊಟ್ಟ ವುಹಾ ।
ನವರಕ್ಕೆ ನರಾಗ್ರಜನ
ಗ್ರಿವುಪಾಂಡವನಲ್ಲೆ ಪಗೆಗೆ ವೊದಲಪ್ಪುದಲ್ಲೂಂ ॥ 167 ॥

ವನರುಹನಾಭನ ಬಲದೇ
ವನ ಸಾಕ್ಷಿಯೊಳರ್ದು ಕೌರವೇಶ್ವರನುಂ ಭೀ ।
ವುನ ಕೈವೊಯ್ದೊಡೆ ತದ್ದೇ
ವನಿಕಾಯಂ ಪೊಗುಂದ್ರಧಟುವಂ ಕುರುಪತಿಯಾ ॥ 168 ॥

ವ ॥ ಅಂತು ಧರ್ಮಯುದ್ಧವುಂ ಕೈಯೊಪ್ಪಿಯ್ದಾಗಳ್ ॥

ಕಂ ॥ ಎನಿತು ಕುರುಕ್ಷೇತ್ರದೊಳೆಡೆ
ಯನಿತುಂ ಬಲ್ಲೂದಿಲ್ಲದಂತು ಕವಕತದಿಂ ತೆ ।
ಕ್ಕನೆ ತೀವೆ ರಣೋತ್ಸವದಿಂ
ದನಿಲಸುತಂ ತಾನೆ ನವಲ್ಲೂದಂ ಕೊಳುಗುಳವುಂ ॥ 169 ॥

ರಥಮಿಲ್ಲದೆಯುಂ ಜಂಘಾ
ರಥದಿಂದೆ ಸಹಾಯರಿಲ್ಲದಿರ್ದೊಡವುರ್ವೀ ।
ಪ್ರಥಿತಭುಜಬಲಸಹಾಯದೆ
ಪೃಥಿವೀಪತಿ ತಾನೆ ಕಾದಲುದ್ಯತನಾದಂ ॥ 170 ॥

ಮ ॥ ಸುರರಾಜಂ ಪೆರಸಪ್ಪುದಿಕ್ಪತಿಗಳುಂ ಮೂವತ್ತು ಮೂದೇವರುಂ
ಪರಮಬ್ರಹ್ಮನುಮಪ್ಪನಾಗಕುಲರುಂ ಚಂದ್ರಾರ್ಕರುಂ ಪಾರ್ವತೀ ।
ಶ್ವರನುಂ ಷಣ್ಮುಖನುಂ ಗಜೇಂದ್ರವದನನುಂ ವಿದ್ಯಾಧರಾಧೀಶ್ವರುಂ
ನೆರೆದಿರ್ದರ್ನಭದೊಳ್ ಕುತೂಹಲಯುತರ್ನೋಡಲ್ ಗದಾಯುದ್ಧವಂ ॥

ಪುದುವೆತ್ತೆಕ್ಕಟಿಗಾಳಿಗಂ ಸವಮಿಸಿತ್ತೆಮ್ಮೀಗದಾಯುದ್ಧವಂ
ತ್ರಿದಶರ್ನೋಡಲೆ ಕೌತುಕಂಪೆರಸಿ ಬಂದಿರ್ದರ್ನಭೋಭಾಗದೊಳ್ ।
ಮುದವಪ್ಪೈರಿಯನಿಕ್ಕಿ ಭೂವಳಯವಂ ನಿಷ್ಕಂಟಕಂಮಾಳ್ಪೆನೆಂ
ಬುದನೆಂದಾಹವಲಂಪಟಂ ಮಗಗಿದಂ ಬಾಳುಕ್ಕಕಂ ತೀರವಂ ॥ 172 ॥

ಇಂತಿದು ಭೀಮದುರ್ಯೋಧನಯುದ್ಧಸನ್ನಾಹವರ್ಣನಂ
ಸಪ್ತದಶಾಶ್ವಾಸಂ.

ಕಂ ॥ ಶ್ರೀರಮಣಿಗೆ ನೆಲೆ ತನ್ನಯ
ವೇರುರಮಂ ಮಾಳ್ಪೆನೆಂಬ ಬಗೆ ಮಿಗೆ ಸವರ ।
ಪ್ರಾರಂಭದೆ ಪೂಣ್ದೆರ್ದಂ
ಕೌರವಕುಲವಿಲಯಕೇತು ಸಾಹಸಭೀಮಂ ॥ 173 ॥

ವ ॥ ಅಂತು ಸವರೋತ್ಸುಕಚಿತ್ತನಾಗಿ ಸಾಹಸಭೀಮಂ ದ್ರೋಣಾಚಾರ್ಯಂಗೆ ಮನದೊಳ್ ನಮಸ್ಕಾರಂಮಾಡೆ ದುರ್ಯೋಧನಂ ಬಲದೇವಂಗೆ ನಮಸ್ಕಾರಂಗೆಯ್ದು ಪಂಚಷಡಂಗುಲಾಯಾಮವುಮುಂ ಸಹಸ್ರಾಂಗುಳವಳಯನಿರ್ಮಿತವುಮುಷ್ಟಾಂಗುಲ ಸ್ಥೂಲಮೂಲಾಗ್ರಮುಮಪ್ಪುತ್ತಮಗದೆಯೊಳಂ ಚತ್ವಾರಿಷಡಂಗುಲಾಯಾಮಮುಂ ಶತಾಂಗುಲವಳಯಪರಿಮಿತವುಂ ಚತುರಂಗುಲಾಗ್ರಮೂಲಮುಮಪ್ಪ ಮಧ್ಯಮಗದೆಯೊಳಂ ಷಡಂಗುಲಾಯಾಮಮುಂ ಷಟ್ಪ್ರಂಕಪ್ರಲಯಾಂಗುಲಮುಂ ದ್ವ್ಯಂಗುಲಾಗ್ರಮೂಲಮುಮಪ್ಪಧಮಗದೆಯೊಳಂ ತಾಮುತ್ತಮಪುರುಷರಪ್ಪುದಱಿಂ ತಮಗನುರೂಪಮಪ್ಪುತ್ತಮಗದೆಯೊಳಂ ದಶಾಂಗುಲಪರಿಣಾಹಾಗ್ರಕನಕರಜತವಿಚಿತ್ರಾಲಂಕೃತಸ್ವರೂಪ ಸಮನ್ವಿತಂಗಳುಮಪ್ಪ ಗದೆಯುಮನಿರ್ವರುಂ ಆಯ್ದುಕೊಂಡು ಆಲೀಢ ಪ್ರತ್ಯಾಲೀಢ ಸವಮಾದ ವೈಷ್ಣವ ಮಂಡಲಾಗ್ರಮುಮೆಂಬ ಪಂಚವಿಧಸ್ಥಾನಕೃತಂಗಳೊಳಂ ವಿಚಿತ್ರ ಸ್ವರೂಪಸಮನ್ವಿತವಾದಕ್ಷಿಣಬಾಹ್ಯಾಭ್ಯಂತರಾಸ್ಫಾಲನವಿಭೇದಂಗಳೊಳಂ ವಿಳಂಬಿತ ಮಾಕುಂಚಿತಮಾಸ್ಫೋಟಿತಮಾಕ್ಷಿಪ್ತಮುದ್ಭ್ರಾಮಿತಂ ದಿಗ್ಭ್ರಾಮಿತಮುಚಿತವಿರುದ್ಧಮಚಿಂತ್ಯಮುಮೆಂಬೆಣ್ಪ್ಪತೆಱದ ಪ್ರಹರಣಂಗಳೊಳಂ ಅತಿಪರಿಚಿತರಾಗಿ ವೈಶಾಖಸ್ಥಾನ ದೊಳ್ ನಿಂದು ॥

ಕಂ ॥ ಸ್ಥಿರಬದ್ಧವುತ್ಸರಭ್ರೀ
ಕರಬದ್ಧಭ್ರುಕುಟಿಘಟಿತರದ್ಬುತರಟ್ಟಾ ।
ಸುರರಧಿಕಕೋಪಪಾಟಳ
ಪರುಷೇಕ್ಷಣರೆನಿಸಿ ದೃಷ್ಟಿಯುದ್ದಂಗೆಯ್ದರ್ ॥ 174 ॥

ದೆಸೆದೇವತೆಗಳ್ಗೆ ಜಪಾ
ಪ್ರಸೂನವುಂ ರಕ್ತಬಲಿಯುವುಂ ತಾಂ ಕುಡುವಂ ।
ತೆಸೆದಿರ್ದರ್ ಕಡೆಗಣ್ಣೊಳ್
ಪಸರಿಸೆ ಕಡುಗೆಂಪು ಭೀಮದುಯೋರ್ಧನರಾ ॥ 175 ॥

ಉರಿಯನುಗುಳ್ವಂತೆ ಬಿಸುನೆ
ತ್ತರನೆತ್ತಂ ಸೂಸುವಂತೆ ಬಿಜ್ಜನೆ ಬಿಟ್ಟು ।
ದ್ದೆರಡುಂ ಕಣ್ಗಳೊಳವರೊ
ರ್ಬರನೊರ್ಬರ್ನುಂಗುವಂತೆ ನೋಡಿದರೆನಸುಂ ॥ 176 ॥

ಖಳದುಶ್ಶಾಸನಲೋಹಿತ
ಜಲವುಂ ಕುಡಿದೆನಸುವುಳ್ಳಸಲ್ಲಾಯಿದೆ ಸಾ ।
ಳನೆ ಕಾಯುವಂತೆ ಕಾರವ
ಕುಳಾಂತಕಂ ತರಳತಾವ್ರಲೋಚನನಾದಂ ॥ 177 ॥

ಉದಯಾದ್ರಿಯುವುಸ್ತಾದ್ರಿಯು
ವುದಗ್ರಕೋಪೋತ್ಕರಂಗಳರ್ಪಂತಿರೆ ನೀ ।
ಳ್ದೊದವಿದರುನ್ನತಮೂರ್ತಿಗ
ಳೊದವಿ ಗದಾಯುಧದೆ ಭೀಮಭುಜಗಧ್ವಜರುಂ ॥ 178 ॥

ವ ॥ ಅಂತೊದವಿ ॥

ಕಂ ॥ ಕಿಱಿಕಿಱಿದೆ ಮೆಟ್ಟ ವುಂದಂ
ಕಿಱಿಕಿಱಿದನೆ ಸಾರ್ಚಿ ತವ್ಮ ಗದೆಗಳನಾಗಳ್ ।
ಕಿಱಿಕಿಱಿದೆ ತಿರುಪಿ ವೂಣದೆ
ಕಿಱಿಕಿಱಿದನೆ ತೂಂಕಿ ತೂಂಕಿ ಸೂಂಕಿದರೆನಸುಂ ॥ 179 ॥

ಎಡದಡಿಯಂ ಪುಗಿಸುವ ಬಲ
ದಡಿಯಂ ಪೊಱಗಿಡುವ ದಂಡೆಯಿಕ್ಕುವ ಕೈಯಿಂ ।
ನಿಡುಗದೆಯಂ ತಿರುಪುವ ಕಡು
ಪೆಡಂಗು ರಂಜಿಸಿತು ಭೀಮದುಯೋರ್ಧನರಾ ॥ 180 ॥

ಕಡುಕೆಯ್ದು ಕುತ್ತೆ ವಂಚಿಸಿ
ಬಿಡೆ ಬೀಸಿದೊಡೊಡನೆ ಬೀಸಿ ನಿಮಿರ್ದಡಿ ಕಾಲಿ ।
ಟ್ಟಡಿಗಿಡಿ ನಿಘಾತದಿಂ ಪೊ
ಯ್ದೊಡಾಂಕೆಗೊಂಡಣ್ಮಿ ಕಾದಿದರ್ ಕಡುಗಲಿಗಳ್ ॥ 181 ॥

ಮ. ವಿ॥ ಪದಘಾತಕ್ಕಗಿದಳ್ಕ ಬಳ್ಕದುದಧೋಲೋಕಂ ಭಯಂ ಮರ್ತ್ಯಲೋ
ಕದೊಳಿಂ ಪೊಣ್ಮಿದುದೂರ್ಧ್ವಲೋಕದೊಳೆ ಮತ್ತಾಯ್ತದ್ಭುತಭ್ರಾಂತಿಯೆಂ ।
ಬುದನೆಂಬಂತಿರೆಯಂತದೇಂ ಭುವನಮಂ ಪರ್ಯಾಕುಲಂ ಮಾಡಲಾ
ತ್ತುದೊ! ದುರ್ಯೋಧನಭೀಮಸೇನರ ಗದಾಯುದ್ಧಂ ತ್ರಿಧಾಭ್ರಾಂತಿಯಂ ॥

ಕಂ ॥ ಧಪ್ಪರಿದಟ್ಟುಂ ಪೊಟ್ಟಿನೆ
ದೊಪ್ಪಧೊಗಪ್ಪೆನೆ ದಿಧಿಲ್ಬುಧಿಲ್ಲೆನೆ ಮೆಯ್ಗಳ್ ।
ಸೊಪ್ಪುಸೊವಡಪ್ಪಿನಂ ಸೂ
ಟ್ಟಿಪ್ಪದೆ ಕಡುಕೆಯ್ದು ಪೊಯ್ದರೊರ್ವರನೊರ್ವರ್ ॥ 183 ॥

ಪಗಲುಳ್ಕವುಳ್ಕುವಂದದಿ
ನೊಗೆವ ಗದಾಕುಲ್ಕಮುಳ್ಕೆ ಕಣ್ಣಂ ಮುಚ್ಚಟ್ಟ ।
ಲ್ಬಗೆಯೆ ದಿವಿಜರ್ಗದಾಹವ
ಮಗುರ್ವುದುದ್ಭುತವುವಾಗೆ ಕುರುಪಾಂಡವರಾ ॥ 184 ॥

ಗದೆ ಗದೆಯಂ ಘಟ್ಟಿಸೆ ಘ
ಟ್ಟಿದ ಕೆಂಡದ ಕಿಡಿಯು ತಂಡವೆಣ್ಪಂದೆಸೆಯಂ ।
ಪ್ರದಿಯೆ ಪದಘೊಳ ಗಗನದೊ
ಳೊದವೆ ಸುರರ್ಬಿದಱೆ ಕಾದಿದರ್ಕಡುಗಲಿಗಳ್ ॥ 185 ॥

* * * * * *

ಅಡಿಯಂ ಕಱುಪೊಡೆಯಂ ವೆ
ರ್ದೊಡೆಯಂ ಪೊಱವಾಱನುಡಿಯನುರವಂ ಮುಯ್ವಂ ।
ಮುಡುಪಂ ಬೆನ್ನಂ ಕೊರಲಂ
ನಡುನೆತ್ತಿಯನೆತ್ತಿ ಪೊಯ್ದರೊರ್ವರನೊರ್ವರ್ ॥ 187 ॥

* * * * * *

ಚಂ ॥ ದಾರುಣರಕ್ತವಕ್ತವ್ಯಗರಾಜಯುಗಕ್ಕೆ ನವಪ್ರಸೂನಸಂ
ಭಾರದ ಕಿಂಶುಕದ್ರುಮಯುಗಕ್ಕೆ ಸಧಾತುಕಭೃದ್ಯುಗಕ್ಕೆ ಸಿಂ ।
ದೂರಿತಗಂಧಸಿಂಧುರಯುಗಕ್ಕೆಣೆಯೆಂಬಿನವಣ್ಣಿಂ ಕಾದಿದರ್
ಕ್ರೂರವರಾಜನುಂ ಕುರುಕುಲಾಂತಕನುಂ ರುಧಿರಾರ್ದ್ರಮೂರ್ತಿಗಳ್ ॥

ಮ. ವಿ॥ ಕರಿಯಂ ನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದುಗೊಳ್! ಮತ್ಸಹೋ
ದರರಂ ಕೋಪದೆ ತಿಂದುದರ್ಕ್ಕೆರಡುಗೊಳ್!! ದುಶ್ಶಾಸನೋರಸ್ಸ್ಥಳ ।
ಸ್ಫುರದಸ್ರಾಂಬುವನಾರ್ದ್ರ ಪೀರ್ದ ಮುಳಿಸಿಂಗಂ ಮೂಱುಗೊಳ್ಳೆಂದು ಮ
ತ್ಸರದಿಂದೋವದೆ ಪೊಯ್ದನೆತ್ತಿ ಗದೆಯುಂ ದುರ್ಯೋಧನಂ ಭೀಮನಂ॥190॥

ಪ ॥ ಎಂದು ಮುಟ್ಟಿ ಮೂದಲಿಸೆ ॥

ಮ. ಸ್ರ॥ ಇದು! ಲಾಕ್ಷಾಗೇಹದಾಹಕ್ಕಿದು! ವಿಷವಮವಿಷಾನ್ನಕ್ಕಿದಾ ನಾಡ ಜೂದಿಂ
ಗಿದು! ಪಾಂಚಾಲೀಪ್ರಪಂಚಕ್ಕಿದು! ಕೃತಕನಭೂಳೋಕನಭ್ರಾಂತಿಗೆಂದೋ।
ವದೆ ಪೊಯ್ದುಂ ಕಾಲ್ಗಳಂ ತೋಳ್ಗಳನಗಲ್ದುರಮಂ ಕೆನ್ನೆಯಂ ಕೋ
ಪದಿನೈದುಂ ದುರ್ನಯುಕ್ಕೈದೆಡೆಯನುರುಗದಾದಂಡದಿಂ ಭೀಮಸೇನಂ ॥

ವ ॥ ಅಂತು ಪೊಯ್ದೊಂದುಮಂ ಬಗೆಯದೆ ॥

ಮ. ಸ್ರ॥ ಚರಣಾಕ್ರಾಂತಂ ಮಹೀಮಂಡಲಮದಿರೆ ಭುಜಾಕ್ರಾಂತಮಾಶಾಗಜೇಂದ್ರೋ
ತ್ಕರವಾಶಾಭಿತ್ತಿಯಿಂದಂ ಪೆಱದೆಗೆಯೆ ಗದಾಕ್ರಾಂತಮುದ್ಭ್ರಾಂತವಿದ್ಯಾ।
ಧರಚಕ್ರಂ ಗೆಂಟುಗೆಂಟಾಗಿರಿಸೆ ನಿಜವಿಮಾನಂಗಳಂ ಭೈರವಾಡಂ
ಬರಮಾಕಲ್ಪಾಂತಕಾಲಂ ನೆಗೞ್ದುದು ಸಮರಂ ಭೀಮದುರ್ಯೋಧನೀಯಂ ॥

ವ॥ ಅಂತಿರ್ವರ ಗದಾಪಟ್ಟಸಪರಿಘಸಂಘಟ್ಟನದಿಂದೊಗೆದು ನೆಗೞ್ವ ಕಿಡಿಯ ಕೆಂಡಂಗಳ ತಂಡಂಗಳನೊಳಕೊಂಡು ಗಗನಮಂಡಲದೊಳ್ ಪೊಗೆನೆಗೆದು ಮಹೋತ್ಪಾತಕೇ ತುಚಕ್ರದಂತೆಯುಂ, ಸುಟ್ಟುಱೆಗಾಳಿಯೊಳ್ ನುಱುಗೊಂಡು ತಱುಗೆಲೆಗಳ್ ಪಾಱುವಂತೆಯುಂ, ದೆಸೆದೆಸೆಗೆ ಪಾಱುವ ಘನಾಘನಚಕ್ರದಿಂದುಳ್ಕುಲ್ಕಾಕಾರಮಾಗೆ ಚಕ್ರಾಕಾರದಿನೊಗೆವ ದಿಶಾಚಕ್ರದಿಂ, ಸ್ಫುರದ್ವಿಸ್ಫುಲಿಂಗದಿನುರಿಲಿಂಗಮಿರ್ಪಂತಿರ್ದ ಸಕಲಕುಲಾಚಲಚಕ್ರದಿಂ, ಆ ಸಕಲಕುಲಾಚಲಚಕ್ರದೊಳಗೆ ಕೋರವಚಕ್ರದಂದದಿಂದಂ ತಿಱ್ಪಿನೆ ತಿರುಗುವ ಧರಾಚಕ್ರಭ್ರಾಂತಿಯೊಳ್ ತವಂಗೆ ಚಿತ್ತಭ್ರಾಂತಿಯಾಗೆ ದೀಘೋರ್ಷ್ಣಪ್ರಭೋತ್ಕಾರಂಗೆಯ್ವ ನಾಗರಾಜಚಕ್ರದಿಂ ಪ್ಲುಷ್ಟವಾದ ಸಪ್ತಸಾಗರಸಲಿಲದೊಳ್ ಮುಲಮುಲನೆ ಮಱುಗುವ ಜಲಚರಚಕ್ರದಿನತಿಭಯಂಕರವಾಗೆ ಕಾದುತಿರ್ಪರಲ್ಲಿ ॥

ಕಂ ॥ ಅನುಸವಮಾಯ್ತಿನೆ ದುರ್ಯೋ
ಧನಶಬ್ದಂ ಭೀಮಸೇನಶಬ್ದಂ ದುರ್ಯೋ ।
ಧನನೆ ಗಡಂ ಭೀಮಂ! ಭೀ
ಮನೆ ಗಡ! ದುರ್ಯೋಧನಂತದೇಂ ಸಮಬಲರೋ ॥ 193 ॥

ಸಮಕಾಯಸರ್ವಮನತ್ವ
ಸರ್ವಮವಿದ್ಯಸರ್ವಮರದೊಳ್ ಪರಸ್ಪರಭುಜವಿ ।
ಕ್ರಮದಿವರವರೆನೆ ಚಕ್ರ
ಭ್ರಮಣದಿನನ್ಯೋನ್ಯಜಯಮನಾಱರೆ ತೋಱುರ್ ॥ 194 ॥

ಉ॥ ನೆಲಸಿದ ಬಿನ್ನಣಂ ಸೆಣಸಿ ಬಿನ್ನಣಮಂ ಗೆಲೆ ಕಾಣ್ಕೆ ಕಾಣ್ಕೆಯಂ
ಗೆಲೆ ಜವಮಂ ಜವಂ ಗೆಲೆ ಬಲಂ ಬಲಮಂ ಗೆಲೆ ದಂಡೆ ದಂಡೆಯಂ ।
ಗೆಲೆ ಮುಳಿಸುಳ್ಕಿ ಪೊಣ್ಕಿ ಮುಳಿಸಂ ಗೆಲೆ ಸತ್ವದಳರ್ಕೆ ಸತ್ವಮಂ
ಗೆಲೆ ಗೆಲಲಾರ್ತರಿಲ್ಲ! ಕುರುಪಾಂಡುತನೂಭವರೊರ್ವರೊರ್ವರಂ ॥ 195 ॥

ವ ॥ ಅಂತು ನೆಲುಲೊಳ್ ಪೊರ್ಕುಳಿಯಾಡುವಂತೊರ್ವರೊರ್ವರಂ ಗೆಲಲ್ನೆಱೆಯದಿರೆ ದುರ್ಯೋಧನಂ ಕರಂ ಮುಳಿದು ॥

ಕಂ ॥ ಕುರುರಾಜಂ ವಿದ್ಯಾಧರ
ಕರಣಿದೆ ನೆಗೆದಂಬರಕ್ಕೆ ಗದೆಯಂ ಕ್ರಮದಿಂ ।
ತಿರುಪೆ ಧರಾಚಕ್ರಂ ಕೋ
ವರಚಕ್ರಂ ತಿರಿವ ತೆಱದೆ ತಿರಿದತ್ತೆನಸುಂ ॥ 196 ॥

ಛತ್ರಾಕಾರದೆ ಗದೆಯಂ
ಚಿತ್ರವಿಧಂ ಬೀಸೆ ಗಗನದೊಳ್ ನಿನಗೇಕ ।
ಚ್ಛತ್ರಂ ಜಗವೆಂದು ಮುರು
ತ್ಪುತ್ರಂಗಱಿಪುವವೊಲಿರ್ದನಾಕುರುಪುತ್ರಂ ॥ 197 ॥

ವ ॥ ಅಂತು ಮೂದಲಿಸದೆ ಇಱಿವುದು ತುಱಿಲಾಳಾಯಮುಲ್ಲೆಂದು ಮುಟ್ಟಿ ಮೂದಲಿಸಿ ॥

ಕಂ ॥ ತೆಱಪಂ ನಿಟ್ಟಿಸಿ ಕುರುಪತಿ
ಬಱಿಸಿಡಿಲೆಱಗುವವೊಲೆಱಗಿ ಪೊಯ್ಯಲೊಡಂ ಮಿ ।
ಯ್ಮಱೆದು ಪವನಜನದೇಕೆಂ
ದಱಿಯೆಂ ಮತಿವಿಕಳನಾಗಿ ಮೂರ್ಛೆಗೆ ನಂದಂ ॥ 198 ॥

ವ ॥ ಅಂತು ಕುಲಿಶಾಭಿಘಾತದೊಳ್ ನೀಲಾಚಲಮೆ ಕೆಡೆವಂತೆ ಕೆಡೆದು ಮೂರ್ಛಾಗತನಾಗಿರ್ದ ಭೀಮಸೇನನಿರವಂ ಕಂಡು ಗಾಂಡೀವಿ ಕೋಪಾತುರಾಟೋಪವಂ ತಾಳ್ದಿ ॥

ಕಂ ॥ ಎಲ್ಲಿಯ ಬಲದೇವಂ! ಮು
ತ್ತೆಲ್ಲಿಯ ಸತ್ಯವ್ಯವಸ್ಥೆ! ದುರ್ಯೋಧನನಂ ।
ಕೊಲ್ಲದಿರೆನೆಂದು ಭೂರತ
ಮುಲ್ಲಂ ಗಾಂಡಿವಕೆ ನೇಱಿದಂ ನೆಱಿ ತೆಱಿವಂ ॥ 199 ॥

ಮುಳಿದೇವಂ ಹಲಿ! ಕೃಷ್ಣಂ
ಮುಳಿದೇವಂ! ಧರ್ಮನಂದನಂ ಮುಳಿದೇವಂ ।
ಮುಳಿದರನಿಕ್ಕುವೆವೆಂದು
ವ್ಯಳಿಸಿದರಿಱಿಯಲ್ಕೆ ನಕುಲಸಹದೇವರ್ಕಳ್ ॥ 200 ॥

ಆರಿಗಿಂಬಾಯ್ತೆಱಿವಾದುದು
ಮುರುತ್ಸುತಂಗರ್ಜುನಾದಿಗಳ್ ಮುಳಿದವೂರ್ ।
ವರುಮೆನ್ನ ನನ್ನಿಗೀಗಳೆ
ಪರಿಭವಮಾಯ್ತೆಂದು ಧರ್ಮಜಂ ಚಿಂತಿಸಿದಂ ॥ 201 ॥

ಅಲರ್ದ ಹಲಧರನ ಮೊಗಮುಂ
ತಲೆಯಂ ಬಾಗಿರ್ದ ಧರ್ಮತನಯನ ಮೊಗವುಂ
ಜಲರುಹನಾಭಂ ಕಂಡೆರ್ದೆ
ಗಲಂಕಿ ಕಣ್ಣರ್ಬುಜರ್ಬಿದಂ ಗಾಂಡಿವಿಯುಂ ॥ 202 ॥

ವ ॥ ಆಪ್ರಸ್ತಾವದೊಳ್ ಧಾತುನಿರ್ಜರಗಿರಿ ಕೆಡೆವಂತು ಕೆಡೆದಿರ್ದ ಪಗೆಯಂ ನೋಡಿ ॥

ಕಂ ॥ ಕೆಡೆದೊಡೆ ಪವನಜನಾಹವ
ದೆಡೆಯೊಳ್ ಬಿಲ್ದಿವನನಿಚ್ಛೆಯಲಾಗದುವೆಂಬ ।
ಗರ್ಜಡವೆಂದಂಬರತಳದೊಳ್
ಪೊಡವೀಕಂ ಗದೆಯನೆತ್ತಿ ತಿರುಪಿದನಾಗಳ್ ॥ 203 ॥

ವ ॥ ಆಪ್ರಸ್ತಾವದೊಳ್ ಧರ್ಮಯುದ್ಧವಂ ನೆನೆದು ॥

ಕಂ ॥ ಇಚ್ಛೆಯೆಂ ಬಿಲ್ದಿನನೆಂಬೀ
ಬಿಚ್ಚುಬಿಂದಂ ಬೀಸೆ ಗದೆಯು ಗಾಳಿಯ ಕೋಳ್ ।
ಚ್ಚಚ್ಚೂಸಿದುದು ಭೀಮನಂ ವೆ
ಯ್ಮಚ್ಚೆದವನಂ ತಂದೆ ಸುತರ್ಗೆ ಕೂರದರೊಳರೇ ॥ 204 ॥

ದಾನಿಯುಮಂ ಶೂರನುಮಂ
ತಾನೆಚ್ಚಚ್ಚೂಕುಂ ಗದಾನಿಲಂ ಮೂರ್ಛಿತನಂ ।
ದೀನನುಮಂ ಪಂದೆಯುಮಂ
ತಾನೆಚ್ಚಚ್ಚೂಕುಂ [ಜಡಸ್ವಭಾವಂ] ಪವನಂ ॥ 205 ॥

ಜ್ವಳನನಖಸುತನ ಮೂರ್ಛೆಯೆ
ತಿಳಿದುದನುಚ್ಚೆ ನೋಡಿ ತಿಳಿದ ಕಡೆಗಣ್ಣಿಂದು ।
ಚ್ಚಳಿಸಿತುರಿಗೆಂಪು ಕ್ರೌರವ
ಖಳಂಗೆ ಕಡುವಮುಳಿದ ಜವನ ಕಣ್ಬೀಡಿನವೋಲ್ ॥ 206 ॥

ವ ॥ ಆಂತು ಮೂರ್ಛೆಯಿಂದೆಚ್ಚತ್ತು ॥

ಕಂ ॥ ಪೊಡೆಯಲರಾತಂ ರಾಗದೆ
ತೊಡೆಯಂ ಪೊಯ್ದೊಂದು ನೆವದೆ ನೆಱನೀತಂಗೀ ।
ಯೆಡೆಯೆಂದು ತೋಱೆ ಕುಡೆ ಪೊಲ
ಗಿಡದಱೆದಂ ಪರವುಪಂಡಿತಂ ಪವನಸುತಂ ॥ 207 ॥

ಮ. ವಿ॥ ತಿಳಿದಾಗಳ್ನೆಱನಿಂತುಟೆಂದು ನೆಲನಂ ಮೂಱುದ್ದಿ ಕೈಯಿಂ ಧರಾ
ತಳದೊಳ್ ಪಾಸಿದ ತನ್ನ ತೀವ್ರಗದೆಯಂ ಕಂಡೆತ್ತಿ ಕೊಂಡಂಬರ ।
ಸ್ಥಳದಿಂದಂ ಸಿಡಿಲೇಱ್ಗೆಯಿಂದೆಱಗಿ ಪೊಯ್ವಾಗಳ್ ಗದಾದಂಡದಿಂ
ಮುಳಿದಿಟ್ಟಂ ಕಲಿ ಸತ್ತಿಗಂ ಕುರು ಕುಭೃಚ್ಚಂಡೋರುದಂಡಂಗಳಂ॥ 208 ॥

ಕಂ ॥ ಇಡೆ ತೊಡೆಯನುಡಿದು ನೆಟ್ಟನೆ
ಕೆಡೆಯುತ್ತುಂ ಕರ್ಚಿ ನೆಲನನಾನಿದನೆಂತುಂ ।
ಬಿಡೆನೆಂಬ ತೇಱದೆ ಕುಲಗಿರಿ
ಕೆಡೆವಂದದೆ ಕೆಡೆದು ಕ್ರೌರವೇಂದ್ರಂ ಪುಡಿದಂ ॥ 209 ॥

ವ ॥ ಅಂತು ದಿಕ್ಕರಿಕರಾನುಕಾರಿಗಳಪ್ಪ ನಿಜಭುಜಸ್ತಂಭಂಗಳಿಂ ಕುರುಕುಲವುಹೀ
ಕನ ಕದಳೀಸ್ತಂಭಂಗಳನನುಕರಿಸುವ ತೊಡೆಗಳನುಡಿದು ಆಶ್ರಮದೊಳ್ ಪುಡಿಯೊಳ್
ಪೊರಳ್ಚಿ ತನ್ನ ಮುನ್ನ ನುಡಿದೂರುಭಂಗಪ್ರತಿಜ್ಞೆಯಂ ತೀರ್ಚಿ ಮುಕುಟಭಂಗಪ್ರತಿ
ಜ್ಞೆಯಂ ತೀರ್ಚಲೆಂದು ಕುರುಕುಲಾಂತಕಂ ಮೂಮುನಕಂ ಮುನಗಿ ॥

ಉ ॥ ಇದು ಭುವನಾಧಿಪತ್ಯಸವನೋದಕದಿಂ ಗಡ! ಪೂತವಾದುದಿಂ
ತಿದು ಧವಳಾತಪತ್ರದ ನೆಲಲ್ಲಿ ಗಡಂ! ಗುಱಿಯಾದುದಾರ್ಗವಿಂ ।
ತಿದುಗಡ! ಬಾಗದೀತಲೆಗೆ ತಕ್ಕುದನೀಗಳೆ ಮಾಪ್ಪೆನೆಂದು ಕೋ
ಪದಿನೊದೆಯಲ್ಕೆ ಸಾರ್ತರೆ ಸಪತ್ನಹಠೋರುಕಿರೀಟಭಂಗವಂ ॥ 210 ॥

ಮ. ವಿ॥ ಬಲದೇವಾದಿಗಳಾಗದಾಗದೊದೆಯಲ್ಕೀಕಾದಶಾಕ್ಷೋಹಿಣೀ
ಬಲಲಕ್ಷ್ಮೀಪತಿಯಂ ಪರಾಭವಿಸದಿರ್! ಛಿಃ! ತಕ್ಕುದಲ್ಲೆಂದು ಮಾ ।
ರ್ಕೊಳಲುಂ ಮಾಣದೆ ಭೀಮಸೇನನೊದೆದಂ ವಾಮಾಂಘ್ರಿಯಿಂ ರತ್ನಕುಂ
ಡಲರಶ್ಮಿಪ್ರಕಟಜ್ವಲನ್ಮಕುಟಮಂ ಕೌರವ್ಯರಾಜೇಂದ್ರನಾ ॥ 211 ॥

ಕಂ ॥ ಒದೆದ ಭರದಿಂದಮುಚ್ಚಳಿ
ಸಿದ ದುಯೋರ್ಧನನ ಮುಕುಟಮಣಿಗಣಾವೃತ್ತಂ ।
ಕೆದಱುದುವಿಱುವ ಬೆಡಂಗನ
ಪೊದಳ್ದಿ ಕೋಪಾಗ್ನಿದಹನದಾಳ್ಕಿಡಿಗಳವೋಲ್ ॥ 212 ॥

ವ ॥ ಅಂತು ಪ್ರತಿಜ್ಞಾಪೂರ್ಣನುಮಾಗಿ ॥

ಮ. ಸ್ರ ॥

ತ್ರಿದಶೇಂದ್ರಂ ದೈತ್ಯರೊಳ್ ತಱ್ತುಱಿದ ಸಮರಮಂ ನೋಡಿದೆಂ! ರಾಮುಚಂದ್ರಂ
ತ್ರಿದಶೇಂದ್ರಾರಾತಿಯೊಳ್ ತಱ್ತುಱಿದ ಸಮರಮಂ ನೋಡಿದೆಂ! ಕಂಡೆನಿಲ್ಲಂ ।
ಕದ ಗಂಡಂ ಸಾಹಸಾಂಕಂಗೆಣೆ ಸುಭಟರನಾಂ ಮುನ್ನಮೆಂದಾನಭೀರಂ
ಗದೊಳಾಗಳ್ ದೇವದೂರ್ಯಧ್ವನಿಗಳೆಸೆಯಲಂತಾಡಿದಂ ಬ್ರಹ್ಮಪುತ್ರಂ ॥ 213 ॥

ಕಂ ॥ ಸುರತರು ಕುಸುಮೋತ್ಕರಮಂ
ಸುರಿಯೆ ಸುರಾಂಗನೆಯರುಲಿಯೆ ಸುರದುಂದುಭಿಗಳ್ ।
ಪರಮಾಶೀರ್ವಚನಪರಂ
ಪರೆಯಿಂದಂ ಮೆಚ್ಚಿ ಪರಸಿದರ್ಸತ್ತಿಗನಂ ॥ 214 ॥

ಬಳದೇವಂ ಭೀಮನ ಭುಜ
ಬಳದೇವಂ ಮನಮನಲೆಯೆ ಕುರುಪತಿಯಂ ಮಾ ।
ರ್ಕೊಳೆ ಪರಿಭವಿಸಿದನೆಂದೆಂ
ದಳವಿಲ್ಲದೆ ಮುಳಿದು ಕೆಳದರ್ ಕಿರ್ಚಿದ್ದಾರ್ಗಳ್ ॥ 215 ॥

ವ ॥ ಅಂತು ಮುಳಿದಿರ್ದ ತನ್ನ ತಮ್ಮನಂ ನೋಯಿಸಲಾಱದೆಯುಂ ದುರ್ಯೋಧನಂಗಾದವಸ್ಥೆಯಂ ನೋಡಲಾಱದೆಯುಂ ಬಲದೇವಂ ದ್ವಾರಾವತಿಗೆ ಪೋದನನ್ನಿಗ ವಿತ್ತಲ್ ॥

ಕಂ ॥ ಧಾತ್ರೀಪತಿಗಱುಪಿ ಮರು
ತ್ಪುತ್ರಂ ಬಱಿಯಟ್ಟಿ ಕರೆಸಿ ತೋಱುಲ್ಕೇಕ ।
ಚ್ಛತ್ರೀಕೃತಜಗದಹಿತ
ಕ್ಷತ್ರಿಯಕುಳಕಾಳರಾತ್ರಿಯಂ ದ್ರೌಪದಿಯಂ ॥ 216 ॥

ಮ. ಸ್ರ ॥

ಮುಳಿಸಿಂ ನಂಜಿಕ್ಕಿ ಕೊಂದಂದಿನ! ಜತುಗೃಹದೊಳ್ ಸುಟ್ಟ! ಕೌಟಿಲ್ಯದುರ್ವೀ
ತಳವುಂ ಜಾದಾಡಿಗೆಲ್ದಂದಿನ! ನಿಜಕಬರೀನೀವಿಬಂಧಂಗಳಂ ದೋ ।
ರ್ಬಳದಿಂದಂ ತಮ್ಮನಿಂದಂ ತೆಗೆಯಿಸಿ ನಡೆದಾನೀಚನಾ! ದ್ರೋಹನಾ! ಸಂ
ಚಳನಾ! ಚಂಡಾಲನಾ! ಪಾತಕನಿರವನಿದಂ ನೋಡು ಪಂಕೇಜವಕ್ತ್ರೇ ॥ 217 ॥

ಮ. ವಿ॥ ಅರಸಂ ದೀಕ್ಷಿತನಿಲ್ಲಿ! ಋತ್ವಿಜರುವೆಂವಿಮ್ಮಾನಾಲ್ವರುಂ! ಸಂಗರಾ
ಧ್ವರದೊಳ್ ತಾನುಪದೇಶಕಂ ಮುರಹರಂ! ನೀನುಂ ಗೃಹೀತವ್ರತಾ ।
ಚರಣವ್ಯಾಪಿಕೆಯುಂ ಭವತ್ಪರಿಭವಂ ಸಂಚಾರಕಂ! ಕೌರವೇ
ಶ್ವರನೀತಂ ಪಶುವಾಗೆ ಜೇಳ್ದಿನಿವನಂ ಕೋಪಾಗ್ನಿಯಿಂದಗ್ನಿಜೇ ॥ 218 ॥

ಕಂ ॥ ಸುಹುತಂ ಕೌರವ್ಯಕ್ರ
ವ್ಯಹವ್ಯದಿಂದೆನ್ನ ಕೋಪಹವ್ಯವಹಂ ದು ।
ರ್ದಹದುರ್ಯೋಧನದೇಹ
ಪ್ರಹಾರಲೋಹಿತದಿನಾದುದವಭೃಥಸವನಂ ॥ 219 ॥

ವ ॥ ಅಂತು ಭೀಮಸೇನಂ ಯಾಜ್ಞಸೇನಿಗಾದಿತ್ಯನ ಸಾರಥಿಯಿರ್ಪಂತೆ ನಿಜೋರು ಯುಗಳವಿಕಳನಾಗಿರ್ದ ದುರ್ಯೋಧನನಂ ತೋಱಿ ॥

ಕಂ ॥ ಪಗೆ ಮುಡಿದುದು ಮುಡಿಯೆನೆ ನಗೆ
ಮೊಗದಿಂ ಪಾಂಚಾಳ ಮಱೆದೆನಾಂ ಪಲಕಾಲಂ ।
ವಿಗತಾಭ್ಯಾಸದೆ ಸತ್ತಿಗ!
ಪಗೆಯಂ ಮುಡಿಯಿಸಿದೆ ನೀನೆ ಮುಡಿಯಲ್ವೇಱ್ಕುಂ ॥ 220 ॥

ವ ॥ ಎಂದು ತನ್ನ ಕೈಯಂ ಪಿಡಿದು ತೆಗೆವುದುಮಂತೆಗೆಯ್ವೆನೆಂದುಮೂಕೆಯು ವೇಣೀ ಸಂಹಾರಂಮಾಡಿ ॥

ಮ. ಸ್ರ ॥

ಇದಿರೊಳ್ ಮೂರ್ಧಾಭಿಷಿಕ್ತಂ ಮಣಿಮಕುಟಧರರ್ ಕೃಷ್ಣಬಾಹಾಬಳಾಗ್ರ್ಯ
ರ್ಕದನಪ್ರೋಚ್ಚಂಡದಂಡಕ್ರಮವಿಜಿತರಿಪುಕ್ಷತ್ರಿಯವೀರಲಹ್ಮೀ ।
ಸದನಸ್ಸೋರ್ವೂವೃತಾಸ್ವಾದನರುಚಿವದನರ್ ಮುನ್ನ ಮಳ್ಕಿದರ್ ನೋ
ಡಿದು! ನಿನ್ನೀಕೇಶಪಾಶಂ ಕುರುಕುಲನತಿಗಾಯ್ತಲ್ತೆ ಕೀನಾಶಪಾಶಂ ॥ 221 ॥

ವ ॥ ಎಂದು ಪೊಗೞ್ದು ಮಾಂಗಲ್ಯಮಾಲಾಲಂಕೃತಂಮಾಡಿ ॥

ಮ. ವಿ॥ ಸ್ಮರಸಂಜೀವನೆ ಕೃಪೆಣ್ಣ ಪೂವುಡಿದಳಾಕೃಂಗಾರಮಾಭಾವವಂ
ಪರಿಜಾವಿಭ್ರಮವಾಪಡಂಗು ನೆಗೞ್ದ ಸೌಂದರ್ಯಮಾಬಿಂಕವಂ ।
ತರಳಾಪಾಂಗವಿಲಾಸವಾಲಟಹವಾಲಾವಣ್ಯವಾಪುಣ್ಯವಾ
ದರಹಾಸಾವೃತನೋಂ ಮನಂಗೊಳಿಸಿತೋ ಬಾಳಂಕ್ಯಕಂದರ್ಪನಾ ॥ 222 ॥

ಕಂ ॥ ಆಡಿ ಕಿಱುದೊಡೆ ಪೆರ್ದೊಡೆ ಕಟಿ
ನಡು ವೆದೆ ತೋಳ್ ನೀೞ್ದ ಬೆರಲುಗುರ್ಕೊರಲಂದಂ ।
ಬಡೆದ ಮೊಗ ಸುೞಿಗುರುೞ್ಸೋ
ರ್ಮುಡಿ ನೋಡಲ್ನಾಡೆ ಸೊಗಯಿಕುಂ ದ್ರೌಪದಿಯಾ ॥ 223 ॥

ಮ ॥ ಗಳರೇಖಾಕೃತಿ ಭೂವಿರೇಖೆ ದಶನಂ ವಜ್ರಂ ವಿಲೋಲೇಕ್ಷಣಂ
ದಳವುದ್ಬ್ಭಲತೆ ಕರ್ಣಿಕಾವಿಲಸನಂ ನಾಸಾಪುಟಂ ಸಂಪುಟಂ ।
ಗಳೆ ಸಾರ್ಥಾಕ್ಷರಮಕ್ಷರಂಗಳೆನೆ ಕಾಶ್ಮೀರಾದಿಲಿಪ್ತಂ ಮನಂ
ಗೊಳೆ ಕಂದರ್ಪನ ವಶ್ಯಯಂತ್ರಮೆನಿಸಿತ್ತಾಸ್ಯಂ ನರೋಜಾಸ್ಯೆಯಾ ॥ 224 ॥

ಕಂ ॥ ತಿಂಗಳ ಪಡಿಚಂದ್ರಂ ಕವ
ಲಂಗಳ ಮಱಿವಕ್ಕವಮರ್ದ ತಿಳಿಗೊಳನಾ ಜಕೆ ।
ಲ್ವಿಂಗಿದೆ ದಾಯಿಗನೆಂನೆ ಲಲಿ
ತಾಂಗಿಯಾ ನಗೆವೊಗದ ಪೋಲ್ವೆಗಣೆ ಪೊಱವೊಳಿವೇ ॥ 225 ॥

ನಗೆಗಣ್ಗಳೊಳಗೆ ಮೊಲ್ನಗೆ
ಸೊಗಯಿಸೆ ಕರಚರಣತಳದ ಮೆಲ್ಪಿನೆಯೆ ಮನಂ ।
ಬುಗಲಾರ್ತರ ರಮಣಿಯಪೋಲ್
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ॥ 226 ॥

ಮ ॥ ತರಳಿಂಗಳ್ ತರಳೇಕ್ಷಣಂಗಳತಿತೀಕ್ಷ್ಣಂಗಳ್ ಚಕೋರಾಕೃತಿ
ಸ್ಫುರಿತಂಗಳ್ ಮದನಾಯುಧಾನುಕೃತಿಗಳ್ ಕರ್ಣಾನುಗಂಗಳ್ ಮನೋ ।
ಹರವರ್ಣಾಕೃತಿಗಳ್ವಿಭೂವಿನಿಗಳುಂ ಸ್ನಿಗ್ಧಂಗಳಂಭೋಜಭಿ
ನ್ನರುಚಿಸ್ಪರ್ಧಿಗಳಕ್ಷಿಗಳ್ ಬಹಳ ರಮ್ಯಂಗಳ್ ಕಾರಂಗಾಕ್ಷಿಯಾ ॥ 227 ॥

* * * * * *

॥ ಲಲಿತ ವೃತ್ತ ॥

ತಾರಕನಬಂ ನವನರೋರುಹದಳಾಂಘ್ರಿತಳ ಚಾರುನುತನಾಭಿಪುಳಿನೋಪಮನಿತಂಬಂ
ಹಾರಲತಿಕಾಕೃತಿವಿಹಾರನಿಬಿಡಸ್ಫುರದುರೋಜಯುಗಳಂ ಮದನಪಾಕನಿಭಹಸ್ತಂ ।
ಸ್ಮೇರವದನಂ ಚಲಚಕೋರನಯನಂ ಚಿಕುರಚಾರುರಮಣೀಯವೃದುಕುಂತಳಕಳಾಪಂ
ಚಾರುರುಚಿಸೂತ್ರಸುಕುಮಾರಮೆಸೆಗುಂ ಹೃದಯಹಾರಿ ಪೊಗೞಲ್ನಿಱೆಯೆನಾಸತಿಯ
[ರೂಪಂ ॥

* * * * * *

ಕಂ ॥ ಪೆಱಗಿರ್ದು ನೋಡೆಯುಂ ಮುಂ
ಪೆಱಗುಂ ಮುಂದಿರ್ದು ನೋಡೆ ಕಣ್ಣುಂ ಪುರ್ಬಂ ।
ಪೆಱೆವೊಗಮುಂ ತೆಳ್ವಿಸಿಱುಂ
ನಿಱುದಲೆಯುಂ ನೆಱೆಯೆ ಸೊಗಯಿಸುಂ ದ್ರೌಪದಿಯಾ ॥ 231 ॥

ಚಂ ॥ ಚಳದಳಕಪ್ರತಾನವನದುರ್ಗಮನೆಯ್ದಿ ಬೃಹನ್ನಿತಂಬಮಂ
ಡಲಜಲದುರ್ಗದೊಳ್ ಸುಱುದು ತುಂಗಭುಜಾಂತರಶೈಲದುರ್ಗಮಂ ।
ಚಳತಡದರ್ದೀಱುಯುಂ ಮದನನಾಹವಭೀತಿಯಿನಿರ್ಪವೊಲ್ ಪ್ರಯಂ
ಗೆಳೆಯಳ ರೂಪು ಭೂವಿವೊಡೆಯಂಗಜರಾಜನ ದುರ್ಗವೆನ್ನಿರೇ ॥ 232 ॥

* * * * * *

ಕಂ ॥ ಪನ್ನೆರಡು ಬರಿಸವುಲನದೆ
ಬನ್ನದ ಕೂಱುಂಡು ಬರ್ದಳೆದು ಕಾರಣದಿಂ ।
ತನ್ನಿಂ ಕಾಳಕೆ ಪಿಂಗಿದ
ಪೊನ್ನಂತಾಕಾಂತೆ ಕಣ್ಗೆ ಕರವೆಸೆದಿರ್ದಳ್ ॥ 234 ॥

ವ ॥ ಅಂತಿರ್ದ ಜಾತವೇದೋಜಾತೆಯ ಪಾರಿಜಾತಪಲ್ಲವೋಲ್ಲಸಿತತನು ಕೋಮಲ ತಳಸ್ಪರ್ಶನದೊಳಂ ಕರ್ಣಾಂತವಿಶ್ರಾಂತವಿಕಚಸುಂದರೇಂದೀವರಕುಸುಮಾನುಕಾರಿಕ ಟಾಕ್ಷಚ್ಛಟಾಚ್ಛೋಟನದೊಳಂ ಅಪರಗತನವರಪರಿಕ್ರಮನಾಗಿ ॥

ಕಂ ॥ ಕೃತವೈರಿರುಧಿರಪಾನ
ಪ್ರತಿಜ್ಞನುಂ ದ್ರೌಪದೀಕಚೋತ್ತಂಸನಸಾ ।
ರ್ಥಿತನತ್ಪ್ರತಿಜ್ಞನುಂ ಸ
ತ್ಕೃತಕೃತ್ಯಂ ಸಿದ್ಧಸಾಧ್ಯನಿಱುವ ಪೆಡಂಗಂ ॥ 235 ॥

ಮ ॥ ಗುರುಪಾದಾಂಬುರುಹಕ್ಕೆ ಮುಗ್ಗಿ ಪೊಡವಟ್ಟಿಂಗುಂ ಭುಜಂಗೇಂದ್ರಭೋ
ಕರಬಾಹಾಭ್ರಮಿತಾಭ್ರವಿಭ್ರಮಗದಾನಿರ್ಘಾತನಿಷ್ಪಿಷ್ಟಸಿಂ ।
ಧುರವೈರೋದ್ಯಮಸಾರ್ದ್ರಿತಾರುಣರಣಕ್ಷ್ಮಾಣೀತಳಂ ಕಾರವೇ
ಶ್ವರಚೂಡಾಮಣಿಚರ್ಣನಾಕುಲತದಿಕ್ಚಕ್ರಂ ಹಿಡಿಂಬಾಂತಕಂ ॥ 235 ॥

ಹರಿ ಕೇಳ್! ಧರ್ಮಜ ಕೇಳ್! ಸುರೇಂದ್ರಸುತ ಕೇಳ್! ಮೂದ್ರೀಸುತ ಕೇಳಿವಿ
ರ್ಬರುವಿಂತೆಯ್ದಿದುದಲ್ತಿ ಕಾರವಹತಿವ್ಯಾಪಾರದೊಳ್ ದ್ರೋಹದು ।
ರ್ಧರದುಶ್ಶಾಸನರಕ್ತಪಾನವಿಧಿ! ಪಾಂಚಾಲೀಕಚೋತ್ತಂಸನಂ
ಕುರುರಾಜೋರುಕಿರೀಟಭಂಗನಿನಿತುಂ ಭೀಮಪ್ರತಿಜ್ಞಾಕ್ಷರಂ ॥ 236 ॥

ವ ॥ ಎಂದು ಭೇರಿಯಂ ತಾಟಿಸಿದಂತೆ ಗಂಭೀರಧ್ವನಿಯಿಂ ಗರ್ಜಿಸೆ ॥

ಹರಿಯುಂ ಧರ್ಮಜನುಂ ಸುರೇಂದ್ರಸುತನುಂ ಮಾದ್ರೀಜರುಂ ಕೃಷ್ಣೆಯುಂ
ಪರಮಾನಂದದೆ ಕರ್ಚಿ ತೀರ್ಥಜಲದಿಂ ಕಸ್ತೂರಿಕಾಜಕಂದನಾ ।
ಗರುಕಾಶ್ಮೀರಜಪಂಕದಿಂ ತೊಡೆದು ಕೇಯೂರಾದಿಯಂ ಭೂಷಣೋ
ತ್ಕರವಂ ನೇರ್ಪಡೆ ಕಟ್ಟಿ ಪೂಜಿಸಿದರಾದೋರ್ದಂಡವಂ ಭೀಮನಾ ॥ 237 ॥

ವ ॥ ಆಪ್ರಸ್ತಾವದೊಳ್ ॥

ಮ ॥ ಅಸುಹೃನ್ಮಾಂಸದಿನನ್ಯರಕ್ತಮಧುವಿಂ ವಿದ್ವಿಟ್ಪರೋಚ್ಚಯಂಗಳಿಂ
ದಸಮಾಮಿತ್ರಕಠೋರದಂತಕುಲದಿಂ ರೌದ್ರಾರ್ಚನಾದ್ರವ್ಯದಿಂ ।
ದೊಸೆದಾಗಳ್ಪಲವಂದು ಮುಗ್ಗಿ ಪೊಡವಟ್ಟುತ್ತಾಹದಿಂ ತಾನೆ ಪೂ
ಜಿಸಿದಂ ಸಾಹಸಭೀಮನಾಹವಜಯೋದ್ದಂಡಂ ಗದಾದಂಡಮಂ ॥ 238 ॥

ವ ॥ ಅಂತು ಭುಜದಂಡಮುಮಂ ಗದಾದಂಡಮುಮುಂ ಪೂಜಿಸಿ ॥

ಮ ॥ ವಿವಿಧಾತೋದ್ಯರವಂ ಪೊದಳ್ದಖಿಳದಿಕ್ಚಕ್ರಂಬರಂ ಕೂಡೆ ಪೊ
ಣ್ಮುವಿನಂ ಮಂಗಳಗೀತಿ ಮಂಗಳರವಂ ಕರ್ಣಾವೃತಸ್ಯಂದಿಯು ।
ಣ್ಮುವಿನಂ ದೇವನಿನಾದಮುಣ್ಮುವಿನಮುತ್ಯುತ್ತಾಹದಿಂ ಪೊಕ್ಕನು
ತ್ಪನಬದ್ಧಸ್ವನರವ್ಯತಚ್ಛಿಬರವಂ ಚಾಳುಕ್ಯಕಂಠೀರವಂ ॥ 239 ॥

ಇಂತೆದು ದುರ್ಯೋಧನಮಕುಟೋರುಭಂಗವರ್ಣನಂ

ಅಷ್ಟಮಾಶ್ವಾಸಂ.

ಕಂ ॥ ಶ್ರೀಸೋಮವಂಶ ಕಮಲೋ
ದ್ಭಾಸಿ ಸರೋಹಂಸನಗ್ರಜಾನುಜಸಹಿತಂ ।
ಶ್ರೀನತ್ಯನಿಲಯನಧಿಕವಿ
ಳಾಸಂ ಸುಖಮಿರ್ದನಲ್ತೆ ಸಾಹಸಭೀಮಂ ॥ 240 ॥

ವ॥ ಅಂತಿರ್ದನ್ನೆಗಂ ಚಕ್ರಿ ತಾಂ ಸಕಲಲೋಕ ಚಕ್ರವರ್ತಿಯಪ್ಪುದಱಿಂ ಅನವ
ಸಾಹಸೋದ್ಯಮನನಶ್ವತ್ಥಾಮನ ಬರವನಱಿವನಾಗತಬಾಧಾಪರಿಚ್ಛೇದಮಂ ಮಾಡ
ಲೆಂದು ಧೃಷ್ಟದ್ಯುಮ್ನ ಶಿಖಂಡಿಚೇಕಿತಾನಕೈಕಯಧಾವನುಗ್ರತ್ತಮೌಜಸರುಮಂ ಸುತ
ಸೋಮಪ್ರಮುಖರಾದ ಪಾಂಡವಸೂನುಗಳಪ್ಪ ಪಂಚಪಾಂಡವರುಮಂ ಬೀಡಿಂಗೆ ಕಾಪು
ವೇಱ್ದು ಹಸ್ತ್ಯಶ್ವರಥಪದಾತಿಬಲಂಬೆರಸು ಹಸ್ತಿನಾಪುರಕ್ಕೆ ಕಳುಪಿ ಪಾಂಡವರೈವರುಮ
ನೊಡಂಗೊಂಡು ಸಕಲವನಚರಜಲಚರಕಂಜಕುಮುದೇಂದೀವರಮೂಳಾನಿಳಯಮಪ್ಪ
ನೀಳಾಚಳಕ್ಕೆ ನೀಲಾಂಗಂ ಪೋದನನ್ನೆಗಮಿತ್ತ ಗಾಂಗೇಯನಱಿಪೆ ಕೌರವೇಶ್ವರ
ನಿರ್ದೆಡೆಯನಶ್ವತ್ಥಾಮನಱಿದು ॥

ಕಂ ॥ ಕೊರಲ ಕಱುೞ್ ಶಿರದ ಪೆಱುೞ್ ನೊಸ
ಲುರಿಗಣ್ಣ್ ಧೃತಚಾಪಹಸ್ತ ಶಾಕ್ಷರಚಿಹ್ನಂ ।
ವಿರಚಿಸೆ ಕೃಪಕೃತವರ್ಮ
ರ್ಬೆರಸಾಗಳ್ ಮುಳಿದು ಬಂದನಶ್ವತ್ಥಾಮಂ ॥ 241 ॥

ಪೃಥ್ವೀ ವೃತ್ತಂ ॥
ಕನತ್ಕನಕಚಾಮರಂ ಧವಳಚಾಮರಂ ಕೈಗಳೊಳ್
ಮನಂಗೊಳಿಸೆ ಮಾಸಿ ತಾಱೆರೆ ಕುರುಳ್ಗಳಂ ತನ್ನ ಬಿ ।
ನ್ನನಿರ್ದ ಮೊಗದಿಂ ತವಿಲ್ದಿರೆ ವಿಲಾಸಮುಂ ಮುಂದೆ ಕಂ
ಡನಲ್ಲಿ ಕಮಳಾಕ್ಷಿಯಂ ವೃಷಭಲಕ್ಷ್ಮಣಂ ಲಕ್ಷ್ಮಿಯಂ ॥ 242 ॥

ವ ॥ ಅಂತು ಕುಂಭಸಂಭವಸಂಭವಂ ಕಮಲನಾಭನ ಭವನದವ್ಯತಾಬ್ಧಿಸಂಭವೆಯಂ ಕಂಡು ನೀನಾರ್ಗೆತ್ತಣಿಂದಂ ಬಂದೆಯೆಲ್ಲಿಗೆ ಪೋದಪೆಯೆಂದು ಪೆಸಗೊಳೆ ॥

ಚಂ ॥ ಅವ್ಯತಪಯೋಧಿಮಂಥನದೆ ಪುಟ್ಟಿದೆನಬ್ಜವನಾಂತರಾಳದೊಳ್
ರವಿಯಿಪ ಪದ್ಮನಾಭನುರದೊಳ್ ನೆಲಸಿರ್ದ ಮಹಾನುಭಾವೆಯಾಂ ।
ಕಮಲೆಯೆನಿನ್ನೆಗಂ ಕುರುಮಹೀಪತಿಯೊಳ್ ನೆಲಸಿರ್ದೆನೀಗಳು
ತ್ತಮಪುರುಷೋತ್ತಮಂ ಪೆಸರೆ ಪಾಂಡವರೊಳ್ ನೆಲಸಲ್ಕೆ ಪೋದಪೆಂ ॥ 243 ॥

ವ ॥ ಎಂಬುದುಂ ದ್ರೋಣನಂದನಂ "ನಾರಾಯಣಂ ಪೆಸರೆ ಪೋದಪೆ"ನೆಂದ ಲಕ್ಷ್ಮಿಯುಮಾತನವಧಾರಿಸಿ ಮುಗುಳ್ನಗೆನಕ್ಕು ॥

ಉ ॥ ಚಲಮತಿಯಾದೆ ನೀಂ! ಜಡಧಿಸಂಭವೆಯಪ್ಪುದಱಿಂ ಸರೋಜನಂ
ಕುಳಿರಜದಿಂದೆ ಮುಂ ಪೊರೆದು ಪುಟ್ಟಿ ನರಾಗೆಯಾದೆ! ಗೋವ್ರಗಾ ।
ದಳವಳಿದಿರ್ದ ಕೃಷ್ಣನೊಡನಿರ್ದುದಱಿಂದಲೆ ಗೋವಿಯಾದೆಯ
ಗ್ಗಳದ ವಿವೇಕಮಿಲ್ಲ ನಿನಗೆತ್ತಱವೈ! ಸದನದ್ಗುಣಂಗಳಂ ॥ 244 ॥

ಕಂ ॥ ಕಲಿ ಪಂದೆಯೆಂದು ಬಗೆಯದೆ
ಕುಲಜಂ ಕುಲಹೀನನೆಂದು ಬಗೆಯದೆ ತರುಣಂ ।
ನಲೆ ವೃದ್ಧನೆಂದು ಬಗೆಯದೆ
ನೆಲಸುವೆ ನಿನ್ನಿಂ ನಿಕೃಷ್ಟರೆಂಬರುವೊಳರೇ ॥ 245 ॥

ಇಱಿಯಿಸುವೆ! ತಂದೆಮಕ್ಕಳ
ನಿಱಿಯಿಸುವೈ! ಸೋದರರ್ಕಳಂ ತವ್ಮೊಳ್ತ ।
ಱ್ತಿಱಿಯಿಸುವೈ ಗುರುಶಿಷ್ಯರ
ನಱುಗುಲಿ! ನಿನ್ನಿಂದೆ ಕಷ್ಟಯಾವರುವೊಳರೇ ॥ 246 ॥

ವ ॥ ಆದೆಲ್ಲದೆಯುಮಮೃತಸಮುದ್ರದೊಳ್ ಪುಟ್ಟುವಂದೈರಾವತದೊಡನೆ ಪುಟ್ಟುದುದಱಿಂ ವಿಪರೀತವೃತ್ತಿಯುಂ, ಚಂದ್ರನೊಡನೆ ಪುಟ್ಟಿದುದಱಿಂ ಕೌಟಿಲ್ಯಮುಂ,

ವಾಗ್ದೇವಿಯೊಡನೆ ಪುಟ್ಟಿದುದಱಿಂ ವಾಚಾಳತೆಯುಂ, ಅಮರವೈರಿಯೊಡನೆ ಪುಟ್ಟಿದುದಱಿಂ ಗ್ರಹಣವಿಸರ್ಜನಬುದ್ಧಿಯುಂ, ವೈದ್ಯನೊಡನೆ ಪುಟ್ಟಿದುದಱಿಂ ವ್ರಣಕೂಲವೇಧೆಯುಂ, ನಾರದನೊಡನೆ ಪುಟ್ಟಿದುದಱಿಂ ಕಲಹಸ್ವಭಾವವುಂ, ಕಾಳಕೂಟದೊಡನೆ ಪುಟ್ಟಿದುದಱಿಂ ಕೊಲೆಯುಂ, ಕಳ್ಳೊಡನೆ ಪುಟ್ಟಿದುದಱಿಂ ಸೊಕ್ಕುಂ, ಅಚ್ಚರಿಸಿಯರೊಡನೆ ಪುಟ್ಟಿದುದಱಿಂ ಪಾಱುಗೆಯ್ತನುಂ ನಿನಗೆ ಸಹಜಮಾಗಿರ್ದುವು ॥

ಕಂ ॥ ಪೊಡವಡೆ ಪರಸದೆ ಬಿನ್ನವಿ
ಪೊಡೆ ಕೇಳದೆ ಮುಂದೆ ನಿಂದರಂ ಕಾಣದೆ ತ ।
ಕ್ಕೆಡೆಯೊಳ್ ಕಡೆಗಣಿಸುವ ನೃಪ
ವಿಡಂಬಮಿವು ಲಕ್ಷ್ಮಿ ನಿನ್ನ ದೂಸಱುನಲ್ತೇ ॥ 247 ॥

ಗುಣಿಗಳ ನೆಱೆ ಪೊರ್ದದೆ ನಿ
ರ್ಗುಣರಂ ಪೊರ್ದುವೆ! ವಿಶಿಷ್ಟರಂ ದುಷ್ಟರೊಳಂ ।
ಗಣಿಯಿಸಿ ಸಮನೆಂಬವಗುಣ
ಗಣಂಗಳವು ಲಕ್ಷ್ಮಿ ನಿನ್ನ ದೂಸಱುನಲ್ತೇ ॥ 248 ॥

ಮಲಿನರನೆ ಪೊರ್ದುವೈ! ನಿ
ರ್ಮಲರತ್ನಲ್ಪೊರ್ದಲೊಲ್ಲೆ! ನೀಂ ಕನ್ನಡಿಯೊಳ್ ।
ಜಲಮಿರ್ದ ದೆಸೆಯೊಳಿರದಾ ।
ಕಿಲುಂಬುಗೊಂಡಿರ್ದ ದೆಸೆಯೊಳಿರ್ದುದೆ ಪೇೞ್ಗಂ ॥ 249 ॥

ಧವಳಾತಪತ್ರಮುಡ್ಡಂ
ದಿವಸಕೆ ಸಲಲೀಯದಂತಿರಿರ್ಪುದು ವಿಚಳ ।
ದ್ಧವಳಮಚಿವುರರುಹಂ ಬೀ
ಸುವ ನೆವದಿಂ ಪಾಱೆ ಬೀಸುವುದು ನೃಪಗುಣಮುಂ ॥ 250 ॥

ಜಳಬುದ್ಬುದಂಗಳತಿಸಂ
ಚಳವಿದ್ಯುದ್ವಿಲಸಿತಂಗಳಚಿರತೆಯುಂ ಮುಂ ।
ತಿಳಿಪದುವೊ! ನಿನಗೆ ನಿನ್ನಿಂ
ತಿಳಿದುವೊ! ಮೇಣಿವರೊಳಱಿಪು ನೀಂ ಕೂರ್ಪವರಂ ॥ 251 ॥

ವ ॥ ಎಂದು ಲಕ್ಷ್ಮೀವಿಡಂಬನಂಗೆಯ್ದುನಿತಱೊಳಂ ಮಾಣದೆ ॥

ಕಂ ॥ ಪೋ! ಮಾಣ! ಧರ್ಮಜಂ ಗಡ!
ಭೀಮಂ ಗಡ! ಫಲ್ಗುಣಂ ಗಡಮಳಗರ್ಗಡ! ಸಂ ।
ಗ್ರಾಮದೊಳವಂದಿರಕ್ಷ
ತ್ಥಾಮಂಗೆನಗಾಂತು ಬಿಲ್ಗೊಳಲ್ನಿಱೆದಪರೇ ॥ 252 ॥

ನಿನ್ನ ಮುರವೈರಿಯಳಿವುಮ
ನೆನ್ನಳಿವುಮನೆಲಗೆ ಕಾಣ್ಬೆ! ಕುರುಪತಿಯಿಂದಂ ।
ಮುನ್ನಂ ತ್ವತ್ಪತಿಯಿಂದಂ
ನಿನ್ನನಗಲ್ಚಲ್ಕೆ ಕಪಟಗೋಪಂ ಪ್ರಭುವೇ ॥ 253 ॥

ಮ. ಸ್ರ ॥

ಕುರುರಾಜಂ ರಾಜರಾಜಂ ಸಕಲವಸುಮತೀಕಾಂತನಿರ್ದಂತೆ! ಯುದ್ಧೋ
ದ್ಧುರನಾದೀಸಾಹಸಾಂಕಂ ಕುರುಕುಳಪತಿಯಿರ್ದಂತೆ! ವೇಣ್ಪಟ್ಟು ದಾವೋ।
ದರನೆಂದೀಯಿಚ್ಛೆಯೊಳ್ನೀಂ ತೊಡರ್ದು ಮರುಳೆ! ಬೆಂಡಾಗದಿಪ್ಪೋಗು! ನೀಂ ಚೆ
ಚ್ಚರಮುತ್ತಿನ್ನೆತ್ತವೋಪೌ! ಪರಿಭವಿಸಿದಪೆಂ ನಿನ್ನನಿಂ ಕಾವನಾವೊಂ ॥ 254 ॥

ವ ॥ ಎಂದಶ್ವತ್ಥಾಮನುದ್ದಾಮಕೋಪಾಟೋಪಬದ್ಧಭ್ರುಕುಟಿತರಳತಾವಪ್ರಲೋ
ಚನನುಮಾಗೆ ॥

ಕಂ ॥ ಅತ್ತಲಸುರಾರಿ ಜೆಸಸಿದ
ನಿತ್ತಲ್ ರುದ್ರಾವತಾರನೆಳೆದುಯ್ದಪನಿಂ ।
ದತ್ತ ಪುಲಿಯಿತ್ತ ದರಿಯೆಂ
ದತ್ತಿತ್ತಡಿಯಿಡದೆ ಲಕ್ಷ್ಮಿ ತಳವಳಗಾದಳ್ ॥ 255 ॥

ವ ॥ ಅಂತು ತಳವಳಗಾದ ಲಕ್ಷ್ಮೀಕಾಂತೆಯ ಜಳದಳಕುಳವಿನೀಳಕುಟಿಲಕುಂತ
ಲಂಗಳಂ ತಳವಮೂರೆ ತೆಗೆದು ಕುರುಕುಲಕುಟುಂಬನ ಘಟಜೇಟಿಯಂ ಕೊಂಡು ಪೋ
ಪಂತೆ ಮುಗುಳೆ ಕೊಂಡುಪೋಗಿ ಭೀಮಸೇನನ ಗದಾಘಾತದೊಳೂರುಭಂಗವುಂ ಪಾದ
ಘಾತದೊಳ್ ಮುಕುಟಭಂಗಮುಮಾಗೆ ಸುರುಳ್ದು ತೆರಳ್ದು ಸುಯೋಧನನಿರೆ ॥

ಕಂ ॥ ನೆತ್ತಿಯ ಮಿದುಳೊಡೆದುಣ್ಮ
ನೆತ್ತರ ಧಾರೆಗಳೆ ತೀವೆ ತನ್ನಯ ಮುಖದೊ ।
ಳ್ನೆತ್ತರನೆ ಕಾಳು ಕುರುಪತಿ
ನೆತ್ತರ ಕಡಲೊಳಗೆ ತೇಂಕಿ ತೆರೆಮುಳುಗಿರ್ದಂ ॥ 256 ॥

ಕುಂತೀಸುತಭೀಮಗದಾ
ಭ್ರಾಂತಂ ಜಂಘಾವ್ಯಪೇತನುಣ್ಮವ ರಕ್ತಾ ।
ತ್ಯಂತಪ್ರವಾಹಸಹಿತಂ
ಶ್ರಾಂತಂ ರಾಗಿಯವೊಲಿರ್ದನಾಕುರುರಾಜಂ ॥ 257 ॥

ಕುರುರಾಜಂ ತೊಡೆಬೇನೆಗೆ
ನರಳನೆ! ಕುಳುವಾದ ತೊಡೆಯ ಬೇನೆಗೆ ಕಂಡ।
ನ್ನರಳ್ವಂತೆ ನರಳದರಸಂ
ವಿರೋಧಿಯಿಂದಾದ ಮಾನಹಾನಿಗೆ ನೊಂದಂ ॥ 258 ॥

ವ ॥ ಅಂತೆನಿಸಿರ್ದ ಕುರುರಾಜನಂದನನಂ ದ್ರೋಣನಂದನಂ ನೋಡಿ ॥

ಚಂ ॥ ಕುಳಿಕನ ಪಲ್ಗಳಂ ಮುಳಿಯೆ ನೋದಿದರಾರ್ಪಿಡಿದೊತ್ತಿ ಸಿಂಹವಂ
ಮುಳಿಯಿಸಿ ಪಲ್ಗಳಂ ಪಿಡಿದು ಕಿತ್ತಿ ವರಾರ್ಮದಹಸ್ತಿಯಂ ಭಯಂ ।
ಗೊಳೆ ನೆಲಕಿಕ್ಕಿ ಕೋಡೆರಡುವಂ ಕುಸಿಯೊತ್ತಿದರಾರ್ಸುರಾದ್ರಿನಿ
ರ್ಮ್ಮಳನಿಬಿಡೋರುಮಂಡಲವುನಾರುಡಿದರ್! ಫಣಿರಾಜಕೇತನಾ ॥ 259 ॥

* * * * * *

ಕಂ ॥ ಹಾ! ಕುರುವಂಶವುಹಾಕವು
ಲಾಕರಕಲಹಂಸ! ಹಾ! ಸವುದ್ರಾಂತಧರಿ ।
ತ್ರೀಕಾಂತ ಹಾ! ಫಣೀಂದ್ರಪ
ತಾಕಾ! ವಿಧಿವಶದೆ ನಿನಗಮಿಾಪರಿಯೂಹ್ಯೋ ॥ 261 ॥

ವ ॥ ಎಂದು ಗುರುನಂದನಂ ವಿಪ್ರಳಾಪಂಗೆಯ್ದು ತನ್ನ ಮೇಲುದಲಿ ಸೆಳಂಗಿಂದಾ ತನ ತಲೆಯುಮೇಲೆ ಕೆದಳಿದ ಭೀವುಸೇನನ ಚರಣರಜವುಂ ತೊಡೆದು ಕಳೆದು ॥

ಕಂ ॥ ಸ್ಥಿರವುೂಲಪತ್ರಶತಕರ
ಕರಶಾಖಂ ದ್ವಿಜವಿಲಾಸಸುಖದಂ ಕುರುಭೂ ।
ವರನೆಂದೆಸೆದಿರ್ದ ವುಹಾ
ತರು ಕೆಡೆದುದು ಭೀವುಗಜಸವಿೂರಣಹತಿಯಿಂ ॥ 262 ॥

ವ ॥ ಎಂದು ನುಡಿದು ವುನದೊಳ್ ಕಟ್ಟುಕಡೆದು ॥

ಕಂ ॥ ಎನ್ನಂ ವಂಚಿಸಿ ಬಂದುದೆ
ಲೂಂ ನಿನಗಿನಿತಾಯ್ತುವಸ್ಥೆ ಕುರುಪತಿ! ಕೇಳ್ನೀ ।
ನಿನ್ನೇಂ ಪ್ರತಿಕಾರವುನಲೂ
ವೆನ್ನೊಳ್ ನೋಡೆನ್ನ ಕಕ್ತಿಯಂ ಭಕ್ತಿಯುವುಂ ॥ 263 ॥

ವ ॥ ಎಂದು ನುಡಿದ ಭಾರದ್ವಾಜತನೂಜನ ನುಡಿಗೆ ರಾಜರಾಜನವಧಾರಿಸಿ ॥

ಕಂ ॥ ಹತದೇಹವ್ಯಾರಂಭದೆ
ಹತಕಾರ್ಯಂ [ಗೀಗ ಹೃದ್ಗತಂ] ಪ್ರತಿಕಾರಂ ।
ಪ್ರತಿವಸ್ತು ವೋಕ್ಷವುಕ್ಕುಂ
ಹತೋರುವಾದೆನಗೆ ವೂಲ್ಪುದೇಂ ಪ್ರತಿಕಾರಂ ॥ 264 ॥

ವ ॥ ಎಂದು ಪರವುನಿರ್ವೇದಪರಾಯಣನಾಗಿ ನುಡಿದು ॥

ಕಂ ॥ ಹತದೇಹ ಹತಭುಜದ್ವಯ
ಹತೋರು ಹತಜೀವ ಹತಕರೀ[ಟಂಗಿನ್ನುಂ] ।
ಪತಿಕಾರ್ಯವೆಂಬುದುಂಟೇ
ಗತಿಯಂ ಸಾಧಿಸುವುದಲ್ತೆ ತಾಂ ಪ್ರತಿಕಾರಂ ॥ 265

ಅರಿಚರಣಪಾಂಸು ಪತ್ತಿರೆ
ಕರಾಗ್ರದಿಂ ತೊಡೆದು ಕಳೆದೆ ವಸ್ತ್ರಾಂಚಲದಿಂ ।
ಗುರುನಂದನ! ನೀನೆನ್ನಯ
ಪರಿಭವಪಾಂಸುವನದೆಂತು ಪೇಳ್ ಕಳೆದಪೆಯ್ಯೆ ॥ 266 ॥

ವ ॥ ಎಂದು ನುಡಿದ ಸುಯೋಧನಂಗೆ ಮಗುೞ್ದು ಮಶ್ವತ್ಥಾಮಂ ತನ್ನ ಶಕ್ತಿಪ್ರಭಾವಮಂ ತಿಳಿಪೆ ।

ಕಂ ॥ ಹರಿಯನುಬಲದಿಂ ಪಾಂಡವ
ರಱಿಯರ್ಗೆಲಲೀಶ್ವರಾಂಗನಶ್ವತ್ಥಾಮಂ ।
ಪರಬಲಕಜೇಯನೆಂಬಂ
ತರಮಂ ನೃಪನಂತರಂಗದೊಳ್ ಚಿಂತಿಸಿದಂ ॥ 267 ॥

ಮ ॥ ಇದುವಂ ನೋಡುವೆನಿನ್ನು ಮೆನೆನ್ನೊಡಲೊಳಿನ್ನೀ ಪ್ರಾಣಮುಳ್ಳನ್ನ ವೋ
ವದೆ ಕೌಂತೇಯರನಿಕ್ಕಿ ಪಂದಲಿಗಳೆಂ ತಂದಿಕ್ಕ! ಮುನ್ನೆನ್ನ ಕೂ ।
ರದ ದಾಯಾದರ ಮಿಕ್ಕ ಸಂದಲಿಗಳಂ ಕಣ್ಣಾಱೆ ಕಂಡೆನ್ನ ಚಿ
ತ್ತದೊಳೊಂದುಂ ತೊದಳಿಲ್ಲದೆನ್ನಸುಗಣಕ್ಕುತ್ಕ್ರಾಂತಿಯಂ ಮಾಡುವೆಂ ॥

ವ ॥ ಎಂಬುದುಮದಾವಗಹನವಂತೆಗೆಯ್ವೆನೆಂದು ಪೂಣ್ದು ಮಹೀಕಾಂತೆಯುಮಂ ಶ್ರೀಕಾಂತೆಯುಮಂ ಕಣ್ಗೆಡೆ ಜಡಿದು ॥

ಕಂ ॥ ಉರಗೇಂದ್ರಫಣಾಮಣಿನೂ
ಪುರಮಣಿ! ಜಲರಾಶಿರತ್ನಮುಡೆಮಣಿಯೆನಿಪಾ ।
ಕುರುಧರೆ ನಿಜರೂಪದೆ ಬಂ
ದಿರದಾಗುರುನೂನುಗಳ್ಕೆ ಜಿನನೇನೆಂದಳ್ ॥ 269 ॥

ಒರ್ವಳ್ಕೊಡೆವಿಡಿವುದು! ಮು
ತ್ತೊರ್ವಳ್ಬಹುರಜಮನಿಕ್ಕುತಿರ್ಪುದು! ಕುರುವಂ ।
ಶೋರ್ವೀಪತಿಗಾಂ ಬರ್ಬಿನ
ಮಿರ್ವರುಮಿಂತಿರ್ಪುದೆಂದನಶ್ವತ್ಥಾಮಂ ॥ 270 ॥

ವ ॥ ಅಂತವರಂ ನಿಯೋಜಿಸಿ ನೇಸರ್ಪಡುವಿನಮಿರ್ದು ನಿಜಪತಿಯಂ ಬೀೞ್ಕೊಂಡು ಹಸ್ತಿನಾಪುರಮಂ ಪೊಕ್ಕಲ್ಲಿ ॥

ಕಂ ॥ ಕಂಜವನದಂತೆ ಲಕ್ಷ್ಮೀ
ರಂಜಿತವೂನಿದ್ರಿತಂ ಮನೋಹರಕೋಟಾ ।
ವ್ಯಂಜಿತವೆನಿಪ್ಪ ಬೀಡಂ
ಮುಂಜೞಿವಂತಿರುೞಿಲೊದನಶ್ವತ್ಥಾಮಂ ॥ 271 ॥

ವ ॥ ಅಂತಿಱಿದುಂ ಪಿರಿದುಂ ಪಯಣಂಬಂದು ಬಱಿಲ್ದುಂ ಕಾವಲರಂ ತೊಟ್ಟನೆ ಮುಟ್ಟಿವಂದಾಗಳಾಕಳಕಳವಮಂ ಕೇಳ್ದು ನಿದ್ರೆಯಿಂದೆಱ್ಚತ್ತು ಕರತಳದಿಂ ಕಣ್ಣಂ ಪೊಸೆಯುತ್ತುಮೆಱ್ದು ತಂತಮ್ಮ ತಲೆದೆಸೆಯೊಳರ್ದ ಕರವಾಳಂ ಕೊಂಡು ನಿಂದನೆಱೆಯೊಳಗರದಿರ್ದ ತಲೆಗಾಪಿನಾಳುಕ್ಕಡದಾಳಂ ಮೇಲಿಕ್ಕೆ ಉಕ್ಕಡದಾಳ್ ಪುರವಟ್ಟಿಗೆಯಾಳಂ ಮೇಲಿಕ್ಕೆ ಪುರವಟ್ಟಿಗೆಯೊಳಗೆ ಮೂಮನಕಂ ಮನಗಿ ಜವಂ ನೇಣ್ಚಿರ್ಚಿದಂತೆ ಪೆಂಡಿರ್ಮಕ್ಕಳೆನ್ನದೆ ನಿವಳವಟ್ಟವುಪ್ಪನವೊಂದಕ್ಷೋಹಿಣೀಬಲವೆಲ್ಲವಂ ಪೇೞೆ ಪೆಸರಿಲ್ಲವೆಂಬಂತೆ ಕೊಂದು, ತನಗೆ ಕಟ್ಟುದಿರೊಳರ್ದ ಧೃಷ್ಟದ್ಯುಮ್ನನುವುಂ ಮುಟ್ಟಿ ಮೂದಲಿಸಿ, ತಮ್ಮಯ್ಯನಂ ಪರಿಭವಿಸಿದ ಪಗೆಯಂ ಕೊಂದು ದೆಸೆವಲಿಗೆಯ್ದು ಶಿಖಿಂಡಿಜಕೈಕೇಯಾನಕಯುಧಾಮನ್ಯೂತ್ತಮೌಜಸಪ್ರಭೃತಿಗಳಾವುನಿಕ್ಕಿ ಪಾಂಡವರ ಶಂಕೆಯಿಂ ಸುತಸೋಮಪ್ರಭೃತಿಗಳಪ್ಪ ಪಂಚಪಾಂಡವರ ತಲೆಗಳಂ ಕೊಂಡು ಥಳಥಳನೆ ನೇಸವರ್ಮೂಡುವಾಗಳ್ ಬಂದು "ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಿವೆ" ಯೆಂದು ದುರ್ಯೋಧನನ ಮುಂದಿಕ್ಕಿದೊಡಾವುಹಾನುಭಾವನಾತಲೆಗಳಂ ನೀಡುಂ ಭಾವಿಸಿ ನೋಡಿ ॥

ಚಂ ॥ ಪವನಜನಾಸ್ಯಮಲ್ತಿದವನಾನನಮಂಪ್ಪೊಡೆ ಮುಟ್ಟಿನಿರ್ದು ನೋ
ಡುವುದೆ! ಮುದೀಯವಕ್ತ್ರಮನೆ ಕೆವ್ಮನೆ ಪೋಯ್ತು ಱಿವಿಲ್ಲದಾಯ್ತು ಪಾಂ ;
ಡವರ ಶಿರಂಗಳಲ್ಲವಿವು! ಕೃಷ್ಣೆಯ ಸೂನುಗಳಪ್ಪ ಪಂಚಪಾಂ
ಡವರ ಶಿರಂಗಳಂ ನೆಱೆ ವಿಚಾರಿಸದಕ್ಕಟ ಕೊಂಡುಱರ್ವುದೇ ॥ 272 ॥

ಕಂ ॥. ಪರಮೇಶ್ವರಾವತಾರನೆ
ಪರಮಜ್ಞನೆ ನೀಂ ವಿವೇಕವಿಕಳರವೋಲ್ ಬಾ ।
ಲರ ತಲೆಯನಱಿದು ತಂದೆಯೊ!
ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ ॥ 273 ॥

* * * * * * *

ವ ॥ ಎನೆ ಕೇಳ್ದು ರುದ್ರಾವತಾರಂ ಪ್ರಳಯಕಾಲರುದ್ರನಂತೆ ತಾಂ ಕೊಲೆಗೆಯ್ದು ರೌದ್ರಪಾಪಪ್ರಾಯಶ್ಚಿತ್ತಪ್ರವರ್ತನಾರ್ಥಂ ಹಿವುವತ್ಪರ್ವತಕ್ಕೆ ಪೋಪುದುಂ ಚಿತ್ತಸಮಾಧಾನಂಗೆಯ್ದು ಜಿತನಂ ಸ್ಮರಿಯಿಸಿ ಸುರಲೋಕಮಂ ಸಾಧಿಸುವೆನೆಂದು ಅಶ್ವಮೇಧಾದಿಗಳಂ ವಿಸರ್ಜಿಸಿ ತದ್ದಿವಸಾವಸಾನಸಮಯದೊಳ್ ದುರ್ಯೋಧನಂ ಪ್ರಾಣವಿಸರ್ಜನೋನ್ಮುಖನಾದನಿಂತು ॥

ಉ ॥ ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇ
ಜಂ ಕಿಡುತಿರ್ಪನಂ ನಿಜಕರಂಗಳನಂದುಡುಗುತ್ತುಮಿರ್ದು ಚ ।
ಕ್ರಾಂಕಮೃಗಲ್ವಿನಂ ಕ್ರವಾದಿನಂಬರಮಂ ಬಿಸುಟುರ್ಬಿನಂಧಕಾ
ರಂ ಕವಿತರ್ಪನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ ॥ 274 ॥

ಮೊದಲೊಳ್ಮಂತನುಸೂನು ಪತ್ತುದಿವಸಂ ಚಾಪಾಗಮಾಚಾರ್ಯನ
ಯ್ದುದಿನಂ ಭಾಸ್ಕರನಂದನಂ ದಿನಯುಗಂ ಶಲ್ಯಂ ಭರಂಗೆಯ್ದುದೊಂ ।
ದುದಿನಂ ತದ್ದಿನಮೀ ಸಂಯೋಧನಗದಾಯುದ್ಧಂ ಪರಿಚ್ಛಿನ್ನವಿಂ
ತು ದಿನಂಗಳ್ ಪದಿನೆಂಟಱೊಳಂ ಸವೆದುದಾರ್ದ್ರಾಹವಂ ಭಾರತಂ ॥ 275 ॥

ಕಂ ॥ ಕದನಂ ಹೇವಮಂತದ ಕು
ದ್ಧದಿನದ ತೇರಸೆಯ ಭರಣಿ ರವಿವಾರಾದ್ಯಂ ।
ತದವಮಾವಾಸ್ಯಯುತವುಂ
ಲದೊಳಂ ನಿವರ್ಮೂಲವಾಯ್ತು ಕೌರವವಂಕಂ ॥ 276 ॥

ವ ॥ ಅಂತು ಭಾರತಂ ಸವುರಭಾರಾವತಾರವಾಗೆ ॥

ಮ ॥ ಜಯಲಕ್ಷ್ಮೀಪತಿಯೊಳ್ ಪರಾಕ್ರಮಕೃತಾಲಂಕಾರನೊಳ್ ಸತ್ಯವಾ
ದಿಯೊಳರ್ಥಿಪ್ರಿಯನೊಳ್ ಖಳಪ್ರಳಯನಿಸ್ಸಂದೇಶಿಯೊಳ್ ಪಂಡಿತಾ ।
ಶ್ರಯನೊಳ್ ರಾಜಿತರಾಜಚಿಹ್ನೆಯುತನೊಳ್ ಶ್ರೀದೇವಿಯುಂ ಭೂಮಿದೇ
ವಿಯುಮುತ್ಕರ್ಷದಿಂದೆ ಬಂದು ನೆರೆದರ್ ಚಾಳುಕ್ಯಕಂದರ್ಪನೊಳ್ ॥ 277 ॥

ಧರಣೀಕಾಂತೆಯೆ ಬಂದು ತಾಂ ಪರಸೆಯುಂ ಶ್ರೀಕಾಂತೆಯುಂ ಬಂದು ತಾಂ
ಪರಮಾನಂದದೆ ಸೇಸೆಯುಂ ಸುರಿಯೆಯುಂ ತಾನಾಂತುಕೊಂಡಂ ಮಹಾ ।
ದರದಿಂ ದಕ್ಷಿಣಬಾಹುದಂಡದೆ ಜಯಶ್ರೀಕಾಂತೆಯಂ ತಾಳ್ದಿ ಮೂ
ವರುಮಾಕಾಂತೆಯರಂ ಮನಂಗೊಳಿಸಿದಂ ಚಾಳುಕ್ಯಕಂಠೀರವಂ ॥ 278 ॥

ಇಂತಿದು ದುರ್ಯೋಧನನುತ್ಕ್ರಾಂತಿವರ್ಣನಂ
ನವಮಾಶ್ವಾಸಂ.

ಕಂ ॥ ಶ್ರೀಗೆ ಜಯಶ್ರೀಗೆ ವಚ
ಶ್ರೀಗೆ ಮನೋರಮಣನೆನಿಸಿ ಸಕಲಧರಿತ್ರೀ ।
ಭಾಗದೆ ನೆಗಳ್ದಿರ್ದಂ ದಿ
ಜ್ಞಾಗಾಧಿಪಥವಳಕೀರ್ತಿ ಸಾಹಸಭೀಮಂ ॥ 279 ॥

ವ ॥ ಆಗಳ್ ಮುರಾಂತಕಂ ಸಾಹಸಭೀಮನ ಸಾಹಸಕ್ಕೆ ಮೆಚ್ಚಿ ಧರ್ಮನಂದನಾದಿಗಳ ಮೊಗಮುಂ ನೋಡಿ ॥

ಕುರುಪತಿಪಾತದಿಂ ಕೃತಭಯಂಕರಮರ್ಜುನಬಾಣಘಾತಜ
ರ್ಝರಿತಕರೀರಸ್ಯೆಂಧವಮಥಿಪ್ರಪತದ್ಗರುಸೈನ್ಯರಾಶಿ ತೋ ।
ಮರಹತಕರ್ಣಮಸ್ತಮಿತಶಲ್ಯಶರಸ್ಥಿರಭೀಮಸಾಹಸಂ
ದೊರೆಯೆನಿಸಿತ್ತು ಭಾರತಕೆ ಗೆಲ್ದ ರಣಂ ಕುಮರಂಕರಾಮನಾ ॥ 280 ॥

* * * * * *

ಕಂ ॥ ಇಳೆಯೊಳಗಂಕುರಿಸಿ ಹರಿ
ತ್ಕಳದೊಳ್ ವರ್ಧಿಸಿಯೆ ನೀಳ್ದು ಗಗನಕ್ಕಸುಹೈ ।
ತ್ಕಳನಾರೀನಯನಾಂಬುವೆ
ಬೆಳೆಸಿದುದಲೆ! ಕೀರ್ತಿವಲ್ಲಿಯಂ ಸತ್ತಿಗನಾ ॥ 281 ॥

ಚಂ ॥ ಕುರುಧರೆಯಂ ಗಜಾಶ್ವಚರಣಾಗ್ರದೊಳಿಟ್ಟು ಕಡಂಗಿ ವೈರಿಭೂ
ಪರ ರುಧಿರಾಂಬುವಿಂದೆ ಪೆದೆವೂಡಿಯೆ ಪುಟ್ಟಿತಕುಂಭಿಕುಂಭಭಾ ।
ಸುರನವವೌಕ್ತಿಕಪ್ರಕರಬೀಜವನೋಳಿಯೆ ಸೂಸಿ ತಾರಭೂ
ಧರಸಿತಕೀರ್ತಿಯೆಂಬ ಪೆಳಸಂ ಪೆಳೆದಂ ಪರಸೈನ್ಯಭೈರವಂ ॥ 282 ॥

ನುಡಿದುದೆ ಮೇಣ್ ತೊದಳ್ನುಡಿದುದೆಂದೊಡಮಿಯಾದೆ ಪೊಣ್ದ ಪೂಣ್ಕೆ ಮಾ
ಣ್ದೊಡನಿಱಿಲಿನಲ್ಲಿ ಮೆಯ್ಸಿಡೆದು ಪಿಂದಡಿಯಿಟ್ಟೊಡವನ್ಯಕಾಂತೆ ಬಂ ।
ಪೊಡನಳಪಿಂದೆ ಸೋಲೆಱ್ದೊಡವುದಾಗದೆ ಅಂಬುಧಿ ಮೇರೆದಪ್ಪುಗುಂ
ನಡುಗುಗು ಧಾತ್ರಿ! ದಿಕ್ಕರಿ ಭಯಂಗೊಳುಗುಂ ಕುವರಂಕರಾವನಾ ॥ 283 ॥

ವ ॥ ಎಂದಭಿವರ್ಣಿಸುತ್ತಿರಲಾಗಳ್ ಧೃತರಾಷ್ಟ್ರನುಂ ಗಾಂಧಾರಿಯುಂ ಬರಲ್ ಧರ್ಮನಂದನಂ ಪೊಡವಟ್ಟು ॥

ಉ ॥ ಈಯದೆ ಬಾಡವಯ್ದನೆವುಗೊಳ್ಳದೆ ಸಂಧಿಯನೆನ್ನ ನಿವ್ಮ ಗಾಂ
ಗೇಯರ ಮಾತುಗೇಳದಱಿದಂ ಕುರುರಾಜನದರ್ಕೆ ದುಃಖದಿಂ ।
ಬಾಯಱಿಯಲ್ಕೆ ನೇಡ! ನಿವುಗಾಂ ವುಗನಲ್ಲನೆ! ನೀವೆ ತಂದೆಯುಂ
ತಾಯೆನಲಕ್ಕುಮಿನ್ನೆವುಗೆ ಪಾಂಡುವುಹೀಪತಿಯಿಂದವುಗ್ಗಳಂ ॥ 284 ॥

ವ ॥ ಎಂಬುದುವಾಪ್ರಸ್ತಾವದೊಳ್ ಸಾವುಂತಾಂತಃಪುರಕಾಂತೆಯರೊಂದಾಗಿ ತಂ
ತಮ್ಮ ಜೀವಿತೇಶ್ವರರಂ ಸಂಗ್ರಾವರಂಗದೊಳಱಿಸುತ್ತುಂ ಬಂದು ॥

ಗಳತಾಕ್ರಪ್ರವಿಲೋಚನಂ ವಿಚಲಿತವ್ಯಸ್ತಾಂಬರಂ ಸ್ರಸ್ತ ಕುಂ
ತಳಕೇಕಂ ಗತಪುಷ್ಪದೀನವದನಂ ದೀರ್ಘೋರ್ಷ್ಣನಿಶ್ವಾಸನಂ ।
ಕಾಳಚಿತ್ತಂ ಪರಿದೇವನಪ್ರಜವರಹಾಹಾರಾವಮುಂ ಕೋಕವಿ
ಹ್ವಲದಿಂ ಕೂಱುದಿಗೊಂಡುದಾ ಕುರುಕುಲಕ್ಷ್ಮಾಪಾಲನಂತಃಪುರಂ ॥ 285 ॥

ಕಂ ॥ ಮುನಿಯಿಸಿದರಾತಿಯಂ ಕೊ
ಲ್ವೆನೆಂದು ಪೂಣ್ದಂತೆ ಪೂಣ್ಕೆ ತಪ್ಪದೆ ಕೊಲಲೇಂ ।
ನಿನಗಲ್ಲದಿಂತು ತೀರ್ಗುವೆಂ!
ಅನುನಯದಿಂ ನುಡಿದ ಬಲ್ಮೆಯಿಱಿವಬೆಡಂಗಾ ॥ 286 ॥

ಪೆಱರಾಳ ಪೆಱರ ಕುದುರೆಯು
ಪೆಱರಾನೆಯು ಪೆಱರ ರಥದ ಪೆರ್ಬಲದಿಂದಂ ।
ಇಱಿವರ್ಪೆಱರೇಕಾಂಗದಿ
ನಿಱಿವವರಾರ್ನಿನ್ನ ತೆಱದಿನಿಱಿವಬೆಡಂಗಾ ॥ 287 ॥

ಜವನುಱೆ ಕೊಲ್ವವೊಲಾಕೌ
ರವರಂ ತವೆ ಕೊಂದು ಕೌರವೇಶ್ವರಬಲಮಂ ।
ತವೆ ಕೊಂದು ನಿನ್ನೊಳೀಕಾಂ
ಗವೀರನೆನೆ ನೆಗಟ್ಟಿನಾವನಿಱೆವಬೆಡಂಗಾ ॥ 288 ॥

ಮ.ಸ್ರ॥ ಮನೆವೆಣ್ಣಂ ಮಕ್ಕಳೆಂಬೀನುಡಿ ಪುಸಿ! ನಿಜಕೃಷ್ಣಂಗದೊಳ್ಪಟ್ಟಿ ಕೀರ್ತ್ಯಂ
ಗನೆ ಕುಭ್ರಚ್ಛಾಯೆಯೂದಳ್ ಬಳೆದಳನಿಲಮಾರ್ಗಂಬರಂ ಪರ್ಬಿದಳ್ದ ।
ಗ್ವನಿತಾನಂದೋಹವಂ ತಾಪಿನವಡಿಯಿಡುವಳ್ ಗೋತ್ರಕೈಲಾಗ್ರದೊಳ್ ಮಂ
ಜ್ಞನಮಂ ವ್ಯೋಮಾಪಗಾವಾರಿಯೊಳೆನೆ ಪರಿದುಂ ಭುಂಭುಕಂ ಸಾಹಸಾಂಕಂ ॥

ವ ॥ ಎಂದು ನಾರಾಯಣಂ ಪೊಗಟುತಿರ್ಪನ್ನೆಗಂ ಕೌರವನಿತಂಬಿನಿಯರ್ ಗಾಂ
ಧಾರೀಧೃತರಾಷ್ಟ್ರರ ಕಾಲವೇಲೆ ಕವಿದು ಬೀೞ್ದು ॥

ಉ ॥ ಎಲ್ಲಿದನೆಲ್ಲಿದಂ! ಕುರುಮಹೀಪತಿಯೆಲ್ಲಿದನೆಲ್ಲಿದಂ! ಮಹೀ
ವಲ್ಲಭನಿಂದುವಂಕತಿಲಕಾಹ್ವಯನೆಲ್ಲಿದಂ! ಲಸ ।
ತ್ಫುಲ್ಲವಕೀರ್ತಿ ಚಾರುತರಪೂರ್ತಿ ಫಣೀಂದ್ರಪತಾಕನೆಲ್ಲಿ! ತಾ
ನೆಲ್ಲಿದನೆಲ್ಲಿದಂ ಗಡ! ಮನಃಪ್ರಿಯನೆಲ್ಲಿದನೋ! ಸುಯೋಧನಂ ॥ 290 ॥

ಕಂ ॥ ಭಾನುಮತಿವದನಬಿಸರುಹ
ಭಾನು ಲಸಚ್ಚಂದ್ರಮತಿಮುಖೇಂದೀವರಚಂ ।
ದ್ರಾನೋಪನೆಲ್ಲಿದನೊ! ರವಿ
ಸೂನುಮನಃಪ್ರಿಯನೆನಿಪ್ಪ ಕುರುಕುಲತಿಲಕಂ ॥ 291 ॥

ವ ॥ ಎಂದು ಕರುಣಾಕ್ರಂದನಂಗೆಯ್ವುದುಮುಂಧರಾಜಂಗಂ ಗಾಂಧಾರಿಗಂ ಯುವ
ನಂದನನಿಂತೆಂದಂ ॥

ಕಂ ॥ ನಿಮಗೆ ಪೆಸಕೆಯ್ವೆವೆಮ್ಮಂ
ಕ್ರಮದಿಂ ಪೆಸಕೆಯ್ಸಿಕೊಂಡು ನೆಲನಂ ಪೂರ್ವ ।
ಕ್ರಮದಿಂದಾಳ್ವುದು ನೀಂ ನಿ
ಮ್ಮ ಮಕ್ಕಳಂ ಮಱೆದು ನೋಡಿಮೆಮ್ಮುಮನಿನಿಸಂ ॥ 292 ॥

ವ ॥ ಎಂಬುದುಂ ಧೃತರಾಷ್ಟ್ರನಿಂತೆಂದಂ ॥

ಕಂ ॥ ನಿಮಗೆವಗೇನುಂ ಮೂನಸ
ವಿವೋಹಮಿಲ್ಲಿವಗವೆಯ್ದೆ ನೀನೆ ವಗಂ ಕೇಳ್ ।
ಯಮನಂದನ! ನೀಂ ವಡಿದರ
ಸಂವಕ್ಕಳಂ ಬಿಡುವುದವರ ವನಿತೆಯರ್ಗೀಗಳ್ ॥ 293 ॥

ವ ॥ ಎಂಬುದುಮಾಪ್ರಸ್ತಾವದೊಳ್ ॥

ಕಂ ॥ ಗಳಯಿಸೆ ಶೋಕಾನಲನಿಂ
ಜಳಜಾನನೆ ನೊಂದು ಬೆಂದು ನೆನೆದಲ್ಲಿಯೆ ಕಂ ।
ಡೊಲಲಂಜಿ ಶೋಕರಸದಿಂ
ಪಳಯಿಸಿದಳ್ಕೊಂತಿ ತನ್ನ ಜಿಷ್ಣುಜ ಮಗನಂ ॥ 294 ॥

ವ ॥ ಅಂತು ಕರ್ಣನ ಕಳೇಬರವಮಂ ತಟ್ಕೈಸಿ ಪಳಯಿಸುವ ನಿಜಜನನಿಯಂ ಧರ್ಮನಂದನಂ—ಇವನಾರ್ಗೆಂದುಂ ಬೆಸಗೊಳ್ವುದುಂ ॥

ಮ ॥ ವನಜಾತಪ್ರಿಯಬಂಧುಗಂಗಪತಿಯಂ ಧರ್ಮಂಗೆ ನಿನ್ನಂ ಹುತಾ
ಶನಮಿತ್ರಂಗೆ ಬಕಾರಿಯಂ ಕುಲಿಶಿಗಂ ಗಾಂಡೀವಿಯಂ ಪೆತ್ತೆನಾ ।
ದಿನಕೈನ್ನಂದನನೆನ್ನ ಜಿಷ್ಣುಜ ಮಗಂ ನಿಮ್ಮಗ್ರಜಂ ಕರ್ಣನಾ
ನಿನಿತಂ ನಿಮ್ಮಯ ಮೋಹದಿಂದುಸಿರದಿರ್ದೇ ಕೊಂದೆನ್ಯೆ ಧರ್ಮಜಾ ॥ 295 ॥

ವ ॥ ಎಂಬುದುಂ ಧರ್ಮನಂದನನಾಗಳಂತೆಂದಂ ॥

ಮ ॥ ಕರಮಿಂತೊಂದವಿವೇಕಮಂ ನೆಗಳ್ದಿರಂದೇಕಿಂತುಟಂ ಪೇಳದಿ
ರ್ದಿರೆ! ಪೇಳ್ದೊರ್ಗೊಡಿದೇಕೆ ಕೂಡಿದಪುದೆವ್ವಣ್ಣಂಗೆ ಕರ್ಣಂಗೆಯು ।
ರ್ವರೆಯಂ ಕೊಟ್ಟವನಾಳ್ನನಾಗೆ ಬಲುಕಾವಾಳಾಗಿ ಸೋದರ್ಯರಂ
ತಿರೆವೇ! ಪೊಲ್ಲದುಗೆಯ್ದಿರೆಂದು ಜಡಿದರ್ ಕುಂತೀಸುತರ್ಕೊಂತಿಯಂ ॥ 296 ॥

ವ॥ ಎಂಬುದುಂ ನಾರಾಯಣಂ ಕ್ಷತ್ರಿಯಧರ್ಮ ಸೂಕ್ಷ್ಮಮಂ ನುಡಿದು ಸೈರಿಸುವುದೆಂದವರಂ ವಿಗತಶೋಕರ್ಮಾಡಿ ದುರ್ಯೋಧನಪ್ರಭೃತಿಗಳ ವೆಣನನೊಂದೆಡೆಯೊಳಟ್ಟು ದ್ವಿಜರಿಂ ಸಂಸ್ಕಾರಕರ್ಮವಮಂ ನಿರ್ವರ್ತಿಸಿ ಕರ್ಣನ ಕಳೇಬರವಂ ಬ್ರಾಹ್ಮಣರಿಂ ತಾವೆ ಸಂಸ್ಕಾರಮಂ ಮಾಡಿ ಸಮಸ್ತರ್ಗಂ ಜಲದಾನಕ್ರಿಯೆಗಳಂ ನಿವರ್ತಿಸಿ ತದನಂತರಂ ಕೊಂತಿಯುಂ ಗಾಂಧಾರಿಯುಂ ಧೃತರಾಷ್ಟ್ರನುಂ ಕುರುನರೇಂದ್ರನರಸಿಯರ್ಮೊದಲಾಗೆಲ್ಲರುಮನಶನದೀಕ್ಷೆಯಂ ಕೈಕೊಂಡುತ್ತಮುಮೋಕ್ಷಮಂ ತಾಳ್ದಿದರ್. ಇತ್ತಲ್ ಧರ್ಮನಂದನಂ ಮುಕುಂದಂಗೆ ಕೈಯಂ ಮುಗಿದು ॥

ಮ ॥ ಇನಿತೊಂದುಗ್ರಸಮಸ್ತಭೂರತಮಹಾಭೂರಾತಿಯುದ್ಧಂ ಮುಕು
ನ್ದ! ನಿಜಾನುಗ್ರಹದಿಂದವಾಯ್ತು! ಕಿಱಿಯಂ ಪಾರ್ಥಂ ಮಹೀಮೋಹಮಿ ।
ಲ್ಲಿನಗೀತಂ ಕುರುವಂಶಲಬ್ಧಜಯನೀಭೀಮಂಗೆ ನೀಂ ಪಟ್ಟಬಂ
ಧನಮಂ ಮಾಱ್ಪುದದರ್ಕೆ ಹಸ್ತಿನಪುರಪ್ರಸ್ಥಾನಮಂ ಮಾಡುವಂ ॥ 297 ॥

ವ ॥ ಎಂಬುದುಂ ಭೀಮಂಗೆ ಪಟ್ಟಬಂಧಮಂ ಮಾಱ್ಪುದೆಂದು ವಾಸುದೇವಂ ಮುಂತಾಗಿ ಸಹದೇವಂ ನಿರೂಪಿಸಿದ ಶುಭಮುಹೂರ್ತದೊಳ್ ಹಸ್ತಿನಪುರಮಂ ಪೊಕ್ಕ ॥

ದೆಸೆಯಂ ತೆಕ್ಕನೆ ತೀವೆ ತಾಟಿತಮಹಾಭೇರೀರವಂ ವಿಪ್ರರೆ
ಣ್ದೆಸೆಯೊಳ್ವೇದನಿನಾದದಿಂ ಪರಸೆ ಪಂಕೇಜಾಕ್ಷಿಯರ್ಕೂಡಿ ಸಂ ।
ತಸದಿಂ ಸೇನೆಯನಿಕ್ಕೆ ಪಾಂಡವಬಲಪ್ರಾಕಾರವೀರಂಗೆ ಸಾ
ಹಸಭೀಮಂಗೆ ಮನೋಮುದಂಬೆರಸು ಕೃಷ್ಣಂ ಕಟ್ಟಿದಂ ಪಟ್ಟಮಂ॥ 298 ॥

ವ ॥ ಆಂತು ಭೀಮಸೇನಂಗೆ ಪಟ್ಟವುಂ ಕಟ್ಟಿ ಹಸ್ತಿನಪುರದೊಳುಂ ಮುತ್ತೈವರುಂ ಹಿಮುಸೇತುವರಂ ಮಹಾಮಂಡಲಿಕರಂ ಬೆನಕೆಯ್ಸಿಕೊಂಡುಂ ಸುಖದಿಂ ರಾಜ್ಯಂಗೆಯ್ಯುತ್ತಿರ್ದರ್ ॥

ಕಂ ॥ ಶಕನವುಗತಿ ಋತುಯುಗಶಶಿ
ನಿಕರಾಂಕಂ ಚಿತ್ರಭಾನು ಸಂವತ್ಸರ ಕಾ ।
ರ್ತಿಕಸಿತನಪ್ತಮಿಯೊಳ್ನೆರೆ
ದು ಕರಂ ಬುಧಸೇವ್ಯವಾಯ್ತು ರನ್ನನ ಕಾವ್ಯಂ(?) ॥ 299 ॥

ಇಂತಿದು ಭೀಮಸೇನ ಪಟ್ಟಾಭಿಷೇಕವರ್ಣನಂ
ದಶಮಾಶ್ವಾಸಂ.

ಪಂಪರಾಮಾಯಣಂ.

ಶ್ರೀರಾಮಚಂದ್ರಚರಿತಪುರಾಣಂ.

ನಾಗಚಂದ್ರಕವಿ—ಕ್ರಿ. ಶ. 1053.

ಕಂ ॥ ವಿಪುಲಾಚಳದೊಳ್ವೀರಜಿ
ನಪಾರ್ಶ್ವದೊಳ್ ಗೌತಮಂ ಗಣಾಗ್ರಣಿ ಮಗಧಾ ।
ಧಿಪನಱಿಯೆ ನೆಱೆಯೆ ಪೇಳ್ದುದ
ನಪೂರ್ವಮೆನೆ ರಾಮಕಥೆಯನಭಿವರ್ಣ್ನಿಸುವೆಂ ॥ 1 ॥

ಜಗಮುಂ ಯುಗಮುಂ ಮನ್ನಾ
ದಿಗಳಿಂ ಕಾಲಸ್ವರೂಪಮುಂ ಜಿನರುಂ ಚ ।
ಕ್ರಿಗಳಿಂ ಹಲಧರಕೃಷ್ಣ
ದಿಗಳಿಂ ಶ್ರೀರಾಮಚರಿತದೊಳ್ವರ್ಣ್ನಿಸುವೆಂ ॥ 2 ॥

ವ ॥ ಅದೆಂತೆನೆ ॥

ಜಗತ್ಸ್ವರೂಪಂ

ಮ. ಸ್ರ॥ ಕಡೆದೋಱುತ್ತಿರ್ಪ್ಪಿನಬ್ಬಗಸದನಡುವೆ ವಾಯುತ್ರಯಂ ಸುತ್ತಿ ವೇಳಾ
ಪ್ಪಡೆವನ್ನರ್ತ್ತನ್ನನೆಂಬಗ್ಗಳಕೆವಡೆದಧಸ್ತಿರ್ಯ್ಯಗೂರ್ದ್ಧ್ವತ್ರಿಭೇದಂ ।
ಬಡೆದಾಱುಂದ್ರವ್ಯದಿಂ ಮೆಯ್ವಡೆದಖಿಲಜಗಂ ರಜ್ಜುವೀರೇಳರುದ್ದಂ
ಬಡೆದತ್ತಾಪ್ತಂ ಜಿನಂ ಕೇವಲವಿಪುಲತುಲಾಕೋಟಿಯಿಂ ತೂಗೆ ತನ್ನಂ ॥ 3 ॥

ಕಂ ॥ ಅನತಿಕ್ರಯಮಾದುದಾತ್ರಿಭು
ವನಲಕ್ಷ್ಮಿಗೆ ಮಧ್ಯಮೆನಿಪ ಮಧ್ಯಮಲೋಕಂ ।
ಜನಹೃದಯಹಾರಿಗಂಭೀ
ರನಾಭಿಮಂಡಲಮಿದೆನಿಸೆ ಜಂಬೂದ್ವೀಪಂ ॥ 4 ॥

ವ ॥ ಜಂಬೂದ್ವೀಪದ ನಟ್ಟನಡುವೆ ॥

ಕಂ ॥ ಮುಟ್ಟಿದುದು ಮೊದಲ ದಿವಮುಂ
ಪೆಟ್ಟಿದುದೆರಡನೆಯ ವಜ್ರಿಯಂ ಮೇಖಲೆಯಿಂ ।
ದಿಟ್ಟಿಗೆ ಪೊಲನಾದುದು ಪೊಂ
ಬೆಟ್ಟಂ ಜಿನಜನ್ಮಸವನಮಣಿಮಯಪೀಠಂ ॥ 5 ॥

ಅಕ್ಷೋಣೀಧರವಲ್ಲಭ
ದಕ್ಷಿಣದಿಙ್ಮುಖದೊಳೆಸೆದು ಕಶಿಖಂಡದವೋ ।
ಲೀಕ್ಷಣಸುಖವಯವಿಂಪ್ರ್ವದು
ದಕ್ಷಿಣಭರತತ್ರಿಖಂಡದಾರ್ಯ್ಯಖಂಡಂ ॥ 6 ॥

ಯುಗಸ್ವರೂಪಂ

ವ ॥ ಅಲ್ಲಿ ವರ್ತ್ತಿಸುವುತ್ಸರ್ಪ್ಪಣಾವಸರ್ಪ್ಪಣಯುಗಸ್ವರೂಪನಿರೂಪಣಾವಿವಕ್ಷೆಯಿಂ ಮುಖ್ಯವ್ಯವಹಾರನಯದೊಳುಭಯಾತ್ಮಕಮೆನಿಪ್ಪ ಕಾಲಸ್ವರೂಪಮಿಂತೆನೆ ॥

ಕಂ ॥ ಜೀವಾಜೀವದ್ರವ್ಯಪ
ರಾವರ್ತ್ತನಹೇತು ವರ್ತ್ತನಾಲಕ್ಷಣನ ।
ದ್ಭಾವಂ ನಿತ್ಯಮಮೂರ್ತ್ತಂ
ಕೇವಲಗಮ್ಯಂ ಸದಾನುಮೇಯಂ ಕಾಲಂ ॥ 7 ॥

ಧಾರಾಹತಿಯಿಂ ಖಂಡಿಸ
ಲಾರ್ಜಿನನಾಥನುಳಯುಲುಳಿದರನೇಕಾ ।
ಕಾರಂ ಲೋಕಾಕಾರದೊ
ಳೋರಗಲವೆನಿಪ್ಪ ಕಾಲಚಕ್ರಮಮೋಘಂ ॥ 8 ॥

ವ್ಯವಹಾರಕಾಲಭೇದಮ
ನವರಿವರೆತ್ತಲ್ಪರಾಪ್ತರಲ್ಲರ್ಜ್ಜಿನಪುಂ ।
ಗವರಲ್ಲದಣುವನಣುವಾಂ
ಟುವ ಸ್ತೋತ್ರಂ ಸಮಯಮೆಂದು ವೇಳ್ವವನಾವಂ ॥ 9 ॥

ಸಮಯಸಮೂಹಮಸಂಖ್ಯಾ
ತಮೂದೊಡಾವಳಿಯೆನಿಕ್ಕುಮಾವಳಿ ಸಂಖ್ಯಾ ।
ತಮೆನಿಪ್ಪುದಾದೊಡಂಚ್ಛ್ವಾ
ಸಮೆನಿಕ್ಕುಂ ಸ್ತೋಕಮಂಕ್ಕಮೇಳುಚ್ಛ್ವಾಸಂ ॥ 10 ॥

ಸ್ತೋಕಂ ನೆರೆದೇಳಾಗೆ ಲ
ವಾಕಾಲಂ ಮೂವತೆಂಟುವರೆಯೆನಿಪ ಲವಾ ।
ನೀಕಂ ನಾಳಿಕೆ ತನ್ನಾ
ಳಕಾಯುಗಳಮೊಮ್ಮುಹೂರ್ತ್ತಮೆನೆ ವರ್ತ್ತಿಸುಗುಂ ॥ 11 ॥

ಸಮಯಂಗುಂದೆ ಮುಹೂರ್ತ್ತದೊ
ಳಮೋಘಮಂತವಮ್ಮುಹೂರ್ತ್ತಮಕ್ಕುಂ ಮೂವ ।
ತ್ತು ಮುಹೂರ್ತ್ತಮಾಗೆ ದಿವಸಂ
ಕ್ರಮದಿಂ ಪದಿನಯ್ದುದಿವಸಮಾದೊಡೆ ಪಕ್ಷಂ ॥ 12 ॥

ಮೂಸಂ ಪಕ್ಷದ್ವಿತಯಂ
ಮೂನದ್ವಯಮೊಂದೆ ಋತು ಋತುತ್ರಯಮಯನ।
ನ್ಯಾಸವಯನದ್ವಯಂ ಜಿನ
ಶಾಸನದೊಳ್ವರ್ಷಮಯ್ದುವರ್ಷದೊಳೆ ಯುಗಂ ॥ 13 ॥

ಎರಡುಯುಗಂ ದಶವರ್ಷಂ
ತರತರದಿಂದಿಂತು ದಶಗುಣಂ ಪೆಚ್ಚುತ್ತುಂ ।
ಬರೆ ಪೆಚ್ಚುವ ಕಾಲಕಲಾ
ಪರಿಸಂಖ್ಯೆಯನಾವನಳವನಾತನೆ ದೇವಂ ॥ 14 ॥

ತವೆ ಸಾರವು ನಿನ್ನೆಗಳುಂ
ಸವೆಯುವು ನಾಳೆಗಳುಮದಱ ನೆಲೆ ನೆಱೆಯದು ಲೆ ।
ಕ್ಕವಿಡಲ್ ಶಬ್ದಂನೆಱೆಯುವು
ಪವಣಿಸಲೇಂ ಕಂಡರಾರೊ! ಕಾಲದ ಕಡೆಯಂ ॥ 15 ॥

ಅವಸರ್ಪಣದೊಳ್ಕಾಲ
ವ್ಯವಸ್ಥೆ ಷಡ್ವಿಧವೆನಿಕ್ಕುಮುತ್ಸರ್ಪಣದಂ ।
ತೆವೊಲಲ್ಲಿ ಮೊದಲಕಾಲಂ
ಪ್ರವರ್ತ್ತಿಕುಂ ಸುಷಮಸುಷಮವೆಂಬೀಪೆಸರಿಂ ॥ 16 ॥

ಎರಡನೆಯ ಸುಷಮಕಾಲದ
ಪೊರೆಯೊಳ್ಮೂಱನೆಯ ಸುಷಮದುಷ್ಷಮಕಾಲಂ ।
ಚರಿಯಿಸುಗುಂ ನಾಲ್ಕನೆಯದು
ಪರಿವಿಡಿಯಿಂದಪ್ಪುದಲ್ತೆ! ದುಷ್ಷಮಸುಷಮಂ ॥ 17 ॥

ಅನುಸಂಧಾನಂಗಿಡದ
ಯ್ದನೆಯದು ದುಷ್ಷಮವೆನಿಪ್ಪ ಕಾಲಂ ಬಳಿಕಾ ।
ಅನೆಯದಱೆ! ದುಷ್ಷಮಂ ವ
ರ್ತ್ತನಮಿಂತೀತೆಱನೆ ರಹನವುಕ್ತಿಕಾನ್ಯಾಯಂ ॥ 18 ॥

ತನುಭೋಗಾಯುಷ್ಕಂಗಳ್
ಮನುಷ್ಯರೊಳ್ಪೆಚ್ಚುವಡೆಗುಮುತ್ಸರ್ಪಣದೊಳ್ ।
ತನುಭೋಗಾಯುಷ್ಯಂಗಳ್
ಮನುಷ್ಯರೊಳ್ಕುಂದುವಡೆಗುಮವಸರ್ಪಣದೊಳ್ ॥ 19 ॥

ಎರಡುಯುಗವೊಂದೆಕಲ್ಪಂ
ನಿರಂತರಂ ಶುಕ್ಲಕೃಷ್ಣಪಕ್ಷಂಗಳವೋಲ್ ।
ಪರಿವರ್ತ್ತಿಸುಗುಂ ತತ್ಕ
ಲ್ಪರಾಶಿಗಾರಯ್ವಾಡಿಲ್ಲ ಮೊದಲುಂ ತುದಿಯುಂ ॥ 20 ॥

ವ ॥ ಆಂತನಂತಾನಂತಕಲ್ಪಸರಿವರ್ತ್ತನಮನಪ್ಪುಕೆಯ್ದು ಆರ್ಯಾಖಂಡದವಸ
ರ್ಪಣದ ಮೊದಲಕಾಲದೊಳ್ ॥

ಮ. ಸ್ರ॥ ಸುರಭೂಜಂ ಜ್ಯೋತಿರಂಗಂ ಬೆಳಗೆ ತಮದ ಮಾತಿಲ್ಲ! ಚಂದ್ರಾರ್ಕ್ಕರುಂ ಮೆ
ಯ್ಗರೆದಿರ್ಪ್ಪತ್ತೋರ್ಮೆಅವಾಱುಂಮುತು! ಪಗಲಿರುಳೆಂಬೀವಿಭೇದಂಗಳಿಲ್ಲಂ ।
ಳರಸೆಂಬೀಪಂಬಲಿಲ್ಲಾ ಜ್ಜರ್ವರೆ ಮನುಜರೆಲ್ಲಂ ಜರಾತಂಕಮಿಲ್ಲಾ
ತುರವಿಲ್ಲಾ ಶ್ಚರ್ಯ್ಯಭೂತಂ ಸುಷಮಸುಷಮಕಾಲಸ್ವಭಾವಪ್ರಭಾವಂ ॥

ಕಂ ॥ ದಂಪತಿಗಳ್ಪುಟ್ಟುವರಾ
ಗ್ಗರ್ಭಂ ಪೊಲ್ಲಮೆ ಪುಟ್ಟುದನತಿಕಯರೂಪಕಳಾ ।
ಸಂಪನ್ನರೆನಿಸಿ ಸುರಗತಿ
ಯಂ ಪಡೆವರ್ಕ್ಕಡೆಯೊಳುಚಿತಭೂಷಾವೇಷರ್ ॥ 22 ॥

ಅಪವೃತ್ಯುವಿರಹಿತವುರ್ಮ್ಮೆ
ಱೆ ಪಳಿತಮಾಯುಷ್ಯಮುದ್ದವಱುಸಾಸಿರಬಿ ।
ಲ್ಲಪಸಾರಿತಮಲಮೂತ್ರಾ
ದಿಪುರೀಷಜದೋಷವಪಳುನಂ ದಂಪತಿಯಾ ॥ 23 ॥

ಮೂ ॥ ತ್ರಿದಿನವನಿತುಂಕಾಲಕ್ಕೊರ್ಮ್ಮೆ ಸಂಸಾರಸೌಖ್ಯ
ಪ್ರದೆಮಿದೆನಿಪ ದಿವ್ಯಾಹಾರಮಂ ಭೋಜನಾಂಗಂ ।
ಬದರಫಲಸಮಾನಾಕಾರಮಂಕೊಟ್ಟುದಂ ಕೊಂ
ಡದಱಬಲದೆ ವಾಸಂಬೆತ್ತು ಯುಗ್ಮಂಗಳಿಕ್ಕುಂ ॥ 24 ॥

ಕಂ ॥ ಸಿರಿಯಾ ಪೊಸವೊಗದ ಮೆಯ್ಸಿರಿ
ಸಿರಿಯೆನಿಕುಂ ಪೂಗೊಳಂಗಳಾನೆಲನನಿತುಂ ।
ಸುರಚಾಪದ ಬೆಳಸಿನ ಹರ
ವರಿಯೆನಿಕುಂ ಪಂಚರತ್ನರುಚಿವಲ್ಲರಿಯಿಂ ॥ 25 ॥

ಚತುರಂಗುಳಮೆನಿಸಿದ ತರು
ಣತೃಣಗಾ್ರಸದೊಳೆ ತಣಿದು ತಿಳನೀರಂ ಪೀ ।
ರ್ದ್ದತನುಕ್ರೀಡಾರತಮೃಗ
ತತಿಗಳ್ದಂಪತಿಗಳಲ್ಲಿ ನಲಿಯುತ್ತಿಕ್ಕುಂ ॥ 26 ॥

ಮ ॥ ಕುಸುಮಾಸವ್ಯಗ್ವಸನಾನ್ನಪಾನವಿವಿಧಾತೋದ್ಯಪ್ರಕಾಶಪ್ರದೀ
ಪಸುಧಾಸದ್ಮವಿಚಿತ್ರಭೂಜನವಿಭೂಷಾನೀಕಮಂ ಕೊಟ್ಟು ಸಂ ।
ತಸವಂ ಮಾಡೆ ದಶಾಂಗಕಲ್ಪತರುಗಳ್ ಸ್ವರ್ಗ್ಗಕ್ಕೆ ಸಂಸಾರಸಾ
ರಸುಖಕ್ಕಗ್ಗಳಮೆನ್ನದಾಪ್ರಥಮಕಾಲಶ್ರೀಯನೇವಣ್ಣಿಪೆಂ ॥ 27 ॥

ವ॥ ಅಂತಾಕಾಲಮುತ್ತಮಭೋಗಭೂಮಿಸ್ಥಿತಿ ನಾಲ್ಕುಕೋಟಿಕೋಟಿಸಾಗರೋಪಮನನುಕ್ರಮದಿಂ ಕುಂದುತ್ತುಂ ಬಂದನಂತರಂ ಸುಷಮಮೆಂಬೆರಡನೆಯುಕಾಲದ ಮಧ್ಯಮಭೋಗಭೂಮಿಸ್ಥಿತಿಯೊಳ್ ॥

ಕಂ ॥ ತನು ನಾಲ್ಸಾಸಿರಬಿಲ್ಲಿಡಿ
ದೆನಿಕ್ಕುಮಾಯುಷ್ಯಮೆರಡುಪಳಿತೋಪಮಮಂ ।
ದಿನ ಮನುಜರಕ್ಷಫಲವೆನಿ
ತನಿತು ರಸಾಯನಮನೆರಡುದಿವಸಕ್ಕುಣ್ಬರ್ ॥ 28 ॥

ವ॥ ಮತ್ತಮಾಕಾಲಂ ಮೂಱುಕೋಟಿಕೋಟಿಸಾಗರೋಪಮಂ ಕಳೆದಿಂಬಳಿಯಂ ಸುಷಮದುಷ್ಪಮಮೆಂಬ ಮೂಱನೆಯ ಕನಿಷ್ಠಭೋಗಭೂಮಿಯೂದುದಂದಿನವಿ ಧಾನಂಗಳ್ ॥

ಕಂ ॥ ಅಳವಿಯ ಲೆಕ್ಕಂ ತಪ್ಪಿ
ಳ್ಪಳಿತೋಪಮಮಾಗೆ ದೇಹವಿಚ್ಛಾಸಿರಬಿ ॥
ಲ್ಬಳೆಯೆ ಸುಧಾಸಾರಮನಾ
ವುಳಕಫಲಪ್ರತಿಮಮಂ ದಿನಾಂತರಮುಣ್ಬರ್ ॥ 29 ॥

ವ ॥ ಮತ್ತಮಾಜಘನ್ಯಭೋಗಭೂಮಿಪ್ರವರ್ತ್ತನಮೆರಡುಕೋಟಿಕೋಟಿಸಾಗರೋಪಮದ ಕಡೆಯ ಪಳಿತೋಪಮದಿಂಟನೆಯಭಾಗದೊಳಿಯೆ ಬಳಿಯಂ ಕುಳಧರಾವತಾರಮುಕ್ಕುಮದಿಂತೆನೆ ॥

ಚತುರ್ದಶ ಮನುಗಳ್

ಕಂ ॥ ಅಜ್ಞಾನತ್ರಯರಹಿತ
ತ್ರಿಜ್ಞಾನಧರರ್ವಿದೇಹದಿಂ ಬಂದಧಿಕ ।
ಪ್ರಜ್ಞಾಪ್ಯರ್ಟ್ಟುವರೀನೆಲ
ನಾಜ್ಞಾಮುದ್ರಿತಮೆನಲ್ ಚತುರ್ದ್ದಶಮನುಗಳ್ ॥ 30 ॥

ವ ॥ ಅಲ್ಲಿ ಮೊದಲ ಕುಲಧರಂ ಪ್ರತಿಶ್ರುತಿಯೆಂಬಂ ॥

ಕಂ ॥ ಬಲವರ್ದ್ಧಕಾಲಪುರುಷನ
ಕಲಧೌತವಿಶಾಲಕರ್ಣ್ಣಕುಂಡಲಯುಗಮಂ ।
ಗೆಲಿವಂದು ಸೂರ್ಯ್ಯಶಶಿಯಂ
ಡಲಮಾಸುರಮಾಗೆ ಗಗನದೆರಡುಂಕೆಲದೊಳ್ ॥ 31 ॥

ವ ॥ ಅವಂ ಕಾಣಲೊಡವಂದಿನಯುಗಳವುತ್ಪಾತಯುಗಳವೊಗೆದುವೆಂದು ಭೀತರಪ್ಪುದುಂ ಜ್ಯೋತಿರಂಗತರುತೇಜೋಭಂಗದಿಂ ಕಾಣಲಾದುವಿವ್ವು ಚಂದ್ರಾದಿತ್ಯರ ವಿಮಾನಂಗಳೆಂದುಮೊಳವಿಲ್ಲಿಂದಿತ್ತವಿಂತೆ ತೋಕ್ಕುಮಿವಕ್ಕೆ ಬೆಚ್ಚದಿರಿವೆಂದವರ ಮನದ ಸಂಕೆಯಂ ಕಳೆದನಾತನಿಂಬಳಿಯುವೆರಡನೆಯಕುಳಧರಂ ಸನ್ಮತಿಯೆಂಬಂ ॥

ಕಂ ॥ ಕಿಸುನಂಜೆ ಪೆಚ್ಚಿರ್ಪನುರ್ವ್ವಿಸೆ
ನನು ತಾರಾನಿಕರಮೊಗೆಯೆ ಬಳ್ಕುತ್ತುಂ ಪೆ ।
ಕ್ಕನವುತ್ತರ್ಬ್ಬಯರಸದಿಂ
ದೆಸೆಗೆಟ್ಟಕ್ಕಂಡದೃಷ್ಟಪೂರ್ವ್ವಮನಾರ್ಯರ್ ॥ 32 ॥

ವ ॥ ಅಂತು ಭಯಸ್ಥರಾದಾರ್ಯ್ಯರಂ ಸೂರ್ಯ್ಯಕಿರಣಾಸ್ತಮಾನಸಮಯದೊಳ್ ತಪ್ತತಪನೀಯಮೆನಿಪ್ಪ ನಿಷಧನಗದೆ ನೆಗೆದ ಕೆಂಬೊಳಪಿನೊಳ್ಪಳಂಬಿ ರಂಜಿಸಿದ ಸಂಜೆ ಪರೆಯೆ ಕವಿದಕತ್ತಲೆಯೊಡನೆ ತಾರಾಗ್ರಹನಕ್ಷತ್ರಂ ತಲೆದೋಱುಗುಮಿಲ್ಲಿಂದಿತ್ತಲಹೋ ರಾತ್ರಿಭೇದವುಕ್ಕುವೆಂದವರ ಮನೋವಿಷಾದಮಂ ಕಳೆದನಾತನಿಂಬಳಿಯಂ ಮೂಱನೆಯಕುಳಧರಂ ಕ್ಷೇಮಂಕರನೆಂಬಂ ಸಿಂಹಕರಭಶಾರ್ದೂಳವ್ಯಾಳವ್ಯಾಘ್ರಮೃಗವಿಘಾತನಂಗಳ್ ಕಾಳಸ್ವಭಾವದಿಂ ಋಜುಸ್ವಭಾವಮಂ ಪತ್ತುವಿಟ್ಟು ವಿಷಮಸ್ವಭಾವಮನಪ್ಪುಕೆಯ್ವುದುಂ ॥

ಕಂ ॥ ವಿಪರೀತಮಾದ ವ್ಯಾಗಕುಲ
ದುಪದ್ರವಂ ನಿನಗೆ ದಂಡಪಾಶಾದಿಗಳಂ ।
ದಪಹರಿಸುಗುವೆಂದಾರ್ಯ
ಗ್ಗರ್ಘಪದೇಕಂಗೆಯ್ದು ಕಳೆದನವರದವಳಲಂ ॥ 33 ॥

ವ ॥ ಆತನಿಂಬಳಿಯಂ ನಾಲ್ಕನೆಯಕುಲಧರಂ ಕ್ಷೇಮಂಧರನೆಂಬನಂಧಕಾರಮುಪ್ಪುದುಂ ಪ್ರಜೆಗುಪದ್ರವಮಂ ಕ್ಷುದ್ರವ್ಯಾಗಯುಗಳವೊಡರಿಸೆ ॥

ಕಂ ॥ ರವಿರಶ್ಮಿಗಳಂ ಪುಟ್ಟದ
ರವಿಕಾಂತೋಪಳಕೃಶಾನುವಿಂ ಕೋಲ್ಮಿಗಮಂ ।
ದಿವಸದವಸಾನಸಮಯದೊ
ಳವನಂಜಿಸಿವೆಂದುಪಾಯಮಂ ಪ್ರಜೆಗಿತ್ತಂ ॥ 34 ॥

ವ ॥ ಆತನಿಂಬಳಿಯವುಯ್ದನೆಯಕುಲಧರಂ ಸೀಮಂಕರನೆಂಬಂ ಕಲ್ಪತರುಗಳಲ್ಲ ಫಲದಂಗಳಾಗೆ ಭೋಗಭೂಮಿಜತ್ವಮಂತವುಗೆ ನೆಱೆಯೆಂಬ ಸಂಕಲ್ಪದಿಂ ॥

ಕಂ ॥ ಓರೋರ್ವ್ವರ ಸುರತರುಗಳ
ನೋರೋರ್ವ್ವರಿವೆಮ್ಮವೆಂಬುದುಂ ಪೂರ್ವ್ವಸ್ಥೀ ।
ಕಾರವ್ಯವಸ್ಥೆ ನಿಲೆ ಸಾ
ಧಾರಣಸೀಮಾವಿವಾದಮಂ ಬಾರಿಸಿದಂ ॥ 53 ॥

ವ ॥ ಆತನಿಂಬಳಿಯವುಱನೆಯಕುಲಧರಂ ಸೀಮಂಧರನೆಂಬಂ ॥

ಕಂ ॥ ಕಲುಷಾಂಧಸ್ಸರ್ವ್ವತರುಸಂ
ಕುಲವೆಮ್ಮವು ತಮ್ಮವೆಂದು ತಮ್ಮೊಳಗಾರ್ಯ ।
ರ್ತ್ತಲೆವೊತ್ತೆ ಗುಟ್ಟುವೊಯ್ದವ
ರಲವಳಕೆಯೊಳಾದ ತೋಟಿಯಂ ತೊಲಗಿಸಿದಂ ॥ 36 ॥

ವ ॥ ಆತನಿಂಬಳಿಯವೆೀಳನೆಯಕುಲಧರಂ ವಿಮಲವಾಹನನೆಂಬಂ ॥

ಕಂ ॥ ಆಡಿದಳಿರ್ಗೆ ಧರಾವಲಯಂ
ಕಡುವೆಟ್ಟಿತ್ತಾಗೆ ನಡೆಯಲಱಿಯದೆ ಮನುಜ ।
ಸ್ಪೆಡೆಯೆ ಹಯಾದಿಗಳಿಂದಂ
ನಡೆಯಿಸಿದಂ ಕಲಿಸಿ ವಾಹನಾರೋಹಣಮಂ ॥ 37 ॥

ವ ॥ ಆತನಿಂಬಳಿಯಮೆಂಟನೆಯ ಕುಲಧರಂ ಚಕ್ಷುಷ್ಮನೆಂಬನಂದಿನಮಿಥುನಂ ಗಳಿಸ್ಪುತಮುಖವಿಲೋಕನದಿನತಿಕುತೂಹಲಮನಪ್ಪುಕೆಯ್ವುದುಂ ॥

ಮ. ಸ್ರ॥ ಯುಗಳಂಗಳಪ್ಪುಟ್ಟಿಸಿಂತಾಗುಳಿಸಿ ಪಿತೃಯುಗಂ ಸತ್ತು ಸಗ್ಗಂಗಳೊಳ್ಪು
ಟ್ಟುಗುಮಿಲ್ಲಿಂಮುನ್ನಮಿತ್ತಲ್ಲತಿಪಯದಿನದಿಂ ವುಕ್ಕಳಂ ನೋಡಿ ಸಾವೆ ।
ಯ್ದುಗುಮಿಾಗಳ್ಕರ್ಮಭೂವಿಂಸ್ಥಿತಿ ವೊಗಸಿದುದಿಂ ಬಾಲಕಾಲೋಕದಿಂದು
ಬ್ಬೆಗಮಿಲ್ಲಿಂದಿಂತು ಕಾಲಸ್ಥಿತಿಯನವಗತಿವ್ಯಕ್ತಮಪ್ಪಂತು ಪೇಳ್ದಂ ॥ 38 ॥

ವ ॥ ಆತನಿಂಬಳಿಯವೊಂಬತ್ತನೆಯಕುಲಧರಂ ಯಶಸ್ವಿಯೆಂಬಂ ॥

ಕಂ ॥ ಅವರಿವರೆನ್ನದೆ ಮುನ್ನಾ
ರ್ಯ್ಯವೆನಸರ್ಪೆನರಾಗೆ ಬೇಱೆಬೇಱೆಂದಿನ ಮಾ ।
ನವರ್ಗೆ ವೆಸರಿಟ್ಟು ನಾಮ
ವ್ಯವಸ್ಥೆಯಂ ಪಡೆದು ಮನುಗಳೊಳ್ಪೆಸರ್ವಡೆದಂ ॥ 39 ॥

ವ ॥ ಆತನಿಂಬಳಿಯಂ ಪತ್ತನೆಯಕುಲಧರನಭಿಚಂದ್ರನೆಂಬನಾಕಾಲದೊಳ್ ॥

ಕಂ ॥ ಉಡುಪತಿಯುಮನುಡುಗಣಮುಮ
ನೆಡೆಯುಡುಗದೆ ತೋಱುತೋಱು ಕಿಱುಗೂಸುಗಳಂ ।
ನುಡಿಗಲಿಸಿದಂ ತೊದಳ್ನುಡಿ
ಪಡೆವಿನೆಗಂ ಪಿತೃಯುಗಕ್ಕೆ ಕರ್ಣ್ಯಾಮೃತಮಂ ॥ 40 ॥

ವ ॥ ಆತನಿಂಬಳಿಯಂ ಪನ್ನೊಂದನೆಯಕುಲಧರಂ ಚಂದ್ರಾಭನೆಂಬಂ ॥

ಮ.ಸ್ರ॥ ಇನನಂ ಶೀತಾಂಶುವಂ ಮುಂಜಿನ ಮುಗಿಲ ತೊಡಪ್ಪಿರ್ಂಜನಂ ಕಾಣದಾಕಂ
ಪನವುಂ ಕೈ ಕೊಳ್ವುದುಂ ಬೆಳ್ಪನೆಬೆಳಗಲೊಡಂ ತೋಱುಗುಂ ಕರ್ಮ್ಮಭೂವ
ತ್ತ್ರನವುತ್ಯಾಸನ್ನವೆಂದಾಸ್ಥಿತಿಯನಱಿಪಿ ಸಂತೈಸಿ ಸಂತಾಪವಿಚ್ಛೇ
ದನವುಂ ತಂದಂ ಯಕಶ್ಚಂದ್ರಿಕೆಗೆ ನೆಱೆಯದೆಂಬನ್ನವಾಶಾಂತರಾಳಂ ॥ 41 ॥

ವ ॥ ಆತನಿಂಬಳಿಯಂ ಪನ್ನೆರಡನೆಯ ಕುಲಧರಂ ಮರುದೇವನೆಂಬಂ ॥

ಕಂ ॥ ಸರಿ ಸುರಿಯೆ ಮಿಂಚು ಮಿಳ್ಕಿಸೆ
ಸುರಚಾಪಂ ನೆಗೆಯೆ ಬೆಗಡುಗೊಂಡವರಂ ಸಂ ।
ವರಿಸಿ ಘನಾಗಮಸಮಯ
ಸ್ವರೂಪಮಂ ತಿಳಿಪಿ ಕಳೆದನವರುಮ್ಮಳಮಂ ॥ 42 ॥

ವ॥ ಆತನಿಂಬಳಿಯಂ ಪದಿವೂಱುನೆಯಕುಲಧರಂ ಪ್ರಸೇನಜಿತ್ತೆಂಬನಕಾಲದೊಳ್ ದರಿಯುಂ ಕುಳಿಯುಂ ಕುತ್ತರುಂ ಪೆಟ್ಟವುಂ ಪುಟ್ಟವುಮುಪನದಿಯುವುಪನವುಂ ದ್ರವುಂ ಪುಟ್ಟಿ ಸಲಿಲಸಂಘಾತದಿನಪವೃತ್ಯು ಪುಟ್ಟಿ ಮಾನಿನರನಹ್ಯಶೋಕಾನಲದಿಂದ ಹ್ಯಮಾನವಾನನರಾಗೆ ॥

ಕಂ ॥ ತವೆ ತೈಲಂ ದೀಪಂ ನಂ
ದುವಂತೆ ಗಳಯಿಸೆ ನಿಷೇಕಮಳವಮ್ಮೆನ್ನಂ ।
ಪವನಪ್ರಹಾರದಿಂ ತೈ
ಲವುಳ್ಳೊಡಂ ನಂದುವಂತೆ ಪೊಂದುವರೀಗಳ್ ॥ 43 ॥

ಬಡಿಕೊಳೆ ಕಾಯುಂ ಪಣ್ಣುಂ
ತೊಡಂಬೆಪಱುದುದಿರ್ವ ಮಾಳ್ಕೆಯಿಂ ಕಿಱುವಿರಿಯ ।
ರ್ವುಡಿವರನುಕ್ರಮದಿಂ ಸಾ
ವೊಡರಿಸದೊಡರಿಸುವುದಲ್ತೆ ಕದಳೀಘಾತಂ ॥ 44 ॥

ಉದಯಿಸಿ ನಡುವಗಲಪ್ಪುದು
ಮುದಿತೋದಿತನಾಗಿ ಸೂರ್ಯ್ಯನಸ್ತಮಿಸುವವೋ ।
ಲುದಯಿಸಿ ಜವ್ವನಮಂ ತಳೆ
ದೊದವಿದ ಮುಪ್ಪಿನೊಳೆ ಕಳೆವರಲ್ಲಿಂಬಳಯಂ ॥ 45 ॥

ವ॥ ಎಂದು ಕಾಲಸ್ವರೂಪನಿರೂಪಣಂಗೈದವರಶೋಕಪ್ರತ್ಯನೀಕಮುನಿದಿರ್ದಿದನೀವೇಳ್ದ ಕುಲಧರಸಂಕುಲಕ್ಕೆ ॥

ಕಂ ॥ ಬಂದುಪಳಿತದ ದಶಾಂಕದೊ
ಳೊಂದಂಕಂ ಮೊದಲ ಮನುಗೆ ಪದಿಮೂವರೊಳಂ ।
ಪಿಂದಣವರ್ಗಳ ದಶಾಂಕದೊ
ಳೊಂದಂಕಂ ಮುಂದಣವರ್ಗೆ ಪರಮಾಯುಷ್ಯಂ ॥ 46 ॥

ಸಾಸಿರಮುವೆಂಟುನೂಱುಂ
ರಾಸನಮೋರ್ವಂಗೆ ಪಂಚಶತಹೀನಂ ಬಾ ।
ಣಾಸನಮಿರ್ವರ್ಗ್ಗಳದ
ಗ್ರೋಸರಿಕಾಂ ಕ್ರಮದಿನುದ್ದಮಿಪ್ಪತ್ತೈವಿರ್ ॥ 47 ॥

ಮನು ಚಂದ್ರಾಭಂ ಪಾಂಡುರ
ತನುವೆ! ಯಶಸ್ವಿಪ್ರಸೇನಜಿಚ್ಛ್ರೇಷ್ಠಮಹಾ ।
ಸ್ವನಜದಳಚ್ಛವಿಗಳ್ ಕಾಂ
ಚನರೋಚಿಷ್ಣುಗಳೆ ಮಿಕ್ಕ ಕುಲಧರರೆಲ್ಲಂ ॥ 48 ॥

ಮುಂತಣಮೀನಾದಿಯಮು
ನ್ತಂತರದೊಳಶೀತಿಭೂಗೆ ಪಲ್ಯದೊಳಾವು ।
ನ್ತಂಕರದಕವೂಂಕಂ ಮು
ನ್ತಂತರಮುಕ್ಕುಂ ಪುನೇನಜಿತ್ಪರ್ಯ್ಯಂತಂ ॥ 49 ॥

ಕ್ರಮದೈವರಿಂದೆ ಹಾದಂ
ಡವುಯ್ವರುಂವುನುಗಳಂದೆ ಹಾವೂದಂಡಂ ।
ನವುನಿಸೆ ಹಾವೂಧಿಗ್ದಂ
ಡವುಯ್ವರಿಂದಾಯ್ತು ಭರತನಿಂ ತನುದಂಡಂ ॥ 50 ॥

ವ ॥ ತದನಂತರಂ ಪದಿನಾಲ್ಕನೆಯಕುಲಧರಂ ನಾಭಿರಾಜನೆಂಬಂ ಪಂಚವಿಂಶತ್ಯುತ್ತರಪಂಚಶತಕರಾಸನೋತ್ಸೇಧನುಂ ಪೂರ್ವ್ವಕೋಟಿಪರಮಾಯುಷ್ಯನುವೆನಿಸಿ ॥

ಕಂ ॥ ಮುನ್ನಿನ ಜನ್ಮದ ಸುಕೃತವೆ
ನ್ನಿದಮಾಯ್ತೆನೆ ವುತಿಶ್ರುತಾವಧಿಬೋಧಂ ।
ತನ್ನೊಡನೆ ಪುಟ್ಟಿ ಪುಟ್ಟಿದ
ನೇನ್ನಾಭಿ ಯಶಸ್ವನಾಭಿಯೋ ಕುಲಧರರೊಳ್ ॥ 51 ॥

ಶಾ ॥ ಓರೊಂದಂ ಕುಡುಗುಂ ದಶಾಂಗಸುರಭೂಜಂ ಬೇಳ್ಪುದಂ ಭೂತಳ
ಕ್ಕಾರೇನುಂಪಡೆದೆಂತು ಜೇನಿಸುವರೆಂಬೀಕರ್ಮ್ಮಭೂವರ್ತ್ತನ ।
ಪ್ರಾರಂಭೋಚಿತಜೀವನೋಪಕರಣೋಪಾಯಂಗಳಂ ತೋಱೆ ಕೊ
ಟ್ಟಾರಾತೀಯವುನುಪ್ರಧಾನರನುದಾತ್ತಂ ನಾಭಿ ಕೀಳ್ಮಾಡಿದಂ ॥ 52 ॥

ಕಂ ॥ ಮೊದಲಿಗನವನೀಶ್ವರರೊಳ್
ಪದಿನಾಲ್ಕನೆಯುಂ ವುನುಃಪ್ರಧಾನರೊಳೆಂಬೊ ।
ಳ್ಪುದಿತೋದಿತವೆನೆ ವುಹಿವುಂ
ಸ್ಪದನಾದಂ ನಾಭಿ ನಾಭಿಖಂಡನಕುಳಂ ॥ 53 ॥

ಭುವನಜನಜೀವನೋಪಾ
ಯವೃತ್ತಿಯಂ ತೋಱೆ ಕೊಟ್ಟು ಕೃತಕೃಷಿಕರ್ಮ್ಮ ।
ವ್ಯವಹೃತಿಯಿಂ ಕೃತಯುಗವುಂ
ಬವಿಕಲ್ಪವುನಾದಿಕಾಲದೊಳಪಟ್ಟಿಸಿದಂ ॥ 54 ॥

ಇಕ್ಷ್ವಾಕುವಂಶಾನುಕೀರ್ತ್ತನಂ

ಪಿಂಡಿಪಿಱೆದಿಕ್ಷುರಸವುಂ
ಕೊಂಡುಪಯೋಗಿಸುವುಪಾಯವುಂ ತೋಪ್ಪುದವೂ ।
ದಂಡಧರವಂಕವುವನೀ
ವುಂಡನವಿಕ್ಷ್ವಾಕುವಂಕವೆನಿಸಿತ್ತಿಳೆಯೊಳ್ ॥ 55 ॥

ಮ ॥ ನಯನಂ ನೀಲಸರೋಜವಂ ನೆಣಸುಗುಂ ವಕ್ಷಸ್ಥಳಂ ವಜ್ರವೇ
ದಿಯನಾಳ್ಪಿಸುಗುಂ ಮುಖಂ ಕಮಳವಂ ಕೀಳ್ಮಾಡುಗುಂ ಕೈಗಳಾ ।
ನೆಯ ಕಯ್ಯಂ ನಖಕಾಂತಿ ಚಂದ್ರಿಕೆಗಳಂ ಕೀಳ್ಮಾಡುಗುಂ ಜಾನು ಬಾ
ಳೆಯ ಕಂಭಂಗಳನೆಂದೊಡೇವೊಗಳ್ವೆ! ಶೋಭಾನಾಭಿಯಂ ನಾಭಿಯಂ॥ 56 ॥

ಕಂ ॥ ಮರುದೇವಿಯೆ ತಕ್ಕಳ್ನಾ
ಭಿರಾಜವಲ್ಲಭೆಯೆನಲ್ಕೆ ವಲ್ಲಭನೆನಿಸಲ್ ।
ಮರುದೇವಿಗೆ ತಕ್ಕಂ ನಾ
ಭಿರಾಜನನುರೂಪರಿನ್ನದಾರ್ದ್ದಂಪತಿಗಳ್ ॥ 57 ॥

ಪರಿಚಾರಕಿಯಸ್ಸರಸಂ
ದರಿಯಪ್ಪೊಡವಟ್ಟು ಪೂಜಿಪಂ ಪುರುಹೂತಂ ।
ಪುರುದೇವಂ ಪೆರ್ಮ್ಮಗನೆನೆ
ಮರುದೇವಿಯ ಮುಹಿವೆ ಬಣ್ಣಿಸಲ್ಬಂದಪುದೇ ॥ 58 ॥

ಅವತಂಸಂ ತನ್ನ ಗುಣ
ಸ್ತವನಂ ಧರೆಗೆನಿಸಿ ನಾಭಿರಾಜಂ ಧರಣೀ ।
ಯುವತಿಗೆ ಮರುದೇವಿಯೆ ದ
ಲ್ಲವತಿಯೆನಲ್ ಸುಖದಿನರಸುಗೆಯ್ಯುತ್ತಿರ್ದ್ದಂ ॥ 59 ॥

ವ ॥ ಅಂತಿಪ್ಪುದುಂ ॥

ಕಂ ॥ ಮರುದೇವಿಗೆ ಪುಟ್ಟಿದಪಂ
ಪುರುದೇವಂ ಬಂದು ದಿವದಿನೆಂಬವಧಿಯನಾ ।
ಪುರುಹೂತನಱಿದಯೋಧ್ಯಾ
ಪುರಮಂ ನಾಡಾಡಿಯಲ್ಲದಂತಿರೆ ಪಡಿದಂ ॥ 60 ॥

ಶಾ ॥ ನಾಡೊಳ್ ಕೋಸಲದೇಶವೊಂದೆ! ಪುರದೊಳ್ ಸಾಕೇತವೊಂದೀಕ್ಷಣ
ಕ್ರೀಡಾವಾಸವೆನಲ್ಕುರಂದರನಲಂಪಿಂ ನಾಭಿರಾಜಂಗವಂ ।
ಮೂಡಿಟ್ಟಂ ಕುರುವಿಟ್ಟು ವನ್ಮಥನೆ ಬಣ್ಣಂಗೆಯ್ದನಂದೆಂದೊಡಾ
ನಾಡಂ ಬೀಡುಮನೊಂದೆನಾಲಗೆಯೊಳನ್ನೇವಣ್ಣಿಪಂ ಬಣ್ಣಿಪಂ! ॥ 61 ॥

ಕಂ ॥ ಬೀಡು ಸುಕೃತಕ್ಕೆ ಜಿಲ್ವಿಂ
ಗಾಡುಂಬೊಲನಾಶ್ರಯಂ ಸುಖಕ್ಕೆನೆ ಪೆಱತೇಂ ।
ನಾಡಾಡಿಯು ನಾಡಲ್ಲದು!
ನಾಡೊಳಗುತ್ಕೃಷ್ಟವಂಟ್ಟ ಕೋಸಲದೇಶಂ ॥ 62 ॥

ಉ ॥ ಪರ್ವ್ವತಸಾನು ಸರ್ವ್ವಮಣಿಯಿಂ ಪಳು ಸರ್ವ್ವಫಲದ್ರುಮಂಗಳಂ
ದುರ್ವ್ವರೆ ಸರ್ವ್ವಸಸ್ಯದೊದವಿಂ ತರುಗುಲ್ಮಲತಾವನಸ್ಥಲಂ ।
ಸರ್ವಋತುಪ್ರವೇಕದಿನಶೇಷಜನಂ ಪರಿಪೂರ್ಣಲಕ್ಷ್ಮಿಯಿಂ
ಸರ್ವ್ವಗುಣಂಗಳಂದೆಸೆಯೆ ಸರ್ವ್ವಸುಖಾವಹವಾಮಹೀತಳಂ ॥ 63 ॥

ಕಂ ॥ ತೀವಿದ ತಿಳಗೊಳದಿಂ ಪೊಂ
ದಾವರೆಗೊಳದಿಂದರಲ್ದ ನೆಯ್ದಿಲ್ಗೊಳದಿಂ ।
ದಾವಲ್ಗೊಳದಿಂ ಜಿಲ್ವಿಂ
ಗಾವಾಸವೆನಿಪ್ಪುವೊಪ್ಪುವಾನಾಡೊಗ್ಗಳ್ ॥ 64 ॥

ಕಳಕಂಠಕ್ಕತನುಗೆ ಚಾ
ಪಲತಾರೋಹಣವಿಕಾರವಳಿಗಾಮ್ರಕುಜಾ ।
ವಳಗೆ ಮಧುವಿಕೃತಿ ಮಾನವ
ಕುಲಕ್ಕೆ ಕನಸಿನೊಳಮಿಂತಿವಿಲ್ಲುನಾಡೊಳ್ ॥ 65 ॥

ಉ ॥ ಕಣ್ಣಿಮೆಯಿಕ್ಕವಾಱುಮತುನ್ನುಂ ಬನದಿಂ ಸಿರಿ ಕೆಯ್ವೊಲಂಗಳಂ
ಕಣ್ಣಿವೆಯಿಕ್ಕಳಲ್ಲಿ ಪಥಿಕರ್ಗಿಳಿಸೋವಬಳಾಜನಂಗಳಂ ।
ಕಣ್ಣಿಮೆಯಿಕ್ಕರೀಕ್ಷಿಸೆ ಪುರಂ ಸುರಲೋಕವದೇಕೆ ರಿಕ್ಕಟಂ
ಕಣ್ಣಿವೆಯಿಕ್ಕದೆಂದು ನಗುಗುಂ ನಿಜರತ್ನಗೃಹಾಂಶುಜಾಳದಿಂ ॥ 66 ॥

ವ॥ ಆ ಪುರೋಪವನದೊಳಸವುಕರಕಿಶೋರಕೇಸರ ಗಜಲು ಗರ್ಜ್ಜಿಸದ ಕೃತಕಗಿರಿಗಳ್ಳ, ಮನೋಜರಾಜವಿಜಯಕೇತನಕಥರಸಂಚಾರಮಿಲ್ಲದ ಸರೋವರಂಗಳುಮಿಲ್ಲ, ರತಿಪತಿಯ ಪೂಗಣೆಯು ದೊಣೆಗೆದಱುದ ಪೂದೋಂಟುಮಿಲ್ಲ, ಕುಸುಮಕರಕೋಪ ಶಿಖಿಯನುದ್ದಮುರಿಪದ ತಣ್ಗಾಳಿಯಿಲ್ಲ, ರತಿಯ ಲಾವಣ್ಯರಸಪ್ರವಾಹದಿಂ ಪಲ್ಲವಿಸದ ಚೂತವನಮಿಲ್ಲ, ಕಾಮರಾಗರಸಮಂ ಕಾಳ್ಪರಂಮಾಡದಶೋಕವನಮಿಲ್ಲ, ಕಂದರ್ಪದಂದಕೂಕಮಾವರಿಸದ ಚಂದನವನಂಗಳಿಲ್ಲ, ಮನೋಜರಾಜನೀರಾಜನದೀಪಕಳಿಕೆಯಂ ಬೆಳಗದ ಚಂಪಕವನಮಿಲ್ಲ, ಮಕರಧ್ವಜವಿಜಯಪಂಚಬಾಣಕೃಪಾಣಪಟ್ಟದೊಡನೆ ಕೊನೆಯ ಬಿಣ್ಪಿಂ ತೊನೆದು ತೂಗದ ಪೂಗವನಮಿಲ್ಲ, ಮದನಮೋಹಾಂಧಕಾರಮಂ ಕೆದಱುದ ತಮಾಲವನಮಿಲ್ಲ, ರತಿಪತಿಯ ಮಧುಪಾನಗೋಷ್ಠಿಯಂ ಮೆಱೆಯದ ಸುವರ್ಣನವಕರ್ಣಿಕಾರಮಿಲ್ಲ, ಮಕರಧ್ವಜವಿಜಯಲಕ್ಷ್ಮಿ ನಲಿದು ನರ್ತ್ತಿಸದ ವನದ ವೇದಿಕೆಗಳಿಲ್ಲ, ಮಧುಮಹಾದೇವಿ ಪಟ್ಟಂಗಟ್ಟದ ಮಾಧವಿಗಳಿಲ್ಲದಿಲ್ಲ, ಕಂತುದಂತಿ ಬಿನದಂಬರಿಯದ ವೇಳಾವನವೀಥಿಗಳಿಲ್ಲ, ಪುಷ್ಪಶರವಶೀಕರಣಮಂತ್ರಮಂ ಪದಂಗಟ್ಟದ ಕೋಗಿಲೆಗಳಿಲ್ಲ, ಸ್ಮರನ ಬಿರುದಿನಂಕವೂಲೆಗಳನೋದದ ಗಿಳಿಗಳಿಲ್ಲ, ಅಂತಃಕರಣಸಮುದ್ಭವಚಾಪಟಂಕೃತಮನನುಕರಿಸುವ ಜಳದೇವತಾಕಳಿಕೂಜಿತಮನುಪದೇಶಂಗೆಯ್ಯದ ಸಾರಸಂಗಳಿಲ್ಲ, ಚಿತ್ತಜನಕೀರ್ತ್ತಿಲತೆಯ ಬಿತ್ತುಮೊದಲೆನಿಸದ ವಿಕಚವಿಚಿಕಿಲವಲ್ಲರಿಗಳಿಲ್ಲ, ಜಗದ್ವಶೀಕರಣದ ತಿಲಕಮನಿಸದ ತಿಲಕವನಮಿಲ್ಲ, ಮನೋಭವನ ಭುಜವಿಜಯಮಂ ನಿರಾಕುಳಂಮಾಡದ ವಕುಳವನಮಿಲ್ಲ, ಮನ್ಮಥಂಗೆ ಪಥಿಕರಂ ಪಸುಣ್ಬೇಳದ ಪಾರಾವತಂಗಳಿಲ್ಲ, ದರ್ಪಕನವಲೇಪಮನುದ್ದಪನಂಮಾಡದ ರಥಾಂಗಮಿಥುನಂಗಳಿಲ್ಲ, ವನದೇವತೆಗೆ ಪೀಲಿದಳೆಯನೆತ್ತಿಸದ ಸೋಗೆನವಿಲುಗಳಿಲ್ಲವದಲ್ಲದೆಯುಂ ॥

ಉ ॥ ಪೌರಬನಂಗಳೊಳ್ಕಸುವುಸೌರಭಸಾರಸಮಿಶ್ರವುಂದನಂ
ಚಾರವೆ ಪಾಂಥರಳ್ಕೆರ್ದೆಯನಾರ್ದ್ದಿಸುವಂಗಜಬಾಣವೋಕ್ಷಹೂಂ ।
ಕಾರವೆ ಬಂಡನುಂಡು ನನೆಗೊಂಬುಗಳಂ ಮೊರೆದೇಳ್ವ ಭೃಂಗರೆಂ
ಕಾರವೆ ಮೂಳ್ವುದಾರ ಬಗೆಗಂ ಮುದನೋತ್ಸವಹರ್ಷಭಾರವುಂ ॥ 67 ॥

ವ ॥ ಪದಪಂ ಬೀಱುಗುವೂಪುರೋಪವನದೊಳ್ ಪೆಣ್ದುಂಬಿವಿಂಡಿಂ ಕಱುಂ
ಗಿದ ನೆಯ್ದಲ್ಲೊಳನಂಜಿವಿಂಡನೊಳಕೊಂಡಂಭೋಜಷಂಡಂ ತಳಿ ।
ಪ್ಪುದಿದೇಳಾವನವೊಡ್ಡುಗೊಂಡ ಕದಳೀಕಾಂಡಂ ತರಂಗೊಂಡ ಚೂ
ತನ ಸಾಲ್ಬಂದನವೀಥಿ ಸಂಪಗೆಯ ಜೊಂಪಂ ಮಾಧವೀವುಂಟಪಂ ॥ 68 ॥

ಕಂ ॥ ವನಜವನರಾಜಿಕೂಜ
ದ್ವನವಿಹಗವಿರಾಜಿಗುರಬಹಿಃಪುರಕೇಳೀ ।
ವನದೊದವು ರತಿಯು ಪೊಸಜ
ವ್ವನದೊದವೆನೆ ನೆಱೆಯೆ ಪೊಗಳಲಾವಂ ನೆಱೆವಂ ॥ 69 ॥

ಬೇರ್ವಿಡಿದು ಕಾಯ್ತು ಪಲಸಿ
ನ್ನೀವ್ವೊನಲಂ ಕಱೆವ ತೆಂಗು ಹೊಂಬಾಳೆಗಳಿಂ ।
ಸೋವ್ವಡಕೆಯು ಸಸಿ ಬೆಳಸಿಂ
ವೇರ್ವೇಲಿವಳ್ಳಿಗಳೆ ಸೊಗಯಿಕುಂ ಪುರವನದೊಳ್ ॥ 70 ॥

ವ ॥ ಅಂತು ಕಂತುಗಜವಿಹಾರವೀಧಿಯುಂ ಸುಕೃತಸುರಭಿಸಂಚಾರಸುಕ್ಷೇತ್ರಮುಂ ನೇತ್ರಪುತ್ರಿಕಾಪ್ರಸಾದಸದನವುಂ ಲಕ್ಷ್ಮೀಲಾಸ್ಯನಿಂಗಲ್ಸರಂಗವುನೆನಿಪ ಪುರ ಬಹಿಃಪುರದಿಂದೊಳಗೆ ॥

ಕಂ ॥ ಬಡಬಾನಳಂಗೆ ಸೆಡೆದಿಂ
ಗಡಲೆ ಕರಣಕ್ಕೊಕ್ಕುದವರೈಳವುನೆಂಬೀ ।
ಪಡೆವೂತಂ ನೀಗ್ರ್ಗಾಡಿಗೆ
ಪಡೆಯುತ್ತುಂ ಪೊನ್ನ ಕೋಂಟೆಯಂ ಬಳಸಿಕ್ಕುರ್ಕಂ ॥ 71 ॥

ಚೆಂಪೊನ್ನ ಕೋಂಟೆ ಪರಿವೇ
ಷ್ಟಂಪೆತ್ತಿಳನೇಸಱಂತೆ ನೀಗ್ರ್ಗಾಡಿಗೆಯಂ ।
ತುಂಬಿವ ನೀಪ್ರ್ಪೂಗಳ ಪಲ
ವುಂಬಣ್ಣದಿನಾರ ಕಣ್ಣುವುಂ ಸೆಱೆಗೆಯ್ಗುಂ ॥ 72 ॥

ಮಂದರಕಂದರವೆಂಬೀ
ಸಂದೆಗದಿಂ ವಿಷ್ಣು ಸೂತನಂ ಕೀಱು ನಿಜ ।
ಸ್ಯಂದನವುಂ ಕೋಂಟೆಗೆ ಭರ
ದಿಂದೆಳೆಗುಂ ಕಚ್ಚಿ ಕೀಳಮಿನನ ಹಯಂಗಳ್ ॥ 73 ॥

ಮುಗಿಲಟ್ಟಳಿಗಳ ಕೆಲದಂ
ಬುಗಂಡಿಯಿಂ ನುಸುಳ್ದು ನಡೆವ ದಿನಕರನ ಹಯಂ।
ಗಗನಾಧ್ವಖೇದಮಂ ಪಳ
ಯಿಗೆಗಳೆ ತಣ್ಣಲರ ತೀಟದಿಂ ತೊಲಗಿಸುಗುಂ ॥ 74 ॥

ವ ॥ ಅಂತಲಂಘ್ಯಮುಮಭ್ರಂಕಷಮುಂ ವಿವಿಧಾಟ್ಟಾಳಕಮುಮೆನಿಪ್ಪ ಪ್ರಾಕಾರದಿಂದೊಳಗೆ ॥

ಚೆ ॥ ಬರೆದ ವಿಚಿತ್ರಪತ್ರನಿಚಯಂ ನಿಜಲೋಚನಚಂದ್ರಿಕಾಪರಂ
ಪರೆಗಳಿವಟ್ಟು ಸೋರ್ವ್ವ ಕಶಿಕಾಂತದ ಕೇಗ್ಗಳೆ ನೀರ್ವ್ವೋನಲ್ಗಳಿಂ।
ಪರೆಯೆ ಕನಲ್ದು ಕಣ್ಗೆ ಕಿಸುಗಣ್ಬಿ ಹರಿನ್ಮಣಿಭಿತ್ತಿಭಾಗದೊಳ್
ಪುರವನಿತಾಜನಂ ಬರೆಯುತಿಪ್ಪ್ರ್ವದಭಂಗುರಪತ್ರಭಂಗವಂ ॥ 75 ॥

ಮಾ.ಸ್ರ॥ ನಲಿಸುಯ್ದಂ ಮೂಲೆಗಂ ಸೂಳಲಿದೆಲಿಗುವಿನಂ ತುಂಬಿಗಳ್ಕೊಂಡಿದರ್ಮ್ಮೆ
ಯ್ಮಲೆವನ್ನಂ ಬಾಹುಮೂಲಂ ಪೊಗರನುಗುಳ್ವಿನಂ ಕಣ್ಮಲಬ್ಬ್ಯಳಿಮಿಂಚಂ
ಕಲೆವನ್ನಂ ಮೂಲೆಪೂವಂ ನೆಗಪ ಸೊಗಯಿಕುಂ ನೀಲರೊಳ್ಪಪ್ಪ ಚಾಪಂ
ಗುಲಿಯೇಸಂ ತೋಲಲಂಬುಂ ಪೊದೆಗೆದಲಿದವೊಲ್ಪಪ್ಪಲಾವೀಕದಂಬುಂ ॥

ಚ ॥ ಸುರಪನ ವಜ್ರಮುಂ ಹರಿಯ ಕೌಸ್ತುಭಮುಂ ಹರನಿಂದೆಲೇಖೆಯಂ
ವರುಣನ ಮುತ್ತಿನೆಕ್ಕಸರಮುಂ ಗರುಡಾಂಗದ ಪಚ್ಚೆಯುಂ ಫಣೀ।
ಶ್ವರಫಣರತ್ನಮುಂ ಬೆಲೆಗೆ ಬಿಣ್ಮಿದುವಲ್ಲಮೆನಿಪ್ಪ ರತ್ನದಿಂ
ದೆರಡನೆಯಬ್ಧಿ ರತ್ನವಸರಂ ಗೆಲೆವಂದುದು ರೋಹಣಾದ್ರಿಯುಂ ॥ 77 ॥

ಮಾ.ಸ್ರ॥ ವನಜಂ ಪಂಕಾಂಕಿತಂ ಗೋವಳತಿಯರೆದೆಯೊತ್ತಿಂಗೆ ಪಕ್ಕಾಯ್ತು ಗೋವ
ರ್ದ್ಧನವಕ್ಷೋಭಾಗವುರ್ವ್ವಜ್ವಲನಬಹುಳಧೂಮಾಕುಲಂ ಪಾಲ ಮುನ್ನೀ।
ರನಪಾಯಸ್ಥಾನಮೆಂದಾಪುರವರದ ವಣಿಗ್ವಾಟಹಮ್ಮ್ಯರ್ಕ್ಯಂಗಳೊಳ್ಮ
ನ್ನಿನ ಸಂಚಾರಸ್ವಭಾವಂ ಪರಿಪಡೆ ಪದಪಿಂ ಲಕ್ಷ್ಮಿ ನಿಶ್ಚಿಂತವಿರ್ದ್ದಳ್ ॥ 78 ॥

ಕಂ ॥ ದಿವಿಜವಿಮಾನಂ ಮಾಡದು
ವಿವು ಮಾಡಿದುವೆಂಬ ಭೇದಮಲ್ಲದೆ ಚೆಲ್ವಿಂ।
ನವರತ್ನರಚನೆಯಿಂ ಭೇ
ದವಿಲ್ಲ ತತ್ಪುರದ ಭವನಮೆನಿತನಿತಱೊಳಂ ॥ 79 ॥

ಇರುಳುಂ ಪಗಲುಂ ಪುರದೊ
ಳ್ಬೆರಸಿಪ್ಪುವು ಪದ್ಮರಾಗಗೃಹದಿಳವಿಸಿಲಿಂ।
ಹರಿನೀಳಗೃಹದ ತಮುದು
ಬ್ಬರದಿಂ ಕಶಿಕಾಂತಗೃಹದ ಚಂದ್ರಾತಪದಿಂ ॥ 80 ॥

ಸಿಲ್ಪಿಗಡ! ಕಲ್ಪಪತಿಸಂ
ಕಲ್ಪಂ ರತೊನ್ನೀಪಲಂ ದಳಂಗಡ! ಕೋಭಾ ।
ತಲ್ಪವಿದೆನ್ನದೆ ಜೀಱೆ ವಿ
ಕಲ್ಪಿಸುವಂ ಗಾಂಪನೆನಿಸುಗುಂ ಕರುಮೂಡಂ ॥ 81 ॥

ನೆಲೆವೂಡದ ಪೊಸದೇಸಿಯ
ನೆಲೆ! ವೂಡದ ಕಲ್ಪಸದನವೆಯ್ದಣಂ ಕೀ ।
ಳ್ನೆಲೆಯಾದುದಿದಱು ತೆಱದಿಂ
ನೆಲೆಯಾದುದೆ! ಸಕಲಜನದ ಕಣ್ಗಂ ಮನಕಂ ॥ 82 ॥

ಉ ॥ ಬಾಳತೃಣಂಗಳೆಂದೆಳಸುಗುಂ ಪಸುರ್ಗಲ್ಗಳ ಕಾಂತಿಯಂ ಮೃಗೀ
ಬಾಳಕವಲ್ಲಿ ವಾಣಿಕದ ಕೆಂಪೊಳಪಂ ಬಿಸಿಲೆಂದು ನಟ್ಟಿರುಳ್ ।
ಮೇಳಿಸುಗುಂ ರಥಾಂಗವೆಳಲಿಕ್ಕಿದ ವುತ್ತಿನ ಸೂಸಕಂಗಳಂ
ಬಾಳಮೃಣಾಳವೆಂದು ಕದ್ದುಕಲ್ಪಗೆಗುಂ ಕಳಹಂಸಪೋತಕಂ ॥ 83 ॥

ಚ ॥ ಗಿಳಿ ಗಿಳಿವೆಣ್ಗೆ ಚೂತಫಲವುಂ ಕಳಹಂಸೆಗೆ ಹಂಸನಬ್ಜಕಂ
ದಳವುನಿಭಂ ಕರೇಣುಗೆ ಲವಂಗದಳಂಗಳನೀವ ಭಾವವುಂ ।
ತಳೆದು ವಿಳಾಸವುಂ ವೆಱೆವ ರಾಣೆಯವಾಗದ ಬಳ್ಳಿವೂಡದು
ಜ್ವಲವುಣಿಭಿತ್ತಿ ಚಿಲ್ವನೊಳಕೊಂಡೊಳಕೊಂಡುದಪೂರ್ವಭಿತ್ತಿಯುಂ॥ 84 ॥

ಕಂ ॥ ಪೆರಲಂ ಮಿಡಿಯಿಪ ಪುಳಕಾಂ
ಕುರವುಂ ಪುಟ್ಟಿಸುವ ನೋಡೆ ತಲೆದೂಗಿಪ ಸುಂ ।
ದರವೆನಿಪ ಕುಸುರಿವೆಸದಿಂ
ದರವುನೆ ವೂಳ್ಪುದು ವುಯಂಗವುತಿವಿಸ್ಮಯವುಂ ॥ 85 ॥

ವು ॥ ನೆರೆದಿರ್ಪರ್ಚತುರಾನನಪ್ರಲಬರೆನ್ನೊಳ್ ರಾಜಬಾಧಾಪರಂ
ಪರೆಯುಂ ಕಂಟಕರಾಜಿಯುಂ ರಜವುವೆಂನ್ನೊಳ್ ಪೊರ್ದ್ದವೆನ್ನೊಳ್ನೆರಂ ।
ತರವೊಪ್ಪಂಗಿಡದೆಂದು ನಾಭಿಕವುಳವಾಸಂ ಪುರಂ ನಾಭಿಪಂ
ಕರುಭಕ್ಕೀನ್ವುದು ನೀಲರತ್ನಗೃಹಕಾಂತಿಧ್ವಾಂತದಿಂ ದೈನ್ಯವುಂ ॥ 86 ॥

ವ ॥ ಅಂತತಿಕಯವೆನಿಪಯೋಧ್ಯಾಪುರಪತಿ ॥

ವು ॥ ವುನುಚೂಡಾವುಣಿ ನಾಳಿ ನಾಭಿನುತನಾದಿಬ್ರಹ್ಮನಾಬ್ರಹ್ಮನಂ
ದನನಾರ್ಗ್ಗಂ ವಿುಗಿಲಾದನಾದಿಭರತಂ ಪಟ್ಟಂಡಭೂನಾಥನಾ ।
ವುನುಜೇಂದ್ರಾತ್ಮಜನರ್ಕ್ಕಕೀರ್ತ್ತಿ ನೆಗಳ್ದಂ ತದ್ವಂಕವುತ್ಯಂತಪಾ
ವನವುತ್ಯುನ್ನತವಾಯ್ತು ನದ್ಗುಣಪತಾಕಾವಂಕನೆಂಬನ್ನೆಗಂ ॥ 87 ॥

ಮ.ಸ್ರ॥ನೆಲನಂ ಮುಯ್ಯಾದೆಯಿಂ ಪಾಲಿಸಿ ನಿಯಮಿಸಿ ವರ್ಣಾಶ್ರಮಾಚಾರಮುಂ ದೋ
ಷಲವಂಮೆಯ್ವಿಚ್ಚರ್ದಂತಿಂದ್ರಿಯಸುಖದೊದವಂತೀಚ್ಛಿಸಾಮ್ರಾಜ್ಯದೊಳ್ಮಂ
ನಲಿದಲ್ಲಿಂದತ್ತ ಲಾತ್ಯಂತಿಕಸುಖಪದವಂ ಪೆತ್ತ ರಾಜಾಧಿರಾಜ
ರ್ಪ್ಪಲರಿಂದಿಕ್ಷ್ವಾಕುವಂಕಂ ಕುಲನದಿಯವೊಲಾಯ್ತು ವ್ಯವಚ್ಛಿನ್ನರೂಪಂ ॥ 88 ॥

ಕಂ ॥ ಜನಿಯಿಸಿ ನಾಭಿನರೇಂದ್ರನಿ
ನೆನುಕ್ರಮಂಗಿಡದೆ ವೆಚ್ಚ್ರ್ವಡೆದಾವಂಶಂ ।
ಮುನಿಸುವ್ರತಜಿನಪತಿವರ
ವನೂನವಾದತ್ತು ದಾತ್ತಶಾಖಾಕೀರ್ಣ್ಣಂ ॥ 89 ॥

ಕ್ಷಿತಿನಾಥಂ ತನ್ಮನಿಸು
ವ್ರತನಾಥರ ಕಾಲದಂದು ತದ್ವಂಶದೊಳ ।
ಪ್ರತಿವಂ ವಿಜಯರಥಂ ತ
ತ್ಪತಿ ಹೇಮಲತಾಂಗಿ ಹೇಮವಾಳಿನಿಯೆಂಬಳ್ ॥ 90 ॥

ವಿಜಿಗೀಷುವೃತ್ತಿಯಿಂ ಭೂ
ಭುಜರಂ ಬೆಸಕೆಯ್ಸಿಕೊಂಡು ಭೂಮಂಡಲಮಂ ।
ಭುಜದಂಡದೊಳರಿಸಿದನೇ
ನಜೇಯಭುಜಬಲನೊ! ವಿಜಯರಥನರನಾಥಂ ॥ 91 ॥

ವ ॥ ಆ ನರೇಂದ್ರನಂದನಂ ॥

ಕಂ ॥ ಜಿತರಿಪು ಸುರೇಂದ್ರಮನ್ಯಾ
ಕ್ಷಿತಿಪತಿ ರಿಪುನೃಪಕುಲಾಂಗನಾಜನಮನ್ಯಾ ।
ದ್ಗತಬಾಷ್ಪಸಲಿಲಧಾರಾ
ಪ್ರತಾನದಿಂ ಕೀರ್ತ್ತಿವಲ್ಲಿಯಂ ಬೆಳೆಯಿಸಿದಂ ॥ 92 ॥

ವ ॥ ಆ ವಿಶದಕೀರ್ತ್ತಿಗೆ ಕೀರ್ತ್ತಿಶ್ರೀಯೆಂಬಳರಸಿಯಾಗೆ ॥

ಕಂ ॥ ಆಂದವುದಟಲೆಯೆ ವನಸಿಜ
ನಂದವನಳವಳವಿಗಳೆದ ಕೇಸರಿಯಳವಂ ।
ಬೆಂದಗುಳೆ ವಜ್ರಬಾಹುವು
ರಂದರರೆಂಬೀರ್ವರವರ್ಗೆ ನಂದನರಾದರ್ ॥ 93 ॥

ಕಡಿದು ವಿಪಕ್ಷವನಿಂದ್ರಂ
ಕಡಿವಂತೆ ಕುಲಾದ್ರಿಪಕ್ಷಮಂ ತೋಳ್ವಲಮಂ ।
ಪಡೆದಂ ಪರಪ್ರತಾಪದ
ಪೊಡಪ್ಪು ಕಿಡುವಂತೆ ವಜ್ರಬಾಹುಕ್ಕುಮಾರಂ ॥ 94 ॥

ಪರಪುರವನುರಿಪಿ ದೆಸೆಗುರಿ
ವರಿವಿನೆಗಂ ತನ್ನ ತೇಜವರಿನೃಪವದನಾಂ ।
ಬುರುಹಂ ಕರಿಂಕುವರಿದಿರೆ
ಪುರಂದರಂ ನೃಪಪುರಂದರಂ ಪೊಗಳಿಸಿದಂ ॥ 95 ॥

ಮಗನೊರ್ವಂ ತನಗಿರ್ವ್ವ
ರ್ಮ್ಮಗಂಗೆ ಸುತರಾಗೆ ಮೂಲುಮಕಣ್ಣಿನೆ ಮೂಲುಮಂ ।
ಜಗವಂ ತನಗೆಲ್ಲಗಿಸಿದಂ
ತ್ರಿಗುಣಿಸೆ ತನ್ನೊಳ್ಮನೋರಥಂ ವಿಜಯರಥಂ ॥ 96 ॥

ಚ ॥ ವಿಜಯರಥಂ ಧರಿತ್ರಿಗೆ ಮನೋರಥಸಿದ್ಧಿಯನಿತ್ತು ವಕ್ತ್ರಪಂ
ಕಜವರರಾಜಹಂಸಿ ವರವಾಗ್ವಧು ರಂಜಿಸೆ ತನ್ನ ಕೀರ್ತ್ತಿ ದಿ ।
ಗ್ಗಜತದನಕ್ಕೆ ಕೀರ್ತ್ತಿವಧುವಾಗೆ ಜಗಜ್ಜನಕಂತಭೂಷಣಂ
ನಿಜಗುಣನಾಮವಾಗಿರೆ ವಿರಾಜಿಸಿದಂ ಕವಿತಾಮನೋಹರಂ ॥ 97 ॥

* * * * * *

ವ ॥ ಮತ್ತಂ ತದನ್ವಯದೊಳ್ ಭದ್ರಬಾಹು, ಪುರಂದರ, ಕೀರ್ತ್ತಿಧರ, ಸುಕೌಶಲ, ಮಯ, ಮಾಂಧಾತ, ವೀರಸೇನ, ಕಮಳಬಂಧ, ವಸಂತತಿಲಕ, ಕುಬೇರದತ್ತ, ವೈಗಾರಿದಮನ, ದ್ವಿಪರಥ, ಹರಣ್ಯಕಶಿಪು, ಅರ್ಕ್ಕರಥ, ದಿಳೀಪ, ಪುರೂರವ, ರಘುವೀರ ಪ್ರಮುಖರೆನಿಬರಾನುವರಸುಗಳನುಕ್ರಮದಿಂ ರಾಜ್ಯಂಗೆಯ್ದು ವಿಷಯವೈರಾಗ್ಯದಿಂ ಕೆಲಬರವರಕಾಮಿನೀಕಚಗ್ರಹಣಮಂ ಪಡೆವುದುಂ ಕೆಲಬರವ್ಯತಲಕ್ಷ್ಮೀಪಾಣಿಗ್ರಹಣಮಂ ಪಡೆವುದುಂ ॥

ಕಂ ॥ ಧರಣೀಪತ್ರಾಕಾರಂ ವೀ
ರರಸಾರ್ಣ್ಣವಸೇತು ದಾನಗುಣಭೂಷಣದಿ ।
ಕ್ಕರಿ ಧರ್ಮ್ಮರತ್ನರೋಹಣ
ಗಿರೀಂದ್ರಮಿಕ್ಷ್ವಾಕುವಂಶವಾಯ್ತು ಪ್ರತಿಮಂ ॥ 98 ॥

ವ ॥ ಆವಂಶದೊಳ್ ವಿನೀತಾಪುರವನಾಳ್ವನನರಣ್ಯನೆಂಬರನನಖಿಳರಾಜಕುಳಮಣಿಮಕುಟಮಕರಿಕಾಪತ್ರವಿಚಿತ್ರಚಿತ್ರಿತಪಾದಪೀಠಂ ॥

ಕಂ ॥ ನೆನೆಯಿಸುವಂ ಮಾನ್ಯಪುರಾ
ತನರಾಜನ್ಯಕವನತಭುಳಬಾಹಾಬಲದಿಂ ।
ದನರಣ್ಯಂ ಕೃತಪುಣ್ಯಂ
ಮನುವಂಶವರೇಣ್ಯನಖಿಳಭುವನಶರಣ್ಯಂ ॥ 99 ॥

ಅನರಣ್ಯನೆಂಬ ಪೆಸರಂ
ಜನಪತಿ ದೇಕದೊಳರಣ್ಯಮಿಲ್ಲೆನೆ ನಾನಾ ।
ಜನಪದವುಂ ಪಡೆದು ಜಗ
ಜ್ಜನಂ ಕುಡಲ್ಪಡೆದನುಂತೆ ಪಡೆದನೆ ಪೆಸರಂ ॥ 100 ॥

ನ್ಯಾಯಾರ್ಜಿತವಿತ್ತಂ ಧ
ರ್ಮಾಯತ್ತಮೆನಿಪ್ಪ ರಾಜವೃತ್ತಂ ತನಗೇ ।
ಕಾಯತ್ತಮಾಗೆ ಧರೆಯಿಂ
ಜೀಯೆನಿಸಿದನಿಂತುದಾತ್ತಚರಿತರುಮೊಳರೇ ॥ 101 ॥

ಆ ವಸುಧಾವಲ್ಲಭನ ಮ
ನೋವಲ್ಲಭೆ ರೂಪವತಿ ಕಳಾವತಿ ಸತಿ ಪೃ ।
ಥ್ವೀವತಿ ಧೈರ್ಯದೊಳಂ ಪೃ
ಥ್ವೀವನಿತೆಗೆ ಯುವತಿ ಸವತಿಯೆನೆ ಪೆಸರ್ವಡೆದಳ್ ॥ 102 ॥

ಕಡುಚಲ್ವಿಂ ರತಿಗೆಗ್ಗಂ
ಪಡೆದು ವಿಳಾಸಕ್ಕೆ ದೇಸಿವಡೆದವನಿಪನೊಳ್ ।
ಪಡೆದು ಪಿರಿಯರಸಿತನಮುಂ
ಪಡೆದಳ್ ತನಯರನನಂತರಥದಕರಥರಂ ॥ 103 ॥

ವ ॥ ಆಪೃಥ್ವೀವತಿಮಹಾದೇವಿಯೊಳಖಿಳಪೃಥ್ವೀವಲ್ಲಭಂ ಧರ್ಮಾರ್ತ್ಥನಿರುದ್ಧ ವಾಗದಂತು ವಿಷಯಸುಖಮನನುಭವಿಸುತ್ತಿರ್ದ್ದಂದುದಿವಸಂ ‘

ಮ ॥ ಭುವನಸ್ತುತ್ಯಪದಂ ಸಹಸ್ರಕಿರಣಂ ಸ್ವರ್ಭಾನುವಿಂದಂ ಪರಾ
ಭವಮುಂ ಪೊದ್ದುವವೋಲ್ಸಹಸ್ರಕಿರಣಂ ಮಾಹಿಷ್ಮತೀವಲ್ಲಭಂ ।
ಭವರಂಗೆಯ್ದು ದಶಾನನಂಗೆ ರಣದೊಳ್ ಸೋಲ್ತೇವದಿಂ ಕ್ಷತ್ರಪು
ತ್ರವರೇಣ್ಯಂ ಜಿನದೀಕ್ಷೆಗೊಂಡನನರಣ್ಯಂ ಕೇಳ್ದನಾವಾರ್ತ್ತೆಯಂ ॥ 104 ॥

ವ ॥ ಅಂತು ಕೇಳ್ದದುವೆ ತನಗೆ ನಿರ್ವ್ವೇಗಮಾಗೆ ।

ಕಂ ॥ ಕೆಳೆಯಂ ಸಹಸ್ರಕಿರಣಂ
ತಳೆದಂ ದೀಕ್ಷೆಯನುಪೇಕ್ಷಿಸಲ್ಪದನಲ್ಲಂ ।
ದಿಳೆಯನುಪೇಕ್ಷಿಸಿ ನೆರೆದಾ
ಗಳನಂತರಥಂಗೆ ನುಡಿದನಿಂತನರಣ್ಯಂ ॥ 105 ॥

ಮ.ಸ್ರ॥ ಪಡೆದೆಂ ನಿನ್ನಂಗೆಡಂ ರಕ್ಷಿಸಲಖಿಳಧರಾಚಕ್ರವುಂ ಪುತ್ರ! ನೀಂ ಪೆ
ಳ್ಗೊಡೆಯಂ ಕಯ್ಕೊಳ್ಳರಾಭಾರವನಿಳಪೆನಗೆಂದಂಗೆ ದಂತಾಂಕುಜಾಳಂ ।
ಕುಡಿವಿಂಚಂ ಬೀಱೆ ಕಯ್ಯಂ ಮುಗಿದು ನುಡಿದನೇವಾತೊ! ನಿರ್ವ್ವಾಣಮಾರ್ಗ
ಕ್ಕೊಡಸಲ್ವೆಂ ನಿಮ್ಮ ಚಿತ್ತಕ್ಕೆಡರಿದ ನೆಲನಂ ದೇವ! ಕಯ್ಕೊಳ್ವೆನಲ್ಲಂ ॥106॥

ವ ॥ ಎಂದು ತನ್ನೊಡನೆ ತಪಂಬಡಲೊಡಂಬಟ್ಟು ತಳ್ಳಿಸಂದು ನುಡಿವುದುವೊಂದು ತಿಂಗಳ ಮಗನಪ್ಪ ದಶರಥಂಗೆ ಪಟ್ಟಂಗಟ್ಟಿ ತಾನುಮನಂತರಥನುಮುಭಯಘೋಷ ಭಟ್ಟಾರಕರ ಪಾದೋಪಾಂತದೊಳ್ ತಪಂಬಟ್ಟು ॥

ಕಂ ॥ ಅನರಣ್ಯಂ ಮುಕ್ತಿಶ್ರೀ
ವನಿತಾವರನಾದನಂದನಂತರಥಂ ಚಿ ।
ತ್ತನಿರೋಧದಗ್ಧಕರ್ಮೇಂ
ಧನಭೂರನನಂತವೀರ್ಯಕೇವಳಯಾದಂ ॥ 107 ॥

ವ ॥ ಆಮುಹಾಮುಹಿವೆಯೊಳ್ ॥

ಮ.ಸ್ರ। ಅವುರೇಂದೊ್ರೋದ್ಯಾನದಿಂ ಪೂಮಳೆಗಱೆಯೆ ಸುರೇಂದ್ರಾಗಮಂ ರಾಗಮಂ ಬೀ
ಱೆ ಮರುದ್ಗಂಭೀರಭೇರೀನಿನದವೊದವೆ ನಿರ್ವ್ಯಾಣಕೈವಲ್ಯಮೂಂಗ ।
ಲ್ಯಮಹೋತ್ಸಹಪ್ರವೋದಾಮರಕಳಕಳವಾನಂದಮಂ ಮಾಡೆ ರೋಮಾಂ
ಚಮನಾನಂದಾಕ್ರುವಂ ತಾಳ್ದದನಮುಳಯಕಂ ಭೂರತೀಕರ್ಣಪೂರಂ ॥ 108 ॥

ದಶರಥ ಮಹಿಮಾನುವರ್ಣನಂ

ಕಂ ॥ ಶ್ರೀವನಿತೆ ವಕ್ಷದೊಳ್ ಮು
ಕ್ತಾವಳಯಂತೆಸೆಯೆ ತೊಟ್ಟಿಲೊಳ್ ಪಟ್ಟತ್ತ ।
ಲ್ಭಾವಳಯಂ ಭುಜದೊಳ್ ಕೋ
ಭಾವಹವೆನೆ ಪೆಂಪುನೆತ್ತನಭಿನವಪಂಪಂ ॥ 109 ॥

ಎಳನೇಸಱುಂತೆ ಜಗಮಂ
ಪೊಳಗಿದನೆಳದಿಂಗಳಂತೆ ಸಕಳಧರಿತ್ರೀ ।
ತಳವನೆಱಗಿಸಿದನೆಳವೆಯೊ
ಳಳೆ ಬಣ್ಣಿಸೆ ದಶರಥಂ ಭಗೀರಥಚರಿತಂ ॥ 110 ॥

ಆ ವಂಶಜರ ಗುಣಂಗಳ
ನಾವಗವೊಳಕೊಂಡು ತನ್ನ ವಿಶದಯಕೋವು ।
ಕ್ತಾವಳಯಂ ಧರೆಗಿತ್ತು ಧ
ರಾವಲ್ಲಭನತ್ಯುದಾತ್ತನೆನೆ ಪೆಸರ್ವಡೆದಂ ॥ 111 ॥

ಚಿರಕಾಲದ ಕಳವ್ರೂವೆಂ
ದಿರದೆ ವಿರಿಂಚಿಯು ಮುಖಾರವಿಂದವನುಳದಾ ।
ದರದಿಂದಿರ್ದಳ್ ಸಿತಮುಧು
ಕರವಧು ವಾಗ್ವಧು ನರೇಂದ್ರಮುಖನರಸಿಜದೊಳ್ ॥ 112 ॥

ಜಡಧಿಯ ರತ್ನಂಗಳ್ಗಾಂ
ದೊಡವಿನುಮಾಶ್ರಯದಿನೆಸೆವವೋಲ್ ದಶರಥನಿಂ ।
ಜಡಜಜನ ವಿದ್ಯೆಗಳ್ ನೂ
ರ್ಮ್ಮಡಿಸಿದುವಾಶ್ರಯವಿಶೇಷಮೇಂ ಕೇವಲಮೇ ॥ 113 ॥

ಅಱುವತ್ತು ನಾಲ್ಕು ವಿದ್ಯೆಯ
ನಱಿದುಂ ದಶರಥನ ಚಿತ್ತಮನುರಾಗದಿನೇ ।
ನೆಱಗಿದುದೊ! ಧರ್ಮಶಾಸ್ತ್ರ
ಕ್ಕಱಿವುಳ್ಳಂ ವಿಕಥೆಯೊಳ್ಮನಂನಿಲಿಸುಗುಮೇ ॥ 114 ॥

ಓದಿದೊಡೇನರಗಿಳ ಕ
ಲ್ತೋದುವವೋಲ್ದರ್ಮಶಾಸ್ತ್ರಮಂ ದಶರಥನಂ ।
ತೋದಿ ತಿಳದವನಿಪತಿ ಮುರಿ
ಯಾದೆಯೊಳಿಸಗುವುದು ಧರ್ಮಪರನೆನೆ ಲೋಕಂ ॥ 115 ॥

ಕಾದಳ್ವರ್ಣಾಶ್ರಮಧ
ರ್ಮಾದಿಗಳಂ ಮಿಱುದಂತು ನೆಲನಂ ನೃಪನಾ ।
ಜ್ಞಾದೇವತೆ ವೇದಿಕೆ ಮು
ರ್ಯ್ಯಾದೆಯೊಳಂಭೋನಿಧಾನಮಂ ನಿಲಿಸುವವೋಲ್ ॥ 116 ॥

ಚ ॥ ಮನನೆಳದಾಗೆ ವೈರಿಗೆ ಮನೀಷಿಜನಂ ಮನಮಿಱಿಯೆ ಮಾನಿನೀ
ಜನಮಭಿಮಾನಮಂ ಮಱೆಯೆ ಭೂಭುವನಸ್ತವನೀಯಮಾದುದಾ ।
ತನ ಬಲಗಯ್ಯೊಳಿರ್ಪ ಜಯಲಕ್ಷ್ಮಿಗಮಾತನ ಸೊಲ್ಲೊಳಿರ್ಪ ವಾ
ಗ್ವನಿತೆಗಮಾಮಹೀಪತಿಗಮಪ್ರತಿಮಂ ಪರಿಪೂರ್ಣಯೌವನಂ ॥ 117 ॥

ವ ॥ ಅಂತು ದಶರಥನರನಾಥಂ ನವಯೌವನಲಕ್ಷ್ಮಿಯನಪ್ಪುಕೆಯ್ದು ಲಾವಣ್ಯಲಕ್ಷ್ಮೀವಿರಾಜಿತೆಯಿನಿಪ್ಪಪರಾಜಿತೆಯುಂ ಮುದನಮೋಹನವಿದ್ಯಾದೇವತೆಯ ಮಿತ್ರೆಯೆನಿಪ್ಪ ಸುಮಿತ್ರೆಯುಂ ಕಂತುಸಂತಾಪನದೀಪಕಳಕಾಪ್ರಭೆಯೆನಿಪ್ಪ ಸುಪ್ರಭೆಯುಂ ಒರೊವ್ವೆ ಪೇರುರದೊಳಿರ್ಪ್ಪ ಸಿರಿಯುಂ ಗಾಢಾಲಿಂಗನದಿನೊತ್ತುವಂತೆರ್ದೆವತ್ತುಗೆವೆತ್ತು ಸಕಳ ಸುಭಾಷಿತಸುಧಾಜಲದಿಂ ಸರಸ್ವತಿಯ ಕಳಾವಲೇಪಮುಂ ಕಚ್ಚಿರ್ಕಳೆವಂತೆ ಮೊಗಂಬಡೆದು ಪ್ರಣಯಕಲಹಕೇಳಿಯಿಂ ವಿಜಯಶ್ರೀಯನಜನಿಸುವಂತೆ ತೋಳ್ವೆರಗನಪ್ಪುಕೆಯ್ದು ತನಗೆ ಮನೋನಯನವಲ್ಲಭೆಯರೆನಿಸೆ ॥

ಕಂ ॥ ಕುಲಸತಿಯರಿಂ ನೃಪಂ ದಾ
ನಲೇಖೆಯಿಂ ದಿಗಿಭಮುಮೃತಕಳೆಯಿಂ ಕಶಿ ಮೇ ।
ಖಲೆಯಿಂ ಮುಂದರಕೈಲಂ
ವಿಲಾಸಮುಂ ತಳೆದುದೆನೆ ಪೆಡಂಗಂ ತಳೆದಂ ॥ 118 ॥

ಇನನೆಂತು ಪೆರಸಿ ಸಂಜೆಯೊ
ಳನುರಾಗಿಯೆನಿಪ್ಪನಂತೆ ನೃಪನಾನೃಪನಂ ।
ದನೆಯರೊಳನುರಾಗದಿನಿ
ರ್ದ್ದನವರತಂ ತೊಳಗಿ ಪೆಳಗಿದಂ ಸತ್ಪಥವಮಂ ॥ 119 ॥

ನೀರೊಳಗಿರ್ದ್ದಂ ಪೊರ್ದ್ದದು
ನೀರಂ ನೀರೇಜವೆಂಬವೋಲಬಲಾಶ್ಯಂ ।
ಗಾರರನವಗ್ನನಾಗಿ
ರ್ದ್ದಾರಳವೆನೆ ತಳ್ದಿದನರನಿಂದ್ರಿಯಜಯವಮಂ ॥ 120 ॥

ವಂ.ಸ್ರ॥ ಕುಳಭೂಭೃತ್ಕೂಟದೊಳ್ ವಾಣಿಕದೆಳವಿಸಿಲೆಂತಂತೆ ದಿಕ್ಕುಂಭಿಕುಂಭ
ಸ್ಥಳದೊಳ್ಸಿಂದೂರಮೆಂತಂತವುರನದಿಯೊಳಾರಕ್ತನಿರೇಜಪತ್ರಾ ।
ವಳಿಯೆಂತಂತಬ್ಜಿಯೊಳ್ವಿದ್ರುಮನವುದಯವೆಂತಂತೆ ಪರ್ವಿತ್ತು ರಾಗಾ
ವಿಳವುಪ್ಪಂತುರ್ವಿಯೆಲ್ಲಂ ದಶರಥವಸುಧಾಧೀಶತೇಜಃಪ್ರಕಾಶಂ ॥ 121 ॥

ಉ ॥ ಖಂಡಿಸಿ ವೈರಿವಂಶವನವುಂ ಕಡಿದುದ್ಧತಶಾಖೆಯುಂ ಭುಜಾ
ದಂಡಕೃಪಾಣದಿಂ ಸವುಳು ಕಂಟಕವುಂ ಸವೆದಾತಪತ್ರದಿಂ ।
ಚಂಡಕರಪ್ರತಾಪವುಖಿಳೋರ್ವರೆಗಿಲ್ಲೆನೆ ತಣ್ಪುವಾಡಿದಂ
ದಂಡಧರೋತ್ತವುಂ ದಶರಥಂ ಸಫಲೀಕೃತಸನ್ಮನೋರಥಂ ॥ 122 ॥

ಚ ॥ ಅನಿಮಿಷಗಾಯಕರ್ದಶರಥಕ್ಷಿತಿನಾಯಕನಂಕವೂಲಿಯಂ
ತನತನಗೊಲ್ದು ಪಾಡುವೆಡೆಯೊಳ್ಪುಳಕಂ ಪೊಱಪೊಣ್ಮೆ ಸೋಲ್ತು ಕೇ ।
ಳ್ವನಿಮಿಷನಾಯಕಂ ತನಗೆ ಬಾವುರವಿಕ್ಕುವ ದೇವಕಾಮಿನೀ
ಜನವಣಿಕಂಕಣಧ್ವನಿಗೊನಲ್ದವರಂ ಕಿಸುಗಣ್ಬಿ ನೋಡುವಂ ॥ 123 ॥

ಉ ॥ ನೋಡಿರೆ ಕಿನ್ನರರ್ದಶರಥಕ್ಷಿತಿನಾಥನ ಬೀರದೇಳ್ಗೆಯಂ
ಪಾಡೆ ವುಗುಳ್ದು ಕೇಳ್ವಪದದೊಳ್ಕವಿಸಾರ್ದ್ದ ಜಿನುಂಗೆ ಸಾರಭ ।
ಕ್ಕಾಡುವ ತುಂಬಿಗಳ್ದವಿಜನಾಥನದಕ್ಕೆ ಕನಲ್ದು ವಾಣದೀ
ಡಾಡುವನಾ ನವೀರುಕುಸುವುಸ್ತಬಕಂಗಳ ಕರ್ಣಪೂರವಂ ॥ 124 ॥

ಕಂ ॥ ಬಾಳೆ ಬಿಸಿಲಿನನತೇಜವು
ನೇಳಸೆ ನೆಲನಂ ಪಯೋಧಿಪರ್ಯಂತಂ ಬಾಯ್ ।
ಕೇಳಿಸಿ ದಶರಥನೊಳ್ಪಿಂ
ಪಾಲಿಸಿ ಸುಖದಿಂದವುರಸುಗೆಯ್ಯುತ್ತಿರ್ದ್ದಂ ॥ 125 ॥

ವ ॥ ಆನಿಖಿಳರಾಜಕುಲಕಿರೀಟಕೀಲಿತಹರಿನೀಲಮಣಿಮಯೂಖಪರಿಚುಂಬಿತ ಚರಣಾರವಿಂದನೊಂದುದಿವಸಮಾಪ್ತ ಪರಿಜನಂಬೆರಸು ಕರುಮಾಡದೇಳನೆಯನೆಲೆಯ ವೊಗಸಾಲೆಯೊಳಕ್ಕಿದ ಮಣಿಮಯಾಸನವನಳಂಕರಿಸಿ ಕರ್ಣಪೂರಪಾರಿಜಾತಸ್ತ ಬಕ ಪರಿಮಳಕ್ಕೆಳಸಿ ಬಳಸುವಿಳದುಂಬಿಯ ಕಳರವವನುನಾಲಿಸುತಿಪ್ಪುದು ಮಾನವಮಯ ದೊಳ್ ॥

ಮ ॥ ನಯನೋತ್ಪಾಹವನಿತ್ತು ದೇಹರುಚಿಯಿಂದೆಯ್ತಂದನಾಕಾಶಗಂ
ಗೆಯ ನೀವ್ಮಾರ್ಜನಿಸನೆಂಬಿನಂ ದಶರಥಕ್ಷ್ಮೋಣೀಶನಾಸ್ಥಾನಭೂ ।
ಮಿಯು ನಾನೀರದಮಾರ್ಗ್ಗದಿಂದಿಳಿದು ಸನ್ಮಾರ್ಗಕ್ಕೆ ಮೆಯ್ದಾರದ
ನ್ನೆಯವಂ ನಾರದನಾವ ಕಾಳಗದೊಳಂ ಕರ್ಣ್ಣಾರದಂ ನಾರದಂ ॥ 126 ॥

ಕಂ ॥ ಬಿಸನೂತ್ರದ ಕಟಿಸೂತ್ರಂ
ಪೊಸದುಗುಲದ ಕೋವಣಂ ಕಮಂಡಲು ರಾರಾ ।
ಜಿಸೆ ದಂಡಪಾಣಿ ಪೊಕ್ಕಂ
ಕಿಸುರಳಿಪಂ ಪಿಸುಣ ಪಸರಿಗಂ ನೃಪಸಭೆಯಂ ॥ 127 ॥

ವ ॥ ಅಂತಾನಾರದಂ ನಭೋಮಂಡಲದಿಂ ಸಭಾಮಂಡಲಕ್ಕವತರಿಸೆ ॥

ಕಂ ॥ ಇದಿರೆದ್ದಿರ್ದ್ದಚ್ಛಾಕಾರಮು
ನುದಾತ್ತನೇನಿತ್ತು ಮಾಣ್ದನೇ! ಕಾಂಚನಪೀ ।
ಠದೊಳರಿಸಿ ಮುಕುಳಿತಾಂಜಳ
ನದರ್ಭಸಾಕ್ಷತವನರ್ಘ್ಯಪಾದ್ಯಮನಿತ್ತಂ ॥ 128 ॥

ಬಂದ ಬರವಾವುದೀಬರ
ವಿಂದಂ ಚರಿತಾರ್ತ್ಥನಾದೆನಾನಿಲ್ಲಿಂದಂ ।
ಬಂದಿರೆನೆ ನೃಪತಿ ನಾರದ
ನೆಂದಂ ದಶನಾಂಶು ಕೆದಱೆ ಚಂದ್ರಾತಪಮಂ ॥ 129 ॥

ವ ॥ ಆನೀಜಂಬೂದ್ವೀಪದ ಪೂರ್ವವಿದೇಹದ ಪುಂಡರೀಕಿಣಿಪುರದ ಸೀಮಂಧರ ಸ್ವಾಮಿಗಳ ಪರಿನಿಷ್ಕ್ರಮಣಕಲ್ಯಾಣವಿಭೂತಿಯಂ ನೋಡಿ ಬಂದೆನೆಂದು ಸಭೆಯಂ ಕಣ್ಣನ್ನೆಯಿಂ ತೊಳಗಿಸಿ ದಶರಥಂಗೆ ಕಟ್ಟೇಕಾಂತದೊಳಿಂತೆಂದಂ ॥

ಉ ॥ ಲಂಕೆಗೆ ಪೋಗಿ ಶಾಂತಿಜಿನಭಕ್ತಿಯೊಳಾಂ ಸ್ಮರದಾನದಂತಿವ
ಜ್ರಾಂಕುಶದರ್ಶನಸ್ತವನದಿಂ ಚರಿತಾರ್ತ್ಥನೆನಾದನಾಗಿ ವೀ ।
ತಾಂಕುಶನಪ್ಪ ರಾವಣನೊಳಂ ನಿರೆದೀನುಡಿಗೇಳ್ದು ನಾಡೆಯುಂ
ಶಂಕೆಯೊಳೊಂದಿಬಂದೆನಱಿಪಲ್ಕೆಱತೇಂ ನಿವುಗಾಪ್ತಪಂಚಮಂ ॥ 130 ॥

ವ ॥ ಅದೆಂತೆನೆ ವಿಭೀಷಣಂ ಸಾಗರಬುದ್ಧಿವೆಸರ ನೈಮಿತ್ತಿಕನಂ ಬರಿಸಿ ರಾವಣನ ಮರಣಕಾರಣಮಂ ಜಿಸಗೊಳ್ವುದಂ ॥

ಕಂ ॥ ಏನುಂ ತೊದಳಲ್ಲಿದುವೆ ಶಿ
ಲಾನಿಕ್ಷಿಪ್ತಾಕ್ಷರಂ! ವಿಭೀಷಣ! ರಣದೊಳ್ ।
ಜಾನಕಿಯದೂಸರಿಂ ಲಂ
ಕಾನಾಥಂ ದಾಶರಥಿಯ ಕಯ್ಯಾಳೆ ಮುಡಿಗುಂ ॥ 131 ॥

ವ ॥ ಎನೆ ವಿಭೀಷಣಂ ವಿಷಣ್ಣಚಿತ್ತನಾಗಿ ॥

ಕಂ ॥ ಆರಯಲವರುತ್ಪತ್ತಿಗೆ
ಕಾರಣಮೆನಿಸಿರ್ದ್ದ ಜನಕನಂ ದಶರಥನಂ ।
ಮಾರಣಮಂ ಪೊರ್ದ್ದಿಸುವೆಂ
ಕಾರಣವಿಘಟನವೆ ಕಾರ್ಯವಿಘಟನಮಲ್ತೇ ॥ 132 ॥

ವ ॥ ಎಂದು ತಱಿಸಂದೆ ॥

ಚಕ ॥ ಎನಗಿದಯುಕ್ತಮೆನ್ನ ಬಗೆ ಪಾಪನಿಬಂಧನಮೇನ್ವುದೆಂಬಿದಂ
ನೆನೆಯದೆ ತನ್ನ ಸೋದರನೊಳಪ್ಪ ವಿಪತ್ತಿಗಣಂ ವಿಭೀಷಣಂ ।
ಮನದೊಳಗಳ್ದು ನಿಮ್ಮನಳಿಯಲ್ಬಗೆದಂದನಿದಕ್ಕೆ ತಕ್ಕುದಂ
ನೆನೆದಿರಿ! ನಾನಿದಂ ತಡೆಯದೇ ಜನಕಂಗಱಿಪಲ್ಕೆ ಪೋದವೆಂ ॥ 133 ॥

ವ ॥ ಎಂದು ನಾರದಂ ನೀರದಪಥಕ್ಕೆ ನೆಗೆದು ವಿಂಥಿಳೆಯನೆಯ್ದಿ ಜನಕಂಗವಾಸ್ತವ ರೂಪವನಱಿಪಿ ಪೋಪುದುವಿತ್ತಲ್ ದಶರಥನಾವಾರ್ತ್ತೆಯೆಲ್ಲಮುಂ ಸಮುದ್ರಹೃದಯನೆಂಬ ತನ್ನ ಮಂತ್ರಿಮುಖ್ಯಂಗಱಿಪುವುದುಮಾತನಿದಕ್ಕೆ ಕಾಲವಂಚನವೆ ಕಾರ್ಯಮೆಂದು ನಿಶ್ಚಯಂಗೆಯ್ದು ದಶರಥನಂ ಕಳುಪಿ ಚಿತ್ರಕನುಂ ತಾನುಮಲ್ಲದೆ ಪೆಱರಱಿಯದಂತು ಕರುವಿಡಿಸಿ ಲಾಕ್ಷಾರಸಾದಿಗಳಿಂ ಸಪ್ತಧಾತುಗಳಂ ಪಡೆದು ವರ್ಣಕ್ರಮಂಗೆಯ್ಸಿ ॥

ಕಂ ॥ ಇದು ಭೂಪನ ರೂಪಿದು ಲೆ
ಪ್ಪದರೂಪೆನಲೆಂತುಮಱಿಯಲರಿದೆನೆ ಬಗೆಗೊಂ ।
ಡುದು ನಡೆವ ನುಡಿವ ತೆಱದಿಂ
ಪ್ರದೇಶಸೌಷ್ಠವಮದೇಂ ವಿಚಿತ್ರವೊ! ಚಿತ್ರಂ ॥ 134 ॥

ವ ॥ ಅಂತು ಪರವಿದ್ಧಮಂ ಪ್ರತ್ಯಕ್ಷಮಂ ಮಾಡಿದ ಚಿತ್ರಕನ ಪರಿಣತಿಯಂ ಮನದೆಗೊಂಡು ಲಿಪ್ಪದರಸನಂ ಕರುಮಾಡದೇಳನೆಯ ನೆಲೆಯ ಮೊಗಸಾಲೆಯೊಳರಿಸಿ ಪರಿಜನಮುಂ ತಾನುಮೋಲಗಿಸುತ್ತಿರೆ ॥

ಕಂ ॥ ಜನಕನನಂತೀಕ್ರಮದಿಂ
ದನುಷ್ಠಿಸಿಯೆ ಕಳುಪೆ ಜನಕನುಂ ದಶರಥನುಂ ।
ದಿನಕರನುಂ ಹನುಕರನುಂ
ಘನಾಘನಾಂತರಿತರಾದರೆನೆ ತಲೆಗರೆದರ್ ॥ 135 ॥

ವ ॥ ಅನ್ನೆಗಮಿತ್ತ ವಿಭೀಷಣಾದೇಕದಿಂ ಬಂದ ತೀಕ್ಷ್ಣಪುರುಷರ್ ಪುರಮುಂ ಪೊಕ್ಕು ಕರುಮಾಡಮುಂ ಪುಗಲ್ಪಡೆಯದೆ ತಡೆದಿಪ್ಪುದುಂ ॥

ಉ ॥ ಅಟ್ಟಿದ ಜಟ್ಟಿಗರ್ತಡೆದುದಕ್ಕೆ ಕನಲ್ದು ವಿಭೀಷಣಂ ಮುಗಿ
ಲ್ಚಟ್ಟೆಯಿನಟ್ಟಿತಿಂಬ ಜವನಂತಿರಯೋಧ್ಯೆಗೆ ಬಂದು ಪೊಕ್ಕು ಪೊಂ ।
ಪೆಟ್ಟನೆನಿಸ್ಪ ಪೊನ್ನ ಕರುಮಾಡಮನೊಂದಿರುಳಲ್ಲಿ ಕಂಡು ಕ
ಣ್ಮುಟ್ಟಿನೊಳರ್ದ ಲಿಪ್ಪದರಸಂ ಕೊಲವೇಳ್ದನಸಾರಚೇತನಂ ॥ 136 ॥

ವ ॥ ಅಂತು ಪೇಳ್ವುದುಂ ॥

ಕಂ ॥ ಬೆಸನಂ ವಿದ್ಯುದ್ವಿಳಸಿತ
ವೆಸರ ವಿಯಚ್ಚರಭಟೋತ್ತಮಂ ಪಡೆದು ಜವಂ ।
ಮನಗಿದನೆನೆ ಕಾಪಿನವ
ರ್ದೆಸೆಗಿಡೆ ಪೊಕ್ಕಳ್ದು ಕೊಂದು ತಲೆಯಂ ತಂದಂ ॥ 137 ॥

ವ ॥ ಆನವಮಯದೊಳ್ ॥

ಕಂ ॥ ಪರಿಜನದ ಭೂಪನಂತಃ
ಪುರದಬಳಾಜನದ ನೆಗೆದ ಹಾಹಾರವಮೆ ।
ಯ್ತರೆ ಕಿವಿಗೆ ಕೇಳ್ದ ನಲಿದಂ
ಕರುಣಾರಸರಹಿತನಾವನಾಖಚರನವೋಲ್ ॥ 138 ॥

ಕೊಲಲೆಂದು ಬಂದು ಲಿಪ್ಪದ
ತಲೆಯಂ ಕೊಂಡೊಯ್ದನಾವಿಭೀಷಣನಾರಂ ।
ಕೊಲಲಾರ್ಪರೇ ಸಾಯದರಂ
ಲಲಾಟದೊಳ್ ವಿಧಿಯ ಬರೆದ ಲಿಪಿ ಜಲಲಿಪಿಯೇ! ॥ 139 ॥

ವ ॥ ಅಂತವನ ತಂದ ತಲೆಯಂ ಕಡಲೊಳ್ಪಾಡಿ ಜನಕನುಮನಂತೆಮಾಡಿ ಮುಗುಳೆ ಲಂಕೆಗೆ ಪೋಗಿ ॥

ಮು ॥ ಮನದೊಳ್ತನ್ನ ನೆಗಳ್ತೆಯಂ ನೆನೆದು ಕಷ್ಟಂಗೆಯ್ದೆನಾನೀದಶಾ
ನನನಂ ಕೊಲ್ವವನಾವನೀಕಡಲನಾವಂ ದಾಂಟುವಂ ಲಂಕೆಗಾ ।
ವನೊ ಬರ್ಪುಂಗಡ! ಭೂಮಿಗೋಚರನಿದಂ ನೈಮಿತ್ತಿಕಂ ಪೇಳ್ದೊಡಾ
ತನ ಮಾತಿಂಗವಿಚಾರಿತಂ ನೆಗಳ್ದೆನೆಂದುಬ್ಬೇಗಮಂ ತಾಳ್ದದಂ ॥ 140 ॥

ಕಂ ॥ ಜನಗೃಹವುಂ ಪ್ರಾಯಶ್ಚಿ
ತ್ತನಿಮಿತ್ತಂ ನಿರತಿಶಯಮೆನಲ್ಮಾಡಿಸಿದಂ ।
ತನಗೆ ಕಷಾಯೋದಯದಿಂ
ಜನಿಯಿಸೆ ಪೊಲ್ಲವೆಯನೊಳ್ಳಿದಂ ಸೈರಿಪನೇ ॥ 141 ॥

ವ ॥ ಅನ್ನೆಗಮಿತ್ತ ದಶರಥನ ಜನಕನ ಪರಿಜನಂ ಲಿಪ್ಪದರನನಪ್ಪುದನಱಿದು ಸಂ
ತೋಷಂಬಟ್ಟುರ್ವ್ವಿದುವುತ್ತ ದಶರಥನುಂ ಜನಕನುಂ ರೂಪಪರಾವರ್ತ್ತನದಿನನೇಕ
ದೇಶಂಗಳಂ ನೋಡುವುದೆ ತವುಗೆ ವಿನೋದವಾಗೆ ತೊಳಲುತ್ತುಂ ಬಂದು ॥

ಕೈಕೇಯಿಯಾ ದಶರಥ ವಿವಾಹವೃತ್ತಾಂತಂ

ಕಂ ॥ ಸಕಲರ್ತುಕವನದಿಂ ದೀ
ರ್ಘಿಕೆಯಿಂ ಪುಷ್ಕರಣಿಯಿಂ ಸರೋವರದಿಂ ಕಾ ।
ತುಕವನವರ್ಕ್ಕಂಡಕಾರ್ಕ್ಕ
ತುಕವುಂಗಳಪುರವನುರ್ವರಾನೂಪುರವುಂ ॥ 142 ॥

ಚ ॥ ಮಿಸುಗುವ ಪೊನ್ನ ಕೋಂಟೆ ವುಗಿಲಂ ತುಡುಕುತ್ತಿರೆ ವೆಂಪುವೆತ್ತಗ
ಳ್ಬಸರುಹವುಳ್ಳರಲ್ದು ಸಿರಿ ಕಣ್ದೆಱೆದಂತಿರೆ ನುತ್ತಲುಂ ಬನಂ ।
ಕುಸುಮಶರಂಗೆ ಪೊಚ್ಚಪೊಸಜವ್ವನದಂತಿರೆ ರಾಜಧಾನಿ ಕ
ಣ್ಗಸದಳವೊಪ್ಪಿ ತೋಱುದುದು ಕಾಂತುಕವುಂಗಳವುತ್ತವುಂಗಳಂ॥ 143 ॥

ವ ॥ ಆಪುರದ ಪೊಱಪೊಳಲನೆಯ್ದೆವರ್ಪ್ಪಿಗಳ್ ॥

ಕಂ ॥ ಲಲನಾರತ್ನದೊಳಂ ಜಯ
ಲಲನಾರತ್ನದೊಳವುಪ್ಪ ತೋಳ್ವೆರಸನನಾ ।
ಕುಲವುಱ್ಪುವಂತೆ ಬಲಗ
ಣ್ಬಲಗಯ್ಕೊತ್ತಿದುವು ದಶರಥಂಗೋರ್ವೊದಲೊಳ್ ॥ 144 ॥

ವ ॥ ಅಂತೆಯ್ದೆವರ್ಪ್ಪುದುವಾಪುರದ ಬಹಿಃಪುರೋದ್ಯಾನಪ್ರದೇಶದೊಳ್ ಕನಕ
ಪ್ರಾಕಾರಕವುನೀಯವುವುಮಂಬರತಳಚುಂಬಿಚಂಚದ್ಧ್ವಜರಾಜಿವಿರಾಜಮಾನವುವು
ನೇಕಮಣಿಭವನಭಾಸುರವುವೆನಿಸಿ ಜನವುನೋಹರಂ ಸ್ವಯಂವರಭೂವಿ ನಯನಾಭಿ
ರಾವುವಾದುದಲ್ಲಿ ॥

ಕಂ ॥ ಪಳುಕಿನ ಚೌಕಂಡಂಗಳ
ಕೆಳೆಗಣ ಚೆಂಬೊನ್ನ ವುತ್ತವಾರಣದೊಳ್ ಕ ।
ಣ್ಗೊಳಿಸಿದರನೇಕದೇಶಂ
ಗಳ ರಾಜತನೂಜರೋಳಯಿಂದಿಕ್ಕೆಲದೊಳ್ ॥ 145 ॥

ವ ॥ ಆಗಳಲ್ಲಿಗೆ ॥

ಮ ॥ ನಯನಾಕರ್ಷಣವಿದ್ಯೆ ಗಂಡುವರಿಜಂ ಕಯ್ಕೊಂಡುದೋ! ಗಂಡಗಂ
ಡಿಯನೀತಂಗೆ ಮನೋಜನೊಪ್ಪಿಸಿದನೋ ಪೇಳೆಂಬಿನಂ ಬಣ್ಣಿಸ ।
ಲ್ಬಯಸಲ್ತಕ್ಕ ಬೆಡಂಗು ಕಣ್ಗೊಳಸೆ ತನ್ನಂ ಕಂಡಣಂ ಕನ್ನೆಯಾ
ಸೆಯನಾರಾಜಕುಮಾರಕರ್ತೊಯ್ವಿನಂ ಪೊಕ್ಕಂ ಸಭಾಸದ್ಮಮಂ ॥ 146 ॥

ಚ ॥ ತೊಡವುಗಳೆಡ್ಡಮಾವನಿತಱಿಂ ತನಗಕ್ಕುಮೆ ಗಾಡಿ! ಗಾಡಿ ಮೆ
ಯ್ದೊಡವೆನೆ ಮಾಸಿ ರೂಪುಗರೆದಿದ್ದೊಡಮಾತನ ರೂಪಿದೊಂದು ಕ ।
ಣ್ದೊಡವೆನೆ ಜೀಱಿದೊಂದು ಬಗೆಗಿಕ್ಕಿದ ಶಕ್ತಿನೆ ವಶ್ಯದೊಂದು ಕ
ಣ್ದೊಡವೆನೆ ನೋಳ್ಪ ನೋಟಕರ ಕಣ್ಗೊಳಗಾದುದು ಕಣ್ಣ ಪಾಪೆವೋಲ್ ॥

ವ ॥ ಅಂತು ದಶರಥಂ ಸ್ವಯಂವರಸಭಾಸದನಮುಂ ಪೊಕ್ಕು ತಾನುಂ ಜನಕನು ಮೊಂದುಕಡೆ ಪಟ್ಟಕಾಂಚನವುಂಜಕೋಪಾಂತದೊಳ್ ನಿಂದು ನೋಡುತ್ತುಮಿರೆ ॥

ಕಂ ॥ ಏಱೆ ಮಣಿವೆಸದ ಸವಿಗೆಯ
ನೇಱಿಸಿ ಕುಡುವಿಲ್ಲನೊಡನೆ ಬರೆ ಕಂದರ್ಪಂ ।
ನೀಱೆ ಮುಗಿಲೊಳ್ಪಿರೆಯೊಳ್ ಮೆ
ಯ್ದೋಱುವ ಶಶಿಕಳೆಯ ಗಾಡಿಯಂ ಗೆಲೆವಂದಳ್ ॥ 148 ॥

ಯುವತೀರತ್ನದ ಕೆಲದೊಳ್
ಧವಳವಿಲೋಚನಮುರೀಚಿ ತಿಂಗಳ ಸಿರಿಯಂ ।
ಕವರ್ದುಕೊಳೆ ಕಾಂಚದಡಪದ
ಡವಕೆಯ ಕನ್ನಡಿಯ ಕನ್ನೆಯುರ್ಕ್ಕಣ್ಗಿಸದ್ ॥ 149 ॥

ಚ ॥ ಎಳವೇಱೆ ಪೊನ್ನ ಪುತ್ಥಳಿಗೆ ರತ್ನದ ದೀವಿಗೆ ತನ್ನ ಪುಷ್ಪಕೋ
ಮಳತನು ಜೀಱೆ ಜೀಱೆ ನಯನೋತ್ಸವಮಂ ನಿಜಲೋಚನಂಗಳು ।
ತ್ಪಳದಳದಾವುಮಂ ಕೆದಱೆ ಕಣ್ಗಿಸೆದಳ್ಳವರತ್ನಮಾಲೆ ಕೆಂ
ದಳದೊಳನಂಗಪಾಶವೆನೆ ಕೈಕೆ ಮನೋಜನ ಬಯ್ತು ಬಯ್ಕೆವೋಲ್ ॥ 150 ॥

ವ ॥ ಆ ಸಮಯದೊಳಖಿಳರಾಜಕುಲದುಭಯವಿಶುದ್ಧಿಯುಮನನ್ವಯಪ್ರಸಿದ್ಧಿಯುಮನಱಿಪಿ ॥

ಕಂ ॥ ಕಂಚುಕಿ ಪರಿವಿಡಿಯಿಂ ನೃಪ
ಸಂಚಯಮಂ ತೋಱೆ ನಿಂದುದಿಲ್ಲವಳ ತಟಿ ।
ತ್ಸಂಚಲನಯನಯುಗಂ ನಿಜ
ದಿಂ ಚಳವೊಂದೆಡೆಯೊಳೆಂತುಮೇಂ ನಿಂದಪುದೇ ॥ 151 ॥

ಉ ॥ ಆ ನೆರೆದಿದ್ದ ರಾಜಸುತರಂ ಪರಿದೆಯ್ದಿ ಬಳಲ್ದ ವಿಶ್ರವ
ಸ್ಥಾನವನಾವಮಹೀಭುಜನ ಮೆಯ್ಸಿರಿಯಂ ಸೆಱೆಗೆಯ್ಯೆ ತತ್ಸರೋ ।
ಜಾನನೆ ತನ್ನ ಲೋಲನಯನೋತ್ಪಲಮಾಲೆ ಸ್ವಯಂಗೆ ಮಾಲೆಯಂ
ತಾನೊಸೆದಿಕ್ಕಿದಳ್ನಿಖಿಳರಾಜಕುಳಂ ವನಮಿಕ್ಕುವನ್ನೆಗಂ ॥ 152 ॥

ಕಂ ॥ ಆ ರಾಜನ್ಯಕಮಿರೆ ಕ
ನ್ಯಾರತ್ನಂ ರೂಪುಗರೆದೊಡಂ ನಿಜಪುಣ್ಯ ।
ಪ್ರೇರಣೆಯಿಂ ಕೈಸಾರ್ದ್ದ
ತ್ತಾರಘುವೀರಂಗೆ ಪುಣ್ಯದೊಳ್ಪರುಡುಂಟೇ ॥ 153 ॥

ಉ ॥ ಎತ್ತಿದುವಾತಪತ್ರಶತಮಿಕ್ಕಿದುವಾಗಳೆ ಹೇಮಚಾಮರಂ
ವಿುತ್ತಿನ ಸೇನೆಯಂ ತಳಿದರಂಗನೆಯರ್ಗ್ಗಗನಾಂತರಾಳಮಂ ।
ವುತ್ತಿದುದುತ್ಸವಾನಕರವಂ ದ್ವಿಜವುಂಗಳವುಂತ್ರನಾದಮು
ಣ್ಮಿತ್ತಿನಿತುಂ ವಿಭೂತಿ ಪತಿಗಾದುದು ಬಾಲಕಿ ಸೂಡೆ ಮಾಲೆಯಂ ॥ 154 ॥

ವ ॥ ಅಂತಾತಂಗೆ ಕನ್ನೆ ಕೈಸಾರ್ವುದುಂ ॥

ಉ ॥ ಬಾಲಕಿ ವುಗ್ಧೆ ತಕ್ಕುದಱಿವುಳ್ ಪಲರಂ ವೆಱುಗಿಕ್ಕಿ ಸೂಡಿದ
ಳ್ಮಾಲೆಯನಾಕೆಯಂ ಕಳೆದುಕೊಳ್ವುದು ದೇಸಿಗನಂ ತಗುಳ್ವುದೀ ।
ಕಾಲವಿಳಂಬವೇನ್ವುದೆನುತುಂ ರಣಬಾಲಕರಾಸವಸ್ತ ಭೂ
ಪಾಲಕಬಾಲಕರ್ಕ್ಕದನಕೇಳಿಗೆ ವುಚ್ಚರವಂ ತೊಡಚ್ಚಿದರ್ ॥ 155 ॥

ವು ॥ ಅನರಣ್ಯಪ್ರಿಯನಂದನಂ ದಶರಥಂ ಸಾಕೇತನಾಥಂ ಶರಾ
ಸನವಿದ್ಯಾಗುರು ವೀರನೆಂದಱಿದುದಿಲ್ಲೀಕಾಕಿ ಸಾಮಾನ್ಯನೆಂ ।
ದನಿತುಂ ರಾಜಸವೂಜವಾಜಿಗುರದೆಯ್ತಂದೆತ್ತು ನೀರ್ಗ್ಗೆತ್ತು ಪೆ
ಳ್ತನದಿಂ ಕತ್ತರಿವಾರಿಯಂ ಜಡಜನಂ ಕೈಗುತ್ತಲೆಳ್ತರ್ಪವೋಲ್ ॥ 156 ॥

ವ ॥ ಅಂತು ರಣಪಟಹಪಟುನಿನದನೊದವೆ ವಿಳಯಜಳಧಿಯಂತೆ ನೆಲೆಯಿಂ ತಳ
ರ್ದ್ದ ರಾಜಕುಲವುಂ ಕಂಡು ಕೈಕೆಯ ಜನಕಂ ಭಯಚಕಿತಚಿತ್ತನಾಗಿ ॥

ಚ । ಶುಭವುತಿ ಪೂಡಿ ತಂದು ರಥವುಂ ತಡೆಯಲ್ಪದನಲ್ತು ಸಾವುದಿಂ
ಶುಭವುನೊಡಚ್ಚರ್ಚಲಾಂ ನೆಱೆವೆನೇಱಿಸಿ ಕೈಕೆಯನೀವರೂಥವುಂ ।
ಸಭೆಯಿನಗಲ್ದುಪೋಪುದೆನೆ ಕೇಳ್ದಿನಿಸಂ ನಸುನಕ್ಕು ಭೂಭುಜ
ಪ್ರಭು ನುಡಿದಂ ವುಖೇಂದುಕಿರಣಂ ನಿಮಿರ್ವಂತಿರೆ ದಂತಕಾಂತಿಗಳ್ ॥

ಉ ॥ ಆನೆ ಕಲಂಕುವಂತೆ ಕೊಳನಂ ಬಿಡದಾನೆ ಕಲಂಕುವೆಂ ಕಱು
ತ್ತೀನೆರೆದಾಂತ ರಾಜಕವನೊಂದಿನಿಸಂ ನಡೆನೋಳ್ಪುದೆಂದು ಪಂ ।
ಚಾನನದಂತೆ ಗರ್ಜ್ಜಿಸಿ ರಘೂದ್ವಹನೇಱಿ ವರೂಥವುಂ ಘನ
ಜ್ಯಾನಿನದಂ ಭಯಂಗೊಳಿಸೆ ಜೇವೊಡೆದಂ ನಿಜಚಾಪದಂಡವಂ ॥ 158 ॥

ಚ ॥ ಅತಿಕಯವಾಗೆ ತನ್ನ ಮುಖಚಂದ್ರಬಲಂ ನಾಣೆವೇಳಲಾರದಂ
ಕ್ಷುತಿಪಥಮಂ ಪಳಿಂಚಿ ಜಯಡಿಂಡಿಮನಿಸ್ವನದಂತೆ ಮೇಲುದು ।
ದ್ಗತಜಯಕೇತುವಂ ವಿಗೆ ಮನೋರಥಸಾರಥಿ ಕೈಕೆ ಬಂದು ಭೂ
ಪತಿಯೊಡನೇಳ್ದಳ್ ರಥಮನಾ ರಘುವೀರನ ವೀರಲಕ್ಷ್ಮಿಯೋಲ್ ॥ 159 ॥

ವ ॥ ಆಗಳಕಾಲಜಲಧರಂಗಳಂತೆ ನಿಖಿಳನೃಪಸುತಸ್ಫೂರ್ತ್ತಿಮುತ್ತಿ ಕರವರ್ಷಮಂ ಕಳ್ಪೆನ್ದುಂ ॥

ಕಂ ॥ ತಾಗೆ ಸರಲ್ಪವಿನ ಪ
ಲ್ತಾಗಿದವೋಲ್ಮಾರ್ಕ್ಕೊಳ್ವೋಗೆ ಸಾರಥಿ ರಥಮಂ ।
ಬೇಗಂ ಜಿಕೋದಿಸಿದಳ್ ವಧು
ರಾಗರಸಂ ದಶರಥಂಗೆ ನೆಲಿವೆಚ್ಚ್ವವೋಲ್ ॥ 160 ॥

ಮಿಾಱಿದೆ ಕೀಱಿದೆ ನೇಣಂ
ತೋಱಿದ ದೆಸೆಗಾಕೆಗಂ ಹಯಕ್ಕಂ ಚಿತ್ತಂ ।
ಬೇಱಿಲ್ಲೆನೆ ಪರಿದುದು ಜವ
ನೇಱಿದ ರಥವಿಂತಿದೆನೆ ರಥಂ ದಶರಥನಾ ॥ 161 ॥

ಚ ॥ ದೆಸೆ ಮನುಳ್ವನ್ನೆಗಂ ಮನಗಿ ರಾಜತನೂಭವರೆಚ್ಚ ಬಾಣಮಂ
ಪೊಸವಮಸೆಯಂಬಿನಿಂ ಕಡಿದು ಕತ್ತಲೆಯಂ ಪೆದಱಿಟ್ಟ ಕಣ್ಗಗು ।
ರ್ವ್ವಿಸುವಿನಮಂಡಳಕ್ಕೆ ಪರಿವೇಷಮುದಾಯ್ತೆನೆ ತೀವ್ರತೇಜಮಂ
ಪಸರಿಸಿ ಕಣ್ಗೆ ಕಂಡಳಿತಚಾಪಮಗುರ್ವ್ವಿಸಿದಂ ಮಹೀಭುಜಂ ॥ 162 ॥

ಕೆಲರ ವರೂಥಮುಂ ಕೆಲರ ವಾಜಿಗಳಂ ಕೆಲರುಗ್ರಬಾಣಮಂ
ಕೆಲರ ಕಿರೀಟಮುಂ ಕೆಲರ ಚಾಪಮನಿಕ್ಕಡಿಮಾಡಿ ತನ್ನ ದೋ ।
ರ್ವ್ವಲದ ಪೊಡಪ್ಪುಜೀಯೆನಿಸೆ ಮಾರ್ಪ್ಪಡೆಯಂ ಕೊಲಲೊಲ್ದನಿಲ್ಲ! ಮೆಯ್
ಗಲಿ ರಘುವೀರನಾತನ ಕರಾಸನವಿದ್ಯೆಗಿದಾವವಿಸ್ಮಯಂ ॥ 163 ॥

* * * * * *

ಮ ॥ ವ್ಯಗರಾಜಂಗಗಿದೋಡುವಾನೆಗಡುಪಂ ಕಯ್ಕೊಂಡು ಯೂಥಾಧಿಪಂ
ಮುಗುಳ್ದಂ ಸಿಂಹದನೇಲೆ ಪಾಯ್ವುತೆಱದಿಂ ಹೇಮಪ್ರಭಂ ರಾಜನೂ ।
ನುಗಳಂ ತನ್ನೊಡಗೂಡಿಕೊಂಡು ಕಳ್ದಿಂ ಜ್ಯಾಘಾತಮೇಳ್ಪಧ್ವನಿ
ಸ್ಥಗಿತಾಶಾಮುಖನುನ್ಮುಖಾಂಶುಚಪಳಾವೇಗಂ ಶರಾಸಾರಮಂ ॥ 164 ॥

ವ ॥ ಅನವದ್ಯಯುದ್ಧೊಳ್ ॥

ಕಂ ॥ ಇದು! ಮಾಯಾಬಲವೊಂದ
ಲ್ಲಿದು! ಕೋಟಾಕೋಟಿರಥಮೆನಲ್ಪೈರಿಬಲಂ ।
ಪೆದಱೆ ಮನೋಜವದಿಂ ಪರಿ
ದುದು ಪೂರ್ಣವನೋರಥಂ ರಥಂ ದಶರಥನಾ ॥ 165 ॥

ವ॥ ಅಂತು ಪರಿದು ನೆರೆದ ರಾಜನ್ಯಕವಂ ಪಳಯಂತೆ ಪಳಾಯನಶೀಲವುಂ ಮಾಡಿ ಹೇಮಪ್ರಭನಂ ಮುಟ್ಟಿದಂದು ॥

ಕಂ ॥ ಕಡುಕೆಯ್ದು ಗಂಡವಾತಂ
ನುಡಿದಿದಿರಾದಂತೆ ಗಂಡನಾಗೆನುತುಂ ಕೈ ।
ಯುಂಡಗದೆ ದಶರಥನೆಚ್ಚಂ
ಸಿಡಿಲೊಳ್ಗಿಡಿಗಳ್ವೊಲಂಬನಂಬಟ್ಟುವವೋಲ್ ॥ 166 ॥

ವ ॥ ಅಂತಿನುವುದುಂ ॥

ಕಂ ॥ ಉಡಿಯೆ ಪಳಯಿಗೆ ವರೂಥಂ
ಕೆಡೆಯೆ ಭುಜಾದಂಡವಜ್ರವುಯಕೋದಂಡಂ ।
ಕಡಿಖಂಡವಾಗೆ ಪರಿಪಡೆ
ಪೊಡಪ್ಪುರ್ ಹೇಮಪ್ರಭಂ ಹತಪ್ರಭನಾದಂ ॥ 167 ॥

ವ ॥ ಆಸವುಯದೊಳ್ ದಶರಥನಭಯಘೋಷಣೆಯೊಡನೆ ಜಯಪತಾಕೆ ನಭವುನಳ್ಳಿಲ್ಲೆಯೆ ವೀರಸೇಸೆಯೊಡನೆ ಸ್ವಯಂವರಸೇಸೆಯುನಾಂತು ಪೌರಜನದವುನದೊಡನೆ ಕೌತುಕವುಂಗಳಪುರವುಂ ಪುಗುವಾಗಳ್ ॥

ಉ ॥ ಓಡಿಸಿದಾತನೀತನಿದಿರಾದವಿರೋಧಿಗಳಂ! ವಿಳಾಸದಿಂ
ಲೀಡಿಸಿದಾತನೀತನಸವಾಯುಧನಂ! ತನಗೊಲ್ದು ವಾಲೆಯುಂ ।
ಸೂಡಿಸಿದಾತನೀತನವನೀಶ್ವರಕನ್ಯೆಯ ನೆಂದು ತೋಱೆ ವಾ
ತಾಡಿದುದೊಲ್ದು ನೋಡಿದುದು ಪೌರವಧೂಜನವಾದಿರಾಜನಂ ॥ 168 ॥

ವ ॥ ಅಂತು ಪುರವುಂ ಪೊಕ್ಕರವುನೆಗೆ ಬಿಜಯಂಗೆಯ್ವುದುಂ ದಶರಥವುಹೀಸಾಥನಪ್ಪುದನಱಿದು ॥

ಉ ॥ ನೋಡಿರೆ! ಕನ್ನೆಯಂ ದಶರಥಂಗನುರೂಪೆಯನೀವ ಸೈಪು ಕೈ
ಗೂಡಿದುದೆಂದು ತನ್ನ ವಿಭವಕ್ಕನುರೂಪವುನಲ್ವುವಾಹವುಂ ।
ವಾಡಿದನುತ್ಸವಕ್ಕ ಪೆಱರೋರ್ವರುಮಿಲ್ಲೆನೆ ಕೊಟ್ಟು ಸಂತಸಂ
ವಾಡಿದನಾರೊಳಂ ಕುಭವುತಿ ಕ್ಷಿತಿನಾಥನಿದೇನುದಾತ್ತನೋ ॥ 169 ॥

ವ ॥ ಆಗಳಾವಿವಾಹಾನಂತರಂ ಕೈಕೆವೆರಸು ದಶರಥನಯೋಧ್ಯೆಗೆ ಜನಕಂ ಮಿಥಿಳೆಗೆ ಪೋಗಿ ವುನ್ನಿನಂತೆ ಸುಖದಿನರಸುಗೆಯ್ಯುತ್ತಿರ್ದರಿತ್ತಲ್ ದಶರಥನರೇಂದ್ರನೊಂದು ದಿವಸಂ ॥

ಕಂ ॥ ಪರಿಮಿತಪರಿಜನಪರಿವೃತ
ನರಸಂ ಬಗೆದರಸಿ ಗೆಲವನೆಸಗಿದ ತೆಱನಂ ।
ತರವೇಳೆ ವೃದ್ಧಕಂಚುಕಿ
ತರೆ ಖಂದಳ್ ಕೈಕೆ ಬಳಸಿಬರೆ ಸಹಚರಿಯರ್ ॥ 170 ॥

ತರಳಕಟಾಕ್ಷಂ ಮೋಹನ
ಕರಮೆನೆ ನೀಲಳಿಯ ಪಾರಿಹಾರ್ಯ್ಯದ ಮಣಿನೂ ।
ಪುರದ ಮಧುರಸ್ವನಂ ಮು
ಪ್ಪುರಿಗೂಡಿದ ಮದನಪಾಕಮೆನೆ ನಡೆತಂದಳ್ ॥ 171 ॥

ವ ॥ ಅಂತು ಬಂದು ॥

ಕಂ । ತನುಸೌಂಕು ಸೌಂಕೆ ಸಿಂಹಾ
ಸನದೊಳ್ತನ್ನೊಡನೆ ಕೈಕೆ ಕುಳ್ಳಿರೆ ಪುಳಕಂ ।
ತನಗೆ ತಲೆದೋಱೆ ದಶರಥ
ಜನಪತಿ ಕೈವಂದ ಕಲ್ಪತರುವಂ ಪೋಲ್ತಂ ॥ 172 ॥

ವ॥ ಅನಂತರಮಾಕೆಯ ಮುಖಾರವಿಂದಮನಾನಂದವಿಸ್ಫಾರಿತವಿಳೋಚನನಾಗಿ ನೋಡಿ॥

ಕಂ । ಈಕೆ ರಥಮೆಸಗೆ ವೈರಿಪ
ತಾಕಿನಿಯಂ ಗೆಲ್ದೆನೀಕೆ ಗೆಯ್ದುಪಕೃತಿಗಾ ।
ನೀಕೆಯ ಜೇಡಿದುದಂ ನಿ
ರ್ವ್ಯಾಕುಳವಿಸಮುದೊಡೆ ಮೆಚ್ಚು ಪೊಳ್ಕುಗಿರದೇ ॥ 173 ॥

ವ ॥ ಎಂದು ಪರಿಜನದ ಮೊಗಮಂ ನೋಡಿ ಕೈಕೆಯಂ ನಿನ್ನ ಮೆಚ್ಚಿದುದಂ ಬೇಡಿ ಕೊಳ್ಳಿಂಬುದುಂ ॥

ಕಂ ॥ ಏನಂ ಬೇಡುನೆನೆಂದ
ಬ್ಜಾನನೆ ಬಗೆ ಪೆದಱೆ ಬಗೆಗೆ ಬಂದೊಡಮೆಯನೊ ।
ಲ್ದಾನೆರೆದಾಗಳೆ ಕೊಡಿಮೆಂ
ದಾನೃಪತಿಗೆ ಕೈಕೆ ಬೈಕೆಗೊಟ್ಟಳ್ ನೆಚ್ಚಂ ॥ 174 ॥

ವ॥ ಆನಂತರಂ ನಿಜಪ್ರಿಯನ ನಿಯಮದಿನರ್ದ್ಧಸನದಿನೆದ್ದು ಪೂಮಾಲೆಯುಮುನ ವನಿಪತಿಯ ನಯನಕುವಳಯಮಾಲೆಯುಮನಾಂತು ಬಳಲ್ಮುಡಿಯ ಚಿಲ್ಪಿಂಗೆ ಮುಡಿಗವಿದಂತೆ ಸೊಗಯಿಸೆಯುಂ, ಕೊರಲೊಳಿಕ್ಕಿದೆಕ್ಕಸರದ ಕೆಂಬಟ್ಟೆಯ ತೊಂಗಲನಂ ಗಜಂಗಮುಲತೆಯ ತಳಿರ ತೊಂಗಲಂತೆ ಪೊಳೆಯೆಯುಂ, ಮೇಲುದರ ನೆಱಿಂಗನುಱೆ ನೆಱೆಗೆಯ್ದು ಪೊಱಪೊಣ್ಮುವ ಪರಭಾಗದ ಕರೀರಕಾಂತಿ ಲಾವಣ್ಯರಸದ ತಂದಲನಗುಂದಲಿವಾಡೆಯುಂ, ಘನನಿತಂಬಮಂ ಬಳಸಿದ ಮೇಖಲಾವೃತಮಣಿಕಿಂಕಿಣೀಮಧುರ ಧ್ವನಿ ಮನುಜಮಕರಧ್ವಜನ ಮನಮನೊಡನೊಡನೆ ಕರೆವಂತಡಿಗಡಿಗೆ ಪೊಣ್ಮೆಯುಂ, ಮನೋಜರಾಜರಾಜನ ನೀರಾಜನದೀಪಕಳಿಕೆಯಂತೆ ನಿಜನಿವಾಸಕ್ಕೆ ಕೈಕೆ ಬಿಜಯಂಗೆಯ್ದುದುಂ ॥

ಚ ॥ ನೆನೆಯಿಸೆ ಪೂವಿನಂಬನಪರಾಜಿತೆ ಕಣ್ಗೆ ಸುವಿಂತ್ರೆ ಮೈತ್ರಿಯಂ
ಜನಿಯಿಸೆ ಬೀಱೆ ಸುಪ್ರಭೆ ತನುಪ್ರಭೆಯಂ ಗೆಲೆ ಕೈಕೆ ಕಾಂತುರಾ ।
ಜನ ಜಯಲಕ್ಷ್ಮಿಯಂ ನಿಜಕುಲಾಂಗನೆಯರ್ಪೆಸರ್ವೆತ್ತ ನಾಲ್ವರೊಂ
ಜನಪನ ರಾಜಲೀಲೆ ಗೆಲೆವಂದುದು ವನ್ಮಥರಾಜಲೀಲೆಯಂ ॥ 175 ॥

ವ ॥ ಅಂತು ದಶರಥಮಹೀನಾಥನಿಪ್ಪವಿಷಯಸೌಖ್ಯಸಂತುಪ್ಪನಾಗಿಪ್ಪುದುಂ ॥

ಕಂ ॥ ಅಪರಾಜಿತಾವಮಹಾದೇ
ವಿ ಪತಿವ್ರತೆ ಶೀಲಗುಣಕಳಾಪರಿಣತಿಯಿಂ ।
ನೃಪನ ಮನಂಬಡೆದುಂ ಧ
ರ್ಮ್ಮಪತ್ನಿಯೆನೆ ಪಡೆದಳಗ್ರಮಹಿಷೀಪದವಮಂ ॥ 176 ॥

ವ ॥ ಅಂತಾಕಾಂತೆ ದಶರಥನ ಮನೋರಥಜನ್ಮಭೂಮಿಯೆನಿಸಿದ್ದೊಂದುದಿವಸಂ ॥

* * * * * *

ಕಂ ॥ ದಾನದ್ವಿರದನವುಂ ಪಂ
ಚಾನನವುಂ ಚಂಡಭಾನುವುಂ ಚಂದ್ರವುನಂ ।
ಮಾನಿನಿ ನಿಶಾವಸಾನದೊ
ಳೀನಾಲ್ಕುಂಕುಭದವುಪ್ಪ ಕನಸಂ ಕಂಡಳ್ ॥ 177 ॥

ವ ॥ ಆನವುಯುದೊಳ್ ನಿಜನಾಜಸದನಸರಸೀಸರೋಜರಜವುನೊಟ್ಟುಕೊಂಡು ಸುಳಿವ ಸುಪ್ರಭಾತಪ್ರಭಂಜನನುಂ ಮದನವುದಕ್ಕುಂಜರದ ವುಣೆಯೇಱುಂ ವಿಸಾಱುವ ರಾಜಹಂಸಕೂಜಿತವುಂ ದಿನವುಮುದರ್ಕನಾತುರತೆಯಿಂ ಬರ್ಪ್ಪ ಸಂಧ್ಯಾದೇವತೆಯ ನೂಪುರನಿನದವುಂ ನೆನೆಯಿಸುವ ಚಂಚರೀಕದಿಂಚರವುಮುದಯನಗನಿಕುಂಜವು ನೇಱುವ ರವಿಯ ರಥಚಕ್ರಚೀತ್ಕಾರವುಂ ಚಲ್ಲವಾಡುವ ರಥಾಂಗರವವುಂ ನೆಯ್ದಿಲ್ಲೊಳ್ಗಳದ ಸೊಬಗು ಸೊಪ್ಪಾಗೆ ಕಮಳಿನಿಗೆ ಪುಟ್ಟುದಟ್ಟಹಾಸವನುದಾಸೀನಂವಾಳ್ಪ ಪೊಣರ್ವಕ್ಕಿಯ ಕಳಕಳಧ್ವನಿಯುವುನುಕೂಲವಾಗೆ ॥

ಕಂ ॥ ವುಂಗಳಪಾಠಕರವವುಂ
ವುಂಗಳಗಾಯಿನಿಯ ಗೀತರವವುಂ ಪರಿಚ ।
ರ್ಯಾಂಗನೆಯರ ನೂಪುರದ ರ
ವಂಗಳುಮಿತ್ತ್ವು ಸುಖಪ್ರಬೋಧವುನಾಗಳ್ ॥ 178 ॥

ವ ॥ ಆಂತುಪ್ಪವಡಿಸಿ ॥

ಕಂ ॥ ವ್ಯವಹಾರವುಂಗಳಾಚಾ
ರವೆಲ್ಲವಂ ತೀರ್ಚ್ಚಿ ವುಖ್ಯವೂಂಗಳ್ಯವುನಾ ।
ಯುವತಿ ಜಿನಪೂಜೆಯಂ ವಾ
ಡಿ ವಿಚಿತ್ರವೆನಿಪ್ಪ ಚಿತ್ರಶಾಲೆಗೆ ಬಂದಳ್ ॥ 179 ॥

ವ ॥ ಅಂತು ಬಂದು ವುರಕತವುಣಿವೇದಿಕೆಯ ನಡುವಣ ಚೆಂಬೊನ್ನ ಪಟ್ಟವಣೆಯ ಮೇಲೆ ರೋಹಣನಗನಿತಂಬದೊಳ್ಪೊಳೆವ ರತ್ನಶಲಾಕೆಯಂತೆ ನಿಜಶರೀರಕಾಂತಿ ಪಸರಿಸೆ ಕುಳ್ಳಿರ್ಪುದುವಾಗಳುಭಯಪಾರ್ಶ್ವದೊಳಂ ಚಾವುರಗ್ರಾಹಿಣಿಯರ್ಕ್ಕಳ್ ಕಾಕಕಣಿಕಂಗಳಂದೆಸೆವ ಶರಲ್ಲಕ್ಷ್ಮೀಯಂ ನೆನೆಯಿಸೆ ಕುಂಚದಡಪದಡವಕೆಯಕ್ಕನ್ನಡಿಯ ಪರಿಚಾರಕಿಯರ್ ಕುಸುವುಶರವಶೀಕರಣವುಂತ್ರಾಧಿದೇವತೆಯರೆನಿಸೆ ॥

ಕಂ ॥ ಕರಕಿಸಲಯರುಚಿಯಿಂದಂ
ಪರಭಾಗಂಬಡೆದು ರಾಗವುಂ ಬೀಱುವಿನಂ ।
ಚರಣವುಣಿವಳಯುವುಂ ನೂ
ಪುರವುಂ ನೃಪವಧುಗೆ ತುಡಿಸಿದಳ್ ತಾನೊರ್ವ್ವಳ್ ॥ 180 ॥

ಗೆಲೆವಂದುವಲರ್ದ ಕನ್ನೆ
ಯ್ದಿಲ ಪೂಗಳ ಚೆಲ್ವನೀಗಳೆನೆ ಕೆನ್ನೆಗಳಾ ।
ದಲೆಗೆಯ್ದಿದ ಚೆನ್ನೆಯ ಕ
ಣ್ಮಲರೊಳ್ ಕಾಡಿಗೆಯನೆಚ್ಚಿದಳ್ ವುತ್ತೋರ್ವ್ವಳ್ ॥ 181 ॥

ಅಂಬುಜದ ಬಂಡನುಣ್ಬೆಳ
ರುಂಬಿಯ ನೆನೆಯಿಸೆ ವುನೋಜಗಜಗವುನೆಯಾ ವ ।
ಕ್ತುಂಬುಜದೊಳ್ ವುತ್ತೋರ್ವ್ವ
ಳ್ಪುಂಬೂಧರೆ ವೃಗವುದಾಂಬುತಿಳಕವುನಿಟ್ಟಳ್ ॥ 182 ॥

ತೊಳಗುವ ವತಂಸವುಕ್ತಾ
ಫಲರುಚಿಯೊಳ್ ಕೆಲದ ಕನ್ನೆಯರ ನಗೆಗಣ್ಗಳ್ ।
ಪೊಳೆದುವು ಪೊಸವೆಳ್ದಿಂಗಳ
ಬಳಸಿಂಗೊಳಗಾದ ಚಲಚಕೋರಂಗಳ್ಪೋಲ್ ॥ 183 ॥

ಉ ॥ ಬಂದೆಲೆವೋದಶೋಕೆಯಿರಡೊಳ್ಗಡಿವೋದ ತವುಳಪಂಡದೊಳ್
ವುಂದನವಿಸಿಂ ಪೊಳೆವವೋಲ್ ತಳವುಂ ನಳತೋಳ್ಗಳಂದವುಂ ।
ವುಂದಿಡೆ ಪಿಕ್ಕಿಪಿಕ್ಕಿ ಪುಡಿಗತ್ತುರಿಯಂ ತಳದಲ್ಲೆಲೆಳ್ ಲತಾ
ಸುಂದರಿ ಕಾವುಪಾಶದವೊಲಿರ್ದ್ದ ಲತಾಂಗಿಯ ಕೇಶಪಾಶದೊಳ್ ॥ 184 ॥

ವ ॥ ಅಂತುಕ್ಕೆಗೆಯ್ದು ವುಣಿದರ್ಪಣವುನವಳೋಕಿಸುತ್ತಿರ್ಪುದುವುಂ ಪ್ರಸ್ತಾವದೊಳ್ ॥

ಉ ॥ ಚಿತ್ರಲಯಪ್ರಗಲ್ಭಹಯವಲ್ಗನದಿಂ ವುಣಿಕುಂಡಳಾಂಶುಗಳ್
ಚಿತ್ರಿಸೆ ಗಂಡಭಿತ್ತಿಯನುರಸ್ಥಳರಂಗದೊಳಂಗಹಾರವುಂ ।
ಸೂತ್ರಿಸೆ ತಾರಹಾರರುಚಿವುಂಜರಿಗಳ್ ನಿಜರೂಪವುಂಗೆನಾ
ನೇತ್ರವಿಕಾಸವುಂ ಪಡೆಯೆ ಪೊಕ್ಕನಿಳಾಧಿಪನಾನಿವಾಸವುಂ ॥ 185 ॥

ವ ॥ ಅಂತು ಪೊಕ್ಕು ಪರಿವಿತನಿಜಪರಿಜನಂ ದಶರಥಮಹೀನಾಯಕನುಚ್ಚೈಃಶ್ರವ ದಿನಿಳವ ನಿಳಂಪನಾಯಕನಂತೆ ವಾಹನದಿನಿಳದುಬಂದು ನಿಜಸತಿಯಂಗವಂ ಸೋಂಕಿ ಕುಳ್ಳಿಪ್ಪುದಂ ॥

ಕಂ ॥ ಅರಸಿ ನುಲಿಪಲ್ಲ ಪಸರಿಪ
ವುರೀಚಿ ಮನಸಿಜನ ಜನವಿಂದೆನಲವರ್ದಿನ ಬ ।
ಲ್ಸರಿ ನುರಿದಪುದೆನಲವನೀ
ಶ್ವರಂಗಿರುಳ್ತನ್ನ ಕಂಡ ಕನಸಂ ಪೇಳ್ದಳ್ ॥ 186 ॥

ವ॥ ಆಗಳವನೀಪತಿ ನಿಜಮನೋವಲ್ಲಭೆಯ ಶುಭಸ್ವಪ್ನದರ್ಶನಕ್ಕೆ ಹರ್ಷಚಿತ್ತನಾಗಿ॥

ಮ ॥ ಸತತಂ ದಾನಿ ಮದೇಭದಿಂ ಸಕಳಭೂಭೃನ್ಮಸ್ತಕನ್ಯಸ್ತ ಪಾ
ದತಳಂ ಕೇಸರಿಯಿಂ ಪ್ರತಾಪನಿಳಯಂ ತಿಗ್ಮಾಂಕಂವಿಂ ಸತ್ಕಳಾ ।
ಚತುರಂ ಚಂದ್ರನಿನಾದಪಂ ನಿನಗೆ ನೇತ್ರಾನಂದನಂ ನಂದನಂ
ಸತಿ! ನೀನಲ್ಲದರಿನ್ನವಪ್ಪ ಕನಸಂ ಕಾಣ್ಪಂತು ಮುನ್ನೋಂತರಾರ್ ॥ 187 ॥

ವಂ ॥ ಎಂದುತತ್ಫಲಸ್ವರೂಪವಂ ನಿರೂಪಣಂಮಾಳ್ಪುದುಂ ॥

ಕಂ ॥ ಶ್ರುತಿಪಥಮಂ ಸಾರ್ತ್ತರೆ ಘನ
ರುತಿ ರಾಗವನಪ್ಪುಕೆಯ್ವುವೋಲ್ಸೋಗೆನವಿ ।
ಲ್ಸುತಲಾಭವಾರ್ತೆಯಂ ಕೇ
ಳ್ದ ತನೂದರಿ ರಾಗರಸತರಂಗಿತೆಯಾದಳ್ ॥ 188 ॥

ವ॥ ಅನಂತರಮವನಿಪತಿ ಸತಿಗೆ ಸವುಯೋಚಿತಪರಿಚರ್ಯ್ಯಾಚತುರೆಯರಂ ನಿಯೋ ಜಿಸಿ ಬಿಜಯಂಗೆಯ್ವುದುಂ ಕತಿಪಯದಿವಸಂಗಳ್ ನಿರತಿಶಯಸುಖಸ್ವರೂಪಂಗಳಾಗಿ ಪೋಗೆ ॥

ದಶರಥ ಪುತ್ರೋದಯವರ್ಣನಂ

ಕಂ ॥ ಎಳವಸಿಱೊಳ್ ಸತಿಯ ಮೊಗಂ
ಜೆಳತ್ತುದನ್ವರ್ತ್ಥಮಾಯ್ತು ಚಂದ್ರಾನನೆಯೆಂ ।
ದಿಳೆಪೊಗಳ್ವ ಮಾತು ನೀಳ್ದುದು
ಲಳತಾಳಕವೂಳೆ ಸುಯ್ಲೆ ಪಾರ್ವ್ವಳಿಗಳವೋಲ್ ॥ 189 ।

ಮುಕರಾಂಕದ್ವಿಪವುದಪ
ಟ್ಟಿಕೆಯಿನಿಸಿ ಕಪೋಲಮೂಲವುಂ ಮುಟ್ಟಿದುವಾ ।
ಚಕಿತಾಕ್ಷಿಯ ಹರಿನೀಳಾ
ಳಕಂಗಳಾನನನರೋಜಿನೀಮಧುಪಂಗಳ್ ॥ 190 ।

* * * * * *

ಶಂ ॥ ಉದರದೊಳಿರ್ಪ್ಪ ತನೂಜನ
ವದಾನ್ಯತಾಗುಣದ ಪೆರ್ಮ್ಮೆಯಂ ವೇಳ್ವವೊಲಾ ।
ನುದತಿಗೆ ನಿರಂತರಂ ಪಾ
ತ್ರದಾನವುಂ ವಾಳ್ಪ ಬಯಕೆ ಪುಟ್ಟುತ್ತಾಗಳ್ ॥ 191 ॥

ಉಭಯಶ್ರೇಣಿಯ ಖಚರ
ಪ್ರಭುಗಳ ಸಿಂಹಾಸನಂಗಳೊಳ್ಕುಳ್ಳಿರಲಂ ।
ದಿಭಗವುನಿ ಬಯಸಿದಳಾ ಸಾ
ರ್ವ್ವಭೌವುನೀ ತನಯನೆಂಬುದಂ ಸೂಚಿಪವೋಲ್ ॥ 192 ॥

ಪರಭೂಪಾಲದ್ವೀಪಾಂ
ತರಾಳಕೇಳೀವನಂಗಳಂ ಕಿಳ್ತುಂ ತ ।
ತ್ಪುರವುನುರಿಪುವುದನೀಕ್ಷಿಸ
ಲರವಿಂದಾನನೆಗೆ ಬಯಕೆಯಾಯ್ತೆಳವಸಿಲೊಳ್ ॥ 193 ॥

ಕುಲಕುಧರವುನೇಱಲ್ ದಿಶಾ
ವಲೋಕನಂ ಮಾಡುವಖಿಲಕುಲವಾಹಿನಿಯೊಳ್ ।
ಜಲಕೇಳಿಯನಾಡುವ ಬಯ
ಕೆ ಲತಾಕೋವುಳೆಗೆ ಪುಟ್ಟಿದತ್ತೆಳವಸಿಲೊಳ್ ॥ 194 ॥

ಬಸಿಱ ವುಗಂಗಿಲ್ಲಿವರಂ
ವಸುಧಾತಳವುೀಕಭೋಜ್ಯವೆಂದಱಿಪುವವೋ ।
ಲ್ಲವುಧೆಯ ನಾಲ್ಕುಂ ಕಡೆಯೆಡೆ
ಯ ನುರಭಿವೃತ್ತಿ ಕೆಯುನರ್ತ್ಥಿಯಿಂ ಸೇವಿಸಿದಳ್ ॥ 195 ॥

ಅವನೀಶ್ವರನಾಗಳ್ಪಂ
ಸವನಂ ವೊದಲಾಗೆ ಸಕಲವುಾಂಗಲವುಹೋ ।
ತ್ಸವವುಂ ವೆಱೆದಂ ತಣಿವ
ನ್ನವಿತ್ತು ವಸುವುತಿಗೆ ವಸ್ತ್ರಭೂಷಾವಳಿಯುಂ ॥ 196 ॥

ವ ॥ ಅಂತು ನೆಗಳ್ದ ವುಹೋತ್ಸವಂಗಳೊಡನೆ ಗರ್ಭ್ಭವುುಂ ಬಂಧುವನಹರ್ಷ ಗರ್ಭ್ಭವುುಂ ಪರಿಪೂರ್ಣವಾಗೆ ॥

ಚಕ ॥ ವುರಕತರಂಗದೊಳ್ ರವುಣಿ ತೀವಿದ ಗರ್ಭ್ಭದ ಬಿಂಬಿನಿಂ ನಯಂ
ಪೆರಸೆಡೆಯಾಡುವಾಗಳಡಿಯೂಡಿದ ವುಲ್ಲಡವಜ್ಜಿಗಳ್ಮನೋ ।
ಹರವುನಿಸಿದ್ದುವೀಸತಿಯ ಗರ್ಭ್ಭದೊಳಿರ್ಪ್ಪ ತನೂಜನಾದಪಂ
ವರನೆನಗೆಂದಿಳಾಧಿಪಗೆ ಪಲ್ಲವಿಸಿತ್ತನುರಾಗವುಂಬಿನಂ ॥ 197 ॥

ಉ ॥ ಹಾರಮುನಿಕ್ಕಿ ಮಿಕ್ಕ ಕನಕಾಭರಣಂಗಳ ಬಿಣ್ಪನೇನುಮುಂ
ಸೈರಿಸದಿಪ್ಪುದೊಪ್ಪದೆ ವಲಂ ಕನಕಾದ್ರಿಯ ಬಿಣ್ಪನಪ್ಪೊಡಂ ।
ಸೈರಿಸದಬ್ಜಕಂ ಬಳೆಯೆ ಗರ್ಭ್ಭನರೋಜದೊಳಾವಿನೀಳನೀ
ರೇರುಹನೇತ್ರೆ ತತ್ಕನಕಮೂತ್ರದ ಬಿಣ್ಪನದೇಕೆ ಸೈರಿಪಳ್ ॥ 198 ॥

ಚ ॥ ತನುತನುವಾದ ಗರ್ಭ್ಭಿಣಿಗೆ ತತ್ಸಮಯೋಚಿತಮುಂಗಳಪ್ರಸ್ತಾ
ಥನಮೆಸೆದತ್ತು ಪರ್ವರದ ಕಂಠಿಕೆ ಬಣ್ಣದ ಸಣ್ಣಮಾಲೆ ತೆಂ ।
ಗಿನ ತಿರುಳ್ದೋಲೆ ತಾವರೆಯ ನೂಲುಡೆನೂಲ್ದಿರಿಖಂಡದಣ್ಪು ಮು
ತ್ತಿನ ತಿನರಂ ವ್ಯಣಾಳಕೆಯ ಮುದ್ರಿಕೆ ಪೂವಿನ ಪಿಂಡುಗಂಕಣಂ ॥ 299 ॥

* * * * * *

ವ ॥ ಅಂತು ವಿವಿಧನಿಳಾಸಂಗಳಂ ದಿವಸಂಗಳಖಿಲಷಿತಫಲಪ್ರಸವಂಗಳಾಗೆ ಸುಖಪ್ರಸವಸವಯದೊಳ್ ॥

ಕಂ ॥ ಉರ್ವ್ವರೆ ಮಣಿಪರ್ವ್ವತಮುಂ
ಕರ್ವ್ವುರಿ ಪರಿಪೂರ್ಣಚಂದ್ರನಂ ಪಡೆವಂತಂ ।
ತರ್ವತ್ತಿ ಸರ್ವಲಕ್ಷಣ
ಸರ್ವಗುಣಾನ್ವಿತನೆನಿಪ್ಪ ಸುತನಂ ಪಡೆದಳ್ ॥ 200 ॥

ನೀರಜವಮಾದುದು ಮೇದಿನಿ
ನೀರಜಮಿಂತನ ಚರಿತ್ರಮೆಂದಱಿಪುವವೋಲ್ ।
ನೀರಜ್ಜಮಾದುದೀವಸು
ಧಾರಮಣಂ ಸ್ವಚ್ಛಹೃದಯನೆಂದಱಿಪುವವೋಲ್ ॥ 201 ॥

ಉದಯಿಸಿದ ತನೂಜನ ತೇ
ಜದೊಳೇನುಂ ಮುಲಿನಭಾವಲಾಂಛನಮಿಲ್ಲಂ ।
ಬುದನಱಿಪುವಂತೆ ಪೊಗೆಯಿ
ಲ್ಲದೆ ಪೊಣ್ಮಿತ್ತಗ್ನಿ ದಕ್ಷಿಣಾವರ್ತಮುಖಂ ॥ 202 ॥

ಈ ತನಯನೆ ಸಕಳೋತ್ಸವ
ಹೇತು! ಜಗತ್ಪಾವಕಮನನೆಂದಱಿಪುವವೋಲ್ ।
ಶೀತಳಸಮಿರನೆಸಗಿ
ತ್ತಾತನ ಜಸದಂತೆ ವಿಸದಮಾಯ್ತಾ ಕಾಶಂ ॥ 203 ॥

ಎಳವಿಸಿಲುಂ ಪೆಳ್ದಿಂಗಳುಂ
ಮೆಳಸಿದುವೆನೆ ರವ್ಯುಹರ್ವ್ಯುಶಿಖರಸ್ಥಳಿಯೊಳ್ ।
ಪೊಳೆದುವ್ವು ಪೊಂಗಳಸಂಗಳ
ಪೊಳಪುಂ ಕೇತನದುಕೂಲಚೀಲಾಂಚಲಮುಂ ॥ 204 ॥

ಅವಿರಳಮೆನೆ ಪೂವಲಿ ಪುದಿ
ದುವು ಗುಡಿಯುಂ ತೋರಣಂಗಳುಂ ತಳಿಯುಂ ತ ।
ಳ್ತುವು ಬದ್ದವಣಂ ಬೂಜಿಸಿ
ದುವು ಬೀದಿಯು ಕೇರಿಕೇರಿಯೊಳ್ಮನೆಮನೆಯೊಳ್ ॥ 205 ॥

ಉ ॥ ರಾಗದ ಬಳ್ಳವಳ್ಳಿಯೆನೆ ರನ್ನದ ತೋರಣಮೂಲೆ ಕೂಡೆ ಚೆ
ಲ್ವಾಗಿರೆ ದಾನವೀಳ್ಗುರುತಿಯಂತಿರೆ ಮಂಗಳತೂರ್ಯನಾದಮಾ ।
ಶಾಗಜಕರ್ಣಪೂರನೆನೆ ರಾಗರಸಾಮೃತವಾರ್ದ್ರಘೋಷದಂ
ತಾಗಿರೆ ಪುಣ್ಯಪಾತಕರವಂ ಪೊಸತಾದುದು ರಾಜಮಂದಿರಂ ॥ 206 ॥

ದೇಸಿ ವಿಳಾಸಮಂ ಪಡೆಯೆ ಗೊಂದಣವೆಗ್ಗಳವಾಗಳಾನೃಪಾ
ವಾಸದೊಳಾಡಿದತ್ತೆಸೆಯೆ ಪಾಣಿತಳಂ ಪಡಿವಂತೆ ಕುಂಕುಮ ।
ಸ್ನಾನಕಮಂ ಕುರುಳ್ಕಿದಲುವಂತೆ ತವಾಳನವಪ್ರವಾಳಮುಂ
ಕೇಸಡಿ ಪಾಸುವಂತೆ ತಳರಂ ನಗೆಗಣ್ಣುಗುಳ್ವಂತೆ ನೆಯ್ದಿಲಂ ॥ 207 ॥

ಚ ॥ ಉದಯಿಪುದುಂ ತ್ರಿಲೋಕತಿಲಕಂ ಗೃಹದೇವತೆಯರ್ ಪ್ರಸನ್ನವೇ
ಷದಿನೊಸೆದಾಡುವಂತೆ ವುಣಿಭಿತ್ತಿಗಳಂ ವುಣಿಕುಟ್ಟುವುಂಗಳಂ ।
ಪುದಿದು ವುನಕ್ಕೆ ಸಂತನವುನಿತ್ತುವು ನೃತ್ಯರಸಾಮೃತಪ್ರವಾ
ಹದೊಳವಗಾಹವಿರ್ದ್ದ ಗಣಿಕಾಪ್ರಚಯಪ್ರತಿಬಿಂಬಲಕ್ಷ್ಮಗಳ್ ॥ 208 ॥

ವ ॥ ಆಪ್ರಸ್ತಾವದೊಳ್ ದಶರಥವುಹೀನಾಥಂ ಸುತವುಖನಿರೀಕ್ಷಣಭರದಿಂ ಪಾರಿ
ಜಾತಂ ಕೋರಕಿತವಾದಂತೆ ಪುಳಕಿತಶರೀರನಾಗಿ ॥

ಮ ॥ ಜಿನಪೂಜೋತ್ಸವಮಂ ಸುರೇಂದ್ರನಳವಲ್ತೆಂಬನ್ನೆಗಂ ಮಾಡಿ ಬೇ
ಳ್ಪನಿತಂ ಬೇಳ್ಪವರ್ಗಿತ್ತು ಕಳ್ಪುಕುಜವಂ ಕೀಳ್ಮಾಡಿ ಸನ್ಮಾನಭೂ ।
ಜನರಂ ಸಜ್ಜನರಂ ವಿಚಿತ್ರವಸನಸ್ರಗ್ಭೂಷಣಾಲೇಪದಿಂ
ಜನಪಂ ವುನ್ನತಿಮಾಡಿ ತತ್ತನಯಜನ್ಮೋತ್ಸಹವಂ ಮಾಡಿದಂ ॥ 209 ॥

ಚ ॥ ದಿವಿಜಕುಜಂಗಳಾರವೆಗಳಾದುವು! ಸಿದ್ಧರಸಂ ತಟೂಕಮಾ
ದುವು! ಸುರಧೇನು ಪಿಂಡಳಿಯದೊಂದೆಡೆಯೊಳ್ನೆರೆದಿರ್ದ್ದನೆಂಬಿನಂ ।
ಭುವನಜನಕ್ಕೆ ಬಾಂಧವಜನಕ್ಕಖಿಳಾರ್ತ್ಥಿಜನಕ್ಕೆ ಹರ್ಷದಿಂ
ದವರಿವರೆನ್ನದಿತ್ತು ಮೆಱೆದಂ ಜನಪಂ ಸುತಜಾತಕರ್ಮಮಂ ॥ 210 ॥

ವ ॥ ಅಂತು ಜಾತಕನೋತ್ಸವಮಂ ಮಾಡಿ ದಶಮದಿನದೊಳ್ ಪದ್ಮಾಲಂಕೃತ ವಿಶಾಲವಕ್ಷಸ್ಥಳನಪ್ಪುದಱಿಂ ಪದ್ಮನುಂ ಸಕಲಶುಭಲಕ್ಷಣಾಭಿರಾಮನಪ್ಪುದಱಿಂ ರಾಮಚಂದ್ರನುಮೆಂದಿವ್ವೊದಲಾಗೆ ಪಲವುಮನ್ವರ್ಥನಾಮಂಗಳನಿಟ್ಟು ಕತಿಪಯದಿನಂಗಳೊಳ್ ॥

ಶ್ರೀರಾಮನ ಬಾಲಕ್ರೀಡಾವರ್ಣನಂ

ಈಂ ॥ ರವಿಕಿರಣಂ ಸೋಂಕದೆ ಹಾ
ಸವಿಳಾಸಂಬಡೆದ ಕಮಳವಂ ನೆನೆಯಿಸುಗುಂ ।
ನೆವಮಿಲ್ಲದೆ ನಗೆಯಿಂ ದೊ
ಪ್ಪುವಾಸ್ಯವುತ್ತಾನಶಯ್ಯೆಯೊಳ್ಬಾಲಕನಾ ॥ 211 ॥

ನಿರಪೇಕ್ಷಕಮೆನಿಸಿಯುಮೇಂ
ಪರಿದತ್ತಲಿ ಪರಿವ ಸುತನ ಕಣ್ಬೊಳಪಿಂದಂ ।
ತೆರೆ ವಸಗಿದುದರಸಿಯ ಮೋ
ಹರಸಂ ಚಂದ್ರಿಕೆಯಿನವೃತಜಲರಾಶಿಯವೋಲ್ ॥ 212 ॥

ಹರಿನೀಳೋಪಳವಿರಚಿತ
ಮುರಳೆಲೆ ಬಾಲಕನ ನಿಟಿಲದೊಳ್ ನಯನವನೋ ।
ಹರಮಾದುದರ್ದ್ಧಚಂದ್ರೋ
ದರದೊಳ್ ಕಣ್ಗೊಳಿಸ ತೋರ್ಪ್ಪ ಕರ್ಪೆಂಬಿನೆಗಂ ॥ 213 ॥

ಅರುಣಮಣಿ ಕರ್ಣಭೂಷಣ
ಮುರೀಚಿ ಪಸರಿಸುವ ರಾವುಚಂದ್ರಶರೀರಂ ।
ಪರಿಭವಿಸಿದುದೆಳವಿಸಿಲಾ
ವರಿಸಿದ ಕಮನೀಯಪುಂಡರೀಕಶ್ರೀಯಂ ॥ 214 ॥

ಅಗಸಿಯು ವನದೊಳ್ ಕೆಂಜೆಡೆ
ದೊರೆಕೊಳಸುವುದುಚಿತವೊಡನೆ ಕಜ್ಜಲರುಚಿಯೊಳ್ ।
ಪೊರೆದ ನಯನೋತ್ಪಲಂಗಳ್
ದೊರೆಕೊಂಬುದು ಚಿತ್ರವುಲ್ಲಿ ರಾಗೋತ್ಸವಮಂ ॥ 215 ॥

ಧಾತ್ರಿಯೊಳನ್ಯರ ತೇಜೋ
ಮಾತ್ರವನಾಂ ಸಹಿಸೆನೆಂಬ ತೆಱದಿಂ ಪೊಯ್ಯ ।
ಲ್ದಾತ್ರಿಯು ಕಯ್ಯಿಂ ನಿವಿವಂ
ಕ್ಷತ್ರಶಿಖಾಮಣಿಮಣಿಪ್ರದೀಪಾಂಕುರಮಂ ॥ 216 ॥

ಕಿವಿಗಿನಿದೆನಿಪ್ಪ ವೀಣಾ
ರವದೊಳನಾದರವನುಂಟುಮಾಡಿತ್ತು ತನೂ ।
ಭವನ ತಳರ್ನ್ನಡೆಯೊಳ್ ಪೊ
ಣ್ಮವ ಮೃದುಪದಕನಕಕಿಂಕಿಣೀರ್ಝಣರ್ಝಣಿತಂ ॥ 217 ॥

ಶ್ರವಣಕ್ಕರ್ಥವ್ಯಕ್ತಿಯು
ನವಟಯಿಸದೆ ನೆಗಳ್ವ ವಕ್ಯವಮಂತಾಕ್ಷರದಂ ।
ತೆವೊಲೆಲ್ಲರುಮಂ ಸೋಲಿಸಿ
ದುವು ತೊದಳೊಳ್ಪುದಿದ ರಾವುಚಂದ್ರನ ನುಡಿಗಳ್ ॥ 218 ॥

ತಿಳಗೊಳದೊಳಗೆಡೆಯಾಡುವ
ಕಳಹಂಸನ ಬಾಲಕೇಳಿ ಪುದುವೆನೆ ಮಧುಪಾ ।
ವಳನೇತ್ರಂ ಧವಳಾಂಗಂ
ಪಳುಕಿನ ಕುಟ್ಟಿಮದ ಮೇಲೆ ದಟ್ಟಡಿಯಿಟ್ಟಂ ॥ 219 ॥

ನಡೆಗಲ್ವಂದುಂ ಬಿಣ್ಪೆಂ
ಕೊಡೆನೆಗೆದಪುದರ್ವ್ವಿಯೆಂದು ವಾಸುಗಿ ಪಲವುಂ ।
ಪೆಡೆಯಂ ಶಿಶು ನಡೆವೆಡೆಯೊಳ್
ಪಡೆದಾಂತು ಸಹಸ್ರಫಣನೆನಲ್ ಪೆಸರ್ವಡೆದಂ ॥ 220 ॥

ವಣಿಯೇಱಂ ಚೆಂಬೊನ್ನುಡೆ
ವಣಿಯಂಲಿ ಗೆಲೆ ಗೆಲ್ದನಂಗರುಚಿಯಿಂ ದೈರಾ ।
ವಣಮಂ ಕುಮಾರಚೂಡಾ
ಮಣಿ ಲಾಲಾಜಲದೊಳಂ ಚತುರ್ದ್ದಂತದೊಳಂ ॥ 221 ॥

ಅಮೃತಾಂಶು ಪೆಜ್ಜೆ ಪೆಜ್ಜೆವ
ಸಮುದ್ರಮಿಂತಂತೆ ರಾವುಚಂದ್ರಂ ದಿವಸ ।
ಕ್ರಮದಿನಭಿವೃದ್ಧಿವೆತ್ತಾ
ಕ್ರಮಿಸಿದನತಿಮುಗ್ಧಭಾವವಂ ಶೈಶವಮಂ ॥ 222 ॥

ವ ॥ ಅಂತು ರಾವುಚಂದ್ರನಾದಿತ್ಯನಂತೆ ನಿತ್ಯೋದಯಮನಪ್ಪುಕೆಯ್ದುದುಂ ॥

ಕಂ ॥ ಬಾಲತ್ವದೊಳಮುದಾತ್ತಗು
ಣಾಲಯನೆನಿಸಿದ ತನೂಜಮುಖಚಂದ್ರನನಂ ।
ಲೀಲೆಯಿನೀಕ್ಷಿಸಿ ದಶರಥ
ನೋಲಾಡಿದನಧಿಕರಾಗರಸವಾರಿಧಿಯೊಳ್ ॥ 223 ॥

ವ ॥ ಅಂತು ಸಂತೋಷದ ಪರಮಪದವನೆಯ್ದಿರ್ಪುದುಮಾವು ಹೀಗಲ್ಲಭನ ನೋಹವಲ್ಲರಿಗಳೇ ಪೊತುವೆಂಬಂತಿತರಪತ್ನಿಯರು ಪುಷ್ಪವತಿಯುದಾಗಿ ನಾಲ್ಕುನೀರಮಿಂದು ಬೆಳ್ಸನದನಂ ಪೊಸದೇಸಿನಿಳಾಸಂಬಡೆಯೆ ನೂಳ್ಗೆವಂದು ಕುಭಸ್ವಪ್ನದರ್ಶನಾನಂತರಂ ಕೆಲವುದಿವಸಮಿರ್ಪಿನಂ ॥

ಕಂ ॥ ಕುಲದೊಡವಿಂಗೀಸತಿಯರೆ
ಕುಲದೇವತೆಯರ್ಕ್ಕಳೆಂಬ ಬಗೆ ಪುಟ್ಟುವಿನಂ ।
ತಲೆದೋಱೆ ಗರ್ಭ್ಭಚಿಹ್ನಂ
ತಲೆದೋಱುದುದವನಿಪತಿಗೆ ರಾಗೋದ್ರೇಕಂ ॥ 224 ॥

ವ ॥ ಅಂತವರ್ಗೆ ಪುಂಸವನಸೀಮಂತೋನ್ನಯನನಕಲಮಂಗಳಮಂ ದಶರಥನಾಥಂ ಮಾಳ್ಪುದುಮನುಕ್ರಮದಿಂ ಶುಭದಿನಮುಹೂರ್ತ್ತದೊಳ್ ಸುಮಿತ್ರೆ ಲಕ್ಷ್ಮಣನಂ ಕೈಕೆ ಭರತನಂ ಸುಪ್ರಭೆ ಶತ್ರುಘ್ನನಂ ಪಡೆವುದುಂ ॥

ಕಂ ॥ ಪಸರಿಸೆ ಪೂವಲಿಗಳ್ ಬಾ
ಜಿಸೆ ಬದ್ದವಣಂಗಳೊಡನೆ ವಿಳರಿಸೆ ಗುಡಿಗಳ್ ।
ದೆಸೆಬಿದ್ದವಾಡೆ ತರುಣಿಯ
ರೊಸಗೆಯನೆಯೊಸಗೆಯಾದುದಂದರಮನೆಯೊಳ್ ॥ 225 ॥

ವ ॥ ಆಸವಮಯದೊಳ್ ದಶರಥಂ ಸುತವಿಮುಖದರ್ಶನೋತ್ಸುಕಂ ಕತಿಪಯಾಪ್ತ ಪರಿಜನಪರಿವೃತಂ ಸುಮಿತ್ರಾದೇವಿಯ ಸೂತಿಕಾಸದನಮಂ ಪೊಕ್ಕು ॥

ಮ ॥ ಸಿರಿ ಸಿಂಹಕ್ಕಭಿಷೇಕಮಂ ಪಡೆವುದಂ ರತ್ನಾಕರಂ ಸುತ್ತಿದು
ರ್ವ್ವರೆಯಂ ಭೂಸುರಚಕ್ರಮಂ ಕನಸಿನೊಳ್ಕಾಂಬೆಟ್ಟುವೇಱುದ್ದುದಂ ।
ಹರಿಣೀನೇತ್ರೆ ಸುಮಿತ್ರೆ ಕಂಡುಪಱುನಾಳ್ಗುಂ ಬೆಳ್ಳಿಬೆಟ್ಟಂಬರಂ
ಭರತಕ್ಷ್ಮೇತ್ರಮನೆಂದು ಕಣ್ತಣಿವಿನಂ ಸೌಮಿತ್ರಿಯಂ ನೋಡಿದಂ ॥ 226 ॥

ಕಂ ॥ ಬಾಲಾರ್ಕಮರೀಚಿಯಿನ
ಲ್ಲಾಲಕನ ಶರೀರಕಾಂತಿ ಪಸರಿಸೆ ಹರ್ಷೋ ।
ನ್ಮೇಲನದಿಂ ದಶರಥನರ
ಪಾಲಕಮುಖಕಮಳವೀಂ ವನಂಗೊಳಿಸಿದುದೋ ॥ 227 ॥

ವ ॥ ಅನಂತರಂ ಭರತಶತ್ರುಘ್ನ ಜನ್ಮೋತ್ಸವಮಂಗಳಮನಾಚರಿಸಿ ।

ಮ ॥ ಮನುವಂಶಾಂಬರಭಾನು ಕಲ್ಪತರು ಕೈವಂದಂತೆ ರೈವೃಷ್ಟಿ ತೊ
ಟ್ಟನೆ ಕೋದಂತೆ ಸುರೇಂದ್ರಧೇನು ಕಱೆದಂತಾರ್ತ್ತಿತ್ತು ಕೂರ್ತ್ತಿತ್ತು ಸಂ ।
ಮನದಿಂದಿತ್ತು ಸುಹೃಜ್ಜನಂ ಪರಿಜನಂ ವಿದ್ವಜ್ಜನಂ ಜೀಯೆನ
ಲ್ತನಯಮ್ಮರ್ಮವರ ಜಾತಕರ್ಮಮುಮನತ್ಯತ್ಸಹದಿಂ ಮಾಡಿದಂ ॥ 228 ॥

ವ ॥ ಅಂತು ದಶರಥಮಹೀನಾಥಂ ಸಂತಾನಸವೃದ್ಧಿಯಿನತಿಪ್ರವರ್ದ್ಧಮಾನಸುಖಾಧೀನಮಾನಸನಾಗಿರ್ಪುದಂ ॥

ಕಂ ॥ ಅವನೀವಲ್ಲಭತನಯ
ರ್ನವಕಶಿಕಲೆಯಂತೆ ಪಡೆದು ನಯನೋತ್ಸವಮಂ ।
ದಿವಸಕ್ರಮದಿಂದಂ ನೃ
ದ್ಧಿವಡೆದರಮರಾವನೀಜದಗೆಯೆಂಬಿನೆಗಂ ॥ 229 ॥

ನನುನಗೆ ಕವುಳದ ಸಿರಿಯಂ
ನನುನಗೆ ಜನನಿಯರ ಲೋಚನಭ್ರಮರಂಗಳ್ ।
ಮುಸುಱಿದುವು ಮೋಹವಲ್ಲರಿ
ಪಸರಿಸಿ ಪರ್ವಿದುದು ಸುತರ ಲಾಲಾಜಲದಿಂ ॥ 230 ॥

ತಳರಡಿಯಿಡುವತ್ತಲೆ ಪರಿ
ದೆಳಸುವ ಜನನಿಯರ ದಿಟ್ಟಿ ಮಣಿಕುಟ್ಟಿಮಮಂ ।
ಬಳಸೆ ಪೊಸತಲರ್ದ ನೆಯ್ದಿ
ಲ್ಗೊಳದೊಳಗಣ ರಾಜಹಂಸನಂ ನೆನೆಯಿಸಿದರ್ ॥ 231 ॥

ಚ ॥ ಅರಳೆಲೆ ಮತ್ತಿಗಾಯ್ವಲಿಯುಗುರ್ನವರತ್ನದ ಕಂಕಣಂಗಳುಂ
ಗುರವುಡೆನೂಲ ಪೊನ್ನವುಣಿ ಕಿಂಕಿಣಿ ರನ್ನದ ಘಂಟೆ ನೂಪುರಂ ।
ವರವಲಯಂಗಳೆಂಬ ಪಲವಂದದ ಚಂದದ ಬಾಳದಂದವೊ
ಪ್ಪಿರೆ ಪಿತೃಮಾತೃಗಳ್ಗೆ ಪಡೆದರ್ತ್ತನಯರ್ನಯನೋತ್ಸವಂಗಳಂ ॥ 232 ॥

ವ ॥ ಅಂತು ದಶರಥಮಹೀನಾಥನ ಸಾವಭ್ರಾಜ್ಯಶ್ರೀಯ ಮಂಡಯಾಭರಣದಂತೆ ಸೊಗಯಿಸುವ ಸುತರ ಬಾಲಕೇಳೀದರ್ಶನದಿಂ ಸುಮಿತ್ರೆಯ ನಯನಪುತ್ರಿಕೆ ನಲಿದು ನತ್ತಿರ್ಸೆಯುಂ ಕೈಕೆಯ ತನುಲತಿಕೆ ಪುಳಕಕಳಿಕೆಯನಪ್ಪುಕೆಯ್ಯುಯುಂ ಸುಪ್ರಭೆಯ ಮನಃಪ್ರಮೋದಮುದಿತೋದಿತವಾಗೆಯುಂ ರಾಮಲಕ್ಷ್ಮಣಭರತಕತ್ರುಘ್ನರನುಕ್ರಮದಿಂ ಶೈಕವಮನತಿಕ್ರಮಿಸೆ ॥

ಕಂ ॥ ವಸುಮತಿವೆಸರನ್ವರ್ತ್ಥಂ
ವಸುಧೆಗೆನಲ್ಕಱಿದು ಪೊನ್ನ ಮುಳೆಯಂ ದಾನ ।
ವ್ಯಸನಿ ದಶರಥನದೇಂ ಪೊಸ
ಯಿಸಿದನೊ! ಚೌಲೋಪನಯನಮಹಿಮೋತ್ಸವಮಂ ॥ 233 ॥

ಪರಮಪ್ರೇಮಂ ಜನ್ಮಾಂ
ತರದಿಂದೊಡವಂದುದೆನಿಸಿ ಗೆಡೆಪಜ್ಜಪ್ರೋಲ
ಚ್ಚರಿಯಾಗೆ ರಾಮಲಕ್ಷ್ಮ್ಮಣ
ಭರರೊಳವಾದತ್ತು ಭರತಶತ್ರುಘ್ನರೊಳಂ ॥ 234 ॥

ಅವುಳ್ಗಳವರೆಂಬಿನಂ ತವು
ಗವುಳ್ವಿಸರವುರ್ದೆಸೆಯೆ ತಾಯು ತಂದೆಯು ಚಿತ್ತ ।
ಕ್ಕವುರ್ದಿನ ವುಳೆಯುಂ ಕಳುೆದ
ರ್ಕುವುರಕವುರ್ತಿರ್ತಿಗೊಂಡ ಪುರುಷಾರ್ತ್ಥದವೋಲ್ ॥ 235 ॥

ವು ॥ ಸುರಧೇನುಸ್ತನಭಾರದಂತೆ ಪುರುಷಾರ್ತ್ಥಂ ವುೂರ್ತಿಗೊಂಡಂತೆ ನಾ
ಲ್ವರುವೊಂದುಾಗಿರೆ ನಂದನರ್ದ್ದಕರಥಂ ನಾಲ್ಕುಂಸವುುದ್ರಂಬರಂ ।
ಧರೆಯುಂ ಕೂಡೆ ನಿವಿುಚ್ಚಿರ್ ನಾಲ್ದಿಸೆಯೊಳಂ ನಾಲ್ಕುಂಜಯುಸ್ತಂಭವುಂ
ಚರಿತಾರ್ತ್ಥನ್ನಿಲಿಸಲ್ ಸವುರ್ತ್ಥರಿವರೆಂದುತ್ಸಹವುಂ ತಾಳ್ದಿದಂ ॥ 236 ॥

ವ ॥ ವುತ್ತಂ ನಿಜತನೂಭವರ ನಿರ್ಜ್ಜಿತ ವುನೋಜಾಕಾರವುುವುಂ ವುುಡಿಳವು
ಸೂರಿಕಾದಿಕುಭವ್ಯಂಜನರಂಜಿತಪ್ರಕಸ್ತಾವಯವಂಗಳುವುಂ ಹಲಕಾಲಿಕಕಂಖಚಕ್ರ
ಲಾಂಛನಂಗಳಪ್ಪ ಕರಚರಣಂಗಳುವುಂ ನೋಡಿ ಸಕಲಸಾವ್ರಾಜ್ಯಶ್ರೀಯನಪ್ಪುಕೆ
ಯ್ದುಂತೆ ಸಂತೋಷದಂತವುನೆಯ್ದಿ ॥

ಕಂ ॥ ಸವಿವವಸರವಿುದು ವಿದ್ಯಾ
ಯುವತಿಯ ವದನಾರವಿಂದವುಧುವನೆನುತ್ತುಂ ।
ವಿವಿಧಕಳಾಚಾರ್ಯರನಾ
ರ್ಯವರ್ಯ್ಯರಂ ಗುರುನಿಯೋಗದೊಳ್ ಯೋಜಿಸಿದಂ ॥ 237 ॥

ಕುಭದಿನವುುಹೂರ್ತದೊಳ್ ಪು
ಣ್ಯಭಾಗಿಗಳ್ಕಲಿಸೆ ಗುರುಗಳೊಡವಂದುದೊ! ಪೂ ।
ರ್ವ್ವಭವೋಪಾರ್ಜಿತವಿದ್ಯಾ
ವಿಭವವೆನಲ್ಸಕಲಕಾಸ್ತ್ರಪರಿಣತರಾದರ್ ॥ 238 ॥

ರೋವುಾಂಚವುನೊಡರಿಸಿಯುಂ
ರಾವುನ ಲಕ್ಷ್ಮಣನ ಭರತಶತ್ರುಘ್ನರ ವಿ ।
ದ್ಯಾವುಹಿವೆಂ ಚತುಷ್ಪಟ್ಟಿಕ
ಲಾವುಹಿತರ ವುನದೊಳೀರ್ವ್ಯೆಯುಂ ಪುಟ್ಟಿಸುಗುಂ ॥ 239 ॥

ವು ॥ ಸೊಡರಂ ಪೊತ್ತಿಸಿಕೊಂಡು ಪೋಗೆ ಸೊಡರೊಳ್ ತೇಜಂ ಗುಣಾಧಿಕ್ಯದಿಂ
ಕಡುಗೊರ್ವ್ವಂ ಪಡೆವಂತೆ ತಪ್ಪ ವಿಕದಪ್ರಜ್ಞಾಗುಣೋತ್ಕರ್ಷದಿಂ ।
ಪಡಿವಾತೇನಱುವತ್ತುನಾಲ್ಕುಕಳೆಯುಂ ತತ್ಕೋವಿದರ್ವ್ವೆಚ್ಚಿ ನೂ
ರ್ವ್ವುಡಿ ವೇಲಾದುವು ರಾವುಲಕ್ಷ್ಮಣರಿನೇಂ ನಷ್ಟೇವೆ ಸಾವುಾನ್ಯವೇ ॥ 240 ॥

ಚ ॥ ಕಲಿತನವುಂ ಮಹಾಬಲವುಮುಳ್ಳನ ಕಯ್ದುವೆ ಕಯ್ದು! ಪಂದೆ ದು
ರ್ವ್ಯಲನೆನಿಸಿರ್ದ್ದವಂ ಪಿಡಿದ ಕೈದುವದೇತಱ ಕೈದುವೆಂಬಿನಂ ।
ಕಲಿಸಿದ ಭೂರ್ಗವಾತ್ಮಜರ ನೋಡಿದ ತತ್ಕ್ಷಣದಿಂ ಮುಯ್ಯನೆತ್ತಿಯಂ
ಗೆಲೆ ಸಲೆ ರಾವುಲಕ್ಷ್ಮಣರದೇಂ ನೆಱೆ ಕಲ್ತರೊ! ಕೈದುವಿಲ್ಲವುಂ ॥ 241 ॥

ವ ॥ ಮಿಗೆವಂದೆಲ್ಲಱ ಬಿಲ್ಲ ಬಿನ್ನಣದ ಬಿಣ್ಪಂ "ರಾವು ಲೇಸೆಂ"ಬಿನಂ
ಮಿಗೆ ತನ್ನೇನುಪಮಾನನಾದುದೆನೆ ರಾವುಂ ಕಲ್ತ ಬಿಲ್ವಿದ್ಯೆಯಂ ।
ಪೊಗಳಲ್ಪೀಳ್ವುದೆ! ರಾವುನೊಳ್ ಸದೃಶನೆಂಬನ್ನಂ ಧನುರ್ವಿದ್ಯೆಯಿಂ
ಜಗವುಂ ಮೆಚ್ಚಿಸಿ ಚಾಪಚಾಪಲತೆಯುಂ ಕೊಂಡಾಡಿದಂ ಲಕ್ಷ್ಮಣಂ ॥ 242 ॥

ವ ॥ ಅಂತವರ್ ಸಕಲಶಸ್ತ್ರಾಸ್ತ್ರವಿದ್ಯಾವಿಶಾರದರಾಗಿ ಕುಮಾರರ್ದ್ದಶಾತಿಕಯವನಪ್ಪು
ಕೆಯ್ವುದುಂ ॥

ಚ ॥ ಹಿಮಕರಬಿಂಬದಿಂ ಕಡೆದುದೋ! ಪಳುಕಿಂ ಪಡಿದತ್ತೊ! ಪೂಗಳಿಂ
ನವಿದುದೊ! ಚಂದ್ರಕಾಂತಮಣಿಯಿಂ ಪಸನಕೆಯ್ದುದೊ! ವ್ಯಕ್ತಿಕಂಗಳಿಂ
ನವನಿಸಿದತ್ತೊ! ಕೋವುಳವ್ಯಾಳಕೆಯಿಂ ಪರಿಪೂರ್ಣವಾಯ್ತೊ! ಸೇ
ಳಮಿದೆನೆ ರಂಜಿಸಿತ್ತು ರಘುರಾವುನ ಪಾಂಡುರದೇಹವುಂಡಳಂ ॥ 243 ॥

ಕಂ ॥ ಉನ್ನತಲಲಾಟಪಟ್ಟಂ
ವುನ್ನಿನದಷ್ಟಮಿಯ ಚಂದ್ರನಂ ನಗೆಗಣ್ಗಳ್ ।
ವುನ್ನುರೆವಿಡಿದುವು ಕಮಳವು
ನಿನ್ನೇವಣ್ಣಿಪುದೊ! ರಾವುನಭಿರಾವುತೆಯಂ ॥ 244 ॥

ಚ ॥ ಡಿರೆ ಕರೆಗಣ್ಮಿದಿಂಗಡಲ ಗಾಡಿಯನೇಳಿಸಿ ತೋರವುತ್ತಿನ್ನೆ
ನರದ ವುರೀಚಿಯಿಂ ಸಿರಿಯ ತಾಯ್ಮನೆ ರಾವುನ ಪೇರುರಂ ವುನೋ ।
ಹರನೆನಿಸಿತ್ತು ವಾರವನಿತಾಜನವಶ್ಯವಿಧಾನವೇದಿಯೊಳ್
ದೊರೆಯೆನಿಸಿತ್ತು ಧೈರ್ಯ್ಯಗುಣರೋಹಣಶೈಳಶಿಲಾತಳೋಪಮಂ ॥ 245 ॥

ಕಂ ॥ ಏಳಿಸಿದುವು ಲಕ್ಷ್ಮಣನ ವಿ
ಶಾಳವಿಲೋಚನಯುಗಂಗಳಂಗಪ್ರಭೆಯಿಂ ।
ವೇಳಿಸಿ ನಗೆಯಂ ಪಾಳಿಸಿ
ಕಾಳಂದಿಯೊಳಿಲರ್ದ ಪುಂಡರೀಕಶ್ರೀಯಂ ॥ 246 ॥

ಹರಿನೀಳರತ್ನವುಂ ಕಂ
ಡರಿಸಿದ ಕಣ್ದೆರವಿಗೆಯ್ದೆ ಜೀವಂಬೊಯ್ದುಂ ।
ತಿರೆ ತೋರ್ಪ ಗಂಡಗಾಡಿಗೆ
ಪುರುಷೋತ್ತವುನೆಂದು ಕೊಂಡುಕೊನೆದುದು ಲೋಕಂ ॥ 247 ॥

ಚ ॥ ಮನಮುನಲಚ್ಚಿರ್ದತ್ತು ಪುರುಷೋತ್ತಮನುಚ್ಚಲಲಾಟರೇಖೆ ಕೃ
ಷ್ಣನ ಕುರುಳೋಳ ವಿಷ್ಣುವಿನ ಪೇರುರಮಾಯತಿವೆತ್ತ ವಾರಿಜಾ ।
ಕ್ಷ್ಮನ ಚಪಲೇಕ್ಷಣಂ ಪುರುಷಸಿಂಹನ ಸಿಂಹಕಟೀತಟಂ ಜನಾ
ರ್ದನನ ಭುಜಂಗಭೀಮಭುಜಮುಂ ಜನಾಭನ ನಾಭಿಮಂಡಲಂ ॥ 248 ॥

ಪೊಳೆವ ನಖಾಂಶುಮಂಡಲಫಣಾಮಣಿ ಪಂಚಫಣಾಸಿತಾಹಿಗಳ್
ಬಳೆದಪುವೀಂಟಲೆಂದು ದಶಕಂಠನ ಬಲ್ಸಿರಮಂ ತದೀಯನಿ ।
ರ್ಮಳತರಕೀರ್ತಿ ದುರ್ಗ್ಗರಸಖಾನವನೆಂಬಿನಗಂ ಪೊದಳ್ದ ಕೋ
ಮಳತೆಯನಾಳ್ದ ನೀಳ್ದ ಬಗೆಗೊಂಡುವು ಕೃಷ್ಣನ ಬಾಹುಶಾಖೆಗಳ್ ॥249॥

ಉ ॥ ಹಾರಮುರೀಚಿಯುಂ ಮುರಕತಚ್ಛವಿಯುಂ ಗೆಲೆ ದೇಹದೀಪ್ತಿ ನೀ
ಹಾರಮುರೀಚಿಯುಂ ಕುನುಮುಸಾಯಕನುಂ ಗೆಲೆ ಗಂಡಗಾಡಿ ಕಂ ।
ಠೀರವನಾದಮುಂ ಜಲಧರಧ್ವನಿಯುಂ ಗೆಲೆ ಬೇಱೊಬ್ಬೇಱೊ ಗಂ
ಭೀರರವಂ ಬಲಾಚ್ಯುತರದೇನೆಸೆದಿರ್ದರೊ! ರಾಮಲಕ್ಷ್ಮಣರ್ ॥ 250 ॥

ಮ ॥ ರಣದೊಳ್ ರಾವಣನಂ ಜವಂಗೆ ಪೊಸತಿಕ್ಕಲ್ತಾರಶೈಲಕ್ಕೆ ತೆಂ
ಕಣಮುಂ ಕಂಕಣದಂತೆ ಕೈಗೆ ವರಿಸಲ್ಬಿಚಕ್ರಮುಂ ಚಕ್ರಮುಂ ।
ರಣದೊಳ್ ಸಾಧಿಸಲೆಂದು ಪುಟ್ಟಿದವರೇಂ ಸಾಮಾನ್ಯರೇ! ರಾಮಲ
ಕ್ಷ್ಮಣರಪ್ರತಿಕೃತವಿಕ್ರಮರ್ ತ್ರಿಭುವನಪ್ರಖ್ಯಾತಕೀರ್ತಿಧ್ವಜರ್ ॥ 251 ॥

ವ ॥ ಅಂತು ರಾಮಲಕ್ಷ್ಮಣಭರತಶತ್ರುಘ್ನರೆಂಬ ನಾಲ್ವರ್ತನೂಭವರುಂ ನಾಲ್ಕುಂ ರತ್ನಶಿಲಾಸ್ತಂಭಂಗಳಂತೆ ರಘುಕುಲಸಮುದ್ಧರಣಸಮರ್ಥರಾಗೆ ದಶರಥಂ ಪರಿಪೂರ್ಣಮನೋರಥನಾಗಿ ॥

ಮಾ.ಸ್ರ॥ ಧನಮುಂ ಮುಯ್ಯಾದೆಯಿಂದಾರ್ಜಿಸಿ ವಿಷಯಸುಖಾಸ್ವಾದನಂ ದೋಷನಿಷ್ಪಾ
ದನಮುಲ್ಲೆಂಬಂತೆ ಚಿತ್ತಕ್ಕೊದವಿಸೆ ಪದಪಂ ಭಾರತೀಹಂಸೆ ವಶ್ಯಾ ।
ಭ್ಜನಿಯೊಳ್ ನಾನಾವಿಧಂ ನರ್ತಿಸೆ ಹಿಮಕರಭಾಸ್ವದ್ಯಶೋವಲ್ಲಿ ಗಾಳಂ
ಬನಮುಂಭೋರಾಶಿವೇಳಾವನಮುಂ ನೆಗಳ್ದಂ ಭಾರತೀಕರ್ಣಪೂರಂ ॥ 252 ॥

ಗದ್ಯ ॥ ಇದು ಪರಮಜಿನಸಮಯಕುಮುದಿನೀಕರಚ್ಛಂದ್ರಬಾಲಚಂದ್ರಮುನೀಂದ್ರ
ಚರಣನಖಕಿರಣಚಂದ್ರಿಕಾಚಕೋರಂ ಭಾರತೀಕರ್ಣಪೂರಂ ಶ್ರೀಮದಭಿನವ
ಪಂಪವಿರಚಿತಮಪ್ಪ ರಾಮಚಂದ್ರಚರಿತಪುರಾಣದೊಳ್ ದಶರಥಪುತ್ರೋ
ದಯವರ್ಣನಂ.

ಕಾವ್ಯಾವಲೋಕನಂ.

ಎರಡನೆಯ ನಾಗವರ್ಮಂ—ಕ್ರಿ. ಶ. ಸು. 1141.

ಕಾವ್ಯಮುಲವ್ಯಾಪೃತ್ಯಧಿಕರಣಂ.

ಪದ ಪದಾರ್ಥ ಸಂಧಿದೋಷ ವಿನಿಶ್ಚಯಪ್ರಕರಣಂ.

ವೃ ॥ ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇೞ್ವುಡಂತಾ ।
ಪ್ರತಿಭಾನಂ ಶಕ್ತಿ ಲೋಕಾಗವುಸಕಲಕಲಾವೇದನಂ ವಿದ್ಯೆ ಶಾಸ್ತ್ರ
ನ್ವಿತನಪ್ಪಂ ವೃದ್ಧನಾಲಸ್ಯವುನುೞಿದೆನಪುದ್ಯೋಗವುಭ್ಯಾಸಕರ್ಮಂ ॥ 1 ॥

ಕಂ ॥ ಶ್ರುತವಾರಿನಿಧಿಯ ಪಾರವು
ನತಿಪ್ರಬಂಧಾಭಿಯೋಗರಾರೆಯ್ದೆ ದೊಡೇಂ ।
ಕೃತಪುಣ್ಯಂಗಲ್ಲದೆ ವಿ
ಶ್ರುತಕವಿತಾರತ್ನವುಲ್ಲಿ ಸಂಭವಿಸುಗುವೇ ॥ 2 ॥

ಮದಮಿಲ್ಲದಿಭಂ ವುಧುವಿ
ಲ್ಲದ ಕುನುವುಂ ಚಂದ್ರನಿಲ್ಲದರುಳಾಳ್ಪಿ ।
ಲ್ಲದ ನೃಪತಿ ಕವಿತೆಯಿಲ್ಲದ
ವಿದಗ್ಧತಾಗುಣವುದೇಂ ವುನಂಗೊಳಿಸುಗುವೇ ॥ 3 ॥

ಪರವುಪ್ರೀತಿನಿಮಿತ್ತಂ
ನಿರತಿಶಯುಯುಕೋನಿದಾನವುಪ್ಪುದಱಿನಿಹಂ ।
ಪರಮೆಂಬರಡರ್ಕ್ಕಂ ಬಂ
ಧುರಕಾವ್ಯನಿಬಂಧದಿಂ ಹಿತಂ ಪೆಱತುಂಟೇ ॥ 4 ॥

ಕೃತಿಸತಿಯು ವೆಯ್ಯೊಳ್ಳಿನಿ
ತು ತಾನದೊಂದಱಿಯೆ ದೋಷವೂಗೆ ತದಾವ ।
ರ್ಜಿತವುಪ್ಪ ಕೀರ್ತ್ತಿಯುಂ ನಿಂ
ದಿತವುಕ್ಕುಂ ದರ್ಪಣಾರ್ಪಿತಚ್ಛಾಯೆಯವೋಲ್ ॥ 5 ॥

ಅದಱಿಂದುಪೇಕ್ಷೆಗೆಯ್ಯದೆ
ನದಭಿಮತೋದಾತ್ತ ಕೀರ್ತಿಯಂ ಬಯಸುವನಂ ।
ಪದವಾಕ್ಯಾರ್ಥಂಗಳೊಳಿರಂ
ದದಂತು ಪಿಂಗಿಸುಗೆ ದೋಷಮುಂ ಕೃತಿಯಿಂದಂ ॥ 6 ॥

ಪ್ರಯೋಜನಸ್ಥಾಪನಂ ॥

ಸೂತ್ರಂ ॥ 97 ॥ ಇರೆ ಶಬ್ದಾರ್ಥಂಗಳ್ ತ
ತ್ಪರತೆಯಿನದು ಕಾವ್ಯಮೆದಱೊಳುಚಿತೈಕಾರ್ಥಂ ।
ತರವಾಚಿ ಶಬ್ದಮವಭಾ
ಸರೂಪವಾಹ್ಲಾದಕಾರಿಯುಪ್ಪುದದರ್ಥಂ ॥ 7 ॥

ಸೂತ್ರಂ ॥ 98 ॥ ಪ್ರಕರಣದಿಂ ಶಬ್ದಾಂತರ
ದ ಕೂಟದಿಂದಭಿನಯಂಗಳಿಂದಿಷ್ಟಾರ್ಥ ।
ಪ್ರಕಟನಮಕ್ಕುಮನೇಕ
ಪ್ರಕಾರಮರ್ಥಂ ಪದಕ್ಕೆ ಸಂಭವಿಸುವೊಡಂ ॥ 8 ॥

ಉದಾಹರಣೆ ॥

ಪ್ರಕರಣಕ್ಕೆ ॥

ಕಂ ॥ ಏನೇನುಂ ಮುನಿಜನರೆನ
ಗಾನತರಣಮಾಗದಿರ್ದರುಂಮದಮವರ್ಗಂ ।
ತೇನೇತಱೊಳಾಯ್ತು ದನಿನಿ
ಸಾನುಂ ಬೇಗದೊಳೆ ಕಳೆದು ತೋಱೆನೆ! ರಣದೊಳ್ ॥ 9 ॥

ಶಬ್ದಾಂತರಸಂಸರ್ಗಕ್ಕೆ ॥

ಕಂ ॥ ಹರಿ ಪೊಯ್ಯೆ ಬಿರಿದ ಮುದವ
ತ್ಕರಿಕುಂಭದಿನಗದೊಳೊಕ್ಕ ರಕ್ತಾರಕ್ತ ।
ಸ್ಫುರಿತನವಮುಕ್ತಿಕಂಗಳೆ
ನರೆ ಉಱೆ ವನಚರಿಯರೆರದ ಪಣ್ಗೆತ್ತಾಯ್ದರ್ ॥ 10 ॥

ಅಭಿನಯಕ್ಕೆ ॥

ಕಂ ॥ ಇನಿತೆ ನಡುವುಳ್ಳವಳ್ ಮೇ
ಣಿನಿವಿರಿಯವೆನಿಪ್ಪ ಕಣ್ಗಳಾಕೆ ಮುನಂಗೆ ।
ಟ್ಟಿನಿತು ದಿವಸಂಗಳಂ ತ
ನ್ನಿನಿಯನನಗಲ್ದಿಂ ಬಱೀಕ್ಕಮಿಂತಿಂತಾದಳ್ ॥ 11 ॥

ಸೂತ್ರಂ ॥ 99 ॥ ಅಸಮರ್ಥಮಪ್ರತೀತಂ
ವಿಸಂಧಿ ವಿಪರೀತಕಲ್ಪನಂ ಕಷ್ಟಂ ನೀ ।
ರಸನೆಂದು ದೋಷನಿವು ಸಮ
ನಿಸುಗುಂ ಪದದೊಳ್ ಪದಾಗಮಜ್ಞರ ಮತದಿಂ ॥ 12 ॥

ಸೂತ್ರಂ ॥ 100 ॥ ತೆಱಿದಿರೆ ತದ್ವಾಚಕತೆಯ
ನಟ್ಟಿಪಲ್ ನೆಱೆಯದುದೆ ಕೃತಿಯೊಳಸಮರ್ಥಪದಂ ।
ಪೆಱತೇಂ ಪ್ರತೀತಿ ಬಗೆಗೇ
ತಱೊಳಂ ತೋಱದುದದಪ್ರತೀತಂ ಗೂಢಂ ॥ 13 ॥

ಉದಾಹರಣೆ ॥

ಅಸಮರ್ಥಕ್ಕೆ ॥

ಕಂ ॥ ಉರಗಾಳಿ ನಂದನಾವಳಿ
ತರತರದಿಂದೆಱಗಿ ಜಳಭೃದಂತಿಕದೊಳ್ ಮೂ ।
ಣ್ಡಿರದೆ ಕುಡಿದುಮ್ಪುನೀರಂ
ಧರೆಗಿನಿದಂ ಕಱೆನ್ವುದಿಂತಿದೇಂ ವಿಸ್ಮಯಮೋ ॥ 14 ॥

ಅಪ್ರತೀತಕ್ಕೆ ॥

ಕಂ ॥ ಅಸಿತದ್ಯುತಿಯಸ್ಯಾಧ್ವದೊ
ಳಿಸೆವ ನವಾಬ್ಜಸ್ಮಶೋಭೆ ಮೇಚಕದೂಷ್ಯ ।
ಪ್ರಸರದ ಮೆಯ್ಯೊಳ್ ಪರ್ವಿರೆ
ಪಸರಿಸಿದ ಗುಣಂಗಳವನನೇಸೆಱಿಸದುವೋ ॥ 15 ॥

ಸೂತ್ರಂ ॥ 101 ॥ ಅವಿಹಿತಸಂಹಿತೆ ಮೇಣ್ ಸಂ
ಧಿವಿರೂಪಂ ಬಗೆಯೆ ತಾಂ ವಿಸಂಧಿಯೆನಿಕ್ಕುಂ ।
ಸ್ವವಿಕಲ್ಪಿತದೊಳಸಿಷ್ಟಾ
ರ್ಥವಾಗೆ ವಿಪರೀತಕಲ್ಪನಂ ತಾನಕ್ಕುಂ ॥ 16 ॥

ಉದಾಹರಣೆ ॥

ವಿಸಂಧಿಗೆ ॥

ಕಂ ॥ ಆಸೆಯ ಒಱೆ ಪೆಸದ ಪಟ್ಟಿಗೆ
ಮಿಸುಗುವ ಆರಂ ತೊಳಪ್ಪ ಕನ್ನವುರಂ ಚೆ ।
ಲ್ವೆಸೆದಿರೆ ಬಲವರ್ಪ ವಿಟರ್
ಕುಸುಮೇಷುವ ಮೇಳದವರ್ಗಳೆನಿಸಿದರದಱೊಳ್ ॥ 17 ॥

ವಿರೂಪಸಂಧಿಗೆ ॥

ಕಂ ॥ ಪಸುರಂ ಬಿಡದೆನಪ ಮುಳೀ
ಮನಗರ್ಗೆಂದುದಿತೋಡುರಾಜನಂ ನಯದಿಂ ಕ ।
ಲ್ಪಿಸಿ ಜಲಧಿ ನುಡಿವ ಮೂಲ್ಕೆಯಿ
ನೆಸೆದತ್ತಾಲೋಲಬಹಳಕಲ್ಲೋಲರವಂ ॥ 18 ॥

ವಿಪರೀತಕಲ್ಪನಕ್ಕೆ ॥

ಕಂ ॥ ಬಳವದರಿಭೂಪದಾವಾ
ನಳಂ ಕಳಂಗಾಧಿರಾಜ! ನಿನ್ನುಗ್ರಕರಾ ।
ವಳವಿಳಸಿತೋರುಧಾರಾ
ಜಳಶೀಕರದಿಂದವೆಯ್ದೆ ಮುಟ್ಟುಗೆ ಧುರದೊಳ್ ॥ 19 ॥

ಸೂತ್ರಂ ॥ 102 ॥ ಶ್ರುತಿವಿರಸಪದಕ್ಷೇಪ
ಸ್ಥಿತಿ ಕಷ್ಟಂ ಗ್ರಾಮ್ಯಶಬ್ದಸಂದರ್ಭಸವು ।
ನ್ವಿತಮುಮಸಭ್ಯಾರ್ಥಕೃತಿ
ಸ್ಕೃತಿಯುಂ ನೀರಸಮೆನಿಪ್ಪುದೆಕ್ಕುಂ ದೋಷಂ ॥ 20 ॥

ಉದಾಹರಣೆ ॥

ಕಷ್ಟಕ್ಕೆ ॥

ಕಂ ॥ ಇದಿರ್ವರ್ಷವೊಲಾಯ್ತು ಪವನ
ವಿದಳ[ತ್ತರ್ವಾರ್ಜಿ]ತೋಷ್ಣಪುಷ್ಪರಜಸ್ಸಂ ।
ಗದಿನೊದವಿ ಮಾರುತಂ ಭ್ರಾ
ಮ್ಯದತ್ಯುದಗ್ರಾಳಿಯುಂಕೃತೋಚ್ಚೈರ್ಧ್ವನಂ ॥ 21 ॥

ನೀರಸಕ್ಕೆ ॥

ಕಂ ॥ ಅಂಗನೆಯೊಳ್ ಕಳ್ದಿರ್ದುದ
ನಂಗಾಹಿಯನಳ್ದು ಪೋಲ್ದು ಪೊಡೆಯಂ ಕಡುಪಿ ।
ನ್ನಂಗಂ ದೊರೆಕೊಂಡಿರೆ ಕೊಂ
ಡಂ ಗಡ! ವೇಲೆ ತೈಗಹುಲಿಲದೇಂ ಚೋಜಿಗವೋ ॥ 22 ॥

ತಲೆವಂಟ್ಟು ಪಾಯ್ದು ವೀರ್ಯಾ
ವಲೇಪದಿಂದಿಳ್ದು ಬೀಳ್ದು ಮೆಳ್ದುಂ ಮತ್ತಂ ।
ಚಲಚಲದಿಂದೊಡನಿಕ್ಕಿದ
ನೊಲೆದಿದಿರೊಳ್ ಮಣಿಯದಾಂತ ಪರವಾಹಿನಿಯಂ ॥ 23 ॥

ಸೂತ್ರಂ ॥ 103 ॥ ಮೆಱಸುಂದು ಸೂಱಿಸುಂದೆನೆ
ಪಿಱಿತಿನಿಯೆನೆ ಪೂಱಿಯೆನೆ ಪದಾಂತರದಿಂದಂ ।
ನೆಱೆದು ನಿಲೆ ದುಷ್ಪ್ರತೀತಿಯ
ನಱಿಪುವ ಪೆಱುಪೆಱವುವಿನ್ನವೇ ಗಾಮ್ಯಂಗಳ್ ॥ 24 ॥

ಅದೆಂತೆನೆ ॥

ಕಂ ॥ ನೆಱೆಗೊಂಡು ತೊನೆವ ಸರಲಿಂ
ನೆಱಲ್ದು ರಥದೊಳಗೆ ಬಿಱ್ದು ಚಕ್ರಧರಂ ಮೆ ।
ಯ್ಮಱೆದು ಗುಹಾಂತರದೊಳ್ ವಿಗೆ
ವಱಿಸುಂದಿದ ಪುಲಿಯನಾಗಳನಿಸಂ ಪೋಲ್ತಂ ॥ 25 ॥

ವಜ್ಜರದ ಸೂಱಿಸುಂದಿನ
ಪೊಚ್ಚಱಿನಾಂತಿರ್ದ ಬಿರುದಿನೆಸಕದ ಪೆಱಿನ್ವುಂ ।
ಕಚ್ಚಕಳಗಳ ತೊಡರ್ಪಿನ
ವೆಚ್ಚವಣಿಗೆಯಂಕವುಂ ವುಹೀಶಂ ನೋಱ್ಪುಂ ॥ 26 ॥

ಕೊಱೆವಲ್! ಬತ್ತಿದ ಕಾಲ್! ಪಿಂ
ಬಱಿಗೇಸಂ! ನೆಕ್ಕದಪ್ಪು! ಪೊಕ್ಕಿರ್ದ ಬಸಿಱ್ ।
ತೆಱೆದ ವುಖಕುಹರವರ್ಬಿಸೆ
ಪಿಱಿತಿನಿಗಳ ಬಳಗವೆಯ್ದಿ ತಂದುದು ವುನಿಯಂ ॥ 27 ॥

ಇಂತೀಪೇಱ್ದುವುವುನಱಿದು ಪೆಱುಪೆಱವು ವುನಱಿದುಕೊಳ್ವುದು ॥

ಕಂ ॥ ಅನುಕರಣದೊಳೊಂದಿದ ವಾ
ತಿನಲ್ಲಿ ನಿರ್ದೋಷವಾಗೆ ಸಲ್ಗುಂ ವೇಱ್ಪುಂ ।
ತಿನಿತುಂ ಸ್ವರೂಪಕಥನದೊ
ಳನುವಾದಂ ಭಿನ್ನಶಬ್ದವಪ್ಪುದಱಿಂದಂ ॥ 28 ॥

ಇದು ಕಾವ್ಯವಲವ್ಯಾವೃತ್ತಿಯೊಳ್ ಪದಪದಾರ್ಥಸಂಧಿದೋಷ
ವಿನಿಶ್ಚಯಪ್ರಕರಣಂ ಪ್ರಥಮಂ.

ವಾಕ್ಯವಾಕ್ಯಾರ್ಥದೋಷಾನುಕೀರ್ತನಪ್ರಕರಣಂ.

ಸೂತ್ರಂ ॥ 104 ॥ ವಿದಿತಾರ್ಥಂ ಕ್ಷೋದಕ್ಷಮ
ಮುದಾತ್ತಶಬ್ದಂ ಪರಸ್ಪರಂ ಸಾಪೇಕ್ಷಂ ।
ಪದಸಮುದಾಯಂ ವಾಕ್ಯಂ
ವ್ಯುದಸ್ತಕಾಂಕ್ಷಂ ತದೇಕವಸ್ತುನಿಬದ್ಧಂ ॥ 29 ॥

ಲಕ್ಷ್ಯಂ ॥

ಕಂ ॥ ಆನವನದಿಂ ಪಱಗೆಯ್ಯಂ
ಕನವುಂ ಸೋದಿನದೆ ಬಿತ್ತಿದೊಕ್ಕಲಿಗನವೋಲ್ ।
ನಸಿಯಂ ನೋಡಿ ತಳೋದರಿ
ಬಿಸುಸುಯ್ದಂ ಬಯ್ದವುಂತೆ ಮಾಡಿದ ಬಿದಿಯಂ ॥ 30 ॥

ಸೂತ್ರಂ ॥ 105 ॥ ವ್ಯವಹಿತಮೇಕಾರ್ಥಂ ವ್ಯ
ರ್ಥವಪಕ್ರಮಮಖಿಳಲೋಕಶಾಸ್ತ್ರವಿರುದ್ಧಂ ।
ಸುವಿದಿತಯತಿಭಂಗಂ ಭಿ
ನ್ನವೃತ್ತಮೆಂದಿಂತು ವಾಕ್ಯದೋಷಮಿವಕ್ಕುಂ ॥ 31 ॥

ಸೂತ್ರಂ ॥ 106 ॥ ವ್ಯತಿಕೀರ್ಣಪದಕ್ರಮಮನು
ಚಿತಾನ್ವಯಂ ವ್ಯವಹಿತಾಹ್ವಯಂ ತಾನದು ದಲ್ ।
ಮತಿಸಮ್ಮೋಹಮನಿದಿರವ
ರ್ಗ ತೊಡರ್ಚಲ್ಪೀಟಿಕೊಪ್ಪಡಲ್ಲಿಗಲ್ಲದು ದೋಷಂ ॥ 32 ॥

ಆವಕ್ಕೆ ಲಕ್ಷ್ಯಂ ॥

ಕಂ ॥ ಒಳಕೊಳ್ ವುಂ ನಿನಗಿಲ್ಲದ
ವುಳಸಂ ಕಾಲ್ಗಿಱಗಿದೋಷನಂ ತೊಱೆ ದಯಿಯಿಂ ।
ತಳವುಳಗುತ್ತನುನಯದಿಂ
ತಿಳಪಲ್ಕೆಂದೆಱಗದನ್ನವೆನ್ನರುಮುಲೋಗುಂ ॥ 33 ॥

ಪತ್ರಂ ಭುಜಂಗಸಮಿತಿ ಕ
ಳತ್ರಂ ದಳ್ಳುರಿ ವಿಭೂಷಣಾವಳಿ ಭೂಭೃ ।
ತ್ಪುತ್ರಿ ಗವಾಧಿಪನಜಿನಂ
ನೇತ್ರಂ ನಿವಸನನೆನಿಪ್ಪನೊಸೆಗೆವುಗಭವಂ ॥ 34 ॥

ಸೂತ್ರಂ ॥ 107 ॥ ಅವಧಾರಿಸದುಕ್ತಾರ್ಥಮ
ನವಿಶೇಷದೆ ಮಗುಳ್ದು ನುಡಿದೊಡೇಕಾರ್ಥಂ ಕೊಲ್ಗೇ ।
ಧ ವಿಷಾದ ಖೇದ ಭಯ ಹ
ರ್ಷ ವಿಸ್ಮಯಾದಿಗಳೊಳಿನ್ನವಿಷ್ಟಮೆದುಷ್ಟಂ ॥ 35 ॥

ಪ್ರಯೋಗಂ ॥

ಪೂರ್ವಾರ್ಧಕ್ಕೆ ।

ಕಂ ॥ ಉನ್ಮನಮು ಮೂಲ್ಕುಮುತ್ಕೆಯ
ನುನ್ಮದಬರ್ಹಿಣಶಿಖಂಡಿಕೇಕಾವಿರುತಂ ।
ತನ್ಮಧುರಧ್ವನಿಯುಂ ಜಳ
ಧೃನ್ಮೇಘನಿನಾದವೊದವೆ ದೆಸೆದೆಸೆಗೆಸೆಗುಂ ॥ 36 ॥

ಅಪರಾರ್ಧಕ್ಕೆ ॥

ವೃ ॥ ಗಗನಾಧ್ವರ್ ಕರಣಾಗಿವಮಾಗಿವುಮರರ್ ನಿಂದಾನಿವಮಾನಿಂ! ದಿಶಾ
ಳಗಧೀಕರ್ ನೆರೆದೊಡ್ಡಿ ವೊಡ್ಡಿವುರಗರ್ ಬಂದೆಯ್ದಿವೆಯ್ದಿಂ! ಮನ ।
ಸ್ವಿಗಳೀದೈತ್ಯನನಿಕ್ಕಿವಿಕ್ಕಿವುದಟರ್ ಪೂರ್ಣಾಣ್ಮಿವುಣ್ಮಿಂ! ಯಶೋ
ರ್ಥಗಳೆನ್ನಂ ನೆಲೆಗುಯ್ಯಿವುಯ್ಯಿವೆನುತುಂ ತನ್ವಂಗಿ ಪುಯ್ಯಲ್ಬಿದಳ್॥ 37 ॥

ಸೂತ್ರಂ ॥ 108 ॥ ಕರಿಕಳಭವೆನೆ ಶಿಗಲ್ಯೇ
ಖರವೆನೆ ನವಪುಷ್ಪಮಾಲೆಯೆನೆ ಮೌಕ್ತಿಕಭಾ ।
ಸುರಹಾರಯಷ್ಟಿಯೆನೆ ಪೌ
ನರುಕ್ತ್ಯವಾಗದು ವಿಶೇಷಸಂಭಾವನೆಯೊಳ್ ॥ 38 ॥

ಪ್ರಯೋಗಂ ॥

ಕಂ ॥ ಆರಾಜಶಿರಶ್ಚೇಖರ
ನಾರಿಂದಂ ಪಿರಿಯನಳವಿಯೊಳ್ ಬಳವದಹಂ ।
ಕಾರದೆ ಬರೆ ತೆಗೆವಂ ಸ್ತಂ
ಭೇರವುಕಳಭವನುಪಾತ್ತವಾಲಧಿಮೂಲಂ ॥ 39 ॥

ನವಕುಸುಮಮಾಲೆ ಮೌಕ್ತಿಕ
ವಿವಿಕ್ತ ಹಾರಾನುಕಾರಿ ಕರವೊಪ್ಪಿರ್ಕುಂ ।
ಸವಿಲಾಸದಸ್ಯವನಿತಾ
ನಿವಹನಿರಂತರಭುಜಾಂತರವ್ಯಾಲಗ್ನಂ ॥ 40 ॥

ಸೂತ್ರಂ ॥ 109 ॥ ವ್ಯರ್ಥಂ ಪೂರ್ವಾಪರವಿಹಿ
ತಾರ್ಥವ್ಯಾಘಾತದಿಂ ವಿರುದ್ಧಾರ್ಥಪದಂ ।
ಸಾರ್ಥಕಮಕ್ಕುಮನರ್ಥಕ
ದರ್ಥಿತಜನದುಕ್ತಿವಿಷಯದೊಳ್ ಮತ್ತದುವುಂ ॥ 41 ॥

ಆಯಿರಡರ್ಥಂ ಲಕ್ಷ್ಯಂ ॥

ಕಂ ॥ ಎಱಗಿಸು! ಭುಜವಿಜಯದಿನಣ
ಮುಱಿದೆ ಬಿಗುತ್ತಿರ್ಪರಾತಿನೃಪರಂ ಥರ್ವಂ ।
ಕ್ಕೆಱವಟ್ಟುಗಿರ್ದಯ್! ನೀಂ
ಪೆಱರಾರುಂ ನಿನಗೆ ಪಗೆವರೆಂಬರುಮೊಳರೇ ॥ 42 ॥

ಪರದಾರಗಮನವಾರ್ಯಾ
ಚರಿತಂಗೆನಗೆಂತು ಯುಕ್ತಮಕ್ಕುಂ ತತ್ಸಂ ।
ದರರುಚಿರವಧೂರವನಿತಾ
ಧರಣಾನಂ ತಾನದೆಂತು ಪೇೞ್ ಕೂಡುಗುಮೇ ॥ 43 ॥

ಸೂತ್ರಂ ॥ 110 ॥ ಮೊದಲೊಳ್ ಮುಂ ಪೇೞ್ದುದ್ದೀ
ಶದೆಂದಮನುದ್ದೇಶಮಾಗದೆಂದಕ್ರಮನಿ ।
ನ್ನದುವುಂ ಸಂಬಂಧಕ್ಕಾ
ವುದಾನುಮನುಬೋಧಹೇತುವಾದೊಡದೋಷಂ ॥ 44 ॥

ಉದಾಹರಣೆ ।

ವೃ ॥ ಸತ್ವರಜಸ್ತಮೋಗುಣವಿಭಾಗದಿನೀತ್ರಿಜಗಕ್ಕೆ ತಾನೆ ಕ
ರ್ತೃತ್ವದೊಳೊಂದಿಯುಂ ನೆಱೆಯೆ ಸಂಹರಿಸಲ್ ನೆಱೆದುಂ ಸಮಂತು ನಿ ।
ರ್ಮತ್ವಮನಾಂತುವಿಶ್ವಜನಜನ್ಯತನೆಂಬಿನಿಗಂ ವಿಭಿನ್ನಮೂ
ರ್ತಿತ್ವಮನಪ್ಪುಕೆಯ್ದ ಪರಮೇಶ್ವರನೀಗೆಮಗಾಪ್ತತತ್ವಮಂ ॥ 45 ॥

ಕಂ ॥ ವಾತಂ ಪಿತ್ತಂ ಕಫಮೆಂ
ಬೀತೆಱದಿಂ ಮೂಱು ದೋಷವಾಶ್ರಯಂತಸಮಾ ।
ಖ್ಯಾತಂಗಳವುಪ್ಪಣಿನತಿ
ಶೀತದಿನುಪಕಮಿಕುಮುಲ್ಲಿ ಮಧ್ಯಮದೊಂದುಂ ॥ 46 ॥

ಸೂತ್ರಂ ॥ 111 ॥ ಕಾಳಸ್ವಭಾವದೇಶಸ
ಮಾಳಶ್ರಿತವಸ್ತುರೂಪವಿಪರೀತಮದಂ ।
ತಾಳೋಕ್ತವಿರುದ್ಧಂ ಗುಣ
ದೊಳಿಗೆ ವಂದಿರ್ಕುಮರಮಿ ಕವಿಕೌಶಲದಿಂ ॥ 47 ॥

ಅನಿತಕ್ಕಂ ಲಕ್ಷ್ಯಂ ॥

ವೃ ॥ ವಿಕಚಾಂಭೋರುಹಷಂಡವುನ್ಮದಮರಾಳಾನೀಕವುತ್ಫುಲ್ಲಚಂ
ಪಕವಾಕಂದವುಹೀಜವುಜ್ಜ್ವಳನಿಯದ್ರುಂಗಂ ಸ್ಫುಟತ್ಕೋಕಿಲ ।
ಪ್ರಕಟೂರಾವಪರಂಪರಾಪರಿಗತಾಶಾಕುಂಜವುಕ್ಷೀಬಕೇ
ಕಿಕದಂಬಂ ಜಗತೀಜನಕ್ಕೆ ಪಡೆದತ್ತ ಭ್ರಾಗವುಂ ರಾಗವುಂ ॥ 48 ॥

ಇದು ಕಾಲವಿರುದ್ಧಂ ॥

ಕಂ ॥ ಕೋಡುಳ್ಳ ತುರಂಗಂ ಬಂ
ಡಾಡುವ ನವಕರ್ಣಿಕಾರವುತಿವುಧುರತೆಯೊಳ್ ।
ಕೂಡಿದ ನಿಂಭಾರಾವುಂ
ನಾಡೊಳಗೊಳವೆಂದೊಡಿನ್ನ ದೇವಣ್ಣಿಪುದೋ ॥ 49 ॥

ಇದು ಸ್ವಭಾವವಿರುದ್ಧಂ ॥

ಶ್ಲೋ ॥ ಕರ್ಪೂರಭೂರುಹಾರಾಮೋ
ತ್ಸರ್ಪದ್ಭೋಳೀ ವಿಧೂನರಂ ।
ತೋರ್ಪುದಾತಿಥ್ಯವುಂ ಮಾಡಲ್
ಬರ್ಪಂತೀ ಮಲಯಾನಿಲಂ ॥ 50 ॥

ಇದು ದೇಶವಿರುದ್ಧಂ ॥

ಕಂ ॥ ಬೇಱೊಂದದ್ಭುತರಸವುಂ
ಬೀಱುತ್ತುವುನೇಕವಿವಿಧಫಲಪರಿಣತಿಯಿಂ ।
ದಾಱುಂ ಋತುತುಗಳುವೊಡನೆಯೆ
ತೋಱುದುವು ತಪಃಪ್ರಭಾವದಿಂ ವುನಿಪತಿಯಾ ॥ 51 ॥

ಇದು ಕವಿಕೌಶಲಂ ॥

ಸೂತ್ರಂ ॥ 112 ॥ ನ್ಯಾಯಯಾಗವುನೃಪವಿದ್ಯಾ
ವ್ಯಾಯಕಲಾಕಾವುತಂತ್ರವಿಷಯವಿರೋಧೆ ।
ಪಾಯಂ ಶಾಸ್ತ್ರವಿರುದ್ಧಂ
ಶ್ರೇಯವುದಂತೆಲ್ಲಿಯಾನುವುಕ್ತಿಕ್ರವುದಿಂ ॥ 52 ॥

ಉದಾಹರಣೆ ॥

ಕಂ ॥ ಅವಿನಶ್ವರಗತಿ ಸಂಸ್ಕಾ
ರವೆಂಬ ಸುಗತೋಕ್ತಿ ಸತ್ಯವುಂತಲ್ಲದೊಡಾ ।
ನವನೀಲನೀರಜಾಕ್ಷಿಯ
ನವಿಲಾಸಾಲೋಕವಿನ್ನುವಿರ್ಭವಿಸುವುದೇ ॥ 53 ॥

ಉಪನಯನಂಗೆಯ್ಯದೆಯುಂ
ಸ್ವಪೂರ್ವಮಾಸನೆಯ ಬಲದಿನಿಂತೀತಂ ವೇ ।
ದಪುರಾಣವೇದಿಯಾದಂ
ವ್ಯಪೇಕ್ಷೆಗೆಯ್ಗುಮೆ! ವಿಶುದ್ಧಮಣಿ ಸಂಸ್ಕೃತಿಯಂ ॥ 54 ॥

ಉಟ್ಟಿದುವರ್ಕವಿಾತೆಱದಿನಱಿದುಕೊಳ್ವುದು ॥

ಸೂತ್ರಂ ॥ 113 ॥ ನಿಯತಸ್ಥಾನಂ ಪದವಿಸೈ
ತಿಯೊಳಾದ ವಿರಾಮಮಱಿಗೆ ಯತಿಯಕ್ಕುಮದ ।
ರ್ಕ್ಕಯಥಾಗತಿ ಯತಿಭಂಗಂ
ಪ್ರಯುಕ್ತಸಮಭರವಿಭಾಗದೊಳ್ ನಿದೋರ್ಷಂ ॥ 55 ॥

ಪ್ರಯೋಗಂ ॥

ಕಂ ॥ ಅತಿವೃದುವನಿಱಿಸುಗುಂ ಮು
ತ್ತತಿತೀವ್ರನನಣಮೆ ಜನವುದೆಳಸದದೆಂತುಂ ।
ಮತಿವಂತನಂತಱಿಂದೀ
ಕ್ಷಿತಿಯಂ ಬಸವೂಗಿ ವೂಚ್ಕೆ ಮಧ್ಯಮಗತಿಯಿಂ ॥ 56 ॥

ವೃ ॥ ಇಂತೀಪೇೞ್ದಾ ನೃಪಗುಣವಿಭೇದಂಗಳಂ ತಾಳ್ದ ನಿಂದಾ
ತಂ ತನ್ನೊಳ್ ತಾಳ್ದಗುಮಖಿಳಲೋಕೈಕಸಾಮ್ರಾಜ್ಯಮಂ ವಿ ।
ಭ್ರಾಂತೇಂ! ಭೂವ್ಯಂ! ತರರಿಪುಗಳಂ ಗೆಲ್ದು ವಿಕ್ರಾಂತದಿಂ ಕ
ಲ್ಪಾಂತಸ್ಥಾಯಿಪ್ರಕಟವಿಹಟತ್ಕೀರ್ತಿಗಂ ಕಾಂತನಕ್ಕುಂ ॥ 57 ॥

ಸೂತ್ರಂ ॥ 114 ॥ ಗುರುಲಘುರಚನೆಗೆ ನಿರ್ದಿ
ಷ್ಟರೂಪಮೀನಾಧಿಕಾಕ್ಷರಂ ಛಂದದೊಳೊಂ ।
ದಿರೆ ಭಿನ್ನವೃತ್ತಮೆಂಬುದು
ದುರುಕ್ತಮತ್ಯಂತದೋಷಮಕ್ಕುಂ ಕೃತಿಯೊಳ್ ॥ 58 ॥

ಲಕ್ಷ್ಯಂ ॥

ಕಂ ॥ ಜೀವಮೂತಕೇತುಗಣ್ಣಂ
ಗೆ ವೇೞ್ಪುವಾಹನನದೆಂತು ಪುಂ ಪೆಸಕೆಯ್ದುಂ ।
ನಿಮ್ಮಣ್ಣಂಗೆ ಮತಂಗಂ
ಗಾವೂಱ್ಕೆಯೆ! ವಿನಯದಿಂದೆ ನೀಂ ಪೆಸಕೆಯ್ಯಿಂ ॥ 59 ॥

* * * * * *

ಸೂತ್ರಂ ॥ 115 ॥ ಮಿಗೆ ದಲ್ ವಲಂ ವೆಱಂ ಮು
ತ್ತೆ ಗಡಂ ಗಳ ಕೆನ್ನ ಮೆಂಬನರ್ಥಕಪದಮಂ ।
ಸೊಗಯಿಸೆ ವಾಕ್ಯಾಲಂಕೃತಿ
ನೆಗಟ್ವಿಡೆಯೊಳ್ ಪೇಱ್ಗಿ! ಪೇೞದಿಕ್ಕುಲಿದೆಡೆಯೊಳ್ ॥

ಪ್ರಯೋಗಂ ॥

ವೃ ॥ ವಿರಹಿ ವ್ಯಗಂ ದಲಂಜಿಸುವವಂ ಮುಧು ದಲ್! ಬಲಿಗಳ್ ಲತಾಳ ದಲ್!
ಕರಿಕು ಕನಲ್ದು ಕಾಯ್ದ ವಿರಹಾಗ್ನಿ ದಲೊಪ್ಪುವ ಕೆಯ್ಕೊಳಂ ದಲಾ ।
ಗುರಿ ಪವನಂ ದಲೆಂಬಿನಮನಂಗನ ಬೇಂಟೆಯ ಬಿಂದದಂತೆ ಬಂ
ದಿರೆ ಪೊಗಸುಗ್ಗಿ ಕೆಯ್ಗಲ್ಲಾಯೆ ಕಣ್ಗಿಸೆದಿರ್ದವು ನಂದನಾಳಿಗಳ್ ॥ 62 ॥

ಕಂ ॥ ವೂವಿನ ಕೊನೆ ವೂವಿನ ನನೆ
ವೂವಿನ ಪೂ ವೂವಿನೆಳೆಯ ವಿಂಡಿ ವೂವಿನ ಕಾಯ್ ।
ವೂವಿನ ಪಣ್ಣಿಂದು ಜನಂ
ಭಾವಿಸೆ ಸರ್ವಾಂಗಸುಂದರಂ ವೂವೆ ವಲಂ ॥ 63 ॥

ವೃ ॥ ವಿಕ್ರಮುವಹ್ನಿ ವುನ್ನಳುರ್ದುಕೊಂಡುದು ತನ್ಮನಿಯಂ ಗಡಕ್ಷವೇ
ಧಕ್ರತು ಧೂವುವಾದುದು ಗಡಂ! ಬೞಿಯಂ ಶಿಖಿ ಧೂವುಯೋನಿಯೆಂ ।
ಬೀಕ್ರಮುವೆಂತು ನೇೞಿವೆನೆ ವಿಕ್ರಮುಯಜ್ಞವಿಧಾನವುಂ ಧರಾ
ಚಕ್ರವೆ ವೆಚ್ಚಿ ಬಣ್ಣಿಸೆ ಜಸಂಬಡೆದಂ ಪೊಲಕೇಶವಲ್ಲಭಂ ॥ 64 ॥

ತೊಳಗೆ ಪೊನ್ನರಥಂ ರಥವಾಜಿಗಳ್
ಕಿಳಿಱೆ ವೀರರಸಂ ಕರೆಗಣ್ಮಿ ಕಂ ।
ಟುಳಸೆ ವೆಯ್ನುವಿರಗ್ಗಳನೊಪ್ಪಿದಂ
ಗಳ! ಸರಿತ್ಸುತನಾಹವಲಂಪಟಂ ॥ 65 ॥

ಅಂಕುರದಿಂ ಪ್ರವಾಳಚಯದಿಂ ನವಕುಟ್ಮಲಶೋಭೆಯಿಂ ಬೆಡಂ
ಗಂ ಕುಡುತಿರ್ಪ ಪುಷ್ಪರುಚಿಯಿಂ ವಿಳಸತ್ಫಳಸಂಕುಳಂಗಳಂ ।
ಪಂಕರುಹಾಸನಂ ಬರೆದು ಬಚ್ಚಿರ್ಪಿಸದಂತಿರೆ ನೋಱಿಪೊಡೆತ್ತಲುಂ
ತಾಂ ಕರವೊಪ್ಪಿ ತೋಱುವುದು! ಬಂದ ಬಸಂತದೊಳೊಂದು ವಾವುರಂ॥66॥

ಕಂ ॥ ಪಗಲೊಪ್ಪದು ಕಶಿ! ನಿಶೆಯೊಳ್
ಸೊಗಯಿಸದರವಿಂದವುದಱಿನಂತಿರಡುವುನೆಂ ।
ತು ಗಡ! ಸವುನೆಂಬನಾಶಿಶು
ವ್ಯಗನಯನೆಯು ಪಗಲುವಿರುಳುವೊಪ್ಪುವ ವೊಗವುಂ ॥ 67 ॥

ವೃ ॥ ಕೀಲು ಪೌರುಷಮನಾತ್ಮಪುಣ್ಯದಿಂ
ಬೇಱೆ ಮಾಡದೆಸಪೊಂ ವಿರೋಧಿಯಂ ।
ಮಾಲುಂಗುಂ ವೆಱುವೆಱುಂಕೆಯೊಂದಱಿಂ
ಪಾಲುಲಾರ್ಕ್ಕನೆಂ! ಪತಪ್ರಿರಾಜನುಂ ॥ 68 ॥

ಕಂ । ಆಕಥೆ ಮುತ್ತೆಂತೆಂದೊಡೆ
ಭೀಕರಕರಿಮಕರನಿಕರಭಿನ್ನತರಂಗಾ ।
ನೀಕಲವಣಾಂಬುರಾಶಿವೃ
ತಾಕೃತಿಕಮನೀಯಮುಂಟು ಜಂಬೂದ್ವೀಪಂ ॥ 69 ॥

ವೃ ॥ ಬಿಚ್ಚತಮಿರ್ದು ಕಣ್ಣ ಪಸಪೋಡುವಿನಂ ಸಲೆ ನೀನೆ ನೋಡ! ಪೆ
ರ್ಮಚ್ಚರನಿಕ್ಕಲಿನ್ನ ಭುಜದಂಡಮೆ ಸಾಲದೆ! ಕೆನ್ನವೊಲ್ಲಿಯುಂ ।
ಮುಚ್ಚದೊನಿಲ್ಲ! ನಿನ್ನಳವನಿನ್ನದಱಿಂ ಗಳ! ನೀನೆಯಾ[ರಯ
ಲ್ಕಚ್ಚಬ್ಬತನಯ್] ತ್ರಿಕಕ್ತಿಯುತನಯ್ ವಿಜಿಗೀಷುವಯಸ್ತವೈರಿಯಯ್ ॥ 70 ॥

ಉಱಿದುವರ್ಕಮಿತೆಱುದಿಂ ನೋಡಿಕೊಳ್ವುದು ॥

ಇದು ಕಾವ್ಯಮಲವ್ಯಾವೃತ್ತಿಯೊಳ್ ವಾಕ್ಯವಾಕ್ಯಾರ್ಥದೋಷಾನು
ಕೀರ್ತನಪ್ರಕರಣಂ ದ್ವಿತೀಯಂ.

ಗೀತಿಕೆ ॥ ಈವೇಱ್ದ ಮೂಲ್ಕೆಯಿಂ ದೋಷಾ
ಲೀಪಂ ಪೊರ್ದದಂತಿರೆ ಸನ್ನಿಬಂಧ ।
ವ್ಯಾಪೃತನಕ್ಕೆ ಗುಣವದರ್ಥಂ
ವ್ಯಾಪಕಮಾಗೆ ಕವಿತ್ವತತ್ವದೊಳ್ ॥ 71 ॥

ವೃ ॥ ಸವುಂಚಿತಕೃತಿದೋಷದೂಷ್ಯಮಾರ್ಗ
ಕ್ರಮಪರಿಭಾವಿತಚಿತ್ತವೃತ್ತಿಯಪ್ಪೊಂ ।
ಗವುಳಿನಕವಿತಾಗುಣೋದಯಶ್ರೀ
ಸವುನಿಸುಗುಂ ನತತಾಭಿಯೋಗದಿಂದಂ ॥ 72 ॥

ಸಾರವಿಚಾರಬಂಧುರಮತಿಪ್ರಸರಂ ಪರಿಪಕ್ವಶಾಸ್ತ್ರಸಂ
ಸ್ಕಾರನುವೇತಕೌತುಕರಸಂ ವಿದಿತಾಗಮಲೋಕವೃತ್ತನು ।
ತ್ಕಾರಿತಮತ್ಸರಂ ಸುಜನವತ್ಸಲನೆಲ್ಲಿಯುವಿಖಾತನೆಂದು ಕೆ
ಯ್ವಾರದೆ ಬಣ್ಣಿಕುಂ ವಿಬುಧವುಂಡಳಿ ಪಂಡಿತನಾಗವರ್ಮನಂ ॥ 73 ॥

ಇದು ಸಕಳಸುಕವಿಜನವನಸ್ಸರೋಜಿನೀರಾಜಹಂಸಾಯಮಾನಾನೂನಕವಿತಾ
ಗುಣೋದಯ ಶ್ರೀನಾಗವರ್ಮಪ್ರಣೀತವುಪ್ಪ ಕಾವ್ಯಾವಲೋಕನದೊಳ್
ಕಾವ್ಯಮಲವ್ಯಾವೃತ್ತಿಯೆಂಬುದು ದ್ವಿತೀಯಾಧಿಕರಣಂ.

ಕವಿಸಮಯಾಧಿಕರಣಂ.

ಸೂತ್ರಂ॥214॥ ಆವುದಶೇಷಲೋಕವಿಷಯಸ್ಥಿತಿಯಲ್ತಖಿಳಾಗಮಾರ್ಥಮುಂ
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿ ನಿ ।
ಷ್ಕೇವಳಮಾದ ರೂಢಿವಶದಿಂ ಸಲೆ ಸಲ್ವುದಿದಲ್ತೆ! ಶಿಷ್ಟಸಂ
ಭಾವಿತಮೆಪ್ಪ ಕಾವ್ಯಸಮಯಂ ಭುವನತ್ರಯವಸ್ತುಗೋಚರಂ

ಸೂತ್ರಂ ॥ 215 ॥ ಆತತಸತ್ಕವಿಸಮಯಂ
ಜಾತಿದ್ರವ್ಯಕ್ರಿಯಾಗುಣಾಶ್ರಯಮಸದಾ ।
ಖ್ಯಾತಿ ಸದಕೀರ್ತನಂ ನಿ
ರ್ಣೀತಂ ನಿಯಮಾರ್ಥಮೈಕ್ಯಮೆನೆ ನಾಲ್ಕು ತೆಱಂ ॥

ಅಸದಾಖ್ಯಾತಿಪ್ರಕರಣಂ.

ಸೂತ್ರಂ ॥ 216 ॥ ಸಲಿಲಾಶ್ರಯಮಾತ್ರದೊಳಂ
ಕಲಹಂಸಪ್ರಭೃತಿ ನದಿಗಳೊಳ್ ಕಮಲಸಿತೋ ।
ತ್ಪಲಕುವಲಯಾದಿ ಶೈಲಾ
ವಲಿಯೊಳ್ ರತ್ನಾದಿಯುಂ ಪ್ರಯೋಗಿಸೆಪಡೆಗುಂ ॥ 76 ॥

ಲಕ್ಷ್ಯಂ ॥

ಜಲಾಶ್ರಯಮಾತ್ರದೊಳ್ ಹಂಸಾದಿಗಳ್ಗೆ ॥

ವೃ ॥ ಜಕ್ಕವಕ್ಕಿಗಳಂ ಕಳಹಂಸೆಯಿಂ
ಮಿಕ್ಕ ಸಾರಸದಿಂ ಕಾರಂಡವಂಗಳಂ ।
ಮೊಕ್ಕಳಂ ಸೊಗಯಿಪ್ಪುದು ನೋಡ! ನೋ
ಟಕ್ಕೆ ಚೆಲ್ವೆಸೆದಿಲ್ಲಿಯ ಪೂಗೊಳಂ ॥ 77 ॥

ನದಿಯೊಳ್ ಕಮಲಾದಿಗಳ್ಗೆ ॥

ವೃ ॥ ಸರಯೂನದ್ಯರವಿಂದವುಂದವುಂಕರಂದಸ್ಯಂದಿ ಗಂಗಾಂಬುಶೀ
ಕರಸಂಸಂಗಿ ಲತಾಭಿರಾವುಲಲನಾಲಾಸ್ಯೈಕಶೈಲೂಷನ ।
ದ್ರಿಗುಹಕ್ರೋಡನಿಪಾತಿ ಮೂಲ್ಯವದನುಪ್ರಸ್ಫೋತ್ಥಿತಂ ಯಾವುನೋ
ದರಕುಂಜಸ್ಥಿತಿ ಮೆಲ್ಲನಲ್ಲಿ ಸುಳಿಗುಂ ಬಂದೊಂದು ವುಂದಾನಿಳಂ ॥ 78 ॥

ಕಂ ॥ ಕುವಲಯವನರುಚಿಯಿಂ ಜಾ
ಹ್ನವಿಯ ಜಳಂ ಕರವೆ ಕಲ್ಮಿ ತೋಱುದುದಂತಾ ।
ಪ್ಲವಗಧ್ವಜಂಗೆ ಯಮುನಾ
ಪ್ರವಾಹನಂಭೇದವಾದ ತೆಱದಿಂದಾಗಳ್ ॥ 79 ॥

ಶೈಲದೊಳ್ ರತ್ನಾದಿಗಳ್ಗೆ ॥

ವೃ ॥ ಕಳಧೌತೋಚ್ಚಶಿಲೋದ್ಗತಾಂಕುವಿಲಸತ್ಪಾದಂ ಸ್ಫಟಸ್ಫಾಟಿಕೋ
ಪಳಧಾಮೋಜ್ವಳಮುಧ್ಯಮಂಬುರುಹರಾಗೋದಗ್ರಪಾಷಾಣಭಾ ।
ವಳಯೋದ್ಭಾಸಿನಿಜೋಪಕಂಠವಸಿತಚ್ಛಾಯಾಂತರತ್ನಪ್ರಭಾ
ವಿಳಮೂರ್ಧಂ ನಡೆ ನೋಡೆ ಪೋಲ್ತುದು ನಗಾಧೀಶಂ ಖಗಾಧೀಶನಂ ॥ 80 ॥

ಕಂ ॥ ಮುರಕತದ ಕಲ್ಲ ಕವಿಗಳೊ
ಳೆರಡಱಿಯದೆ ಕೂರ್ತ ಧೂರ್ತಸುರವಿಂಥುನಂಗಳ್ ।
ನೆರೆದಳಸುಗಲಿಸೆ ಗಿಳಿಯುಂ
ಪುರುಳಿಯುಮುಳಿಸುವುವು ದೇವಭೂಷೆಗಳಳಸಂ ॥ 81 ॥

ಅಂತಲ್ಲದೆಯುಂ ಧನದನ
ಗಂ ತನಗಟ್ಟಿದೊಡೆ ರಾಯಭೂರಿತನಂ ಬಂ ।
ದಂತಿಪ್ಪುವಿದಱ ಕುಂಜೋ
ದ್ಯಾಂತದ ತಱತಲ್ಲಿಸಿ ಪೊಳೆವ ಕುಳಿಶಾಶ್ಮಂಗಳ್ ॥ 82 ॥

ಇದು ಜಾತಿ ॥

ಸೂತ್ರಂ ॥ 217 ॥ ತಮದೊಡ್ಡಾ ಮುಷ್ಟ್ಯಸಂಗಾ
ಹ್ಯಮಭೇದ್ಯಂ ಸೂಜಿಗವ್ಪೊಡಂ ತಾನೆನೆಯುಂ ।
ಕುಮುದಪ್ರಿಯಾತಪಂ ನಾ
ವ್ಯಮುಂಜಳಿಗಾಗ್ರಾಹ್ಯಮೆನೆಯುಮಿಷ್ಟಮಿವಕ್ಕುಂ ॥ 83 ॥

ಲಕ್ಷ್ಯಂ ॥

ತಮಕ್ಕೆ ॥

ವೃ ॥ ಪೊದೆದ ಮುದವನ್ಮಾತಂಗೇಂದ್ರಾಜಿನಾಂಬರಮಂ ನಿಮಿ
ರ್ಚಿದಪನಭವಂ ತಾನೆಂಬುಂತಾಗೆ ಪೆರ್ಚಿದಗರ್ವಿನೊಳ್ ।
ಪುದಿದೊದವಿನಿಂ ಸೂಚೀನಿರ್ಭೇದ್ಯಮುಪ್ಪಿನಮೆಯ್ದೆ ಪ
ರ್ವಿದುದನದಳಂ ಮುಷ್ಟ್ಯಗ್ರಾಹ್ಯಂ ತಮಂ ಭುವನಾಂತಮಂ ॥ 84 ॥

ಚಂದ್ರಾತಪಕ್ಕೆ ॥

ವೃ ॥ ಪಿಲಗಸೆದೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರ್ದಿ ಬ
ಚ್ಚಲನೆಳದೋಂಟದೊಳ್ ಪರಿಯಿಸಲ್ ಪಱುಗೋಲ್ಗಳನಿಕ್ಕಿ ಪಾಯಿಸಲ್ ।
ನೆಲೆಯಿನಿಸೆಂದು ನೋಡಲೊಳಪೊಕ್ಕು ದುಡುಂಮಿಱಿದಾಡಲೀಗಲ
ಗ್ಗಲಿಸಿದಲಂಪಿನಿಂ ಬಗೆದುದಂದು ಜನಂ ಘನಚಂದ್ರಿಕಾಂಬುವಂ ॥ 85 ॥

ಇದು ದ್ರವ್ಯಂ ॥

ಸೂತ್ರಂ ॥ 218 ॥ ಇರುಳೊಳ್ ಚಕ್ರಾಹ್ವಯಯುಗ
ವಿರಹಾರ್ತಿ ಚಕೋರಚಂದ್ರಿಕಾಪಾನಮಿವಿಂ ।
ತೆರಡುಂ ಕ್ರಿಯಾತ್ಮಕಂಗಳ್
ವಿರಚಿಸಿಪಡೆಗುಂ ಪ್ರಯೋಗಗತಿಲಕ್ಷ್ಯಂಗಳ್ ॥ 86 ॥

ಲಕ್ಷ್ಯಂ ॥

ಪ್ರಥಮಕ್ಕೆ ॥

ವೃ । ನೆರೆವನ್ನಂ ರವಿ ನಿಲ್ಲದಸ್ತಗಿರಿಯಂ ಸಾರ್ದಂ ಪ್ರಿಯಂ ಪೋಗಲಾ
ತುರನಾಗಿರ್ದನೆನುತ್ತುಮತ್ತಿನನಿತಾತ್ಮೈಕನಂ ನೋಡಿ ಕೋ ।
ಪರಸಾವೇಕಮನೊಂದು ಶೋಕರಸಮುಂ ಮತ್ತೊಂದು ಕಣ್ ಕೆಯ್ಕೊಳು
ತ್ತಿರೆ ಕೆಯ್ಕೊಂಡುದು ಚಕ್ರವಾಕವಧು ಕಣ್ಗಿತ್ತಂ ನಟೀಲೀಲೆಯಂ ॥ 87 ॥

ಬಿಸರುಹಸಖನಸ್ತಾದ್ರೀಂದ್ರವುಂ ಪೊರ್ದೆ ಪೋದಯ್
ಬಿಸುಟಿನಿಯನೆ! ನೀನುಂ ನಿನ್ನ ಪೆಂಪೆನ್ನೊಳೆನ್ನೀ ।
ಯುಸುವುಮಿರದೆ ಪೋಗಲ್ಕಿರ್ದುದೆಂದಿಂತೊನಲ್ಗಂ
ಕುಸುಮಶರಶಲಾಕಾಕೀಲಿತಾಂಗಂ ರಥಾಂಗಂ ॥ 88 ॥

ಕಂ ॥ ನರಸಿಜಷಂಡದ ತೆರೆಗಳ್
ತೆರಳ್ವಿನಂ ಕಮಳಪತ್ರಚಯಮೆನಿತನಿತ್ತುಂ ।
ಕೊರಗುವಿನಂ ಬಿಸುಸುಯ್ದೀಂ
ಬಿರಯಿಸಿದುವೊ! ಚಕ್ರವಾಕವಿಥುನವುವಿರುಳೊಳ್ ॥ 89 ॥

ದ್ವಿತೀಯಕ್ಕೆ ॥

ವೃ ॥ ಮುನವಮನೊನಲ್ಬುವಂ ಕಿರಣಜಾಲದಿನಂತವು ಪೋಗೆ ಮುಂದುಗೆ
ಟ್ಟಿನಿತಱೊಳಿಡ್ದಿಡಂಗಿದಪನಂತದಱಿಂದೆರೆದಪ್ಪೆನೇಣಲಾಂ ।
ಘನನ ಕರಂಗಳುನ್ನಿತುಮುಂ ತವೆ ಪೀರೆನುತುಂ ಚಕೋರಲೋ
ಚನೆ ಪಿರಿದಪ್ಪ ನಲ್ಮೆವೆರಗಳ್ಕಱೊಳಂದೆರೆದಳ್ ಚಕೋರವುಂ ॥ 90 ॥

ಇದು ಕ್ರಿಯೆ ॥

ಸೂತ್ರಂ ॥ 219 ॥ ಹಸಿತಯಶಃಪ್ರಭೃತಿಯೊಳು
ಲ್ಲಸಿತಂ ಸಿತಭಾವನುಯಶದೊಳ್ ಪಾಪದೊಳಂ ।
ತಸಿತರುಚಿ ಕೋಪರಾಗ
ಪ್ರಸರಗೊಳಾರಕ್ತವರ್ಣಮಭಿವರ್ಣಿಸುಗುಂ ॥ 91 ॥

ಲಕ್ಷ್ಯಂ ॥

ಹಸಿತಯಶಃಪ್ರಭೃತಿಗೆ ॥

ಕಂ । ಬೆಳಪ ಮುಖಚಂದ್ರನೊಳ್ ತಳ
ತಳಸುತ್ತುಂ ತೊಳಗಿ ಪೊಳೆವ ಬೆಳ್ದಿಂಗಳದೊಂ ।
ದಳವನಳವಡಿಸಿ ಕರಮು
ಜ್ವಳಪ ಮುಗುಳ್ನಗೆ ಪೆಡಂಗು ನೃಪನಂದನೆಯಾ ॥ 92 ॥

ವೃ ॥ ಹರಹಾಸದ್ಯುತಿಯಂ ನಿರಾಕರಿಸಿ ಗಂಗಾಸಿಂಧುಕಲ್ಲೋಲಶೀ
ಕರಮಂ ನಿಂದಿಸಿ ಸಿಂಧುವಾರಕುಸುಮಶ್ರೀಯಂ ಪಳಂಬಾಡಿ ಭೂ ।
ಸುರಚಂದ್ರಾಂಕುವಿಕಾಸಮಂ ತೆಗೆಱ್ದು ಮುಕ್ತಾಹಾರವಿಸ್ತಾರಮಂ
ಬರಮಂ ಮಿಕ್ಕು ಬೆಳಪ್ಪುದುಜ್ವಳಯಶಂ ಶ್ರೀಗಂಡಮಾರ್ತಂಡನಾ ॥ 93 ॥

ಕಂ ॥ ನಂದನನೊಸಗೆಯುಮಾಮುಕ
ರಂದಕನೆಳಸಿರದೆ ಬಿಟ್ಟು ಪೋದೊಂದಱಲುಂ ।
ಕುಂದದೊಡನಲೆಯೆ ಸತಿ ಕಾ
ಳಿಂದಿಯ ಸುರನದಿಯ ಕೂಡಲಂ ಪೋಲ್ತಿರ್ದಳ್ ॥ 94 ॥

ಅಯಶಃಪಾಪಂಗಳ್ಗೆ ॥

ಕಂ ॥ ವಿಳಸದವೃತಾಂಕುಮಂಡಲ
ದೊಳೆ ಕಱೆಯೆಂತಂತೆ ನೆಗಪೆ ದುರ್ಯಶದಿಂದಂ ।
ಖಳನಾನೃಪಾತ್ಮಜಂ ನಿ
ರ್ಮಳನಿಜವಂಶಕ್ಕೆ ಮಾಡಿದಂ ಮಲಿನತೆಯಂ ॥ 95 ॥

ದೊರಕೊಂಡ ಪಾಪಲೇ[ಪದ]
ಪರಿಣಾಮಮೆ ಕೃಷ್ಣವರ್ಣಮಂ ಪುಟ್ಟಿಸಿದಂ ।
ತಿರೆ ಕಡುಗರಿಯರವಿಂದಿರ್
ಪರುಷಸ್ವರಪರುಷನಯನಪರುಷಕರೀರರ್ ॥ 96 ॥

ಕೋಪರಾಗಂಗಳ್ಗೆ ॥

ಕಂ ॥ ಅವತಂಸಾಶೋಕನವ
ಪ್ರವಾಲರುಚಿ ವುಳಸಿ ರೂಪುಗೊಂಡನ್ತೊಲೆರಡುಂ ।
ಕಿವಿಗಳೊಳವೂಯವುಂ ಪ
ರ್ಜುವ ಕಲ್ಪಿಯ ತೆಱದಿನೆಸೆದುದಾಸ್ಥಯಿಕೆಯೊಳ್ ॥ 97 ॥

ಕುಂಕುಮದ ಕದಡುನೀರಂ
ಭೋಂಕೆನೆ ಮೇಲೊತ್ತೆ ನೃಪತಿ ವುಯ್ಯಂ ರಾಗಂ ।
ತಾಂ ಕರವೆ ತೀವಿ ಪೊಱಗೆ ತು
ಳುಂಕುವವೊಲ್ ತೋಱೆ ನೀಱೆ ಕಣ್ಗಿಸೆದಿರ್ದಳ್ ॥ 98 ॥

ಇದು ಗುಣಂ ॥

ಇದು ಕವಿಸವುಯದೊಳ್ ಅಸದಾಖ್ಯಾತಿಪ್ರಕರಣಂ ಪ್ರಥವುಂ.

ಸದಕೀರ್ತನ ಪ್ರಕರಣಂ.

ಸೂತ್ರಂ ॥ 220 ॥ ಅಸುಗೆಯ ಕುಜದೊಳ್ ಫಲಮುಂ
ವಸಂತದೊಳ್ ಜಾತಿಕುಸುವುವುಂ ಚಂದನದೊಳ್ ।
ಕುಸುವುಫಲವುಂಬಿವಂ ಬ
ಣ್ಣಿಸದಿರ್ಪುದು ತಾವುವಲ್ಲಿ ಸಂಭವಿಸುವೊಡಂ ॥ 99 ॥

ಲಕ್ಷ್ಯಂ ॥

ಕಂ ॥ ಕುಸುವುಕಿಸಲಯವುಂ ಲೋಕ
ಕ್ಕೆಸೆವುತ್ತಂಸಾವತಂಸವುನೆ ಸಾಲದೆ! ನಂ ।
ದಸುಗೆಗೆ ನಿಸ್ಸಾರಫಲ
ಪ್ರಸೂತಿ ವುತ್ತಂತದಾದೊಡೇನಾಗದೊಡೇಂ ॥ 100 ॥

ಎನಿತು ಸುವುನಸ್ಸವುನ್ನತಿ
ತನಗಾದೊಡವುಭಿನೂತಜಾತಿವಿಕಾಸ ।
ಕ್ಕೆನಿತೆಡೆಗುಡದುದಱಿಂ ಕುಲ
ಜನದ ವಿಭೂತಿಯನೆ ಸುರಭಿಸವುಯಂ ಪೋಲ್ಕುಂ ॥ 101 ॥

ಬಿದಿವನದೆ ಕುಸುವುಫಲವಿ
ಲ್ಲದಿರ್ದೊಡಂ ತನ್ನದೊಂದು ವುಯ್ಯಿಂದಂ ಲೋ ।
ಕದ ಸ್ವೇದೆಯೆಲ್ಲವುಂ ಕಿಡಿ
ಸಿದಪುದು ಚಂದನವೆ ವಂದ್ಯಜನ್ಮಂ ಕುಜದೊಳ್ ॥ 102 ॥

ಇದು ಜಾತಿ ॥

ಸೂತ್ರಂ ॥ 221 ॥ ಸಿತಪಕ್ಷದೊಳುಳ್ಳೊಡಮಂ
ಧೃತಮಸಮಂ ಕೃಷ್ಣಪಕ್ಷದೊಳ್ ಚಂದ್ರಿಕೆಯಂ ।
ಕೃತಮತಿಗಳ್ ಕವಿಮಾಗರ್ಗ
ಶ್ರಿತಗತಿಗಳ್ ಪೇೞ್ದಿರ್ಕ್ಕೆದಂತುಂ ಕೃತಿಯೊಳ್ ॥ 103 ॥

ಲಕ್ಷ್ಯಂ ॥

ಕಂ ॥ ಇಡಿದಿರೆ ಗುಹಾಂಧಕಾರಂ
ಪೊಡರ್ದಿರೆ ಚಂದ್ರಕಾಂತರುಚಿ ನಗದೋರೊಂ ।
ದೆಡೆಗಳ್ ಪೋಲ್ತಪ್ಪುವದೊಂ
ದೆಡೆಯೊಳ್ ನೆಲಸಿರ್ದ ಕಾಳವಂ ಜೊನ್ನವುವಂ ॥ 104 ॥

ಇದು ದ್ರವ್ಯಂ ॥

ಸೂತ್ರಂ ॥ 222 ॥ ದಿನಸದೊಳಸಿತಾಬ್ಜವಿಕಾ
ಸವುಮಂ ಶೇಫಾಳಿಕಾಶ್ರುಬಿಂದುಪರಿಭ್ರಂ ।
ಶವುಮಂ ಪೇೞಲ್ಕಾಗದು
ಸನವಾಯಂ ಸಮನಿಸಿಪ್ಪೋಡಂ ಸತ್ಕೃತಿಯೊಳ್ ॥ 105 ॥

ಲಕ್ಷ್ಯಂ ॥

ವೃ ॥ ಪಗಲ್ ಮುಹೋತ್ಸಾಹದೊಳರ್ದಿರುಳ್ ಕನ
ಲ್ದಗಲ್ವ ಚಕ್ರಾಹ್ವಯುಗಂಗಳಿಲ್ಕಿಲಂ ।
ಮೊಗಕ್ಕೆ ತಪ್ಪಂತಲರಲ್ ತಗುಳ್ದುವೆ
ಲ್ಲಿಗಂ ರಜಂ ಪೊಣ್ಮೆ ಮುಹೋತ್ಪಳಾದಿಗಳ್ ॥ 106 ॥

ಕಂ ॥ ನಸಿಯಿಟ್ಟಿರವುಂ ಕಂಡೋಂ
ದೊನಗೆ ಮನಕ್ಕಧಿಕವಾಗೆ ಶೇಫಾಳಿಕೆ ನಂ ।
ತನದಿಂದಿಕ್ಕಿದ ಬಾಷ್ಪ
ಪ್ರಸರಮನಿಲಿಸಿದುವು ನಿಶೆಯೊಳೆಲ್ಲಿಕ್ಕಲರ್ಗಳ್ ॥ 107 ॥

ಇದು ಕ್ರಿಯೆ ॥

ಸೂತ್ರಂ ॥ 223 ॥ ತತದಶನದ್ಯುತಿಯೊಳರ
ಕ್ತತೆಯನೆ ವಿಕಸತ್ಪ್ರಿಯಂಗುಸುಮನಸದೊಳಿರೀ ।
ತತೆಯನೆ ಪಂಕಜಮುಕುಳ
ಪ್ರತತಿಯೊಳಹರಿತ್ವವೃತ್ತಿಯನೆ ಪೇೞ್ದಿ ಬುಧರ್ ॥ 108 ॥

ಲಕ್ಷ್ಯಂ ॥

ದಶನಾರಕ್ತತೆಗೆ ॥

ವೃ ॥ ತೊಳಪ ದಂತವುರೀಚಿಸಂತತಿ ಪರ್ವಿ ಬಳ್ವಳನೀಳ್ದು ಗೊಂ
ದಳಿಸಿ ಬಾಳವ್ಯಗಾಂಕದೀಧಿತಿಜಾಳವುಂಜರಿಗಳ್ ಜಗ ।
ದ್ವಳಯವುಂ ಬೆಳಪಂತೆ ಬಂದು ಸಭಾಂತರಾಳವುನೆಲ್ಲವುಂ
ಬೆಳಗೆ ಭೂವಳಯಾಧಿಪಂ ನುಡಿಗುಂ ಸ್ವಚಿತ್ತಗತಾರ್ಥವುಂ ॥ 109 ॥

ಕಂ ॥ ಕುಂದದಳಧವಳನೃಪದಶ
ನೇಂದುಜ್ಯೋತ್ಸ್ನಾವ್ಯತಾಚ್ಛಜಲಪರಿಷೇಕಂ ।
ವೃಂದಿಸುವಂತಾದುದು ನೃಪ
ನಂದನೆಯೆರ್ದೆಯೊಳಗೆ ಬಳೆದ ಶೋಕಾನಳನಂ ॥ 110 ॥

ಪ್ರಿಯಂಗುಕುಸುವೂಪೀತತ್ವಕ್ಕೆ ।

ಕಂ ॥ ಇವಳೀಪ್ರಿಯಂಗುಕುಸುವು
ಚ್ಛವಿಲಸಿತಶ್ಯಾಮಕುಚತಟಾಂತದೊಳೊಪ್ಪಿ ।
ರ್ಪುವು ತಾರಹಾರರುಚಿ ನೀ
ಳವೇದಿಕಾಂತರದೊಳೆಸೆವ ಪೂವಲಿಗಳವೋಲ್ ॥ 111 ॥

ಪದ್ಮಕುಟ್ಮಳಾಹರಿತತ್ವಕ್ಕೆ ॥

ವೃ ॥ ತೆರೆಯ ಪೊಯ್ಲೊಳೆ ತೆರಳ್ದು ಬರ್ಪ ವಿ
ಸ್ಫುರಿತಶಂಖನಿವಹಂ ಪಯೋಧಿಯೊಳ್ ।
ಕರವೆ ಚೆಲ್ವಿಸೆದು ಕಣ್ಗೆ ತೋರ್ಕುವುಂ
ಬುರುಹಕುಟ್ಮಳಕುಳಂಗಳಂತೆವೋಲ್ ॥ 112 ॥

ಇದು ಗುಣಂ

ಇದು ಕವಿನವುಯದೊಳ್ ಸದಕೀರ್ತನಪ್ರಕರಣಂ ದ್ವಿತೀಯಂ.

ನಿಯಮಾರ್ಥ ಪ್ರಕರಣಂ.

ಸೂತ್ರಂ ॥ 224 ॥ ಜಳಧಿಯೊಳೆ ತಿಮಿತಿಮಿಂಗಿಳ
ಗಿಳಮಕರಪ್ರಕರಶಂಖಸಂಭವಮೆಕ್ಕುಂ ।
ಮುಳರಹಿತತಾಮ್ರಪರ್ಣೀ
ಜಳದೊಳೆ ಶುಕ್ತಿಜಮಣಿಪ್ರಕಾಂಡಪ್ರಭವಂ ॥ 113 ॥

ಲಕ್ಷ್ಯಂ ॥

ತಿಮಿತಿಮಿಂಗಿಲಾದಿಗಳ್ ॥

ವೃ ॥ ಮಿಳಿರ್ವರಾಣಧ್ವಜಂಗಳ ನೆಲ್ಲ್ಗಳನೊಂದೆರೆಗೆತ್ತು ವಾರ್ಧಿಯೊಳ್
ಪೊಳೆವೆಳವಾಳೆಗಳ್ ಕರ್ದುಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ ।
ಗಳೆ ತಿಮಿಯಂ ತಿಮಿಂಗಿಳನಡಂಗುವಿನಂ ತವೆ ನುಂಗೆ ತತ್ತಿಮಿಂ
ಗಿಳಮುಮನಾತಿಮಿಂಗಿಳಗಿಳಂ ತವೆ ನುಂಗಿದುಜೊಂದು ತಾಣದೊಳ್ ॥ 114 ॥

ಕರಿಮಕರಂಗಳುಚ್ಚಳಿತಭಂಗುರತುಂಗತರಂಗಮೂಲೆಯಂ
ಕರರದನಾಗ್ರದಿಂದಿಳಿಯೆ ಮುತ್ತುಗಳಂತಿರೆ ನೂಸಿ ಪಾಯ್ವ ಶೀ ।
ಕರದೊಳೆ ನಾಂದು ಸೇಡುಗೊಳುತುಂ ಸುಳಿದೂದುವ ಗಾಳಿ ಬರ್ಪ ದೇ
ವರ ವರಕಾಂತೆಯರ್ಕ್ಕಳ ಪರಿಶ್ರಮವಂ ಕಳೆದತ್ತು ವಾರ್ಧಿಯೊಳ್ ॥ 115 ॥

ನೊರೆಯಿವಲ್ಲವು ತಳ್ತ ಕಂಬುದ ಬಳ್ಕಗಳ್ ಬಡಬಾನಲಾಂ
ಕುರವಿವಲ್ಲನ್ನು ರತ್ನದೀಧಿತಿಗಳ್ ತರಂಗವಿವಲ್ಲವು ।
ದ್ದುರಕುಳಾಚಳಪಕ್ಷಿಗಳ್ ಜಳಶೀಕರಂಗಳವಲ್ಲವಾ
ಪರೆದ ಮುತ್ತುಗಳೆಂಬ ಕಂಕೆಯನಾಗಿಕುಂ ಮುಕರಾಕರಂ ॥ 116 ॥

ತಾವ್ರಪರ್ಣಿಯೊಳ್ ಶುಕ್ತಿಜಕ್ಕೆ ॥

ಕಂ ॥ ಜಿನರಾಜಶಿಕುಗೆ ಧರೆಯೊಳ್
ಜನಿಯಿಸಲಂತಾನರೇಂದ್ರಪತ್ನಿಯೆ ದೊರೆ! ನೂ ·
ತನಶುಕ್ತಿಜಕ್ಕೆ ತಾಮ್ರ್ರನೆ
ಯೆನಿಸಲ್ ದೊರೆ ತಾಮ್ರಪರ್ಣಿ ತಾನೊಂದೆ ವಲಂ ॥ 117 ॥

ಇವು ಜಾತಿ ॥

ಸೂತ್ರಂ ॥ 225 ॥ ಹಿಮವದಗಂದ್ರಮೆ ಭೂರ್ಜ
ದ್ರುಮರಾಜಿಗೆ ಜನ್ಮಭೂಮಿ ಮಲಯಾದ್ರಿಯೆ ಬಂ ।
ಹಿಮವಚ್ಚಂದನಮಹಿರುಹ
ಸಮಿತಿಗೆ ಕುಲಗೇಹಮಿತರದೊಳ್ ಪುಟ್ಟುವೊಡಂ॥ 118 ॥

ಲಕ್ಷ್ಯಂ ॥

ಪ್ರಥಮಕ್ಕೆ ॥

ಕಂ ॥ ಪೆರಸುಲಿವ ಹಿಮವದವನೀ
ಧರಮೆಂಬುರಗಾಧಿಪತಿಯು ನಿರ್ಮೋಕದೊಳೇಂ ॥
ದೊರೆಯಾದುವೊ! ವಿದ್ರುತಜ
ರ್ಝರಭೂರ್ಜದ್ರುಮವನಂಗಳಂದಚಳಂಗಳ್ ॥ 119 ॥

ದ್ವಿತೀಯಕ್ಕೆ ॥

ವೃ ॥ ಇದು ಮಳಯಾಚಳಂ ಮಳಯಜಂ ಮಳಯಾನಿಳನೆಂದು ಪೆಂಪುವೆ
ತ್ತುದು! ಸಿರಿಕಂಡವುಂ ಪದೆದು ತೀಡುವ ಗಾಳಯುಮಿಲ್ಲಿ ಪುಟ್ಟು ಪೋ ।
ಗದು! ಪೊಸಸುಗ್ಗಿ ಮೂಗುವಡದಿಲ್ಲಿಯ ಕೋಗಿಲೆ ಬಂದ ವಮಾವು ಬೀ
ಯದು! ಕುಸುವೂಸ್ತನಾಜ್ಞೆ ತವದೆಲ್ಲಿಯುಮಿಲ್ಲಿಯ ನಂದನಂಗಳೊಳ್ ॥120॥

ಇದು ದ್ರವ್ಯಂ ॥

ಸೂತ್ರಂ ॥ 226 ॥ ಸುರಭಿಸಮಯದೊಳೆ ಕೋಕಿಳ
ವಿರುತಿನಿಬಂಧನಮನಬ್ದಕಾಲದೊಳೆ ಮದೋ ।
ದ್ಭುರಕೇಕಿಮಧುರಕೇಕಾ
ವಿರುತಿಯನಭಿಯುಕ್ತರಱಿದು ಪೇಳ್ವುದು ಕೃತಿಯೊಳ್ ॥

ಲಕ್ಷ್ಯಂ ॥

ಕಂ ॥ ಸುಗ್ಗಿಯ ಪುಗಿಲೊಳ್ ವುಂಕೊಂ
ಡುಗ್ಗಿಯನುಜ್ಜವಿಸಿದಂತೆ ವೋನವನುಱಿದೇಂ ।
ಬಗ್ಗಿಸಿದುವೊ! ಕೋಗಿಲೆಗಳ್
ವೊಗ್ಗಪ್ಪ ವಿಯೋಗಿಯಂ ಪುಗಲ್ ಪುಗಲೆನುತುಂ ॥ 122 ॥

ಘನಸಮಯದೊಳಿರ್ದು ಶಿಖಾ
ಸನದೊಳ್ ಶೈಳೇಯಸುರಭಿತಳದೊಳ್ ಗೋವ ।
ರ್ಧನಕಂದರದೊಳ್ ಶಿಖಿನ
ರ್ತನಮಂ ನೀಂ ನೋಡ! ಲಲಿತಕೇಕಾನ್ವಿತಮಂ ॥ 123 ॥

ಇದು ಕ್ರಿಯೆ ॥

ಸೂತ್ರಂ । 227 ॥ ಅವಿಶೇಷದಿನುದ್ಗಮದೊಳ್
ಧವಳತೆ ಮಾಣಿಕ್ಯನಿಕರದೊಳ್ ಶೋಣತೆ ಮೇ ।
ಳ್ವಿತಾನದೊಳ್ ವಿನೀಳತೆ
ವಿವಿಕ್ತವರ್ಣವ್ಯವಸ್ಥೆಯಿಂದೊಂದಿರ್ಕುಂ ॥ 124 ॥

ಲಕ್ಷ್ಯಂ ॥

ಪುಷ್ಪಶೌಕ್ಲ್ಯಕ್ಕೆ ॥

ವೃ ॥ ತಳರ ವೇಗಣಲರೋಳಗಳೋ! ಪೊಸಮುತ್ತುಗಳ್
ತೊಳಪುವೋ ಪವಳದಂಕುರದೊಳ್ ಪುದಿದಿಂತು ತ ।
ಮ್ಮೊಳೆ ವಿಚಾರಿಸಿ ಜನಂ ಕರವೊಪ್ಪುವುದಾಯ್ತು ಪ
ಲ್ಲಳ ಮುಗುಳ್ನಗೆಯ ಬಾಯ ಬೆಡಂಗು ಲತಾಂಗಿಯಾ ॥ 125 ॥

ಮೂಣಿಕ್ಯಶೋಣತ್ವಕ್ಕೆ ॥

ವೃ ॥ ತುಂಗವಿಚಿತ್ರಕೂಟನಿವಹಂಗಳೊಳೊಪ್ಪುವ ರತ್ನದಂಶುಜಾ
ಳಂಗಳ ಕೆಂಪು ತಳ್ತು ನಿಲೆ ಚಿಚ್ಚರದಿಂ ಗಿರಿಗಳ್ಗಧೀಶ್ವರಂ ।
ತಾಂ ಗಡವೆಂದು ವೀರುನಗದೊಳ್ ಪೊಣರ್ದಕ್ಕತುಳಕ್ಕೆ ವಂದು ನಾ
ರಂಗದ ತೊಂಗಲೇಱಿಸಿದ ಮೂಲ್ಕೆಯೊಳಿರ್ದುದು ವಿಂಧ್ಯಪರ್ವತಂ ॥ 126 ॥

ಮೇಘಕೃಷ್ಣತ್ವಕ್ಕೆ ॥

ಕಂ ॥ ಈ ಪುರುಷೋತ್ತಮನವನೀ
ಲೋಪಳಿಸಚ್ಛಾಯಕಾಯದೊಳ್ ವೆಸೆದು ಘನ ।
ವ್ಯಾಪಿ ತಟಿದ್ಘನರುಚಿಗನು
ರೂಪಂ ತಾನಕ್ಕೆ ನಿನ್ನ ತನು ತನುಮಧ್ಯೇ ॥ 127 ॥

ಇದು ಗುಣಂ ॥

ಇದು ಕವಿಸಮಯದೊಳ್ ನಿಯಮಾರ್ಥಪ್ರಕರಣಂ ತೃತೀಯಂ.

ಐಕ್ಯ ಪ್ರಕರಣಂ.

ಸೂತ್ರಂ ॥ 228 ॥ ದಾನವದೈತ್ಯಾಸುರಸಂ
ತಾನಕ್ಕಂ ನಾಗಸರ್ಪಸಂಹತಿಗಳ್ಗಂ ।
ತಾನೇಕತ್ವಂ ಸಮಯಾ
ಧೀನಮದಕ್ಕುಂ ರಸಾತಳಪ್ರತಿಬದ್ಧಂ ॥ 128 ॥

ಲಕ್ಷ್ಯಂ ॥

ವೃ ॥ ದನುಜರನಾಮುರಾರಿ ಗೆಲೆ ಕಾದುವ ಕಾಲದೊಳಾನದೇಕೆ ಪು
ಟ್ಟಿನೊ! ಗಡವಂದು ಪುಟ್ಟಿದೊಡೆ ದೈತ್ಯಕುಳಕ್ಕೆ ಕಳಂಕವಾಗಲೀ ।
ವೆನೆ! ದನುಜಾರಿಯೆಂಬ ಬಿರುದಂ ಸಲಲೀವೆನೆ! ಕಾದಿ ಪೋಗಲೀ
ವೆನೆ ತಲೆದೋಱಲೀವೆನೆ! ಮುಕುಂದನನೆಂದೊಲೆವಂ ಖಳಾಸುರಂ ॥ 129 ॥

ಸರ್ಪನಾಗಂಗಳ್ಗೆ ॥

ವೃ ॥ ಫಣಿರಾಜಂ ಬಾರಿಯಿಟ್ಟಿಪ್ಪ ದೊಡನುದಿನದಿಂ ಬರ್ಪ ಸರ್ಪಂಗಳಂ ಬ
ಲ್ಕಣೆ ತಾಕ್ಷ್ಯರ್ಕ್ಷಂ ಭಕ್ಷಿಸುತ್ತುಂ ಮಳಯಗಿರಿಯೊಳಿರ್ಪಂ ಬಲಂ ಕೇಳರೇ! ನೀ।
ವೊಣರಿರ್! ಮತ್ತೆಮ್ಮ ಭೂತಂ ಗರುಡನಖಮುಖೋತ್ಥತದಿಂ ನಾಗಚೂಡಾ
ಮಣಿಗಳ್ ಬಂದಲ್ಲಿ ನಿಚ್ಚಂ ಸಿಡಿವುವಱಿವೆನೇಕಿಂತು ವಿಭ್ರಾಂತರಪ್ಪಿರ್॥ 130 ॥

ಸೂತ್ರಂ ॥ 229 ॥ ಶಶಧರಲಕ್ಷ್ಮದೊಳಕ್ಕುಂ
ಶಶಹರಿಣಂಗಳ್ಗನನ್ಯಭಾವಂ ಸುಮನೋ ।
ವಿಶಿಖಧ್ವಜಾಂಕದೊಳ್ ನಿ
ರ್ವಿಶೇಷದಿಂ ಮತ್ಸ್ಯಮಕರಯುಗಳಕ್ಕೈಕ್ಯಂ ॥ 131 ॥

ಲಕ್ಷ್ಯಂ ॥

ಶಶಹರಿಣಂಗಳ್ಗೆ ॥

ವೃ ॥ ಉದಯಗಿರೀಂದ್ರರುಂದ್ರತಟದಿಂದೊಗೆತಂದ ಶಶಾಂಕನೆಂಬ ಸೊಂ
ಕದ ವೃಗವೈರಿ ಕೂಡೆ ಪರಿದರ್ಬಿಸಿ ಪರ್ಬಿದ ದುಸ್ತವುಸ್ತವೋ ।
ನ್ಮದಕರಿಯೂಥವುಂ ಪೆಳಱೆ ಪೋಲೆ ಪಿಸುಳ್ದ ತದುತ್ತವೂಂಗದಿಂ
ಕೆದಱಿದ ವೌಕ್ತಿಕಾವಳಿವೊಲಾದುವು ವುೂಡಣ ತಾರಕಾಳಿಗಳ್ ॥ 132 ॥

ಕಂ ॥ ಕೊಳನಂ ಗಗನಂ ನೀರ್ವೂ
ಗಳನುಡುತತಿ ನೀರನಚ್ಚವೆಳ್ದಿಂಗಳ ತೆ ।
ಳ್ಪಲ್ಲಿಸೆ ಹರಿಣಾಂಕವುಂಡಳಿ
ವಿಲ್ಲಿಸಿದುದಳಿ ಪಾಯ್ದ ಬಿಳಯು ತಾವರೆಯಲರಂ ॥ 133 ॥

ವುತ್ಸ್ಯವುಕರಂಗಳ್ಗೆ ॥

ವೃ ॥ ಚಿತ್ತಜನಿಕ್ಷ್ವುಚಾಪದಳವಂ ವಿುಗೆ ಕೊಂಕಿದ ಪುರ್ವು ಕಣ್ಣು ಬೆ
ಳ್ಪೆತ್ತವುನಂಗರಾಜನರಲಂಬಿನ ಲೀಲೆಯುನಾಳೆ ಕಾವುನಾ ।
ರ್ದತ್ತಿದ ವಿಾನಕೇತನವುನೊತ್ತರಿಸುತ್ತಿರೆ ಕೇಶಹಸ್ತವುು
ನ್ಮತ್ತವುರಾಳಿಗಾವಿುನಿ ವೆಱುಳ್ ರತಿಯಂ ಗೆಲೆವಂದು ನೋಡಿದಳ್ ॥ 134 ॥

ಧನು ಕಾವುಂಗಿಕ್ಷ್ವುದಂಡಂ ಪಱಿಯಿಗೆ ವುಕರಂ ಬಾಣಸಂಘಾತವುಚ್ಚಂ
ನನೆಯೆಂಬೀಚಿಹ್ನವಿಲ್ಲಿಂಬಿನಿತೆ ವುನಸಿಜಾಕಾರವೂಕಾರವೇಂ ಜಾ ।
ಣನೊ! ಧಾತ್ರಂ ರೂಪನಿಷ್ಪಾದನವಿಧಿಯೊಳವಂವುನ್ನವೇಂ ನೋಂಪಿಯಂ ನೋಂ
ತನೊ! ಪೇಳೆಂಬಂತು ಬಂದಂ ಸುಕವಿಜನವುನೋವೂವಾನಸೋತ್ತಂಸಹಂಸಂ ॥
॥ 135 ॥

ಇದು ಜಾತಿ ॥

ಸೂತ್ರಂ ॥ 230 ॥ ಕ್ಷೀರಕ್ಷೀರಾಂಬುಧಿಗಂ
ಕ್ಷೀರೋದಭವಾತ್ರಿಜೇಂದುಗಳ್ಗಂ ವುುರಜಿ ।
ನ್ನಾರಾಯಣಗರ್ಕಂ ಸಿರಿಗಂ
ಶ್ರೀರಾವುಿಗವುತನುಗಂ ಭವಾರಿಗವೈಕ್ಯಂ ॥ 136 ॥

ಕ್ಷೀರಕ್ಷೀರಾಂಬುಧಿಗಳ್ಗೆ ॥

ವೃ ॥ ಇದಱೊಳ್ ಗರ್ಭಂಗಳಂ ಕಟ್ಟುವ್ವಿನಕಿರಣಶ್ರೇಣಿಗಳ್ ಪಂಚರತ್ನ
ಕ್ಕಿದು ದಲ್ ತಾನಾಕರಂ ನೀರ್ ತನಗೆ ನವಿದೆಯಾದಗ್ನಿಯಂ ತಾಳ್ದಿ ವೆರ್ಚಿ ।
ರ್ದುದು ಚಂದ್ರಂ ಪುಟ್ಟಿದಂ ಮತ್ತಿದಱೊಳೆ ಸುರರುತ್ಪತ್ತಿ ಕೇಳಲ್ಲಿ ಕಕ್ರಂ
ಗದಿರ್ದಯ್ತಂದದ್ರಿಗಳ್ಗಾಶ್ರಯಮಿದಱೊಳದಭ್ರಾಭ್ರವೃಂದಂಗಳಿರ್ಕುಂ ॥137॥

ವೇರು ಕಲಂಕೆಯುಂ ಕದಡಿತೋ! ಬಡಬಾನಳನಲ್ತೆ ಕಾಯ್ದುದೋ
ಮೂರುತಿ ಕಟ್ಟಿ ವೇಣ್ ಪಱುದುದೋ ಗಿರಿಗಳ್ ಬರೆ ವಜ್ರಿಗಳ್ಕತೋ ।
ಸಾರಸವುಸ್ತವಸ್ತುಗಳನಾರ್ಕೊಳೆ ತಪ್ಪುದೊ! ಮತ್ತಮಂತೆ ಗಂ
ಭೀರತೆ ಸಂದುದೆಂದು ಹರಿ ವೆಂಚ್ಚಿ ಕರಂ ಪೊಗಲ್ದಿಂ ಸವುದ್ರವುಂ ॥ 138 ॥

ಕ್ಷೀರೋದಭವಾತ್ರಿಜೇಂದುಗಳ್ಗೆ ॥

ಕಂ ॥ ಅತ್ರಿಯ ಪಿರಿಯ ಮಗಂ ಭುವ
ನತ್ರಯಸಂಸ್ತುತ್ಯಕೀರ್ತಿ ಸೋವುಂ ಸಕಲ ।
ಕ್ಷತ್ರಕುಲಪೂಜ್ಯನವುಲಚ
ರಿತ್ರಂ ಪ್ರೋದ್ದಾವುಸೋವುವಂಕಲಲಾವುಂ ॥ 139 ॥

ವೃ ॥ ಪಾರಾವಾರಂ ತುಹಿನಕಿರಣಂ ಕುಂದೆ ಕುಂದಿತ್ತು ಮತ್ತಂ
ತೋರೊಂದೋರೊಂದವ್ಯತಕಳೆಯುಂ ಪೆರ್ಚಿ ಪೆರ್ಚಲ್ ತಗುಳ್ದ ।
ತ್ತಾರುಂ ವುಕ್ಕಳ್ಗೆಱಗುವನಿತಂ ಬಂಧುಗಳ್ಗೊಯರುಳ್ಪೊ
ಕ್ಕಾರಯ್ವಾಗಳ್ ತನಯಜನಿತಸ್ನೇಹವೂರ್ಗಂ ಬಲಸ್ಥಂ ॥ 140 ॥

ನಾರಾಯಣವುರಾರಿಗಳ್ಗೆ ॥

ವೃ ॥ ಉರದೊಳ್ ಕೌಸ್ತುಭರತ್ನವುಂ ಕವುಳೆಯುಂ ಶ್ರೀವತ್ಸವುಂ ತೋಳ್ಗಳೊಳ್
ಕರವಾಳ್ ಬಿಲ್ ಗದೆ ಚಕ್ರವುಲ್ಲಿಯೆ ವುಲಂಗಿರ್ಪಳ್ ಜಯಶ್ರೀ ನಿಜೋ ।
ದರದೊಳ್ ನೀರಜಗರ್ಭನಂ ತ್ರಿಜಗವುಂ ಪೊಕ್ಕಿರ್ಪುವೆಂದಂದಹೀ
ಶ್ವರತಲ್ಪಂ ಯದುವಂಕನಲ್ಲದೆ ಪೆಱಂ ಪೆಂಪಿಂಗೆ ವುಯ್ವಾಂಪನೇ ॥ 141 ॥

ಶ್ರೀವಾವುವಿಭೂತಿಗಳ್ಗೆ ॥

ವೃ ॥ ಆವ್ಯತಪಯೋಧಿವುಂಥನದೆ ಪುಟ್ಟಿದ ಪದ್ಮವನಾಂತರಾಳದೊಳ್
ರವಿಯೆಸಪದ್ಮನಾಭನುರದೊಳ್ ನೆಲಸಿರ್ಪ ವುಹಾನುಭಾವೆಯೆಂ ।
ಕವುಳೆಯೆನಿನ್ನೆಗಂ ಕುರುವುಹೀಪತಿಯೊಳ್ ನೆಲಸಿರ್ದೆನೀಗಳು
ತ್ತವುಪುರುಷೋತ್ತವುಂ ಭಿಸಸೆ ಪಾಂಡವರೊಳ್ ನೆಲಸಲ್ಕೆ ಪೋದವೆಂ॥ 142 ॥

ಮನೋಜಶಂಕರಾರಿಗಳ್ಗೆ ॥

ವೃ ॥ ಸುರಭಿಶರಂಗಳಂ ನಯನದೊಳ್ ಕುಡುಪುರ್ವಿನೊಳಕ್ಷಂಚಾಪಮಂ
ಪರಿಚಿತವಿಜಾನಕೇತನವನಾವಗವೊಪ್ಪುವ ಕೇಶಹಸ್ತದೊಳ್ ।
ನಿರವಿಸಿ ಬಯ್ತು ಮೆಯ್ಗೊರೆದು ಶೂಲಧರಂಗಗಿದರ್ಪನಲ್ಲಿ ವೆಂ
ಡಿರ ಮಱೆಯೊಳ್ ಮನೋಜನನೆ ಚೆಲ್ವಿಸೆವರ್ ಕಡುಗಾಡಿಕಾರ್ತಿಯರ್ ॥143॥

ಇದು ದ್ರವ್ಯಂ ॥

ಸೂತ್ರಂ ॥ 231 ॥ ಮುಕುಳನನಿಮಿಳನಂಗಳ್
ವಿಕಾಸಹಾಸಪ್ರಬೋಧನೋನ್ಮೇಷಂಗಳ್ ।
ಪ್ರಕಟಿಸುಗುಮೈಕ್ಯಮಂ ನಿ
ರ್ವಿಕಲ್ಪದಿಂ ಗೌಣಮುಖ್ಯವೃತ್ತಿಕೃತಂಗಳ್ ॥ 144 ॥

ಲಕ್ಷ್ಯಂ ॥

ಮುಕುಳನನಿಮಿಳನಂಗಳ್ಗೆ ॥

ಕಂ ॥ ವಿನಿಮಿಳನ್ನೀಳಾಂಬುಜ
ವನಮಿಷದ್ವಿಕಸದರುಣಸರಸಿರುಹವನಂ ।
ದಿನಮುಖಮಂಳಸಂತತಿಗೇಂ
ಜನಿಯಿಸಿದುದೊ! ಭಿನ್ನರುಚಿಗಳಂ ಪರಿಮಳದೊಳ್ ॥ 145 ॥

ವಿಕಾಸಹಾಸಂಗಳ್ಗೆ ॥

ವೃ ॥ ಪೊಸವಿಸಿಲೊಳ್ ಮುಗುಳ್ಗಳ್ ನಡಿಲ್ದುಸಿರ್ವಂತೆಸ
ಱ್ಮಸಗಿ ಮುಗುಳ್ನಗೆನಕ್ಕ ತೋಱೆ ಮದಾಳಿಗಳ್ ।
ನುಸುಳೆ ತೊವರ್ತ್ತಿರೆ ಕಂಪಲರ್ಚ್ಚುವನಂಬುಜ
ಪ್ರಸರವನಾಳಿ ಬೆಳಪ್ಪನೀಗೆ ವರಂಗಳಂ ॥ 146 ॥

ಅದಲ್ಲದೆಯುಂ ॥

ವೃ ॥ ನಗೆಯಂ ಬಲ್ಮುಗುಳ್ಗಳ್ಗೆ ಕಂಪನಳಿಗಳ್ಗಾನಂದಮುಂ ಕೋಕಿಳಾ
ಳಿಗೆ ಸೊರ್ಕಂ ಗಿಳಿಗಳ್ಗೆ ಬೀರಸಿರಿಯಂ ಕಾವಂಗೆ ಬೆರ್ಚಂ ವಿಯೋ ।
ಗಿಗೆ ಪೆರ್ಚಂ ಪ್ರಿಯಗೆಯ್ದೆ ಮಾಡಿ ವಿಪಳತ್ಪುಷ್ಪಾಳಿ ತೆಂಗಾಳ ತೀ
ಡುಗುಮಳ್ಳಿಡೆ ಸಮಸ್ತದಂಪತಿಸುಖಕ್ರೀಡಾಪರಿಶ್ರಾಂತಿಗಳ್ ॥ 147 ॥

ಕಂ ॥ ಅಲರ್ದ ಮೊಗಂ ಕಿಱುದಾದುದು
ನೆಲಸಿದುದಲಲೆರ್ದೆಯೊಳಪ್ಪುಕಣಿಸಿರ್ದುವು ಚಾ ।
ಪಲನಯನಕುವಲಯಂ ಸು
ಯ್ಯಿಲರಾದಂ ಬಿಸಿಯುವಾದುವಾಸತಿಗಾಗಳ್ ॥ 148 ॥

ತೃಷ್ಣಾಭಿಲಾಷಂಗಳ್ಗೆ ॥

ಕಂ । ದೂರಾವತೀರ್ಣಪಂಪಾ
ವಾರಿಯನಿದನಲ್ಲತು ಕಲ್ಪುತು ತಳವೆಯ್ದುವಿನಂ ।
ನೀರಡಿಸಿ ನೀರಜಾನನೆ
ಪೀರಲ್ ಬಗೆದಪ್ಪುವೆನ್ನ ಕಣ್ಣಂ ಮನಮುಂ ॥ 149 ॥

ಇದು ಕ್ರಿಯೆ ॥

ಸೂತ್ರಂ ॥ 232 ॥ ಹರಿತಾಸಿತನೀಲಶ್ಯಾ
ಮರೋಚಿಗಂ ಪೀತರಕ್ತವರ್ಣಂಗಳ್ಗಂ ।
ದೊರೆಕೊಳ್ಗುಂ ಗೌರಶ್ವೇ
ತರುಚಿಗಮಿತರೇತರಾಶ್ರಯಂ ವರ್ಣ್ಯಕ್ಯಂ ॥ 150 ॥

ಲಕ್ಷ್ಯಂ ॥

ಕೃಷ್ಣಹರಿತಂಗಳ್ಗೆ ॥

ವೃ ॥ ಮರಕತತ್ವಿಷಮಾ ಯಮುನಾಜಳಂ
ಸ್ಫುರದುರುಸ್ಫಟಿಕೋಪಳಕಾಂತಿಯೊಳ್ ।
ಪರಸಿ ಗಂಗೆಯ ವಾರಿಯೊಳ್ಪೊಪ್ಪುಗುಂ
ಹರಿಹರದ್ವಯಸಂಗಮದಂದದಿಂ ॥ 151 ॥

ನೀಲಶ್ಯಾಮಂಗಳ್ಗೆ ॥

ವೃ ॥ ಪದಥೂಳಹ್ಲೋಭದಿಂ ದಿಗ್ಯುವತಿವದನಮಂ ಶ್ಯಾಮಳಂಮಾಡಿ ಮಾಣ್ದಿ
ರ್ದುದೆ! ಕೋಪೋದ್ಭಿನ್ನಗಂಡಸ್ಥಳಕರಟಿಘಟಾವ್ಯೂಹನೀಲಾಂಬುದಾಟೋ ।
ಪದಿನತ್ಕಾಗಾಸ್ತಶಸ್ತ್ರಪ್ರಕರಕಿರಣಸಂಘಾತತೀವ್ರಾತಪೋದ್ಯೋ
ತದಿನರ್ಧಶ್ಯಾಮಳಂಮಾಡಿದುದು ದಿವಮುಮಂ ಕೂಡೆ ರಾಜೇಂದ್ರಸೈನ್ಯಂ ॥

ಪೀತರಕ್ತಂಗಳ್ಗೆ ॥

ವೃ ॥ ಪ್ರವಿರಾಜತ್ಕಳಧೌತಪಿಂಗರುಚಿಮದ್ದಂಷ್ಟ್ರಾಗ್ರದಿಂದಿಕ್ಕಿ ದಾ
ನವರಂ ಧಾತ್ರಿಗೆ ರಾಗಮೂಗೆ ನೆಗಳ್ದುದಿಕ್ರೋಡನಾಕಾರದಿಂ ।
ತವೆ ಪೆಂಕೊಂಡು ತಮಸ್ತಮಃಪ್ರಕರಮಂ ಬಾಳಪ್ರವಾಳಾಂಕುರ
ಛವಿಯಿಂ ಚಂದ್ರನುದಂಕಾಲೀಶಯಿನದೊಂದಾನಂದಮಂ ಮಾಡಿದಂ ॥ 153 ॥

ಅಂತುಮುದಲ್ಲದೆಯುಂ ॥

ವೃ ॥ ವಿದಳತ್ಕಿಂಕಾಕಿಂಕಿರಾತಸುಮನಃಕಾಶ್ಮೀರಸಂಧ್ಯೋದ್ಗತಾಂ
ಬುದಪೀತಾಂಬರನಿಂದ್ರನೀಲವಿಲಸನ್ನೀಲಾತಸೀನೀಲನೀ ।
ರದನೀಲಾಂಬುಜವರ್ಣಸರ್ಣವಯಶಂ ಕೃಷ್ಣಂ ಧರಾದೇವಿಗೊ
ಪ್ಪುದನಂತರ್ಜ್ವಲದೌರ್ವವಹ್ನಿಲವಣಾಂಭೋರಾಶಿಲೀಲಾವಹಂ ॥ 154 ॥

ಗೌರಶ್ವೇತಂಗಳ್ಗೆ ॥

ಕಂ ॥ ಹಿಮುವದ್ಗಿರಿಕಟಕದಿನೊಗೆ
ದವುರನರಿತ್ಸೋತವೆಂಬ ಮಾತಂ ಪಡೆದೇಂ ।
ಹಿಮುಗೌರಹಾರವೆಸೆದುದೊ!
ಹಿಮುಶೈಲಶಿಲಾವಿಶಾಲವಕ್ಷಸ್ಥಲದೊಳ್ ॥ 155 ॥

ಸೂತ್ರಂ ॥ 233 ॥ ನಯನಾದಿವಿವಿಧವರ್ಣಾ
ಶ್ರಯಂಗಳೊಳ್ ಬೀಱೆವೇಱೆ ಬೀಱೊಂದನೆ ನಿ ।
ರ್ಣಯವೆಪ್ಪ ವರ್ಣಮೆಂ ಸಮು
ದಯದಿಂದಂ ಪೇಳ್ವಿ ವೆಂಬ್ ಯಥಾಸಂಭವವೆಂ॥ 156 ॥

ಲಕ್ಷ್ಯಂ ॥

ಕಂ ॥ ಎನೆಯಿಕ್ಕದ ಪದಪಿಂ ನೋ
ಡುವ ಪುರಲಲನೆಯರ ಬಿಳಯ ಕಣ್ಗಳ ಬೆಳಗಿಂ ।
ಧವಳಿಸಿದಂತೆಪೊಲಾದುವು
ಗವಾಕ್ಷಜಾಳಂಗಳವುರತನಯುಂಗಾಗಳ್ ॥ 157 ॥

* * * * * *

ವಿಶ್ರವರ್ಣಂಗಳ್ಗೆ ॥

ವೃ ॥ ವದನಾಬ್ಜಸವಗಂಧಲಂಪಟರಟದ್ಭೃಂಗಂಗಳಂ ಸೋಯಲೆ
ತ್ತಿದ ನೀಳೋತ್ಪಳವಾಳೆಯಂ ದ್ವಿಗುಣಿಸಲ್ಕಾರ್ತತ್ತು ಕರ್ಣಾಂತಗಾ ।
ವಿ ದಳನ್ನೀಳನರೋಜರೋಚಿ ಕುವುದಜ್ಯೋತ್ಸ್ನವದಾತಪ್ರಭಂ
ವುದನೋತ್ತೀಜಿತಬಾಣವಿಭ್ರವುವುಪಾಂಗಾಳೋಕನಂ ನಲ್ಲಳಾ ॥ 159 ॥

ಗಣಿಕೆಯರ ವಿಳಾಸಾಗಾರದೊಳ್ ಜಾಳವಾರ್ಗ
ಪ್ರಣಯಿನಿಯರಪಾಂಗಶ್ರೇಣಿಗಳ್ ಮೂಱುಬಣ್ಣಂ ।
ವೆಣೆದೊದವೆ ಗವಾಕ್ಷಸ್ಥೇಂದುಕಾಂತೇಂದ್ರನೀಲಾ
ರುಣಮಣಿಕಿರಣಂಗಳ್ ಪೊಣ್ಮುವಂತಾದುವಾಗಳ್ ॥ 160 ॥

ಇದು ಗುಣಂ ॥

ಸೂತ್ರಂ ॥ 234 ॥ ಅನುಗತಮಪ್ಪಂತಿರೆ ಚೇ
ತನಧರ್ಮಂಗಳನಚೇತನಂಗಳೊಳಂ ಲೋ ।
ಚನಚರಣಾದಿಯೊಳಂ ದ್ವಿ
ತ್ವನಿಷ್ಠಮುಂ ಜಾತಿಯುಂ ವಿವೇಚಿಪರರೆಬರ್ ॥ 161 ॥

ಲಕ್ಷ್ಯಂ ॥

ಪೂರ್ವಾರ್ಧಕ್ಕೆ ॥

ವೃ ॥ ತೋಳ ಘಟ್ಟಣೆಗುಚ್ಚಳಿಸುತ್ತುಂ ಸೂಸುವ ಶೀಕರವಾರಿ ವು
ಕ್ಕಾಳಯಿಂದಭಿಷೇಕವೆಂ ಗೆಯ್ವಂತೊಪ್ಪೆ ಕಳಿಂದಜೆಯಂ ವನೋ ।
ಲೀಳೆಯಿಂ ಪುಗೆ ತನ್ನದಿ ಕೃಷ್ಣಂಗಾಟಿಸಿದಂತಿರೆ ಲೋಲಕ
ಲ್ಲೋಳಕೋವುಲಹಸ್ತದ ಪೊಯ್ದಳ್ ವುಂದಲಿಯಂ ಕವುಲಾಕ್ಷನಾ ॥ 162 ॥

ಉತ್ತರಾರ್ಧಕ್ಕೆ ॥

ವೃ ॥ ಕಡೆದವೊಲೊಪ್ಪುವಾಕೃತಿ ತೊದಳ್ನುಡಿ ವೆಲ್ನಡೆ ಚೆಲ್ವನಪ್ಪ ತೆ
ಳ್ನಡು ನಳತೋಳ್ ಪೊದಳ್ದಿಧರವೊತ್ತಿದೆಯುಂ ನಿಱುಗೊಂಡ ಚುಂಚು ಸೋ
ರ್ಮುಡಿ ಕಡುನುಣ್ಪುವೆತ್ತ ತೊಡೆ ತುಂಬಿದ ಪೀನನಿತಂಬಬಿಂಬವೊ
ರ್ಮಡಿತೆಯೆನಿಪ್ಪ ಕಣ್ ಕರವೆಂ ರಂಜಿಸೆ ಬಂದರಿಳೀಶಕಾಂತೆಯರ್ ॥ 163 ॥

ಸೂತ್ರಂ ॥ 235 ॥ ಪದದೊಳ್ ಮಾಟ್ಪಿಂತಿರೆ ಮಾ
ಟ್ಪುದು ನಿತ್ಯಂ ಪಾದದೆಡೆಗಳೊಳ್ ಸಂಹಿತೆಯಂ ।
ತುದಿಯೊಳಮರ್ಧದೊಳಂ ಮಾ
ಡದಿರ್ಕ್ಕೆ ಮೇಣ್ ಮಾಟ್ಕಿ ತಾನದೆಲ್ಲಿ ಯಥೇಷ್ಟಂ॥164॥

ಲಕ್ಷ್ಯಂ ॥

ವೃ ॥ ವೃಡನುಡುರಾಜಪನ್ನಗವಿರಾಜಿಜಟಾವುಕುಟಂ ಕಪರ್ದಿ ನೂ
ರ್ಮುಡಿ ಧವಳಂ ಸುರಾಸುರಕದಂಬಕಸೇವ್ಯಪದಾಂಬುಜದ್ವಯಂ ।
ಅಡರೆ ವೃಡಾನಿಗನ್ಯಕುಳಶೈಳಕುಳಿಂಗಳ ನಾಡೆ ರಯ್ಯವು
ಪ್ಪೆಡೆಗಳನಲ್ಲವಂ ನೆಱೆಯೆ ತೋರ್ಪುದು ಜೇಳ್ಕೆಯೆ ಬಂದನೀಶ್ವರಂ ॥ 165 ॥

ಕಂ ॥ ಸೋತಂ ಪುರೋಹಿತಂ ಪೆರ
ಸಾತತತಿವಿರಪ್ರಭೇದನೋಪಾಯವಿದೆಂ ।
ದಾತವುವುಂ ಕಿಡಿಸಲ್ ಸಂ
ಜಾತನಯಂ ಬಗೆದು ತದ್ಗುಹಾಭಿತ್ತಿಗಳೊಳ್ . ॥ 166 ॥

ಇಲ್ಲಿಯೆ ವೇಱೆಂದು ಮಹೀ
ವಲ್ಲಭದೂತಂಗೆ ನುಡಿಯೆ ದಶನಾಂಕುಗಳಂ ।
ಮೆಲ್ಲನೆ ದಂತಚ್ಛದವೃದು
ಪಲ್ಲವದೊಳ್ ನಿಱಿಸಿ ಮರಳೆ ದೂತಂ ನುಡಿದಂ ॥ 167 ॥

ಅರಸುಗಳಿಲ್ಲಂ ಬಾಯ್ಕೋ
ಳ್ದರೆಂದುವಾಶಾಂತರಂಗಳಳ್ಕದುವೆಂದುಂ ।
ಧರಣಿತಳಂ ಬಣ್ಣಿಸೆ ಕೇ
ಳ್ದ ರಾಗಿಸುತ್ತಿರ್ಪಮಿನ್ನಮೇಂ ತೊದಳುಂಟೇ ॥ 168 ॥

ಎರಡಱೊಳಂ ಚಂದ್ರಾದಿ
ತ್ಯರನಾಗಳ್ ಬರೆದು ಕಾಕಿಣೀರತ್ನದೊಳಂ ।
ಸ್ಫುರಿತಮಣಿರತ್ನದೊಳವುಂ
ತರಿಸುತ್ತುಂ ಯೋಜನಕ್ಕವುಂತೊಂದೊಂದಂ ॥ 169. ॥

ಸೂತ್ರಂ ॥ 236 ॥ ಸಂಬಂಧದೆ ಸಂಬಂಧದೊ
ಳಂ ಬಹುಳಂ ಷಷ್ಠಿಯಕ್ಕುವೊಂದಿಗೆ ನೆಗಳ್ಗುಂ ।
ಬಿಂಬಾಧರಾದಿಶಬ್ದವೊ
ಡಂಬಟ್ಟಿರೆ ಮಧ್ಯಪದವಿಲೋಪಿಸಮಾಸಂ ॥ 170 ॥

ಲಕ್ಷ್ಯಂ ॥

ಕಂ ॥ ಕವುಳದ ಕೋವುಳಕಂದಾ
ಗ್ರಿವಾಂಕುರಾಸ್ವಾದವಾದವೊದವಿಸೆ ವುದವುಂ ।
ಕವುಳಾಕರದೊಳೆ ಹಂಸಂ
ರವಿಯಿಸುಗುಂ ಪದ್ಮಿನೀರಜೋರುಣಿತಾಂಗಂ ॥ 171 ॥

ಬಿಂಬಾಧರಕಾಂತಿಪ್ರತಿ
ಬಿಂಬಂ ಸುಲಿವಲ್ಲೊಳೆಸೆಯೆ ಪಲ್ ಸುಲಿಯವೆ ಗೆ ।
ತ್ತೇಂ ಬಾಲೆ ವುಗ್ದೆಯೋ ವು
ತ್ತಂ ಬಿಡದಡಿಗಡಿಗೆ ನೋಡುವಳ್ ಕನ್ನಡಿಯಂ ॥ 172 ॥

ಸೂತ್ರಂ ॥ 237 ॥ ಭಂಗುರಭಿದುರಚ್ಛಿದುರಪ
ದಂಗಳ್ ಸಲೆ ಕರ್ಮಕರ್ತೃವೊಳ್ ಕರ್ತೃವೊಳಂ ।
ಸಂಗತಿವೆತ್ತಿರ್ಪಂ ಕವಿ
ಪುಂಗವಸಮಯವ್ಯವಸ್ಥೆಯಿಂದಂ ಕೃತಿಯೊಳ್ ॥ 173 ॥

* * * * * *

ಲಕ್ಷ್ಯಂ ॥

ಕಂ ॥ ಸಂಗತನಿಜಹಸ್ತಕನಿ
ಷ್ಕಾಂಗುಲಿಧೃತವುಂ ಪ್ರಿಯಾವುನಃಖೇದಲತಾ ;
ಭಂಗುರವುಂ ರವಿವುಂಡಳ
ದುಂಗುರವುಂ ರಘುಜನಿತ್ತನಾವನ ಕೆಯ್ಯೊಳ್ ॥ 175 ॥

ವೈ ॥ ಪ್ರಾಲೇಯಾದ್ರಿನವಪ್ರಗೂನಭಿದುರಂ ಗಂಗಾಸರಿಲ್ಲೋಲಕ
ಲ್ಲೋಲಾಲಂಭೋಲವಶೀಕರಂ ಚಿರಗತಿಶ್ರಾಂತಾವರಸ್ತ್ರೀತನು ।
ವ್ಯಾಲಿಪ್ತಾಗರುಕಾಂಕುವದ್ರವಹರಂ ಮಾದ್ಯತ್ಪಿಕಾಲಾಪವಾ
ಚಾಲಂ ಮಾರುತನೊಯ್ಯನೂದಿ ಕಳೆದತ್ತಾದಂಪತಿಶ್ರಾಂತಿಯಂ ॥ 176 ॥

ಅದಱಿಂನೀತನನಾತನೆ ಕೊಂದು ವಿ
ಚ್ಛಿದುರನಂಗರನಕ್ಕೆವಂ! ಕೊಲ್ಲೆನೆಂ ।
ದೊದಱಿ ಗಾಂಡಿವಿ ಖಂಡಿಸಿದಂ ವಿಹಾ
ಸ್ತ್ರದಿನರಾತಿಯ ಕೆಯ್ದುಗಳಿಲ್ಲವಂ ॥ 177 ॥

ಮತ್ತಮುಱೆದೆಡೆಗಂ ನೋಡಿಕೊಳ್ವುದು ॥

ಸೂತ್ರಂ ॥ 238 ॥ ಗದ್ಯಮೆಯಂ ಪದ್ಯಮೆಯಂ
ತದ್ಯಮೆಳವಿಮಿಶ್ರಮೆಂದು ಕೃತಿ ಮೂಱು ತೆಱಂ ।
ಗದ್ಯದೊಳೆ ನಮೆದುಮಂತವ್ರ
ಹೃದ್ಯವಚಃಪ್ರೌಢಿಗಳ್ ಕಥಾಖ್ಯಾಯಿಕೆಯೊಳ್ ॥ 178 ॥

ಸೂತ್ರಂ ॥ 239 ॥ ದೊರೆವೆತ್ತ ಪದ್ಯದಿಂದಂ
ವಿರಚಿಸಿದುದು ಸರ್ಗಬಂಧಮಕ್ಕುಂ ಕಾವ್ಯಂ ।
ಬೆರಸಿ ಬರೆ ಗದ್ಯಪದ್ಯಮು
ವೆರಡುಂ ಕೃತಿ ಚಂಪುವೆಂಬ ಪೆಸರಂ ಪಡೆಗುಂ ॥ 179 ॥

ಸೂತ್ರಂ ॥ 240 ॥ ಇಡುಕುಂಗಬ್ಬಂ ಮುಕ್ತಕ
ವೊಡಂಬಡಲ್ ನೆಗಱೆ ಪಲವುಮೇಕಕ್ರಿಯೆಯೊಳ್ ।
ಪಡೆಗುಂ ಕುಳಕಾಖ್ಯೆಯನೆಡೆ
ಮಡಗದನೇಕಾರ್ಥವಸ್ತುಕಥನಂ ಕೋಶಂ ॥ 180 ॥

ಸೂತ್ರಂ ॥ 241 ॥ ಸಂದಿಸಿರೆ ಕಂದಮುಂ ಪೆಱ
ತೊಂದೆಱೆಯ ವೃತ್ತಜಾತಿಯುಂ ಪದಮುವ್ರ ತ ।
ಳ್ತೊಂದಿರೆ ಪನ್ನೆರಡುವರಂ
ಸಂದುದು ಮೆಲ್ವಾಡೆನಿಕ್ಕುಮದು ಕನ್ನಡದೊಳ್ ॥ 181 ॥

ಸೂತ್ರಂ ॥ 241 ॥ ಪದಿನಯ್ದುಮಿರ್ವತಯ್ದುಂ
ಪದಂ ಯಥಾಸಂಭವಂ ಪ್ರಬಂಧದೆ ಮೆಯ್ಯೊಳ್ ।
ಪುದಿದೊದವಿ ನೆಗಱೆ್ವಾಡಂತದು
ಸದಲಂಕಾರಂ ರಸಾಸ್ಪದಂ ಪಾಡಕ್ಕುಂ ॥ 182 ॥

ಸೂತ್ರಂ ॥ 243 ॥ ಪಾಡುಗಳಿಂದಂ ತಱಿಸಲೆ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ ।
ಡಾಡುವರದಱಿಂ ದರ್ ಮೆ
ಲ್ವಾಡುಂ ರೂಢಿಯು ಬೆದಂಡೆಗಬ್ಬಮುಮಕ್ಕುಂ ॥ 183 ॥

ಸೂತ್ರಂ ॥ 244 ॥ ಪಲತೆಱದ ಪದ್ಯದಿಂದಂ
ಲಲಿತವಚೋರಚನನಿಚಯಪದ್ಧತಿಕೆಗಳಿಂ ।
ಸಲೆ ನಿಲೆ ಸಮೆದುದು ಸರಸಾ
ಖಿಲವರ್ಣನಮಾದೊಡದುವೆ ಬಾಜನೆಗಬ್ಬಂ ॥ 184 ॥

ಸೂತ್ರಂ ॥ 245 ॥ ನಗರಾರ್ಣವಸರಿದಟವೀ
ನಗಚಂದಾಕ್ರೋರ್ದಯರ್ತುಸಲಿಲಕ್ರೀಡಾ ।
ದಿಗಳಾದಿಯಾಗೆ ಸರಸೋ
ಕ್ತಿಗಳಿಂ ವರ್ಣಿಸುಗ ವರ್ಣಕಂಗಳನದಱೊಳ್ ॥ 185 ॥

ಸೂತ್ರಂ ॥ 246 ! ಸವಸಂದ ಮುಖಂ ಪ್ರತಿಮುಖ
ಮವಮರ್ಶಂ ಗರ್ಭಮಂತೆ ನಿರ್ವಹಣಮಿನಿ ।
ಪ್ಪುವವೆಯ್ದೆ ಸಂಧಿಯಕ್ಕುಂ
ಸುವಿಹಿತಕವಿಮಹಿತವಿತತಕೃತಿಪದ್ಧತಿಯೊಳ್ ॥ 186 ॥

ಸೂತ್ರಂ ॥ 247 ॥ ಉಪಯೋಗದೆ ಬೀಜಂ ಬಿಂ
ದು ಪತಾಕೆ ಪ್ರಕರಿ ಕಾರ್ಯಮೆನೆ ಪಂಚವಿಧಂ ।
ನಿಪುಣಕವಿರಚನೆಯೊಳ್ ಸ
ಪ್ರಪಂಚದಿಂದೊಂದಿ ತೋಱುಗುಂ ಸಂಧ್ಯಂಗಂ ॥ 187 ॥

ಇದು ಕವಿಸಮಯದೊಳ್ ಐಕ್ಯಪ್ರಕರಣಂ ಚತುರ್ಥಂ.

ಗೀತಿಕೆ ॥ ಇಂತು ಕವೀಂದ್ರಸಮಯಮುಂ ಚಿಕ್ಕೆ
ರಂತನವಮಾರ್ಗದೊಳೊಂದೆ ತಿಳಯೆ ವೇೞ್ದಂ ।
ಭ್ರಾಂತಿನಿಸುಂ ಪೊರ್ದದಲ್ಲಿ ತಾನೆಂ
ಬಂತಿರೆ ತಿರ್ದ್ದಿ ವಿವೇಕಿ ನಾಕಿಗಂ ॥ 188 ॥

ವೃ ॥ ದ್ವಿಜವಂಶಾರ್ಣವಪಾರಿಜಾತಕುಜದೇಶೀಯಂ ಜಿನೇಂದ್ರಕ್ರಮಾಂ
ಬುಜಕಂಜನ್ನವಜಕಂಜಕರೀಕಯುವಲೀಲೋದ್ದಾಮಸೌಂದಯ್ಯಗೀ ।
ನೋದಾಹರಣಪ್ರಸಾಧಿತಧರಿತ್ರೀಮಂಡಲಂ ಸತ್ಕವಿ
ವ್ರಜಜೊಡಾವಣಿ ನಾಗವರ್ಮನಿದನುರ್ವೀಸಂಸ್ತುತಂ ಮಾಡಿದಂ ॥ 189 ॥

ಕಂ ॥ ವಾಮನನುಂ ರುದ್ರಟನುಂ
ಭೂಮುಹನುಂ ದಂಡಿಯುಂ ವನಂಗೊಳೆ ಪೇೞ್ದಿಂ ।
ತೀವಮಹಿಗೆ ನೆಗೞೆ ಪೇೞ್ದಿಂ
ದಾಮೋದರತನಯನೀವಚೋಲಂಕೃತಿಯಂ ॥ 190 ॥

ವೃ ॥ ಸಕಲಕಲಾವಿದಂ ಮದವಿದೂರನುದಾರನವೋತ್ತರಂ ಗುಣಾ
ಧಿಕನಭಿಮಾನತುಂಗನವದಾತಯಶಂ ವಿಬುಧೈಕವತ್ಸಲಂ ।
ಸುಕವಿ ಸರಸ್ವತೀವದನಮಂಗಳದರ್ಪಣನೆಂದು ಕೂರ್ತು ಕೀ
ರ್ತಿಕುಮನುರಾಗದಿಂ ವಸುಮತೀವಳಯಂ ಕವಿನಾಗವರ್ಮನಂ ॥ 191 ॥

ಸರಭಸತೆಯಿಂ ಮತ್ತೊಂದಜ್ಞಾನದಿಂದಂಟಿತೋಕ್ತಿಯೊಳ್
ಪೊರೆಯದಿದು ತಾನಿನ್ನೊಂದೇನಾನುಮೂದೊಡಮಿಲ್ಲಿ ಮ ।
ತ್ಸರವಿರಹಿತರ್ ಪೂರೋಭಾಗ್ಯವ್ಯಪೇತಮನಸ್ಕರ
ಕ್ಕರಿಗರಧಿಕಪ್ರಜ್ಞರ್ ಕೆಯ್ಕೊಂಡು ತಿರ್ದುಗೆ ದೋಷಮಂ ॥ 192 ॥

ವೃ ॥ ಮಂದರಶೈಲದಂತೆ ದಿವಿಜಾಪಗೆಯಂತೆ ಪಯೋಧಿಯಂತೆ ಪೆಂ
ಪಿಂ ದೊರೆವೆತ್ತ ದೇವಕುಲದಂತೆ ದಿಶಾಗಜರಾಜಿಯಂತೆ ಸೂ ।
ರ್ಯೇಂದುಗಳಂತೆ ತಾರೆಗೆಗಳಂತೆ ಸನಾತನವೇದದಂತೆ ನಿ
ಲ್ಕೆಂದುವಿಳ್ನು ತಾಪ್ರಸರವಿಂತಿದು ಕೂರ್ತು ಸವೆಸ್ತು ಧಾತ್ರಿಯೊಳ್ ॥ 193 ॥

ಕಂ ॥ ಛಂದೋವಿಚಿತಿಯಲಂಕೃತಿ
ಸಂದಭಿಧಾವಸ್ತು ಕೋಶವೆಂಬಿನ್ವು ವಾಕ್ ಶ್ರೀ ।
ಸುಂದರಿಗೆ ರತ್ನಮಂಡನ
ದಂದದೊಳಿರ್ದ್ದಪುವು ನಾಗವರ್ಮನ ಕೃತಿಗಳ್ ॥ 194 ॥

ಇದು ಸಕಲಸುಕವಿಜನಮನಸ್ಸರೋಜಿನೀ ರಾಜಹಂಸಾಯಮಾನಾನೂನ
ಕವಿತಾಗುಣೋದಯ ಶ್ರೀಮನ್ನಾಗವರ್ಮಪ್ರಣೀತಮಪ್ಪ ಕಾವ್ಯಾವ
ಲೋಕನದೊಳ್ ಕವಿನಮಯವೆಂಬುದು ಪಂಚಮಾಧಿಕರಣಂ.

ಪಂಚತಂತ್ರಂ.

ತೃತೀಯತಂತ್ರಂ.

ವಿಶ್ವಾಸಪ್ರಕರಣಂ.

ದುರ್ಗಸಿಂಹಕವಿ—ಕ್ರಿ. ಶ. ಸು. 1145.

ಶ್ರೀಸುದತಿಗವುಖಿಳಧರಾ
ಶ್ರೀಸುದತಿಗವುಧಿಪನಪ್ಪ ಬಗೆಯುಳ್ಳೊಡೆ ವಿ ।
ಶ್ವಾಸವುನೆ ವೂಡಿ ವಸುಧಾ
ಧೀಶಂ ಗೆಲ್ಗುಹಿತಜನವುನನುನಯದಿಂದಂ ॥ 1 ॥

ಅದಱಿಂ ವಾಕ್ಪ್ರೀಲೀಲಾ
ಸದನಂ ವಿಶ್ವಾಸವೆಂಬ ತಂತ್ರವುನನುಹೈ ।
ನ್ಮದಹರವುಂ ಪೇಱ್ಪಿಂ ಸುಕ
ವಿದುರ್ಗಸಿಂಹಂ ನಯಾಗವುಜ್ಞರ ವುತದಿಂ ॥ 2 ॥

ಶ್ಲೋಕ ॥

"ನ ವಿಶ್ವಸೇತ್ ಪೂರ್ವವಿರೋಧಿತಸ್ಯ ಕತೋಽರ್ಹಿ ವಿತ್ರತ್ವವುಪಾಗತಸ್ಯ ।
ದಗ್ಧಾಂ ಗುಹಾಂ ಪಶ್ಯ! ಉಲೂಕಪೂರ್ಣಾಂ ಕಾಕಪ್ರಣೀತೇನ ಹುತಾಶನೇನ" ॥

ಟೀಕು — ಪೂರ್ವದಲ್ಲಿ ವಿರೋಧಂವೂಡಿದಂತಪ್ಪ ಕತ್ರುವನು ವಿಶ್ವಸಿಸಲಾ ಗದು: ಅದು ಹೇಗೆಂದೊಡೆ:— ಗೂಗೆಗಳ್ ತುಂಬಿರ್ದ ಗುಹೆಯನು ಕಾಗೆಗಳ್ ಸುಟ್ಟು ವಪ್ಪುದೇ ಕಾರಣವೂಗಿ.

ಈ ಕಥಾಪ್ರಪಂಚವೆಂತೆಂದೊಡೆ:—

ಗೂಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟ ಕಥೆ.

ವ ॥ ಅನೇಕಾಕಾರವುಹಾವುಹೀರುಹಷಂಡವುಂಡಿತವುಪ್ಪ ಕಾಂತಾರಾಂತರಾಳ ದೊಳನೂನವಿಶಾಲಪತ್ರಚ್ಛತ್ರನಿರಾಕೃತದಿವಸಕರಪ್ರಕಾಶವುವುಮೃತಕಿರಣಬಿಂಬಾಯ ವೂನಶೀತಳಚ್ಛಾಯಾಪರಿಪೀತಪಥಿಕಜನಶ್ರವುಜನಿತಸ್ವೇದಬಿಂದುನಂದೋಹವುವುಪ್ಪ ವಟವಿಟಪಿಯೆ ತನಗೆ ರಾಜಧಾನಿಯೂಗೆ,

ಶಮಿತಾರಾತಿಪ್ರಭಾವಂ ಪರಿಜನನಹಿತಂ ರಾಗದಿಂದಿರ್ಪನತ್ಯು
ತ್ತಮಬುದ್ಧಾವೃತ್ಯವರ್ಗಂ ವರಚರನಿಚಯಂ ಗುಪ್ತಮಂತ್ರಂ ಸುಮಿತ್ರೋ ।
ದ್ಯಮನುದ್ಯತ್ಕಾಕವೃಂದಾರಕಪತಿ ಪೆಸರಿಂ ಮೇಘವರ್ಣಂ ಪಯೋದಾ
ಗಮಶುಂಭನ್ಮೇಘವರ್ಣಂ ಖಗಗಣಗಣಿಕಾವ್ರಾತಸಂಗೀತವರ್ಣಂ ॥ 3 ॥

ವ ॥ ಮತ್ತಮಾಬನದುತ್ತರದಿಗ್ಭಾಗದೊಳಿಂದುಯೋಜನಪ್ರಮಾಣಾಂತರದೊ
ಳಂಜನಗಿರಿಯೆಂಬ ಪರ್ವತಮುಂಟು. ಅದಱ ನಿತಂಬಪ್ರದೇಶದೊಳ್ ಪಲವುಂ ಗಹ್ವ
ರಂಗಳೊಳವು. ಅಲ್ಲಿ,

ಅರಿಮರ್ದನನೆಂಬನುಳೂ
ಕರಾಜನಿರ್ಪಂ ಸಮಸ್ತಪರಿವಾರಜನಂ ।
ಪಿರಿಯನುಪಮಪ್ರತಾಪಂ
ಗುರುತರನತ್ತ್ವಂ ಮಹಾಗುಹಾಭ್ಯಂತರದೊಳ್ ॥ 4 ॥

ಅಂತಾತನೊಂದುದಿವಸಂ ಪಲವುಂ ಕಾಗೆಗಳ್ ನೆರೆದು ಕರೆವ ಸರಮನಾಲಿಸಿ
ಕೇಳ್ದು ಪೂರ್ವವೈರಮುಂ ನೆನೆದೀಕಾಕಬಲಂಗಳನಿಂದು ಕೊಂದಲ್ಲದೆ ಮಾಣೆನೆಂದು
ನಿಜಪ್ರಧಾನಸೇನಾಧಿಪರಪ್ಪ ಕೌಶಿಕಬಲಂಗಳನೊಂದುಮಂಡಿಕೊಂಡು ನಡುವಿರುಳ್
ಪೊಱವಂಟ್ಟು ಸಕಲಕಾಕಾಧೀಶ್ವರನಪ್ಪ ಮೇಘವರ್ಣನಿರ್ದ ಮಹಾವಟವಿಟಪಿಯಂ
ಸುತ್ತಿವಂದುತ್ತಿ ಮಱೆದೊಱಗಿರ್ದ ಕಾಕಬಲನೆಲ್ಲಮಂ ಬಱಿಕೆಯ್ದು, ಪೇಳೆ ಪೆಸರಿ
ಲ್ಲದೆ ಕೊಂದಾಕ್ಷಣದೊಳೆ ನಿಜನಿವಾಸಕ್ಕೆ ಮಗುೞ್ದಂ.

ಅನ್ನೆಗನೊಂದು ವಾಯಸಂ ನಿಜಸ್ವಾಮಿಯಪ್ಪ ಮೇಘವರ್ಣನಲ್ಲಿಗೆ ಬಂದು,

ಬಲಬಲಮನುಱದೆ ಕೌಶಿಕ
ಬಲಮದಿರದಿದಿರ್ಚಿ ಕೊಲ್ವ ತೆಱದಿಂದುದ್ಯ ।
ದ್ಬಲಬಲಮನುಱದೆ ಕೌಶಿಕ
ಬಲಮದಿರದಿದಿರ್ಚಿ ಕೊಂದು ಪೋದತ್ತೀಗಳ್ ॥ 5 ॥

ಎಂದು ಬಿನ್ನಪಂಗೆಯ್ವುದುಮಿನಿಸಾನುಂ ಬೇಗದಿಂ.

ಕಮಮುದವನಶ್ರೀಕಾಂತಿಯುಂ
ವಮೃತಕರದ್ಯುತಿಯುವಮುಡುಗಣದ್ಯೋತಿಯುಮು ।
ನ್ನಮಿಸೆ ಜಗನ್ನುತನುದಯಾ
ದ್ರಿಮಸ್ತಕಸ್ಥಲವನೇಱಿದಂ ದಿವಸಕರಂ ॥ 6 ॥

ಅಂತಾದಿತ್ಯೋದಯಮಾಗಲೊಡಂ ಮೇಘವರ್ಣನೆರ್ದು ಕಾಕಬಲರಧಿರಾರು
ಣೀಭೂತಮಾಗಿರ್ದ ಸಮರಾಂಗಣಮುಮನುಲೂಕನಿಕರಸೂಚೀಮುಖಚಂಚುಚರಣ
ಪಕ್ಷಘಾತಕ್ಕದಿರದಿದಿರಾಂತು ಕಾದಿ ಸತ್ತ ವಾಯಸವೀರನಿಕಾಯಮುಮು ನಲ್ಲಿಯೆ ನೊಂದು
ಬಸವಱಿದಿರ್ದ ಬಲಿಭುಗ್ಬಲಪ್ರಧಾನರಂ ಕಂಡು ಬೆಱಗಾಗಿರ್ದ ವಾಯಸಾಧೀಶ್ವರನ

ಲ್ಲಿಗೆ ಕೆಲವು ವಾಯಸಂಗಳ್ ಬಿಲ್ಲುತೋಡಿ ಕಾಡೊಳ್ಕೂಡಿರ್ದುವೆಲ್ಲಂ ಬಂದು—ದೇವಾ! ನಾವಿರುಳಿನ ಕಾಳಿಗಕ್ಕಲ್ಲಿನ್ನು; ಅಂತುಮಲ್ಲದೆ ನಮ್ಮಬಲವುಮುಂ ಪಗೆವರ ಬಲವುಮನಱಯದೆ ಪೆಱದೆಗೆದಿರ್ದೆವು; ಇನ್ನಾವುದು ಪೆಸನೆಂದು ಬಿನ್ನಪಂಗೆಯ್ಯೆ—ವೇಳುವರ್ಣನಿಂತೆಂದಂ:—ಇಲ್ಲಿ ನೊಂದವರುಮಂ ವೃದ್ಧರುಮಂ ಸ್ತ್ರೀಬಾಲಕರುಮನುಯೊಡ್ಡಿಂದು ದುರ್ಗಸ್ಥಾನದೊಳಿರಿಸಿ ಬಲ್ಲಿಕ್ಕೆ ತಕ್ಕುದಂ ನೆಗಟ್ಟುವೆಂದು ತನಗನ್ವಯಾಗತರುಂ ಚತುರುಪಧಾನಿಕುದ್ಧರುಂ ನಯಶಾಸ್ತ್ರನಿದಗ್ಧರುಮಪ್ಪ ಉದ್ದೀಪಿ, ಆದೀಪಿ, ಪ್ರದೀಪಿ, ಸಂದೀಪಿ ಚಿರಂಜೀವಿಯೆಂಬ ಐವರ್ ಮಂತ್ರಿಗಳಂ ಬರಿಸಿ ವೇಳುವರ್ಣಂ ಈಪ್ರಳುಟ್ಟನಕ್ಕೇಗೆಯ್ವವೆಂದು ಪೇಳೆ ಮಂತ್ರಿಗಳಿಂತೆಂದರ್:—

ನಿವ್ಮುಡಿ ನಿವ್ಮುತ್ಸಾಕತೆಯಿ
ನೆವ್ಮಂ ಪೆಸಗೊಳ್ವುದುಂ ಕರಂ ರಭಸದೆ ನಾ ।
ವುಮ್ಮುನ್ನವೆ ಬಿನ್ನವಿಸುವು
ದುಮ್ಮಾರ್ಗವಿದಲ್ತು ನಾಡೆ ನೀತಿವಿರುದ್ಧಂ ॥ 7 ॥

ಅದೆಂತನೆ:—

"ಮಂತ್ರವು ಹೊಱಪಟ್ಟಲ್ಲಿ ಕಾರ್ಯವು ಕಿಡವುದು; ಅದುಕಾರಣಮುದು ಎಲ್ಲಾ ಕಡೆಯಿಂದಲೂ ಗೊಪ್ಯವಾಗಿ ರಕ್ಷಿಸಲ್ಪಡತಕ್ಕುದು."

ಎಂಬ ನಯಮಂ ಪಿಡಿದರಸುಗಳಾಳೋಚನಕಾಲದೊಳ್ ನಿಸ್ತಂಭಮುಂ ನಿರ್ಗವಾಕ್ಷಮುಂ ನಿಶ್ಚಿದ್ರಭಿತ್ತಿಯುಂ ನಿರಾಶ್ರಯಮುಂ ಕುಕಕಾರಿಕಾದಿಶಕುನಿಕುಳವಿಕಳಮುಮಪ್ಪ ಮಂತ್ರಶಾಲೆಯೊಳ್ ಮಂತ್ರಿಗಳುಂ ತಾನುಂ ನಿಶ್ಚಿಂತಮಿರ್ದ್ದಾಳೋಚಿಸುವರದಱಂದಿಂತಪ್ಪವನರದೊಳ್ ಮಂತಣಮುಚಿತಮಲ್ಲೆಂಬುದುಂ; ವೇಳುವರ್ಣಂ ನಿಜಾನುಗತಮಪ್ಪ ವಾಯಸನಮುದಾಯಮುಂ ಪೋಗಲ್ವೇಱ್ದು ಬಲ್ಲಿಕ್ಕೆ ಮಂತ್ರಿಮುಂಡಲಕ್ಕಿಂತೆಂದಂ:—

ಅಗಣಿತವೆನಿಪ್ಪ ಮಜಸ್ಥಿ
ರ್ಯಗರ್ವಮುಂ ನಿಮ್ಮ ಮಂತ್ರಶಕ್ತಿಯನಿನಿಸಂ ,
ಬಗೆಯದರಿಮರ್ದನಂ ಕಾ
ಗೆಗಳಂ ತವೆ ಕೊಂದನಿಲ್ಲಿಗಾವುದು ಕಜ್ಜಂ ॥ 8 ॥

ಎಂಬುದುಂ; ಮಂತ್ರಿಮಂಡಲಮುಖ್ಯನಪ್ಪ ಉದ್ದೀಪಿಯಿಂತೆಂದಂ:—

ನಿವ್ಮುಡಿ,

"ಬಲಿಷ್ಠನಾದ ಶತ್ರುವಿಂ ಪಿಡಿಯಲ್ಪಟ್ಟವನು, ಆ ಶತ್ರುವನೊಳಪೊಕ್ಕು ಬಾೞ್ತುದು; ಅಲ್ಲದಾಗಳ್ ವಿದೇಶಗಮನಂಗೆಯ್ವುದು."

ಎಂಬ ನಯವಂ ಪಿಡಿದು ಕೌಶಿಕಾಧೀಶನೊಳ್ ಪೊಕ್ಕು ಬಾಲ್ವಿದುವಲ್ಲದೆ ನಾವಿಗಯುವಸ್ಥೆಯೊಳ್ ಪೆಱತು ಕಜ್ಜವು ನಾಳೋಚಿಸಿ ನೆಱೆಯುಮಲಂ ನಿತ್ತರಿಸಲುಮಱಿಯೆನೆಂಬುದುಂ; ಕೇಳ್ದ ಪ್ರದೀಪಿಯೆಂಬ ಮಂತ್ರಿಯಿಂತೆಂದಂ:—ಈತಂ ಪೇೞ್ದ ತದನುಪ್ರವೇಶಕ್ಕಂ ವಿದೇಶಗಮನಕ್ಕಂ ದೋಷಮುಂಟದೆಂತೆನೆ:—ತದನುಪ್ರವೇಶಂಗೈದವಪ್ಪೊಡೆ ಬದ್ಧರೋಷಿಯುಂ ಯುದ್ಧಾಭಿಲಾಷಿಯುಮಸಾರಣದ್ವೇಷಿಯುಮಪ್ಪ ಪಗೆವನ ಮನೆಯಂ ಬಗೆಗೆಟ್ಟು ಪೊಕ್ಕಂದು ಸಾವಕ್ಕಂ, ಮೇಣ್ ಸಂಗರವುಕ್ಕಂ. ವಿದೇಶಗಮನಂಗೆಯ್ದಿವಪ್ಪೊಡೆ ಕೌಶಿಕಂಗಳೆಲ್ಲಿಯುಮೊಳವು. ಅಲ್ಲಿರ್ದುನ್ನ ನಮ್ಮ ಬಂದ ಕಾರಣಮಂ ಬೇಗಮೂರೈದು ಪರಿದರಿಮರ್ದನಂಗೆ ಪೇೞ್ದೊಡಾತನೀಯಂದದೊಳರುಳ್ ಬಂದು ಮುತ್ತದೆ ಮಾಣನದಱಿಂದಿದುವೆ ನಯಮಲ್ಲ! ನಮ್ಮ ಬಲದೊಳ್ ಭೀತರಲ್ಲದ ದೂತರನಿಟ್ಟು ಕೌಶಿಕಂಗಳ ಬರವನಱಿದಾಗಳೆ ಪರೆದು ಪೋಪಂ. ಅವು ಬಾರದಪಕ್ಷದಿನಿಲ್ಲಿರ್ದು ಸಹಾಯಾದಿಸಾಧನೋಪಾಯಂಗಳಂ ಮಾಡುತ್ತುಂ ದೇಶಕಾಲಂಗಳಂ ನೋಡುತ್ತುಮಿರ್ದು ಬೞಿಕ ದಕ್ಕೆ ತಕ್ಕುದಂ ನೆಗೞ್ವಿಮೆಂಬುದುಂ ವೇಳುವರ್ಣನಾದೀಪಿಯೆಂಬ ಮಂತ್ರಿಯನಿಂತೆಂದಂ:—ಈಯುಪಾಯಕ್ಕುಪಾಯವಾವುದುಮಂ ಕಂಡಿರಪ್ಪೊಡೆ ಪೇೞ್ವುಮೆಂಬುದು ಮಾತನಿಂತೆಂದಂ:—ಈ ಮಂತ್ರಿಗಳ್ ಪೇೞ್ದಿಂತೆ ಅರಿಮರ್ದನನಿನ್ನಪ್ಪೊಡಂ ನಂತಮಿರ್ದನಪ್ಪೊಡೀ ನಯಮುಪ್ಪುದು, ಇರುಳ್ಗಳೆಗದೊಳ್ ಕೌಶಿಕಂಗಳೊಂದಪ್ಪೊಡಂ ನತ್ತುವುಂ ನೊಂದುನ್ನುಮಿಲ್ಲಂ, ಅರಿಮರ್ದನಂ ನಡುವಿರುಳ್ ಬಾರದೆ ಮಾಣಂ, ನಾವಿರುಳ್ ಕಣ್ಣಾಣದ ಕುರುಡರಪ್ಪುದೞಿಂದುಲೂಕಂಗಳ್ ಚಂಚುಚರಣಂಗಳ ಪಕ್ಷಂಗಳ ಘಾತದಿಂ ಶತಚೂರ್ಣವಾಗಿ ಪೊಯ್ಯಲೋಡಿಪೋಗುವುದಲ್ಲದೆ ತಾಗಿ ತಳ್ತಱಿಯಲಱಿಯೆವದು ಕಾರಣದಿಂ,

ಶ್ಲೋಕ ॥ "ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾಃ ।
ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ವರಣೇ ರಣೇ" ॥

ಟೀಕಂ—ಕಾಳೆಗದಲ್ಲಿ ಕಾದಿ ಗೆಲ್ದೊಡೆ ಹಿರಿದಪ್ಪ ಲಕ್ಷ್ಮಿಯಹುದುಂ; ಸತ್ತನಾದರೆ ದೇವಸ್ತ್ರೀಯರು ಲಭಿಸುವರುಂ; ಕ್ಷಣಭಂಗುರವಪ್ಪ ಶರೀರಕ್ಕೆ ಕಾಳೆಗವಾಗಲಿ, ಮರಣವಾಗಲಿ ಚಿಂತಿಸಲಾಗದುಂ.

ಎಂಬೀನಯಮಂ ಪಿಡಿದು ಸಮಸ್ತವಾಯಸನಿಕಾಯಮುಂ ನೆರಪಿಕೊಂಡು ದಿವಸಾಂಧನಪ್ಪರಿಮರ್ದನನುಂ ನಮ್ಮ ತಂದೆಯಪ್ಪರವಿಂದಮಿತ್ರನ ಬಲದಿಂ ಕಾದಿ ಕೊಂದೆವಪ್ಪೊಡೆ ಸುಖದಿಂ ಬಾೞ್ವೆವೆಂದೊಡಾತನ ಮಾತು ತನ್ನ ಮನಕ್ಕೆ ಬಂದು ವೇಳುವರ್ಣಂ ಸಂದೀಪಿಯೆಂಬ ಮಂತ್ರಿಯಂ ನಿಮ್ಮಭಿಪ್ರಾಯಮಾವುದೆಂದು ಕೇಳ್ವುದುಮಾತನಿಂತೆಂದಂ:—ಆದೀಪಿ ಪೇೞ್ದಿಂತೆ ಕಾದುವುದೆಮಗೆ ಕಜ್ಜವಪ್ಪೊಡೆ, ನಮ್ಮ ಬಲದೊಳ್ ಸೇನಾನಾಯಕಾದಿವೀರಾಗ್ರಣಿಗಳೆಲ್ಲಂ ಗೂಗೆಗಳ ಕಯ್ಯೊಳಕಾರಣಂ ಸತ್ತರ್; ಕೆಲರ್ ತುಱುಲಸಂದರಱಿಯೆ ನೊಂದರ್ ಪತಕ್ಕಂ ಕ್ಷಮರಲ್ಲದೆ ನಿಂದರ್; ಇಂತು ನಮ್ಮ ಬಲಂ

ಕೀಲ್ಕಳಿದ ಜಂತ್ರದಂತೆ ಕಳಕುಳವಾಗಿರ್ದಪುದು. ಅಂತವಲ್ಲದೆ ಪ್ರಭೌಳಭೈತ್ಯಸಾ ಹೈತ್ಸೇನಾಟವಿಕಬಲಂ ನಮಗಿಲ್ಲ! ಇಂತಪ್ಪ ದುಸ್ತರಾವಸ್ಥೆಯೊಳ್ ಕಾದುವುದು ಕಜ್ಜವಲ್ಲ! ಅದೆಂತೆನೆ:—

ಶ್ಲೋಕ ॥ "ಪುಷ್ಪೈರಪಿ ನ ಯೋದ್ಧವ್ಯಂ ಕಿಂ ಪುನರ್ನಿಶಿತೈ ಶ್ಶರೈಃ ।
ಯುದ್ಧವ್ಯಕ್ಷಯದೋಷಾಢ್ಯಾ ಪ್ರಧಾನಪುರುಷಕ್ಷಯಂ" ॥

ಟೀಕು—ಪುಷ್ಪಂಗಳಿಂದೊಳಗಾಗಿ ಕಾದಲಾಗದು! ತೀಕ್ಷ್ಣವಹ ಶರಂಗಳಿಂ ಕಾದಲಾಗದೆಂಬುದಂ ಪೇಳ್ವುದೇಂ? ಕಾಳೆಗವೆಂಬುದೆಂದುಂ ಕಿಡಿಪ ದೋಷವನು ಳ್ಳಿದು, ಪ್ರಧಾನಪುರುಷರಂ ಕಿಡಿಸುವುದು.

ಎಂಬೀನೀತಿಯುಂಟು. ಅದಲ್ಲದೆಯುಂ ಪ್ರಯಾಣಕಕುನದೊಳ್ ಉಲ್ಬಿಯು ನೊಂದಂ ಕಂಡಂತೆ ಕಳಿಯೆ ತಡೆಯದೆ ಗರ್ವಿಪೊಡೆದಂತೆ ನೀಲ್ವಾಯ್ವೆವಪ್ಪೊಡೆ, ತವ್ಮ ಮೇಲೆ ತಾವೆ ಮರಂಗಡಿದರೆಂಬಂತಕ್ಕುಂ. ಎಂತುಂ ಪೂರ್ವೋಕ್ತಮಿಂತೆಂಬುದಲ್ತೆ—

ಶ್ಲೋಕ ॥ "ಕಿಂ ನ ಹಂತಿ ಸುತಂ ಮಿತ್ರಂ ಬಂಧುಮರ್ಥಂ ಶ್ರಿಯಂ ಪತಿಂ ।
ಸೇವ್ಯಮಾನೋ ಹಿ ದಂಡೇನ ಸಂದಿಗ್ಧವಿಜಯೋ ಯುಧಿ" ॥

ಟೀಕು—ಕಾಳೆಗದಲ್ಲಿ ಗೆಲ್ದಪೆನೆಂಬ ಸಂದೆಗಮುಳ್ಳವಂ ಯುದ್ಧೋದ್ಯುಕ್ತನಾ ದೊಡೆ ತನ್ನ ಪುತ್ರರ್ ಮಿತ್ರರ್ ಬಂಧುಗಳ್ ಧನಸಂಪತ್ತುಗಳೊಡೆಯನಂಮಿಂ ತಿವರೆಲ್ಲರನೆ ಕಿಡಿಸುವಂ.

ನಯವಿದನಲ್ಲಂ ಶಕ್ತಿ
ತ್ರಯರಹಿತಂ ವ್ಯಸನಿ ವಿಗ್ರಹಾಸಕ್ತನುಂ ।
ಕ್ಷಯಬುದ್ಧಿ ವಿರಕ್ತಪ್ರಕೃ
ತಿಯೆನಿಪ್ಪರಿನೃಪನೊಳಿಲ್ಲುವುದಲ್ಲಿನ್ನದು ನಯಮಂ ॥ 9 ॥

ಸಮಬಲನೊಳಧಿಕಬಲನೊಳ್
ಸಮರಕ್ರೀಡಾಕ್ರಿಯಾಸಮರ್ಥನೊಳಧಿಕೋ ।
ದ್ಯಮನೊಳ್ ಮಾಡಿಪ್ಪದು ಸಂ
ಧಿಯನೋಳ್ಪಮಾತ್ಮೀಯಬುದ್ಧಿಯಂ ಬಗೆವ ನೃಪಂ ॥ 10 ॥

ಮತ್ತಂ ಎಂತುಂ ಸುಭಾಷಿತಮಿಂತೆಂಬುದಲ್ತೆ—

"ಹಬ್ಬಿದ ರಾಜ್ಯವನುಳ್ಳ ಸಮರ್ಥನಹ ಅರಸಿನೊಡನೆ ಬಲಹೀನನಾಗಿರ್ದ ಅರಸು ತನ್ನ ಸೇನೆ ಭಂಡಾರ ಜೀವರಕ್ಷೆಗೋಸುಗ ಸಂಧಿಯನೆ ಮಾಡಿಕೊಂಬುದು."

ಅದಲ್ತುಂ, ದೇವಾ! ನಾವಾನ್ಪದಾನೊಂದುಪಾಯದೊಳಿವರ್ದನನೊಳ್ ಸಂಧಾ ನಮಂ ಮಾಡಿ ನಿಂದು, ಕಾಲಮುಮಂ ಕಜ್ಜಮುಮಂ ಬಗೆದು ಬಲ್ಲಿ ಕುಜ್ಜಗಂಗೆಯ್ವು ವೆನೆ; ವೇಳುವರ್ಣಂ ಪ್ರದೀಪಿಯ ಮಾತುಗಳ್ಗೆ ಕೋಪಂ ಪ್ರದೀಪ್ತಮಾಗೆ ಮನದೊಳ್ ಮುನಿದು ಎಂತುಂ ನೀನಪ್ಪೊಡೆ ಮಹಾಮಾತ್ಯನಾಗಿದಜ್ಞನಂತೆ ಕಾದಿದೊಡೆ ನಾವಾದ ಪುದೆಂದೆನಗೆ ಭಯಂದೋಱೆ ನುಡಿವುದು ನಯಮುಂ ನೀತಿಯುಮಲ್ಲದೆಂತನೆ:—

"ಆವನೊರ್ವಂ ಪ್ರಾಣವಸ್ತು ವಂಬಿವಳ ಲೋಭದಿಂ ಕೀರ್ತಿಯಂ ಕಿಡಿಸಿಕೊಂಡಿಹ ನೋ, ಆ ಪ್ರಾಪ್ತಿಷ್ಯಂ ಕೀಲಿಂಗೆ ದೇವಾಲಯವುಂ ನುಡುವನೋವಾದಿ,"

ಎಂಬೀ ಶ್ಲೋಕಾರ್ಥದಿಂ ರಣಮರಣಭೀತಿಯಿಂದಪಖ್ಯಾತಿಯುವೋಳುವುಕ್ಕುವೆಂದಿರ್ದಪುದು, ಅದಲ್ಲದೆಯುಂ, ಎನ್ನ ಸವುಸ್ತ ಬಲವುಂ ನತ್ತುಂ ಕೆಟ್ಟುವಿತಸ್ತತವೂದ ಕಾರಣದಿಂದೆನಗೆ ತೇಜೋಹಾನಿಯುಂ ವುನೋಗ್ಲಾನಿಯುವೂಗಿರ್ಪುದದಱಿಂದಾಗೂಗೆ ಗಳನಿಂದೆ ಕೊಂದು ಕಾಗೆಗಳನವಱ ಬಸಿಱಿಂ ತೆಗೆಯದಂದೆನ್ನ ವುನದಱಿಲುಂ ಪೋಗದೆಂದು ಶೋಕರಸವುಂ ಕ್ರೋಧರಸವುವೊಡವಳೆಯೆ ನುಡಿದ ಬಲಿಭುಕ್ಪತಿಯಂ ವಾಯುಸಬಲಸಂಜೀವಿಯುಪ್ಪ ಚಿರಂಜೀವಿ ವೂರ್ಕೊಂಡು—ದೇವಾ! ನೀವಿಂತತ್ಯಾತುರರಂ ಕೋಪಾತುರರುವೂಗಿ ನುಡಿವುದು ನೀತಿಯಲ್ಲದೆಂತೆನೆ:—

"ರಾವುನಿಂ ಧೀರರುವೂರುವಿಲ್ಲ; ಸ್ತ್ರೀಹರಣದಿಂ ಪರಾಭವವೂವುದುವಿಲ್ಲ; ಅಹಗಾದೊಡಂ ಶ್ರೀರಾವಂ ನವುದ್ರವಂ ಕೋಷಿಸಿದನಿಲ್ಲ; ಸೈರಣೆಯಂ ವೂಡಿ ಸೇತುವಂ ಕಟ್ಟಿ ಲಂಕೆಯಂ ಕೊಂಡನಲ್ಲದೆ ತ್ವರಿತವಂ ವೂಡಿದುದಿಲ್ಲ."

ಎಂಬ ನೀತಿವಾಕ್ಯವುಂಟು. ಆದಱಿಂ, ನಿವ್ಮುಡಿ, ನೀವುಂ ಸಹಿಷ್ಣುವಾಗಿ ಪಗೆಯಂ ಬಗೆಯೊಳೆ ಕಾದಿ ಕೊಲ್ವುದೆಂದು ಬಿನ್ನಪಂಗೆಯ್ವುದುಂ; ವೇಳುವರ್ಣನಿಂತೆಂದಂ:—

ಶ್ಲೋಕ ॥ "ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸವಾವಿಶತು ಗಚ್ಛತು ವಾ ಯಥೇಷ್ಟಂ ॥
ಅದ್ಯೈವ ವಾ ವುರಣವುಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ" ॥

"ನೀತಿಯಂ ಬಲ್ಲವರ್ ತವ್ಮನಾರಾನುಂ ನಿಂದಿಸಲಿ! ವೇಣ್ ಸ್ತುತಿಸಲಿ! ಐಶ್ವರ್ಯವುಂಟುವಾಗಲಿ! ವೇಣ್ ದರಿದ್ರನಾಗಲಿ! ಆಕ್ಷಣದಲ್ಲಿ ವುರಣವಾಗಲಿ! ವೇಣ್ ಯುಗಪರ್ಯಂತಂ ಬದುಕಲಿ! ವಿಚಕ್ಷಣರ್ ನ್ಯಾಯವುಂ ತಪ್ಪಿ ನಡೆಯರ್."

ಎಂಬ ನೀತಿಗಳೊಳಿವಾದೊಡೇಂ?—ನೀವುಪ್ಪೊಡೆ ಶುಕ್ರ ಕಕ್ಕಗರು ಪರಾಕರ ಬಾಹುದಂತಿ ನಂದ ಕೌಣಪದಂತ ವಿಶಾಲಾಕ್ಷ ಕುಬೇರಾಭೀರ ಚಾಣಕ್ಯಾದಿ ಪುರಾಣಾಚಾರ್ಯಕೃತನಯಶಾಸ್ತ್ರ ಪ್ರಯೋಗಪ್ರವೀಣರ್ ಆದರಿಂ ದುಷ್ಟಪರಂಪರೆಯಿನಿಂತಪ್ಪ ವಿಷಮತರವುವುವಿನಂಕಟವುವುಪ್ಪವನರಕ್ಕೆ ಕರ್ತವ್ಯವಾವುದೆನೆ ವುಂತ್ರಿಕೂಡಾವುಣಿ ಚಿರಂಜೀವಿಯಿಂತೆಂದಂ:—

ನಯವಿದರಪ್ಪೀನಾಲ್ವರ
ನಯವುನಯಂ ದೇವ! ನಿವ್ಮ ವೇಱ್ದುದೆ ವುಂತ್ರಂ ।
ನಿಯತಂ ತ್ವದೀಯವುಂತ್ರಂ
ನಯಜ್ಞರನುವುತದಿನದಂವೆ ದಲ್ ಪಂಚಾಂಗಂ ॥ 11 ॥

ಅದೆಂತೆಂದೊಡೆ:—

ಸೋಮದೇವನೀತಿಯೊಳ್ — "ಕಾರ್ಯೋದ್ಯೋಗೋಪಾಯ, ಪುರುಷದ್ರವ್ಯ ಸಂಪತ್ತಿ, ದೇಶಕಾಲಪರಿಜ್ಞಾನ, ವಿಘ್ನಪ್ರತೀಕಾರ, ಕಾರ್ಯಸಿದ್ಧಿಯೆಂದಿಂತು ಮಂತ್ರಮೈದು ಪ್ರಕಾರವಾಗಿಹುದು."

ಎಂಬ ನೀತಿವಾಕ್ಯಮುಂಟಪ್ಪುದಱಿಂ, ರಾಜ್ಯಂಗೆಯ್ವಾತಂಗೆ ಮಂತ್ರವೆ ಮುಖ್ಯಮದೆಂತೆನೆ:—

ನವಮಿವಿರಾಜನಿಜಯೋ
ದ್ಯಮಕ್ಕೆ ಚತುರಂಗಬಲಮದೇವುದೊ! ನನ್ಮಂ।
ತ್ರಮೆ ನಾಲ್ಗಂ ಪುಸಿಗುಮೆ ದೇ
ವ "ಮಂತ್ರಮೂಲೋ ಹಿ ವಿಜಯಃ" ಎಂಬೀವಾಕ್ಯಂ ॥ 12 ॥

ಅದಱಿಂ ಸವಸ್ತವಸುಧಾ
ಸುದತೀಕಂ ಮಂತ್ರವಂಖ್ಯನಾದಂದುದ್ಯ।
ನ್ಮದವದರಿರಾಜಮದುಕರ
ಕದಂಬಮಂ ನಿಜಪದಾಂಬುಜಕ್ಕೆಱಗಿಸುವಂ ॥ 13 ॥

ಅಂತುಮಲ್ಲದೆ ಸವಸ್ತವಸುಧಾವಳಯವೆಲ್ಲವಂ ಬಾಯ್ಕೀಳಸುವ ಬಲ್ಲಾಳನದೊಳಂ ವಿಜಿಗೀಷುವೃತ್ತಿಯನೆತ್ತಿಕೊಳ್ವೆನೆಂಬರಸಂ ಪ್ರಭುಮಂತ್ರೋತ್ಸಾಹಶಕ್ತಿತ್ರಯಸಂಪನ್ನನಪ್ಪುದದೆಂತೆನೆ:—

ಹರಿನೀಲವಜ್ರಮುಕ್ತಿಕ
ವರಕತಮಾಣಿಕ್ಯಕಾಂಚನಾಂಚಿತವಸ್ತೂ।
ತ್ಕರಮುಂ ವರಕರಿಹರಿಭಟ
ಭರಮುಂ ಪ್ರಭುಶಕ್ತಿ ಭೂತಲೇಶಂಗೆಂದುಂ ॥ 14 ॥

ಹಿತರರ್ಥಶಾಸ್ತ್ರಕುಶಲರ್
ಚತುರುಪಧಾಶುದ್ಧರೆನಿಪ ವರಸಚಿವರೊಳ।
ನ್ವಿತಮಾಗೆ ಮಾಡ್ಪಿ ಕಾರ್ಯಂ
ಪತಿಗೆಂದುಂ ಮಂತ್ರಶಕ್ತಿ ವೆನುವುನಿನುತದಿಂ ॥ 15 ॥

ಅಗಣಿತದೋರ್ಬಲದಿಂ ಸಂ
ಯುಗದೊಳ್ ಮಾಱುವಂತ ವೈರಿರಾಜನನೇನುಂ।
ಬಗೆಯದುಱದಿರ್ಪುವ ವಿಕ್ರಂ
ತಗುಣಮನುತ್ಸಾಹಶಕ್ತಿಯೆಂಬರ್ ವಿಬುಧರ್ ॥ 16 ॥

ಎಸೆವೀಕ್ಷಿತ್ರಯದೊಳ
ಮನದೈಶಬಲಮಂತ್ರಶಕ್ತಿ ವಿಗಿಲೆಂದುಂ ಮಂ ।
ತ್ರಸಹಾಯನಪ್ಪ ಭೂಪತಿ
ಗೆ ಸುಸಾಧ್ಯಂ ಬಗೆದ ಕಾರ್ಯಮೆನಿತೊಳವನಿತುಂ ॥ 17 ॥

ಅದೆಂತೆನೆ:—

ಆಭಿಭವಿಸಿದನುತ್ಸಹ
ಪ್ರಭುಶಕ್ತಿಸಮೀತನೆನಿಪ ಶುಕ್ರನನಮರ ।
ಪ್ರಭುಮಂತ್ರಿ ಮಂತ್ರಶಕ್ತಿ
ಪ್ರಭಾವದಿಂದದಱಿನಗ್ಗಳಂ ಮಂತ್ರಬಳಂ ॥ 18 ॥

ನಿಯತಂ ಸಮ್ಯಜ್ಮಂತ್ರ
ಪ್ರಯೋಗಪಟುವೆನಿಪ ಭೂತಳಾಧೀಶ್ವರನ ।
ಪ್ರಿಯರಂ ಮರ್ದಿಸಿ ಧರೆಯಂ
ಜಯಲಕ್ಷ್ಮೀಧವನಾಗಿ ಪರಿರಕ್ಷಿಸುಗುಂ ॥ 19 ॥

ಅವರಾಹಿತರಿಂ ದುರ್ಮಂ
ತ್ರವರಕ್ಷಣನೆನಿಪ ಯಜ್ಞವಲ್ಕ್ಯಮಹಿಂತಱಿಗುಂ ।
ಸವದಾಹಿತರಿಂ ದುರ್ಮಂ
ತ್ರವರಕ್ಷಣನೆನಿಪ ನೃಪಬಳಂ ನಿರ್ವ್ಯಾಜಂ ॥ 20 ॥

ಅದಱಿಂದರಸುಗೆಯ್ವಾತಂ ಮಂತ್ರಮುಂ ಮೂಲಾವಮಂತ್ರಮೂಗೆಂತು ನೆಗಱಲೆವೇಱ್ಕ್ಕುಮದೆಂತೆನೆ:—ಮಂತ್ರಿಮಂಡಲದಾಪ್ತವ್ರಜದ ಧೂರ್ತವರ್ಗದ ಮದಪ್ರಲಾಪ ಸುಪ್ತಪ್ರಲಾಪಿತಂಗಳಿಂದಂ ಶುಕಶಾರಿಕಾದಿತಿರ್ಯಗ್ಯೋನಿಗಳಿಂದಂ ಮಂತ್ರಂ ಭೇದಕ್ಕೆ ಸಲ್ದುಮಂತಾಗಲೀಯದೆ ಮಂತ್ರವಂ ರಕ್ಷಿಸಲ್ವೇಱ್ಕ್ಕುಮದೆಂತೆನೆ: —

ವಿಪುಳಾರ್ಥಮಂತ್ರಮುಂ ಯಾ
ನಪಾತ್ರಮುಂ ಭಿನ್ನಮೂದೊಡಲ್ಲಿವರ್ ವಸುಧಾ ।
ಧಿಪಕರ್ಣಧಾರರಿರ್ವರು
ಮಪರಿಮಿತಾತ್ಮೀಯಬಲಸಮೇತಂ ಕ್ಷಣದಿಂ'' ॥ 21 ॥

ಎನೆ; ಮೇಘವರ್ಣನಿಂತೆಂದಂ:—ಅಂತಪ್ಪೊಡೆ ನೀಂ ಪೇೞ್ದಿಂದದೊಳರಸಂ ತಾನೆ ಮಂತ್ರಿಯಾಗಿ ಚಿಂತಿಸಿ ಮಱುಗಲ್ವೇಡಿತ್ತೆನ; ಮತ್ತಂ ಚಿರಂಜೀವಿಯಿಂತೆಂದಂ:—ನಾಂ ಮಂತ್ರಮನೆ ರಕ್ಷಿಪುದೆಂದೆನಲ್ಕದೆ ಮಂತ್ರಿಗಳಾಗವೇೞ್ಕೆಂದೆನಲ್ಲೆಂ. ನಿಮ್ಮಡಿ! ನೀವಿಂತು ವಿಪರೀತಗ್ರಹಣಂಗೆಯ್ದು ಶೂನ್ಯವಾದಿಗಳಾಗಿರಲಾಗದು. ಆದೊಡಮೇನರ ಸುಗೆಯ್ವರಂ ಕಾಮುಕೊ್ರೀಧಲೋಭವಾನವದಹರ್ಷಪ್ರಮೋದಾಲಸ್ಯವಶದಿಂದೆಂತಪ್ಪ ಬುದ್ಧಿವಂತರುಂ ತಮ್ಮಂ ತಾವಱಿಯರ್. ಅದಱಿಂದೆನಿತು ಸಮರ್ಥನಾದೊಡಂ ಆಪ್ತರಪ್ಪ ಬುದ್ಧಿವಂತರೊಳಂ ಮಂತ್ರಿಗಳೊಳಮಾಲೋಚಿಸಿ ನೆಗಱಲೆವೇಱ್ಕ್ಕುಮದೆಂತೆನೆ:—

ಶ್ಲೋಕಂ ॥ "ಅಸಹಾಯಸ್ಸಮರ್ಥೋಪಿ ತೇಜಸ್ವೀ ಕಿಂ ಕರಿಷ್ಯತಿ ।
ನಿವಾತಪತಿತೋ ವಹ್ನಿ ಸ್ಸ್ವಯಮೇವ ಪ್ರಶಾಮ್ಯತಿ" ॥

ಟೀಕು — ತೇಜಸ್ಸುಳ್ಳ ಸಮರ್ಥನಾದೊಡಂ ಸಹಾಯನಿಲ್ಲದವನೇತಕ್ಕುಂ ಪ್ರಯೋಜನನಿಲ್ಲ. ಅದು ಹೇಗೆಂದೊಡೆ—ಗಾಳಿಯಿಲ್ಲದಿಕ್ಕಿದ ಕಿಚ್ಚಿನಹಗೆ.

ಅಪಗತಸಹಾಯನೆನಿಸಿದ
ನೃಪನೆನಿತು ಸಮರ್ಥನಾದೊಡಂ ನಿಜತೇಜೋ ।
ವಿಪುಳಜ್ವಲನಶಿಖಾವಳಿ
ಗೆ ಪಡೆಯುಲಾಯಂ ಸುವೃದ್ಧಿಯಂ ಭೂತಳದೊಳ್ ॥ 22 ॥

ಅವಱಿಂದರಸುಗೆಯ್ವಾತಂ ಸಹಾಯಸಂಪನ್ನನುಂ ಪ್ರಭುವುಂತೋತ್ಸಾಹಶಕ್ತಿಯುಕ್ತನುವಾಗಿ ನೆಗೞಲಿವೇೞ್ಕುಂ. ಎಂತುಂ ವಿಜಿಗೀಷುವೃತ್ತಿಯನೆತ್ತಿಕೊಂಡು ನೆಗೞ್ವುಂದು ಶತ್ರುಗಳ ಸಮೂಹಸ್ಥಿಯೋಗಕ್ಷೇಮಮುಮುಂ ವಿಚಾರಿಸುವುದದೆಂತೆನೆ:—

ಉದ್ಯೋಗಹೀನನಾಗಳು
ಮುದ್ಯನ್ಮಿತ್ರಾತ್ಮದುರ್ಗಬಲರಹಿತನನ ।
ದ್ವಿದ್ಯಾಪ್ರಿಯನೆನಿಪವನು
ದ್ವೈದ್ಯಂ ಶತ್ರುಗೆ ನಿರಂತರಂ ಭೂತಲದೊಳ್ ॥ 23 ॥

ಅನುಪಮದುರ್ಗಬಲೋಪೇ
ತನಾಗಿಯುಂ ವಿಪುಳವಿಂತ್ರವಿಕ್ರಮಸಂಯು ।
ಕ್ತನುವಲ್ಲದಿರ್ಪಂ ಪೀ
ಡನೀಯನೀಡಿತನಯೂಗಮಜ್ಜುರ ಮತದಿಂ ॥ 24 ॥

ದುರ್ಗಗುಣಾನ್ವಿತವೆನಿಸಿದ
ದುರ್ಗದ ಬಲಮುಳ್ಕೊಡಂ ಬಲೋಪೇತಸುಹೃ ।
ದ್ದುರ್ಗಬಲಾನ್ವಿತನಪನಯ
ವೂರ್ಗನೆನಿಪ್ಪವನೆ ಕರ್ಷಣೀಯನವೋಘಂ ॥ 25 ॥

ವ ॥ ಇಂತಪ್ಪ ಪಗೆವರಂ ನಿರ್ಮೂಲಿಸುವುದು ಛೇದನಮೆಂಬುದಕ್ಕುಂ; ಹಸ್ತ್ಯಶ್ವರಥಪದಾತಿಬಲಕ್ಷಯವುಂ ಪಾತ್ರಿಪುದು ಪೀಡನಮೆಂಬುದಕ್ಕುಂ; ಮತ್ತಮಿವನ ಱಿದುಂ ದೇಶಕಾಲಬಲವನಱಿದುಂ ಪ್ರಯೋಗಿಸುವುದದಂತಿರ್ಕೆ; ನಾವೀಗಳ್ ಕೌಶಿಕಾಧೀಶ್ವರಂಗೆ ಶತ್ರುಗಳಾಗಿರ್ದ,

ವಾಕ್ಯಂ॥ "ದುರ್ಗಹೀನೋ ನರಪತಿಃ ವಾತಾಭ್ರಾವಯವೈಸ್ಸಮಃ" ॥
ಟೀಕು—ದುರ್ಗಂಗಳಿಲ್ಲದರಸು ಗಾಳಿಯೊಳ್ಸಿಕ್ಕಿದ ಮೇಘಂಗಳಹಗೆ."

ಎಂಬ ನೀತಿಯುಂಟಱಿಂದಾದುರ್ಗಂಗಳಂತಪ್ಪುವೆಂದೊಡೆ:—

ಶ್ಲೋಕ॥ "ದುರ್ಗಂ ಚತುರ್ವಿಧಂ ಪ್ರೋಕ್ತಮಾಪತ್ಸ್ವಾಶ್ರಯಕಾರಣಂ
ಜಾಲಕಂ ಪಾರ್ವತಂ ಚೈವ ಧಾನ್ವನಂ ವನಜಂ ತಥಾ" ॥

ಟೀಕು—ಆಪತ್ತಿಂಗಾಶ್ರಯವಾಗಿ ಜಲದುರ್ಗ, ಗಿರಿದುರ್ಗ, ಸ್ಥಳದುರ್ಗ, ವನದುರ್ಗವೆಂದಿಂತು ದುರ್ಗಂಗಳ್ ನಾಲ್ಕುತೆಱನಕ್ಕುಂ.

ಇಂತು ಚತುರ್ವಿಧವಾಗಿಯುಮಷ್ಟವಿಧವುಕ್ಕುವುದೆಂತೆಂದೊಡೆ:—ಉಭಯನದೀಸಂಗವುಮುಂಪ್ಪ ಮಧ್ಯಪ್ರದೇಶಮುಂತದ್ವೀಪವೆಂಬುದಕ್ಕುಂ; ಅಗಾಧವುಮಪ್ಪ ಬೃಹತ್ತಟಾಕಂಗಳಂ ಕರ್ಕಶಖರದಂಡಸಲಿಲತಾನವಿರಾಜಿತಸರೋವರಪರಿವೃತವುಮಪ್ಪ ಭೂಪ್ರದೇಶಂ ಮಹಾಸ್ಥಳನೆಂಬುದಕ್ಕುವಿವಾಯೆರಡುಂ ಜಲದುರ್ಗಭೇದಂಗಳ್. ಗರುಡಂಗವುಡರಲ್ಬರದ ನವುತ್ತುಂಗಶಿಖರಂಗಳ್ ನಾಲ್ಕುಂ ದೆಸೆಯೊಳುಮಾಗಿ ಬಾಗಿಲೊಂದೆಯಾಗಿರ್ಪುದು ಗುಹ್ಯಾಖ್ಯಮೆಂಬುದಕ್ಕುಂ; ಆವ ದೆಸೆಯೊಳುಂ ಬಟ್ಟೆಯಿಲ್ಲದೆ ನಲ್ಲುವೀೞ್ದಜ್ಜವುಮಪ್ಪ ಜೆಟ್ಟುಗಳ ನಡುವೆ ಕರವುಸಿದಪ್ಪ ಬಟ್ಟೆಯಾಗೇಱುವುದುಂ ಪ್ರಸ್ತರವೆಂಬುದಕ್ಕುಂ: ಈಯೆರಡುಂ ಗಿರಿದುರ್ಗದ ಭೇದಂಗಳ್. ಪೊಱಗೆ ನೀರುಂ ಭೂರಿಭೂರುಹಸಂದೋಹವುಂ ತೃಣಗುಲ್ಮಲತಾಸ್ತೋಮವುಮಿಲ್ಲದೆ ಒಳಗೆ ತೃಣ ಕಾಷ್ಠಜಲಸಂಪೂರ್ಣವುಮಪ್ಪುದು ಉದಕಸ್ತಂಭವೆಂಬುದಕ್ಕುಂ; ಪೊಱಗೆ ಕರವುಪ್ಪುವುಪೇಯವುಮುಲ್ಪಜಲವುಮುಳ್ಳದು ವೈರಿಣಿಯೆಂಬುದಕ್ಕುಂ: ಈಯೆರಡುಂ ಸ್ಥಲದುರ್ಗಭೇದಂಗಳ್. ಜಲಪರಿಪೂರ್ಣಜಲಾಶಯವುಮುಂ ದುರ್ದರಕರ್ದಮೋನ್ನತತಿಶೀತವುಪ್ಪುದು ಕರ್ದಮೋದಕಮೆಂಬುದಕ್ಕುಂ; ಅನೇಕತರುನಿಕರಪರಿವೃತವುಂ ತೃಣಪಟಲಪ್ರಾವೃತವುಮಪ್ಪುದು ಸ್ತಂಭನಗಹನವೆಂಬುದಕ್ಕುಂ: ಈಯೆರಡುಂ ವನದುರ್ಗದ ಭೇದಂಗಳ್. ಇಂತಷ್ಟವಿಧವುಪ್ಪ ದುರ್ಗಂಗಳೊಳಂ ನಮ್ಮಾಶ್ರಯಿಸಿದ ದುರ್ಗಕ್ಕೆ ದುರ್ಗಗುಣಮಿಲ್ಲ; ಮಿತ್ರಗುಣಸಂಪನ್ನರಪ್ಪ ಪತತ್ರಿಸ್ತೋಮಂಗಳಲ್ಲವಪ್ಪುದಱಿಂ ಮಿತ್ರಬಲಮಿಲ್ಲ; ನಮ್ಮ ಬಲಮೆಲ್ಲಂ ಕಳಕುಳವಾದಕಾರಣದಿಂ ತಂತ್ರಬಲಮಿಲ್ಲ; ಕೌಶಿಕಂಗಳ್ ಬಂದು ಇರುಳ್ ಕಾದುವುದಱಿಂ ಕಾಲಬಲಮಿಲ್ಲ. ಇಂತೀ ಬಲಂಗಳೊಳಗೊಂದುಮಿಲ್ಲದ ಕಾರಣದಿಂ ನಿಮ್ಮಡಿಗುತ್ಸಹಕ್ತಿ ಸಾಧಾರಣಂ! ಆದಱಿಂ ನಾವುಮುಚ್ಚೈರ್ದ್ಯಕತ್ರಗಳಾಗಿರ್ದೆವೆಂದು ನುಡಿದ ಚಿರಂಜೀವಿಯ ಮಾತಂ ಮೇಘವರ್ಣಂ ಕೇಳ್ದು ಮೇಘಗರ್ಜನೆಯಿಂ ಗರ್ಜಿಸಿ ಬಲೋಕ್ಕಿಂತೆಂದಂ:—

ಪರಿದಾಳಾಪದೊಳೀಂ! ಸಂ
ಗರದೊಳ್ ಭೀಕರವೆನಿಪ್ಪ ಮದ್ಬುಜಬಲದಿಂ ।
ದರಿಮರ್ದನನಂ ತವೆ ಕೊಂ
ದರಿಮರ್ದನನೆಂಬ ಪೆಸರನಾಂ ತಳೆದಪ್ಪೆಂ ॥ 26 ॥

ಎಂದು ನುಡಿದ ಮೇಘವರ್ಣನ ಮಾತಂ ಚಿರಂಜೀವಿ ಕೇಳ್ದು ಇಂತೆಂದಂ:—ನಿಮ್ಮಡಿ, ನೀವರಿಮರ್ದನನೊಳ್ ಕಾದಿ ಗೆಲ್ವುದೊಂದುಂ ಸಂದೆಯಮಿಲ್ಲಂ. ಆದೊಡಾಗೂಗೆಗಳ್ ದಿವಸಾಂಧಂಗಳಾಗಿಯುಂ ನಮ್ಮೊಳ್ ಪಗೆಯುಂಟಾಗಿಯುಂ ಘೋರಾಂಧಕಾರದಿಂದತಿಸಂಕೀರ್ಣವುಪ್ಪ ಗುಹಾಗಹ್ವರಂಗಳೊಳ್ ಪೊಕ್ಕಿರ್ಪನ್ನು ಆದುಕಾರಣದಿಂ ದಾವಕಾಲಂಗಳನುಪಾಯಮಿಲ್ಲದೆ ಕಾದಿ ಕೊಲಲುಂ ಗೆಲಲುಂ ಬಾರದು.

ಅಂತುಮಲ್ಲದೆ,

ಮತಿಹೀನರಪ್ಪ ಮನುಜರ್
ಪತಂಗವೃತ್ತಿಯನೆ ಕೊಂಡು ಕೊನೆಯುತ್ತಿರ್ಪರ್ ।
ಸತತಮದೆಂತುಂ ವಿಬುಧ
ಪ್ರತತಿಗನಿಷ್ಟಂ ನಯೂಗವುಕ್ಕೆ ವಿರುದ್ಧಂ ॥ 27 ॥

ತಂತ್ರಾವಾಸನಿದಂಪರ
ತಂತ್ರಪವಿಭೇದವ್ಯತಂತ್ರಂ ದಕ್ಷಂ ।
ಮಂತ್ರಜ್ಞಂ ವಿನಯಾಸ್ವೀತ
ಮಂತ್ರಿಪ್ರಕರಂ ಸುಮಿತ್ರನವಳಚರಿತ್ರಂ ॥ 28 ॥

ವ್ಯಸನವಿದೂರಂ ನಯಶಾ
ಲಿ ಸತ್ಯವಾಕ್ಯಂ ಕೃತಜ್ಞನಸ್ತಬ್ಧಂ ಕ್ಲೇ ।
ಕಸಹಿಷ್ಣು ನುತೇಜನವಾ
ತ್ಸಲುಮಂತ್ರಿಸವೀತನಖಿಲವಿಜ್ಞಾನವಿದಂ ॥ 29 ॥

ಕುಲಜಂ ಸೋತಪ್ಪಹಂ ಸ್ಥೂ
ಲಲಕ್ಷನಭಿವಾಸಿ ಬುದ್ಧಿವಂತಂ ಚತುರಂ ।
ಬಲಯುಕ್ತಂ ವಾಗ್ಮಿ ಕಲಾ
ಕಲಿತಂ ಕರಣಾಗತೈಕರಕ್ಷಣದಕ್ಷಂ ॥ 30 ॥

ವಿಪುಲತರಕೋಶನಕೂ
ರಪರಿಜನಂ ದೇಶಕಾಲವೇದಿ ವೃಷಂ ಸೀ ।
ತಿಪರಂ ಕ್ಷವಾನ್ವೀತಂ ಜಿತ
ರಿಪುಷಡ್ವರ್ಗಂ ಪ್ರಭೂತನನುಪಮದುರ್ಗಂ ॥ 31 ॥

ಗುರುದೇವದ್ವಿಜಭಕ್ತಂ
ತರುಣವಯಸ್ಕಂ ಪರೇಂಗಿತಜ್ಞನುದಾರಂ ।
ಪರಿವಾರಕಲ್ಪವೃಕ್ಷಂ
ಪರದಾರನಿದೂರನಖಿಲಭುವನಾಧಾರಂ ॥ 32 ॥

ಪ್ರಣತಾರಾತಿ ಧನುರ್ಗುಣ
ಕಣೀಕೃತೋದ್ಯತ್ಪ್ರಕೋಪ್ಯನನುಪಮಧೈರ್ಯಂ ।
ರಣಕೇಳೀಲೋಲಂ ವಾ
ರಣವಾಜಿರಥಾಶ್ವಭಟಬಲಪ್ರಖ್ಯಾತಂ ॥ 33 ॥

ಎನೆ ನೆಗಳ್ದ ನೃಪಂ ತನಗಹಿ
ತನಾಗೆ ವೈಮನುಳಿದು ನೆಗಳ್ವ ಭೂಪಂ ನಿಜಸೈ ।
ನ್ಯನಿತಂಬಿನೀಜನಾಕ್ರಂ
ದನಮಂ ಕೇಳುತ್ತುಮಿರ್ದನಿರುಳುಂ ಪಗಲುಂ ॥ 34 ॥

ಅದಱಿಂ ಭೂಭುಜಂ ಸಮುತ್ಸನ್ನಕನಾಗಲಾಗದು. ಅದೆಂತೆನೆ:—ಧರ್ಮಪುತ್ರಂ ಜೂದಾಡಿ ಮೇದಿನಿಯುಂ ಸೋಲ್ತು ಸಹೋದರರ್ಸಹಿತವರಣ್ಯವುಂ ಪೊಕ್ಕೊಡೆ ಪುಣ್ಯವಿಹೀನರಾಗಿರ್ದರಂ ದ್ರೌಪದಿ ಕಂಡು ತಾನುಂ ವನವಾಸದುಃಖಕ್ಕೆ ಬೇಗತ್ತು ನಿಜಪತಿಗಿಂತೆಂದಳ್: — "ದೇವಾ! ನಿನ್ನ ನನ್ನಿಯನೆ ಕಾದು ನಿನ್ನನುಜರ್ ಬನ್ನದ ಕೂಪನುಂಡರ್! ಪನ್ನೆರಡುವರ್ಷಂ ಬೇಡರಂತಡವಿಯೊಳ್ ನಾರ ಸೀರೆಯನುಟ್ಟು ಭೇರಂ ಬಿಕ್ಕೆಯುವುಂ ತಿಂದು ಕಂದಿ ಕುಂದಿ ಪಂದೆಯಂ ವನದಂತಳ್ಳಾಡುತಿರ್ದಪರ್! ಇವರಂ ಕೌರವರ್ಗೆ ತೋಡರ್ದು ಪಿಡಿ! ಪಿಡಿದಿರದಿರೆಂದುಂ ವೃಂದಲಿಸಿ ನುಡಿದ ಪಾಂಚಾಲರಾಜತನೂಜೆಗೆ ಧರ್ಮರಾಜತನೂಜನಿಂತೆಂದಂ: —

"ಕೀರ್ತಿಯ ನೈದಲೋಸ್ಕರಂ ಮೇಣ್ ಸುಖಮಂಬಡೆಯಲೋಸ್ಕರಂ ಮೇಣ್ ಸಾಮಾನ್ಯಜನಂಗಳನತಿಕ್ರಮಿಸಲೋಸ್ಕರಮಾಗಿ ಅಳಿಬಲ್ಲದೆ ಉದ್ಯೋಗಂಗೆಯ್ವ ಮನುಷ್ಯರ ತೊಡೆಯನೇಲಿ ಲಕ್ಷ್ಮಿ ನೆಲಸಿಹಳು."

ಎಂಬೀನೀತಿಯನಜಾತಶತ್ರು ಪೇೞ್ದಂ.

ಅಂತುವಲ್ಲದೆಯುಂ,

"ಸಮರಪ್ರಾರಂಭದೊಳ್ ಕಾಶಿಕಕಕುಸಿಗಣಾಧೀಶನೊಳ್ಕುದಿ ಗೆಲ್ವ
ದ್ಯಮನಿಮಿಗಳ್ ಕೂಡದೆಂತುಂ ನಮಗೆ ಬಹುತರಾಳಾಪದಿಂ ಬರ್ಪುದೇಂ! ದೇ।
ವ! ಮಹಾಶಾಸ್ತ್ರಜ್ಞರುಂ ಪ್ರಾಜ್ಞರುಮೆನಿಪ ಮಂತ್ರಿಗಳ್ ಪೇೞ್ದ ನೀತಿ
ಕ್ರಮದಿಂ ಷಾಡ್ಗುಣ್ಯಮುಂ ಯೋಜಿಸುವುದೆ ನಯಂ ಪ್ರಾಪ್ತಕಾಲಾನುರೂಪಂ ॥

ಎನಲಾಷಾಡ್ಗುಣ್ಯಮೆಂತೆಂದೊಡೆ: — ಸಂಧಿವಿಗ್ರಹಯಾನಾಸನಸಂಶ್ರಯದ್ವೈಧೀಭಾವಮೆಂದಾಱು ತೆಱನಾಗಿರ್ಕುಂ. ಅಲ್ಲಿ ಬಲವಂತನಪ್ಪ ಪಗೆವಂ ಮೇಲೆತ್ತಿ ಬರೆ ವಸ್ತುವಾಹನಂಗಳನಿತ್ತಾತನಂ ಸಂತೈಸುವುದು ಸಂಧಾನಮೆಂಬುದಕ್ಕುಂ. ವಿಜಿಗೀಷುಗಳರ್ವರುಂ ಪರಸ್ಪರಾಹಂಕಾರಂಗೆಯ್ವುದು ವಿಗ್ರಹಮೆಂಬುದಕ್ಕುಂ. ಶಕ್ತಿತ್ರಯಸಂಪನ್ನರಪ್ಪ ವಿಜಿಗೀಷುಗಳರ್ಬರುಂ ಮೇಲೆತ್ತಿ ಬರ್ಪುದು ಯಾನಮೆಂಬುದಕ್ಕುಂ. ಅರಿವಿಜಿಗೀಷುಗಳೊರ್ವರೊರ್ವರ ಮೇಲೆತ್ತಿಯೊತ್ತಲಾಱದೆ ನಿಲ್ವುದು ಆಸನಮೆಂಬುದಕ್ಕುಂ. ನಿಜಬಲವಿಲ್ಲದೆ ಶತ್ರು ವಿಜಿಗೀಷುವಾದೊಡಾಶ್ರಯಿಸುವುದು ಸಂಶ್ರಯಮೆಂಬುದಕ್ಕುಂ. ಬಲವಂತರಪ್ಪ ಶತ್ರುಗಳ ನಡುವೆ ದುರ್ಬಲನಪ್ಪ ನೃಪನಾ ರಿಪುಗಳಂ ವಾಜ್ಯತ್ರದಿನತಿ ಸಂಧಾನಂಗೆಯ್ದು ತನ್ನ ವನವನೆನ್ನರುವುಱಿಯಂದಂತು ಕಾಕಾಕ್ಷಿಗೋಳಕನ್ಯಾಯದಿಂದಿರ್ಪುದು ದ್ವೈಧೀಭಾವಮೆಂಬುದಕ್ಕುಂ. ಇಂತು ಷಾಡ್ಗುಣ್ಯಾಭಿಪ್ರಾಯದೊಳೀಗಳ ನವಸರಕ್ಕೆ ಸಂದೀಪಿ ಪೇೞ್ದಂತೆ ಸಂಧಿಯುಂ ಪೂಡನೇೞ್ಕುಂ. ಆ ಸಂಧಿಯಾವುವೆಂದೊಡೆ:—ಸಂಪ್ರದಾನ, ಕಪಾಲ, ಉಪಹಾಸನ, ಸಂತಾನ, ಸಂಗತ, ಉಪನ್ಯಾಸ, ಪ್ರತೀಕಾರ, ಸಂಯೋಗ, ಪುರುಷಾಂತರ, ಅದೃಷ್ಟಪುರುಷ, ಅದುಷ್ಟ, ಆತ್ಮಾಮಿಷ, ಉಪಗ್ರಹ, ಪರಿಕ್ರಮ, ಅರಿಪರಮೂಷಣ, ಸ್ಕಂಧೋಪನಯಮೆಂದು ಷೋಡಶವಿಧವುಕ್ಕುಂ. ಅಲ್ಲಿ ಪ್ರವ್ಯವಹನವುಂ ಕೊಟ್ಟು ವುನ್ನಿಪುದು ಸಂಪ್ರದಾನಮೆಂಬುದಕ್ಕುಂ; ಸಮು

ಸಂಧಿ ಕಪಾಲವೆಂಬುದಕ್ಕುಂ; ಸಂಧಾನಂ ಉಪಹಾಸನಸಂಧಿಯೆಂಬುದಕ್ಕುಂ; ಕನ್ಯಾ ದಾನಪೂರ್ವಕವಪ್ಪ ಸಂಧಿ ಸಂತಾನವೆಂಬುದಕ್ಕುಂ; ಮಿತ್ರಭಾವದೊಳ್ ನೆಗಟ್ಟ ಸಂಧಿ ಸಂಗತವೆಂಬುದಕ್ಕುಂ; ಭಾವಿಯಪ್ಪೇಕಾರ್ಥಸಿದ್ಧಿಯನುದ್ದೇಶಂಗೆಯ್ದು ನಡೆವುದು ಉಪನ್ಯಾಸನಸಂಧಿಯೆಂಬುದಕ್ಕುಂ; ಪರಸ್ಪರೋಪಕಾರಂಗೆಯ್ವುದು ಪ್ರತೀಕಾರಸಂಧಿಯೆಂಬುದಕ್ಕುಂ; ಅರಿವಿಜಿಗೀಷುಗಳೇಕಾರ್ಥಸಿದ್ಧಿಯಂ ಕೂಡುತು ನಡೆವ ಸಂಧಿ ಸಂಯೋಗವೆಂಬುದಕ್ಕುಂ; "ನಿನ್ನ ಸೇನಾನಾಯಕರಿಂದೆನ್ನ ಕಾರ್ಯಮಂ ಸಾಧಿಸಿದೊಡೆ ನಾಡಿದ ಪಣಮಂ ಕುಡುವೆ"ನೆಂಬುದು ಪುರುಷಾಂತರಸಂಧಿಯೆಂಬುದಕ್ಕುಂ; "ಎನ್ನ ಕಾರ್ಯಮಂ ನಿನ್ನ ಬಲ್ಲ ಮೂಲ್ಕೆಯಿಂ ತೀರ್ಚಿದೊಡೆ ನೀನೆಂದುದಂ ಮಾಳ್ಪೆ"ನೆಂಬುದು ಅದೃಷ್ಟಪುರುಷಸಂಧಿಯೆಂಬುದಕ್ಕುಂ; ಅರಿವಿಜಿಗೀಷುಗೆ ಭೂಮ್ಯೇಕಪ್ರದೇಶವಂ ಕೊಟ್ಟು ಮಾಱುವುದು ಅದೃಷ್ಟಸಂಧಿಯೆಂಬುದಕ್ಕುಂ; ಶತ್ರು ಸಮಸ್ತಬಲಂಪರಸು ವಿಜಿಗೀಷುವಂ ಕಾಣ್ಬುದುಂ ಆತ್ಮಾರ್ಪಿತಸಂಧಿಯೆಂಬುವಕ್ಕುಂ; ಸರ್ವಸ್ವಮಂ ತೆತ್ತು ಪ್ರಾಣರಕ್ಷಣಂ ಗೆಯ್ವುದು ಉಪಗ್ರಹಸಂಧಿಯೆಂಬುದಕ್ಕುಂ; ಭಂಡಾರಮನಕ್ಕೆ ಆತ್ಮಬಲಮನಕ್ಕೆ ಕೊಟ್ಟು ದೇಶಪ್ರವೃತ್ತಿಯಂ ರಕ್ಷಿಸುವ ಸಂಧಿ ಪರಿಕ್ರಯಸಂಧಿಯೆಂಬುದಕ್ಕುಂ; ಸಾರಭೂಮಿಯಂ ಕೂಡುವುದು ಅರಿಪರದೂಷಣಸಂಧಿಯೆಂಬುದಕ್ಕುಂ. ನುಡಿದ ದ್ರವ್ಯಮುಂ ಕಂದಾಯದೊಳ್ ಕುಡುವುದು ಸ್ಕಂಧೋಪನಯಸಂಧಿಯೆಂಬುದಕ್ಕುಂ. ಇಂತೀ ಪೇೞ್ದ ಪದಿನಾಱುಂ ಸಂಧಿ ವಾಚಸ್ಪತಿನೀತಿಯಲ್ಲಿರ್ಕುಂ; ಸೋಮದೇವನೀತಿಯಲ್ಲಿರ್ಕುಂ. ಇವಱಲ್ಲಿ ನಾವಾವ ಸಂಧಿಯಂ ಪೊಣರ್ಚುವೊಡಮರಿವರ್ ನನೊಡಂಬಡುವನಲ್ಲ.

ಅದೆಂತೆನೆ:—

ಜ್ಞಾತಿಬಹಿಷ್ಕೃತಂ ವ್ಯಸನಿ ದೈವಪರಂ ಶಿಶು ದೀರ್ಘರೋಷಿ ಸ
ತ್ಯೇತರನಸ್ಥಿರಂ ಸುರಗುರುದ್ವಿಜವೈರಿ ಬಹುದ್ವಿಷಂ ಭಯೋ ।
ಪೇತನಧಾರ್ಮಿಕಂ ವಿಕಳತಂತ್ರನಿಶ್ಚಿತಮಂತ್ರನಾಗಳುಂ
ಭೀತಪರಿಗ್ರಹಂ ಕೃಪಣನಾತ್ಮಬಲವ್ಯಸನಾತಿವಿಹ್ವಲಂ ॥ 36 ॥

ವಸುಹೀನಂ ದುಶ್ಶಿಕ್ಷಿತಂ
ವ್ಯಸನಯುತಂ ದೇಶಕಾಲಬಲರಹಿತಂ ಭೂ ।
ವಿಸೆ ದೈವಹೀನನವಿನೀ
ತಸೈನ್ಯನನ್ಯಾಯಿಯೆನಿಪ ನರಪನೊಳಂದುಂ ॥ 37 ॥

ವಿಜಿಗೀಷುಗಳಪ್ಪ ಮಹೀ
ಭುಜರೆಂದುಂ ಸಂಧಿಮಾಡರದಱಿಂ ಬಲಿಭೂ ।
ಗ್ವ್ರಜಮುಖ್ಯ! ಕೇಳುಲೂಕ
ವ್ರಜವರನೊಳ್ ನವುಗೆ ಸಂಧಿಯಾಗದನೋಳ್ಪುಂ ॥ 38 ॥

ಅದಱಿಂ ಕೌಶಿಕಂಗಳ್ಗಂ ನವುಗಂ ದುರ್ಧರವಪ್ಪ ವೈರವುಂಟಾಗಿಯುಂ ನಾವೆಲ್ಲರುಂ ರಾತ್ರ್ಯಂಧರುವುವರೆಲ್ಲರುಂ ದಿವಾಂಧರುವುಪ್ಪುದಱಿಂ ಸಂಧಾನವೆಂತು ವಾಗಲಱಿಯದೆಂದು ನುಡಿದ ಚಿರಂಜೀವಿಯ ವಾತಂ ಕೇಳ್ದ ವೇಳುವರ್ಣನಿಂ ತೆಂದಂ:—

ಅಸ್ತಾಂತಾವನ್ಮಂತ್ರ
ಪ್ರಸ್ತಾವನವಾರ್ಯ! ನವುಗವಾಕೌಶಿಕಪ ।
ತ್ರಿಸ್ತ್ರೋವುವಲ್ಲ ಭಂಗಂ
ಪ್ರಸ್ತುತವುತಿವೈರವಾದ ತೆಱನೇಂ ಮೊದಲೊಳ್ ॥ 39 ॥

ಎನೆ; ಚಿರಂಜೀವಿಯಿಂತೆಂದಂ —

ಶ್ಲೋಕ ॥ ''ಸಾಪತ್ನಂ ವಸ್ತುಜಂ ಸ್ತ್ರೀಜಂ ವಾಗ್ಭೂತವುಸರಾಧಜಂ
ವೈರಪ್ರಭೇದನಿಪುಣೈಃ ವೈರಂ ಪಂಚವಿಧಂ ಸ್ಮೃತಂ''

ಟೀಕು—ಇರ್ವರ್ ಪೆಂಡಿರ ದೆಸೆಯಿಂದಾದುದು, ವಸ್ತುವಿನ ದೆಸೆಯಿಂದಾದುದು. ಸ್ತ್ರೀಯರ ದೆಸೆಯಿಂದಾದುದು, ವಾಗ್ದೋಷದಿಂದಾದುದು, ಅಪರಾಧದಿಂದಾದುದು, ಎಂದಿಂತು ವೈರಮೈದು ತೆಱನಾಗಿಹುದು.

ಅದಱೊಳಗೆ,

ನವುಗಂ ಕೌಶಿಕಲಕ್ಷ್ಮೀ
ರವುಣಂಗಂ ವಚನದೋಷದಿಂ ಕಾಕವಿಹಂ ।
ಗವುಚಕ್ರವರ್ತಿ! ಶತ್ರು
ತ್ವವುಮಾಯ್ತು ವಿಹಗಪ್ರಧಾನರೆಲ್ಲರುವುಱಿಯಲ್ ॥ 40 ॥

ಅದುಕಾರಣದಿಂ,

ಮೊದಲೊಳ್ ವೈರಂ ವಾಗ್ದೋ
ಷದಿನಾದುದು ಕೌಶಿಕಾಧಿಪತಿಗಂ ನವುಗಂ ।
ತೊದಳಲ್ತು ಪೇಕ್ಷಿಸಿರೆ ಬಳಿ
ದುದು ಬಱಿಕೀತೆಱದೆ ಸಕಲಕಾಕಾಧೀಶಾ ॥ 41 ॥

ಎನೆ; ವೇಳುವರ್ಣಂ ವಾಗ್ದೋಷವಾವಕಾರಣದಿನಾದುದೆನೆ; ಚಿರಂಜೀವಿ ಪೇಱ್ದಿಂ:— ಏನಾನುವೊಂದು ನೆವದೊಳ್ ಸಕಲಶಕುನಿಕುಲಪ್ರಧಾನರೆಲ್ಲಂ ನೆರೆದು ತವ್ಕೊಳಿಂ ತೆಂದರ್:—

ವಿನತಾನಂದನನೆಂದುನಿಂದುಧವಳಶ್ರೀವುತ್ಪಯೋವಾರ್ಧಿಯೊಳ್
ವಿನತಾನಂದನನಂ ವುಕುಂದನನನೋಳುತಾಯಿಯಂ ಭಕ್ತಿಯಿಂ ।
ದೆನನುಂ ಸೇವಿಸುತಿರ್ಪನಾರ್ಗವುಱಿದೆಯ್ದಲ್ ನವ್ಮ ಕಜ್ಜಂಗಳಂ
ನೆನೆಯಂ ನವೊಳ್ಗಳಗೌರ್ವನಂ ಗುಣಗಣೈಕಾಧಾರನಂ ಧೀರನಂ ॥ 42 ॥

ಪ್ರವರವಿಹಂಗಮಕುಲಚ
ಕ್ರವರ್ತಿ ಪಟ್ಟಕ್ಕೆ ಯೋಗ್ಯನಂ ಮಾಡಿ ಮಹೋ ।
ತ್ಸವದಿಂ ಮಾಡುವುದಭಿಷೇ
ಕವನುತ್ತಮಭಗಣವಿನುತಲಗ್ನೋದಯದೊಳ್ ॥ 43 ॥

ವ ॥ ಎಂದು ಪತತ್ರಿಪ್ರಧಾನರೆಲ್ಲಮಾಳೋಚಿಸಿ ಕೌಶಿಕವಿಹಂಗಮಕ್ಕೆ ವಿಹಂಗಮಕುಲಚಕ್ರವರ್ತಿತ್ವಮಂ ಮಾಱ್ಪಿನೆಂದು ನಿಶ್ಚಯಿಸಿ ಪಟ್ಟಬಂಧೋತ್ಸವಯೋಗ್ಯಂಗಳಪ್ಪ ಮಂಗಳದ್ರವ್ಯಂಗಳಂ ತನ್ನಿಮೆಂದು ಪೇೞಲೊಡಂ.

ವರದಾಸಿಂಧುಸರಸ್ವತೀರವಿನುತಾಗೋದಾವರೀನರ್ಮದಾ
ಸರಯೂಭೋಗವತೀಕವೇರತನಯಾತಾಪೀಪಯೋಷ್ಣೀನದಿ ।
ದ್ವರಗಂಗಾಸಲಿಲಂಗಳಂ ಹಿಮಕರಸ್ವಚ್ಛಂಗಳಂ ತಂದರಾ
ದರದಿಂ ಹೇಮಘಟಂಗಳಂ ಕೆಲಬರುದ್ಯತ್ಪತ್ರಿಗೋತ್ರೋತ್ತಮರ್ ॥ 44 ॥

ವಿನುತಶ್ವೇತಾತಪತ್ರಾವಳಿಯರುಣಮಣಿಪ್ರಸ್ಫೋತ್ತುಂಗಸಿಂಹಾ
ಸನವಂ ಗಂಗಾತರಂಗೋಪವಜವರರುಹಸ್ಫೂರ್ಜಿತಂ ಶಂಖವಂ ಪ್ರಾಂ ।
ಜನವಂ ನಾನಾಪ್ರಕಾರಧ್ವಜಸಮುದಯವಂ ತೂರ್ಯಸಂದೋಹವಂ ಚಂ
ದನವಂ ಪತ್ರಿಪ್ರಧಾನರ್ ಕೆಲರಧಿಕತರಾನಂದದಿಂ ತಂದರಾಗಳ್ ॥ 45 ॥

ಕುಂಕುಮಪಂಕವಂ ದಧಿಯನುಜ್ಜ್ವಳದರ್ಪಣವಂ ನವೀನದೂ
ರ್ವಾಂಕುರವಂ ಹಿಮಾಂಶುಧವಳಾಂಬರವಂ ಮಧುವಂ ಮನೋಹರಾ ।
ಳಂಕರಣಂಗಳಂ ವರಸುತಾಕ್ಷತವಂ ರಮಣೀಯಮಪ್ಪ ಮು
ತ್ತಂ ಕರಿದಾನವಂ ನೆರಪಿದರ್ ಕೆಲಬರ್ವಿಹಗಾಧಿನಾಯಕರ್ ॥ 46 ॥

ಕಮನೀಯಗಂಧಬಂಧುರ
ನವೀರವಮಂದಾರದಾರಿಜಾತಾವಿಸರ ।
ದ್ರುಮಕುಸುಮದಾಮಮಂ ಶಕು
ನಿಮುಖ್ಯರಾದರದೆ ತಂದರಾಗಳ್ ಕೆಲಬರ್ ॥ 47 ॥

ಇಂತು ರಾಜ್ಯಾಭಿಷೇಕಯೋಗ್ಯಂಗಳಪ್ಪ ನಾನಾಪ್ರಕಾರವಮಂಗಳದ್ರವ್ಯಂಗಳಂ ನೆಲಿಪಿ ಕೌಶಿಕವಿಹಂಗಮಕ್ಕೆ ಪಟ್ಟಮಂಗಟ್ಟಲಿರ್ದವಸರದೊಳ್ ರಾವಣರಾಜ್ಯಾಭಿಷೇಕಮಂಟಪಕ್ಕೆ ಕೈಕೆ ಬರ್ಪಂತಮಲೂಕರಾಜ್ಯಾಭಿಷೇಕಮಂಟಪಮಾಗಿರ್ದ ವಿಶಾಲವಪ್ಪ ಆಲದ ಮರದವೇಲೆ ಕಾಗೆ ಬಂದು ಪಾಯ್ದುಂ ದುಸ್ಸ್ವರದಿಂ ಕರೆವುದುವುದಂ ಕೇೞ್ದಂ ಡಜಪ್ರಧಾನರೋರೊರ್ವರ ಮೊಗಮಂ ನೋಡಿ, ನಮ್ಮ ಮೂಲ್ಪ ಕಜ್ಜವಮೊಪ್ಪಿಡೆ ಮಹಾಪ್ರಾರಂಭಮದಱಿಂ ಶಕುನನಿಮಿತ್ತಂಗಳಂ ನೋಡಿ ಮಾಡಲ್ವೇೞ್ಕುಂ, ಈವಾಯಸಸ್ವರಂ ದುಸ್ಸ್ವರಮಾಗಿರ್ದುದಿದುವುಂ ಪತತ್ರಿಗೋತ್ರಮಪ್ಪುದಱಿಂದಿದರ್ಕ್ಕಾಪತ್ಪರಿಹಾರಮಂ ವೇೞ್ಕುಮೆಂದು ಸಮೀಪಕ್ಕೆ ಕರೆದು ಕೌಶಿಕಪಟ್ಟಬಂಧಮಂ ಸವಿಸ್ತರಂ ಪೇೞ್ದು ಕೇೞ್ದ ವಾಯಸಂ ಶಕುನಿಸಮೂಹಕ್ಕಿಂತೆಂದುದುಃ—

ಕುಭಲಕ್ಷಣಂಗೆ ಸತತಂ
ಪ್ರಭುವುಂತೊ್ರೀತ್ಸಾಹಕ್ತಿಯುಕ್ತಂಗೆ ಖಗ ।
ಪ್ರಭುತೆಯುನೀನ್ವುದು! ವೂಡುವು
ದಭಿಷೇಕವುನಲ್ಲದಂದು ವೂಣ್ಪುದವೋಳುಂ ॥ 48 ॥

ಅಂತುವುಲ್ಲದೆ; ಸುರಾಸುರಭೂಸುರಚೂಡಾವುಣಿವುರೀಚಿಮಾಲಾಲಂಕೃತಚಾರು ಚರಣನೆನಿಪ್ಪ ವನಜನಾಭಂಗೆ ವಾಹನವೂಗಿರ್ದತಾರ್ಕ್ಷ್ಯನ್ವಯದ ಪಕ್ಷಿಸಿಕಾಯುವುಂ, ಸಕಳಜಗಜ್ಜನವಂದ್ಯನೆನಿಪ ವನಜಾಸನಂಗೆ ವಾಹನವೂಗಿರ್ದ ರಾಜಹಂಸಾನ್ವಯದ ಹಂಸನವೂಜವುಂ, ದೇವಾದಿದೇವನಪ್ಪ ವುಹಾದೇವನ ತನೂಭವನುಂ ತಾರಕವಿ ದಾರಕನುವೂಗಿರ್ದ ಕುವೂರಂಗೆ ವಾಹನವೂಗಿರ್ದ ವಯೂರವಂಶದ ವಯೂರ ವುಂಡಲವುಂ, ರಘುಕುಲತಿಲಕನಪ್ಪ ರಾವುನ ವುನೋನಯನವಲ್ಲಭೆಯುನುಯ್ದ ರಾವಣಂಗೆ ಭಂಗಂವೂಡಿದ ಜಟಾಯುವಂಶದ ಪಕ್ಷಿಪ್ರಧಾನರುಂ, ಲೋಕೈಕನೇತ್ರನುಂ ಕತಪತ್ರವಿತ್ರನುವುಪ್ಪ ಆದಿತ್ಯಂ ತವುಗೆ ಪರವುಮಿತ್ರನೆಂಬಹಂಕಾರದ ಚಕ್ರವಾಕ ಚಕ್ರವುುಂ, ಸುರಾಸುರನಿಕಾಯವುುಕ್ಕೈಕ್ಕೆಯಿಂ ಕಡೆವ ಪಾಲ್ಗಡಲೊಳಗೊಗೆದ ಸಿರಿ ಯೊಡನುದಯಿಸಿದ ಅವ್ಯತಕಳಾಧರನೆನಿಪ್ಪ ಚಂದ್ರನ ಕಿರಣಾವೃತವುನೀಂಪಿ ತಣಿ ದರ್ಪ ಚಾರುಚಕೋರಾನ್ವಯದ ಪತಂಗಪುಂಗವರುಂ, ಶ್ರವಣವಾತ್ರದಿಂ ನಾನಾವಿಧ ದೋದುಂಗಳನೋದಲ್ಬಲ್ಲ ಶುಕಶಾರಿಕಾಸಂಕುಳವುುಂ, ವುುಕರಕೇತನವುಹೀವಲ್ಲಭ ವುಹಾಪ್ರತೀಹಾರಪದವೀವಿರಾಜವೂನವೆನಿಪ್ಪ ಕೋಕಿಲಕುಲವುುಂ, ದರ್ಶನವೂ ತ್ರದಿಂ ಶುಭವೆಂಗಳೆನಿಪ್ಪ ಭೂವಧ್ವಜರಾಜಿಗಳುಂ, ಸಲಕ್ಷಣಸೌಂದರ್ಯಸ್ತ್ರೀಜನ ನೇತ್ರಚುಂಚರ್ಕ್ಕೋಪವೆಂಗೆ ಬಣ್ಣಿಸಲ್ ಯೋಗ್ಯವುಪ್ಪ ಖಂಜನಪುಂಜವುುಂ, ರಾಜ ಕುವೂರರಾರೋಗಿಸುವವ್ಯತಾಹಾರಪರೀಕ್ಷಾಯೋಗ್ಯಂಗಳೆನಿಪ್ಪ ಜೀವುಂಜೀವಕ ಸವೂಹವುುಂ, ವುಹಾಸವುದ್ರಕ್ಕುಪದ್ರವಂವೂಡಿದ ರೌದ್ರಾಟೋಪಪ್ರಕೋಪ ವುಪ್ಪ ಟಿಟ್ಟಿಭಪ್ರಕರವುುಂ, ಸಕಲಶಕುನಿಗಣಂಗಳೊಳಗೆ ಸತ್ತ್ವದೊಳಂ ಸಾಹಸ ದೊಳವುಧಿಕವುಪ್ಪ ಭೇರುಂಡವುಂಡಳಿಯುುಂ, ಅಂಡಜಕುಲಪ್ರಸೂತಂಗಳಾಗಿಯುುಂ ವೂರ್ತಣ್ಡತನೂಜರೆನಿಪ್ಪ ವುಹಿಮೆಗಾಸ್ಪದವಾಗಿ ದೀರ್ಘಾಯುಗಳೆನಿಪ್ಪ ವಾಯುಸ ವವುದಾಯವುುಂ, ಖಾಂಡವವನವುನಗ್ನಿಯನೂಡಿದ ಪಾಂಡವಂಗುಪಕರಿಸಿ ಪಾಂಡ ವೋಪಕಾರಿಗಳಾಗಿಯುುಂ ವೇದಿನಿಯ ಜನಕ್ಕೆ ಶುಭಾಶುಭಾದಿಕಾರ್ಯಂಗಳಂ ಸೂಟಿ ಸುತ್ತಿರ್ದ ಪೋದಗೆಗಳುಂ, ಕಿರಾತಂಗೆ ತನ್ನಸುವನಿತ್ತು ಜನಂಬಡೆದ ಕಪೋತವಂಶದ ಕಪೋತವ್ರಾತವುುಮಿರ್ದಂತೆ.

ದಿವಸಾಂಧಂಗವಲಕ್ಷಣಂಗೆ ಸತತಂ ಕ್ರೂರಂಗೆ ವಿಪ್ರಾನ್ವಯಾ
ಧವನಪ್ಪಂಗತಿದುರ್ಮಖಂಗೆಸವ ಸತ್ಯತ್ಯಾಗಶೌರ್ಯೋಜಿತ ।
ವ್ಯವಸಾಯೇತರನಪ್ಪವಂಗೆ ಧಿಷಣಂ ನಿವ್ಮಂದಿಗರ್ ತೊಟ್ಟಿಂ
ತವಿಚಾರಕ್ರವುದಿಂದವಿವುದೆ! ಖಗೋದ್ಯಚ್ಚಕ್ರವರ್ತಿತ್ವವುಂ ॥ 49 ॥

ಅವಿವೇಕಂ ಕ್ಷುದ್ರನೆನಿ
ಪ್ಪವನರಸಾದಂದು ಭೂತಳಕ್ಕೆಲ್ಲಮುಪ ।
ದ್ರವಮುಕ್ಕುನೆಂಬರೆಲ್ಲಂ
ಪ್ರವರನಯೂಗವುವಿದಗ್ದರಪ್ಪ ವುನೀಕರ್ ॥ 50 ॥

ಅದಲ್ಲದೆಯುಂ;

ಶ್ಲೋಕ ॥ "ಕ್ಷುದ್ರಮರ್ಥಪತಿಂ ಪ್ರಾಪ್ಯ ನ ತದ್ವಿವದತಾಂ ಸುಖಂ"

ಟೀಕು—ಕ್ಷುದ್ರನಪ ಅರ್ಥಪತಿಯ ಕೂಡೆ ಪ್ರಸಂಗವ ಮಾಡುವಂಗೆ ಸೌಖ್ಯವಿಲ್ಲ.

ಎಂಬ ಕಥೆಯುಂತಕ್ಕುವೆನೆ—ಶಕುನಿಸಮೂಹವುದೆಂತೆಂದು ಬೆಸಗೊಳೆ—ವಾಯಸಂ ಪೇಳ್ದುಂ:—

ದಕ್ಷಿಣದೇಶದೊಳೊಂದು ಮಹಾಟವಿಯಿರ್ಪುದು. ಅದಱೊಳೊಂದು ಮಾವಿರ್ಪುದು. ಆಮಹಾವೃಕ್ಷದ ಕೆಲದಲ್ಲಿರ್ದ ವುಲ್ಲಿಕಾವಲ್ಲರಿಯೆ ತನಗರವುನೆಯಾಗೆ ಚತುರಕನೆಂಬುದೊಂದು ಕಪಿಂಜರನಿರ್ಕುಂ. ಅದರ್ಕವೆನಗಂ ವಿತ್ರತ್ವಂ ಸಲುತ್ತಿರಲೊಂದುದಿನಂ ಕಪಿಂಜರನಾಹಾರಾರ್ಥಂ ವಿಹರಿಸಲ್ಪೋಗಿ ತಡೆವುದುಂ; ಅಲ್ಲಿಗೆ ಕಲಹಪ್ರಿಯನೆಂಬುದೊಂದು ಮೊಲಂ ಬಂದಾಪಕ್ಕಿಯ ವುನೆಯಂ ಪೊಕ್ಕಿರ್ಪುದುಂ, ಕಿಱಿದಾನುಂ ಬೇಗಕ್ಕೆ ಕಪಿಂಜರಂ ಬಂದು ಕಂಡೆನ್ನ ವುನೆಯುಂ ನೀನೇಕೆ ಸೊಕ್ಕೆ ಪೋಱುವಡೆನಲೊಡಂ; ಎನ್ನ ಕೆಳೆಯುನ ಕಜ್ಜದ ಕೇಡನಾಂ ಕಂಡದರ್ಕೆ ವುಧ್ಯಸ್ಥನಾಗಿ ನೀನಿರ್ದಯವಿಲ್ಲಿರ್ದು ಬವರಂಗೆಯ ಲ್ವೇಡ! ತಕ್ಕರ ಸಮೀಪಕ್ಕೆ ಪೋಗಿ ವಿಚಾರಂಗೆಯ್ದು ಬವರ್ ಪೇಳ್ದಿಂತೆ ಕೇಳಿವೆನ; ಶಕಶಪಿಂಜರಂಗಳಂತೆಗೆಯ್ವೆನೆಂದು ಪೋಪುದುವಿಾಚಕ್ಕೋಕ್ಯವುಂ ನೋಲ್ಪೆನೆಂದಾನುವವಲಿ ಪಿಂತಪಿಂತನೆ ಪೋದೆಂ. ಅನ್ನೆಗವುವು ಕಿಱಿದಂತರವುಂ ಪೋಗಿ ವಿಶಾಲಕರ್ಣನೆಂಬ ಶಾರ್ದೂಲಂ ಜಂಘಾಬಲವಿಲ್ಲದೆ ತೋಱಲಲಾಱದೆ ಇನ್ನಾಹಾರವುನೆಂತು ಪಡೆವೆನೆಂದು ಚಿಂತಿಸಿ.

ವಾಕ್ಯಂ ॥ "ಅನಾಥಂ ಲಿಂಗವುದ್ದಿಷ್ಟಂ ನ ಮೋಕ್ಷಾಯ ವಿಧೀಯತೇ" ॥

ಟೀಕು—ಗುರುವಿಲ್ಲದ ಲಿಂಗಲಾಂಛನವು ಮೋಕ್ಷವಂ ಮಾಡದು.

ಎಂಬುದುಂ ಶಾಸ್ತ್ರಾರ್ಥವುಂಟುಂ. ಆನುವಿಾತೀರ್ಥದ ಸಮೀಪದೊಳ್ ತಾಪಸರೂಪಧಾರಿಯಾಗಿರ್ದ ಸಾರಂ ಬಂದುದೇನಾನುಂ ಪ್ರಾಣಿಗಳಂ ತಿಂದು ಕಾಲವುಂ ಕಳಿವೆನೆಂದು ತಪೋರೂಪವುಂ ಕೈಕೊಂಡಿರ್ದ ಶಾರ್ದೂಲವುಂ ಕಂಡು ಕಲಹಪ್ರಿಯನಿಂತೆಂದುದುಂ: — ನಾವೀ ದಿವ್ಯತಾಪಸನವುಂದೆ ವಿಚಾರಂಗೆಯ್ವುಂ ಬಾಯೆಂಬುದುಂ; ಕಪಿಂಜರನದಱೊಡನಿಂತೆಂದಂ:—"ಎನಿತು ಪುಲಿ ನಿಯವುಸ್ಥನಾದೊಡಂ ಶ್ರಾವಕನಲ್ಲಂ." ಎಂಬ ನಾಣ್ನುಡಿಯುಂಟು. ಅದಱುಂ ನಾವಿದಱ ಸಮೀಪಕ್ಕೆ ಪೋದೊಡೆ

ಬಾಣಸಿನ ಮನೆಯನಲಸಿ ಮೊಲಂ ಪೊಕ್ಕಂತಕ್ಕುಮೆಂದೆರಡುಂ ನುಡಿನ್ವುದುಮದನಾ ವ್ಯಾಧ್ರತಾಪಸಂ ಕೇಳ್ದಿವೆಂತುಂ ನಂಬುವಂತೆ ಮಾಳ್ಪೆನೆಂದೊಂದೆ ಕಾಲೊಳ್ನಿಂದಾದಿತ್ಯಂ ಎತ್ತಲ್ ಸೋದನತ್ತಲೆ ಮುಖವಾಗಿರ್ಪುದಂ ಕಂಡು ಜತುರಕಸಿಂತೆಂದಂ:—ಈಬಕ ವೇಷಿ ನಮ್ಮಂ ಕಂಡು ವಿಕೃತವೇಷದಿಂ ನಿಂದಪನಿವಸಂ ನಂಬಲ್ಬಾರದು. ಅದೆಂತೆನೆ:—

"ತೃಣಚೋರಕ್ಯ ಬ್ರಾಹ್ಮಣಃ" ॥

ಎಂಬ ಕಥೆಯಂತಕ್ಕುಮೆನೆ—ಕಳಕನದೆಂತೆನೆ—ಕಪಿಂಜರಂ ಪೇಳ್ದಂ:—

೨. ನಾರಾಯಣಭಟ್ಟನ ಕಥೆ

ಬೆಳೆದೊಱೆದಿರ್ದ ಕಱವೆಯು ಕೆ
ಯ್ಗಳಸೊಪ್ಪುವ ತಿಳಗೊಳಂಗಳಂ ರವ್ಯವನಾ ॥
ವಳಯಿಂ ಸೊಗಯಿಸುವುದು ಭೂ
ತಳವಂಡನವೆನಿಸಿ ಮಳಯವಿಷಯಂ ಜಗದೊಳ್ ॥ 51 ॥

ಆವಿಷಯದೊಳ್ ನಂಬಿನಾರಾಯಣನೆಂಬ ಅಗ್ರಹಾರಮುಂಟು. ಅದಱೊಳ್ ನಾರಾಯಣಭಟ್ಟನೆಂಬನೊರ್ವ ಪಾರ್ವಂ ತೀರ್ಥಯಾತ್ರಾಪರನಾಗಿ ಗಂಗಾಸ್ನಾನಮುಮಂ ಕುರುಕ್ಷೇತ್ರದೊಳ್ ದಾನಮುಮಂ ಮಾಡುವೆನೆಂದು ವೇಣುದಂಡದೊಳ್ ಸೇರಾಣಿಯಾ ಪೊನ್ನಂ ತೀವಿ ಪೆಱರಱಿಯದಂತಾಗಿ ಮಾಡಿಕೊಂಡಾರ್ಗಂ ವೇಱದರ್ಧರಾತ್ರಿಯೊಳ್ ಮನೆಯಂ ಪೊಱಮಟ್ಟುತ್ತರಾಭಿಮುಖವಾಗಿ ಬರ್ದನ್ನಂ, ಮತ್ತೊರ್ವಂ ಧೂರ್ತಶಿಖಾಮಣಿಯೆಂಬ ಪಾರ್ವಂ ಕಂಡೀತನ ಕೈಯೊಳ್ದೇನಾನುಂ ದ್ರವ್ಯಮಾಗದಿರದೆಂದು—"ಭಟ್ಟರೇ! ನೀವೆತ್ತಲ್ ಪೋಪಿ"ರೆನೆ; ಗಂಗಾಸ್ನಾನಂಗೆಯ್ಯಲ್ ಪೋದಪ್ಪೆನೆಂದೊಡಾನುಂ ಬಂದಪ್ಪೆನೆಂದೊಡಾಪಾರ್ವಂ ನೆರಂಬಡೆದೆನೆಂದು ಕರವೊಳ್ಳಿತ್ತೆಂದು ಬನ್ನಿವೆಂದು ಇರ್ವರುಮನೇಕದೇಶಂಗಳಂ ಕಳೆದು ಚಂಪಾನಗರಮನೆಯೆದ್ದಿವಂದಾಪೋಱಲಂ ಪೊಕ್ಕನೊರ್ವಪಾರ್ವನ ಮನೆಗೆ ಬಂದು ಸಂಧ್ಯಾವಂದನಂ ಗೆಯ್ದುಂಡು ಮಱುದಿನ ಮರ್ಧರಾತ್ರಿಯೊಳೆರ್ದು ಪಯಾಣಂಬೋಗಿ ನಿಶಾವಸಾನಸಮಯಮಪ್ಪಗಳ್,

ಮದವದ್ವನ್ಯಗಜೇಂದ್ರದಾನಮಲಿನೋದ್ಯದ್ಭೃಂಗಸಂಘಾತಸಂ
ಪದೆಯಂ ಬಾಲಮೃಣಾಳಜಾಲಕಲನತ್ಸ್ವಾದುಪ್ರಪುಷ್ಪೋತ್ಕರ ।
ಚ್ಛದೆಯಂ ತೀರನವೀನಚೂತಕುಸುಮವ್ರಾತಾಸವೋನ್ಮತ್ತ ಷ
ಟ್ಪದೆಯಂ ನರ್ಮದೆಯಂ ಮಹಾಹ್ರದೆಯನಾವಿಪ್ರಂ ಸವಂ ಕೆಯ್ದುದಂ ॥ 52 ॥

ವ ॥ ಅಂತೆಯ್ದಿವಂದಾಮಹಾನದಿಯೊಳ್ ಸ್ನಾನಂಗೆಯ್ಯಲೆಂದು ಭಟ್ಟಂ ನಿಲ್ವುದುಮಾಧೂರ್ತಶಿಖಾಮಣಿ ನಾರಾಯಣಭಟ್ಟಂಗೆ ನಂಬುಗೆಯನೆಂತು ಮಾಳ್ಪೆನೆಂದು ಚಿಂತಿಸುವಸಮಯದೊಳ್ ಪತ್ತಿ ಬಂದುದೊಂದು ಪುಲ್ಲಂ ಕಂಡು ಭಟ್ಟಗೆ ತೋಱಿ—ನೋಡಿರೆ! ಪಾಪಕರ್ಮನೆಂ! ಪರದ್ರವ್ಯಾಪಹರಣಂಗೆಯ್ದಿನೆನ್ನಂತು ನಿಕೃಷ್ಟನಾವನುಮಿಲ್ಲಿನೆ; ಭಟ್ಟರೆಂದ "ರಿದಂ ನೀವಱಿತು ತಂದುದಿಲ್ಲಿದೊಂದು ಪುಲ್ ತಲೆಯೊಳ್ ಪತ್ತಿ ಬಂದುದಕ್ಕೇನುಂ ದೋಷಮಿ"ಲ್ಲೆಂದೊಡಾಧೂರ್ತಂ ಮತ್ತಮಿಂತೆಂದಂ:—

ಈವುಲ್ಲದೆಂತು ಬಂದೊಡ
ಮೇಪಡೆವಾತನಗೆ ದೋಷವುಕ್ಕುವುನೋಳ್ಕುಂ ।
ಪಾಪಕ್ಕಂಜುವೆನದಱಿಂ
ದೀಪುಲ್ಲಂ ಮತ್ತವುಲ್ಲಿ ಬಿಸುಟೂಂ ಬರ್ಪೆಂ ॥ 53 ॥

ಎಂದು ನೀವೀವುಂಡಣೂರೊಳೊಂದು ದಿವಸವಿರಿವೆಂದಾಪುಲ್ಲಂ ಪಿಡಿದು ವುಗುಟ್ಟು ಕಿಱಿದಂತರಂ ಬಂದು ಪುಲ್ಲನಲ್ಲಿಯೆ ಬಿಸುಟು ಕಿಱಿದು ಪೋಟ್ಟುಗಳೆದು ವುಗುಟ್ಟಿರಳಿರೆಜಾವವೂದಾಗಳ್ ಭಟ್ಟರರ್ದೆಡೆಯನಱಿಯುತ್ತುಂ ಬಂದು ಕಂಡು— ಪಥಕ್ರಮದೊಳಂ ಕ್ಷುಧೆಯೊಳಂ ಕರಂ ಬಱಿಲ್ದೆನೆನೆ; ನಾರಾಯಣಭಟ್ಟನಿಂತೆಂದಂ— ನೀವಿಂತಿರ್ದೊಡೆ ಪೊತ್ತು ಪೋದಪುದು, ಬಲ್ಲಿಕ್ಕೆ ಭೈಕ್ಷವನಿಕ್ಕುವರಿಲ್ಲ! ಈಗಳ್ ಪೋಗಿವೆನೆ; ಧೂರ್ತನೆಂದನೀಪೋಟ್ಟು ಸೋದೊಡೆ ನಾಯ್ಗಳ್ ತಿಂಗುವೆಂತು ಪೋಪೆನೆನೆ; ಭಟ್ಟನಾದುಷ್ಟನಂ ಶಿಷ್ಟನೆಂದೆ ಬಗೆದು ತನ್ನ ಕೈಯ ಪೊನ್ನ ಕೋಲಂ ಪಿಡಿದು ಪೋಗಿ ಕಿಡಿಸದೆ ಕೊಂಡು ಜೇಗಂ ಬಾ ಪೋಗೇಬುದುವಂತೆಗೆಯ್ವೆನೆಂದಾಧೂರ್ತಶಿಖಾಮಣಿ ಸ್ವಾರ್ಥಸಿದ್ಧಿಯಂ ಮಾಡಿಕೊಂಡು ಸ್ವೇಚ್ಛೆಯೊಳ್ಕೋಡಿ ಪೋದಂ. ಆಭಟ್ಟನಾತಂ ಬಂದಪನೆಂದಿರುಳೆಲ್ಲಂ ಜಾಗರವಿರ್ದು ನೇಸಱುೞ್ ಮೂಡೆ ನಾಡೆಯುಂ ಪೋಲ್ತಿರ್ದು ಎಂತುಂ ಒರನಂ ಕಾಣದೆ ಚಿಂತಾಕ್ರಾಂತನಾಗಿ ಕಿಱಿದು ಜೇಗವುನಿರ್ದು,

ವಾಕ್ಯಂ ॥ "ಶ್ರೇಯಾಂಸಿ ಬಹುವಿಘ್ನಾನಿ" ॥

ಎಂಬುದುಂಟೆಂದರ್ಥದಹಲಂ ಪತ್ತುವಿಟ್ಟು ಮತ್ತಂ ಸತ್ತ್ವವಲಂಬಿಯಾಗಿ ಪೋಗಿ ತೀರ್ಥಸ್ನಾನಾರ್ಥಂ ಬರ್ಪನವೊಂದು ಮಹಾರಣ್ಯದ ಪುಣ್ಯತೀರ್ಥದ ತಡಿಯೊಳೊಂದು ಮಹಾಕಾಯನಪ್ಪ ಬಕಂ ಕಕುನಿಗಳ್ಗೆ ಧರ್ಮವ್ಯಾಖ್ಯಾನಂಗೆಯ್ವುದಂ ಮತ್ಸ್ಯಂಗಳ್ ಮೊದಲಾಗಿ ಜಲಚರಂಗಳುಂ ವಿವಿಧವಿಹಂಗಂಗಳುಂ ಕೇಳ್ವುದಂ ಕಂಡು ಭಟ್ಟನೀಚಕೋದ್ಯವುಂ ನೋೞ್ಪೆನೆಂದದಱಿ ಕೆಲದೊಳ್ ಪರ್ವಿ ಕೊರ್ವಿ ಸುರ್ವುಗೊಂಡ ಮಾಧವಿಯ ಪೊದಱೊಳಡಂಗಿರ್ದು ನೋೞ್ಪುದುಂ; ಕಿಱಿದುಂ ಜೇಗಕ್ಕೆ ಆ ಬಕಂ ವ್ಯಾಖ್ಯಾನವುಂ ಮಾಣ್ದು—ಇನ್ನಾಂ ನಿಯಮವುಂಗೆಯ್ದವೆಂ, ನೀವೆಲ್ಲಂ ಪೋಗಿವೆನೆ; ಪಕ್ಷಿಗಳೆಲ್ಲಂ ಬರ್ಮೆಯೆ ಪಾಱು ಪೋದುವು. ಜಲಚರಂಗಳೊಂದೊಂದೆ ಪೋಪಾಗಳ್ ಏಂವುೞಿದ ಮತ್ಸ್ಯವನೊಂದೊಂದಂ ಪಿಡಿದು ತಿಂದುದಂ ಭಟ್ಟುಂ ಕಂಡು ಜಿಕೋದ್ಯಂಬಟ್ಟು ಅಲ್ಲಿಂ ತಳರ್ದು ಕೆಲವನಂ ದಿವಸಕಾಜ್ಜಯಿನಿಯನೆಯ್ದುವುದುವಾಪೊಱಸೊಱಲೊಳೊಂದು ನಂದನವನದೊಳಗೊರ್ವಂ ತಾಪಸರೂಪಧಾರಿಯಾಗಿ ತಪನತಾಪಕ್ಕೆ ಮೊಗವುನೊಡ್ಡಿ ನಾಲ್ಕುಂ ದೆಸೆಯೊಳಂ ಕಿಚ್ಚನೊಟ್ಟಿ ನಡುವೆ ನಿಂದಿರ್ದನದಂ ಕಂಡು,

ಇದು ಕೌತುಕವಾಗಲೆವೇ
ಱ್ದುದು! ನೋಡುವೆನಿದುವುನೆಂದು ತದ್ವಿಪ್ರಂ ನಿ ।
ಲ್ವುದುವುಪರಗಿರಿಯನೆಯ್ದಿದ
ನದಿತಿಪ್ರಿಯಪುತ್ರನಬ್ಜಮಿತ್ರಂ ಮಿತ್ರಂ ॥ 54 ॥

ಅಂತಾದಿತ್ಯನಪರಗಿರಿಯನ್ನೈದುವುದುಂ; ಕವಿದ ಕಟ್ಟಲೆಯೊಳಾಕೃತಕತಾಪಸಂ ತಪವುಂ ಸಂಹರಿಸಿ ನಿಲ್ವುದುಂ; ಮತ್ತಮೊರ್ವನುತ್ತರಸಾಧಕನಾತಂಗುಡಲುಂ ತುಡಲುಂ ಪೊದೆಯಲುಂ ತಂದು ಕೊಟ್ಟು ಕನ್ನದ ಮುಟ್ಟುಗಳಂ ತಂದೆನೆಂದು ಪೇಳ್ವುದುಂ; ಕರಂ ಲೇಸಾಯ್ತು ನಡೆಯೆಂದಿರ್ವರುಂ ಪೋಗಿ ರಾಜಭವನವುಂ ಪೊಕ್ಕು ಕನ್ನವುನಿಕ್ಕಿ ಭಂಡಾರವುಂ ಕಳ್ದು ಪೊಱವಡುವಾಗಳ್; ಕಾಪನವರ್ಕಂಡು ಕಳಕುಳಿಂಗೆಯ್ಯೆ; ತಳಾರ್ ಕೇಳ್ದು ಪರಿತಂದು ಬಟ್ಟೆಗಳಿಲ್ಲವುಂ ಕಟ್ಟುವೆಂದು ಪೇಳ್ವುದುವುಂ ಕಳ್ಳರ್ ಕೇಳ್ದು ಪೊನ್ನ ಪೊಱೆಯೊಳ್ ಪೋಗಲೆಂಬಿಲ್ಲದೆ ನಂದನವನಕ್ಕೆ ಬಂದು ತನ್ನ ತಂದ ಪೊನ್ನ ಪುಡಿಕೆಯುವುನುಱಿಯುವುಂ ಬಳಪವುವುಂ ಅಲ್ಲಿ ಪಟ್ಟಿರ್ದ ಭಟ್ಟನ ವುಂದೆ ತಂದಿಕ್ಕಿ ತನ್ನ ವುನ್ನಿನ ತಪೋರೂಪದೊಳಿರ್ದಂ. ಆನ್ನೆಗಂ ತಳಾರ್ ಪರಿತಂದು—ನಿವ್ಮಡಿ! ನಿವ್ಮತ್ತಲ್ ಪೆಱರ್ ವಾನಸರ್ ಬಂದರೊಳರೆ ಪೇಳ್ವೆನೆನ್ನೆ; ತಸ್ಕರತಾಪಸನಾವುರದಡಿಯೊಳೊರ್ಬಂ ಬಂದಿರ್ಪನೆಂದು ಸನ್ನೆಯಿಂ ಪೇಳ್ವುದುವುವರ್ ಪರಿತಂದು ನೋಡಿ ಪಟ್ಟಿರ್ದ ಭಟ್ಟನ ವುಂದಿರ್ದ ಭಂಡಾರದ ನುಡಿಕೆಗಳುವುಂ ಕನ್ನದ ವುಟ್ಟುಗಳುವುಂ ಕಂಡವುಂ ಕೊಂಡಾಪಾರ್ವನ ತಲೆಯೊಳಿಟ್ಟುರಸಂಗೆ ತಂದೊಪ್ಪಿಸುವುದುವುರಸನಾಭಟ್ಟನಂ ನೆಟ್ಟನೆ ಕಳ್ಳನೆಂದೆ ಬಗೆದೀದುಷ್ಟಂಗೆ ತಕ್ಕುದಂ ಮಾಡಿವೆನೆ:—

ತತ್ಪಪಂಚವುನರಸಂಗೆ ಭಟ್ಟಂ ಸವಿಸ್ತರಂ ಪೇಳ್ವುದುವುರಸನಾಕೃತಕತಪೋಧಾರಿಯ ಗುಹೆಯುಂ ಕೋಳಿಸೆ ವುನ್ನಂ ತನ್ನ ಪೊಱಲೊಳ್ ಪೋದ ಪಲವು ವಸ್ತುಗಳಂ ಕಂಡಾ ತಸ್ಕರತಪಸ್ವಿಗೆ ತಕ್ಕುದಂ ಮಾಡಿ ನಾರಾಯಣಭಟ್ಟಂಗೆ ಪಿರಿದಪ್ಪರ್ಥವುಂ ಕೊಟ್ಟು ಕಳುಪಿದಂ.

(ಗನೆಯು ಕಥೆಯು ಶೇಷ.)

ಅದುಕಾರಣದಿಂ,

ಶ್ಲೋಕ ॥ "ಅತ್ಯಾಚಾರವುನಾಚಾರವುತಿನಿಂದ್ಯವುತಿಸ್ತುತಿಃ ।
ಅತಿಶ್ರೀಮಚ್ಚವುಶ್ರೀಮಾಂ ವಾ ಷಡ್ವಿಧಂ ಧೂರ್ತಲಕ್ಷಣಂ" ॥

ಎಂಬುದು ನೀತಿಯುಂಟು. ಈಪುಲಿಯುವುತ್ಯಾಚಾರವುಗಿರ್ದಪುದು ಇದಱ ಬಲೆಯೊಳ್ ಸಿಲ್ಕಲ್ವೇಡ! ಪೆಱತೊಂದೆಡೆಗೆ ಪೋಪಂ ನಡೆಯೆನೆ; ಮೊಲನಿಂತೆಂದುದುಃ—ಇಂತಪ್ಪುಪಕವುವುನುಳ್ಳ ತಪಸ್ವಿ ನವುಗೆ ತಪ್ಪಲಱಿಯುಂ, ಕಟ್ಟಿಯೆ ಗಳಪದಿರ್ ನಡೆಯೆನೆ; ಕಪಿಂಜರನದಕ್ಕರ್ಕಂಜೆ—ನಿನಗಾದುಪಹತಿಯೆನಗಾದಪುದು ನಡೆಯೆಂದೆರಡುಂ ಆಕಪಟತಾಪಸರೂಪಧಾರಿಯಪ್ಪ ದ್ವೀಪಿಯು ಸವಿೂಪಕ್ಕೆ ಬಂದು ಪೊಡೆವಟ್ಟು—ನಿವ್ಮಡಿ! ನಿವ್ಮಲ್ಲಿ ವಿಚಾರಂಗೆಯ್ವಲ್ ಬಂದೆವೆವ್ಮಂ ವಿಚಾರಿಸಲ್ವೇಱ್ಕುವೆಂದಾಗ್ರಹಂಗೆಯ್ದೊಡೆ; ಎನ್ನ ನಿತ್ಯನಿಯವುಕ್ಕೆ ವಿಘ್ನಂವಾಡದೆ ಪೆಱತೊಂದೆಡೆಗೆ ಪೋಗಿವೆಂಬುವುವರ್ಕೆನಂಬುಗೆಪುಟ್ಟಿ—ನಿವ್ಮಡಿ! ನೀವೆ ವಿಚಾರಿಸಲ್ವೇಱ್ಕುವೆನೆ; ದ್ವೀಪಿಯದರ್ಕೊಡಂಬಟ್ಟು ಸಾವಧಾನವಾಗಿ ನಿಂದಿಂತೆಂದುದುಃ — ಇಂದಿಂಗೊಂದು ತಿಂಗಳುಪವಾಸಂಗೆಯ್ದೆನದು

ಕಾರಣದಿಂ ಧಾತುಕ್ಷಯವಾಗಿ ಕಿವಿ ಕೆತ್ತು ಕೇಳಲ್ ಬಂದಪುದಿಲ್ಲ, ಕರ್ಣೋಪಾಂತಮಂ ಸಾರ್ದು ಪರಿಯಸರದಿಂ ಪೇಳ್ವುಮೆಂದೊಡೆ; ಅಪ್ರಾಣಿಗಳಿರಡುಂ ಶ್ರವಣಸಮೀಪಸ್ಥಂಗಳಾಗಿ ತಮ್ಮ ಬಂದ ವೃತ್ತಾಂತಮೆಲ್ಲಮುಮಂ ಪೇಳೆ ಕೇಳ್ದನೇಕಪ್ರಕಾರದಿಂ ವಿಚಾರಿಸುತ್ತುಮಿರೆ; ಶಶಕಪಿಂಜರಂಗಳಿರಡುಂ ಜವಂಗೆಟ್ಟು ಮೆಯ್ಮಱೆದಿರ್ದುದನಱಿದು ಪಿಡಿದು ತಿಂದುದು.

ಅದಱಿಂ,

ಶ್ಲೋಕ ॥ "ಕ್ಷುದ್ರವರ್ಥಪತಿಂ ಪ್ರಾಪ್ಯ ನ ತಪ್ತಿವದತಾಂ ಸುಖಂ ।
ಉಭಾವೇವ ಕ್ಷಯಂ ಯಾತೌ ಯಥಾ ಶಶಕಪಿಂಜರೌ" ॥

ಟೀಕು—ಕ್ಷುದ್ರನಪ್ಪರ್ಥಪತಿಯನೆಯ್ದಿ ಕೂಡಿದವರ್ಗೆ ಸುಖಮಿಲ್ಲ; ಅದು ಹೇಗೆಂದೊಡೆ ಮೊಲನುಂ ಕಪಿಂಜರನೆಂಬ ಪಕ್ಷಿಯುಂ ಕೇಡನೈದಿದಹಂಗೆ.

ಎಂದಾಕಾಗೆ ಗೂಗೆಗೇಗೆಯುಂದಂ ರಾಜ್ಯಮಾಗದಂತೆ ಎನಿತಾನುಮುಪಕಥೆಗಳಂ ಪೇಳ್ದೆ ಕೇಳ್ದು,

ಶಕುನಿಗಣಮೆಲ್ಲಮಭಿಪೇ
ಕಕಾರ್ಯಮಂ ಮಾಣ್ದು ಪರೆದು ಪೋದುವು ನಿಜನೀ ।
ಡಕುಳಕ್ಕೆ ಕಾಗೆ ವಕ್ರಿಸೆ
ಸಕಳಪ್ರಾರಂಭಕಾರ್ಯಮಂ ಮಾಣದರಾರ್ ॥ 55 ॥

ಆಂತಾಶಕುನಿಸಮೂಹಮಾಯುಂ ಪರೆದು ಪೋಪುದಂ ಕಂಡು ಕೋಪಾರುಣೀಭೂತಲೋಚನನುಳೂಕರಾಜಂ ಕಾಕಂಗೆ ಮಱಿವಿಂತೆಂದಂ—ಏನಿಲವೋ! ನಿಮಗಂ ನಮಗಂ ಮುನ್ನಾದ ಸಗೆಯೊಂದುಮಿಲ್ಲಮೆನಗಾದ ರಾಜ್ಯಮಂ ಕಿಡಿಸಿದುದಲ್ಲದೆನ್ನುಮಂ ಕೆಡೆಸುಡಿದೆ; ನಿನ್ನ ನೋರ್ವನಂ ಕೊಂದೆನಪ್ಪೊಡೆ ಮುಂದಪ್ಪ ಪಗೆಗಳ್ಕಿ ಕೊಂದಂತಕ್ಕುಮದಱಿಂದಿಲ್ಲಿ ನಿನ್ನಂ ಕೊಲ್ಲೆನೆಂದು ಪುತ್ತಮಿಂತೆಂದಂ:—

ಕರುಕುಲವಂ ಬಕಾರಿ ಭುಜಗವ್ರಜಮಂ ಭುಜಗಾರಿ ದಾನವೇ
ಶ್ವರಕುಲಮಂ ಮುರಾರಿ ಭುಜವಿಕ್ರಮದಿಂ ತವೆ ಕೊಂದ ಮಾಲ್ಕೆಯಿಂ ।
ದುರುತರಬುಹುವಿಕ್ರಮದೆ ನಾಂ ತವೆ ಕೊಲ್ಲದೆ ಮಾಣೆನುಗ್ರಸಂ
ಗರಮುಖದಲ್ಲಿ ಕಾಕಬಳಮಂ ಕುಸುಮಾಯುಧಮೈ ಕಾವೊಡಂ ॥ 56 ॥

ಎಂದುಳೂಕಾಧಿರಾಜನತಿಪ್ರತಿಜ್ಞೆಗೆಯ್ದು ನಿಜನಿವಾಸಕ್ಕೆ ಪೋದಂ. ಇತ್ತ ಲಾವಾಯುಸಂಕಾಖ್ಯಕಾಧೀಶ್ವರನ ಮಾತಿಂಗೆ ಭೀತನಾಗಿ ತನ್ನೊಳಿಂತೆಂದುದು:—

ಜಯಮಂ ಕೀರ್ತಿಯನಭಿವೃ
ದ್ಧಿಯನೊಳ್ಪಂ ಕಾರ್ಯಸಿದ್ಧಿಯಂ ಸತ್ಫಲಮಂ ।
ಬಯಸುವ ಮನುಜಂ ಸತತಂ
ತ್ರಯವನೆ ನುಡಿವುದು ವಿಪಕ್ಷವೂಗಿರ್ಪವರೊಳ್ ॥ 57 ॥

ಎಂಬ ನೀತಿಯಂ ಬಿಸುಟ್ಟು ಪೂತಳಿಯದೆ ನುಡಿದು ಎನ್ನ ಜಾತಿಗಮುತ್ಪಾತ ಕೇತುವಾದೆನೆಂದು ತನ್ನಂ ತಾನೆ ನಿಂದಿಸಿ ಕೊಂಡು ವಾಯಸಂ ಪೋದುದು. ಅಂದಿಂದಿತ್ತ ಕೌಶಿಕಂಗಳ್ಗಂ ನವುಗಂ ಪಗೆಯಾದುದೆಂದು ಚಿರಂಜೀವಿ ಪೇಳೆ; ಮೇಘವರ್ಣನಿಂ ತೆಂದಂ:—ವಾಜಿಮಾತ್ರದಿಂ ಬಂದ ನೈರವನೆತ್ತಿ ಕೊಂಡು ಯುದ್ಧಂಗೆಯ್ದು ಕೊಂದಿಕ್ಕಿದ ರೆಂಬ ಕಥೆಗಳನೆಂದಂ ಕೇಳ್ದಪೆಯೆನೆನೆ; ಮತ್ತಂ ಚಿರಂಜೀವಿಯಿಂತೆಂದಂ:—

ಕೇಳಹಿತದಿತಿಜವಲ್ಲಭ
ಲೀಳಂ ವಿಕ್ರಮನಿರಸ್ತಕಾಳಂ ದಿವಿಜಾ ।
ಭೀಳಂ ಮಥಿತಾಖಿಳದಿ
ಕ್ಪಾಳಂ ಶಿಶುಪಾಳನೆಂಬನೊರ್ವಂ ದನುಜಂ ॥ 58 ॥

ವ ॥ ಅಂತಾತಂ ವಾಗೊದ್ವೇಷದಿಂ ನಿಶ್ಶೇಷಜೀವಿತನಾಗ ಕಥೆಯಂ ನಿಮ್ಮಡಿ ಕೇಳ್ದ ಱಯಿರಕ್ಕುಮೆಂದು ಪೇಳೆಲ್ ತಗುಳ್ದಂ: —

೨ ಶಿಶುಪಾಲನ ಕಥೆ.

ಧರ್ಮಪುತ್ರನಪ್ಪ ಯುಧಿಷ್ಠಿರಂ ಧರ್ಮಾರ್ಥಿಯುಂ ಯಶೋರ್ಥಿಯುಮಾಗಿ ರಾಜಸೂಯಯಾಗಮಂಮಾಡಲುದ್ಯೋಗಮೆಯ್ದು ನಾರಾಯಣಾದಿಗಳುಮಪ್ಪ ಯಾದವರುಮಂ ದುರ್ಯೋಧನಂ ಮೊದಲಾದನೇಕದೇಶಾಧೀಶ್ವರರುಮಪ್ಪ ರಾಜತನೂಜರುಮಂ ಶಿಶುಪಾಲಂ ಮೊದಲಾದ ದನುಜನಮೂಜಮುಮಂ, ವ್ಯಾಸ ಕಶ್ಯಪ ವಿಶ್ವಾಮಿತ್ರ ವಾಲ್ಮೀಕಿ ವಸಿಷ್ಠಾಗಸ್ತ್ಯ ಪರಾಶರಾದಿ ಮಹಾಮುನಿನಿವಹಮೂಹಮುಮಂ ಬರಿಯು ನಟ್ಟಿ ಬರಿಸಿ ಯಾಗಂಗೆಯ್ದು ತದನಂತರಂ ಭೀಮಾಗ್ರಜನ್ಮನಗ್ರಪೂಜೆಗಗ್ರೇಸರರಾರ್ ಪೇಲುಮೆಂಬುದುಂ; ಗಾಂಗೇಯಂ ಗಂಭೀರಧ್ವನಿಯಿನಿಂತೆಂದಂ:—

ಮಲ್ಲಿಕಾಮಾಲೆ ॥

ಉಗ್ರಸಂಗರರಂಗದೊಳ್ ಬಲವನ್ನಿಶಾಚರಮುಖ್ಯವೀ
ರಾಗ್ರಗಣ್ಯರನಿಕ್ಕಿ ಭೂಚರಖೇಚರಾಖಿಲಲೋಕಮಾ ।
ಲಾಗ್ರಗಾವಮರಪೀಡೆಯಂ ಕಳೆದಿದ್ದ ವಿಷ್ಣುಗೆ ಭಕ್ತಿಯಿಂ
ದಗ್ರಪೂಜೆಯನೀವುದಬ್ಧಿಪರೀತಭೂತಳವಲ್ಲಭಾ ॥ 59 ॥

ವ ॥ ಎಂದು ನುಡಿದ ಮಂದಾಕಿನೀನಂದನನ ಮಾತಿಂಗೆ ಯದುನಂದನನಾನಂದ ಮನಸ್ಕನಾಗಿ ದೇವಕೀನಂದನನಂಗಗ್ರಪೂಜೆಯನೆತ್ತುವಾಗಳ್ ದಾನವಕುಲಚಕ್ರವರ್ತಿ ಯುಮಧರೀಕೃತದಿಕ್ಪಾಲನುಮಾಸನ್ನಕಾಲನುಮಪ್ಪ ಶಿಶುಪಾಲಂ ಕಂಡು ಕಡುಮುಳಿದು ಯುಧಿಷ್ಠಿರಂಗೆ ನಿಷ್ಠುರನಾಗಿ ಗಾಂಗೇಯನಂ ನೋಯೆ ನುಡಿದು ಮಾಣದೆ ಬಾಣಾಸುರಕರಾಂತಕನುಮಂ ಬಾಯ್ಗೆ ವಂದಂತೆ ಭಂಗಿಸಿ ಪೆಂಡಿರಂ ಬಯ್ವಂತೆ ಬಯ್ವುದುಮನಂತನಂತಕನಂತೆ ಮುಳಿದು ದಿವಿಜಾಂತಕನಂ ಕೃತಾಂತಭವನಮಂ ಪುಗಿಸಿದಂ.

ಅದಲ್ಲದೆಯುಮನೂನಬಳರಪ್ಪ ದಾನವವೂನವರಿನಿಬರಾನುಂ ವಾಕ್ಪಾರುಷ್ಯದಿಂ ಕೆಟ್ಟರೆಂದು ಚಿರಂಜೀವಿ ಪೇಳ್ದುದಂ ಕೇಳ್ದು ಮೇಘವರ್ಣಂ—ನೀವಿಲ್ಲದುದನೇಂ ಕೆ ಪೇಳ್ವಿರಿದೆಲ್ಲವನಾನಱಿದೆಂ; ಇನ್ನಾ ಕೌಶಿಕಾಧೀಶ್ವರನಂ ಸಾಧಿಸುವುಪಾಯಮುಂ, ಅನ್ನೆವರಂ ನಮಗೆ ನಿಶ್ಚಿಂತಮಪ್ಪೆಡೆಯುಮುಂ ಚಿಂತಿಸಿವೆನೆ; ಚಿರಂಜೀವಿಯಿಂತೆಂದಂ:—

ಅರಿ ಬಲವಂತಂ ಮತಿಯೊಳ್
ಪಿರಿಯಂ ಸಾಧಿಸುವೊಡಱಿಯೆನೆಂಬವನರದೊಳ್ ।
ಪಿರಿದಾಳಾಪದೊಳೇನಪ
ಸರಣಮೆ ಶರಣಂ ನಮಗಾಗವಜ್ಜರ ಮತದಿಂ ॥ 60 ॥

ಎನೆ; ನೀ ಮೇಘವರ್ಣನಂತಪ್ಪೊಡೆ ನಾವಪಸರಣಂಗೆಯ್ವೆವೆನೆ; ಚಿರಂಜೀವಿಯೆಂತೆಂದಂ: —

ಚಾರುಮಯೂರಮಂ ಸಮುದಚಾತಕವಾರಮನುದ್ಯಕೇತಕಾ
ಧಾರಮನತ್ಯುದಾತ್ತ ಸುರಗೋಪಮನುದ್ಯದಶೇಷಶೀಪಮಂ ।
ಭೂರಿಸುರೇಂದ್ರಚಾಪಮನಪಾಸ್ತಧರಾಧರತಾಪಮಂ ಗತಾಂ
ಭೋರುಹಜಾಳಮಂ ಜಳದಕಾಳಮನಸ್ಥಲಸನ್ಮರಾಳಮಂ ॥ 61 ॥

ವಾನರಬಲಸಹಿತಂ ತೇ
ಜೋನಿಧಿ ದಶರಥತನೂಭವಂ ವಿಶದಯಶ ।
ಶ್ರೀನಿಲಯಂ ವಿಜಿತಾರಿನ್ಯ
ಪಾನೀಕಂ ಶುಶ್ಯಮೂಕನಗದೊಳ್ ಕಲ್ತುದಂ ॥ 62 ॥

ಅದಱಿಂ ನಿಮ್ಮಡಿ ನೀವುಮೂಪರ್ವತಕ್ಕೆ ಸಕಲಕಾಕಬಲಂಬೆರಸು ಬಿಜಯಂಗೆಯ್ಯುಮೆನೆನ್ನ ಬಲ ಮಾರ್ಗದಿಂದರಿವರ್ದನನ ಬೀಡಂ ಪೊಕ್ಕು ಸಮಸ್ತಕಾರ್ಯಮುಮನಱಿದು ಬಂದ ಬಱಿಕ್ಕೆ ತಕ್ಕುದನಾಳೋಚಿಸಿ ನೆಗೞ್ವೆನೆನೆ; ಮೇಘವರ್ಣಂ ನೀವೆಂಬುದೆಲ್ಲಮಪ್ಪುದು, ದೂತಕಾರ್ಯಕ್ಕೆ ನೀನೇ ಪೋದಲ್ಲಿ ಕಾರ್ಯಸಿದ್ಧಿಯಪ್ಪುದೊಂದೆಸೆಯೊಳಿರ್ಕೆ! ನೀಮುಂ ಪ್ರೇಮದಿಂ ಬರ್ಪುದಂ ಸಂದೆಯಮಪ್ಪುದಱಿಂ ಪೆಱರನಟ್ಟುವೆನೆನೆ; ಚಿರಂಜೀವಿ — ನಿಮ್ಮಡಿ ಸ್ವಾಮಿತನಕ್ಕೆ ತಕ್ಕುದಂ ಜಸಸಿದಿರ್. ಆದೊಡಮೆನ್ನಿಂದವೊಡೆ ಸಂಕಟಮುಮುಧ್ವಸಮುಮಪ್ಪ ಕಜ್ಜಂಗಳಂ ಕೇವಲಂ ದೂತವಾತ್ರನಪಾತಂ ಸಾಧಿಸಲುಂ ಭೇದಿಸಲುಂ ನಿರುತಮಱಿಯುಂ, ಅದಱಿಂ ಸತ್ವಮುಂ ದೃಢಮುಂ ಶೌರ್ಯಮುಂ ಧೈರ್ಯಮುಂ ಸ್ನೇಹಮುಂ ಮೋಹಮುಂ ಸಾಹಸಮುಂ ಸ್ಥೈರ್ಯಮುಮುಳ್ಳರನಟ್ಟುವೋಲ್ಕ್ಕಮೆಂತೆನೆ:—ಚಿರಂತನಕಾರ್ಯಂಗಳೊಳಂ ಹನೂಮಂತನಂತಪ್ಪನಂ ದಶಾಸ್ಯಾಂತಕಂ ದೂತನಾಗಿ ಕಳಿಪಿದಂ; ಮುರಾಂತಕನಂತಪ್ಪನಂ ಯುಧಿಷ್ಠಿರಂ ದೂತಕಾರ್ಯಕ್ಕಟ್ಟಿದಂ. ಅದುಕಾರಣದಿನಿಂತಪ್ಪ ವಿಷಮಕಾರ್ಯಮೆನ್ನಿಂದಲ್ಲದೆ ತೀರಲಱಿಯದು. ನೀವಿಂತೆನ್ನ ದೆಸೆಗೆ ಚಿಂತಿಸದೆ ನಿಶ್ಚಿಂತರಾಗಿ ಪೋಗಿ ಮೆಂದೊಡಂತೆಗೆಯ್ವೆನೆಂದು ಸಮಸ್ತ ವಾಯಸಬಲಂಬೆರಸು,

ನವುದಾನೀಕಪಮಂ ಮಹಾಭಯದಮಂ ಪ್ರೋದ್ಯದ್ಭವಜಂಬೂಕದಂ
ಬವುನಭ್ರಂಘಷಕೂಟವಂ ತಪನಕಾಂತಾಶ್ಮಪ್ರಭಾಭಾಸ್ವರಂ ।
ತವುಸಸ್ತ್ರೋವುವುನೂರ್ಜಿತಂ ಜಿತಲಸನ್ಮೈನಾಕವುಂ ಶುಭ್ರವುಂ
ಕವುನಾನಂದದಿನೆಯ್ದಿದಂ ಸಕಲಕಾಕಾನೀಕಲಕ್ಷ್ಮೀಶ್ವರಂ ॥ 63 ॥

ಧ್ವಾಂಕ್ಷಬಲಂಬೆರಸರಿಜಯ
ಕಾಂಕ್ಷೆಯಿನಾತ್ಮೀಯಮಂತ್ರಿ ಪೇಳ್ದಂದದಿನಿ ।
ರ್ದಂ ಕ್ಷ್ಮೇವುಡಿಂ ಪ್ರಚಂಡಬ
ಲಂ ಕ್ಷಿತಿಭೃತ್ತಟದೊಳಿಳಿಕಾಕಾಧೀಶಂ ॥ 64 ॥

ಅನ್ನೆಗವಿತ್ತಲ್ ಚಿರಂಜೀವಿ ವುನ್ನವೆಂ ಕಾಕಬಲಚರಣನಖಚಂಚುರಕ್ಷಣ ತದಿಂ ಸಂಪೂರ್ಣವಾಗಿ ಕಾದಿ ಸತ್ತ ವಾಯುಸಂಗಳ ರಕ್ಕರ್ದವುವಂ ತನ್ನ ನೋಲೊಟ್ಟಿಕೊಂಡು ವೂರ್ಛಾಗತನಂತಾಗಿ ವೇಳುವರ್ಣನ ರಾಜ್ಯಲಕ್ಷ್ಮೀವಿಲಾಸಭವನವೆನಿಪ್ಪ ವಿಶಾಲವಟವಿನಿಟಪಿಯ ಕೆಳಗೆ ಬೀಳ್ದಿರ್ದಂ. ಅನ್ನೆಗವಿತ್ತಲ್,

ಅರುಣೇಭೂತವಿಯತ್ತಳಂ ನವವಿಯೋಗೋದ್ವೇಗಸಂತಾಪಿತಾಂ
ಗರಥಾಂಗಂ ವುಕುಳೀಕೃತಾಂಬುಜವನಂ ವುಂದೀಕೃತಾಶೀತರ ।
ಶ್ಮರಥಾಶ್ವಾಸ್ಯಸುಪೀತನೀರಧಿಜಲವ್ರಾತಂ ದಿನಾಂತಂ ವುನೋ
ಹರವೂಗಿರ್ದುದು ವಾಸಯಷ್ಟಿಗತಶುಂಭತ್ತಾವ್ರಜೋಡವ್ರಜಂ ॥ 65 ॥

ಅಂತೆಸೆವ ದಿವಸಾವಸಾನಸವುಯದೊಳ್ ದಿವಸಕರಂ ಪರಲೋಕಪ್ರಕಾಶನಾರ್ಥಂ ಪೋಪುದುಂ; ಕವಿದ ಕತ್ತಲೆಯುಂ ಕಂಡರಿವುರ್ದನಂ ವುಂತ್ರಿವುಂಡಲವುವುನುಲೂಕ ವ್ರಜವುವುಂ ಒರಿಸಿ ಬಲುಕ್ಕಿಂತೆಂದಂ:—ನಿನ್ನೆ ನವ್ಮ ಕಾದಿದ ಕೊಳುಗುಳದೊಳ್ ನಾನುವುಲಿದ ಕಾಕಬಲವುವುನಿಂದು ನಿರವಶೇಷವಾಗಿ ಕೊಂದು ಬರ್ಪಂ ಬನ್ನಿವೆಂದು ಪೊಱವಟ್ಟು ಬಂದು ವಾಯಸನಿವಾಸವುಪ್ಪ ವಟನಿಟಪಿಯಂ ನುತ್ತಿ ವುತ್ತಿ ಕಾಕಬಲವುಂ ಕಾಣದುಲೂಕಂಗಳ್ ಬೊಬ್ಬಿಱಿದಾರ್ದ ನಿಜನಿವಾಸಕ್ಕೆ ಪೋಗಲಿರ್ದ ವಸರವುಂ ಚಿರಂಜೀವಿಯಱಿದು,

ಶ್ಲೋಕ ॥ "ಅನಾರಂಭೋ ವುನುಷ್ಯಾಣಾಂ ಪ್ರಥವುಂ ಬುದ್ಧಿಲಕ್ಷಣಂ
ಱಬ್ಧಸ್ಯಾಂತಗವುನಂ ದ್ವಿತೀಯಂ ಬುದ್ಧಿಲಕ್ಷಣಂ" ॥

ಕೆಲಸವಂ ತೊಡಗದಿಹುದೆ ವುನುಷ್ಯರ ಬುದ್ಧಿಗೆ ಮೊದಲ ಕುಱುಹು; ಕೆಲಸವಂ ತೊಡಗಿದ ಬಲಿಕ ಅದಂ ಕೊನೆವುಟ್ಟಿಸುವುದೆ ಎರಡನೆಯ ಕುಱುಹು.

ಎಂಬ ನೀತಿಯುಂಟು. ಅದಱಿಂದೆನ್ನಿರವನಱಿಪುವೆನೆಂದು ಭಿನ್ನಸ್ವರದಿಂ ಸರಂಗೆಯ್ವುದುವುಳೂಕಂಗಳ್ ಕೇಳ್ದು ಕಾಕರುತವುಪ್ಪುದೆಂದರಿವುರ್ದನಂಗಱಿಪುವುದು ವೂತಂ ಬಂದು ನೋಡಿ ರಕ್ತಸಿಕ್ತಶರೀರನಾಗಿ ವುಕ್ತಜೀವನಾಗಿರ್ದ ಚಿರಂಜೀವಿಯಂ ಕಂಡು ನೀನಾರ್ಗೆನೆಂಬ ಪೆಸರಾತನೆಂದು ಕಾಕಾಧೀಶ್ವರಂ ಪೆಸರ್ಗೊಳೆ ಚಿರಂಜೀವಿ ಯಿಂತೆಂದಂ:—

ಅನವುಪರಾಕ್ರಮ! ಪೆಱತೇಂ
ಪೆಸರೊಳ್ ಚಿರಂಜೀವಿಯೆಂ! ಜಗದ್ವಿಶ್ರುತವಾ ।
ಯನಜಕ್ರವರ್ತಿವುಂತ್ರಿ
ಪ್ರಸರಾಗ್ರೇಸರನೆನಖಿಳನಯಕೋವಿದನೆಂ ॥ 66 ॥

ಎಂಬುದುಂ ನಿನ್ನಂತಪ್ಪ ವುಂತ್ರಿಯುಂ ಕಾಕಂಗಳೇಕೆ ಬಿಸುಟು ಪೋದುವೆನೆ; ಚಿರಂಜೀವಿ ವೇಟ್ಟಂ:—ನಿವ್ಮಡಿ! ನೀಂ ನಿನ್ನೆ ಬಂದೆವ್ಮ ಬಲವೆಲ್ಲಮುಂ ಕೊಂದು ನಿವ್ಮ ಬೀಡಿಂಗೆ ಬಿಜಯುಂಗೆಯ್ವುದುಮೆವ್ಮರಸಂ ವುಂತ್ರಿಗಳಂ ಬರಿಸಿ ಪೇಳ್ದುವಿನ್ನೇಗೆಯ್ವುವೆಂನೆ; ವುಂತ್ರಿಗಳ್ ನಾವಿಂದೆ ಸಕಲವಾಯುಸಬಲವೆಲ್ಲವುನೊಂದುವುಡಿ ಕೂಡಿ ಕೊಂಡರಿವರ್ದನನೊಳ್ ಕಾದುವವೆಂದೊಡಾನವಂದಿರಂ ವುಾರ್ಕೊಂಡು ಮತ್ತಮಿಂತೆಂದೆಂ:—ಒಂದಾನುನೊಂದು ಕಾಲದೊಳ್ ನವ್ಮ ವಂಕದ ಕಾಗೆಗಳ್ ಕೌಶಿಕಂಗಳೊಳ್ ಪಗೆಗೊಂಡ ಕಾರಣದಿನುಳೂಕಂಗಳ್ ಕೊಂದುವಲ್ಲದೆ ಪೆಱತೊಂದು ಕಾರಣಮಿಲ್ಲ; ನಾವುವರೊಳ್ ಪಗೆಯನೆತ್ತಿಕೊಂಡು ನಿತ್ತಲುಸಲಲೊಯೆವದಲೊಂ ಸತ್ತು ಸೈರಿಸಿದರೆಂಬುತ್ತೆಮಿಕೆಯಂ ವುಾಡಿಕೊಂಡು ಕೌಶಿಕಶಿಖಾವುಣಿಯಂ ಕಂಡು ಬಾೞ್ವುದೆಂತುಂನಯಂ. ಅಲ್ಲದೆಯುಂ ಪೂರ್ವೋಕ್ತಮಿಂತೆಂಬುದಲ್ತೆ:—

"ಬಲ್ಲಿದನೊಡನೆ ಬಡವಂ ಸ್ಪರ್ಧೆಯಂ ವುಾಡಲಾಗದು, ವುಾಡಿದೊಡುರಿಯೊಳಗೆ ಪತಂಗದ ಪೞು ಬಿರ್ದಹಗಹುದು."

ಎಂದೆನಿತಾನುಂ ತೆಱದಿಂ ಪೇೞಲೆನ್ನ ವುಂತ್ರಮೆಂ ರೋಷಗ್ರಹಾವೇಶದಂತಾಗೆ ಕೆರಳ್ದು ಕೋಪಾನಳಜ್ವಳಶಿಖಾಸಂತ್ತೀವುಧೂವುಚ್ಛ್ವಾಯಾಪಟಳವಿವೃತನಾಗಿ ದಾವಾನಳಶಿಖಿಶಿಖಾನಿಕರಪರಿಷಿಕ್ತಸೀಳಾಚಳವರ್ಣಂ ವೇಘವರ್ಣಂ ವುಱಿ "ದೀಬೂತು ಪಗೆಯೊಳ್ಕೊಡಂಬಟ್ಟು ಬಂದನಾಗಲ್ವೇೞ್ಕುವಿವಂಗಂ ತಕ್ಕುದಂ ವುಾಡಿ" ನೆನೆ; ಸಕಳಕಾಕಬಳವೆಂನ್ನಂ ವುಂಸುಱುಂ ನಿಶಿತಾಶನಿಪ್ರತಿವುನಿಜಚಂಚೂಚರಣಪಕ್ಷಾಘಾತದಿಂದೆನಗೆ ನಿತವಸ್ಥೆಯಂ ವುಾಡಿ ಪೋದುವೆಂಬುದುಂ; ಅರಿವರ್ದನನದೆಲ್ಲಮುಂ ಕೇೞ್ದಂತೆಂದಂ:—ನಿನ್ನ ಪೇೞ್ದ ಬುದ್ಧಿ ಹಿತವುಂ ಉಚಿತವುವುಪ್ಪುದಾಗಿಯುವುಲ್ಲದೊಡೇನಾಯ್ತು ನಿನಗಲ್ಲದ ಪರಿಭವವುಂ ವುಾಡಿವ ಪ್ರಭು ಪ್ರಭುಗುಣಕಲ್ಲದುದಂ ನೆಗೞ್ದನೆನೆ; ಮತ್ತಂ ಚಿರಂಜೀವಿಯಿಂತೆಂದಂ:—

ವಿನಯವಿಹೀನನಾತ್ಮಹಿತಕಾರ್ಯವಿದೂರನಕಾರಣಪ್ರಕೋ
ಪನನತಿವುೂರ್ಖನರ್ಥಪರನಸ್ಥಿರನಿಷ್ಟಸುಹೃದ್ವಿರೋಧಿ ದು ।
ರ್ಜನಪರಿವಾರನೆಂಬವನಿಪಂಗೆ ಹಿತೋಚಿತವುಪ್ಪ ಕಾರ್ಯವುಂ
ಫನತರಭಕ್ತಿಯಿಂ ನುಡಿದವಂ ಕಿಡುಗುಂ ಪರವೂರ್ಥವೆಲ್ಲಿಯುಂ ॥ 67 ॥

ಅಂತುವಲ್ಲದೆಯುಂ,

ವಾಕ್ಯಂ । "ಶ್ರೇಯೋ ವುೂರ್ಖಸ್ಯ ನ ಬ್ರೂಯಾತ್" ॥

ಎಂಬ ಕಥೆಗಾನುದಾಹರಣವುಾದೆನೆಂದೊಡರಿವರ್ದನನದೆಂತೆಂದು ಪೆಸಗೊಳ್ವುಂ; ಚಿರಂಜೀವಿಯಿಂತೆಂದಂ:—

೪. ಬುದ್ಧಿಹೇಲಿದ ಪಕ್ಕಿಯುಂ ಕಪಿ ಕೊಂದ ಕಥೆ.

ನವಕಾಶ್ಮೀರಪರಾಗರಾಗರುಚಿರಂ ವಿಧ್ವಸ್ತನೀರೇಜಪಂ
ಡವಿಳಾಸಂ ಶಿಶಿರಾಂಬುಶೀಕರತೃಣಶ್ರೀಭಾಸುರಂ ಚಾರುಕೈ ।
ರವಹಾರಂ ವರಸಿಂಧುವಾರಮವನೀ ಭೃತ್ಕೋಟರಾಂತರ್ನಿಲೀ
ನವಿಹಂಗಂ ಗುರುಶೀತಕಾಲನೆಸೆದತ್ತೆತ್ತಂ ಮಹೀಭಾಗದೊಳ್ ॥ 68 ॥

ವ । ಅಂತೆಸೆವ ಶಿಶಿರಸಮಯದೊಳ್ ಆತ್ಮಹಿತೋಪದೇಶಾಗ್ರಹವಿಕಳವಪ್ಪು ದೊಂದು ಗೋಲಾಂಗೂಲಂ ಶೀತಕ್ಕಳ್ಕ ಸಿಡಿಮಿಡಿಗೊಳುತ್ತಿರ್ದು ಮಿಂಚುಂಬ ಬಿವಂ ಕಂಡುಮಿದು ಕೆಂಡವೆಂದು ಬಗೆದದಱವೇಲೆ ಪುಲ್ಲಂ ಪುಳ್ಕಿಯುವುನಿಕ್ಕ ವೊಕ್ಕಳ ವುೂದುವುದುಂ; ಸೂಚೀವುಖನೆಂಬ ಪಕ್ಕಿ ಕಂಡು ನಮಿಪಕ್ಕೆ ಬಂದೆಲೆ ಬಲೀ ವುಖಾ! ನಿನ್ನ ವೊಗವುಂ ತಲೆಯುಂ ಬಾತು ಪೋದಪುದು! ಕಿಚ್ಚಲ್ಲ! ಮಿಂಚುಂ ಬುಲಿ! ನೀನಿದನೂದಿ ದೆಸೆಗೆಡನೇಡೆಂದು ಪಿರಿದುಂ ಪೊಲ್ತು ಬಾರಿಸುತಿರ್ಪುದುವುೂಱೆ ಪೆಂಡತಿಯಿಂತೆಂದಳೆಲೆ ವುರುಳೆ! ನೀನೀವುರ್ಕಟಂಗೆ ಬುದ್ಧಿಯಂ ಪೇಳ್ವೋಡೇಕೆಂ ದೊಡೆನ್ನ ಕೆಳೆಯಪ್ಪ ಸೂಚೀವುಖಿಯುವೊಂದು ವುರ್ಕಟಂ ವುಟ್ಟೆಗಳ್ಕ ಕಳವಳ ನುತ್ತಿರೆ ಕರುಣೆಸಿಯಿಂತೆಂದಳ್:—

"ಎರಡುಕ್ಕೆ ಯೆರಡು ಕಾಲ್ಗುಳ್ಳಂತು; ಪುರುಷಾಕಾರಂ ಕಾಣಬರುತ್ತಿರೆ; ಚಳಿ ಗಾಳಿಯಿಂ ಸಿಡಿಮಿಡಿಗೊಳುತಿರ್ದು ವನೆಯನೇಕೆ ವೂಡದು?"

ಎಂದು ಪಲವುಂ ಸೂಱೆ ಬುದ್ಧಿಯಂ ಪೇಱುತ್ತಿರ್ಪುದುವೂಕಪಿಕುಪಿತನಾಗಿ,

"ಎಲೆ! ದುರಾಚಾರೆಯಹ ವೂರ್ಖೆಯಹ ಪಂಡಿತಂವನ್ಯೆಯುಹ ಸೂಚೀ ವುಖಿ! ಸವರ್ಥನಲ್ಲದೆಯಿರ್ದಾತಂ ವನೆ ಯುಂ ವೂಡುವನು; ಸವರ್ಥನಾಗಿರ್ದಾತಂ ವು ಱುದು ಬಿಸುಡುವನು."

ಎಂದಾಪಕ್ಕಿಯು ಗೂಡಂ ಕೋಡಂ ವುಱುದೀಡಾಡಿತ್ತು. ಅದಱಿಂ ನಿನಗಿದಱ ತೋಟ ಪೇಡ. ಎಂತುಂ,

ವಾಕ್ಯಂ ॥ "ಅವಿನೀತನರಾಣಾಂ ಹಿತವಾಕ್ಯಂ ನ ಭಾವಯೇತ್" ॥

ಎಂಬುದು ನೀತಿಯುಂಟೆಂದಾಪಕ್ಕಿಯು ಪೆಂಡತಿ ನಾಡೆಯುಂ ಪೇಳೆ, ವೂಣದೆ ಸೂಚೀವುಖಂ ಶಾಖಾಚರನನತ್ಯಾಗ್ರಹದಿಂ ಬಾರಿಸೆ, ಕೋಪಗ್ರಹಗ್ರಸ್ತನಾಗಿ ಕಲುಷ ಕಂಪಿತಕಟಂ ವುರ್ಕಟನಾಪಕ್ಕಿಯಂ ಪಿಡಿದು ಕೊಂದಿಕ್ಕಿತ್ತು.

ಅದಱಿಂ,

ವೂರ್ಖಂಗೆ ಹಿತವಂ ನುಡಿಯಲಾಗದು; ಅತನ ಕೂಡೆಯುುರಲಾಗದು. ವಾನರವೂರ್ಖಂಗೆ ಬುದ್ಧಿಯಂ ಪೇಳ್ದೊಡ ಸೂಚೀವುಖಂ ವನದಲ್ಲಿ ಕೊಲಲ್ಪಟ್ಟಿತ್ತು.

ಅಂತುವುಲ್ಲದೆಯುಂ,

"ಉದಕದಿಂದಗ್ನಿಯಂ, ಸತ್ತಿಗೆಯಿಂ ಬಿಸಿಲಂ, ಔಷಧದಿಂ ವ್ಯಾಧಿಯಂ, ಮಂತ್ರ ಪ್ರಯೋಗದಿಂ ವಿಷಮಂ, ಅಂಕುಸದಿಂದಾನೆಯಂ, ದಡಿಯಿಂದೆತ್ತು ಕೆಲ್ಲಿಗಳಂ, ನಿಲಿಸಲ್ ಬಹುದು; ಮತ್ತೆ ಎಲ್ಲಕ್ಕಂ ಶಾಸ್ತ್ರವಿಹಿತಮಪ್ಪೌಷಧಮುಂಟು! ಮೂರ್ಖಂಗೌಷಧಮಿಲ್ಲ."

ಎಂಬುದುಂ; ಆದೆಲ್ಲಮಂ ಕೇಳ್ದರಿಮರ್ದನಂ ತನ್ನನ್ವಯಾಗತಮಂತ್ರಿಗಳಪ್ಪ ರಕ್ತಾಕ್ಷ, ಕ್ರೂರಾಕ್ಷ, ಜಿಹ್ಮಾಕ್ಷ, ದ್ರುಪದಾಕ್ಷರೆಂಬ ನಾಲ್ವರ್ಮ್ಮಖ್ಯಮಂತ್ರಿಗಳಂ ಸನಿಹಪಕ್ಕೆ ಕರೆಸು–ವೇಱೊವಿಬಿರಂಜೀವಿಗೇಗೆಯಲ್ತಕ್ಕುದೆನೆ; ನಯಾಗವಂದಕ್ಷಂ ರಕ್ತಾಕ್ಷನಿಂತೆಂದಂ:—

ಒಡನೆಯನಿತ್ತುಂ ಸಂತತ
ಮೊಡನಂಡುಂ ಕೂಸುಗೋಟ್ಟುಮೆಂದಂದನೆಂದುಂ ।
ಕಡುಗೂರ್ತ್ತವಹಿತಬಲಮಂ
ಕಿಡಿಸುವುದುಚಿತಂ ನೃಪಂಗೆ ಮನುಮುನಿಮತದಿಂ ॥ 69 ॥

ಅದಲ್ಲದೆಯುಂ, ಪೂರ್ವೋಕ್ತಮಿಂತೆಂಬುದಲ್ತೆ:—

"ಶತ್ರು ದುರ್ಬಲನಾಗಿರ್ದಲ್ಲಿಯೇ ಕಿಡಿಸೆಲ್ವೋಱುಂ; ಬಲಾಧಿಕನಾದ ಬಳಿಕ ಕಿಡಿಸಲ್ಬಾರದು."

ಅದಱಿಂದೀತನಂ ಯಮನಿಕೇತನಕ್ಕಟ್ಟುವುದೆ ನಯಮೆನೆ; ಕ್ರೂರಾಕ್ಷನಂ ಕರೆದು–ನಿನ್ನಭಿಪ್ರಾಯಮಾವುದು ಪೇೞೆನೆ; ಅವನೀತನಂಕೊಲ್ವುದೆ ನೀತಿಯೆನೆ; ಜಿಹ್ಮಾಕ್ಷನಂ ಬಿನಗೊಳಲಾತನಿಂತೆಂದನೀ ಮಂತ್ರಿಗಳ್ ಪೇೞ್ದಿಂತೆ ಕದನದೊಳಿದಿರ್ಚಿದರಂ ಕೊಂದೊಡೊಂದುಂ ದೋಷಮಿಲ್ಲ; ಅದಲ್ಲದೆಯುಂ,

ಪುತ್ತೇಱಿದನಂ ಕೈದುವ
ನಿತ್ತನನೇರ್ಪೆತ್ತನಂ ರಣಾಂಗಣದೊಳ್ ಪೆ ।
ನ್ನಿತ್ತನಸಿಱಿಯರವೋಘಂ
ಮತ್ತೆನಿಸದೆ ತುಱಿಲನಂದ ಜನಮಂ ಜಗದೊಳ್ ॥ 70 ॥

ಪುಲ್ಲಂ ಕರ್ಚದನಂ ತ
ಳ್ವಲ್ಲದೆ ಮಱೆವೊಕ್ಕನಂ ಮಹಾಬ್ರಾಹ್ಮಣನಂ ।
ಕೊಲ್ಲರ್ ಪಾಪಕ್ಕಂಜುವ
ರೆಲ್ಲಂ ಸ್ತ್ರೀಬಾಲವೃದ್ಧಜನಮಂ ಜಗದೊಳ್ ॥ 71 ॥

ಅದಲ್ಲದೆಯುಂ, ಶ್ರೀರಾಮನನಂ ಗುಣಂಗೊಂಡನೆಂಬಿನಿತಱೊಳ್ ರಾವಣಂ ವಿಭೀಷಣನನೆಂತು ಪರಿಹರಿಸಿದನಂತೆ ನಿನ್ಮಡಿಯ ಗುಣಪ್ರಕಂಸನೆಗೆಯ್ದನಿತಱೊಳ್ ಪಾಯಸಂಗಳದರ್ಕನಿತವಸ್ಥೆಯನೆಯ್ದಿಸಿದುವದಱಿಂದಿದು ನನ್ಮ ಕೈಯೊಳ್ ವಧಪ್ರಾಪ್ತನಲ್ಲಮುಲ್ಲದೆಯುಂ, ಪೂರ್ವೋಕ್ತಮಿಂತೆಂಬುದಲ್ತೆ:—

ಶ್ಲೋಕ ॥ ''ಶ್ರೂಯತೇ ಹಿ ಕಪೋತೇನ ಶತ್ರುಶ್ಯರಣಮಾಗತಃ'' ॥

ಎಂಬ ಕಥೆಯಂ ಕೇಳ್ದಲ್ಲಿಯಿರೆಂದೊಡರಿವರ್ದನನದೆಂತೆನೆ–ನಯಶಾಸ್ತ್ರದಕ್ಷಂ ಜಿಹ್ಮಾಕ್ಷಂ ಪೇಟ್ಟ್ಗಂ:—

೫. ಕಪೋತಂ ಕಿರಾತಂಗೆ ತನ್ನಸುವನಿತ್ತ ಕಥೆ.

ವ॥ ಒರ್ವ ಶಬರಶಿಬಿರಾಧಿನಾಯಕಂ ಪೇಂಟೆವೋಗಿ ಪಕ್ಕಿಗಳನೆಲ್ಲಿಯುಂ ಪಡೆಯದೆ ಅಡವಿಯೊಳಿರ್ಪನ್ನೆಗಮಕಾಲಜಲಧರಸಿರ್ಮುಕ್ತಘೋರಾಂಬುಧಾರಾಪಾತದಿಂ ನಾಂದತಿ ಪ್ರಚಂಡಪವನಹತಿಯಿಂದಾಕಂಪಿತಶರೀರನಾಗಿ ಬರುತ್ತುಂ,

ವಿವಿಧಪ್ರಕಾರಶಾಖಾ
ನಿವಹವನುದ್ಯದ್ವಿಚಿತ್ರಪತ್ರವನುದ್ದಾ ।
ವಟವೃಕ್ಷವಾಜವಂ ಶಬ
ರವಲ್ಲಭಂ ವೆಲ್ಲಮೆಲ್ಲನೆಯ್ದಿದನಾಗಳ್ ॥ 72 ॥

ಅಂತೆಯ್ದಿ ವಂದು ಬೆಳೆತು ಬಿಬ್ಬಲುಗಾದ ಕೈಯಂ ಕಾಲುವನುಡುಗಿ ಕುನುಂಗಿ ಕುಳ್ಳಿರ್ದ ಕಿರಾತನನಾ ವುರದೊಳಿರ್ಪ ಕಪೋತಶಿಖಾವಣಿ ಕಂಡು ಕರುಣಾರಸಾರ್ದ್ರ ಹೃದಯನಾಗಿ ಸವಿಾಪದೊಳಿರ್ದ ತಾಪಸಾಶ್ರಮಕ್ಕಾಗಳ್ ಪೋಗಿ ಚಂಚೂಪುಟದಿನೊಂದು ಕೊಳ್ಳಿಯಂ ಕರ್ಚಿತಂದು ಪುಳಿಂದನ ವುಂದಿಟ್ಟು ಪುಲ್ಲಂ ಪುಳ್ಳಿಯವುಂ ತಂದಿಕ್ಕಿ ಕಿಚ್ಚನುರಿವೆ ಸರ್ವಾಂಗವುಂ ಕಾಸಿಕೊಂಡು ಸಚೇತನನಾಗಿ ಬಾಹ್ಯಾಂತರಾಗ್ನಿಗಳೊಡಲನೊಡನೊಡನೆ ನುಡೆ ಸೈರಿಸಲಾಱದಿಂತೆಂದಂ:—''ಎನಗಿನಿತುವುಪಚಾರಂಗೆಯ್ದ ದೈವವೇ! ನೀನೆನ್ನ ಕ್ಷುದ್ಬಾಧೆಯಂ ನೂಂಕಿಸಿ ಪ್ರಾಣವುಂ ರಕ್ಷಿಸಲ್ವೇಱ್ಕು''ವೆನೆ; ಕಪೋತಾಧಿರಾಜನಿನ್ನೇಗೆಯ್ವೆನೆಂದು,

''ಅನಿಮಿತ್ತಂ ಗರುಡಂಗೆ ತನ್ನಸುವನಿತ್ತನ್ಯಾದಿಜೀವೂತವಾ
ಹನವಿದ್ಯಾಧರಚಕ್ರವರ್ತಿತಿಳಕಂ ಶ್ರೀಲೀಲನಂ ಶಂಖಚೂ ।
ಡನನುತ್ಪುಹದೆ ಕಾದು ನಾಗನಿವಹಕ್ಕಾನಂದವುಂ ವೂಡಿ ಜೀ
ಯಿನೆ ವಾರಾಶಿಪರೀತಧಾತ್ರಿ ತಳೆದಂ ಲೋಕೋತ್ತರ ಖ್ಯಾತಿಯಂ ॥ 73 ॥

ಆಪಜ್ಜೀವಿಶರೀರಂ ಪರೋಪಕಾರಾರ್ಥವುಾಗಲ್ವೇಱ್ಕುವಿವಾತನುಂ ಪ್ರಾರ್ಥಿಸಿದನೆನಗಂ ಪೆಱತುಪಾಯವಿಲ್ಲವಿಾಶಬರಂಗೆನ್ನ ಶರೀರವುನೆ ಕುಡುವೆ''ನೆಂದು ಕಪೋತ ಕುಲೋತ್ತವುಂ ಪರೋಪಕಾರಾರ್ಥಕ್ಕೆ ಚಿತ್ತವುಂ ಕೈಕೊಂಡು,

ದಕವುಖನ ರೌದ್ರಕೋಪಾ
ಗ್ನಿಶಿಖಾಳಿಗಿದಿರ್ಚಿದಾ ಜಟಾಯುವ ತೆಱದಿಂ ।
ವಿಕದವುತಿ ವಿಸ್ಫುರದ್ದಹ
ನಶಿಖಾಳಿಗಿದಿರ್ಚಿದಂ ಕಪೋತಾಧೀಶಂ ॥ 74 ॥

ಅಂತಾಕರ್ಣಿನೊಳ್ ಪಾಯ್ದು ಸತ್ತ ಕಪೋತನಂ ಕಂಡು ಕಿರಾತಂ ತನ್ನುದರದ ಹನತಾಪಶಮನವುಂ ವಾಡಿದಂ.

ಅದಱಿಂ,

ಶ್ಲೋಕ ॥ "ಶ್ರೂಯತೇ ಹಿ ಕಪೋತೇನ ಶತ್ರುಶ್ಚರಣಾಗತಃ
ಜೀವಮೂತೇನ ಯಥಾನ್ಯಾಯಂ ಸ್ವಮಾಂಸೈರಪಿ ತರ್ಪಿತಃ" ॥

ವುಱಿಪೊಕ್ಕ ಶತ್ರುವಂ ಕಪೋತಂ ಸ್ವಕರೀರಮಾಂಸದಿಂದಲೆ ಆರಾಧಿಸಿತು. ಅದೆಹ ಗೆಂದೊಡೆ–ಜೀವಮೂತವಾಹನಂ ಸ್ವಮಾಂಸದಿಂ ಗರುಡನನಾರಾಧಿಸಿದಹಗೆ.

ಅಂತು ಕಪೋತಂ ಶರಣಾಗತನೆಂಬನಿತಱೊಳೆ ಕಿರಾತಂಗೆ ವೊದಲಾಗಿ ತನ್ನನುವ ನಿತ್ತುದು. ಈತನುಂ ನಿಮ್ಮಡಿಯ ಗುಣಕೀರ್ತನವೆ ಕಾರಣಮಾಗಿ ಕಾಗೆಯ ಕೈಯೊಳ್ ಪರಾಭವಂಬೆತ್ತ ನಂತಃಮಲ್ಲದೆ ತನ್ನಾಳ್ದನ ದೆಸೆಯೊಳ್ ಭೀತನುವಂಪವಮಾನಿತನುವಾಗಿರ್ದನದಱಿಂದೀತನಂ ಕಾವುದೆ ನೀತಿಯುಂ ಧರ್ಮವುವೆಂಬುದುಂ; ಕೇಳ್ದರಿವುರ್ದನಂ ದ್ರುಪದಾಕ್ಷನೆಂಬ ಮಂತ್ರಿಯ ವೊಗವುಂ ನೋಡಿ ನಿಮ್ಮ ಕಂಡ ನಯವಾವುದು ವೇಱಿವುನಲಾತನಿಂತೆಂದಂ:—ಜಿಹ್ಮಾಕ್ಷನೆಂದಂತೀವಾಯನಂ ವಧಪಾಪ್ತನಲ್ಲನದಲ್ಲದೆಯುಂ,

ಇದಕ್ಕೊಂದು ಕಥೆಯುಂಟೆನೆ—ಕಾಶಿಕಾಧೀಶ್ವರನದೆಂತೆನೆ — ದ್ರುಪದಾಕ್ಷಂ ವೇಱಿಗ್ಗಂ:—

೬. ಬ್ರಹ್ಮರಾಕ್ಷಸನುಂ, ತಸ್ಕರನುಂ.

ಉಜ್ಜಯಿನಿಯೆಂಬ ಪೊೞಲೊಳ್ ನುಬ್ರಹ್ಮಣ್ಯನೆಂಬ ಬ್ರಾಹ್ಮಣನಿರ್ದಂ, ಆತಂ ಗೆರಡಾವನಾರಾನುಂ ದಾನಂಗೊಟ್ಟೊಡವಂ ಕಳಲೆಂದೊರ್ಬ ಕಳ್ಳಂ ಬರುತ್ತಿರ್ದೆಡೆಯೊಳೊಂದು ನಿಡಿದಪ್ಪ ರೂಪಂ ಕಂಡು ನೀನಾರ್ಗೆಂದು ಬೆಸಗೊಂಡೊಡೆ, ಆಂ ಬ್ರಹ್ಮರಾಕ್ಷಸಂ, ನೀನಾರೆಂದು ಕೇಳ್ದೊಡಾಂ ಕಳ್ಳನೆಂದೊಡೆಲ್ಲಿಗೆ ಪೋದಪ್ಪೆಯೆಂದು ಬೆಸಗೊಳ್ವುದುಂ; ನುಬ್ರಹ್ಮಣ್ಯಭಟ್ಟಂಗರಡಾವುಳ್ಳಿನಂ ಕಳಲ್ಪೋದಪ್ಪೆನೆಂಬುದುಂ; ನಾನಾಬ್ರಾಹ್ಮಣನಂ ಪಿಡಿಯಲೆಂದು ಪೋಗಲಿರ್ದನದಱಿಂದೊಡನೆ ಪೋಪಂ ನಡೆಯೆಂದಿರ್ಬ್ಬರುಂ ಬ್ರಾಹ್ಮಣನ ವುನೆಯನೆಯ್ದೆವಂದು ಕಳ್ಳನಿಂತೆಂದಂ; ನಾನಾಪಶುವನುಯ್ವನ್ನೆ ವರಂ ನೀನುಸಿರದಿರೆನೆ; ರಕ್ಕಸನಿಂತೆಂದಂ:—ನೀನಾಪಶುವಂಬಿಡುವ ಪೊೞಿವ ಕಳಕಳವುಂ ಕೇಳ್ದು ಪಾರ್ವನೆೞ್ಚತ್ತೊಡೆನ್ನ ಕಾರ್ಯಂ ಕಿಡುಗುಂ; ವುನ್ನಂ ನಾಂ ಪಿಡಿವಪೆಂ; ಬಳಿಕ್ಕ ನೀಂ ಪಶುವಂ ಕೊಂಡು ಪೋಗೆಂದೊಡೆ—ಕಳ್ಳನೆಂದನಂತಪ್ಪೊಡೆ ಬ್ರಹ್ಮರಾಕ್ಷಸಂ ಪಿಡಿಯಲ್ ಬಂದಿರ್ದಪಂ, ಬೇಗವುೞಿಂದು ಪೇೞ್ದಪೆಂ ನೋಡೆನೆ; ಬ್ರಹ್ಮರಾಕ್ಷಸಂ—ನಿನ್ನಿಂದೆ ವುನ್ನವೆ ನಾಂ ಪೇೞ್ದಪೆನೆಂದು ಪಾರ್ವನ ಪಲ್ಕೆಯ ಸವಿಾಪಕ್ಕೆ ಬಂದು "ಎಲೆ ಬ್ರಾಹ್ಮಣಾ! ನಿನ್ನ ಪಶುವಂ ಕಳ್ದುಕೊಂಡು ಪೋಗಲೆಂದೊರ್ವಂ ಕಳ್ಳಂ ಬಂದಿರ್ದಪಂ ಬೇಗವೇೞ್ಗು" ಎನಲೊಡಂ; ಕಳ್ಳಂ–ಎಲೆ ಬ್ರಾಹ್ಮಣಾ! ನಿನ್ನಂ ಬ್ರಹ್ಮರಾಕ್ಷಸಂ ಪಿಡಿಯಲ್ಬಂದಿರ್ದಪಂ ಬೇಗವೇೞಿಂಬುದುವುದಂ ಕೇಳ್ದ ಬ್ರಾಹ್ಮಣನೇೞ್ಚಿತ್ತ ದಾರೆಲವೋ! ಎಂದದ್ದಱಿಸಿ ಬರಲೊಡಂ; ತಸ್ಕರನುಂ ಬ್ರಹ್ಮರಾಕ್ಷಸನುವೋಡಿ ಪೋದರ್.

ಅದಱಿಂ,

ಕತ್ರುಗಳಾಗಿರ್ದ್ದವ್ ತನ್ಮೊಳ್ ವಿವಾದಂಮಾಡಿದ ದೆಸೆಯಿಂ, ಕಳ್ಳನ ದೆಸೆಯಿಂ ಬ್ರಾಹ್ಮಣನ ಸಾವು ಉಱಿಯಲ್ಪಟ್ಟಿತು; ರಾಕ್ಷಸನಿಂ ಗೋವುಗಳಿರಡುಮುಱಿಯಲ್ಪಟ್ಟುವು.

ಅದುಕಾರಣದಿಂ ವಿರೋಧಿವರ್ಗದೊಳೆನ್ನರುಮನಾದೊಡಂ ತನ್ನೊಳಗಿಡುವುದೆ ನಮಗುಱುವಕಾರ್ಯಂ. ಅಂತುಮಲ್ಲದೀತಂ ಮೇಘವರ್ಣನ ಪ್ರಧಾನನವರಿಂದಪ ಮಾನಿತನಾಗಿ ಬಂದಾತನಂ ಕೈಕೊಳ್ವುದೆ ನೀತಿಯುಂ ಖ್ಯಾತಿಯುಮದೆಂತೆನೆ:—"ಕಮಲಾಸನನ ಕೈಯೊಳವರತ್ವಮಂ ಪಡೆದಮರನಮಿತಿಯಂ ಕೋಟಲೆಗೊಳಿಪ ಹರಣ್ಯಾಕ್ಷನಂ ಪುಂಡರೀಕಾಕ್ಷಂ ಕೊಂದಾತನಗ್ರಸುತನಪ್ಪ ಪ್ರಹ್ಲಾದಂ ತನಗೆ ಭಕ್ತನೆಂಬನಿತಱೊಳೆ ಕಾದು ಆತಂಗೆ ವರದನಾದಂ. ಅದಱಿಂದೀ ಚಿರಂಜೀವಿಯುಂ ಕಾವುದೆ ಧರ್ಮಂ. ಅದಲ್ಲದೆಯುಂ, ಮಳಿಯಕೇತುವೆಂಬ ರಾಜತನೂಜನತಿತೇಜಿಷ್ಮನಾಗಿ ತನ್ನ ಮಂತ್ರಿ ಮುದ್ರಾರಾಕ್ಷಸಂಗೆ ತಥ್ಯಾಭಿಯೋಗಮಾದೊಡಂ ಮಿಥ್ಯಾಭಿಯೋಗಮೆಂದು ನಿಶ್ಚೈಸಿ ನಿರ್ವಿಚಾರದಿಂ ನಿರ್ಧಾಟಿಸಿ ಕಳೆದೊಡಾತನಪಮಾನಿತನಾಗಿ ಪೋಗಿ ಚಂದ್ರಗುಪ್ತಂಗಾಪ್ತನಪ್ಪುದುಮಾಮಲಯಕೇತು ಮಂತ್ರಿಸಹಿತನಾಗಿ ಕತ್ರುಸಂಗ್ರಹಕ್ಕೆ ಬಂದಂ. ಅದಱಿಂ ಮೇಘವರ್ಣನಿಂತಪ್ಪ ಮಂತ್ರಿಯನವಜ್ಞೆಗೆಯ್ದುವೇಕ್ಷೆಯಿಂದಿರೆ ಕೆಟ್ಟಂ. ಅದರ್ಕೊಂದುಂ ಸಂದೆಯಂ ಬೇಡ. ನಾವೀವಾಯಸಮಂತ್ರಿಯಂ ಕಾವುದೆ ನಯಂ" ಎಂದನೇಕಹೇತು ದೃಷ್ಟಾಂತಂಗಳಿಂ ತೋಱಿ ನುಡಿದ ದ್ರುಪದಾಕ್ಷನಂ ಕಟಾಕ್ಷಿಸಿ ಪತಿಹಿತಶಿಖಾಮಣಿಯಪ್ಪ ರಕ್ತಾಕ್ಷನಿಂತೆಂದಂ:—

ಶ್ಲೋ ॥ "ಉಪಕಾರ್ಯಾಣಿ ವಾಕ್ಯಾನಿ ಕತ್ರೂಣಾಮುಪಲಕ್ಷಯೇತ್ ।
ವ್ಯಾಧಾ ಮೃಗವಧಂ ಕರ್ತುಂ ಹೃದ್ಯಂ ಗಾಯಂತಿ ಸುಸ್ವರಂ" ॥

ಟೀಕಾ—ಕತ್ರುಗಳ್ಗುಪಕಾರಮಪ್ಪ ವಾಕ್ಯಂಗಳನೆ ತೋಱುವುದುಃ ವ್ಯಾಧರ್ ಮೃಗವಧೆಯಂ ಮಾಡಲೋಸುಗಂ ಸುಸ್ವರದಲ್ಲಿ ಹಾಡುವರ್.

ಎಂಬ ನೀತಿಯಿಂ ನೀವೆಲ್ಲಂ ಕಪಟನಾಟಕಸೂತ್ರಧಾರನುಮಪ್ರಕಾಶಹೃದಯನುಂ ಕ್ಷಪಣಾಧಾರನುಂ ಅತಿವಿಧಾನನುಂ ಮೇಘವರ್ಣನ ಪ್ರಧಾನನುಮಪ್ಪ ಚಿರಂಜೀವಿಯ ಕಪಟವನಱಿಯುದೆ ವ್ಯಸನಮುಧುರಾಲಾಪಂಗಳಿಂ ನಂಬಿ ಕಾಶಿಕಶಿಖಾಮಣಿಯು ಪ್ರಾಜ್ಯರಾಜ್ಯಮಹಾಮಹೀರುಹಕ್ಕೆ ದಾವಾಗ್ನಿಗಳಾದಿರದೇಕೆಂದೊಡೆ—ಚಿರಂಜೀವಿ ಚಿರಂತನನುಂ ಬುದ್ಧಿವಂತನುಂ ಸ್ವಾಮಿಹಿತನುಮಪ್ಪುದಱಿನೆಂತುಂ ಸ್ವಾಮಿಗೆ ತಪ್ಪಲಱಿಯಂ. ಮತ್ತಮಿತನಿರ್ದಂ ವತ್ಸರಾಜನೆಂಬ ರಾಜಪುತ್ರಂ ಕತ್ರುಸಂಗ್ರಹಕ್ಕೊಳಗಾದೊಡಾತನ ಮಂತ್ರಿ ಯೌಗಂಧರಾಯಣಂ ಪತಿಹಿತಾರ್ಥಂ ಯೋಗಾಚಾರ್ಯನಾಗಿರ್ದ್ದಂತೆಯುಂ, ಬಂಧುಸಂಬಂಧಮಪ್ಪ ಬದ್ಧವೈರಂ ಕಾರಣಮಾಗಿ ದುರ್ಯೋಧನನಂ ಸಾಧಿಸಲೆಂದಾರಾಧಿಸುತ್ತುಂ ಶಕುನಿಯೆಂತಿರ್ದ್ದನಂತೆಯುಂ, ನಂದಂ ನಿಜನಂದನರಂ ಕೊಂದ ಪಗೆಯುಂ ಬಗೆಯೊಳೆ ಸಾಧಿಸಲೆಂದು ಸಾಧುವೇಷದಿಂ ಭೇದಿಸಲಿರ್ದ್ದಂ

ತೆಯುಂ, ವಾಯುನವುಂತ್ರಿ ನವುಗಪಾಯುವುಂ ಬಗೆದಪಾಯುದಿನಿರ್ಮೂಡಿವೆಲ್ಲಂ ಸಹಜವುಲ್ಲ, ನಿಶ್ಚಯಂ ಕಾಗೆಗಳ್ಗೆ ಪಗೆಯುಗಿದ್ದರ್ನೆಂದು ನಂಬಲ್ವೇಡವೆಂದು ಪ್ರತ್ಯಕ್ಷಾನುಮಾನಂಗಳಿಂ ತತ್ತ್ವವಿದಂ ನುಡಿವಂತೆ ನುಡಿದ ನಿಜವುಹತ್ತರಂಗುತ್ತರಂಗುಡಲೊಲ್ಲದಿರ್ದರಿವುರ್ದನಂಗೆ ಕ್ಷತ್ರಪ್ರತಿಪತ್ತಿ ಚಿತ್ತವುನೊತ್ತರಿಸೆ,

ಶರಣಾಗತರಕ್ಷಣಮೇ
ನರಪಂಗೆ ವಿಶೇಷಲಕ್ಷಣಂ ನಿಶ್ಚಯುವೆಂ ।
ದರಿಮರ್ದನನಂತಾಗಳ್
ಚಿರಜೀವಿಯನೆತ್ತಿವೆಂದು ತೊಟ್ಟನೆ ನುಡಿದಂ ॥ 75 ॥

ಅಂತು ನುಡಿದಾ ಕಾಶಿಕಾಧೀಶ್ವರನ ಮಾತಂ ಕೇಳ್ದು ರಕ್ತಾಕ್ಷನಿಂತೆಂದಂ: — ದೇವಾ! ನೀವಿಂತೀರಾಜನವೃತ್ತಿಯಿಂದೀಚಿರಂಜೀವಿಯನೆತ್ತಿದಿರಪ್ಪೊಡೆ,

ಸತ್ತ ಸಿಂಹದ ಅಸ್ಥಿಗಳನೊಂದುಗೂಡಿಸಿ, ಆಕಾರಮುಂ ಮಾಡಿ ಪ್ರಾಣಮುಂಬರಿಸಿ ದಾಸಿಂಹದಿಂ ತುಂಗಭುಜನೆಂಬರಸು ಕೊಲಲ್ಪಟ್ಟಂತಹುದು.

ಎಂಬ ಕಥೆಯಂತಕ್ಕುಮೆನೆ — ಕಾಶಿಕಾಧೀಶ್ವರನದೆಂತೆನೆ — ಮುಂತ್ರಿ ಚೂಡಾವುಣಿಯಪ್ಪ ರಕ್ತಾಕ್ಷನಿಂತೆಂದಂ: —

೭. ತುಂಗಭುಜನ ಕಥೆ.

ಅಂಗಜಬಾಣಕಲ್ಪಗಣಿಕಾಗಣದಿಂ ವಿಟಕೋಟಿಯಿಂ ನವೋ
ತ್ತುಂಗಶಿವಾಲಯಪ್ರಕರದಿಂ ವರವಾಪಿಗಳಿಂ ಬೃಹತ್ತಟಾ ।
ಕಂಗಳನಿಕ್ಷುಜೂತವನರಾಜಿಗಳಿಂದೆಸೆದಿರ್ಪ ರಮ್ಯಗೇ
ಹಂಗಳಿನಂಗದೇಶದ ಪಿಡಂಗು ವುನಂಗೊಳಿಕುಂ ಜನಂಗಳಂ ॥ 76 ॥

ವ ॥ ಅಂತಪ್ಪಂಗದೇಶದೊಳ್ ತುಂಗಭುಜನೆಂಬರಸನಿರ್ಪಂ. ಆತನಲ್ಲಿಗೆ ಯೋಗಸಿದ್ಧ ತಂತ್ರಸಿದ್ಧ ಮುಂತ್ರಸಿದ್ಧರೆಂಬ ಮೂವರ್ ಸಿದ್ಧರ್ ಬಂದು ಜಿಜ್ಞಾಸ್ಯವುಪ್ಪ ವಿದ್ಯೆಗಳಂ ಬಲ್ಲೆವೆಂದೊಡರಸಂ — ನೀಂ ಬಲ್ಲ ವಿದ್ಯೆಗಳಾವುವೆನೆ; ಯೋಗಸಿದ್ಧನೆಂದಂ: — ಎನಿತು ಕಾಲದಸ್ಥಿಸವೂಹಂಗಳಿರ್ದೊಡಂ ಇವಿಂತಪ್ಪ ಪ್ರಾಣಿಗಳ ಕಲ್ಯವೆಂದು ಸಹದೇವನಂತೆ ಪೇಱಲ್ ಬಲ್ಲೆನೆಂಬುದುಂ; ತಂತ್ರಸಿದ್ಧನೆಂದಂ: — ಆನೀತಂ ತೋಱುದಸ್ಥಿಗಳನಾಪ್ರಾಣಿಯ ಪೂರ್ವರೂಪವಂ ಪೋಲೆ ವಿಶ್ವಕರ್ಮನಂತೆ ನಿರ್ಮಿಸಲ್ ಬಲ್ಲೆನೆಂಬುದುಂ; ಮುಂತ್ರಸಿದ್ಧಂ: — ಆನೀಸಾಧಕಂ ಸಲಕ್ಷಣಮಾಗಿ ಮಾಡಿದ ಕಲ್ಯಾವಯವಕ್ಕೆ ದೇವನಂತೆ ಜೀವವುಂ ಪಡೆದುಮದಕ್ಕೆ ಸತ್ತ್ವವುಂ ದೃಢತ್ವವುಮುಪ್ಪಂತೆ ಮಾಡಿ ತೋಱಲ್ ಬಲ್ಲೆನೆಂದು ಬಿನ್ನಪಂಗೆಯ್ದೊಡರಸನವರಂ ಮನ್ನಿಸಿ ಬಱಿಕೊರ್ವ ವ್ಯಾಧಿಪನಂ ಬರಿಸಿ "ಪಲಕಾಲದ ಕಲ್ಯಂಗಳನೆಲ್ಲಿಯುಮೊಡಂ ಕೊಂಡು ಬಾ ಪೋ" ಗೆಂದೊಡಾ ಕಿರಾತಕಂ ಪೋಗಿ ತನ್ನ ಪಳ್ಳಿಯ ಸಮೀಪದೊಳ್ ಪುರಾಣಕೂಪದೊಳಿರ್ದಸ್ಥಿಯನಾಯ್ದು ತಂದೊಪ್ಪಿಸಲೊಡವುರಸನಾ ಸಿದ್ಧರಂ ಬರಿಸಿ ತೋಱುವುದುಮವರೊಳ್

ಯೋಗಸಿದ್ಧನಿದು ಮಹಾಬಲವಂತವಪ್ಪ ಸಿಂಹದಸ್ಥಿಗಳಿಂದು ಪೇಳ್ವಿದುವರಸನಂ ತಂತ್ರ ಸಿದ್ಧನ ವೊಗವುಂ ನೋಡಿ ನೀನಿದಂ ಸಿಂಹದಾಕೃತಿಯಂ ಮಾಡಿಂಬುದುವಾತನಂತೆ ಗೆಯ್ವೆನೆಂದವಂ ಕೊಂಡುಪೋಗಿ ಕಂಡವರ್ ಭಯಂಗೊಂಡೋಡುವಂತೆ ಭಯಂಕರಾ ಕಾರವುಪ್ಪ ಸಿಂಹವುಂ ಮಾಡಿ ನೋಡಲ್ ಬನ್ನಿವೆಂದರಸನಂ ಕರೆವುದುಂ; ಸವುಸ್ತ ಪರಿವಾರಂಬೆರಸು ಪೋಗಿ ನೀಡುಂ ಭಾವಿಸಿ ನೋಡಿ ಚಕೋರ್ದ್ಯಂಬಟ್ಟು ಬಟ್ಟೂಕ್ಕೆ ವುಂತ್ರ ಸಿದ್ಧನಂ ಕರೆದು ನೀನಿವಂ ಸಜೀವಂಗೆಯ್ಯಂಬುದುಮಾನೃಪನ ವುಂತ್ರಿಗಳೊಳ್ಪೊರ್ದಂ ಬಿನ್ನಪಮೆಂದಿಂತೆಂದಂ:—ದೇವಾ! ನೀವೀಸಿದ್ದರ ವಿದ್ಯೆಯು ವೈವಮೆಯುಂ ನೋಡಲಿನಿತಂ ಮಾಡಿದಿರ್, ಇವರಿರ್ಬರ ವಿದ್ಯೆಯಿಂತು ಸತ್ಯವಾದುದಂತೆ ವುಂತ್ರಸಿದ್ಧನ ವಿದ್ಯೆಯುಂ ಸತ್ಯ ವುಪ್ಪುದಱೊಳ್ ಸಂದೆಯಮಿಲ್ಲದಱಿಂದೀಸಿಂಹವುಂ ಪ್ರಾಣವುಂ ಪಡೆಯೆಸಿ ನೋಱ್ಪು ವಿನೋದವೆಂತುಂ ಬೇಡೆಂಬುದುವರಸನೀಚಕೋರ್ದ್ಯವುಂ ನೋಱ್ಪುವುಸಿರದಿರಿವೆನೆ; ವುತ್ತೊರ್ವ ವುಂತ್ರಿಯಿಂತೆಂದಂ:—ದೇವಾ! ನೀವಿಂತು ಅಸದಾಗ್ರಹಿಗಳಾಗಿ ಬೆಸಸು ದಿರ್! ಪಿರಿಯುವುಂತ್ರಿ ಪೇಱ್ದಂತೆ,

ಸಿಂಗಂ ಗಡ! ವುತ್ತದು ತಂ
ತ್ರಂಗಳೊಳಂ ದಿವ್ಯವುಪ್ಪ ವುಂತ್ರಂಗಳೊಳಂ ।
ತಾಂ ಗಡ! ಸಂಭೂತಂ ಗಡಿ
ದೇಂ ಗಡ! ನವ್ಮಳವೆ ಬಟ್ಟೂಕೆ ನಿಲಲುಂ ಗೆಲಲುಂ ॥ 77 ॥

ಅದಱಿನೆತ್ತುವುದು ವುಂತ್ರವುಲ್ಲ, ಇಂತಪ್ಪೆಡೆಗೊಂದು ಕಥೆಯುಂಟೆನೆ—ಅರ ಸನದೆಂತೆನೆ—ವುಂತ್ರಿ ಪೇಱ್ದಂ:—

೪. ಸತ್ತ ಪುಲಿಯನೆತ್ತಿದ ಗಾರುಡಿಗನ ಕಥೆ.

ವ ॥ ವುನ್ನವೊರ್ವ ನಿರ್ಬುದ್ಧಿ ಗಾರುಡಿಗಂ ಗಾರುಡವುಂ ಕಲ್ತು ವಿದ್ಯಾಪ್ರತ್ಯ ಯವುಂ ನೋಡಲೆಂದು ಸರ್ವದಪ್ಪನನಱಿಸುತ್ತುಂ ಬರ್ಪಾತಂ ಅಡವಿಯೊಳ್ಪೊಂದು ಪೊದಱೊಳ್ ಪುಲಿಯಂ ಪಾವ್ದು ಕೊಂಡು ಪ್ರಾಣವಿಯೋಗವಾಗಲಿರ್ದುದಂ ಕಂಡು ಸರ್ವದಪ್ಪನೆಂದಱಿದೀಪ್ರಾಣಿಯಂ ಸಾಯಲೀಯೆನೆತ್ತಿದಪೆನೆಂದೊಡೊಡನೆಯವರ್ ಸತ್ತ ಪುಲಿಯನೆತ್ತುವುದಾವ ಬುದ್ಧಿ! ಬೇಡೆಂಬುದುಂ ಮಾಣದಾತನೆತ್ತುವುದುವಾಪುಲಿ ವುುಂದಿರ್ದ ಗಾರುಡಿಗನಂ ತಿಂದುದು.

(ಒನೆಯ ಕಥೆಯ ಶೇಷ.)

ಅದಱಿಂದಿದಕ್ಕೆ ಪ್ರಾಣವುಂ ಪಡೆಯಲ್ವೇಱ್ಕುವೆಂಬುದೊಂದಾಗ್ರಹವುಂ ದೇವರ್ ವಿಜ್ಞಾಪ್ಪಿದೆನೆ ತುಂಗಭುಜನತಿಪ್ರಸಂಗದೊಳೀನುವುನುಸಿರದಿರಿವೆಂದು ವುತ್ತವಿಂ ತೆಂದಂ:—

ಪೊಂಗುವುದು ಗಡತಿಕೋಪದೆ
ಕೆಂಗೋಲ್ಗೊಳ್ವುದು ಗಡಿಂದ್ರಜಾಲದ ಸಿಂಗಂ ।
ತಾಂ ಗಡ! ಪರಿಗುಂ ಗಡ! ಪಾ
ಯ್ದುಂ ಗಡ! ತಿಂಗುಂ ಗಡವಾದೊಡೇಂ ನೋಲ್ಪೆವಿದಂ ॥ 78 ॥

ಎಂದೆಂತಾನುಂ ಮಂತ್ರಿಗಳ ಮಾತಂ ಕೈಕೊಳ್ಳದೆ ಮಂತ್ರಸಿದ್ಧನಂ ಕರೆದು ಬೇಗ ಮಿದಱ ಪ್ರಾಣಮುಂ ಪಡೆಯಮೆನಲಾತನಂತೆಗೆಯ್ವೇನೆಂದು ಮತ್ತಮಿಂತೆಂದಂ:— ದೇವಾ! ನೀವೀಸಿಂಹಮನಿಂದ್ರಜಾಲದ ಸಿಂಹವೆಂದಪಹಾಸ್ಯಂಗೆಯ್ಯಲ್ವೇಡೆಂತಕ್ಕುಮೆಂದಱಿಯಲ್ ಬಾರದಾಂ ಮಂತ್ರಿಸುವನ್ನಂ ತಂತ್ರಮುಂ ಬರಿಸಿ ನನ್ನ ದ್ಧರಾಗಿರಿಮೆನಲರಸನಂತೆಗೆಯ್ವೇನೆಂದು ಮುದಾಂಧಸಿಂಧುರಮನೇಱಿ ಚತುರಂಗಬಲಮನೊಂದುಮಾಡಿಕೊಂಡು ನಿಂದಂ. ಅನ್ನೆಗಮಾಸಿದ್ಧಂ ಸಿಂಗಕ್ಕೆ ಪ್ರಾಣಮುಂ ಪಡೆವುದುಂ, ಮಹಾಪ್ರಳಯಕಾಲಾಂಭೋದನಿನದಿಂ ಗಜಱಿ ಗರ್ಜಿಸಿ ಮೂಣದೆಣ್ದೆಸೆಯುಮುಂ ನೋಡಿ ತುಂಗ ಭುಜನೇಱಿದುತ್ತುಂಗಮುತ್ತ ಮಾತಂಗಮುಂ ಕಂಡು ಕೆಂಗೋಲ್ಗೊಂಡು,

ತುಂಗಭುಜಂಬರಸವನ ಮ
ತಂಗಜಮುಮನಾಂತು ನಿಂದ ಚತುರಂಗಮುಮಂ ।
ಸಿಂಗಂ ಕೊಂದುದು! ದುರ್ಮ
ತ್ರಂಗಳನೆನಗಿದೊಡೆ ಕಿಡದನಾವನುವೊಳನೇ ॥ 79 ॥

ಅದಱಿಂದೀ ಜರಂಜೀವಿ ಕತವೃದ್ಧನುಂ ಶಸ್ತ್ರಹತನುವೆಂದು ಬಗೆಯದೆ ಈತನ ನೆತ್ತಿ ಕೊಂಡುಯ್ದು ನಮ್ಮೊಳಗಿಟ್ಟುಕೊಂಡೊಡಿಂತಪುನರ್ಥಮಕ್ಕುಮೆಂದು ನುಡಿದ ಮಂತ್ರಿಮುಖ್ಯನ ಮಾತಂ ಕೇಳ್ದರಿಮರ್ದನನಿಂತೆಂದಂ: — ನಿನ್ನ ಪೇೞ್ದ ಮಾತಂ ಪೊಲ್ಲದೆನಲ್ ಬಾರದು; ಅರಸುಗೆಯ್ಯತಂ,

ಶರಣೆನೆ ಕಾವುದು! ಬೇಡಿದೊ
ಡಿರದೀವುದು! ತೂಡರೆ ಸೆಡೆಯದಿಱುವುದು ಪುಸಿಯೊಳ್ ।
ಪೊರೆಯದೆ ನಡೆವುದದಲ್ಲದೊ
ಡರಸು ಕಡಲ್ವೆರಸು ಪೊಡವಿಗರಸಾದಪನೇ ॥ 80 ॥

ಅದಱಿಂದಿವಂ ನಮಗೆ ಶರಣಾಗತನೆಂದು ಪೋಗದೆ ನಿಂದನದಱಿಂದೆಂತುಂ ಕಾಯಲ್ವೇೞ್ಪುದಿನ್ನೀವುಸಿರದಿರಿವೆಂದ ಕೌಶಿಕಾಧೀಶ್ವರನ ಮಾತೆಲ್ಲಮುಂ ಕೇಳ್ದು ಚಿರಂಜೀವಿಯಿಂತೆಂದಂ:—

ಗುಣನಿಧಿ ದೇವ! ಕೌಶಿಕಶಿಖಾಮಣಿ ಬುದ್ಧಿವಿಹೀನನಿನ್ನನೆಂ
ವ್ರಣಗಣವೇದನಾವಿಕಳನೆಂ! ಕತವೃದ್ಧನೆನೆನ್ನನುಯ್ದೊಡೇ ।
ನಣಿಯರಮಿಪ್ಪವುಪ್ಪೆದೆನೆ ನೀಂ ಕರುಣಂಬೆಸಸಿತ್ತೊಡಿತ್ತೊಡಾ
ಕ್ಷಣದೊಳೆ ತೋಱುವೆಂ ನಲೆ ಮದೀಯಮನೋಗತಮಪ್ಪ ಕಾರ್ಯಮಂ ॥

ಎಂದೊಡರಿವುರ್ದನನಿಂತೆಂದಂ:—

ನಿನಗಾವುದಿಷ್ಟವುದೆನಿ
ತ್ತೆನವೋಳ್ಗುಂ ಬೇಡಿಕೊಳ್ವುದೆನಲೊಡವೂಕಾ ।
ಕನಿಕಾಯನಾಯುಕಾವೂ
ತ್ಯನಿಕರವುಬ್ಬಂ ಹಸಾದವೆಂದಿಂತೆಂದಂ ॥ 82 ॥

ದೇವಾ! ನಿನ್ನ ಸತ್ಯತ್ಯಾಗಪರಾಕ್ರಮಾದಿಗುಣವರ್ಣನಂಗೆಯ್ಯೆ ವೇಳ್ಕುವರ್ಣನೆನಗಿನಿತವತೆಯಂ ಮಾಡಿದನೀಪರಾಭವವನಗ್ನಿಪ್ರವೇಕಂಗೆಯ್ದು ನೀಗಿ ಪತತ್ರಿಗೋತ್ರಾಧಿಪನಪ್ಪ ಭವದೀಯವಂಕದೊಳ್ ಪುಟ್ಟಿ,

ಪವಮಾನಪ್ರಯುನಂದನಂ ಫಣಿಪತಾಕಾನೀಕಮಂ ಚಕ್ರಿ ದಾ
ನವರಂ ಸಂಗರದಲ್ಲಿ ಕೊಂದ ತೆಱದಿಂದಾಭೀಳಕಾಕಾಳಿಯಂ ।
ತವೆ ಕೊಂದೀಧರೆ ವಿಚ್ಛಿ ಮಲ್ಲಿಸುವೆನುಗ್ರಾಟೋಪಮಂ ವೇಳ್ಕುವ
ರ್ಣವಧೂಲೋಚನವಾರಿಧಾರೆಯೊಳವುಸ್ಮತ್ಕೋಪದಾವಾಗ್ನಿಯಂ ॥ 83 ॥

ವ ॥ ಎಂದು ನುಡಿದ ಚಿರಂಜೀಯ ವೂತಂ ರಕ್ತಾಕ್ಷಂ ಕೇಳ್ದ ವುಕ್ತೋಷ್ಮನಾಗಿ ವುತ್ತಮಿಂತೆಂದಂ:—ಎಲೆ ವಾಯುಸ! ನಿನ್ನ ವೂಯಾವಾಕದೊಳರಿವುರ್ದನಂ ತೊಡರ್ದನದುವೆ ಸಾಲ್ಗುವೆಂದಿರದಾಗವೂನುಗತವಮಲ್ಲದುದಂ ನುಡಿವೆಯಪ್ಪೆಯದೆಂತೆನೆ:—

ವಾಕ್ಯಂ ॥ "ಸ್ವಯೋನಿಂ ಮೂಷಿಕಾ ಪ್ರಾಪ್ತಾ" ॥

ಎಂಬ ಕಥೆಯಂ ಕೇಳ್ದಲ್ಲಾವುದಿಲ್ಲಕ್ಕಮೆಂದಾರಕ್ತಾಕ್ಷನಿಂತೆಂದಂ:—

೯. ಮುನಿಯುಂ, ಇಲಿಯುಂ.

ಭಾಸ್ವತ್ತೇಜಂ ಯವುನಿಯು
ವುಸ್ವಾಧ್ಯಾಯಾದಿಕರ್ವುನಿಯತವ್ರತಸ ।
ರ್ವಸ್ವನತಿಪ್ರಖ್ಯಾತತ
ಪಸ್ವಿ ಯಕಶಾಲಿ ಯಜ್ಞನೆಂಬಂ ಪೆಸರಿಂ ॥ 84 ॥

ಆ ತಪೋಧನನೊಂದುದಿವಸಂ ವುಂದಾಕಿನಿಯಂ ವಿಾಯಲೆಂದು ಪೊಱವಟ್ಟು,

ವುದನಾರಾತಿಶಿರಶ್ಶಿಖಾವುಣಿಯನಂಭೋಜಾಸನಾಕೃಷ್ಟಸಂ
ಪದೆಯಂ ಶ್ರೀಸಗರಾನ್ವಯೋದ್ಧರಣಕಾರ್ಯಾಟಾರ್ಯೆಯಂ ಗೌತ್ರಭಿ ।
ನ್ಮದವೂತಂಗವುದಾಂಬುಸಂಗವುಕಷಾಯಿತಾಭೂತೆಯಂ ಯಜ್ಞನೆ
ಯ್ದಿದನುತ್ತುಂಗತರಂಗೆಯಂ ಕಪರಲೋಲಾಪಾಂಗೆಯಂ ಗಂಗೆಯಂ ॥ 85 ॥

ವ ॥ ಅಂತೆಯ್ದಿವಂದಮುರಾಪಗೆಯಂ ವಿಂದಂ ಸುರಾಸುರಚೂಡಾಮಣಿ ಮರೀಚಿ ಮೂಲಾಲಂಕೃತಚಾರುಚರಣಾರವಿಂದನುಮುದಯಾಚಲಚಕ್ರವಾಳಚಕ್ರವರ್ತಿಚೂಡಾಮಣಿಯುಂ, ತಮಃಪಟಲಪಾಟಲಾರಿವ್ಯನುಂ, ಬಿಸಜನಿತಂಬಿನೀಮನೋನಯನಾನಂದನನುಂ, ಸಕಲಜಗಪಟನಮಹಾಸೂತ್ರಧಾರನುಂ, ತ್ರೈಲೋಕ್ಯದೀಪಕನುಂ, ಪ್ರಿಯವಿಯೋಗವಿಧುರಚಕ್ರವಾಕಚಕ್ರಮನಃಪೀಡಾವಿಘಟನಚತುರನುಂ, ಸೀರಪಾಣಿಪರಿಧಾನಶ್ಯಾಮಮಾಯಮಾನಶಿಶಿರಕೀಕರಮಹಾನೀಲಮಣಿಹಾರ ಯಮುನಾವಿಲಾಸಿನೀಜನಕನುಂ, ನಿಜರಥತುರಗನಿಕರಖುರಪುಟಪತನಭಿನ್ನಚಾಮೀಕರಮಹೀಧರಾಗ್ರಗಾರ್ವರಜಃಪಟಲಾಚ್ಛಾದಿತದಿಙ್ಮಂಡಲನುಂ, ಆಖಂಡಲದಿಗಂಗನಾಮಣಿಕುಂಡಲನುಂ, ಶತಮುಖಪಂಚಮುಖಾಷ್ಟಪದದಶರಥತನೂಭವಕುಳಾಗ್ರೇಸರನುಂ, ತ್ರಯೀಮಯನುಂ, ನಿತ್ಯೋದಯನುಮಪ್ಪ ಗಭಸ್ತಿಮಾಲಿಗರ್ಘ್ಯಮನಿತ್ತಿದ ಹಸ್ತಕಮಲದೊಳಿಂಬರದೊಳಾಡುವ ಪರ್ದಿನ ಬಾಯಿಂದಂ ಬಿರ್ದು ಬರ್ದಂಕಿದೊಂದು ಪೆಣ್ಣಿಲಿಯಂ ಕಂಡದನಾದರಿಸಿ ನೋಯಲೀಯದೆ ಗುಂಡಿಗೆಯೊಳಕ್ಕಿಬಲ್ಲೆಕ್ಕೆ.

ಸ್ನಾನಜಪಹೋಮನಿಯಮ
ಧ್ಯಾನಾದಿಕ್ರಿಯೆಗಳೆಲ್ಲಮಂ ತೀರ್ಚಿ ನಿಜ ।
ಸ್ಥಾನಕ್ಕಯ್ದಂ ಯೋಗನಿ
ಧಾನಂ ಪರಿದುಂ ಪ್ರಯತ್ನದಿಂ ಮೂಷಿಕೆಯಂ ॥ 86 ॥

ಅಂತುಯ್ದು ಮುನೀಶ್ವರನದಕ್ಕೆ ಪರಿದುಂ ಕರುಣಿಸಿ ಕೂರ್ಮೆ ಕೈಗಣ್ಮೆ ಮಾಣದೆ,

ಉಜ್ಜ್ವಲವೃತ್ತಂ ॥
ಮುನ್ಯಧೀಶ್ವರನೀಶ್ವರಕಲ್ಪಂ ಸತ್ಯವಚೋನಿಳಯಂ ಜಗ
ನ್ಮಾನ್ಯನಾಗಳ್ ಮೂಷಿಕೆಯಂ ನೀಂ ಕನ್ಯಕೆಯಾಗೆನೆ ವಿಸ್ಫುರ ।
ತ್ಕನ್ಯಕಾಕೃತಿಯಂ ತಳೆದಿರ್ದಳ್ ತಾಂ ತ್ರಿದಿವಾಂಗನೆವೋಲವಳ್
''ನಾನ್ಯಥಾ ಮುನಿಭಾಷಿತ''ಮೆಂಬೀವಾಕ್ಯಮದೇಂ ಪುಸಿಯುಕ್ಕುಮೇ ॥ 87 ॥

ವ ॥ ಅಂತು ದಿವ್ಯಕನ್ಯಕಾಕಾರಮಂ ತಾಳ್ದಿರ್ದ ಕನ್ಯಕೆಯಾದಿಲಿಯಂ ಕಂಡು ಪರಿದುಂ ವ್ಯೋಹದಿಂ ರಕ್ಷಿಸುತ್ತುಮಿರೆ ಕೆಲವಾನುಂ ದಿವಸಕ್ಕಾಕೆ ವಿವಾಹಯೋಗ್ಯೆಯಾಗಿರ್ದುದಂ ಯೋಗೀಂದ್ರಂ ಕಂಡಿನ್ನೇಗೆಯ್ವೆನೆಂಪು ಚಿಂತಿಸಿ.

ಶ್ಲೋ ॥ ''ಪಿತೃಗೇಹೇ ತು ಯಾ ಕನ್ಯಾ ಪುಷ್ಪಿಣೀಸ್ಯಾದಸಂಸ್ಕೃತಾ
ಅಪರಸ್ಯಂತು ಸಾ ವೇಶ್ಮ ಜಘನ್ಯಾ ವೃಷಲೀ ಮತಾ'' ॥

ಟೀಕು—ತಂದೆಯ ಮನೆಯೊಳರ್ದ ಕನ್ಯಕೆ ಮದುವೆಯಾಗದ ಮುನ್ನವೆ ಮೈಯ್ನೆಱೆದೊಡಾಕೆ ಸೂಳೆಯೋಪಾದಿಯಲ್ಲಿ ಬಕ್ಕಲಗಿತ್ತಿಯಿಂದಂ ಕಷ್ಟೆ!

ಆದುಕಾರಣದಿಂ ಕನ್ಯಕೆ ಪುಷ್ಪವತಿಯಾಗದನ್ನೆಗಂ ಕುಡಲ್ವೇಱ್ಪುದೆಂದು,

ಅನುರೂಪಂಗೆ ಕುಲೀನಂ
ಗೆ ನಿಖಿಲವಿದ್ಯಾವಿದಂಗೆ ತೇಜೋನಿಳಯಂ ।
ಗನವದ್ಯಾಚಾರಂಗೀ
ವನಜಾಕ್ಷಿಯುನೀವೆನೆಂದು ದಿವ್ಯಮುನೀಂದ್ರಂ ॥ 88 ॥

ಅಂತಾಕೆಯ ಮದುವೆಯಂ ಮಾಳ್ಪ ಕಜ್ಜಕ್ಕುಜ್ಜುಗಮನೆತ್ತಿ ಕೊಂಡುಮಿಾಕೆಗೆ ವರನಪ್ಪೊಡೆ ಲೋಕೈಕನೇತ್ರನುಂ ಸಕಲಜಗತ್ಪವಿತ್ರನುಂ ಶತಪತ್ರಮಿತ್ರನುಮುಧಿಕಪ್ರತಾಪನುಮಪ್ಪಾದಿತ್ಯನಾಗಲ್ವೇಳ್ಕುನೆಂದು ನಿಶ್ಚಯಂಗೆಯ್ದು ಶುಭದಿನಶುಭಮುಹೂರ್ತಮಂ ಸಾಧಿಸಿಕೊಂಡು,

ಪರಿಣಯನಾರ್ಥಂ ಭಾಸುರ
ಸುರವಂಕುಟನಿಘೃಷ್ಟಚರಣಕಮಲನನುದ್ಯ ।
ದ್ವರದನನಾದಿತ್ಯನನಾ
ದರದಿಂದಂ ನೆನೆದು ಬರಿಸಿದಂ ಮುನಿಮುಖ್ಯಂ ॥ 89 ॥

ಅಂತು ಬರಿಸೆ ಬಂದು,

ಪೃಥ್ವೀವೃತ್ತಂ ॥
ಕನತ್ಕನಕರಂಜಿತಂ ನಿಜಕರಂ ಜಗನ್ಮಂಡನಂ
ವನೇಜಸಖನೇಕಚಕ್ರರಥನನ್ತಶೋಷೋದಯಂ ।
ಮನೋಹರತರಪ್ರಭಂ ಸುರವರಂ ತ್ರಿಲೋಕಸ್ತುತಂ
ಮುನೀಶ್ವರನ ಮುಂದೆ ನಿಂದನನಘಂ ದಿನಾಧೀಶ್ವರಂ ॥ 90 ॥

ವ ॥ ಅಂತು ತನ್ನ ಮುಂದೆ ಸನ್ನಿಹಿತನಾಗಿ ನಿಂದರವಿಂದಬಾಂಧವನ ಚರಣಸರಸೀರುಹಂಗಳಂ ಪರಮಭಕ್ತಿಯಿಂದರ್ಚಿಸಿ ವಿನಯವಿನಮಿತೋತ್ತಮಾಂಗನಾಗಿ ಮುನಿಪುಂಗವನಿಂತೆಂದಂ:—

ವಿರಹಾಕ್ರಾಂತರಥಾಂಗಸಂಕುಲಮನಸ್ಸಂತಾಪವಿಚ್ಛೇದ! ಭಾ
ಸುರತೇಜೋಧಿಕ! ದೇವರಾಜವಿನತಶ್ರೀಪಾದಪಂಕೇಜ! ಪಂ ।
ಕರುಹಶ್ರೀರಮಣೀಮನೋರಮಣ! ಮೂದ್ಯದ್ಧ್ವಾಂತಮಾತಂಗಕೇ
ಸರಿ! ಮಾರ್ತಂಡನೆ! ನೀಂ ಪರಿಗ್ರಹಿಪುದೆನ್ನೀಕನ್ನೆಯಂ ಜೆನ್ನೆಯಂ ॥ 91 ॥

ಎಂದು ಮುನಿನಾಥಂ ಬಿನ್ನಪಂಗೆಯ್ವುದುಂ; ದಿನನಾಥನದು ಮೂಷಿಕೆಯಪ್ಪುದನಱಿದು ಕೇವಳವೊಲ್ಗನೆಂದೊಡೆ ಮುನಿ ಮನಃಕ್ಷತಂಬಡುಗುಮೆಂದಿಂತೆಂದಂ:—ಆಂ ಪ್ರತಾಪವಂತನೆಂದೆನ್ನಂ ಕರೆದು ನೀವೀಕನ್ನೆಯಂ ಕುಡಲ್ ಬಗೆದಿರ್; ಎನ್ನ ರಶ್ಮಿಯ ಪ್ರತಾಪಮುಂ ಜೀಮೂತಂಗಳ್ ಮುಸುಕಲೀಯದೆ ಮುಸುಳ್ಕೊಂಡೆನಗಮುಧಿಕಂಗಳಾಗಿರ್ಕುಮದಱಿಂದವರ್ಕೆ ಕುಡುವುದೆಂದು ಪೇಳ್ದು ಪೋಪುದುಂ; ಮುನಿರಾಜಂ ನೇಳ್ಪರಾಜನಂ ಬರಿಸಿ—ನೀವಪ್ಪೊಡೆ ಮಹಾಪ್ರತಾಪಿಗಳಪ್ಪಿಂ ನಿಮ್ಮೊಳೊ

ರ್ವರೀ ಕನ್ನೆಯಂ ಪರಿಗ್ರಹಿಸಿವೆಂಬುದುಂ; ಅಂಬುದಂಗಳ್—ನಿಮ್ಮಡಿ! ನೀವೆವ್ಮಂ ಪ್ರತಾಪವಂತರೆಂದೆ ಬಗೆದಿರೆವ್ಮನೊಂದು ಮುಹೂರ್ತಮಾತ್ರದಿಂ ಪವನಂ ಪ್ರಳಯಕ್ಕೆ ಪಾಱೆ ಬೀಸುವನದಱಿಂ ನಿಮ್ಮನುತೆಗೆ ಮುರುತನೆ ವರನಕ್ಕುಮಾತನಂ ಬರಿಸಿವೆಂನ ಲೊಡನಾದಿವ್ಯಮುನಿ ಹುತವಹಸಖನಂ ಬರಿಸಿ—ನೀನೀಕನ್ನೆಯಂ ವಿವಾಹವೂಗಲ್ವೋ ಱಿಕ್ಕುವೆನೆ; ವಾಯುದೇವ ನೀತಪೋಧನನಪ್ಪೊಡೆ ಮಹಾನ್ಯೆಷ್ಯಿಕಂ; ಮತ್ತಮ್ಮಿತಂಗೀ ಕನ್ನೆಯಿಂತುಂ ಮುಗಳಾಗಳೆಂದು ದಿವ್ಯಜ್ಞಾನದಿಂದಾಕೆ ಮೂಷಿಕೆಯಪ್ಪುದನಱಿದಿಂ ತೆಂದಂ:—ನೀನೆನ್ನಂ ಪ್ರತಾಪಸಂಪನ್ನನೆಂದು ಬಗೆದಿರಾನುಂ ಕುಲಗಿರಿಗಳೆನಪ್ಪೊಡೆಂ ತುಂ ತೆರಳ್ಚಲಾಱೆನದಱಿಂದೆನಗಂ ನಗಂಗಳ್ ಪಿರಿಯವೆನೆ; ಪರಮಯೋಗೀಂದ್ರನತಿ ಸಂತೋಷಂಗೆಯ್ದು,

ಬರವೇಂ ತಿಟ್ಟಿದನಿಂ ಪ್ರಕೀಲಹಿಮವತ್ಕುತ್ಕೀಲವಿಂಧ್ಯಾವನೀ
ಧರಕೈಲಾಸಕುಭೃತ್ತಿಕೂಟಕುಧರಶ್ರೀಕೈಲಪೂರ್ವಾಪರಾ ।
ವರಭೂಭೃನ್ಮಲಯಾದ್ರಿ*ಕ್ರೌಂಚಶಿಖರಿಶ್ರೀಮನ್ಮಹಾಮೇರುಮಂ
ದರಮೈನಾಕಮಹೀಧ್ರನೀಲನಿಷಧ ಶ್ಲೋಣೀಧ್ರಸಂದೋಹಮಂ ॥ 92 ॥

ವ ॥ ಅಂತು ಬಲ್ಲಿಯುಟ್ಟಲೊಡಂ ಗಿರಿರಾಜರ್ ನೆರೆದು ಬಂದು—ನಿಮ್ಮಡಿ! ಪೆಸ ನಾವುದೆಂದು ಮುಂದೆ ನಿಲಲೊಡಂ; ನೋಡಿ—ನೀವಪ್ಪೊಡೆ ಪೆಂಪಿನೊಳಂ ಬಿಱಿಪಿನೊಳಂ ಸಾಹನದೊಳಂ ವರುತಂಗೆ ಪಿರಿಯರದುಕಾರಣದಿಂ ನಿಮ್ಮೊಳಗೊರ್ವರೀಕುಮಾರಿಗೆ ಸಾಂದರ್ಯರೂಪಧಾರಿಗೆ ವರರಾಗಿವೆಂಬುದುಂ; ನೀವೆಂದಂತೆ ಪವನನಿಂದಾವೆ ಬಲ್ಲಿದ ರಪ್ಪೆವಾದೊಡವೆಂತುಗಂ ಉಂದುರಂಗಳ್ ಬಲ್ಲಿದುವೆಂದೊಡವರಂ ವಿಸರ್ಜಿಸಿ ಮುನಿ ಮುಖ್ಯಂ ಮೂಷಕಮುಖ್ಯನಂ ಬರಿಸಿ—ನೀನೀಕನ್ನೆಯಂ ಪರಿಗ್ರಹಿಸೆಂಬುದುಂ; ಮೂಷಿಕನಿಂತೆಂದಂ:—ನಿಮ್ಮಡಿ! ಪೆಸಸಿದೊಡೆವ್ಮಿರ್ಪೆಡೆ ಬಿಲಂ, ನಿಮ್ಮ ಕೂಸನೆಂತು ಯ್ದಿರಿಸುವೆನದಱಿಂ ನಿಶ್ಚಯಂ ನೀವೆನಗೆ ಕುಡುವ ಬಗೆಯುಳ್ಳೊಡೆವ್ಮ ಜಾತಿವಾಡಿ ಕುಡಿವೆನೆ; ಮುನಿ ಮುನಿಸಂ ವೊಗಕ್ಕೆ ತಂದು ನಿಮಗೆ ಕೂಸಂ ಕುಡುವೆನೆಂಬುದಿ ದೆನ್ನದೋಷವಲ್ಲದೆ ನಿನ್ನ ದೋಷವಲ್ಲೆನೆ; ಮೂಷಕಾಧೀಶಂ ರೋಷಾವೇಶದಿಂದಿಂ ತೆಂದಂ:—

ಕೂಸಂ ಕೊಟ್ಟಪೆನೆಂಬೀ
ದೂಸಱೆ ನೀವಿಂತವಜ್ಞೆಗೆಯ್ಯುತ್ತೆನ್ನಂ ।
ಬೀಸರವನೆ ನುಡಿದಪಿರೀ
ದೋಸಮೆ ನೀವಮಱಿದುವಮಱಿಯಿರೆನ್ನನ್ನತಿಯಂ ॥ 93 ॥

ಅದೆಂತೆಂದೊಡೆ—ಪಾಲ್ಗಡಲಂ ಸುರಾಸುರಸಮಿತಿ ಕಡೆವಂದಾಂ ಪುಟ್ಟಿದೆಂ, ವೃಡನ ತನೂಜನಪ್ಪ ವಿಘ್ನೇಶ್ವರಂಗೆ ವಾಹನವಂ ಮಾಡಿಕುಡೆ ಮಹಾಮಹಿಮೆಯಿಂದಹಿಭೂ ಷಣಂಗಗ್ರಗಣ್ಯನಾಗಿರ್ಪೆನಂತಪ್ಪೆನ್ನ ತ್ಪತ್ತಿಸ್ಥಿತಿಯಂ ನಿಮ್ಮಡಿ! ನೀವಱಿದುವಮಱಿ

ಯದಂತೆ ನಿರಾಕರಿಸುವುದುಚಿತವುಲ್ಲಿಂಬುದುಂ; ಯುಜ್ಞನೀವೂಪಕಂ ಸಾಮಾನ್ಯ ನಲ್ಲವೂದೊಡವಿಾಕನ್ನೆಯನೆಂತು ವೂಷಿಕೆಯುಂ ವೂಲ್ಪೆನೆಂಬುದುವೂವುಂನೀಶ್ವರನ ಶಿಷ್ಯಂ—ನಿವ್ಮಡಿ! ನೀವಿಂತೇಕೆ ಬೆಸಸಿದಿರಿಹಕ್ಕೊರ್ಂದು ಕಥೆಯುಂಟು ಕೇಳವೆಂದಿಂತೆಂದಂ:—

೧೦. ದುರ್ವಾಸನುಂ, ನಾಯುಂ.

ವಾಸವನಿವಾಸದಿಂ ಕೈ
ಲಾಸದಿನತಿಸೇವ್ಯವುಪ್ಪ ಶುಷ್ಕಾಶ್ರವುದೊಳ್।
ಭಾಸುರತಪಃಪ್ರಭಾಪ್ರವಿ
ಭಾಸಂ ದುರ್ವಾಸನೆಂಬ ಯತಿವರನಿರ್ದಂ ॥ 94 ॥

ವ ॥ ಅಂತಾಯತಿನಾಯಕನೊಂದು ಸಾರವೇಯಶಿಶುವಂ ಕಂಡು ಪ್ರೀತಿವಟ್ಟು ನಡಪುತ್ತಿರ್ಪುದುವುದು ಗಂಡುನೆರೆದುಕೊಂಡು ತುಡುಗುಣಿಯಾಗಿ ಭಾಂಡಸಂಕರಂಗೆಯ್ಯುತ್ತಿರ್ಪುದುವೂ ಶುಷ್ಕಿಸ್ತ್ರೀಯರ್ ಪುಯ್ಯಲ್ಡೆ ದುರ್ವಾಸನಾಶ್ವಾನನಂ ಪರಿಹರಿಸಲಾಱದೆ ತರುಚರನಂ ವೂಱ್ಪುದುವುದು ವುಟ್ಟಮಿರಲಾಱದಾಶ್ರವುಂಗಳನತಿಕ್ರವಿಸಿ ಪೊಕ್ಕು,

ಸಾರಕವುಂಡಲೂದಕವುನೊಕ್ಕು ಸುರಾರ್ಚನೆಗೆಂದು ತಂದ ವುಂ
ದಾರದ ಪೂಗಳಂ ಕೆದಱಿ ಕರ್ಪಟವುಂ ಪಱಿದಿಕ್ಕಿ ಸೀಱ್ದು ವಿ।
ಸ್ತಾರವೃಗಾಜಿನಾಸ್ತರಣವುಂ ಕೊಡೆಯುಂ ವುಱಿದಿಕ್ಕಿ ಸೂಸಿ ನೀ
ವಾರದ ರಾಶಿಯಂ ಬಿಡದೆ ಕಾಡಿದುದಾಕಪಿ ತಾಪಸರ್ಕಳಂ ॥ 95 ॥

ವ ॥ ಅಂತಾಕೋಡಗಂ ಱೋಡಾಡಿ ಕಾಡುತಿರ್ಪುದುವುದಂ ಸಾಧುವೃಗವುಂ ವೂಲ್ಪೆನೆಂದಾತಾಪಸಂ ಹರಿಣ್ಯನಂ ವೂಱ್ಪುದುವುದಾಹಾರಾರ್ಥವುಟವಿಗೆ ಪೋಪುದುಂ; ಕ್ರೂರವೃಗಂಗಳದಂ ಕಂಡು ಜೆಂಕೊಂಡೊಡೆ ಭಯಂಗೊಂಡು ಬರ್ಪುದುಂ; ದುರ್ವಾಸಂ ದೂರದೊಳ್ ಕಂಡು ಕರುಣಾರಸಾರ್ದ್ರಹೃದಯನಾಗಿ ಬೇಗವಿಂದಿರಂ ಪೋಗಿ ಕೈಕೊಂಡೀಪ್ರಾಣಿಗೆಂತು ಜೀಱೆ ನಿರ್ವಾಹಕವೆಂದು ಚಿಂತಿಸಿ ಶ್ವಾಪದಂಗಳೊಳಗೆ ಬಲವಂತನಪ್ಪ ಪುಲಿಯಾಗೆಂಬುದುವುದು ವುಹಾಪ್ರಚಂಡನಪ್ಪ ಪುಂಡರೀಕನಾಗಿ ಕರಿಕಳಭಂಗಳಂ ಪೆಳಱೆ ಪಾಯ್ವುದುಂ; ತ್ರಿಗಂಡಗಳಿತನಪ್ಪುದೊಂದು ಶುಂಡಾಲಯೂಥಾಧಿನಾಥಂ ಕಂಡು ಕಡುವಮುಳದು ತಗುಳ್ವುದುಂ; ಭೀತನಾಗಿ ನಿಲ್ಲದೋಡಿ ದ್ವೀಪಿ ತಾಪಸನ ಸವಿಾಪಕ್ಕೆ ಪರಿತರ್ಪುದುವುದಱಿ ಬೆನ್ನಂ ಬಿಡದಡಸುತ್ತುಂಬರ್ಪ ವನಗಜವುಂ ವುನಿನಾಥಂ ಕಂಡು ಕರಿಗಳ್ಗವುರಿದಪ್ಪ, ಕೇಸರಿಯಾಗೆನಲೊಡಂ;

ದಾರುಣವಕ್ತ್ರನುಗ್ರನಖರಂ ವಿಕರಾಳವುಹೋಗ್ರದಂಷ್ಟ್ರನಾ
ಪೂರಿತಲೀಹಿತಪ್ರಕಟಭೀಕರನೇತ್ರನುದಗ್ರವೂರ್ತಿ ಗಂ।
ಭೀರನಿನಾದನುನ್ನಮಿತಚಂಚಲನಾಲಧಿ ತನ್ನೊಳೊಪ್ಪೆ ಕಂ
ಠೀರವನಾಯ್ತು ತೊಟ್ಟನೆ ಚಕವೂರುಚರಂ ವುನಿವುಖ್ಯನಾಜ್ಞೆಯಿಂ ॥ 96 ॥

ವ ॥ ಅಂತಾವ್ಯಾಘ್ರಂ ಸಿಂಹನಾಗಿ ಗಜವ್ರಜಂ ಮೊದಲಾದ ವ್ಯಗವ್ರಜಂಗಳೆಲ್ಲ ವನಾಟಂದು ಕೊಂದು ವೂಣದೆ ಪುಷ್ಪಫಲಪತ್ರಶಾಖಾನಿವಿತ್ತಂ ವನವುಂ ತೊಱಲ್ವ ವುನಿಕುವೂರರಂ ಕೊಲ್ವುದುವುದಂ ಕಂಡು ದುರ್ವಾನಂ ವುಳಿದು,

"ನಾನೀ ನಾಯಂ ಕಪಿ, ಹರಿಣಂ, ವ್ಯಾಘ್ರಂ, ಸಿಂಹವಾಗೆ ವೂಡಿದೆಂ; ಕೃತಘ್ನನಂ ದುರಾಚಾರಿಯುವುಪ್ಪಿದು ವುರಳ ನಾಯೆ ಅಕ್ಕುಂ."

ಎಂದಿಂತಾತಪಸ್ವಿ ಸಿಂಹವುಂ ವುರಳ ಶ್ವನನಪ್ಪಂತು ವೂಡಿದಂ.

(ನೆಯ ಕಥೆಯ ಶೇಷ)

ನಿವ್ಮಡಿ! ನೀವಿದುಕಾರಣದಿಂ ವೂಷಿಕೆಯಂ ಕಾರುಣ್ಯದಿಂ ಕನ್ನೆಯಪ್ಪಂತು ವೂಡಿದಿರಿದಱ ಪೂರ್ವಜನ್ಮಸಂಸ್ಕಾರವಿನ್ನುಂ ಪಱವಟ್ಟುದಿಲ್ಲದಱಿಂದೀ ಕೆಯಂ ವೂಷಿಕೆಯಂ ವೂಡಿ ಕುಡಿವೆನೆನೆ; ತಪಸ್ವಿ, "ತಥಾಸ್ತು" ಎಂದು,

ಶ್ಲೋ ॥ "ಸೂರ್ಯಂ ಭರ್ತಾರವುತ್ಸೃಜ್ಯ ಪರ್ಜನ್ಯಂ ವಾರುತಂ ಗಿರೀ ।
ಸ್ವಯೋನಿಂ ವೂಷಿಕಾ ಪ್ರಾಪ್ತಾ ಸ್ವಾಂ ಯೋನಿಂ ನ ಪರಿತ್ಯಜೇತ್" ॥

ಸೂರ್ಯನನ್ನೂ, ಮೇಘವನ್ನೂ, ವಾರುತನನ್ನೂ, ಗಿರಿಗಳನ್ನೂ ವರಿಸದೆ. ವೂಷಿಕೆಯು ತನ್ನ ಹುಟ್ಟನ್ನೆ ಹೊಂದಿದಳು. ಹುಟ್ಟನ್ನು ಬಿಡಲಾಗದು.

ಅಂತಾಕನ್ನೆ ವುನ್ನಿನಂತೆ ವೂಷಿಕೆಯಾದಳ್.

ಆದಱಿಂ, ನಿನ್ನ ಸಿತಗತನದಿಂ ಶತವಾರಂ ಹುತವಹನಂ ಪ್ರವೇಶಂಗೆಯ್ದೊಡಂ ಸಿತಗನೆಯಾಗಿ ಪುಟ್ಟುವೆಯೆನೆ; ಆವಾತಂಗೆ ಚೀರಂಜೀವಿಯಿಂತೆಂದಂ:—ಸಿತಗನುಂ ವುತಿವಿಕಳನುವಾಗಿ ನತ್ತೊಡಂತುಟೆಯಕ್ಕುಂ, ಸತ್ಯವುಂ ಬುದ್ಧಿಯುಂ ನಿಶ್ಚಯಾತ್ಮಕವಾಗಿ,

ವುತಿವಿಕಳತೆಯಿಲ್ಲದೆಯುಂ
ಹುತವಹಯುತವಾಗೆ ಬಗೆದ ಗತಿಯಂ ಪಡೆಗುಂ ।
ನತತವುದು "ಯಾ ವುತಿಸ್ಸಾ
ಗತಿ" ಎಂಬ ಪುರಾಣವಾಕ್ಯವೇಂ ತಪ್ಪುಗುವೇ ॥ 97 ॥

ಎನೆ; ಜಿಹ್ಮಾಕ್ಷನಿಂತೆಂದಂ:—

ನಿನಗಿನಿತು ಬದ್ಧವೈರಂ
ವನದೊಳ್ ಕಾಗೆಗಳ ದೆಸೆಯಿನುಳ್ಳೊಡೆ ಬಲಿಭಂ ।
ಗ್ವಿನುತವುತಿ! ನೀನುವಿನ್ನೆ
ವ್ಮ ನಡುವೆ ವುದ್ಗ್ರೋತ್ರವಾಗಿ ಸುಖವಿರಲಾಗಾ ॥ 98 ॥

ಎಂಬುದುಂ; ಜಿಹ್ಮಾಕ್ಷಂ ಚಿರಂಜೀವಿಯ ಕಾಯಕ್ಕೆ ಜೀವಂ ಪೊಯ್ದುಂತೆಯುಂ ತನ್ನ ಮನಕ್ಕೆ ಬರೆಯುಂ ನುಡಿದುದರ್ಕೆ ಅರಿವುರ್ದನಂ ಸಂತೋಷಂಬಟ್ಟು ಚಿರಂಜೀವಿಯಂ ನೋಯಲೀಯದುಪಾಯದಿಂ ತನ್ನಿವುಂದುಳೂಕನಿಕರಕ್ಕೆ ಮೂರಿಯನಾವುಂ ತ್ರಿಸಿ ಕೊಂಡುಯ್ವುಂತೆ ವಾಯಸವುಂತ್ರಿಯಂ ನಿಜನಿವಾಸಕ್ಕೆ ಕೊಂಡುಯ್ದು—ನೀಂ, ಮನೋಹರವುಪ್ಪೆಡೆಯೊಳರಿವೆನೆ; ಚಿರಂಜೀವಿ ಮಹಾಪ್ರಸಾದವೆಂದಾತನ ರಾಜಧಾನಿಯುಪ್ಪುಂಜನಗಿರಿಯ ತಲ್ಪಿಲ ರಾಜಜಂಬೂವಟವಿಟಪಿಪ್ರದೇಶಂಗಳೊಳ್

ಸವುದಪರಪುಷ್ಟಲೋಚನ
ಸವುಪ್ರಭಾರುಣಿತರಾಜಜಂಬೂಫಲವುಂ ।
ಕ್ರವುದಿಂ ಸೇವಿಸುತುಂ ಕಾ
ಕವುಂತ್ರಿ ಕೌಶಿಕವಿನಾಶವುಂ ಚಿಂತಿಸುತುಂ ॥ 99 ॥

ಅಂತು ಸುಖವಿರ್ದು ಕೆಲವಾನುಂ ದಿವಸದೊಳಾಬಲಿಪುಷ್ಟಂ ಸಂಪುಷ್ಟನಾಗಿ ಬಲ್ಮೆಕ್ಕೆ ಕೌಶಿಕಾಧೀಕನಿವಾಸಸ್ಥಾನವುಮನುಳೂಕನಿಕರಸಂಕೇತಸ್ಥಾನವುಮನಾಯ್ದೆದು ತನ್ನೊಳ್ ತಾನೆ ಸಂತೋಷಂಬಟ್ಟುಂತೆಂದಂ:—

ಶ್ಲೋಕ ॥ "ಆದಾನಸ್ಯ ಪ್ರದಾನಸ್ಯ ಕರ್ತವ್ಯಸ್ಯ ಚ ಕರ್ಮಣಃ ।
ಕ್ಷಿಪ್ರವುಕ್ರಿಯವುಾಣಸ್ಯ ಕಾಲಃ ಪಿಬತಿ ತತ್ಕಲಂ" ॥

ಕೊಂಬ ಕಾರ್ಯವಂ, ಕುಡುವ ಕಾರ್ಯವಂ, ಮಾಡುವ ಕಾರ್ಯವನಿವೆಲ್ಲವಂ, ಅಹೊತ್ತೇ ಮಾಡದಿರ್ದೊಡೆ ಕಾಲವಾಕಲವಂ ಕಿಡಿಸುವುದು.

ಎಂಬ ನೀತಿಯುಂಟಪ್ಪುನೆನಗೆ ಕಾಲವಿಳಂಬನಂಗೆಯ್ವುದು ನಯವುಲ್ಲೆಂದಾದಿತ್ಯೋದಯವೆ ನಿಜಸ್ವಾಮಿಕಾರ್ಯೋದಯವೂಗೆ ಆದಿತ್ಯನಪತ್ಯನಲ್ಲಂ ಪೋಲುವಂಟ್ಟು, ಹವ್ಮದಂಬೋದವರ ಪ್ರಾಣಂ ಬರ್ಪಂತೆಯುಂ, ಆರ್ತಂಗಾಪ್ತಂ ಬರ್ಪಂತೆಯುಂ, ವಾಯುವೇಗದಿಂ ಬರ್ಪ ಚಿರಂಜೀವಿಯ ಬರವಂ ವೇಳ್ಕುವರ್ಣಂ ಕರ್ಣಪರಂಪರೆಯಿನಱಿದಿದಿರಂ ಪೋಪುದುವೆಯಿದ್ದವಂದ ಚಿರಂಜೀವಿಯಂ ಪರವಾನಂದದಿಂ ಗಾಢಾಲಿಂಗನಂಗೆಯ್ವುದುಂ; ಮಹಾಪ್ರಸಾದವೆಂದಾತಂ ಪೊಡೆವಂಟ್ಟು ಬಲ್ಮೆಕ್ಕಿಂತೆಂದಂ:—ದೇವಾ! ಶತ್ರುವಂ ನಿಶ್ಶೇಷಂವುಱ್ಪುಪಾಯವುಂ ಕರವೊಳ್ಪಿತ್ತಾಗಿಯಱಿದು ಬಂದೆಂ, ವೆಱತಾಳೋಚನಕ್ಕೆಡೆಯಿಲ್ಲ, ತಡೆಯದೀಗಳೆ ಸವುಸ್ತವಾಯಸನಿಕಾಯಮುಂ ಬರಿಸುವೆನೆ; ವೇಳ್ಕುವರ್ಣನಿಂತೆಂದಂ:—

ಸಪ್ತಾಂಗಸಹಿತನಹಿತಂ
ಗುಪ್ತಚರಂ ಶೂರನವನೊಳಱಿಯದೆ ವಿಜಯ
ಪ್ರಾಪ್ತಿ ನವುಗಪ್ಪುಪಾಯವು
ನಾಪ್ತೋತ್ತವು! ಪೇಳ್ವುಮೆಂದೊಡೆಂದಂ ಸಚಿವಂ ॥ 100 ॥

ರಿಪುವಂ ಗೆಲ್ವುದುಪಾಯಪೂರ್ವನಯದಿಂ ವಿಶ್ವಾಸದಿಂ ಸ್ವಾಂತನಾ
ದ್ಯುಪಜಾಪಕ್ರಿಯೆಯಿಂ ರಹಸ್ಯವಿಷಕಸ್ತ್ರಾಗ್ನಿಪ್ರಯೋಗಂಗಳಿಂ ।
ಕಪಟೋದ್ಯೋಗದಿನಾವಗಂ ಬಹುವುಪಾದೋಷಾವಹಂ ತಂತ್ರಬಂ
ಧುಪರಿಧ್ವಂಸನವುಂತುವುಲ್ಲಿ ವಿಜಯಂ ಸಂದೇಹವಿಂದ್ರಾದಿಗಂ ॥ 101 ॥

ಅದುಕಾರಣದಿಂ ತಾಂ ಕಾ
ದದೆ ರಿಪುವಂ ಗೆಲ್ವುದಖಿಳನಯಕೋವಿದನ ।
ಭ್ಯುದಯಾರ್ಥಿಯಪ್ಪ ಪಾರ್ಥಿವ
ನುದಗ್ರಬಲನಿಕರಪೂರ್ಣನಾದೊಡವೆಂದುಂ ॥ 102 ॥

ಅದೆಂತೆನೆ:—

ಬಲಿಯಂ ವಾಮನನಿಂದ್ರಂ
ಬಲನಂ ಚಾಣಕ್ಯನಹಿತನಂದವುಹೀಭೃ ।
ತ್ಕುಲಮಂ ಗೆಲ್ದಂತರಿನೃಪ
ಬಲವುನುಪಾಯದೊಳೆ ಗೆಲ್ವುದುತ್ತವುಪಕ್ಷಂ ॥ 103 ॥

ಆದಲ್ಕುಂ ರಿಪುಗಪಾಯವುಂ ಮಾಡುವುಪಾಯವೆನಿತುವೊಳವವಂತಿರ್ಕೆ! ನವು ಗರಿಯಾಗಿರ್ದರಿಮರ್ದನನಂ ತತ್ಪರಿವಾರವುನೊಂದೆ ಕೊಳ್ಳಿಯೊಳಿಂದೆ ಸುಟ್ಟಪೆಂ, ಸುವ್ಮನಿರದಲ್ಲಿಗೆ ತಕ್ಕ ಸಾಧನೋಪಾಯಂಗಳಂ ಬೇಗಂ ತರಿಸಿವೆನೆ; ಮೇಘವರ್ಣ ನಂತೆಗೆಯ್ವೆನೆಂದು ಪಡೆವಳರಂ ಕರೆದು ಪೇಱಲೊಡವುವಂದಿರ್ ಪೋಗಿ ಕಾಶಿಕಾಧೀ ಶ್ವರನ ಪುರವುನುರಿಪಲ್ ತಕ್ಕುವೆಲ್ಲವುಂ ಕೊಂಡು ತಡೆಯದಂಜನಗಿರಿಗೆ ನಡೆಯಿ ವೆಂದು ಕಾಕನಿಕರಕ್ಕೆಲ್ಲಂ ಸಾಱುವುದುಂ;

ಸಕಳಾಣವುಖಚಕ್ರವುಂ ವುಸುಕಿ ಚೀತೋವೇಗದಿಂ ರೌದ್ರಕೌ
ಶಿಕಸೇನಾಜವುಕಾಂಕ್ಷೆಯಿಂ ರುಚಿರಚಂಚೂಪಾತ್ತ ಚಂಚತ್ಕಳಿಂ ।
ಚಕರಾಳೋನ್ಮುಖಶುಷ್ಕಪತ್ರಪಟವೀರುದ್ಭಾಸಕಾರ್ಪಾಸತಂ
ತ್ರಕಜಾಲಂ ಬಲಿಭುಗ್ಬಲಂ ನಡೆದುದಂಭೋದಾಧ್ವದೊಳ್ ರಾಗದಿಂ ॥ 104 ॥

ವ ॥ ಅಂತಾವಾಯಸಬಲಂ ವೂವುಸಕಂ ವುನಗಿ ಬಂದು ಕಾಳನೀಳಜಲಧರಂಗಳ್ ಕುಳಗಿರಿಯಂ ವುತ್ತುವಂತರಿಮರ್ದನನ ಪುರವಾಗಿರ್ದಂಜನಗಿರಿಯಂ ಸುತ್ತಿ ವುತ್ತಿ ತಂತವ್ಮ ತಂದ ಪುಲ್ಲಂ ಪುಳ್ಳಿಯುಂ ವೊದಲಾದ ಕನಂಗಳೆಲ್ಲವುಂ ಚೆರಂಜೀವಿ ಡೋಲ್ದು ಗಿರಿಗುಹಾದ್ವಾರಂಗಳೊಳಂ ತರುಕೋಟರಕುಟೀರಂಗಳೊಳವಿಡಿದಿಡಿದು ತೀವಿ ಬಟ್ಟೆಕ್ಕೆ ಕೊಳ್ಳಿಗಳನಲ್ಲಿಗಲ್ಲಿಗೆ ತಗುಳ್ಚುವುದುಂ; ಶತಪತ್ರಮಿತ್ರಪುತ್ರಪತತ್ರಿ ಗೋತ್ರಪ್ರಧಾನಂಗೆ ಹುತವಹಸಖಂ ಸಹಾಯನಾಗಿ ಸುಟ್ಟುಸುಟ್ಟುದು ತಗುಳೆ ಬೀಸ ಲೊಡಂ.

ನಂದ ಪುರತ್ರಯಂ ವಿಷವುಲೋಚನಲೋಚನವಹ್ನಿಯಿಂ ಮರು
ನ್ನಂದನನಿಂ ದಶಾಸ್ಯನಗರಂ ಕಪಿಕೇತನನಿಂದೆ ನಂದ ನಂ ।
ಕ್ರಂದನನಂಬನಂ ನಿಮಿಷಮಾತ್ರದಿನೊರ್ಮೆಯಿ ಬಂದ ಮೂಲ್ಕ್ಕೆಯಿಂ
ಬೆಂದುದುಳೂಕರಾಜನಿಳಯಂ ಬಲಿಭುಂಕ್ಪತಿ ಮೇಘವರ್ಣನಿಂ ॥ 105 ॥

ವ । ಅಂತು ಬೇವುದಘವುಳೂಕಬಲಂಬೆರಸು ಅರಿವರ್ಗಂನ ಮೊದಲಾಗಿ ಪೇಟೆ ಪೆಸರಿಲ್ಲದಂತಾಗಿ ಪೋಗೆ; ವಾಯಸಂಗಳತಿರಾಗದಿಂ ಭೋರೆಂದಾರುತ್ತುಂ ಬರೆ,

ಬಳವದ್ವೈರಿಕ್ಷ್ಮಾಪಾಲರನಧಿಕಭುಜಾಗರ್ವದಿಂ ಗೆಲ್ದ ಲಕ್ಷ್ಮೀ
ನಿಳಯಂ ಗಂಗಾತರಂಗೋಪಮಚವರರುಹಶ್ರೇಣಿಯಂ ಬೀಸೆ ಚಿತ್ರೋ ।
ಜ್ವ್ವಳಕೇತುವ್ರಾತವುಂ ದುಂದುಭಿರವಬಧಿರೀಭೂತದಿಙ್ಮಂಡಲಂ ಮಂ
ಗಳಗೀತಂ ಪೊಣ್ಮೆ ಪೊಕ್ಕಂ ನಿಜಶಿಬಿರವನುತ್ಸಾಹದಿಂ ಮೇಘವರ್ಣಂ॥ 106 ॥

ವ ॥ ಅಂತು ಪೊಕ್ಕೊಡ್ಡೋಲಗಂಗೊಟ್ಟು ಕುಳ್ಳಿರ್ದು ಚಿರಂಜೀವಿಯ ಮೊಗವು ನಾದರದಿಂ ನೋಡಿ,

ಹಿತನೀತಂ ಮತಿವಂತನೀತನಧಿಕಂ ಕೂರ್ಪುಳ್ಳನೀತಂ ಗುಣಾ
ನ್ವಿತನಿಂತೀತನೆನಿಪ್ಪನಂ ಪೊರೆವುದುರ್ವೀಪಾಲಕಂ ಕೂರ್ಮೆಯಿಂ ।
ಹಿತನಲ್ಲಂ ಮತಿವಂತನಲ್ಲನಧಿಕಂ ಕೂರ್ಪುಳ್ಳನಲ್ಲಂ ಗುಣಾ
ನ್ವಿತನಂತಲ್ಲನೆನಿಪ್ಪನಂ ಪೊರೆಯವೇಡೀನಾದೊಡಂ ಭೂಭುಜಂ ॥ 107 ॥

ವ ॥ ಎಂದುಂ ಮಾಣದೆ ಚಿರಂಜೀವಿಯನರ್ಘಾಸನದೊಳ್ ಕುಳ್ಳಿರಿಸಿ ಬಲ್ಲಿಕ್ಕಿಂತೆಂದಂ:—

ಭವದೀಯೋತ್ತಮಮಂತ್ರದಿಂದುರುತರಾಸ್ಮತ್ಪ್ರಾಜ್ಯರಾಜ್ಯಾಸ್ಪದಂ
ಧ್ರುವಮಾಯ್ತುದ್ಧತವೈರಿರಾಜನಿಚಯಂ ನಿರ್ಮೂಲಮಾಯ್ತೆಂದು ಕಾ ।
ಕವಿಹಂಗಾಧಿಪನಿತ್ತನಾಪ್ತಸಚಿವಂಗಾನಂದದಿಂದರ್ಘರಾ
ಜ್ಯವನೊಲ್ದೀಯದರಾರೊ! ಭೂಭುವನದೊಳ್ ಸ್ವಾರ್ಥಕ್ಕೆ ಸರ್ವಸ್ವಮಂ ॥

ವ ॥ ಅಂತು ಸಂತಸಂಬಡಿಸಿ ಚಿರಂಜೀವಿಗಿಂತೆಂದಂ: —

ಶ್ಲೋಕ ॥ "ವರಮಗ್ನೌ ಪ್ರವೇಷ್ಟೋ ತು ಪ್ರಾಣಾನಾಂ ಪರಿವರ್ಜನಂ ।
ನ ಚಾರಿಜನಸಂಸರ್ಗೇ ಮುಹೂರ್ತಮಪಿ ಸೇವನಂ" ॥

ಟೀಕು—ಉರಿವ ಕಿಚ್ಚಿನೊಳಗೆ ಬಿದ್ದು ಸಾವುದೆ ಲೇಸು! ಹಗೆಗಳೆನೊಂದು ಮು ಹೂರ್ತವೊಲಗಿಸಲಾರದು.

ಎಂಬುದು ನೀತಿಯುಂಟು; ನೀವಿನಿತು ದಿವಸಂ ಕತ್ರುಸಂಸರ್ಗದಿನಾದುಪಸರ್ಗ ವುನೆಂತು ಸೈರಿಸಿದಿರ್? ಪೇಳ್ವೆವೆನೆ; ಚಿರಂಜೀವಿಯಿಂತೆಂದಂ:—ದೇವಾ! ನೀವೀಗಳ್ ಪೆಸಸಿದ ಸುಭಾಷಿತದರ್ಥಂ ತಪ್ಪದಾದೊಡಂ,

ಶ್ಲೋಕ ॥ "ವಹೇದಮಿತ್ರಂ ಸ್ಕಂಧೇನ ಯಾವತ್ಕಾರ್ಯವಿನಿಶ್ಚಯಃ ।
ತತಃ ಪ್ರತ್ಯಾಗತೇ ಕಾಲೇ ಭಿಂದ್ಯಾದ್ಘಟಮಿವಾಂಭಸಃ" ॥

ಟೀಕು—ತನ್ನ ಕಾರ್ಯವಹನ್ನಿವರಂ ಹಗೆಯಂ ಹೆಗಲೊಳಾದೊಡಂ ಹೊತ್ತು ಕೊಂಡಿಹುದು, ಕಾರ್ಯಂ ಬರಲೊಡನೆ ಕೊಡನಂ ಬಿಸುಡುವಹಗೆ ಬಿಟ್ಟುಕಳೆವುದು.

ಎಂಬ ನೀತಿಗಳೊಳವು. ಅದಲ್ಲದೆಯುಂ,

ಸಿಂಗದ ಮುಖಮನ್ರಂ ಮೇಷದ
ಪಿಂಗುಂ ನಯವಿದರ ವಿನಯಮಿಂತಿವು ವೞಕುಂ ।
ಭಂಗವಿನಿಸಲ್ಕೆ ಪಡೆಪುವು
ಕಂಗೆಡಿಸುಂ ಭರದಿನಹಿತರದಟಂ ಧುರದೊಳ್ ॥ 109 ॥

ಅದಲ್ಲದೆಯುಂ,

ಶ್ಲೋಕ ॥ "ವಹತಾ ಕೃಷ್ಣಸರ್ಪೇಣ ಮಂಡೂಕೋ ವಿನಿಪಾತಿತಃ" ॥

ಎಂಬ ಕಥೆಯಂತೆನೆ ವೇಳ್ಪುವರ್ಣನದೆಂತೆನೆ — ಚಿರಂಜೀವಿ ಪೇೞ್ದಂ: —

೧೧ ಕಪ್ಪೆಗಳಂ ಬೆನ್ನನೇಱಿಸಿಕೊಂಡ ಸರ್ಪನ ಕಥೆ.

ದರ್ಪರಹಿತಂ ಜನಾಧಿಕ
ಕಾರ್ಪಣ್ಯಸಮೇತನೊಂದು ಗಹನಾಂತರದೊಳ್ ।
ಸರ್ಪಂ ನಿಜಾಂಗನಾಯುತ
ನಿರ್ಪುದು ಕಪಟಪ್ರಪಂಚಪರಿಣತಚಿತ್ತಂ ॥ 110 ॥

ಆ ವೃದ್ಧೋರಗಂ ಸ್ವಾಹಾರಮನೆಲ್ಲಿಯುಂ ಪಡೆಯಲಾಱದೆ ಚಿಂತಿಸುತಿರ್ದು.

ಆಂ ದುರಭಿಮಾನಮಂ ಕೈಕೊಂಡಿರಲ್ ಪಸಿದು ಸಾವಾದಪ್ಪುದು; ಆನ್ಪುಪಾಯದೊಳ ಮಾಹಾರಮಂ ಪಡೆವೆನೆಂದೆಂದೊಡನೊಂದುಪಾಯಮಂ ಚಿಂತಿಸಿ,

ಮಂಡೂಕಬಹುಳಮಂ ಖರ
ದಂಡೋತ್ಪಲಕುಮುದರಾಜಿರಂಜಿತಮಂ ಕಾ ।
ರಂಡಕಳಹಂಸಪಟ್ಟದ
ಮಂಡಿತಮಂ ಕಂಡುದೊಂದು ಕೊಳನಂ ಸರ್ಪಂ ॥ 111 ॥

ಅಂತದಱ ಮೊದಲೊಳ್ ಕೆಲವು ದಿವಸಂ ತಲೆಯಿಕ್ಕಿ ಪಟ್ಟಿರ್ದನೆನೊಂದು ದರ್ದುರಂ ಕಂಡು ನೀರೊಳರ್ದದೇಂ ಭೂವಾ! ನೀನೀಗಳ್ ಪಲವು ದಿವಸಮಾಹಾರವಿರ ಹಿತನುಂ ನಿಜಪ್ರಭಾವಸಂಭಾವನಾಹೀನನುಮಾಗಿರ್ಪೆ! ಇದೇಂ ಕಾರಣಮೆನೆ; ಪನ್ನಗ ನೆನ್ನ ಮನೋರಥಮಾಪ್ತಿಯಾಗಲ್ ಬಗೆದುದೆಂದು ಸಂತೋಷಂಬಟ್ಟುಂತೆಂದುದು:—

ಈ ರುಸಿವಳ್ಳಿಯೊಳಾನವಿ
ಚಾರದೆ ಋಷಿಸುತನನೊರ್ವನಂ ಕೊಂಡೊಡವಂ ।
ಕ್ರೂರತರವಿಷವಿಭಿನ್ನಂ
ಧಾರಿಣಿಯೊಳ್ ಬಿರ್ದು ವಿಗತಜೀವಿತನಾದಂ ॥ 112 ॥

ಅಂತು ಮರಣಪ್ರಾಪ್ತನಾದ ಕುಮಾರನಂ ಸನ್ನಿಧಾನಸ್ಥಿತನಾಗಿರ್ದೆನ್ನುಮನಾತನ ತಂದೆ ಕಂಡು,

ಅನಿಶಂ ಭೇಕಾಳಿಗೆ ವಾ
ಹನವಾಗೆಂದೆನಗೆ ರೌದ್ರಶಾಪಮನಿತ್ತಂ ।
ಮುನಿಸಿಂ ತದ್ವಿಪ್ರಂ ನಂ
ದನಮರಣಪ್ರಭವಶೋಕಪಾವಕತಪ್ತಂ ॥ 113 ॥

ಅದುಕಾರಣಂ ನಾಂ ನಿಮಗೆ ವಾಹನವಾಗಲ್ ಬಂದೆನೆಂದೊಡಾಕಪ್ಪೆ ಪರಿದು ತಮ್ಮರಸನಪ್ಪ ಜಲಪಾಲಂಗಱಿಪಿದೊಡಾತನೀಕ್ಷಾತುಕವಂ ನೋಱ್ಪಿಂ ಱನ್ನಿವೆಂದು ತನ್ನ ಸಮಸ್ತಪರಿವಾರಂಬೆರಸು ಬಂದಾ ಪನ್ನಗನಂ ಕಂಡು ತದ್ವೃತ್ತಾಂತಮುಂ ಬೆಸಗೊಂಡೊಡಾತಂಗೆ ಸವಿಸ್ತರಂ ಪೇೞೆ ಕೇಳ್ದೊಡಂಬಟ್ಟುರಗಾರಿಯಂ ಹರಿಯೇಱುವಂತೆ ಸಮಸ್ತ ಹರಿನಿಕರಮೆನ್ನ ಬೆನ್ನನೇಱಿಕೊಂಡಾಡುತ್ತಿರಿಮೆನೆ; ಜಲಪಾಲಂಗೆ ಪ್ರಮೋದಮಾಗೆ ರಾಗಿಸಿ ಪಲಕಾಲಕ್ಕೆನ್ನ ಪಗೆಯೊಳಗಾದಂ ಬನ್ನಿವೆಂಬುದುಂ ಪಸಾಯತವ್ರ್ಯರನು ಪರಿತಂದು ವ್ಯತ್ಯುಯ ಬೆನ್ನನೇಱುವಂತಾಪನ್ನಗನ ಬೆನ್ನನೇಱುವುದುಮಾ ಅಹಿ ಮುಂ ಡೂಕಂಗಳೆಲ್ಲಮುಮಂ ಪೊತ್ತು ಮಾಱುವ ಬಗೆಯಂ ಬಗೆದು,

ಬಂದೆಡೆಯೊಳ್ ಜೇಗಂ ಪರಿ
ದೊಂದೆಡೆಯೊಳ್ ಮುಂದಗಮನದಿಂ ಪೋಗಿ ಮನಂ ।
ಬಂದಂದದಿನಾ ದರ್ದುರ
ನಿಂದಂದದಿನೆಂದುದಂದು ಸೂಕಳನಪರ್ದಂ ॥ 114 ॥

ಪಗೆಯನುಪಾಯದೆ ತೀರ್ಚ್ಚುವ
ಬಗೆಯಿಂದಾ ದರ್ದುರವ್ರಜಂಗಳನುಗ್ರೋ ।
ರಗನೆಯ್ದಿ ಪೊತ್ತು ತೊಱಲ್ದುದು
ಜಗದೊಳ್ ನಿಜಕಾರ್ಯ್ಯವಂತರೇನಂ ಮಾಡರ್ ॥ 115 ॥

ಅಂತನೇಕಕಾಲಂ ವೃದ್ಧೋರಗನಾ ದರ್ದುರಂಗಳಂ ಪೊತ್ತು ತಿರುಗಿ ಜೀವಸಂಗೊಂಡೊಂದು ದಿವಸಂ ತನ್ನಿರ್ದ ಪುತ್ತಿಂಗೆ ಬರ್ಪುದುಮದಱ ಪೆಂಡತಿ ಕಂಡೆಲೆ ವಲ್ಲಭ! ನೀವೀನಿಕೃಷ್ಟಮಪ್ಪಕಪ್ಪೆಗಳಂ ಪೊತ್ತು ಕಷ್ಟಂಬಟ್ಟು ಬಱಿಕ್ಕೆ ನಿಮ್ಮ ಸಾಧಿಸುವುದೇನೆಂಬುದುಮಾಪನ್ನಗನಿಂತೆಂದಂ:—

ಎಲೌ ಸುಮುಖಿ! ಕಪ್ಪೆಯಂ ಪಿಡಿವ ಕಾಲವಂ ನಾನಱಿಯೆನೆ? ವೃತಾನ್ನಮುಂ ಱಯಸಿ ವಿಪ್ರಂ ಕೆಲಕಾಲಮಿರ್ದಂತೆ ಕಾಲವನಪೇಕ್ಷಿಸಿಹೆನು.

ಎಂಬುದುಮದೆಂತೆಂದುರಗಿ ಕೇಳ್ವುದುಮುರಗನಿಂತೆಂದಂ:—

೧೦. ವಿಷ್ಣುಶರ್ಮನ ಕಥೆ.

ಭುವನವಿಭೂಷಣಮೆನಿಸಿ
ರ್ದ್ದ ವರ್ಧಮಾನಾಭಿಧಾನಪುರದೊಳ್ ವಿಲಸ ।
ದ್ಧವನದೊಳಿರ್ಪ್ಪಂ ವಿಪ್ರಂ
ವಿವೇಕನಿಧಿ ವಿಷ್ಣುಶರ್ಮನೆಂಬೊಳ್ವೆಸರಿಂ ॥ 116 ॥

ಅಂತಾತನ ಪೆಂಡತಿ ದುರ್ಮತಿಯೆಂಬಳ್ ಕುಲಟೆ ಕಪಟಪಟುವಪ್ಪುದಱಿಂ ಪರಪುರುಷರಲ್ಲಿಯೆ ಆಸಕ್ತೆಯಾಗಿರ್ಪುದನಾಪಾರ್ವನವಳಚೇಷ್ಟಾಭಾವದಿಂದಱಿತು, ನಿಶ್ಚೈಸುವೆನೆಂದೊಂದು ದಿವಸಂ "ನೆರೆಯೂರ್ಗೆ ಪೋಗಿ ಬಂದವೆಂ, ನೀಂ ಕರಂ ಬುದ್ಧಿವಂತೆಯಾಗಿ"ರೆಂದು ಪೊಱವಂಟ್ಟು ಪೋಗುವನಂತೆ ಪೇಱಿ ಪೋಗಿ ಮುಗುಱ್ಪುವಂದು ಆಕೆಯಂ ವಂಚಿಸಿ ಮನೆಯೊಳಡಂಗಿರ್ದಂ. ಅನ್ನೆಗಮವಳ್ ನೆರೆಮನೆಯ ಪಾದರಿಗನಂ ಬರಿಸುವುದುವಾವಂ ಬಂದಾಕೆಯನನೇಕಸ್ತೋತ್ರಪ್ರಕಾರದಿಂ ಪೈದು ಬಡಿದುಮೆನಗಿನಿತು ದಿವಸಮೇಕೆ ಬಱಿಯನಟ್ಟಿದೆಯಿಲ್ಲೆಂದು ಮುಳಿದೊಡಾಪಾಪ್ಟೆಯಿಂತೆಂದಳ್:—

ಮುನಿಯದಿರು ನಲ್ಲ! ನೀನಿಂ
ತೆನಗೆಲೆ ನಲೆ ಗಂಡನಪ್ಪ ಷಂಡಂ ನಿಚ್ಚಂ ।
ಮನೆಸನಿಗೊಂಡಿರೆ ಬರಿಸ
ಲ್ಕೆನಗಿಂಬಿಲ್ಲಾಗಿ ನಿನ್ನನಾಂ ನೆನೆದಿನಿಸುಂ ॥ 117 ॥

ಮಱುಗುತ್ತುಂ ಚಿಂತಿಸುತುಂ
ಬೆಱುಗಾದಂತಿರ್ದೆನಲ್ಲದಾನೋಪಳೆ! ಮೆ ।
ಯ್ಗರೆದಿರ್ದೆನಲ್ಲೆನೆಂಬಡಿ
ಗೆಱುಗಿರ್ದಾಪಾಪ್ಟೆ ಪಾಣ್ಪನಂ ನಂಬಿಸಿದಳ್ ॥ 118 ॥

ಅಂತು ಚಿತ್ತಂಬಡೆದೆನ್ನಾಣ್ಮನ ಕಣ್ಣೊಡೆವಂತುಪಾಯಮಂ ಚಿಂತಿಸಿದೆಯಪ್ಪೊಡೆ ನಮ್ಮ ಮನಂ ಬಂದಂದದಿಂದಂ ಕ್ರೀಡಿಸುವಮೆಂಬುದುವಾಪಾಣ್ಪನೆಂದಂ:—ಅಂತಪ್ಪೊಡೆ ನಮ್ಮೂರ ಮುಂದಣ ಬಟ್ಟೆಯ ಪೆನಕಂ ಚಿಂತಿತಾರ್ಥಪ್ರದನೆಂಬರಲ್ಲಿಗೆ ನೀಂ ನಾಳೆ ಪೋಗಿ ಪೊಡೆವಟ್ಟು ಪರಕೆಯಂ ತೆಗೆದೆಯಪ್ಪೊಡೆ ನಿನ್ನ ಮನೋರಥಸಿದ್ಧಿಯಕ್ಕುಮೆಂದು ಪೇೞ್ವುದುವಾವಳಂತೆಗೆಯ್ವೆನೆಂಬುದುವದೆಲ್ಲವನಾಪಾರ್ವಂ ಕೇಳ್ದಂದೆವೇೞ್ಪಯ್ದಿನಪ್ಪೊಡೆ ಪುಷ್ಕರನೆನ್ನಂ ಕೊಂದಪನಾನೀಗಳ್ ಹೀನಸತ್ವನಾಗಿರ್ಪೆನದಱಿಂದೇನಾನುವೊಂದುಪಾಯದಿಂ ಶಕ್ತಿಯುಪ್ಪಂತು ಮಾಡಿಕೊಂಡು ಬೞಿಕ್ಕವರ್ಗೆ ತಕ್ಕುದಂ ಮಾೞ್ಪೆನೆಂದಾಗಳೆ ಪೋಗಿ ಚಿಂತಾಸಿದ್ಧಿವಿನಾಯಕನ ಪಿಂತೆ ಕುಳ್ಳಿರ್ಪುದುಮಾ ಜೋಡೆ ನೇಸಮರ್ಘಡಲೊಡಂ ವಿನಾಯಕನಲ್ಲಿಗೆ ಬಂದು ಗಂಧಾಕ್ಷತದೂಪದೀಪಾದಿಗಳಂದರ್ಚಿಸಿ ತದನಂತರಂ,

ರಥೋದ್ಧತೆ ॥

ಕ್ಷೀರಸಾರಘೃತಪೂರವಂಡಕಾ
ಧಾರಖಂಡಯುತಲಡ್ಡುಕಾವಳೀ ।
ಪೂರಿಕಾದ್ಯಖಿಲಭಕ್ಷ್ಯರಾಶಿಯಿಂ
ಜಾರೆಯರ್ಚಿಸಿದಳಾಗಣೇಶನಂ ॥ 119 ॥

ಷಟ್ಪದರಾಜಿಚುಂಬಿತಕಪೋಲಯುಗಂ ದ್ವಿರದಾನನಂ ಸುರ
ದ್ವಿಟ್ಪುರಘುನ್ಮರಪ್ರಿಯಸುತಂ ಗಣನಾಥನಸ್ತೌಘುವೇದನಾ ।
ರುಟ್ಪಟಲಪ್ರಣಾಶದಹನಂ ಫಣಿನಾಯಕಭೂಷಣಂ ವರು
ದ್ಗಾಟ್ಪೃಥುವೌಳಿಲಾಲಿತಪದಂ ನವಗಿಗೆ ಮನೋರಥಂಗಳಂ ॥ 120 ॥

ವ ॥ ಎಂದು ತುತಿಯಿಸಿ ಪೊಡೆವಟ್ಟಿನ್ನ ಗಂಡನಂ ಕಣ್ಣಾರಂತು ನೋಡಿದೊಡೆ ನಿನಗೆ ನಾಂ ಪೊನ್ನಪಟ್ಟವುಂ ಪೊಟ್ಟುವುನೀವೆನೆಂಬುದುಂ; ಪ್ರತಿವೆಯು ಪೆಱಗಿರ್ದ ಪಾರ್ವನಂತಪ್ಪೊಡೆ ನಿನ್ನ ಗಂಡಂಗೆ ತಲೆವೊಸಿ ವಿಾಯಲಿಱೆದು ಷಡ್ರಸಾನ್ನಮನಿರ್ದತ್ತೊಂದು ದಿವಸಮಿಂಬಾಗಿಯುಣಲಿಕ್ಕಿದೆಯಪ್ಪೊಡೆಯಾತನ ಕಣ್ಣೊಡೆಗುಮೆಂಬುದುಂ; ಪಾಣ್ಪೆ ನಂಬಿ ದೈವಂ ಸನ್ನಿದನಾಗಿರ್ದನ್ನೊಡನೆ ನುಡಿದುದಿನ್ನೆನಗೇನೆಂದು ಮನದೊಳ್ ಪಿರಿದು ಸಂತಸಂಬಡೆದು ಮನೆಗೆ ಪರಿತಂದು ನಾನಾವಿಧಭಕ್ಷ್ಯಭೋಜ್ಯಂಗಳುಮನನೇಕಫಲಪತ್ರಶಾಕಂಗಳುಮಂ ಸುಸ್ವಾದುಗಳಪ್ಪಂತಟ್ಟು ಪಾರ್ವಂ ಬರಲತ್ಯಾದರದಿಂ ಕಾಲ್ಗೞಗಿ ಮೆಯ್ಯಂ ಕಯ್ಯಿನೊತ್ತಿ ವಿಾಯಲಿಱೆದು ದಿವ್ಯಾಹಾರಂಗಳನುಣಕ್ಕಿಬಲ್ಲಿಕ್ಕಿಂತೆಂದಳ್:—ಈಗಳ್ ಕೆಲವು ದಿವಸದಿಂದಿತ್ತ ನಿಮ್ಮೊಡಲ್ ಬಡವಾಗುತ್ತುಂ ಬಂದಪುದು; ಶರೀರಂ ಸಮಂತಿರ್ಪನಂ ಸಂತತಮಿಂತೆ ಸ್ನಾನಭೋಜನಂಗೆಯ್ದು ನಿಶ್ಚಿಂತಮಿರಿವೆಂಬುದುಂ; ವಿಷ್ಣುಕರ್ಮಂ ದುರ್ಮತಿಯು ಕೂರ್ಮಂಗೆ ಸಂತೊಷಂಬಟ್ಟುವಂತೆ ಗೆಯ್ವೆನೆಂಬುದುಮಾಸ್ಥಿತಿಯೊಳೆ ನಿಚ್ಚ ನಿಚ್ಚಂ ಸ್ನಾನಭೋಜನಂಗೆಯ್ಯುತ್ತಿರ್ದೊಂದು ದಿವಸಂ ಪಾರ್ವನಾಪಾಣ್ಪೆಗೆ ನಂಬುಗೆಯಂ ಪುಟ್ಟಿಸಲೆಂದು ಸಮಿಾಪಕ್ಕೆ ಕರೆದಿಂತೆಂದಂ:—

ಪಟಲಂ ಕಣ್ಣೊಳ್ ಕವಿದುಂ
ಗುಟಮುಂ ಮೊದಲಾಗಿ ಕಾಣೆನೆಂದೊಡೆ ಕುಲಟಾ ।
ಪಟು ರಾಗಿಸಿ ಮನದೊಳಗ
ಕ್ಕಟ! ಮರ್ದಂ ಮಾಱ್ಪವುಸಿರದಿರಿವೆನೆ ಪಾರ್ವಂ ॥ 121 ॥

ಅಂತೆಗೆಯ್ವೆನೆಂದುಸಿರದಿರ್ದು ಮತ್ತಂ ಕೆಲವು ದಿವಸಕ್ಕಾತಂ ತನಗೞವುಂ ಮನೋಬಲಮುಮಾಗೆ ಪಗೆಯಂ ಕೊಲಲ್ಬಗೆದುಮಾಗಳ್ ನೀನಪ್ಪುದಂ ಕಾಣೆನೆಂದಿರ್ದುಮಾ ಪಾಣ್ಪೆ ನಂಬಿ ನಿಮ್ಮ ಕಣ್ಗೊಳ್ಳಿದುವಕ್ಕೆಂದು ವಿನಾಯಕಂಗೆ ಪಟ್ಟವುಂ ಪೊಟ್ಟುವುಂ ಕೊಟ್ಟು ಪೊಡೆವಟ್ಟು ವಂದಪೆನೆಂದಾನೆವದೊಳೆ ಪರಕೆಯಂ ವಿನಾಯಕಂಗೆ ಕೊಟ್ಟು ಬಂದು ಬಲ್ಲಿಕ್ಕೆ ಪಾಣ್ಪನಂ ಬರಿಸಿ ಪಾರ್ವನಿರ್ದಂತಿರ್ದರಂ ನಡುವಿರುಳ ನಾಟಕಂ ನಲಿದು ಮಱ್ಪೊದೊಱಗಿರ್ದ ಸಮಯದೊಳಾ ಪಾಣ್ಪನಂ ಕೊಂದು ತನ್ನ ಬಗೆಯುವುಂ ಬಗೆದಂತೆ ತೀರ್ಚ್ಚಿದಂ.

(ಗಗನೆಯ ಕಥೆಯ ಶೇಷ.)

ವ ॥ ಆಂತೆ ಆನುಮೆನ್ನ ಪಗೆಯುಮುಂ ಬಗೆಯೊಳೆ ಸಾಧಸಲರ್ದವಂ, ನೀನು ಸಿರದಿರೆಂದಾ ನಾಗಿಗೆ ನಾಗಂ ಪೇೞ್ದು ಮತ್ತಂ ಮುಂಡೂಕಂಗಳಂ ಪೊತ್ತು ಮೆಲ್ಲಮೆಲ್ಲನೆ ತೊಱಲುತ್ತಮಿರೆ; ಜಲಪಾಲನೆಂದನೇಂ ಗಡ! ಭೂವಾ! ನೀನಿಂದು ಕರಂ ಮುಂದಗವನನೆ ಯಾದೆಯೆಂದೊಡೆ; ವೃದ್ಧೋರಗನಿಂತೆಂದಂ:—ದೇವಾ! ನಾಂ ಪಲವು ದಿವಸವಾಹಾರಂ ಬಡೆಯದೆ ನಡೆಯಲಾರ್ತಪೆನಿಲ್ಲಿಂಬುದುಮಂತಪ್ಪೊಡಂ ನಿನ್ನ ಪಸಿವು ಕೆಟ್ಟು ಬಲವುಪ್ಪು ನ್ನೆವರಂ ಕಿಱುಗಪ್ಪೆಗಳಂ ತಿನುತಿರೆನೆ; ಮುಹಾಪ್ರಸಾದಮಂತೆಗೆಯ್ವೆನೆಂದು ದಿವಸಗತಿ ಯಿಂ ಕಿಱುಗಪ್ಪೆಗಳೆಲ್ಲವುಮುಂ ಬಱಿದಾಗೆ ಮಾಡಿ ತನಗೆ ಸತ್ತ್ವಂ ನವುನಿಸೆ ಪಿರಿಯ ಕಪ್ಪೆಗಳೆಲ್ಲವುಂ ಗತಿಗೆಟ್ಟುವನೆಲ್ಲವುನೊಟ್ಟನೆ ಮಾಡಿ ಬಱಿಕ್ಕೆ ಜಲಪಾಲನುವಂ ತೆಂದುದು.

ಅದಱಿಂ,

ಶ್ಲೋಕ ॥ "ಸ್ಕಂಧೇನಾಪಿ ವಹೇಚ್ಛತ್ರುಂ ಕಾರ್ಯಸಾಧನಬುದ್ಧಿವಾನ್ ।
ವಹತಾ ಕೃಷ್ಣಸರ್ಪೇಣ ಮುಂಡೂಕೋ ವಿನಿಪಾತಿತಃ" ॥

ಎಂಬ ಕಥಾಪ್ರಪಂಚವನಱಿದೆನಪ್ಪುದಱಿಂ ರಿಪುವನುಪಾಯದೊಳೆ ಕಿಡಿಸುವೆ ನೆಂದುಮುವಂದಿರೇನೆಂಡೊಡಂ ಸೈರಿಸಿಯವರ ಮನಕ್ಕೆ ವಿಶ್ವಾಸಂ ಪುಟ್ಟುವಂತೆ ನಡೆದಂ ಸ್ವಾರ್ಥವಂ ಸಿದ್ಧಿಸಿದೆಂ.

ಎಂತುಂ ಪೂರ್ವೋಕ್ತವಿಂತೆಂಬುದಲ್ತೆ:—

ಶ್ಲೋಕ ॥ "ಏಕಂ ನಿಹನ್ಯಾತ್ ಸಂದೇಹಃ ಕಾಂಡೋ ವುಕ್ತೋ ಧನುಷ್ಮತಾ
ಬುದ್ಧಿರ್ಬುದ್ಧಿವತಾಂ ದೃಷ್ಟಾ ಹನ್ಯಾದ್ರಾಷ್ಟ್ರಂ ಸರಾಜಕಂ" ॥

ಟೀಕು—ಬಿಲ್ಲಾಳುನೆಚ್ಚಂಬು ಒರ್ಬನ ಕೊಲ್ವುದೋ ಕೊಲ್ಲದೋ ಸಂದೇಹವು; ಬುದ್ಧಿವಂತರ ಮಂತ್ರವು ಅರಸುಸಹಿತವಾಗಿರ್ದ ರಾಜ್ಯವನೆ ಕಿಡಿಸುವುದು.

* * * * * *

ಗದ್ಯಂ ॥ ಇದು ವಿನಮದಮರರಾಜಮೌಳಿಮಾಣಿಕ್ಯಮರೀಚಿಮಂಜರೀ
ಪುಂಜರಂಜಿತ ಭಗವದ್ಭವಾನೀವಲ್ಲಭಚರಣಸರಸಿರುಹಷಟ್ಪದಾಯಮಾನ
ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹ ವಿರಚಿತವಪ್ಪ
ಪಂಚತಂತ್ರದೊಳ್ ವಿಶ್ವಾಸಪ್ರಕರಣವರ್ಣನಂ
ತೃತೀಯತಂತ್ರಂ.

ಗಿರಿಜಾಕಲ್ಯಾಣಂ.

ಹರಿಹರದೇವಕವಿ—ಕ್ರಿ. ಶ. ಸು. 1165.

ಪೀಠಿಕಾಪ್ರಕರಣಂ.

ಶ್ರೀವಮಚ್ಛೈಲೇಂದ್ರಪುತ್ರೀಗುರುತರಸುರತಿಕ್ಷೀರವಾರಾಶಿಕಂಪ್ರಂ
ವ್ಯೋವಾರ್ಕೇಂದುಕ್ಷವಾತ್ಮಾನಿಲಜಲತಪವಾನಾಷ್ಟಮೂರ್ತಿಪ್ರಸಿದ್ಧಂ ।
ವ್ಯೋವಂಬೆತ್ತೀಗೆ! ಸದ್ಭಕ್ತಿಯನಿವಮಗವುರಾನೀಕವಾಣಿಕ್ಯಮೌಳಿ
ಸ್ತೋವಾಂಭ್ರಿದ್ಯೋತಿ ಪಂಪಾಪುರದರಸವಿರೂಪಾಕ್ಷನಾನಂದದಿಂದಂ ॥ 1 ॥

ಗೌರೀಪಾದಾಂಗುಲೀಕೋರಕವೆಸೆವ ಕರಂ ಪಲ್ಲವಂ ಪುಷ್ಪವೃಂದಾ
ಕಾರಂ ವುಂದಸ್ಮಿತಂ ಕಾಖೆಗಳವುರ್ದ ಭುಜಾನೀಕವಾಸ್ಯಂ ಫಲಂ ಶ್ರೀ ।
ಸಾರಂ ತಾನಾದ ಪಂಪಾಪುರದರಸ ವಿರೂಪಾಕ್ಷಕಲ್ಪಾಭ್ರಿಪಂ ವಿ
ಸ್ತಾರಂಬೆತ್ತೀಗೆ! ಸದ್ಭಕ್ತಿಯನಿವಮಗವೃತಪಾಯೆಯಂ ಪ್ರೀತಿಯಿಂದಂ ॥ 2 ॥

ಶ್ರೀಹೈವಾದ್ರೀಂದ್ರಚೂಡಸ್ಥಿರಕರಣಸಮಾರೂಢಪದ್ಮಾಸನಸ್ಥಂ
ಕೋಹಂ ಸೋಹಂ ಗಳೆಂಬಾ ಗಜಿಬಜೆ ಪುಗದಾನಂದಸಂವಿತ್ತು ಕಂದ ।
ಪಾರ್ಹಂಕಾರಪ್ರವಿಧ್ವಂಸನಕರನಿಟಲಾಕ್ಷಂ ಶಿವಂ ಪಾರ್ವತೀಶಂ
ನೇಹಂ ಕೈವಿಕ್ಕು ಪಂಪಾಪುರಪತಿ ದಯೆಯಿಂ ನೋಡಿ ರಕ್ಷಿಕ್ಕೆ! ನವ್ಯಂ ॥ 3 ॥

ವುಂಗಳವೂರ್ತಿ ವಾನಿನಿ ವುಹೋಜ್ಜ್ವಳೆ ವಾನ್ಯೆ ವುಹಾವುಹೇಕನ
ರ್ಧಾಂಗಿ ವುಹೋವಿರಾಜಿತೆ ವುಹಾಶಿವಭಕ್ತೆ ವುಹಾಪತಿವ್ರತೋ ।
ತ್ತುಂಗೆ ವುಹಾತ್ರಿಲೋಚನೆ ವುಹಾನಿಧಿ ತನ್ನ ವಿವಾಹವರ್ಣನಾ
ಸಂಗತಿಯೆಂದು ವುತ್ಕೃತಿಗೆ ಪಾರ್ವತಿ ವಾಲ್ಕೆ ವುಹೋತ್ಸವಂಗಳಂ ॥ 4 ॥

ಎನ್ನೀಕಾವ್ಯಕ್ಕೆ ನಿರ್ವಿಘ್ನದಿನತುಳನವೀನಾರ್ಥವಾಕ್ಯಪ್ರಸನ್ನೋ
ತ್ಪನ್ನಾಲಂಕಾರವುಂ ಕೂಡುಗೆ! ವಿಪುಳಕಪೋಳಸ್ಥಳಾಂತಸ್ಥಳೀನಂ ।
ಭಿನ್ನೋದ್ಯದ್ದಾನಧಾರಾಪ್ರಬಳಪರಿವುಳಾನಕ್ತ ಭೃಂಗಾವಳೀನಂ
ಪನ್ನಪ್ರೋದ್ಭೂತರುಂಕಾರಿತರವವುದಿತಾನಂದವೇಕಂ ಗಣೇಕಂ ॥ 5 ॥

ಪುಳಕವುನೆಲ್ದುಸುತ್ತೆ ಹರನಂ ಪರಿದಪ್ಪುತೆ ಸಂತಸಂಗಳಂ
ಬಳೆಯಿಸುತುಂ ಭವಾನಿಯ ಪಹೋಧರವುಂ ನಲಿದಂಡು ಪಕ್ತವುಂ ।
ಡಲವುನಲರ್ಚುತುಂ ನಗುವ ಹೊಂಗುವ ಹಿಗ್ಗುವ ಪೊಣ್ಮುಪುಣ್ಮುಪ
ಗ್ಗಳಿಸುವ ಪಾಡುವಾಡುವ ಷಡಾನನನೀಕೃತಿಗೀಗೆ ರಾಗವುಂ ॥ 6 ॥

ಶಿವನ ಮನೋಹರಂ ಶಿವನ ಪುಣ್ಯಫಲಂ ಶಿವನಾಪ್ತ ಸಂಕುಳಂ
ಶಿವನ ವಿಲೋಚನಂ ಶಿವನ ಗೋತ್ರಬಲಂ ಶಿವನೂರ್ಜಿತೋಜ್ಜ್ವಲಂ ।
ಶಿವನ ಸುಖಂ ಸದಾಶಿವನ ಸರ್ವಮುಖಂ ಶಿವಭಕ್ತರೆನ್ನ ಕಾ
ವ್ಯವನತಿಸವ್ಮದಂಬೆರಸಿ ಪೊರ್ದುಗೆ! ತಿರ್ದುಗೆ! ತಾಲ್ದಿದಲ್ಕುಮಂ ॥ 7 ॥

ಘನಕವಿತಾವಿಳಾಸದೊಳೆ ನಂದ ಮಯೂರನ ರೇಖೆ! ಕಾಳಿದಾ
ಸನ ರಸವೃತ್ತಿ! ಬಾಣನ ವ್ಯುದೂಕ್ತಿ! ಹಲಾಯುಧನಾಕೃ! ಕೇಶಿರಾ ।
ಜನ ಬಗೆಯುಚ್ಚಟಯ್ಯನ ಗಭೀರತೆ! ಮಲ್ಹಣನೇಲ್ಗೆ! ಭೋಜರಾ
ಜನ ಜಸವೆನ್ನ ಕಾವ್ಯರಸದೊಳ್ ನಲವಿಂ ನೆಲಸಿರ್ಕೆ ಸಂತತಂ ॥ 8 ॥

ಚತುರಚತುರ್ಮುಖನೆಲ್ಲ
ಶ್ರುತಿಗಳನೊಲವಿಂದೆ ಕಲ್ತ ಶಿವನ ವಿವಾಹೋ ।
ನ್ನತಿಯೂ ಕೃತಿಯೆಂದೆನೆ ಭಾ
ರತಿಯೆನಗನುಕೂಲೆಯಾಗದಿರಲಣ್ಮವಳೇ ॥ 9 ॥

ಕೊಂಡಾಡುಗೆ! ಕಲ್ತೋದುಗೆ!
ಮುಂಡಾಡುಗೆ! ಮುದ್ದಿಸುಗೆ! ಮರಲ್ದಪ್ಪುಗೆ! ಕೈ ।
ಕೊಂಡೀಕಾವ್ಯಮನಗಜೆಯ
ಗಂಡನಲಂಪಿಂದೆ ಹಂಪೆಯು ವಿರೂಪಾಕ್ಷಂ ॥ 10 ॥

ಎಂದಿಂತು ಪೀಡಿಕೊಳ್ವಲ್ಲಿ,

ಅತುಳತರಾರ್ಥವರ್ಥದನುವೃತ್ತಿ ಪದಂ ಪದದಿಚ್ಛಿ ಬಂಧಮೂ
ರ್ಜಿತಪದಬಂಧಸಂಧಿ ನವರೀತಿ ಸುರೀತಿ ಗುಣಂ ಸದಲಂಕೃತಂ ।
ಕೃತಿ ನವಲಂಕೃತಿಪ್ರತಿಮವೊಪ್ಪುವ ಭಾವವನೂನಭಾವದು
ನ್ನತರಸವೆಂದು ಸತ್ಕವಿಗಳಾಲಿಸೆ ಪೇಳ್ದಪೆನೀಪ್ರಬಂಧಮಂ ॥ 11 ॥

ಕಂದಂಗಳಮೃತಲತಿಕಾ
ಕಂದಂಗಳನೂನವಾಕ್ಯಫಲವಿಲಸನ್ಮಾ ।
ಕಂದಂಗಳ್ ತನಿರಸದು
ಕ್ಕಂದಂಗಳ್ ಸೊಗಯಿಸಿರ್ಪುವೀನುತಕೃತಿಯೊಳ್ ॥ 12 ॥

ಪದ್ಯಂಗಳ್ ನವರಸನಿರ
ವದ್ಯಂಗಳ್ ಸುಜನಸಂಕುಳಕ್ಕೆ ನಿತಾಂತಂ ।
ಹೃದ್ಯಂಗಳ್ ಧಾರಿಣಿಗತಿ
ಶೋದ್ಯಂಗಳ್ ವೆಱೆಯುತಿರ್ಪುವೀಸತ್ಕೃತಿಯೊಳ್ ॥ 13 ॥

ಕಾವ್ಯಂ ತಾನಿದು ನವರಸ
ಸೇವ್ಯಂ ಗಿರಿಜಾಧಿನಾಥನುರುತರಕರ್ಣ ।
ಶ್ರಾವ್ಯಂ ವಸುಧಾತಳದೊಳ್
ನವ್ಯಂ ಭೂತೇಶಭಕ್ತ ಜನತಾಭವ್ಯಂ ॥ 14 ॥

ಪೊಸತಿದು! ಪಾವನವಿದು! ರಂ
ಜಿಸುವ ಮಹಾನರ್ಘ್ಯಮಿಂತಿದೆಂಬೀಜನದಿಂ ।
ರಸವತ್ತಾವ್ಯಂ ತಾಂ ರಾ
ಜಸಭೆ ಬ್ರಹ್ಮಸಭೆ ದೇವಸಭೆಗೆಸೆದಿರ್ಕುಂ ॥ 15 ॥

ಅದುಕಾರಣದಿಂ,

ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸವಿಭವಂ ಪುಣ್ಯಪುಂಜಂ ಕುಭಂ ವಾ
ಗ್ದೇವ್ಯಾವಾಸಂ ವಿವೇಕೋನ್ನತಜಲನಿಧಿ ಸಂಸಾರವಿಶ್ರಾಮದೇಶಂ ।
ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೂರ್ತು ಪೇಳ್ವಲ್ಲಿಯಿಂದಂ
ಕಾವ್ಯಂ ಕಲ್ಪಾಂತಗಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ ॥ 16 ॥

ಸುರತರುವಿನಂತೆ ಸುಜನರ
ಸಿರಿಯಂತೆ ಸರೋಜದಂತೆ ಸುಧೆಯಂತೆ ಸುಧಾ ।
ಕರಕಿರಣದಂತೆ ಹಂಪೆಯ
ಹರಿದೇವನ ಕಾವ್ಯಮಖಿಳಸೇವ್ಯಂ ನವ್ಯಂ ॥ 17 ॥

ಪ್ರಿಯವಚದಂತೆ ಪುಣ್ಯತತಿಯಂತೆ ಸುಧಾಕರನಂತೆ ಕೂರ್ತ ಮು
ಗ್ಧೆಯ ಕಡುನೇಹದಂತಮೃತದಂತೆ ವಸಂತಕನಂತೆ ಪುಷ್ಪವಾ ।
ಟಿಯ ಪೊಸಗಂಪಿನಂತೆ ಮಲಯಾನಿಲನಂತೆ ಮರಾಳನಂತೆ ಹಂ
ಪೆಯ ಹರಿದೇವನೊಪ್ಪಿರೆ ನಿಮಿರ್ಚಿದ ಕಾವ್ಯಮಿಳಾಜನೋತ್ಸವಂ ॥ 18 ॥

ನೆರೆಯೆ ಕುತರ್ಕದಿಂದರೆದು ಸಣ್ಣಿಸಿ ನುಣ್ಣಿಸಿಯಂತದಿಂದು ಪೋ
ದರ ಕೃತಿಯೊಳ್ಳಿತನ್ಯಕೃತಿ ಪೊಲ್ಲದಿದೆಣ್ಣೆಗೆ ಬೆಣ್ಣೆ ಸಣ್ಣನೆಂ ।
ಬರ ನುಡಿ ಬೇಡ! ಪೇಳ್ವೆನತಿಭಾವರಸಾರ್ಥದೊಳಾತ್ತ ಛಂದವಂ
ಪರಸುಖವೃಂದವಂ ಸೊಗಯಿಪಂದವನೀಸುಕರಪ್ರಬಂಧವಂ ॥ 19 ॥

ನವರಸವತಿಭಾವಾರ್ಥಂ
ನವೀನಪದಭರಿತಮಿಂತಿದೆನೆ ಸತ್ಕೃತಿಯಂ ।
ತವೆ ಪೇಳ್ವುದು ಪೇಳದೊಡೇಂ
ಕವರ್ವರೆ! ಕೋಪಿಪರೆ! ನಿಂದಿಪರೆ! ದಂಡಿಪರೇ? 20 ॥

ಕೇಳಲೊಡಂ ಕಿವಿ ನವಿಯೊಳ
ಗಾಲಿದೊಡಂ ತನ್ಮನಂ ಮುಱುಂಗದೊಡಂ ಸೌ ।
ಖ್ಯಾಲಂಬಿಯೆನಿಪ ಚಿತ್ತಂ
ಲೀಲೆಯೊಳವಗಾಹಮಿರದೊಡದು ಸತ್ಕೃತಿಯೇ? ॥ 21 ॥

ಆಂತುಮುಲ್ಲಡೆಯುಂ,

ಓದಿದೊಡೆ ಕಲ್ಲಮಾಲೆಯ
ನಾದಂ ಕರ್ಬ್ಬುನ್ನ ಕಡಲೆ ವಾದಿಸೆ ರಸವಂ ।
ಸೋದಿಸೆಯುರ್ಕಿನ ಪುಡಿಯೆನಿ
ಪಾ ದುಷ್ಕವಿತೆಗಳನೆಣಿಸಲೇಕೀಕೃತಿಯೊಳ್ ॥ 22 ॥

ಹಲುಗವಿಗಳ ಕಬ್ಬಂಗಳ
ಹೊಲಿಗಲುಯಕ್ಕರದ ಹೊಲಿಗೆ! ಬಿರ್ಚಿದೊಡಿಲ್ಲಂ ।
ಬಲು ತಾಲುಗ! ಬೀಲುಗ! ವೆ
ತ್ತಲಿ ತತ್ತಲಿ! ವೆಕ್ಕಸಕ್ಕನುಸ್ತವ್ಯಸ್ತಂ! ॥ 23 ॥

ವೇಱವನ ಕಣ್ಗಳಂಧಕನ ಕಾಲ್ಗಳವಿಂತೊಡಗೂಡಿ ಗಾವುದಂ
ದಳದೊಡೆ ಬಲ್ಲಿದಂ ನಡೆದ ಮೂಲ್ಕೆಯೆನಿಪ್ಪುದೆ! ಪೇಡ! ಮಾಣಲೇ ।
ಅಲುಗವಿ! ನಿನ್ನ ತನ್ನೆರವಿನೋದನ ಕಬ್ಬಮನೋದಿದರ್! ಸುಧಾ
ನಿಳಯದ ಮುಂದೆ ಸತ್ಕೃತಿಯ ಮುಂದೆ ಸುಖಾಬ್ಧಿಯ ಮುಂದದೊರ್ಕೆಯುಂ ॥

ಆದು ಭೂಕಂ ದಿವದೊಳ್ ಕಾ
ಣದು! ನಿಶ್ಚಯಮಂತೆ ದುರ್ಜನಂ ಕಾಣಂ ಕಾ ।
ನ್ಮದೊಳತಿರಸಮನಸೂಯಾ
ನದನಂ ಸುಖದೂರನವನ ಮೂತೇಕಿದಱೊಳ್ ॥ 25

ಕ್ಷುದ್ರಂಗೆ ಸಕಲಸುಜನೋ
ದಧ್ರವರೂಪಂಗೆ ಪರರ ಕಾವ್ಯಾರ್ಥವುಮಂ ।
ಛಿದ್ರಿಸುವಂಗತಿಕಬ್ದದ
ರಿದ್ರಂಗಕ್ಕುಮೆ! ನವೀನಕಾವ್ಯಾರಂಭಂ ॥ 26 ॥

ಒಳಗಲ್ಲಿಯದೆ ಸತ್ಕಾವ್ಯದ
ಕಳೆಯಲ್ಲಿಯದೆ ಲಘುತರತ್ವದಿಂ ನಾಲ್ಕೆರಡಾ ।
ಯ್ಕುಳವಮಾತನಾಡಿಯುಮೆ ಹೆ
ಕ್ಕಳವಿಕ್ಕಿದೊಡೊಲ್ವರೇ ಕವೀಂದ್ರಾಭರಣರ್ ॥ 27 ॥

ಬರೆದಾಹ! ಬರೆದೆ! ಭಾಪುರೆ!
ಬರೆದಕ್ಕಟ! ಬರೆದೆ! ಲೇಸು! ಬರೆದೆಯೆನುತ್ತುಂ।
ಬಱೂದೆ ತಲೆದೂಗುವುದಱುಂ
ಬಱೂದೆಪ್ಪುದು ಕಾವ್ಯವಱಿಯದರ ಜಾಣಂದಂ ॥ 28 ॥

ತನಗೆ ಕವಿತ್ವಮಿಲ್ಲ! ಪೆಱರಂ ಪಱೂದಲ್ಲದೆ ನಿಲ್ಲನಾತನೊಳ್
ವಸಿನಿವುದನೀತಿ! ಪಂದಿ ಡುಱುಕೆಂದೊಡೆ ತಾಂ ಡುಱುಕೆಂಬುದೇ! ಮಹಾ।
ವನಕರಿಯಂ ವಿದಾರಿಸುವ ಸಿಂಹವುದಂತತಿದೋಷಿಯಪ್ಪ ದು
ರ್ಜನರ ಕಟೂಕ್ತಿಗಂಜದೆ ಲಸತ್ಕೃತಿಯಂ ನಲೆ ವೂಲ್ಕೆ ಸಜ್ಜನರ್ ॥ 29 ॥

ಗೌರೀವರಕರ್ಣಾಟಲಂ
ಕಾರಂ ರಸಪೂರವುತಿಗಭೀರಂ ಕಾವ್ಯಂ ।
ನೀರಸರಱಿವಂತೇನಿದು
ತಾರೆಲೆಯೇ! ಬೀದಿವಾಡೆ ನೆರವಿಯು ತುವುಂಕೇ! ॥ 30 ॥

ರಸವಿದು ಭಾವವಿದರ್ಥವಿ
ದು ಸವಾಸವಿದುಚಿತಪದವಿದಂತ್ಪೇಕ್ಷೆಯಿದೆಂ ।
ದು ಸವಿಪು ಕರಂ ನವ
ರಸದೊಳಗಾಱುತ್ತುವಿರ್ಪ ರಸಿಕರ್ ಬಲ್ಲರ್ ॥ 31 ॥

ನೋಡುಸ್ತೊಡೊಂದಕ್ಕರವುದು
ವಾಡುವೊಡುಚ್ಚರಣೆಗರಿದು! ವೂಱುಂ ತೆಱನಂ ।
ಕೂಡೆ ಕವಿತತಿ ವಿಚಾರಿನ
ಬೇಡದಱುಂ ಱೀಕಳಕ್ಷ್ಮಳಂಗಳನಿದಱೊಳ್ ॥ 32 ॥

ಗಿರಿಜಾಕಲ್ಯಾಣವಿಂತೀನುತಕೃತಿಯ ಪೆಸರ್! ಭೂಪುರೇ! ಕಾವ್ಯನಾಥಂ
ಗಿರಿಜಾನಾಥಂ! ಕಥಾನಂಗತಿ ವರಗಿರಿಜೋದ್ವಾಹವಿಾಕಾವ್ಯವುಂ ಬಿ ।
ತ್ತರದಿಂ ತಾನೊಲ್ದು ವೇೞ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ
ಪರವುನಂದಾಬ್ಧಿಪಂಪಾಪುರದನವಿರೂಪಾಕ್ಷಸಾಕ್ಷಾತ್ಸುಪುತ್ರಂ ॥ 33 ॥

ಆತನ ಗುರುಕುಲವುತಿವಿ
ಖ್ಯಾತಂ ಘನಪೂತವಿಂದುಧರನಂಭೂತಂ ।
ನೂತನಪುಣ್ಯವ್ರಾತಂ
ಪ್ರೀತಿಕರಂ ಭೂತಳಾತಿಶಯನುಜಾತಂ ॥ 34 ॥

ಸುರುಚಿರಮೂರ್ತಿ ಸತ್ಯತರಮೂರ್ತಿ ಕೃಪಾಕರಮೂರ್ತಿ ಪುಣ್ಯವಿ
ಸ್ತರಗುರುಮೂರ್ತಿ ಶಾಂತಿಮಯಮೂರ್ತಿ ಸುಧಾಕರಮೂರ್ತಿ ಯುತ್ತರೋ ।
ತ್ತರವರಮೂರ್ತಿ ಮುಕ್ತಿಸುಖಮೂರ್ತಿ ಮನೋಹರಮೂರ್ತಿ ಚಂದ್ರಶೇ
ಖರಗುರುಮೂರ್ತಿ ಕೀರ್ತಿಪತಿ ಹಂಪೆಯ ಶಂಕರದೇವರೊಪ್ಪುವರ್ ॥ 35 ॥

ಆ ಶೈವಾಗಮಸಿದ್ಧರಪ್ಪ ಪರಮಶ್ರೀಶಂಕರಾಚಾರ್ಯರಿಂ
ಪಾಕಜ್ಞೋದಮನಿಂಬುಗೊಂಡು ಮೆಱೆದಂ ಶ್ರೀಶುದ್ಧಪಂಚಾಕ್ಷರೀ ।
ವೇಶಾನಂದರಸಾರ್ದ್ರಚಿತ್ತಯುತಹೃದ್ರಾಜೇವ ಸಂಪೂರ್ಣನಂ
ಕಾಶಪ್ರಜ್ವಲಮೂರ್ತಿ ಕೀರ್ತಿಭರಿತಂ ಶ್ರೀಮಾದಿರಾಜಾಹ್ವಯಂ ॥ 36 ॥

ಇಂತಿಂತೊಪ್ಪುವ ಮಾದಿರಾಜನ ಮನೋಮೋದುಗ್ಧಾಬ್ಧಿಚಂದ್ರಂ ಶಿವಂ
ಶಾಂತಂ ಶಾಶ್ವತಮೂರ್ತಿ ಶೈವಸುಭಗಂ ಸಾಕಾರನರ್ವೇಶ್ವರಂ ।
ಸಂತೋಷಾಭರಣಂ ಪ್ರಸನ್ನಕರಣಂ ಪ್ರತ್ಯಕ್ಷಪಂಚಾನನಂ
ಸಂತಂ ಹಂಪೆಯ ಮಾಯಿದೇವನೆಸೆದಿರ್ಪಂ ಶೈವಸಾರೋದಯಂ ॥ 37 ॥

ಶ್ರೀಗುರು ಪರಗುರು ಘನಮಹಿ
ಮಾಗುರು ಮೂಧರ್ಯಗುರು ಮಹಾಗುರು ವರವಿ ।
ದ್ಯಾಗುರು ಸುಖೈಕಗುರು ವಸು
ಧಾಗುರು ಶೈವಗುರು ಶಾಂತಗುರು ಮಾಯ್ದೇವಂ ॥ 38 ॥

ಸದಮಳನೆಂಬುದತ್ತಮಗುಣಾಶ್ರಯನೆಂಬುದು ಶೈವಸಿದ್ಧನೆಂ
ಬುದು ರವಿತೇಜನೆಂಬುದು ಕೃಪಾಂಬುಧಿಯೆಂಬುದು ಶಾಂತಮೂರ್ತಿಯೆಂ ।
ಬುದು ಪರಮಾಗಮಪ್ರಕರನೆಂಬುದು ಹಂಪೆಯ ಮಾಯಿದೇವನೆಂ
ಬುದು ಶಿವನೆಂಬುದಪ್ರತಿಮನೆಂಬುದು ಸದ್ಗುರುವೆಂಬುದೀಜಗಂ ॥ 39 ॥

ಧರೆಯೊಳಗಾಮಾಯ್ದೇವರ
ವರಕರುಣಂಬಡೆದು ಮೆಱೆವನುನ್ನತತೇಜಂ ।
ಗುರುಪದಭಕ್ತಂ ಹಂಪೆಯ
ಹರಿದೇವಂ ದೇವಕವಿ ಕಳಾವಿದರರಸಂ ॥ 40 ॥

"ಜಾಣಂ ರಸಿಕಂ ಸುಜನ
ಪ್ರಾಣಂ ಕವಿತಾನಿಧಾನನಧಿಕಂ ಪುಣ್ಯಾ ।
ಕ್ಷ್ಮಾಣಂ ವರಗಿರಿಜಾಕ
ಲ್ಯಾಣಮನೊರೆದಂ ವಿವೇಕಿ ಹರಿಹರದೇವಂ" ॥ 41 ॥

ಎಂದಿಂತೆಲ್ಲಾ ಕವೀಂದ್ರರ್ ಪೊಗಲೆ ಪರಸೆ ಭಕ್ತವ್ರಜಂ ಸಜ್ಜನರ್ ಸಾ
ನಂದಂ ವುಜ್ಜುಯ್ಯ! ಭೂವುನ್ನತಕೃತಿ! ಭಲರೇ! ಚಿತ್ರವೂಹಾ! ಎನುತ್ತೊ ।
ಳ್ಪಿಂದಂ ಕೊಂಡಾಡೆ ಲೋಕಂ ಸ್ತುತಿಯಿಸೆ ಪದಪಿಂ ಪೇಳ್ದಪೆಂ ರೀತಿಭಾವಂ
ಛಂದೋಲಂಕಾರಸಾರಂ ಪುದಿದಿರೆ ಗಿರಿಜೋದ್ವಾಹವಂ ಪ್ರೀತಿಯಿಂದಂ ॥ 42 ॥

ಗಿರಿಜಾಕಲ್ಯಾಣವನೊ
ಲ್ದೊರೆವೆಂ ಗುರುಶರಣದಿಂದೆ ರಸಿಕರ್ ಕವಿಗಳ್ ।
ಪಿರಿಯರ್ ಸುಜನರ್ ಭಕ್ತರ್
ಪರವೂರ್ಥದೆ ಕೇಳ್ವವೀಪ್ರಬಂಧೋನ್ನತಿಯಂ ॥ 43 ॥

* * * * * *

ಕ ಥಾ ವ ತಾ ರಿ ಕೆ.

[ಗಿರಿರಾಜನೆಂಬ ನಾವುದಿಂದೋಷಧಿಪ್ರಸ್ಥಪುರದೊಳಿದ್ದ ಪರ್ವತರಾಜಂ ಪಿತೃಗಳ ವುನದೊಳ್ ಪುಟ್ಟಿದ ವೇನಾದೇವಿಯೆಂಬವಳಂ ವುದಿವೆಯಾಗಿ, ಸುಖದಿಂದಿರ್ದಾಗಳ್, ಆ ವೇನೆಯ ತಪಃಫಲದಿಂ ದಾಕ್ಷಾಯಣಿಯಾಕೆಯು ಗರ್ಭದೊಳ್ ಪುತ್ರಿಯಾಗಿ ಜನಿಸಿದಳ್. ಗಿರಿರಾಜನಾಕುವಾರಿಯೋ ಹರನರಸಿಯೆಂಬುದಂ ತಿಳಿಯದೆ, ಆಕೆಯ ವಿವಾಹಕ್ಕಾಗಿ ವರಾನ್ವೇಷಣೋದ್ಯುಕ್ತನಾಗಿರ್ಪ ಸವಯದೊಳ್, ನಾರದಂ ನೀರದಪಥದಿಂ ದಿಳಿತಂದು, ಆ ಕನ್ಯೆಯೋ ವಿರೂಪಾಕ್ಷನರ್ಧಾಂಗಿಯೆಂಬುದಂ ಗಿರಿರಾಜಂಗೆ ತಿಳಿಸಿ, ಆ ಕುವಾರಿಯುಂ ಹೇವುಕೂಟನೊಳ್ ಸವೂಢಿಷ್ಯನಾಗಿರ್ಪ ಸರ್ವಾಭರಣನನ್ನೆ ಕಳುಪುವುದೆಂದು ಪೇಳ್ದು ಪೋಗೆ, ಗಿರಿರಾಜಂ ವಿಸ್ಮಿತನಾಗಿ, ತನ್ನ ವುಗಳಂ ಪುಷ್ಪಕವನೇರಿಸಿ, ಜಯವಿಜಯೆಯರೆಂಬ ವಿಲಾಸಿನಿಯರೊಡನೆ ಆಕೆಯಂ ಕರೆತಂದು, ಹೇವುಕೂಟದೊಳಿಳಿಸಿ, ಹರನಂ ತೋರಿ ವರಳ್ದುಪೋಗೆ, ಪಾರ್ವತಿಯಿತ್ತಲ್ ಶಿವನಂ ಭಕ್ತಿಯಿಂದೆ ರ್ಚಿಸುತಿರ್ದ್ದಳ್.

ಇಂತಿರಲತ್ತಲ್ ತಾರಕಾಸುರನ ಬಾಧೆಗಾರದೆ, ಬ್ರಹ್ಮಾದಿದೇವರ್ಕ್ಕಳ್ ಆ ರಾಕ್ಷಸವಧಕ್ಕಾಗಿ ರುದ್ರನಂ ಪ್ರೇರಿಸಲ್ಕೆಂದು ಕಾವುದೇವನಂ ಕಳುಪಿದರ್. ಆಗಳ್ ತಪೋನಿಷ್ಠನಾಗಿರ್ದ್ದ ಪರವುಶಿವನ ಫಾಲನೇತ್ರಾಗ್ನಿಯಿಂ ಕಾವುದೇವಂ ಭಸ್ಮೀಭೂತನಾಗೆ, ತತ್ಪತಿ ರತಿ ಶೋಕಾಕುಲೆಯಾಗಿ ವಿಲಪಿಸುತ್ತಿರ್ಪ್ಪನವುಲ್ಲಿಗೆ ನಿತ್ಯಪೂಜೆಗಾಗಿ ಬರುತಿರ್ದ್ದ ಪಾರ್ವತಿ, ರತಿಯ ಶೋಕವುಂ ಕಂಡು, ಕನಿಕರಂಗೊಂಡು, ತನ್ನ ತಪದಿಂ ರುದ್ರನಂ ವೆಬ್ಬಿಸಿ ಸ್ಮರನಂ ಬದುಕಿವೆನೆಂದು ರತಿಗಭಯವುನಿತ್ತು ಗ್ರತಪೋವನಿವೇಶನಾಭಿವುಖಿಯಾಗೆ.]

ಪಾರ್ವತೀತಪೋವರ್ಣನಂ.

ಕಾರುಣ್ಯಾಕರನಭವಂ
ಘೋರತಪೋಮಯನತಿಪ್ರವೋದಾವೃತವಿ ।
ಸ್ತಾರಫಲಪ್ರದನೆಮಗೀ
ಗೌರಂತಿರೆ ಭಕ್ತಿಯಂ ವಿರೂಪಾಕ್ಷಶಿವಂ ॥ 44 ॥

ಬಂದು ತಪೋನಿವೇಶನವನೀಕ್ಷಿಸಿ ಬರ್ಪ ನಿದಾಘಕಾಲದೊಳ್
ಸಂದ ನಗಾಗ್ರದಲ್ಲಿ ನಿಲವೇಱ್ಕುಮೆನಲ್ ವಿಗೆ ನಿಂದು ವೀನಕಾ ।
ನಂದನೆ ತದ್ವಿಳಾಸಿನಿಯರಾನನಮಂ ನಡೆ ನೋಡೆ ಕಾಣುತುಂ
ಸೌಂದರಿಯರ್ ಜಟಾರಚನೆಯಂ ತರದಿಂ ಭರದಿಂದೊಡರ್ಚಿದರ್ ॥ 45 ॥

ವಿರಚಿಸಿದರ್ ಜಡೆಗಳನಾ
ದರದಿಂ ದರಹಸಿತಬಿಸರುಹಾನನೆಯರ್ ಶಂ ।
ಕರನರಸಿಗೆ ಗಿರಿಜಾತೆಗೆ
ವರಭಸಿತವನಂಗತತಿಯೊಳುದ್ಧೂಳಿಸಿದರ್ ॥ 46 ॥

ವರಭಸಿತೋದ್ಧೂಳನಮಂ
ಗಿರಿಜೆಗೆ ಸುರನತಿಯರೊಲ್ದು ಮೂಲ್ಪೆಡೆಯೊಳ್ ಕ ।
ಪ್ಪುರದ ರಜದಿಂದೆ ಪುಷ್ಪೋ
ತ್ಕರಮಾಲೆಯನೊಸೆದು ಪೊರೆವ ತೆಱನಾಯ್ತಾಗಳ್ ॥ 47 ॥

ಅಂತುಮಲ್ಲದೆ,

ವಾರಿಜಮುಖಿಯರ್ ಸಖಿಯರ್
ತಾರಾಚಲನಾಥನರಸಿಗನುನಯದಿಂದಂ ।
ಸಾರಮೃದುತರವಿಮಳವಿ
ಸ್ತಾರಿತವಲ್ಕಲಮನೊಪ್ಪಲುಡಿಸುತ್ತಿರ್ದರ್ ॥ 48 ॥

ಅಂತುಮಲ್ಲದೆ,

ಸಾಕ್ಷಾಚ್ಛಂಕರವಕ್ತ್ರವಿ
ವಕ್ಷೆಯಸುಖವಿಸಿವ ಸುಕೃತಫಲವಿನ್ನು! ಸತ್ಯಂ ।
ರಕ್ಷೆಯಿವೆನುತಗಜೆಗೆ ರು
ದ್ರಾಕ್ಷಿಗಳಂ ಕೂಡೆ ತುಡಿಸಿದರ್ ವಾನಿನಿಯರ್ ॥ 49 ॥

ಇಂತು ಭಕ್ತಿಜ್ಞಾನವೈರಾಗ್ಯಯುಕ್ತವಪ್ಪ ತಪೋಮಂಡನಂಗಳಂ ಸಂಗಡನಿ
ರ್ದ್ದಂಗನೆಯರ್ ಶೃಂಗರಿಸೆ ಮುಂಗಳಮುಖಿ ಹೊಂಗಿ ಹೊರೆಯೇಱೆ;

ನಂದಣಿಸುವ ಜಡೆ ಪೆನ್ನಂ
ಮುಂದಯಿಸಿ ಮುಸುಂಕುತಿಲಿಯೆ ನೀಲಾಂಬುವಮಂ ।
ಪಿಂದಿಕ್ಕಿ ಮುಂದೆ ಪೆಳಗುತೆ
ನಿಂದೆಳವಿಂಚಿನಪೊಲಗಜೆ ನೆಱೆ ಮುಱೆದಿರ್ದಳ್ ॥ 50 ॥

ಅಳವಡೆ ಮುನ್ನಂ ಪತ್ತಿದ
ಕಳಂಕವುದು ಪೊರ್ದದಂತೆ ನಭದಿಂದಿಳಿತಂ ।
ದಿಳಿಯೊಳ್ ಶಂಭುಗೆ ವಿಗೆ ಕಶೆ
ಕಳೆ ತಪವಿರ್ಪಂತೆ ಗಿರಿಜೆ ತಪದೊಳ್ ನಿಂದಳ್ ॥ 51 ॥

ಭಗ್ನವುನವುಲ್ಲದಚಲಿತೆ
ಲಗ್ನವ್ರತೆಯಾಗಿ ಶಂಕರಪ್ರೇಮರಸೋ ।
ನ್ಮಗ್ನಾಂಗಿ ಧೈರ್ಯನಿಧಿ ಪಂ
ಚಾಗ್ನಿಯ ನಡುವಗಜೆ ವಿಪುಳತಪದೊಳ್ ನಿಂದಳ್ ॥ 52 ॥

ಅದೆಂತೆಂದೊಡೆ:—

ವಿಗೆ ಸುತ್ತಿರ್ದ ದವಾಗ್ನಿ ಕಾಯ್ವ ರವಿಕಾಂತೋಚ್ಚಾಗ್ನಿಯತ್ಯುಷ್ಣವುಂ
ನೆಗಪುತ್ತಿರ್ಪುದರಾಗ್ನಿ ವಿಕ್ಕ ಕವಿತರ್ಪಾದಿತ್ಯತೀವ್ರಾಗ್ನಿ ಬಂ ।
ದೊಗೆದಾಜೀಸಗೆಯಗ್ನಿಯೆಂದೆನಿಸಿ ತೋಱುತ್ತಿರ್ಪ ಪಂಚಾಗ್ನಿವು
ಧ್ಯಗತಾಂಘ್ರಿಪ್ರಭೆ ನಿಂದಳುಗ್ರತಪದೊಳ್ ಕರ್ಪಾಣಿಯತ್ಯುಗ್ರದಿಂ ॥ 53 ॥

ಚಲದಿಂದಂ ನಗರಾಜಪುತ್ರಿ ಹೃದಯಾಬ್ಜಾವಾಸದೊಳ್ ಭಾವು! ನಿ
ಶ್ಚಲನಂ ನಿರ್ಮಳನಂ ನಿರಾವರಣನಂ ನಿರ್ಮಾಯನಂ ನಿತ್ಯನಂ ।
ನಿಲಿಸುತ್ತುನ್ನತವಕ್ಕೆ ನನ್ನತತಪೋವಿಸ್ಫಾರೆ ಮಾರ್ತಂಡನಂ
ಕುಲತೇಜೋನಿಧಿ ನಿಂದಳುಗ್ರತಪದೊಳ್ ಲೋಕಕ್ಕಗುರ್ವಪ್ಪಿನಂ ॥ 54 ॥

ಅಂತಮುವುಲ್ಲದೆ,

ನೆನೆಯುತೆ ದೇವಿ ನಿಷ್ಪ್ರವರನಂ ವರನಂ ವರನಂ ಮಹೇಶನಂ
ಘನನಿಟಿಲಾಗ್ನಿಯಿರ್ಪ ಶಿವನಂ ಶಿವನಂ ಶಿವನಂ ನಗೇಶನಂ ।
ದನೆ ನೆಱೆ ಸಾರದೀಭುವನವುಂ ವನವುಂ ವನವುಂ ಭವಾನಿ ಭೋಂ
ಕೆನೆ ತಪಮಿರ್ದಳುಗ್ರತಪವುಂ ತಪವುಂ ತಪವುಂ ವಿಭಂಗಿಸಲ್ ॥ 55 ॥

ವರನುತಧೈರ್ಯೆ ಪುಣ್ಯಮಯವೀರ್ಯೆ ಸವುಗ್ರತಪಃಪ್ರಶೌರ್ಯೆ ಶಂ
ಕರನ ಸುಖೈಕಭೂರ್ಯೆ ಪರಮಾಗವುಕಾರ್ಯೆ ಜಗದ್ಧಿತಾರ್ಯೆ ನಿ ।
ಸ್ತರಘನತೂರ್ಯೆ ಶಂಭುಸುಖಪೂರ್ಯೆ ವಧೂಜನವರ್ಯೆ ರುದ್ರಬಂ
ಧುರನಿಜದಾರ್ಯೆ ಸೂರ್ಯಶಿಲೆಯಂ ಬಲದಿಂ ಛಲದಿಂದೆ ಸೊಟ್ಟಿದಳ್ ॥ 56 ॥

ಇಂತು ಸೋಮಧರನರಸಿ ಹೇಮಕೂಟಾಗ್ರದ ಮೇಲವ್ಯಗ್ರದಿಂದುಗ್ರತಪದೊಳ್ ನೆಲಸಿ ನಿಲೆ ತಪಸ್ತೇಜಂ ಮೂಜಗವುಂ ಪರ್ಬಿದಾಗಳ್,

ವ್ಯಗತತಿ ಸುಖಿಯುವು ಮಿಗೆ ಪ
ಕ್ಷಿಗಳೆಲ್ದೆಱಗವು ಸಮಿಾರಣಂ ಸಂಜಲಿಗಂ ।
ಗಗನದ ಖೇಚರರಾಬ
ಟ್ಟಿಗೆ ಸಾರರ್ ನಗಜೆಯತುಳತಪದಾತಪದೊಳ್ ॥ 57 ॥

ಆಸುರದ ಗಿರಿಜೆಯುಗ್ರವಿ
ಭಾಸುರತಪಕಂಜಿ ನಭದ ತಪನಂ ನಡೆಯುಂ ।
ತ್ಯಾಸರಿಸವುಂ ಕರಂ ಬಿ
ಟ್ಟೋಸರಿಸಿಯೆ ನಡೆವನೆಂದೊಡೇವಣ್ಣಿಪೆನೋ ॥ 58 ॥

ಅನವಮಾನವುಜಳವುದ್ಭುತ
ವಿಸರವುನೂನಪ್ರಭಂ ಲನದ್ಭಾನವಿಭವಂ ।
ವೆಸರಿಡಬಾರದು! ಮಿಗೆ ನಿ
ಟ್ಟಿಸಬಾರದು! ನೋಡಬಾರದಂಬಿಕೆಯ ತಪಂ ॥ 59 ॥

ಎಂಬ ಸಾಮರ್ಥ್ಯವನೊಳಕೊಂಡು, ಜಡೆಗಳ ಬೆಡಂಗಿ, ಭಸಿತದ ಫಾಲಲೋಚನೆ, ರುದ್ರಾಕ್ಷಿಯ ಭಯಾಂಗಿ, ನಾರ ಸೀರೆಯ ಧೀರೆ, ಗಿರಿಶಿಖರದ ಗರುವೆ, ಉಗ್ರತಪದ ವ್ಯಗ್ರೆಯೆನಿಪ ಪಾರ್ವತೀದೇವಿ ಪ್ರಚಂಡತರಪ್ರತಾಪತಪೋವೇಷದಿಂದಿರೆಯಿರೆ,

ದೆಸೆಯಂ ಕಾಯ್ಪೇಱಿಸುತ್ತುಂ ತೃಣಕುಲಲತೆಯಂ ಸೀದು ಕರ್ಪೇಱಿಸುತ್ತುಂ
ರಸೆಯಂ ಸಂತಾಪಿಸುತ್ತುಂ ಜಳಭರಿತತಟಾಕಂಗಳಂ ಶೋಷಿಸುತ್ತುಂ ।
ಸಸಿಯುಂ ವೃಕ್ಷಾಳಿಯುಂ ಸುಟ್ಟುರಿಪುತೆ ವ್ಯಗವುಂ ಬೇಯಿಸುತ್ತದ್ರಿಯಂ ದ
ಳ್ಳಿಸಿ ಸೀಱುತ್ತುಂ ವಿಶಾಳಂ ದವಶಿಖಿಯುವೊಲೆಲ್ವಿತ್ತವೋಳ್ಪಂ ನಿದಾಘಂ ॥ 60 ॥

ಅಂತು ತೋಱಿದ ನಿದಾಘದಲ್ಲಿ,

ಪೊನಬೇನಗೆಯೊಳ್ ವ್ಯಗತತಿ
ಯಸುವೆರಸಿರವೇಱ್ಕುವೆಂದು ಕರುಣಿಸಿ ಮಿತ್ರಂ ।
ಬಿಸಿಲಂ ಹಿಱಿಯಲ್ ಪೆನ್ನೀ
ರೊಸರ್ವಂತಿರ್ದುದು ಮರೀಚಿಕಾಜಲವೆತ್ತಂ ॥ 61 ॥

ತರದಿಂದಂ ತೆರೆಮನಗುವ
ಮರೀಚಿಕಾಜಲವನಿಳೆಯ ಜಲವೆಂದು ಕರಂ ।
ಹರಿಣಂಗಳ್ ಪರಿತಂದಾ
ತುರಿಸುತ್ತುಂ ಬಿಸಿಲ ಬಯಲನೀಂಟಿ ಬಱಿಲ್ಗಂ ॥ 62 ॥

ವಹ್ನಿ ಧರೆಯೊಳಗೆ ತೀವಿದ
ಚಿಹ್ನವಿದೆಂಬಂತೆ ಬಿಸಿಲ ಜೇಗೆ ಕರಂ ವಂ ।
ಧ್ಯಾಹ್ನದೊಳಳಿರ್ದೊಡೆ ವ್ಯಗತತಿ
ಜಾಹ್ನವಿಯೊಳ್ ಪುಗಲೆ ಬಯಸಿದುವು ಜೇಸಗೆಯೊಳ್ ॥ 63 ॥

ಅನವಯದೊಳ್,

ಫುರಿಫುರಿಲೆಂದು ಸೀದುವ್ರು ವಿಹಂಗಕುಲಂ ಕೆರೆ ಬಾವಿ ಬೆಂಜೆಗಳ್
ಪುರಿದರಳೆಲ್ಬುವೀವನುಜರಾತಪತಾಪದೊಳಳ್ಕ ಬಳ್ಕದರ್ ।
ಕರಿಮುರಿವೋಯ್ತರಣ್ಯಮುಱೆ ಬೆಂದು ವ್ಯಗಾವಳ ಪೊಂದಿದತ್ತು ನಿಂ
ದುರಿದುವು ಬೆಟ್ಟನಿಂಗಿದುವು ವಾರಿಧಿ ಕಾಯ್ದುದು ಭೂರಿಭೂತಳಂ ॥ 64 ॥

ವ್ಯಗತತಿಗಳ್ ಕರಿಮುರಿ ಕ
ಣ್ಗೊಗೆದ ಮರಂ ಫುರಿಫುರಿಲ್ ಗಜಂ ಚಿಮಿಚಿವಿಯೆಂ ।
ದಗನಿಕರಂ ಫಳಿಫಟಿಲೆನೆ
ವಿಗೆ ಸೀದುವು ಬೆಂದುನ್ಮರಿದುವೊಡೆದುವು ಬಿಸಿಲೊಳ್ ॥ 65 ॥

ಚರದಡಿಯೊಳ್ ಕಾನನದೊಳ್
ಗಿರಿತಟದೊಳ್ ಬಟ್ಟಬಯಲೊಳಂಬರತಳದೊಳ್ ।
ಕರಿಯು ಬಿಸಿಲುರಿಯು ಬಿಸಿಲ
ಚ್ಚರಿಯು ಬಿಸಿಲ್ ಪರಿಯು ಬಿಸಿಲಖಂಡಿತದ ಬಿಸಿಲ್ ॥ 66 ॥

ಮತ್ತಮುದಲ್ಲದೆ,

ನಡೆಯಲ್ಕೊಂದಡಿಯಿಟ್ಟು ಕಾಯ್ದ ನೆಲನಂ ಕಾಲ್ಮುಟ್ಟಿ ಚಂಯ್ಯೆಂದು ಬೆಂ
ದೊಡೆ ಮತ್ತೊಂದಡಿಯೆತ್ತಲಾಱದಱಲಿಂ ಕಣ್ಮುಚ್ಚಿ ಹಸ್ತಾಗ್ರಮಂ ।
ಕಡೆವಾಯೊಳ್ ಸೆಱೆಯಿಟ್ಟು ನೆತ್ತಿ ಬಿರಿಯುತ್ತುಂ ಮುತ್ತುಗಳ್ ಸುತ್ತಲುಂ
ಸಿಡಿಯುತ್ತಿರ್ಪನಮರ್ದುದೊಂದತಿಮದೇಭಂ ಭೀಷ್ಮದೊಳ್ ಗ್ರೀಷ್ಮದೊಳ್ ॥

ಅಂತಲ್ಲದೆ ಮತ್ತಮೊಂದೆಡೆಯೊಳ್,

ಎಲೆಲೆಲೆ! ನೋಡುನೋಡು! ಕೆಲನುಂ ಬಲನುಂ ನೆಲನುಂ ದವಾಗ್ನಿ ಸು
ಟ್ಟೊಲೆಯವೊಲಾಗೆ ಮೆಟ್ಟಿದಡಿಯೆತ್ತಿದ ಕಾಲುಱೆ ಸೀಯೆ ನಿಂದಿರಲ್ ।
ಚಲಿಯಿಸಲಾಱದಾತಪದೆ ಹಸ್ತವನೆತ್ತುತೆ ಛೇಳಡುತ್ತೆ ತಾ
ನೊಲೆದುದು! ಜೇಷ್ಮಗುಂದಿದುದು! ಜೋಲ್ದುದು! ಬೆಬ್ಬುದು! ಬೆಂದುದೊಂದಿಭಂ॥

ಮತ್ತಮುದಲ್ಲದೆ,

ಜಳಜಸಖನನಿಲಸಖನೆಂ
ದಿಳೆಯೊಳ್ ರನವೆಸರನಾನದಿರ್ದೊಡೆ ಸೂರ್ಯಾ ।
ನಳರೋವೊ! ಸಂತವಿರ್ಪರೆ
ಫಳಲನೆ ನಿಂದುರಿದು ಹೋಗರೇ! ಬೇಸಗೆಯೊಳ್ ॥ 69 ॥

ತಪನನ ಮೆಯ್ಯೊಳ್ ಪ್ರಗುಳಂಗ
ಳುಪವಿಸೆ ಪಾವಕನ ತನುವಿನೊಳ್ ಸ್ಫೋಟಕವಾ ।
ತಪದ ಕಡುಪಿಂದೆ ನೆಗೆತಂ
ದಪ್ಪುದೆನೆ ಬೇಸಗೆಯ ಬಿಸಿಲನದನೇನೆಂಬೆಂ ॥ 70 ॥

ಮತ್ತವಾ ನಿದಾಘಂ—ಕಡುಗಾಯ್ವ ತೀವ್ರಕರಕರಪ್ರಕರಮುಂ ಚಂಡಚಂಡ್ರನೆ ಸುಡೆ ಕಾಯ್ದುರ್ಕ್ಕಿ ಬಿಸಿಯ ತೆರೆ ತಾರ್ಮಟ್ಟೆ ನೊರೆಗಟ್ಟೆ ಕುಕ್ಕುಲಿಂಗುದಿವ ಬಿಸು ನೀರೊಳ್ ನಿಲಲಾಱದೆ ನೆಱೆಮಱುಗಿ ಪೊಱಮಡೆ ಪೊಣ್ಮಿ ಬೆದಬೆದನೆ ಬೆಂದು ಬೆಂಡೆಱ್ದು ಬಱಬಱಮಂಬತ್ತಿ ಹೊತ್ತಿ ಹೊಗೆದು ಜೀವನವಿಂಗೆ ಜೀವನವಿಂಗುವಂತಾಗೆ ಕಿಱುವೆಂಜಿಯೊಳ್ ಕೋಟಲೆಗೊಳುತಿರ್ಪ ಪಾಱೀನಕುಲದಿಂ; ಮತ್ತಂ ಮುನಗುವ ತಪನನ ಬಿಸಿಯ ಬಿಂಬದಿಂದೊಗೆತರ್ಪ ಬಿಸಿಲ ಬೆಂಕಿಯಿಂ ಹೊಗೆದೆಯ್ದೆ ತರುನಿಕರವುರಿದು ಕರಿಗೊಳ್ಳಿಯಂತೆ ಕಾಯ್ದೀಱೆ ಕರ್ಜೂರಗೆಯಾಂ ನೆಗಪುವ ಕೊಂಬುಗಳ ಕಡುಬಿಸುಪು ಕಾಲ್ಗಳಂ ಸುಡೆ ಬಳ್ಗೆಗೊಂಡ ಜೀವಂ ಕುಳ್ಳಿರಲಾಱದೆ ಮಿಱೆ ನೆಗೆದು ಪಾಱುವಾಗಳ್ ಬಿಸಿಲುರಿ ಪೊಡೆದು ಪಕ್ಕಂ ಸೀದು ನೆಲಕ್ಕೆ ಬಿೞ್ದ ಕಣ್ಮಾಚ್ಚಿ ಹವ್ಮೆಗೆಸಿ ಹರಣಂಗಳೆದು ಮೀಱಲೊಳ್ ಪುರಿವಂತಾಗೆ ಪರಿದಿರ್ದ ಬಹುವಿಧದ ವಿಹಂಗಾವಳಿಯಂ; ಮತ್ತಂ ತಪನ ಪಾದ್ಯೋತಪತಿಯಿಂ ಪೆನ್ನೊಡೆ ೞ್ದು, ಬಾಯಾಱಿ, ತಾಳಗೆ ಬತ್ತಿ, ನೆತ್ತಿ ಹೊತ್ತಿ, ಕಣ್ಣೊಳ್ ನೆತ್ತರೆಱ್ಚಿ ಪಾಯೆ ಪರಿವರಿದು ಮುರೀಚಿಕಾಜಲದೊಳ್ ಮೊಗಮಿಟ್ಟು ಬಗೆಗೆಟ್ಟು ಮಱವಟ್ಟು ಧರೆಯೊಳ್ ಕೆಡದಿರ್ಪ ನಾನಾಮೃಗನಿಕಾಯದಿಂ; ಮತ್ತಂ ಮಾರ್ತಂಡರೋಚಿ ಸುತ್ತಿ ಮುತ್ತೆ ಕುಂಭಸ್ಥಳಂ ಹೊತ್ತಿ ಹೊಗೆದು ಬಿರಿದ ನೆತ್ತಿಯಿಂ ಮುತ್ತೊಡೆದು ಸಿಡಿದು ಪಾಱೆ ಪೆನ್ನೊಣಗಿ ಚರ್ಮಂ ಹೂಪ್ಪಳಿಸಿ ನೀೞ್ದ ಬಿಡೆ ನಾಡೆ ನೋಯಿಸಿ ನೀರಡಿಕೆ ನೆರೆದೊಳಗುದೋಱೆ ಬಾಯೊಳ್ ಬುಕೆಯ್ಯನಿಟ್ಟೊಡಲೊಳಗೆ ಪುಡಿ ಹಾಱೆ ಬೆನ್ದ ಪುಷ್ಕರವುಂ ಭೋಂಕೆನೆ ತೆಗೆದು ಕಾಯ್ದ ಕೋಡೊಳ್ ಪೊಱಲಣ್ಮದೆ ಮಿಱೆದ ದರಿಯ ತಟದೊಳ್ ನೀಡಿ ಕೆಡಪಿ ಕಣ್ಮಾಚ್ಚಿ ನೆಮ್ಮಿ ಹವ್ಮದಂಬೋಗಿ ಕಿಡಿಸೂಸಿ ಸುಯ್ದು ಗಾಸಿಯಾಗಿ ವೆಂದೆಗಡೆದು ಮದವಱಿದಿರ್ಪ ಮಾತಂಗವ್ರಾತದಿಂ; ಮತ್ತಂ ಶತಧಾರಾಸಹಸ್ರವಂತೆ ಸಹಸ್ರಕರವುರೀಚಿಗಳುಱಿದೆಱಿಗಿ ನಟ್ಟುಕಾಯಿ ಗಱಿಗಱಿಸಿನ ರಳ್ದು ಪಱಿಪಱಿನೆ ಸೀೞ್ದು ಸಿಡಿದೊಡೆಡಱು ಹಿಗ್ಗಿ ತಗ್ಗಿ ಕುಗ್ಗಿ ಕುಪ್ಪಳಿಸಿರ್ಪ ಪರ್ವತಪ್ರತಾನದಿಂದತ್ಯುಗ್ರತೆಯುನತಿಪ್ರಚಂಡತೆಯನತ್ಯುಷ್ಣತೆಯನತ್ಯಾಭೀಳತೆಯನತಿಪ್ರತಾಪ ಮನುಗುಟುತ್ತಿರ್ದುದು

ಅಂತುಮಲ್ಲದೆಯುಂ,

ಪಸಿವಿಂ ದಾವಾನಳಂ ಸುಟ್ಟುರಿಪೆ ತರುಗಿರಿವ್ರಾತಮಿಲ್ಲಾದುದೋ! ಸಾ
ಲ್ದೆಸೆಯೊಳ್ ಸೂರ್ಯಂ ಕ್ಷುಧಾಪೀಡಿತನಱುಸುತೆ ಕೆಯ್ನೀಡೆ ನಿಸ್ಸಾರಕಾಪ್ಯಂ ।
ಪ್ರಸರಂ ಕೌಱೊಲ್ದುದೋ! ನಿಂದನುಪವಮತೃಷಿತಂ ಬಾಡಬಂ ಪೀಱೆ ತಾಂ ಕೋ
ಪಿಸಿತೋ! ವಾರಾಶಿಯೆಂಬುಷ್ಣವನೊದವಿಸಿತತ್ಯುಷ್ಣಯೋಗಂ ನಿದಾಘಂ ॥

ಆ ನಿದಾಘದಲ್ಲಿ,

ರವಿಕಾಂತೋಗ್ರಸ್ಫುಲಿಂಗಪ್ರತತಿ ನೆರೆದು ಪಾದಂಗಳೊಳ್ ಬೀಳ್ವೊಡಂ ಪೊ
ಣ್ಮುವ ದಾವಪ್ರೋದ್ಭವಪ್ರಸ್ಫುರಿತವಿಲಸದುಷ್ಣಂ ತನೂಭೂಗವಂ ಪ ।
ತ್ತುವೊಡಂ ತದ್ದೇಹದಗ್ನಿಪ್ರಭೆಯೊದವುವೊಡಂ ಸೂರ್ಯತಿಗ್ಮಾಂಶುಗಳ್ ತಾ
ಗುವೊಡಂ ಮಾಧ್ಯಂ ನಿದಾಘಂ ಕವಿದೊಡವನಿತಕ್ಕಳ್ಕದಂತಾರ್ಕೆ ನಿಂದಳ್॥72॥

ಅಂತು ನಿಂದು,

ದಶಭುಜನ ಮನೋವಲ್ಲಭೆ
ದಿಶಾವಳೀಭರಿತಕೀರ್ತಿಯುತೆ ಘೋರತಪೋ ।
ವಶೆ ನೆರೆ ಗಂಗಾಧರನಂ
ಶಶಿಧರನಂ ನೆನೆದು ಕಲ್ದಳಾಜೀನಗೆಯಂ ॥ 73 ॥

ಆಸಮಯದೊಳ್ ಸಕಳಕಳಾಕೋವಿದೆಯರಪ್ಪ ಜಯೆವಿಜಯೆಗಳ್ ಮೆಯ್ಯಿಕ್ಕಿ ಕೆಯ್ಯಂ ಮುಗಿದು,

ಮುದವುಡುಗಿತ್ತು ಬೇನಗೆ ಕರಂ ನಸುದೋಱುದುವಲ್ಲಿಗಲ್ಲಿಗಂ
ಬುದನಿಕರಂ ಸುರುಳ್ದುದು ಬಿಸಿಲ್ ನೆಗದತ್ತು ತಪಿಲ್ಲ ತಾಂಕುರಂ ।
ಪೆದಱುದುವಂಜಿಯಾಡಲಡಿಯಿಟ್ಟುವು ಸೋಗೆಗಳೆಯ್ದೆ ಪಲ್ಲವಂ
ಪುದಿದ ಕದಂಬದೊಳ್ ಮುಗಿಲನೆಲ್ಬಿಸಲಿರ್ದುದು ಪಶ್ಚಿಮಾನಿಳಂ ॥ 74 ॥

ಆಂತುಮಿಗಳ್,

ಕಡವಿನ ಸೊವಡಿಂದೊಂದೆರ
ಡಡಿಯಿಡುತಿರ್ದಪುದು ಗಾಳಿ ನಲಿದು ನವಿಲ್ಗಳ್ ।
ನಡೆ ನಟಣೆಗೆಳಸುತಿರ್ದಪು
ವೆಡೆಯಱಸುತ್ತಿರ್ಪ ವಂಜೆ ಸುಳ್ದುದುವು ಮುಗಿಲ್ಗಳ್ ॥ 75 ॥

ಎಂದು ಬಿನ್ನೈಸುತ್ತುಂ ಮತ್ತಮಿಂತೆಂದರ್:—

ಪೋದುದು ಬೇನಗೆ ಕಾರ್ ಮೊಗ
ವಾದುದು ತರುತಳದ ನೆಱಲ ತಣ್ಪಿನೊಳಿರ್ದ ।
ತ್ಯಾದರದಿಂ ಮಾಱಿಪ್ಪದು ಪು
ಣ್ಯೋದಯದಿಂ ಕಪಟರಹಿತತಪಮಂ ಗಿರಿಜೇ ॥ 76 ॥

ಎನೆ ಕೇಳ್ದು ಮನಂಗೊಂಡ
ತ್ಯನುಪಮೈಶ್ವರ್ಯಪ್ರತಾಪತೇಜೋನಿಧಿ ಭೋಂ ।
ಕೆನೆ ಗಿರಿಸುತೆ ನಡೆತಂದಳ್
ವಿನಯವಿಭೂಷಣೆ ವಿಲಾಸವಿಭ್ರಮದಿಂದಂ ॥ 77 ॥

ಭರದಿಂದೆಯ್ತಂದು ಭರ್ಗಪ್ರಿಯೆ ಭವನ ಮನೋಮೂರ್ತಿ ಭೂಳಾಕ್ಷಭಕ್ತಾ
ತುರೆ ಮುಕ್ತಿವ್ರಾತೆ ಭೂತೇಶನ ನಿಖಿಳಸುಖಾಕಾರೆ ಶರ್ವಾಣಿ ಸದ್ವೇ ।
ಶ್ವರಿಯುರ್ವೀಮಾತೆ ಮೂಲೋಕದ ಸುಕೃತಫಲಂ ಸತ್ಕವಿಸ್ತುತೆಯುದ್ಯ
ದ್ಗಿರಿರಾಜಾಪತ್ಯೆ ನಿಂದಳ್ ಘನವಟವಿಟಪಿಚ್ಛಾಯೆಯೊಳ್ ಪ್ರೀತಿಯಿಂದಂ ॥ 78 ॥

ಇಂತಘಟಿತಘಟಿತೆ ಪಟುತರಚಿತ್ತೆ ನಿಟಿಲಲೋಚನೆ ವಟವೃಕ್ಷದ ಕೆಳಗೆ ವಾರಿ
ಕುಲಕ್ಕೆ ಸೋಲದೆ ಧೀರೋದಾತ್ತೆ ಘೋರತಪದೊಳ್ ನಿಂದಳನ್ನೆಗಮಿತ್ತಲ್,

ನಲಿದುದು ಸೋಗೆ ನಣ್ಪನೆಡೆಗೊಂಡುದು ಚಾದಗೆವಕ್ಕಿ ವಿಕ್ಕು ಪೂ
ತಲರ್ದುದು ಸೊಂಪಿನಿಂ ಕಡವು ತಣ್ಪನೆ ಬೀಱ್ದುದುವೆಯ್ದೆ ಬೆಟ್ಟು ಬಂ ।
ದಲೆದುದು ಪಶ್ಚಿಮಾನಿಳನಮರ್ಚಿತು ಕೇತಕಿ ಪೂದೊಡಂಬೆಯುಂ
ಬಿಲದೊಳಪೊಕ್ಕು ವಂಚೆ ಮುಗಿಲೊಡ್ಡಣೆಯೊಡ್ಡಿತು ಕಾರ ಕೊಡ್ವಿನೊಳ್ ॥

ಅಂತುಮಲ್ಲದೆಯುಂ,

ಹರಿಸಂ ವಿಗೆ ನವಿಲಾಡು
ತ್ತಿರೆ ಚಾದಗೆಯುರ್ಬಿ ನಲಿಯೆ ನಾಲ್ಕುಂ ದೆಸೆಯುಂ ।
ಕರಿಯುಂತಿರೆ ಗಿರಿಯುಂತಿರೆ
ಧರೆಯುಂತಿರೆ ನೆಗೆದುದಭ್ರಕುಳವುಂಬರದೊಳ್ ॥ 80 ॥

ತರದಿಂ ಶಿಖಿ ಜಾದಗೆ ಮಧು
ಕರಮಂಚೆ ಪಯೋಧರಂಗಳನುನಯದಿಂದಂ ।
ಕರೆದುವು ನೆರೆದುವು ವೊರೆದುವು
ಪರೆದುವು ತೊಱೆದುವು ನಿರಂತರಂ ಕಾರ್ಮೊಗದೊಳ್ ॥ 81 ॥

ಮತ್ತಮದಲ್ಲದೆಯುಂ,

ಹರಿಸಂ ಮಿಕ್ಕಭ್ರಮಾತಂಗವನತಿಭರದಿಂ ನೋಡಲೆಂದೆಟ್ಟುವೋ! ದಿ
ಕ್ಕರಿಗಳ್ ದೇವೇಂದ್ರನೊಳ್ ಕಾದುವ ಕಡುಮುಳಿಸಿಂದೆಟ್ಟುವೋ! ಗೋತ್ರಕೈಳೋ।
ತ್ಕರವಿಮ್ಮಿಕಂಗಂ ಹಿರಣ್ಯಾಕ್ಷನಿನೊಗೆದ ವನೋದ್ಯುಃಖವುಂ ದೂಱಲೆಂದಾ
ತುರದಿಂದೆಟ್ಟಿತ್ತೊ! ಧಾತ್ರೀತಳವೆನೆ ನಭದೊಳ್ ತೀವಿತಭ್ರಪ್ರತಾನಂ ॥ 82 ॥

ಆಸವಮಯದೊಳ್,

ತವೆ ಬಳೆದು ಪರ್ಬುತಾಕಾ
ಶವನೇಱಿದೆ ಮುಗಿಲ ನೀರ ಸೆಱೆಯಂ ವಿಗೆ ದು ।
ಶ್ಯ್ಯವನಂ ಬಿಡಿಸುವ ಘನಕ
ನ್ಯವಣಂ ಹೊಳೆವಂತೆ ವಿಂಜು ವಿಂಚಿತ್ತಾಗಳ್ ॥ 83 ॥

ಘುಲಿಘುಲಿ! ಘುಲಿಘುಲಿ! ಘುಡುಘುಡು!
ಘುಲಿ! ಛಿಟಿಲ್ಗುಟಿ! ಸ್ಫೋರ್ಜಟಿಂ! ಧಡಂ ಧಾಂಧಡ! ಛಂ ।
ಛಲ್ಲಿಛಲ್ಲಿ! ಛಿಂಛಿಂ! ಘುಡ ಘುಡ
ಘುಲಿಘುಡ! ಘುಡಿಲೆಂದು ವೊಱಗು ವೊಱಗಿತು ನಭದೊಳ್ ॥ 84 ॥

ಆವಿಂಚಿನ ವೊಳಗಿನೊಳು
ದ್ದಾವಾಂಬುದನಿಕರದಿಂದೆ ರಸೆ ದೆಸೆ ಗಗನಂ ।
ತಾವುಱಿಯಲ್ಬಾರದವೋ
ಲೇವಾತೋ! ಕಱೆದುದಿಳೆಯ ಹರ್ಷಂ ವರ್ಷಂ ॥ 85 ॥

ಮತ್ತ ಮದಲ್ಲದೆಯುಂ,

ವಿಗೆ ಕಾರರಸಂ ಪಗೆ ನೇ
ಸಗೆಯಂ ಸುರಧನುವಿನಿಂದೆ ಮುಗಿಲಂಬುಗಳಂ ।
ತೆಗೆದಿಸೆ ಬಹುವಿಧಶರವವ
ನಿಗೆ ಬಿಲ್ದಿಂತಿರ್ದುವಂಬುಧಾರಾನೀಕಂ ॥ 86 ॥

ಬೆಂಗೊಟ್ಟೋಡುವ ಬೇಸಗೆ
ಯಂ ಗರ್ದಿಸುವಬ್ದಸಮಯನೃಪಘನಮದವೂ ।
ತಂಗಕುಲದಾನಧಾರಾ
ಭಂಗಿಯನೊಡರಿಸಿತು ಕಟ್ಟಿ ಕಱೆವಾಸಾರಂ ॥ 87 ॥

ಗಗನದಿನೆಱಗಿದ ಮಂಜೆ ನೀ
ನಗಲದೆ ಸಲಪೆಂದು ವರ್ಷನರಪಂಗಿಳೆಯಂ ।
ಮುಗಿಲಗಲದ ಹಸ್ತದಿನಾ
ಗಗನಾಂಗನೆ ಧಾರೆಯೆಱೆದ ತೇಱನಾಯ್ತಾಗಳ್ ॥ 88 ॥

ಘನಸಮಯನೃಪಾಲಕನೊಳ್
ಘನಪಾಣಿಗ್ರಹಣವಾದ ಭೂವನಿತೆಗೆ ಮು ।
ತ್ತಿನ ಸೇಸೆಗಳಂ ಗಗನಾಂ
ಗನೆ ಸೂಸಿದಳೆನಿಸೆ ಬಿಱ್ದುವಾಲಿವರಲ್ಗಳ್ ॥ 89 ॥

ಅಂತು ಬರ್ಪ ಕಾರ ಮುಟಿಯಂ ಕಂಡು ಮನಂಗೊಂಡು,

ಕಂಕನಿಕರಂಗಳಂಗ್ಗಡಿಸೆ ಕೋಕಿಳನಾದದ ತಾಳವುಣ್ಮೆ ಸೌ
ಖ್ಯಕರಕರಂಬಪುಷ್ಪರಸದಿಂ ತಣಿದೊಯ್ಯನೆ ಪಾಡೆ ಷಟ್ಪದಂ ।
ವಿಕಸಿತಪಕ್ಷನೂರ್ಧ್ವಗಳನುನ್ಮುಖನುಚ್ಚಳಿತಸ್ವನಂ ಬಳಾ
ಹಕನಿನದಕ್ಕೆ ವೆಕ್ಕಣವನಾಡಿದುದೊಂದು ಮಯೂರನಲ್ತಿಯಿಂ ॥ 90 ॥

ಮತ್ತಮನಂತರದಲ್ಲಿ,

ನೆಗೆದುದು ಸಾರ್ದ್ರ ಪೊರ್ದ್ದಿತವುರಿತ್ತು ತುಳುಂಕಿತು ಜೆಂಗೆ ನೀರ ಧಾ
ರೆಗಳುಱೆ ನಾಂಟಲೀಂಟಿದುದು ನೇಹದೆ ನೋಡಿತುದಂಚಕಂಚುವಿಂ ।
ದುಗಿದುದು ಪಕ್ಕದಿಂ ಪೊಡೆದುದಂಘ್ರಿಗಳಿಂದೊದೆದತ್ತು ನೆತ್ತಿಯಿಂ
ನೆಗಪಿದುದಪ್ಪತಳ್ಕಿರಿದುದಂಬುಕಣಂಗಳನೊಂದು ಚಾತಕಂ ॥ 91 ॥

ಇಂತು ಶಿಖಿಪ್ರಕರವುಂ ಚಾತಕಕುಲವುಂ—ನಲಿಯುತ್ತು ಮಿರೆಯಿರೆ,

ಧಾರೆಗಳವನಿಯನೊಳಪೊ
ಕ್ಕೋರಂತುಚ್ಚಳಿಸಿ ವಿಾಱುತಿರೆ ನಭದಿಂ ಭೋ ।
ರ್ಭ್ಪೋರೆಂದಿರುಳುಂ ಪಗಲುಂ
ಜೀರಿನುತುಂ ತೆಱಹುಗುಡದೆ ಕಱೆದುನ್ನು ಮುಟಿಗಳ್ ॥ 92 ॥

ಒತ್ತರಿಸುತ್ತಂಬರಮುಂ
ಮುತ್ತುತ್ತುಂ ದಿಗ್ವಿತಾನವುಂ ಧರೆಯೊಳ್ ತೀ ।
ವ್ರುತ್ತುಂ ಕತ್ತಲಿಸುತ್ತುಂ
ಸುತ್ತುಂ ಜಿನುಗಿದುವು ಸೋನೆಯಿರುಳುಂ ಪಗಲುಂ ॥ 93 ॥

ಅಂತುಮಲ್ಲದೆ,

ಸರಿಗಳ ನೆರೆದೋಂಟುಂ ಬ
ಲ್ಸರಿಗಳ ಭರಿತಂ ಸರಿಗಳ ಕಲ್ಲೋಲಕುಲಂ ।
ಸರಿಗಳ ಘೂರ್ಣಿತದಿಂದಂ
ಕರನಿಧಿ ಕವಿದಂತೆ ಕಱೆದುದಿಳೆಯೊಳ್ ವರ್ಷಂ ॥ 94 ॥

ಮೇಘಂಗಳ್ ಪರಿಗತವಿನಿ
ದಾಘಂಗಳ್ ಕಮಲವಿಮಳಜೀವನಭರಿತಾ ।
ವೋಘಂಗಳ್ ಶಿಖಿನಿಕರ
ಶ್ಲಾಘಂಗಳ್ ಕಱೆದುವವುಳಶೀತಳಜಳವುಂ ॥ 95 ॥

ನೋಡುತ್ತಿರೆ ಸಕಳಜನಂ
ಕೂಡುತ್ತಿರೆ ಚಾತಕಂಗಳಳಿ ಜಳದೊಳ್ ತೇಂ ।
ಕಾಡುತ್ತಿರೆ ಶಿಖಿಕುಲವೆ
ಬ್ಬಿಡುತ್ತಿರೆ ತುಱುಗಿ ಕಱೆದು ಮೊಱೆದುನ್ನ ಮೀಳಂ ॥ 96 ॥

ವೃಷ್ಟಿಗಳವು ಶಿಖಿಚಾತಕ
ತುಷ್ಟಿಗಳವು ಘನತಟಾಕವಿಮಳನದೀಸಂ ।
ಪುಷ್ಟಿಗಳೆವು ಜೀವರ್ಕಳ
ದೃಷ್ಟಿಗಳವು ಬಿಡದೆ ಕಱೆದುವವನೀತಳದೊಳ್ ॥ 97 ॥

ಮತ್ತಮಲ್ಲಿ,

ಗಗನಂ ಕೆಟ್ಟುದು! ಚಂದ್ರಸೂರ್ಯರಱಿದರ್ ದಿಕ್ಕಕ್ರಮಿಲ್ಲಾಯ್ತು! ಬ
ಟ್ಟೆಗಳಸ್ಪಷ್ಟಮವಾದುವಾತ್ತ ಜಳದೊಳ್ ಪೊಱ್ದಿತ್ತು! ಧಾತ್ರೀತಳಂ ।
ಖಗಸಂಚಾರತೆ ಶೂನ್ಯವಾದುದು! ನಿರುದ್ಯೋಗಕ್ಕೆ ಪಕ್ಕಾದುದೀ
ಜಗವೆಂದೆಂಬಿನವೆಯ್ದಿ ಕಟ್ಟಿ ಕಱೆದತ್ತಾ ಸಾರಮಿಲ್ಲೋಕದೊಳ್ ॥ 98 ॥

ಸುರಿದುದು ಮಟೆ ತಣಿಯಿತ್ತಿಳೆ
ನೆರೆದುದು ಬೆಳೆ ಕಾನನಂಗಳೊಳ್ ನೆಱೆ ವಿಸಟಂ ।
ಬರಿದುವು ಹೊಟೆ ನಾಂದುವು ಶಿಲೆ
ಧರಣಿಗೆ ಮೆಳೆ ಪಿಡಿದ ತಟೆಗಳಾದುವು ಮಟೆಯೊಳ್ ॥ 99 ॥

ಇಂತಪ್ಪ ಮಟೆಗಳೊಳಗೆ,

ಮಟೆ ಮಾಣ್ದೊಡೆ ಹನಿ ಮಾಣದ
ದಳಫಳೆಯುತವಿಟಪಭರಿತವಟವಿಟಪಿಯ ತ ।
ಣ್ಣೆಲಲಲ್ಲಿಂ ತಳರದೆ ಕೋ
ಮಳೆ ಮಟೆಯೊಳಗಗಜೆ ನಲಿದು ನಲೆ ನಿಂದಿರ್ದಳ್ ॥ 100 ॥

ಆನವಾಯದೊಳ್,

ಅಭವಂಗಿಳೆಯೊಳ್ ತಪಮಿ
ರ್ದ ಭವಾನಿಗೆ ಬಂದು ಕಲ್ಪತರು ಫಳಿರನದಿಂ ।
ದಭಿಷೇಕಂಮಾಡುವನತಿ
ವಿಭವದವೋಲೆಸೆದುದಾಲವುರನಾವುಟೆಯೊಳ್ ॥ 101 ॥

ಇಂತು ನೆಗೆದ ಮುಗಿಲ್ಗಳ ಭೀಕರಾಕಾರಕ್ಕಂ, ವಿಂಚುಗಳ ಸಂಚಳತೆಗಂ, ಮೊಳಗಿನ ಮಹಾಧ್ವನಿಗಂ, ಸಿಡಿಲ ಸಡಗರಕ್ಕಂ, ಬಲ್ಬರಿಗಳ ಸಂಭ್ರಮಕ್ಕಂ, ಬಿಲುವಟೆಯ ಬಲೊ್ಪಯಿಲ್ಗಂ, ಪೆರ್ಮಟೆಯ ಧಾರೆಗಂ, ಅಲಿಕಲ್ಲ ಕರ್ಕಶಕ್ಕಂ, ಇಂದ್ರಗೋಪದ ಸಂದ

ಣಿಗಂ, ಶೀಕರದ ಶೀತಕ್ಕಂ, ತುಂತುರು ತಿಂತಿಣಿಗಂ, ನೋನೆಗಳ ಜಿನುಂಗಿಗಂ, ಬಿಲು ಗಾಳಯು ಗಾಸಿಗಂ, ಕಾಲ್ವೋನಲ ಕಡುಪಿಂಗಂ, ಪೆರ್ಮೋಡದ ಕಟ್ಟಿಲಿಗಂ, ಕಾರಿರುಳ ಭಯಾನಕಕ್ಕಂ, ಕ್ರೂರವ್ಯಾಗದ ರೌದ್ರಕ್ಕಂ, ಉಗ್ರಸರ್ಪಂಗಳದ್ಭುತಕ್ಕಂ, ಭೀವರವ ದಾಭೀಳತೆಗಂ ಕೋಡದೆ ಕೊಂಕದೆ ಬಾಡದೆ ಬಳ್ಕದೆ ಸೆಡೆಯದೆ ನೇಡುಗೊಳ್ಳದೆ ಬೆಚ್ಚದೆ ಬೆದಱದೆ ಬಲಂಗೆಡದೆ ಮನಂಗುಂದದೆ ಕೆಲನಂ ಸಾರದೆ ಸಹಾಯಮಂ ಪಾಱದೆ ಮಹಾ ವಟವೃಕ್ಷದ ಕೆಳಗೆ ವಿಪುಳತಪದಿಂದೆ ಅಪರ್ಣೆಯೊಪ್ಪುತ್ತುಮಿರೆಯಿರೆ,

ಜಯವಿಜಯಿಗಳಱುದು ಶಿವ
ಪ್ರಿಯೆಯುಗ್ರತಪಃಪ್ರಭಾವಭಾಸುರೆ ಪುಣ್ಯೋ ।
ದಯಶೀಲೆ ಶಾಂತೆ ಪಾರ್ವತಿ
ಜಯಜಯಜಯ ರಕ್ಷಿಸೆನುತುಮಿಂದಿಂತೆಂದರ್ ॥ 102 ॥

ಪೂಣ್ದುದು ಮುಂ ಶರದಮಳತೆ
ಪೂಣ್ದುದು ಕಳಹಂಸಮಾಲೆ ಮೆಲ್ಲನೆ ಬಿಲದೊಳ್ ।
ಕಣ್ದೆಱೆದುವು ತೊಳತೊಳಗು
ತ್ತಣ್ದಿಸೆ ನೆರೆ ತಿಳದುವೀಗಳವಧಾರಗಜೇ ॥ 103 ॥

ಜನವನುರಾಗವೇಱೆ ಪೊಱವಂಟ್ಟು ಕೃಷಿವ್ಯವಸಾಯವೃಂದಮುಂ
ಮನದೊಲವಿಂದೆ ಮಾಡುತಿದೆ ಕೋಟರದಿಂ ನೆಗೆತಂದು ಪಕ್ಷಿಗಳ್ ।
ಕೊನೆದಳಿಗೊಂಬಿನೊಳ್ ಬಿಸಿಲನಾಂತಿವೆ ಹಂಸಕುಲಂ ಬಿಲಂಗಳಂ
ದನುಮಿಸಿ ನೋಡಿ ಪೊಣ್ಮುತಿವೆ ಪಾರ್ವತಿ ನೋಡು ಶರದ್ವಿಳಾಸಮಂ ॥ 104 ॥

ರವಿಕಿರಣಂ ನೀರೋಡು
ತ್ತಿವೆ ತಣ್ಪಿಂ ಬೀಱುತಿವೆ ರಥಾಂಗಕುಲಂಗಳ್ ।
ತವೆ ತಣ್ಪಿಸಿಲೊಳ್ ನಿಂದಿ
ರ್ದಿವೆ ಮೇಘಂ ಹಿಂಡಿ ಹರಹಿದಂತಿವೆ ನಭದೊಳ್ ॥ 105 ॥

ಪರೆದುವು ಪಯೋಧರಂಗಳ್
ಬರುತಿವೆ ಕಳಹಂಸಮಾಲೆ ಬಿಸಿಲೊಳ್ ವಿಹಗಂ ।
ನೆರೆದಿವೆ ವ್ಯಾಗಸಂತತಿ ಗ
ಹ್ವರದಿಂ ಪೊಱವಂಟ್ಟು ನೋಯುತಿವೆ ಮೊಳೆವುಲ್ಲಂ ॥ 106 ॥

ತಿಳದುವು ದಿಸೆಗಳ್ ಹಂಸಾ
ವಳಿ ಸಾರ್ದುವು ಪೂರ್ಣಸರಸಿಯಂ ಬಿಸಕಂದಂ ।
ಮೊಳೆವೋದುವು ಸಲಿಲಂ ನಿ
ರ್ಮಳಮಾದುವು ಕಳೆದುದಾಗಸಂ ಧವಳತೆಯಂ ॥ 107 ॥

ಎಂದು ಜಯೆವಿಜಯೆಗಳ್ ಬಿನ್ನಪಂಗೆಯ್ದು,

ಇದುನೆ ಶರತ್ಸಮಯಂ ಮೇ
ಲೊದವುತ್ತಿರೆ ಶೀತಕಾಲಮುಗಸುತೆ ಕಾಸಾ ।
ರದ ಕೆಱೆಗಳ ತೊಱೆಗಳ ಪೆ
ಟ್ಟದ ತಱ್ಪಿಲ ಹಿಮದೊಳಿಸೆಯೆ ಮೂಱ್ಪುದು ತಪಮುಂ ॥ 108 ॥

ಎಂದು ಜಯೆವಿಜಯೆಗಳ್ ಬಿನ್ನಪಂಗೆಯ್ದುಚಿತವಚನರಚನಾನೀಕಮುನಾಕರ್ಣಿಸಿ ಲೋಕೈಕಬಂಧು ಸಾಕಾರಸುಧೆಯೆನಿಪ ಮಹಾದೇವಿ ಮುಱಿಗಾಲಂಮಾಣ್ದುದಂ ಮನದೊಳಱಿದು ಬಡವಾದೊಡಲಂ ಬಿಡದೋಲಗಿಪ ನಾರಸೀರೆ ನಯವೇಱೆ ಪೊಱಗಣ ಮುಱಿಯಿಂ ನಾಂದ ಮೆಯ್ಯ ನೀರ ಬಣ್ಣಮಂ ತಣ್ಣೆಱಲೊರಾಱಿಸಿ ಧ್ಯಾನಾನಂದರಸದ ಸೋನೆಯಿಂದೊಳಗೆ ನಾಂದ ಕರಣಂಗಳನುಸಿರೊಳಾಱಿಸುತ್ತುಂ ತಪೋಭಾನೂದಯಕ್ಕೆ ಮುಖಕಮಳದಳಂ ಬಿರ್ಚುವಂತೆ ಮೆಯ್ಯ ಸಂಪುಟಂ ಬಿರ್ಚೆ ಕಣ್ದೆಱೆದು ನುಂದಿರ್ದ ಸಹಜರಿಯರಂ ಕಂಡು,

ಜಳಧರದೊಳಗಿಂದಂ ಶಶಿ
ಕಳೆ ಪೊಱಮಡುವಂತೆ ಪರ್ವಿದಾಲದ ಮುರದಿಂ ।
ಗಳಲನೆ ಪೊಱಮಟ್ಟಳ್ ಕೋ
ಮಳೆಯರ್ ಕೆಯ್ಗಡೆ ಭವಾನಿ ಮೆಲ್ಲಡಿಯಿಡುತುಂ ॥ 109 ॥

ನಡೆತಂದು ಮುಂಜು ನೆರೆ ಮೂ
ಡ್ದೊಡೆ ಶೀತಂ ಮಾಣದಿರ್ಪ ತಣ್ಣೆಱಲೊಳ್ ಕಂ ।
ಪಿಡಿಪ ಲತಾಗೇಹಂಗಳ
ನಡುವಣ ಕಾಸಾರತಟದೊಳಿಂಬಿಕೆ ನಿಂದಳ್ ॥ 110 ॥

ಅಂತು ನಿಂದಿರೆಯಿರೆ,

ಇತ್ತಲ್ ಭೂತಳದೊಳ್ ಹಿಮ
ವೊತ್ತರಿಸಿತು ಭುವನ ಜನಮುನುಱೆ ನಡುಗಿಸುತುಂ ।
ಸುತ್ತುತ್ತುಂ ಸುಗಿಯುತ್ತುಂ
ಮುತ್ತುತ್ತುಂ ಮುಂದುಗೆಡಿಸುತುಂ ಮುಸುಕಿಡುತುಂ ॥ 111 ॥

ಅಂತುಮುಲ್ಲದೆಯುಂ,

ಮೃಗಸಂತತಿಯಂ ಕೊಳರ್ವ
ಕ್ಕಿಗಳಂ ಪಕ್ಕಿಗಳನದ್ರಿತಟದೊಳ್ ಕೊಳನೊ ।
ತ್ತುಗಳೊಳ್ ಕೊೞ್ಟರದೊಳ್ ಮಿಗೆ
ಪುಗಿಸುತ್ತುಂ ಬಂದನಮುನು! ಶಿಶಿರನೃಪಾಲಂ ॥ 112 ॥

ಆಂತು ಬಂದು,

ಕಿಡಿಗಳ್ ಕೆಚ್ಚನೆಯಾಲಿಕಲ್ಲುರಿಯು ಮೊತ್ತಂ ಕೆಂದಳರ್ ಕೆಂಡದೊಂ
ಪಡಿಕಿಲ್ಮಾಣಿಕದಿಂಡೆ ಕಾಯ್ವು ತಪನಂ ಚಂಪ್ರಂ ಪೊದಲ್ವುತಪಂ ।
ಗಡ! ಬೆಳ್ದಿಂಗಳೆನಿಪ್ಪುದೊಂದು ಪೆಸರಂ ತಾಂ ಮಾಡಿದಂತಿರ್ದುದಾ
ಕಡುಬಿಂ ತನ್ನಯ ಕಾಲದಲ್ಲಿ ಹಿಮರಾಜಂ ಧಾರಿಣೀಚಕ್ರದೊಳ್ ॥ 113 ॥

ಮತ್ತಮದಲ್ಲದೆಯುಂ,

ಮಿಗೆ ಬೆಮರಲ್ತುದಂ ನೀರಡಿ
ಕೆಗಳಂಗಿದುವುಷ್ಣದಂಸಿರಡಂಗಿತು! ತಪನಂ ।
ಗೊಗೆದುದು ಪೆರ್ಚಿದ ತಣ್ಪಿ
ನ್ನಿಗೆ ಶೀತಂ ಪತ್ತಿತೇನನೆಂಬೆಂ ಹಿಮದೊಳ್! ॥ 114 ॥

ನಲಿ ರವಿ ತೇಜಂಗುಂದುತೆ
ನಿಲಲಂಜುತ್ತೋಡಿ ಪುಗುವನದ್ರಿಯ ಮಱೆಯೊಳ್ ।
ಗೆಲಿ ಹರಿವ ಹಾವುರಿವ ಕಿ
ರ್ಚಿಲೆ ನಿಂದುವು ಶಿಶಿರನೃಪತಿಯಾಜ್ಞೆಗೆ ಜಗದೊಳ್ ॥ 115 ॥

ಮತ್ತಮಲ್ಲಿ,

ಉದಯಂ ಶೀತೋದಯವಂ
ಗ್ಗದ ಮಧ್ಯಾಹ್ನಂ ತಪಾರಮಧ್ಯಾಹ್ನಂ ಮಿ ।
ಕ್ಕುದುದಸ್ತಮಯಂ ತಾನು
ಷ್ಣದಸ್ತಮಯಮೆನಿಸಿತವುವ! ಹಿಮವಿಭ್ರವದೊಳ್ ॥ 116 ॥

ತಿಳಿವೊಡೆ ಶಶಿ ರವಿ ರವಿ ಶಶಿ
ಬೆಳಗುವ ಜೊನ್ನಂ ಬಿಸಿಲ್ ಬಿಸಲ್ ತಾಂ ಜೊನ್ನಂ ।
ಚಳ ಬಿಸುಪು ಬಿಸುಪು ಚಳಯೆನೆ
ಬಳದುದು ಹಿಮರಾಜತೇಜಮಿಂಜಗದೆಡೆಯೊಳ್ ॥ 117 ॥

ಆಸವುಯದೊಳ್,

ಪಲ್ವಳಿಯೊಳೆ ಹುಹುಯೆಂಬಾ
ಚಿಲ್ವಗ್ಗಡಣೆಯೊಳೆ ಹಸ್ತದಂಡಿಗೆಯೊಳೆ ತಾ ।
ನೊಲ್ವನ್ನಂ ಶಿಶಿರನಟಂ
ಸಾಲ್ವನ್ನಂ ಜನವನಾಡಿಸಿದನುರ್ವರೆಯೊಳ್ ॥ 118 ॥

ನುಡಿಯೆ ಹು! ಹು! ಕಡೆಯ ಮಾತೇ
ನೊಡಲೇ ಪ್ರಾಣಂಗೆ ಚಳಯ ಕುಪ್ಪಸವಾಯ್ತಂ ।
ದೊಡೆ ಹಿಮದ ಮುಹಿಮೆಯಂ ಕಿ
ಟ್ಟಿಡೆ ಬಲ್ಲಿದನಾವನೊರ್ವನುರ್ವಿತಳದೊಳ್ ॥ 119 ॥

ಉಲಿ ಶೀತಂ ಪತ್ತಿದೊಡಿರ್
ಲಲಿಯದೆ ಜೀವಂ ಬಿಗುರ್ತು ಜಠರಾಗ್ನಿಯನೆ ।
ಬಿಚ್ಚಲಿಸೆ ಹೊಗೆಯುಸಿರ ಪಥದಿಂ
ಪೊಲಿವಂಡುವುದು ಜನದ ಮುಖದೊಳಲ್ಲದೊಡಂತೇ ॥ 120 ॥

ಮತ್ತಮುಲ್ಲದೆಯುಂ,

ಈಕ್ಷಿಸಿದಳಿಳಿಸಿ ಭಸಿತದ
ರಕ್ಷೆಯನೊಸೆದಿಟ್ಟು ಮಂಜಿನಿಂ ತೂಪಿಲ್ದಳ್ ।
ಶಿಕ್ಷಿಸಿ ಬಲ್ಪಿಂದೂಡುತೆ
ರಕ್ಷಿಸುವಳ್ ಶೀತಮೂತೆ ಶಿಖಿಬಾಲಕನಂ ॥ 121 ॥

ಒದವಿ ಧರಾತಳದೊಳ್ ತೀ
ವಿದ ಶೀತಕ್ಕಂಜಿ ಕಂಪಿಸುತ್ತುಂ ನಿಲಲಾ ।
ಱದೆ ಬಡಬಾಗ್ನಿ ಕರಂ ಕಾ
ಪ್ಯದೊಳಗೆ ಪೊಕ್ಕಂ ಕೃಶಾನುವೇನಂ ಪೇಳ್ವೆಂ ॥ 122 ॥

ಮತ್ತಮಾಶೀತಾತಿಸಮಯದಲ್ಲಿ,

ಮುಚ್ಚಿ ಮುಸುಂಕಿದ ಹಿಮಮಂ
ಕಿಚ್ಚಿಂದಂ ಕಳೆಯಲಾಱದಿಳೆಯ ಜನಂಗಳ್ ।
ಚೆಚ್ಚಱವೆಯ್ತುಂದೊಲವಿಂ
ದಚ್ಚರಿ ವಿರಹಿಯನೆ ಕಾಯ್ದು ಕಳಿವರ್ ಚಳಿಯಂ ॥ 123 ॥

ಪರಿಪೂರ್ಣತಟಾಕದ ಮೇ
ಲುರಿಯಿಲ್ಲದೆ ಧೂಮವೊಗೆವುತಿರೆ ಮಾಗಿಯೊಳ ।
ತ್ಯುರುತರಗುರುತರತಾಪ
ಕ್ಕಿರಲಾಱದೆ ವಿರಹಿ ಪೊಕ್ಕು ಮುಱುಗದೆ ಮಾಣಂ ॥ 124 ॥

ಪುಟ್ಟಿತು ಚಳ! ಬಳೆದುದು ಚಳ!
ಕೊಟ್ಟುದು ಚಳ! ಕೊಂಡುದೆಲ್ಲಮುಂ ಚಳ! ಚಳಿಯೆಂ ।
ದುಟ್ಟುದು ಚಳ! ತೊಟ್ಟುದು ಚಳೆ!
ನೆಟ್ಟಿತು ಚಳ! ಮುಟ್ಟಿತೆಲ್ಲ ಚಳ! ಪೊಸಚಳಿಯೊಳ್ ॥ 125 ॥

ಎಂಬ ಕೌತುಕಮನೊಳಕೊಂಡು,

ಈತೆಱದಿಂ ನೆಱೆ ಪರ್ಬಿದ
ಶೀತದೊಳಗಜಾತೆ ನೂತ್ನಸುರುಚಿರನರಸೀ ।
ವ್ರಾತಮದೆಲ್ಲಿ ಘನಾಚಳ
ನೈತಂಬಮದೆಲ್ಲಿಯಲ್ಲಿ ತಪದಿಂ ನಿಂದಳ್ ॥ 126 ॥

ಇಂತು ನಿದಾಘನಿಷ್ಕರತೆಯೊಳಂ ಮಲೆಗಾಲದ ಪ್ರಳಯಜಲದೊಳಂ ಮಾಗಿಯ ಮಹಾಶೀತದೊಳಂ ಭಾಳಲೋಚನನ ಭಾಮಿನಿ ಗಂಗಾಧರನ ಗರುವೆ ಚಂದ್ರಧರನರಸಿಯೆನಿಪ ಗಿರಿರಾಜತನೂಜೆಯಿರ್ದ ನಿರುಪಮಾನತಪಃಪ್ರಭಾವಂ ವಿರೂಪಾಕ್ಷನ ಕರಣಂಗಳೊಳ್ಬೆರಸಿ ಬಳೆಯೆ—ಪುರಹರನೆಚ್ಚಿತ್ತು ಕೆಚ್ಚುಗಟ್ಟಿದ ಧೈರ್ಯಮನೊಡೆದು ಮೂಡಿ ಪಿಡಿದೆಳೆವ ಕಾರುಣ್ಯಕ್ಕೆ ಪಕ್ಕಾಗಿ ಪನ್ನಗಭೂಷಣನಿನ್ನಿರಲ್ಬಾರದೆಂದು ತನ್ನೊಳ್ ಬಗೆದತಿಸ್ವತಂತ್ರಂ ಗಿರಿಜೆಯ ಮನಮನೊರೆದು ನೋಡುವ ಭರದಿಂ ಬಂದುನಿಂದು,

ದಶಭುಜಮುಂ ಪಂಚಾಸ್ಯಮು
ನಶೇಷಭೀಮಾಂಗವಿತತಿಯುಂ ತನುವಿನೊಳಂ ।
ವಕವಂ ಮಾಡುತಡಂಗಿಸಿ
ಪಶುಪತಿ ವಟುವೇಷದಿಂದವೊಪ್ಪುತ್ತಿರ್ದಂ ॥ 127 ॥

ಗಿರಿಸುತೆಯಂ ಕಾಣ್ಬನ್ನಂ
ವರಪರಮಬ್ರಹ್ಮಚರ್ಯದಿಂದೆ ತಾನಿ ।
ದ್ದಿರವಂ ತೋಱುವ ತೆಱದಿಂ
ಗಿರಿಶಂ ವಟುವೇಷಮುಂ ವಿರಾಜಿಸೆ ತಳೆದಂ ॥ 128 ॥

ಅಂತು ತಳೆದು,

ವಿುಗೆ ಶೀತಾಂಶು ಚಕೋರಿಯಲ್ಲಿಗೆ ವಸಂತಂ ರಾಜಿಪುದ್ಯಾನದ
ಲ್ಲಿಗೆ ಸೂರ್ಯಂ ಸರಸೀಜದಲ್ಲಿಗೆ ವರಪ್ರಾಣಾನಿಳಂ ದೇಹದ ।
ಲ್ಲಿಗೆ ವೇಳಂ ಶಿಖಿಯಲ್ಲಿಗೊಪ್ಪುವ ವರಾಳಂ ಪೂರ್ಣಕಾಸಾರದ
ಲ್ಲಿಗೆ ಬರ್ಪಂತೆ ಭವಾನಿಯಲ್ಲಿಗಭವಂ ಬಂದಂ ಜಗದ್ವಲ್ಲಭಂ ॥ 129 ॥

ಇಂತು ಭೂಲೋಕಕ್ಕಿಳಿತಂದು ಹೇವಳಕೂಟದೊಳ್ ಹೈಮವತಿಯಿರ್ದ ತಪೋವನವುಂ ಪುಗುತಿರ್ದಾಗಳ್,

ಬರೆ ಗಿರಿಶಂ ವಸಂತಸುತವಲ್ಲದೊಡಂ ಮುದದಿಂದೆ ಭೋಂಕನಂ
ಕುರಿಸಿತು ವಾವು! ಪಲ್ಲವಿಸಿತಲ್ಲಿಯಶೋಕೆ! ವಸಂತದೂತಿಯೊ ।
ಪ್ಪಿರೆ ನೆರೆ ಪೂತುದನ್ಯಭೃತನುನ್ನತಿಯಿಂ ಕಳೆದತ್ತು! ಮಲ್ಲಿಕಾ
ಪರಿಮಳಭಾರದಿಂ ಕುಸಿದು ವೆಲ್ಲನೆ ತೀಡಿತು ದಕ್ಷಿಣಾನಿಳಂ ॥ 130 ॥

ಅಂತು ತೀಡೆ,

ಜಯವಿಜಯೆಗಳದು ಪೊಸತತಿ
ಶಯವೀಶಶಿರದೊಳಿದೇಂ ಭವಾನಿ! ವಸಂತೋ ।
ದಯನೂಹಿಸೆಯಾದುದು ನಿ
ನ್ಮಯ ಪುಣ್ಯತಪಃಪ್ರಭಾವಕಾರಣವುಲ್ಕೀ ॥ 131 ॥

ಎನುತಿರೆ ಬಂದು ಭಾವಿಸಿ ತಪೋವನವುಂ ಶಶಿಮೌಳಿ ಪೊಕ್ಕು ಮೆ
ಲ್ಲನೆ ಬರುತುಂ ಪಥಶ್ರಮವನಾಂತು ಬಱಿಲ್ದವೊಲಾಗಿ ತೇಂಕುತುಂ ।
ಮನದೊಳನೂನನಂದದವನೆಯ್ದುತುಮಿಕ್ಷಿಸುತಿರ್ಕೆಲಂಗಳಂ
ಘನಮಹಿಮಂ ಸ್ವತಂತ್ರನಿಭು ಪೊರ್ದಿದನೊಂದು ವಿನೂತಜೂತವುಂ ॥ 132 ॥

ಇಂತು ಪೊರ್ದಿ ಕಪಟವಟುವೇಷವುಂ ತಳೆದ ಕಪರ್ದಿ ಪಾರ್ವತೀದೇವಿಯರ್ ತಪ
ದೊಳಿರ್ಪ ಸೀಮಾಗಮಿಸಿದ ವಿಶಾಲಬಾಲಜೂತಶೀತಳಚ್ಛಾಯೆಯೊಳ್ ಕುಳ್ಳಿರೆ ಸಹ
ಚರಿಯುರಪ್ಪ ಜಯೆವಿಜಯೆಗಳ್ ಕಂಡು,

ತರಳನಪೂರ್ವಿಗನತಿಥಿ
ಸ್ವರೂಪನೀಷದ್ವಿಭೂತಿಲಸಿತಲಲಾಟಂ ।
ವರವಿಪ್ರನೆನುತೆ ಬಂದಾ
ದರಿಸಿದರೊಲವಿಂದೆ ಚರಣತಳವುಂ ತೊಳೆದರ್ ॥ 133 ॥

ಅಂತು ತೊಳೆದು,

ಎಳೆವಾಳೆಯ ಸುಟ್ಟಾಯೆಲೆಯೊಳ್
ನಳನಳಿಸುವ ಕಂದಮೂಲವುಂ ನವಜಂಬೂ ।
ಫಳವುಮಾಮ್ರಫಳಂ ಕದಳೀ
ಫಳಂಗಳಂ ತೀವಿ ತಂದು ಮುಂದೀಯುತ್ತುಂ ॥ 134 ॥

ಎಲೆಯತಿಥಿ! ಬಱಿಲ್ದಿರೆನ್ನಿಮ್ಮ
ಫಲದಿಂದಂ ನಿಮ್ಮ ಪಸಿವನುಡುಗಿಸಿವೆನೆ ಹೈ! ।
ಫಲವಂ ಕೈಕೊಂಡಪೆವೀ
ಲಲನೆಯದಾರ್ ತಪವಗಣ್ಯಮಾವನ ಪುಣ್ಯಂ ॥ 135 ॥

ಎಂದು ನುಡಿಯೆ ಜಯೆವಿಜಯೆಗಳ್ ಕೇಳ್ದು,

ಇವರಿರವಿನ ಚಿಂತಾರತಿ
ನಿಮಗೇಕೀ ಕ್ಷುಧೆಯುನೀಪಥಶ್ರಮವುಂ ತೀ ।
ರ್ಚುವ ಬಗೆಯಂ ಬೇಗಂ ಮಾ
ಡುವುದೆನೆ ನಸುನಗುತೆ ವಿಪ್ರನಂದಿಂತೆಂದಂ ॥ 136 ॥

ಬೆಸಗೊಂಡೊಡೆ ದೋಷವೆ! ಈ
ಪೊಸಕನ್ನೆ ತಪೋನಿರೋಧದಿಂದಿರ್ದೊಡೆ ಸೈ ।
ರಿಸಬರ್ಪುದೆ! ತಪವುಂ ಮಾ
ಣಿಸುವವರಿಲ್ಲಾ! ಸಹಾಯಸಂಪದವಿಲ್ಲಾ! ॥ 137 ॥

ಎನೆ ಕೇಳ್ದು ಗಿರಿಜೆ ಮನದೊಳ್
ಮುನಿಯುತ್ತುಂ ಜಪಮನುಡುಗಿ ಜಪಮಾಲೆಯನೊ ।
ಯ್ಯನೆ ಕೆಯ್ಯೊಳೋನರಿಸಿ ಮೆ
ಲ್ಲನೆ ಕಣ್ದೆಱೆಯುತ್ತೆ ಕಂಡಳಾವರವಟುವಂ ॥ 138 ॥

ಆಸನಮಯದೊಳ್,

ಇಂದುಗೆ ಮೋಕ್ಷಂ ಕವಿದೊಡ
ಮಿಂದೀಲೋಕಕ್ಕೆ ತಣ್ಪು ತಪ್ಪದ ತೆಱದಿಂ ।
ದಿಂದುಧರಂ ವರವಟುವೇ
ಷಂದಳೆದೊಡಗಜೆಗಾದುದತಿಹರ್ಷಮುಖಂ ॥ 139 ॥

ಆಂತು ಹರ್ಷಮುಖಮೇ ಕಾದಪುದೆಂದು ನಿಮಿತ್ತವನಱಿಯದೆ ಬೆಱಗಾಗಿ ನೋಡುತಿರ್ಪಲ್ಲಿ,

ಗಿರಿಸುತೆಯ ಮುಧುರದೃಷ್ಟಿಗ
ಳುರವಣಿಯಿಂ ತಾಗೆ ತನ್ನನಾಗಳ್ ವಿಪ್ರಂ ।
ಕರಗಿ ನಿಲಲಾಱದೆಱ್ದೊ
ತುರಪುಳಕಮನಾಂತುಮಿಂತು ಸಂತವಿಡುತ್ತುಂ ॥ 140 ॥

ನೆಗೆವ ಜಡೆಮುಡಿಯನೊತ್ತು
ತ್ತೊಗೆವ ಭುಜಾಳಯನಡಂಗಿಸುತ್ತೂರುಗಳಿಂ ।
ಮಿಗುವ ವೃಷೇಂದ್ರನನೌಂಕು
ತ್ತಗಲದೆ ನಿಜಮೂರ್ತಿಯೊಳಗೆ ಗಜಬಜಿಸುತ್ತುಂ ॥ 141 ॥

ಎಂತಾನುಂ ನಿಜರೂಪಂ
ಸಂತಸವಿಡುತಲ್ಲಿ ವಿಪ್ರನತಿಧೈರ್ಯತೆಯಂ ॥
ಮುಂತಿಟ್ಟು ಗಿರಿಜೆಯೊಡನುಸಿ
ರ್ದಂ ತಡಬಡಿಸುತ್ತೆ ಮಿಸುಪ ಪೊಸಪುಸಿವಾತಂ ॥ 142 ॥

ಈ ಸುಕುಮಾರತೆಯಿ ನಿಲ
ವೀ ಸುಕರತೆಯಿ ನವೀನಯೌವನವುದವೀ ।
ಭಾಸುರತೆಯಿ ಸುಧಾಮಯ
ವೀಸುಖದೊಳ್ ತಪವಿದೆಂತು ಬಂದುದದು? ಮುಂಗುದೇ ॥ 143 ॥

ನಿನಗೇಕೀ ತರುಣತೆಯೊಳ್
ಘನತಪವೆಡೆಗೊಂಡುದಕಟ! ನವಲತೆಯಂ ಸೂ ।
ರ್ಯನ ಬಿಸಿಲಿಂ ಕೊರಗಿಪ ದು
ಷ್ಟನನೆನಗಲ್ಲಿಪಬಲ! ಸೌಕುಮಾರ್ಯವರಣೇ ॥ 144 ॥

ಅಂತುಮಲ್ಲದೆಯುಂ,

ಎಳಗೆಂಪನುಗುಳ್ವ ವೃದುಕೋ
ಮಳಪದಕವಳಂಗಳೀಗಳತಿಕಠಿನಮೆನಿ ।
ಪ್ಪಿಳಿಯೊಳ್ ಹರಹರ! ಕಲ್ನೆಲ
ಕಳವಟ್ಟುವಿವೆಂತು ಬಾಲಹಂಸೀಯಾನೇ ॥ 145 ॥

ಎಳವೆಳದಿಂಗಳ ಸೋಂಕಿಂ
ಗಳವಡದಳ್ಕುವ ಶಿರೀಷನುಕುಮಾರಾಂಗಂ ।
ಬಳವತ್ಕರ್ಕತರದಿಂ
ಬಳಸಿದ್ದೀನಾರಸಿರೆಗಾಂತುದು ಚಿತ್ರಂ ॥ 146 ॥

ಎಳಲತೆಯಂ ಆೋಡಾಡುವ
ನಳತೋಳ್ ಕೋಕಂಗಳಂ ವಿಭಂಗಿಪ ಕುಚಮುಂ ।
ಡಲವುಸಿರಲುಪವನಪಥದ
ತುಳಪುಧ್ಯಂ ತಪದ ಕೋಟಲೆಗೆ ಸಂಗಡವೇ ॥ 147 ॥

ಮಿಸುಗುವ ಶಶಿವದನಂ ಕಡು
ವಿಸಿಲಿಂ ಕೊರಗಿತ್ತು ಕುಸುಮಮೂಳಕೆಯಿಂ ರಾ ।
ಜಿಸುವ ಕಚಭಾರವಂಯ್ಯೋ!
ಪೊಸಜಡೆಯಂ ಪಡೆದುದಕಟ ಘನಯೌವನದೊಳ್ ॥ 148 ॥

ಮತ್ತಮಲ್ಲದೆಯುಂ,

ಬಿಸಿಲೆನ್ನದೆ ಮಂಜೆಯೆನ್ನದೆ
ಶಿಶಿರಮಿದೆನ್ನದೆ ತೃಷೋನ್ನತಿ ಕ್ಷುಧೆ ನಿದ್ರಾ ।
ವಿಸರವುಮಂ ನೆರೆ ಗೆಲ್ದೀ
ವನುಮತಿ ಬೆಱಗಾಗೆ ತಪದೊಳಿರ್ಪ್ಪವರುಂಟೇ ॥ 149 ॥

ವನಜಾನನೆಯೇಱುಂಜ
ವ್ವನದೊಳ್ ವನದೊಳ್ ನಿರೋಧದೊಳ್ ಪೇಱುಂತಾ ।
ವನನುದ್ದೇಶಿಸಿ ತಪಮಿದ
ನೆನಗಱಿಪಿದೊಡೇನೊ! ದೋಷವೇ ವೃಗನಯನೇ ॥ 150 ॥

ಎಂದು ಪ್ರೇಮಜನಪ್ರಣಯಕಲಹಲೀಲಾಲೋಲಚಿತ್ತನಪ್ಪ ವಿರೂಪಾಕ್ಷಂ ಪರಮ ವಟುವೇಷದಿಂ ನುಡಿದ ವೃದುಕಠಿನಾಕ್ಷೇಪಗರ್ಭಿತವಚೋವಿಳಾಸಮುಂ ಕೈಕೊಜೆ ಕೇಳ್ದ ಚಿಂತೆಯಂ ತಾಳ್ದಿ,

ಪೆಸಗೊಂಡಪನವುಳದ್ವಿಜ
ನುಸಿರಲ್ತಾಂ ಬಾರದುಸಿರದಿರಬಾರದೆನು ।
ತ್ತಸದೃಶತಪವುಂ ಮನದು
ಬ್ಬಸದಿಂದೆ ಭವಾನಿ ಮಾಣ್ದು ಮೆಲ್ಲನೆ ನುಡಿದಳ್ ॥ 151 ॥

ಬಗೆವರ್ಚಿ ಕೇಳುತಿರ್ದಪೆ!
ಮಿಗೆ ಪೇಳ್ವಪೆನೆಲೆಲೆ! ಧೂರ್ತವಿಪ್ರನೆ! ಕೇಳ್ ಶಂ ।
ಭುಗೆ ಕಾರುಣ್ಯಾಬ್ಧಿಗೆ ಶೂ
ಲಿಗೆ ಕರುಣಂ ಪುಟ್ಟುವಂತೆ ತಪದಿಂದಿರ್ಪೆಂ ॥ 152 ॥

ಎನುತುಂ ಗದ್ಗದಿಸುತೆ ಪುಳ
ಕನಿಕಾಯವುನಾನುತಕ್ರುವಂ ಕಳೆಯುತ್ತುಂ ।
ಘನಹರ್ಷಚಿತ್ತೆಯಾಗು
ತ್ತೆ ನಗೇಶ್ವರಪುತ್ರಿ ಶಂಕರನ ಪೆಸರ್ಗೊಂಡಳ್ ॥ 153 ॥

ಎಂದು ವಿರೂಪಾಕ್ಷಂಗೆ ತಪವಿರ್ದ್ದಪೆನೆಂಬ ನುಡಿಯಂ ಕೇಳ್ದು ದುಷ್ಟ ಧರಾಮರ ನಟ್ಟಹಾಸದಿಂದಿಂತೆಂದಂ:—

ಅಕ್ಕಕ್ಕೆ! ಕಾಮಹರನೊಳ್
ಮುಕ್ಕಣ್ಣನೊಳಖಿಳವೇದಶಾಸ್ತ್ರಕ್ರವುಮುಂ ।
ಮಿಕ್ಕವನೊಳ್! ಪಿತೃವನದೊಳ್
ಪೊಕ್ಕವನೊಳದೆಂತು ಚಿತ್ತವಿಟ್ಟೈ! ಲತಾಂಗೀ ॥ 154 ॥

ಭೀಕರವಪ್ಪ ಕೂಲಿಯಭಿಲಾಷೆಯೊಳೀತಪವಾತನೇಕೆ! ನೀ
ನೇಕೆ! ಕೃಪಾಣವೇಕೆ! ಲತೆಯೇಕೆ! ಲಸತ್ಕರಿಯೇಕೆ! ರಂಭೆ ತಾ ।
ನೇಕೆ! ಕೃಶಾನುವೇಕೆ! ಪೊಸಪೂವಿನ ಮಾಲೆಯದೇಕೆ! ಭಾನು
ವೇಕಾಕುವುದಂಗಳೇಕೆ! ಸಿಡಿಲೇಕೆ ಮುರಾಳನದೇಕೆ! ಲೋಕದೊಳ್ ॥ 155 ॥

ನೀನಿನಿಯಳ್ ವಿಷವಾತಂ
ನೀನತಿವೃದ್ಧಂ! ಕಠಿನಗುಣಗಣಾಶ್ರಯನಾತಂ ।
ನೀನಬಲೆಯುಗ್ರನಾತಂ
ನೀನುರುತರಭೀರು! ಸರ್ಪಭೂಷಣನಾತಂ ॥ 156 ॥

ಪುಲಿದೊವಲುಡುಗೆಯ ಹಾವಿನ
ನೆಲೆದೊಡಿಗೆಯ ನೊಸಲ ಕಣ್ಣ ಖಟ್ವಾಂಗದ ಪಂ ।
ದಲಿಗಳ ಮಾಲೆಯ ಕೂಲದ
ಕಲಿಗಂಜದೆ ಮುನವನೆಂತು ಮಾಡಿದೆ! ಮುಗುದೇ ॥ 157 ॥

ಎಂದು ವಿಪ್ರಂ ನುಡಿದ ಶಿವನಿಂದೆಗೆ ಭವಾನಿ ಮುನಿದು ಕನಲ್ದು ಕಿನಿಸಿ ಕಿಡಿಕಿಡಿ ವೋಗಿ,

ತಪವಂತದಿರ್ಕೆ! ಮೂಡುವ
ಜಪವಿರ್ಕೆ! ಮೃಗಾಂಕಮೌಳಿಯಂ ಭರದಿಂ ಧ್ಯಾ ।
ನಿಪುದಿರ್ಕೆ! ಶಂಭುವಂ ನಿಂ
ದಿಪುದಂ ಕೇಳ್ವೊಂದು ಪಾಪವಿಂದೆನಗಾಯ್ತೀ ॥ 158 ॥

ಘೋರತಪದಲ್ಲಿ ಕೋಪಿನ
ಬಾರದು! ತಾಂ ತಪದ ಕೇಡು ಪತಿನಿಂದೆಯುಮುಂ ।
ಸೈರಿಸಬಾರದೆನುತೆ ವಿ
ಚಾರವನುಜ್ಝಿದೆಗಜೆ ಮನದ ಮುಳಿಸಿಂದಾಗಳ್ ॥ 159 ॥

ಆದ ನಿರೋಧದ ನಿಂದೆಯ
ನಾದರಿಸದೆ ಭಸಿತದಿಂದೆ ವಿಪ್ರನನಿಡೆ ತಾಂ
ಪೋದುದು ವಟುವೇಷಂ ಶಿವ
ನಾದೊಡದೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್ ॥ 160 ॥

ಆಗಳ್,

ವಂಗಿಲ ತೆಱೆ ಸರಿದ ಶಶಿಯಂ
ತೊಗೆದ ತಮಂ ತೆಗೆದ ತರುಣತರಣಿಯ ತೆಱದಿಂ ।
ಪೊಗೆ ತಱ್ಗಿದಗ್ನಿಯಂತಿರೆ
ಮಿಗೆ ವೇಷಂ ತೊಲಗಿ ತೊಳಗುತಿರ್ದ್ದಂ ರುದ್ರಂ ॥ 161 ॥

ಜಡೆವುಡಿ ಪಂಚಮುಖಂ ನೆಗೆ
ದುಡುಪತಿಕಳೆ ದಶಭುಜಂ ತ್ರಿನೇತ್ರಂ ಗಾತ್ರಂ ।
ಬಿಡದೆಸೆವ ಭೂತಿ ಪುಲಿದೊವ
ಲುಡಿಗೆಗಳಂ ಶಂಕರಂ ಕರಂ ಮೆಱೆದಿರ್ದಂ ॥ 162 ॥

ಆನವಮಯದೊಳ್,

ಸರಿದುದು ಪುಸಿವೇಷದ ತೆಱೆ
ಸುರಿದುದು ಕೆಯ್ನೀರ ತೆಱದೆ ಹೂವಱಿ ಸರಿಸಂ ।
ಬರಿದುದು ಜೀರಿಗೆಬೆಲ್ಲದ
ಪರಿಯಿಂ ಮುಳಿದಿಟ್ಟ ಭಸಿತವುದೆ ಮುದುವೆಯಪೋಲ್ ॥ 163 ॥

ಪಾರ್ವತೀಪರಮೇಶ್ವರ ವಿವಾಹವರ್ಣನಂ.

ಶ್ರೀಗಿರಿಜಾವಲ್ಲಭನಖ
ರಾಗವುದುರ್ಲಭನಖಾರನುಲಭಂ ಕಾಶಂ ।
ಣ್ಯಾಗಾರಂ ಭಕ್ತಿಯನೆವು
ಗೀಗೆ ಸದಾವರದ ಹಂವೆಯು ವಿರೂಪಾಕ್ಷಂ ॥ 164 ॥

ಆಗಳ್ಕಂಡಗನುತೆ ಬೆಲ
ಗಾಗುತೆ ಸರಿವರಿಸಿ ಕೊಳುತೆ ವಲ್ಕಲವಸನಾ ।
ಭೋಗವನತಿಲಜ್ಜಿತೆ ತಲೆ
ವಾಗಿದಳನುರಾಗವೇಱೆ ಪುಳುಕಿಸುತಿರ್ದಳ್ ॥ 165 ॥

ಅವಳೋಕನದಿಂ ನೆಳೆದಳ್
ಶಿವನಂ ಮನದಿಂದೆ ತೆಗೆದು ಬಿಗಿಯಪ್ಪಿದಳು ।
ತ್ಸವದಿಂ ಚಿತ್ತದೊಳಗನುತೆ
ತವಕಂ ಮಿಗೆ ಜಮ್ಬಿಸಿದಳಹಂಕಾರದೊಳಂ ॥ 166 ॥

ಆಸವಮಯದೊಳ್,

ಉಡುಪತಿಬಿಂಬವಮಂ ನಗುವ ನಿರ್ಮಳವಕ್ತ್ರಮನಾಸೆ ಮಿಕ್ಕು ಧೀಂ
ಕಿಡುವ ಕಟಾಕ್ಷವಾಲಿಗಳನುನ್ನತಪೀನಪಯೋಧರಂಗಳಂ ।
ಮೃಡನೊಸೆ ಪೀಕ್ಷಿಸುತ್ತ ನಿಲಲಾ ಪರ್ಣೆಯ ಪುಣ್ಯಹಸ್ತಮಂ
ಪಿಡಿದನಶೇಷದೇವಕುಳವೌಳಿವಿರಾಜಿತಪಾದಪಂಕಜಂ ॥ 167 ॥

ಅಂತು ಕೆಯ್ಯಂ ಪಿಡಿದು,

ಗಿರಿಸುತೆಯುಜ್ಜಿಲ್ಲಿಂ ನಡೆಯ! ತಾರಗಿರೀಂದ್ರನಿವಾಸದಲ್ಲಿಗ
ತ್ಯುರುತರಲೀಲೆಯಿಂದವೆನೆ ದೇವ ಗಿರೀಶ್ವರನಲ್ಲಿಯೆನ್ನನಾ ।
ದರದೊಳೆ ಬೇಡಿಯೂರ್ಜಿತವಿವಾಹವುದಚ್ಚರಿಯಪ್ಪ ಮೂಲ್ಕೆಯಂ
ಕರುಣಿಪುದೆಂದುದಂ ಸಲಿಸವೇಱಿಪ್ಪದು! ಬೇಲ್ಪೆನಿದಂ ಸದಾಶಿವಾ ॥ 168 ॥

ಎಂದಗಜೆ ನುಡಿಯೆ ಮಹಿಮಾ
ವೃಂದನೊಡಂಬಡುತೆ ಸುಖದೊಳರ್ದವಸರದೊಳ್ ।
ಬಂದು ರತಿ ಮುಕುಳಿತಾನನೆ
ನಿಂದುನ್ಮಳದಿಂದೆ ಮುಂದೆ ಮೈಯ್ಯಿಕ್ಕಿರ್ದಳ್ ॥ 169 ॥

ರತಿ ಮೈಯ್ಯಿಕ್ಕಿದೊಡೆ ಪಾ.
ಪ್ತೆತಿ ಬೆನ್ನೈಸದಳಧೀಕ! ಕೇಳ್ವಲಲನಾ ।
ಪತಿಯಪ್ಪ ಕಾಮನಂ ಪಳು
ಪತ! ನಿಮ್ಮಂ ಪಡೆದು ಕೊಡುವೆನೆಂದುಂ ನುಡಿದೆಂ ॥ 170 ॥

ಎನೆ ಕೇಳ್ದು ಶಂಕರಂ ಗಿರಿ
ತನಯಾಮನೋಹರಾಸ್ಯಮಂ ನಿರೀಕ್ಷಿಸಿ ನಗುತುಂ ।
"ನೆನೆದಾಗಳ್ ಕಾಮನನಂ
ಗನಾಗಿ ಕಾಡುತಿರ್ಕೆ! ರತಿಗೆ ಸುಖಸಂಪದಮಂ" ॥ 171 ॥

ಎಂದು ಪಾರ್ವತಿಯೊಡನೆ ನುಡಿಯುತ್ತುಂ ರತಿಗೆ ಕಾಮನಂ ಸಂಕಲ್ಪಜನ್ಮನಂ ಮಾಡಿ ಕೊಟ್ಟು ಗಿರಿಜೆಯುಂ ಗಿರಿರಾಜನಲ್ಲಿಗೆ ಪೋಗವೇೞ್ದು ದರ್ಪಕವಿಪಿನದಾವಾನಳಂ ಗಜಾಸುರಕುಂಭನಿರ್ಭಿನ್ನಸಿಂಹಂ ಜಲಂಧರಕುಮುದನಿಲಪೂರ್ಕರೂಪಂ ಲೂತಾಸುರಾಭ್ರ ವಿಲಯಾನಿಲಂ ಕೀನಾಶವಿನಾಶಕರಂ ತ್ರಿಪುರಭಂಜನಂ ಚತುರ್ದಶಭುವನಚಕ್ರವರ್ತಿ ಸರ್ವಬ್ರಹ್ಮಾಂಡಸಾರ್ವಭೌಮನಾಭೀಳಭಾಳಾಂಬಕಂ ಶೂಲಧರಂ ಕೈಲಾಸಕ್ಕೆ ಬಿಜಯಂ ಗೆಯ್ದನಿತ್ತಲ್,

ಗಿರಿಸುತೆ ಜಯವಿಜಯೆಗಳೊಡ
ನುರುತರಪುಷ್ಪಕವನೇಱಿ ಬರುತಿರ್ದಳ್ ಶಂ ॥
ಕರನ ವರಮೂರ್ತಿಯಂತಃ
ಕರಣಪ್ರಭೆಯೊಳಗೆ ತೊಳಗಿ ಬೆಳಗೆ ನಿರಂತಂ ॥ 172 ॥

ಇಂತು ಶಿವನಂ ನೆನೆಯುತುಂ ಹಿಮಾಚಳಮಂ ಕಳೆದು ನಿಜರಾಜಧಾನಿಯೆನಿಸಿ ದೋಷಧಿಪ್ರಸ್ಥಪುರವರಮಂ ಪುಗುತಿರ್ಪಾಗಳ್ ಪಾರ್ವತೀದೇವಿ ಲಬ್ಧವರೆ ಪ್ರಸನ್ನಮುಖಿ ಯಾಗಿ ತಪಮಂ ಬಿಟ್ಟು ಬರುತಿರ್ದಪಳೆಂಬ ಸಂತೋಷವಾರ್ತೆಯುಂ ಕರ್ಣಪರಂಪ ರೆಯಿಂ ಗಿರಿರಾಜಂ ಕೇಳ್ದು ಸಂತಸಮಂ ತಾಳ್ದು,

ಪುಳಕಂ ಮುನ್ನೇಱುತ್ತಿರೆ
ಬೞಿಕಂ ತಾನೆೞ್ದು ಸಕಳಪರಿಜನಸಹಿತಂ ।
ಕಳಗೀತವಾದ್ಯನೃತ್ತಂ
ಗಳ ಮುಂಗಳರವದನಡುವೆ ಗಿರಿಪತಿ ಬರುತುಂ ॥ 173 ॥

ಫಳತತಿಗಳ್ ತುಱುಗಿದ ಗುಡಿ
ಗಳ ಸೀಗುರಿಚಾಮರಂಗಳೊಟ್ಟಜೆಗಳ ಮಂ ।
ಗಳಕಳಶಂಗಳ ಕನ್ನಡಿ
ಗಳ ಲಲನೆಯರೊಳಗೆ ನಡೆದನಗಕುಲರಾಜಂ ॥ 174 ॥

ತರತರದೆ ನಡೆವ ಹಸ್ತ್ಯ
ಶ್ವರಥಪದಾತಿಗಳ ಸಂದಣಿಗಳಂ ನೋಡು ।
ತ್ತರಳುತ್ತುಬ್ಬುತ್ತುಣ್ಮಾ
ತ್ತುರವಣಿಸುತೆ ನಡೆದನಗಕುಲಾಧಿಪನೊಲವಿಂ ॥ 175 ॥

ಅಂತು ನಡೆದು ಬಂದು,

ಇದಿರ್ಗೊಂಡಂ ಗಿರಿರಾಜನೂರ್ಜಿತತಪೋವಿಸ್ತಾರೆಯಂ ಧೀರೆಯಂ
ಸದಲಂಕಾರವುನಾಂತ ಪಿಂಗಳಜಟಾಸಂಪನ್ನೆಯಂ ಚೆನ್ನೆಯಂ ।
ಮುದದಿಂ ವಲ್ಕಲವಸ್ತ್ರವಿಸ್ತರಿತಶೋಭಾಗಾತ್ರೆಯಂ ಸ್ತೋತ್ರೆಯಂ
ಪದೆದಾಕಾ! ಗಿರಿಜಾತೆಯಂ ಸಕಳಕಾಂತಿಸ್ತೋಮೆಯಂ ರಾಮೆಯಂ ॥ 176 ॥

ಅಂತಿದಿರ್ಗೊಂಡು,

ಭರದಿಂದಂ ನಡೆತಂದು ರಾಜಗೃಹವುಂ ಸಂತೋಷದಿಂ ಪೊಕ್ಕು ಭಾ
ಸ್ಕರಕೋಟಿಪ್ರಭೆಯಂ ಸಭಾಸದನದೊಳ್ ಬೀಱುತ್ತುಮಿರ್ಪುದ್ಧವಿ ।
ಪ್ಪರಮಂ ತುಷ್ಟಿಯಿನೇಱೆ ಶೈಳಪತಿಯುಂ ಕರ್ಪೂಣಿಯುಂ ಸ್ನೇಹದಿಂ
ದಿರೆ ಮೇನಾವಧು ಬಂದಳೀಕ್ಷಿಸಿದಳೀಪದ್ಗಾತ್ರೆಯಂ ಪುತ್ರಿಯಂ ॥ 177 ॥

ಅಂತು ಬಂದು ಕಟ್ಟಲ್ಕಿಱಿಂ ಮುಟ್ಟಿ ನೋಡಿ,

ತಾಯೆ! ತಪೋನಿರೊಧದೊಳೆ ಮೈಯ್ಬಡವಾದುದು! ಲೋಚನದ್ವಯ
ಚ್ಛಾಯೆ ಬಱಲ್ದುದಾನನಸರೋಜವಣಂ ಕಳೆಗುಂದಿತುಜ್ಜ್ವಳ ।
ಪ್ರಾಯಕುಚದ್ವಯಂ ಕೊರಗಿದತ್ತು! ಕಚಂ ಜಡೆಗಟ್ಟ್ವಿತಿಂತದ
ನ್ಯಾಯವಿದೇಕೆ ಪೋದೆ! ಸುತೆಯೆಂತಳವಟ್ಟುದರಣ್ಯವಿಭ್ರಮಂ ॥ 178 ॥

ಎಂದು ಮೇನಾದೇವಿ ಪಾರ್ವತಿಯಂ ನೋಡಿ ಕೋಡಿ ಬಾಡಿ ಬಱಲ್ದು ಕನಲ್ದು ಕಳೆಗುಂದಿ ನುಡಿಯುತ್ತಿ ರ್ಪಾಗಳ್,

ಗಿರಿಪತಿಯನುಮತಿಯಿಂ ಸಾಂ
ದರಿಯರ್ ನಡೆತಂದು ಪಾರ್ವತಿಯ ಜಡೆಗಳನೊ ।
ಪ್ಪಿರೆ ಬಿಡಿಸಿ ಕಚಭರಮನತಿ
ಭರದಿಂ ತಿರ್ದುತ್ತುಮಿರ್ದರನ್ನೆಗಮಿತ್ತಲ್ ॥ 179 ॥

ಶ್ರೀಕೈಲಾಸದೊಳರ್ದು ಪಿ
ನಾಕಿ ವಿವಾಹಾರ್ಥದಿಂದೆ ವರಮೂರ್ತಿಗಳಂ ।
ಲೋಕೋತ್ತವರಂ ಪುಣ್ಯ
ಶ್ಲೋಕರನಾಸಪ್ತಋಷಿಗಳಂ ನೆನೆಯಲೊಡಂ ॥ 180 ॥

ನೆನೆಯದ ಮುನ್ನಂ ಬಂದರ್
ವಿನುತಾಶೇಷರ್ ಜಟೂಧರರ್ ಭಸಿತಾಂಗರ್ ।
ಘನವಹ್ನಿಸೂರುಂಧತಿ ಪೆ
ನ್ನನೆ ಬರೆವರೆ ಸಪ್ತಋಷಿಗಳತಿಮುದದಿಂದಂ ॥ 181 ॥

ಬಂದ ಭವಂಗತಿಸುಖವುಂಖ
ದಿಂದಂ ಮೆಯ್ಯಿಕ್ಕಿ ಹರ! ಬರ್ದುಂಕಿದೆವೆನುತುಂ ।
ಸಂದಣಿಸಿ ಪುಳಕವೋಳ್ತಿರೆ
ನಿಂದಿರ್ದು ಶಶಾಂಕಮೌಳಿ ಪೆಸಸೆನೆ ಮತ್ತಂ ॥ 182 ॥

ಇರೆ ಕಂಡು ಕರುಣದಿಂ ಶಂ
ಕರನಾರುಷಿಗಳ್ಗೆ ಪೆಸಸಿದಂ ಪೋಪುದು! ಭೂ ।
ಧರನಾಥನಲ್ಲಿಗತ್ಯಾ
ದರವುಂ ಮಾಡುವುದು! ಜೇಡುವುದು! ಗಿರಿಸುತೆಯುಂ ॥ 183 ॥

ಎಂದೊಡೆ ಹಸಾದವೆಂದಾ
ನಂದಂ ಮಿಗೆ ಸಪ್ತಋಷಿಗಳನುನಯದಿಂದೆ ।
ಯ್ತಂದರ್ ಮಂಡಿತಪುಷ್ಪಕ
ವೃಂದಾರೂಢರ್ ನಗೇಶಪುರವುಂ ಪೊಕ್ಕರ್ ॥ 184 ॥

ಆನವುಯದೊಳ್,

ಮನದೊಳ್ ಪರವೋತ್ಸಾಹಂ
ಜನಿಯಿಸಿ ಗಿರಿರಾಜನೆಸೆವ ಋಷಿಗಳನಿದಿರ್ಗೊಂ ।
ಡನುನಯದಿಂ ತಂದುಚ್ಚಾ
ಸನದೊಳ್ ಕಳ್ಳರಿಸಿ ವಿನಯವಿನವಿತನಾದಂ ॥ 185 ॥

ಅಂತುವಿನಯದಿಂದೆಱಗಿ,

ಸುರಲೋಕದಲ್ಲಿ ಸುಖದಿಂ
ದಿರುತುಂ ಬರವೆಂತು ನಿವುಗೆ ದೊರಕೊಂಡುದಿದೆ ।
ಮ್ಮೀರುತರಭಾಗ್ಯವೆನುತ್ತುಂ
ಗಿರಿರಾಜಂ ಸಪ್ತಋಷಿಗಳಂ ಕೇಳಲೊಡಂ ॥ 186 ॥

ವರಮುನಿಗಳ್ ಮನದೊಂದಾ
ದರದಿಂ ನುಡಿದರ್ ಶಿವಂ ಶಶಾಂಕಧರಂ ಶಂ ।
ಕರನಭವಂ ನಿರಾಮಯಂ
ಗಿರಿಜೆಯ ಜೇಡುವೊಡೆ ತಿಳುಪಿ ಕಳುಪಿದನೆವ್ಮಂ ॥ 187 ॥

ಆತಂಗೆ ಚಂದ್ರಮೌಳಿಗ
ಜಾತಂಗೆ ನಿರಾಮಯಂಗೆ ನಿತ್ಯಂಗೆ ನತ ।
ವ್ರಾತಂಗೆ ಜೇಡೆ ಬಂದೆವು
ನೂತನಭುವನೈಕಭಾಗ್ಯವತಿ ಪಾರ್ವತಿಯಂ ॥ 188 ॥

ಚಂದ್ರಧರಂಗೆ ನತೋತ್ಪಲ
ಚಂದ್ರಂಗಂ ಗಣಸಮೂಹನಯನಚಕೋರಸು ।
ಚಂದ್ರಂಗಂ ಮುದದಿಂದಂ
ಚಂದ್ರಾನನೆ ಶಿವೆಯನೊಲ್ದು ಕುಡುಂ! ಗಿರಿರಾಜಾ ॥ 189 ॥

ಎಂದು ಸಪ್ತಋಷಿಗಳ್ ನುಡಿದಾಪ್ತವಚನವಂ ಕರ್ಣರಸಾಯನವಾಗೆ ಗಿರಿರಾಜಂ ಕೇಳ್ದು ಬಾಱಿ ಸಂದಣಿಸಿದ ಪುಳಕದಿಂ ದಳವೇಱೆ ಮನವುಲರ್ದು ಬುದ್ಧಿ ಪೆರ್ಚಿ ಯಹಂಕಾರಮಿರ್ಮಡಿಸಿ ಚಿತ್ತಂ ಚಿಗುರ್ತು ಅಳವಿಗಱಿದ ಸಂತಸವಂ ಸಂತೈಸಲಾಱದೆ ಹೆಚ್ಚಿ ಹಿಗ್ಗಿ ನಚ್ಚಿ ನುಡಿದಂ- ಮೇಘಾಗಮನಂ ಮಯೂರಂಗಸಹ್ಯಮೆಂ? ವಸಂತನ ಬರವು ಹೂಸಬನಕ್ಕೆ ಸೂಲ್ಲಮೆಂ? ಚಂದ್ರೋದಯಂ ಚಕೋರಿಗುಪದ್ರವಮೆಂ? ಆರ್ಕ ನೇಳ್ಗೆ ಚಕ್ರವಿಥುನಕ್ಕೆ ವಕ್ರಮೆಂ? ಕಾರ ತೋರವನಿ ಟಾದಗೆಗೆ ಭಾರಮೆಂ? ಶಿವನ ಕರುಣಮೆನಗಿದಿರ್ವರೆ ವಿಚಾರಮೆಂ? ಬರ್ದುಂಕಿದೆಂ! ಬರ್ದುಂಕಿದೆನೆನ್ನ ಭಾಗ್ಯದ ಜೆಳೆ ತಳರ್ತುದು! ಎನ್ನ ಪುಣ್ಯಲತೆ ಪೂತುದೆನ್ನ ಕುಲಕಲ್ಪವೃಕ್ಷಂ ಫಲಿತವಾದುದು! ಅಲ್ಲದೆಯುಂ, ರತ್ನಕ್ಕೆ ಕಾಂತಿಯೆರವೆ! ಚಂದ್ರಂಗೆ ಬೆಳ್ದಿಂಗಳುಪಚಾರಮೆಂ! ತರಣಿಗೆ ಕಿರಣಂ ಗಳ್ಸಾಧಾರಣಮೆಂ! ಕುಸುಮಕ್ಕೆ ಪರಿಮಳಂ ಪಡಿಸಣಮೆಂ! ಅಮೃತಕ್ಕೆ ಸ್ವಾದು ಸಂಕಲ್ಪಮೆಂ! ಕರ್ಪಂಗೆ ಪಾರ್ವತಿಯೆರವೆ! ಪನ್ನಗಾಭರಣನೆನ್ನಂ ಜೋಡಲ್ವೇಱುವೆ? ಗರುಬಿಯಿಂ ಸಾಂಗೀಕಾರದಿಂ ಕಾಮದಿಂ ಪ್ರೇಮದಿಂ ನಿಷ್ಕೈಯಿಂ ನೆಟ್ಟನೆ ಕೊಟ್ಟಿಂ ಕೊಟ್ಟೆನರಡಿಲ್ಲೆಂದು ಸತ್ಯವಚನವಂ ಸಂತೋಷದಿಂ ನುಡಿದು ಸಪ್ತಋಷಿಗಳ ಚರಣಕ್ಕೆ ಮತ್ತೆ ಮತ್ತೆಱಗುತ್ತೆ ಅವರಂ ಪರಿಸದಿಂ ಕಳುಹಿ, ಗಿರಿರಾಜಂ ಮಹೋತ್ಸಾಹದಿಂ ಮಹಾ ವಿವಾಹಮಂಟಪಾದಿಸಮಸ್ತವಸ್ತುಗಳಂ ವಿಸ್ತರಿಸುತ್ತಿರ್ದಂ. ಅದೆಂತೆಂದೊಡೆ:—

ಗಿರಿಪತಿ ಚಾರರಂ ಕಳುಪಿ ನಿರ್ಜರಲೋಕದ ವಿಶ್ವಕರ್ಮನಂ
ಬರಿಸಿ ನಯೋಕ್ತಿಯಿಂ ನುಡಿದು ಮನ್ನಿಸಿ ಜೋಡಿಪ್ಪುದನಿತ್ತು ಚಂದ್ರಶೇ ।
ಖರನ ಮದೀಯಪುತ್ರಿಯ ವಿವಾಹಕಶುಭೋಚಿತಮಂಟಪಾದಿಭಾ
ಸುರವರಚಿತ್ರಪತ್ರಕುಳಮಂ ನೆರೆ ನಿರ್ಮಿಪುದೆಂದು ಬೇಗದಿಂ ॥ 190 ॥

ಎನೆ ನಲಿದು ವಿಶ್ವಕರ್ಮಂ
ನೆನೆಯದ ಮುನ್ನಂ ಸಮುದ್ರಮುದ್ರಿತವಿಶ್ವಾ ।
ವನಿಪರಿಗತವಿಭವಾಸ್ಪದ
ಘನಮಂಟಪಮೆಸೆದು ಮುಂದೆ ತೋಱುತ್ತಾಗಳ್ ॥ 191 ॥

ಅದೆಂತೆಂದೊಡೆ:—ಮಹಾಮಂಟಪಂ ನಿರ್ಮಳಚಂದ್ರಕಾಂತಶಿಲಾತಳದೊಳ್ ಮೂರ್ಪೊಳೆದು ಶಿವನ ವಿವಾಹಕ್ಕೆ ನಾಗಲೋಕದಿಂ ನಾಗಕರ್ಣಳ್ ಕಳುಪಿದ ಅಭಿನವಮಂಟಪವಂ ಪಡೆದಂತಿರ್ದುದು. ಮತ್ತಮುದಲ್ಗೆದೆಯುಂ, ಉದಯಿಸುವ ತರುಣತರಣಿಯ ಕಿರಣ ಸಹಸ್ರಂ ಗಗನವಂ ಪೊತ್ತೆತ್ತುವಂತೆ ಜಗದಗಲಕ್ಕೆ ಸಾಲ್ದೆಗೆದು ನೀಳ್ದು ನಿಱಿಸಿದ ಮಾಣಿಕ್ಯಸ್ತಂಭಕೋಟಿಗಳಿಳಗೆಂಪುಗಳೊಪ್ಪುವ ಚಪ್ಪರದ ಮೇಲ್ಕಟ್ಟಂ ಹೊತ್ತೆತ್ತುತಿ

ರ್ದುವು. ಮತ್ತಮುಲ್ಲಿ ಕಟ್ಟಿದ ಪುಲ್ಲಯ ಪಟ್ಟೆಗಳಮೇಲೆ ಬಳಸಿದ ವೇಳುವ ಣ್ಣಿಗೆಯು ಚಾಕದ ವಿಳಾಸದ ಕಥಾಯಿಯ ಸುಚ್ಚವಿಯುನೀವ ಪಚ್ಚೆಯ ಪಟ್ಟೆಗಳ ಜೊಳಿಕೆಯು ಕಾಳಿಕೆಯು ನುಚ್ಚಿಳಗನೀವ ಪೊಂಬಟ್ಟೆಯ ಬಳ್ಳಿವಳಗಂ ಕಳುವ ಬೆಳ್ವ ಟ್ಟೆಯ ನೀಲದ ನಿರ್ಮಲೋದಕದ ಪಚ್ಚೆಯ ಪಾವಸೆಯು ಪುಷ್ಯರಾಗದ ಕರ್ಣಿಕೆಯ ಪದ್ಮ ರಾಗದೆಸಳ್ಗಳ ಪಲುವೆಗಳಿಲುಗಲವ್ವಳಿಸುವ ಜಳಜವೀಥಿಯ ಕೀಲಿಸಿದ ಮುತ್ತಿನ ಸೂಸ ಕದ ಕೈಕೊಳಿಸಿದ ಗೋವೇಥಿಕಸ್ತೋಮದ ಪವಳದ ಪಚ್ಚೆಯ ಪಜ್ಜಳಿಪ ವಜ್ರದ ಕೂಡಿದ ವೈಡೂರ್ಯದ ರಂಜಿಸುವ ಲತಾವಳಯ ಪಸರಿಸಿದ ಪತ್ರಾವಳಿಯ ಪೊಣ್ಮಿದ ಪುಷ್ಪಾವಳಿಯ ಸೂತ್ರಿಸಿದ ನೇತ್ರಾವಳಿಯ ಪವಣಿಸಿದ ಹಂಸಾವಳಿಯ ಸೂಸುವ ಶುಕಾ ವಳಿಯ ಸಕಲಸೌಂದರ್ಯವುನೆಳಿಕೊಂಡ ವೇಲ್ಕಟ್ಟಿನ ಪೆರಕೆವೆಳಗು ಮುಂಟಪದೊ ಳಗಂ ಪೊಲಗಂ ತೆಕ್ಕನೆ ತೀವೆ ಬಿಡದೆ ಸುಳಿವ ಉತ್ಸಾಹಪುರುಷರಿಂ ನಡೆಪಾಡುವ ಲಲನಾವಿಭವದಿಂ ಪ್ರಭುಜಳಧಿ ತೆರೆವುಸಗಿದಂತಿರ್ದುದು. ಮತ್ತಂ ಮುಗಿಲನಳ್ಳಿಲುವ ತೋರಣಸ್ತಂಭಂಗಳೊಳ್ ತೆತ್ತಿಸಿದ ಜಂತ್ರದ ಹಂಸಕೀರವುಯೂರಪಾರಾವತವಾರ ಣಂಗಳಂ ನವರತ್ನರಂಜಿತಮಾಗಿ ರವಿಮಂಡಲಮುಂ ಮುಂಡಾಡುವ ಸುವರ್ಣಕಳಶದ ರ್ಪಣಾಳಿಗಳಿಂ ರಯ್ಯಂಬಡೆದು ಸಕಳಜಗಕ್ಕೆ ತನ್ನ ಕಾಂತಿಯೆ ಕಣ್ದೆಱವಿಯೆಂಬಂ ತಿರ್ದ ಮಹಾತೋರಣದೊಳವೆಯ್ಯೊಳ್ ನೆರೆದು ಕುಳ್ಳಿರ್ದ ಸೂರ್ಯವಂಶದ ಸುಕುಮಾ ರರಿಂ ಸೋವುವಂಶದ ಭೂಮಿಪರಿಂ ರಾಜಿಸುವ ರಾಜಪುತ್ರರಿಂ ಮುಂಡಳಿಕರ ತಂಡದಿಂ ಸಾಮಂತರ ಸ್ತೋಮದಿಂ ಶಿಷ್ಯರ ಮುಂತಣದಿಂ ಸೇವ್ಯರ ತಿಂತಿಣಿಯಿಂ ಮುತ್ತೈದೆಯ ರೊತ್ತೊತ್ತೆಯಿಂ ಸುವಾಸಿನಿಯರ ಸಂದಣಿಯಿಂ ಸಕಳಾಗಮಕೋವಿದರಿಂ ಸರ್ವಶಾಸ್ತ್ರ ಪ್ರವೀಣರಿಂ ಸಹಸ್ರವೇದಿಗಳಿಂ ಗಳಿಗೆವಟ್ಟಲಂ ಪರೀಕ್ಷಿಸಿತ್ತುರ್ದ ನಕ್ಷತ್ರಪಾಠಕರಿಂ ಏಕಾದಶಕ್ಕೆ ಬಂದ ನವಗ್ರಹಂಗಳಿಂ ತೆಕ್ಕನೆ ತೀವಿರ್ದ ಮಹಾಮಂಟಪಮತಿವಿಸ್ತಾರ ಮನತಿಗಂಭೀರತೆಯನತಿಸೌಖ್ಯಮನತಾಶ್ಚರ್ಯಮನುರುತರಸಂಪದಮನತಿಸೌಂದರ್ಯ ಮನತಿಪ್ರಸನ್ನತೆಯನೆಳಕೊಂಡು ವರನ ಬರವಂ ಬಯಸುತ್ತಿರ್ದುದು.

ಆಪ್ರಸ್ತಾವದೊಳ್,

ಒಳಗೆ ಸುವಾಸಿನಿಯರ್ ಗಿರಿ
ಕುಳರಾಜತನೂಜೆಗೊಪ್ಪೆ ಸಿಂಗರಮಂ ಕೈ ।
ಕೊಳಿಸುತ್ತಿರ್ದರ್ ವರಕಶಿ
ಕಳಿಗೆ ಸುಧಾಕಿರಣಜಾಲಮುಂ ತುಡಿಸುವವೋಲ್ ॥ 192 ॥

ಅದೆಂತೆಂದೊಡೆ:—

ಭದ್ರಾನನೆಯರ್ ನವಕುಸು
ಮದ್ರವಯುತಜಲದೆ ಮುಜ್ಜನಕ್ಕೆಱೆಯುತೆ ಕ ।
ಲ್ಪದ್ರುಮಶಾಖಾನ್ವಿತೆಗೆ ಹ
ರಿದ್ರಾಪರಿಮಳಮನಂಗದೊಳ್ ಸಮನಿಸಿದರ್ ॥ 193 ॥

ನವಲತೆಯಂ ಕಾಮಮುದಿಯಿಂ
ದವೆ ಬಾಣಣಿಪಂತೆ ಕೂಡೆ ಧವಳದ್ಯುತಿಯಂ ।
ತವೆ ಪಸರಿಪ ದಿವ್ಯದುಕೂ
ಲವನುಡಿಸಿದರಗತನೂಜೆಗಂಗನೆಯರ್ಕಳ್ ॥ 194 ॥

ಸರಸಿಜದೆಸಲೊಳ್ ತರಣಿಯ
ತರುಣಾರುಣಕಿರಣವಲಯಮಂ ಕೈಕೊಳಿಪಂ ।
ತಿರೆ ಪದ್ಮರಾಗನಖಿಯರ್
ಗಿರಿಜೆಗೆ ನವರತ್ನಪಾದಮುದ್ರಿಕೆಯಿತ್ತರ್ ॥ 195 ॥

ವಾರಿರುಹನಾಳಮಂ ಕ್ರೇಂ ।
ಕಾರರವಂ ಸಹಿತವಂಜೆ ಮುತ್ತಿದುವೆನೆ ಮಂ ।
ಜೀರವನಳವಡಿಸಿದರಂ
ಭೋರುಹನೇತ್ರೆಗೆ ಭವಾನಿಗಾಭೂಷಿನಿಯರ್ ॥ 196 ॥

ಬಾಹುಲತಾಪಲ್ಲವಗಂ
ದೋಹದದೊಳಗೆ ಕುಸುಮಮುಂ ತೊಡರ್ಚುವ ತೆಱದಿಂ ।
ದಾಹಾ! ನಿಜಕರಶಾಖಾ
ವ್ಯೂಹಕ್ಕತಿಭದ್ರಮುದ್ರಿಕೆಗಳಂ ತೊಟ್ಟರ್ ॥ 197 ॥

ಪುರಹರನ ರಾಜಕಟಕಂ
ಗಿರಿಜೆಯ ಕೆಯ್ವೆತ್ತಿತೆಂಬುದಂ ಸೂಚಿಪವೋಲ್ ।
ವರಹಸ್ತದಲ್ಲಿ ರತ್ನೋ
ತ್ಕರವಿಳಸಿತಕಟಕಯುಗಳವಮಂ ರಂಜಿಸಿದರ್ ॥ 198 ॥

ಒದವಿದ ನವ್ಯಲತಾವ
ಧ್ಯದ ಕುಸುಮಾಳಿಯೊಳೆ ಮೊರೆವ ಮುಮ್ಮುದುಂಬಿಗಳಂ ।
ಮುದದಿಂ ಕೀಲಿಪವೋಲ್ ನೀ
ಲದ ರವೆಯುದ ಬಾಹುಪೂರಕಂಗಳನಿತ್ತರ್ ॥ 199 ॥

ಸುತ್ತದೆ ನೆಲೆಗೊಂಡಂ ಪರಿ
ವೃತ್ತೋನ್ನತಚಂದ್ರನಗಜೆಯಾಸ್ಯದೊಳೆಂದು ।
ನೃತ್ತತೆಯೊಳ್ ತಾರಗೆಗಳ್
ಸುತ್ತಿದುವೆನೆ ತೋರಹಾರಮಂ ರಂಜಿಸಿದರ್ ॥ 200 ॥

ಭೂಳಸ್ಥಳದೊಳ್ ಕಣ್ಗಡ!
ಕೂಲಿಗೆ ಪಾರ್ವತಿಗೆ ಕೊರಲೊಳೊಗೆದುದು ನಯನಂ ।
ಕೇಳಿಂಬಾಳಾಪಂ ಮಿಗೆ
ಮೇಳೈಸಿದರೈದಬಾಳಯುಂ ಬಾಲಕಿಯರ್ ॥ 201 ॥

ಜಳಜಾನನೆಯರ್ ವಿನಯೋ
ಜ್ಜ್ವಳಮುಖಿಯರ್ ಸಖಿಯರೊಲ್ದು ಗಿರಿಜಾನನದೊಳ್ ।
ನಳನಳಿಪಚ್ಚೆ ಮುಗಳ್ನಗೆ
ವೊಳೆತುದೆನಲ್ ಮೊಳೆವ ಮೂಗುತಿಯುನೊಸೆವಿತ್ತ್ ॥ 202 ॥

ಮೃಗಧರಬಿಂಬಂಗಳವೆರ
ಡಗಲದೆ ಕೊಂಡೆಸೆಯುತಿರ್ದಪುವು ಸರಸಿಜದೊಂ ।
ದಗಣಿತಕರ್ಕಕವನೆನ
ಲ್ಕಗಪುತ್ರಿಗೆ ನೀಲಮುತ್ತಿನೋಲೆಯುನಿತ್ತರ್ ॥ 203 ॥

ಬಿಂಬಾಧರೆಯರ್ ಬಂದಲ
ರಂಬಂ ಕತ್ತುರಿಯು ಸಾಣೆಯಿಕ್ಕುವ ತೆಱದಿಂ ।
ದಂಬುಜದಳಸದೃಶಾಂಬಕ
ದಂಬಿಕೆಗಂಜನಮನೆಚ್ಚಿದರ್ ನಂತಸದಿಂ ॥ 204 ॥

ಸಸಿಯಂ ತಳೆದೊಡೆ ಮುಕುಟದೊ
ಳಸಮಾಕ್ಷಂ ಗಿರಿಜೆ ಪುರುಡಿಸುತ್ತುಂ ತಳೆದಳ್ ।
ನೊಸಲೊಳ್ ಸಸಿಯಂ ತಾನೆನೆ
ಭಸಿತದ ತಿಲಕವನಲಂಕರಿಸಿದರ್ ಸತಿಯರ್ ॥ 205 ॥

ನೀಳಾಭ್ರಮನಂಭಃಕಣ
ಜಾಳದೆ ಬಾಸಣಿಸುವಂತೆ ಶಶಿಮುಖಿಯರ್ ಸ ।
ಲ್ಲೀಳೆಯೊಳಚಳತನೂಜೆಗೆ
ಬೂಳಿಗೆ ಸೂಸಕವನಿಕ್ಕಿದರ್ ಮುದದಿಂದಂ ॥ 206 ॥

ಸುರುಚಿರನೀಲಾಂಬುದದೊಳ್
ಸುರಧನುವಂ ನಿರ್ಮಿಪಂದದಿಂ ಲೋಕವನೋ ॥
ಹರೆಯರ್ ಶೈಳತನೂಜೆಗೆ
ವರರತ್ನದ ದಂಡೆದೊಂಡಿಲಂ ಸ್ಮೈತಿಟ್ಟರ್ ॥ 207 ॥

ಅಂತುಮಲ್ಲದೆಯುಂ,

ಅಂಬಿಕೆಯ ಸುಧಾವಯವಕ
ದಂಬದ ಚೆಲ್ವಿಂಗೆ ದೃಷ್ಟಿಯೂಗದ ತೆಱದಿಂ ।
ಬಿಂಬಾಧರೆಯರ್ ತುಡಿಸಿದ
ರೆಂಬಂತಿರೆ ಮೆಱೆದುವರರೆ! ಭೂಷಣತತಿಗಳ್ ॥ 208 ॥

ಇಂತು ನನೆಗಣೆಯನರ್ಚಿಪಂತೆ ಚಂದ್ರಕಳೆಯಂ ದಳವೇಱಿಪಂತೆ ಪುಣ್ಯಮಂ ಪುಟವಿಡುವಂತೆ ಶಂಕರನ ಪ್ರೇಮಮಂ ಸೀಮೆಗೊಳಿಸುವಂತೆ ಹರನ ಮನೋರಥಮಂ ಮುದವೇಱಿಪಂತೆ ಪಾರ್ವತಿಗೆ ಸರ್ವಸುವಾಸಿನಿಯರ್ ಸಿಂಗರಮಂ ಮಾಡಿ ತರುಣತರಣಿಯ ಕಿರಣಂಗಳ್ಗೋರನ್ನವುಪ್ಪರತಿಗಳನೆತ್ತಿಯೆತ್ತಿ ಪಿಂಗದೆ ಮುಂಗಳೋನ್ನತಿಯಂ ಕೊಂಡಾಡುತ್ತುಮಿರೆಯಿರೆ ಅತ್ತಲ್; ಸಪ್ತಋಷಿಗಳಂ ಸಂತೋಷವಾರ್ತೆಯಂ ಶಂಕರಂ ಕೇಳ್ದು ಹರ್ಷಮಂ ತಾಳ್ದು,

ಇತ್ತಲ್ ಕೈಲಾಸಾದ್ರಿಯೊ
ಳುತ್ತುಮಗಣನಾಥರೊಳಗೆ ಮೆಱೆದಿರ್ದಂ ದೇ ।
ವೋತ್ತುಂಗಂ ಪುಳಕಿತನಾ
ಗುತ್ತುಂ ಮುದವಣಿಗತನವನುಱೆ ನಟಿಯಿಸುತುಂ ॥ 209 ॥

ಆ ಪ್ರೋಸವುದವಣಿಗನಪ್ಪ ಪಶುಪತಿಯ ಸತ್ಪಾವಯವಂಗಳಂ ಬಣ್ಣಿಸಲಳವಲ್ಲದೊಡಂ ಭಕ್ತಿಯಿಂ ಬಲ್ಲಂತೆ ಬಣ್ಣಿಪೆಂ. ಅದೆಂತೆಂದೊಡೆ: --

ಜಡೆಗಳೊ! ಹೊಸಹೊಸಹವಳದ
ಕುಡಿಗಳೊ! ನವಕಾಂತಿಜಲದ ಮುಡುಗಳೊ! ಚೆಲ್ವಿ ।
ವ್ವೆಡೆಗಳೊ! ಶಿವಶಿವ! ಸುಕೃತದ
ಗುಡಿಗಳೊ! ಮಹಿಮೆಗಳ ನಟ್ಟನಡ ಗಳೊ! ಶಿವನಾ ॥ 210 ॥

ಭಾಳಂ ಸುರಚಿರಸುಕೃತವಿ
ಶಾಳಂ ವಿಷಮಾಕ್ಷವಿರಥಕಾಳಂ ವಿಮಳಂ ।
ಸ್ಥೂಳಂ ಶೃಂಗಾರರಸೋ
ದ್ವೇಳಂ ಕಂದರ್ಪಕುಸುಮಬಾಣಾಭೀಳಂ ॥ 211 ॥

ಪುಬ್ಬುಗಳೋ! ಗಣನಿಕರದ
ಗುಬ್ಬುಗಳೋ! ಹರಿವಿರಿಂಚಿಸುರಪದವಿಗಳೊಂ ।
ದುಬ್ಬುಗಳೋ! ಪುಣ್ಯಲತಿಕೆಯ
ಪಬ್ಬುಗಳೋ! ವದನವಿಭವದ ಕೊಬ್ಬುಗಳೋ ॥ 212 ॥

ಈಕಣ್ಗಾಕಣ್ಣಾಕ
ಣ್ಗೀಕಣ್ಣಿರಡಕ್ಕವೆರಡೆ ಪಡಿ! ವುತ್ತಿಲ್ಲೀ ।
ಲೋಕವ್ಯವಹಾರದ ನುಡಿ
ಯಿಾಕಣ್ಗುಪಮಾನವಿಲ್ಲವಿನ್ನುಂ ವುಮ್ಮುಂ ॥ 213 ॥

ಘ್ರಾಣಂ ವುಂಜುಳವುಖಕ
ಲ್ಯಾಣಂ ಜಗದೇಕಜೀವನೆನಿಸುವ ಪವನ ।
ಪ್ರಾಣಂ ಸರ್ವಾವಯವ
ತ್ರಾಣಂ ಪರಿವುಳಪರೀಕ್ಷೆಗಂತದು ತಾಣಂ ॥ 214 ॥

ಕರ್ಣಂಗಳ್ ನವಕಿರಣವಿ
ಕೀರ್ಣಂಗಳ್ ಕರಣಜನಸುಗೀತಾಮೃತಸಂ ।
ಪೂರ್ಣಂಗಳ್ ಪಂಚಾಕ್ಷರ
ವರ್ಣಂಗಳ್ ಫಣಿವಿತಾನವಿಸ್ತೀರ್ಣಂಗಳ್ ॥ 215 ॥

ವದನಂ ಕಾರುಣ್ಯಾಮೃತ
ಸದನಂ ಪ್ರಣತಪ್ರತಾನಜನನಾವಿದ್ಯಾ ।
ಕದನಂ ವುಳು! ಭೂಪುರೆ! ಜಿತ
ವುದನಂ! ಧವಳಪ್ರಕಾಶವುಂಡಿತರದನಂ ॥ 216 ॥

ಗ್ರೀವಂ ಘನಗರಳೋನ್ನತ
ಭಾವಂ ವಿವುಳಸ್ವಭಾವವಾನತಜನನ ।
ದ್ಭಾವಂ ವುಧುರರವಪ್ರ
ಸ್ತಾವಂ ಶಿವಶಿವ! ಸವುಸ್ತಜನತಾಜೀವಂ ॥ 217 ॥

ತೋಳ್ಗಳ್ ನೆನೆವರ ಚಿತ್ತದ
ಬಾಳ್ಗಳ್ ವರವೀಯಲೆಂದು ವಿುಗೆ ವುತ್ಸರಿಪಾ ।
ಸೂಳ್ಗಳ್ ರುದ್ರನ ನಚ್ಚಿನ
ಬಾಳ್ಗಳ್ ಗಿರಿರಾಜಪುತ್ರಿಯುಪ್ಪಿಂಗಾಳ್ಗಳ್ ॥ 218 ॥

ತ್ರಾಣಿಗಳತ್ಯಧಿಕವರ
ಕ್ರೌಣಿಗಳುಚಿತಕ್ರಿಯಾವಚೋಗುಣವಿಳಸ ।
ದ್ವಾಣಿಗಳಖಿಳಾಧಾರ
ಕ್ಷ್ಮೋಣಿಗಳಾಹಾ! ಸುಪಾಣಿಗಳ್ ಶಂಕರನಾ ॥ 219 ॥

ಉರವದು ಗಿರಿಜಾಕಾಂತೆಯ
ತೆಱವದು ತದ್ಧೃದಯಯೊಳಗದಿರವದು! ಪುಣ್ಯೋ ।
ತ್ಕರವದು ವರವದು ಸುಖಸಾ
ಗರವದು ಭುವನೈಕಚಾರುತರವದು ಹರನಾ ॥ 220 ॥

ಮಧ್ಯಂ ಗಿರಿಜಾಲೋಕನ
ಸಾಧ್ಯಂ ನಂಬಿರ್ದ ಸಕಳಗಣಸಂಕುಳಸಂ ।
ಬೋಧ್ಯಂ ಪೊರ್ದಿದಜಾಂಡಾ
ಬಾಧ್ಯಂ ಹರಹರ! ಸಮಸ್ತಭುವನಾರಾಧ್ಯಂ ॥ 221 ॥

ತೊಡೆಗಳೊ! ಹೈಮವತಿಯ ಕೌ
ಳಿಡೆಗಳೊ! ನವಕಾಂತಿಲಕ್ಷ್ಮಿ ಸಂತಸದಿಂದಿ ।
ರ್ಪ್ಪಿಡೆಗಳೊ! ರಂಭಾವಿಭವದ
ತಡೆಗಳೊ! ಸಿಂಗರದ ಕಡೆಗಳೋ! ಶಶಿಧರನಾ ॥ 222 ॥

ಮೇಲ್ಗಳೊ! ನವಸೌಂದರ್ಯದ
ಸಾಲ್ಗಳೊ! ಪಾರ್ವತಿಯ ಚಿತ್ತವುಂ ಸೋಲಿಸುವಾ ।
ಕೀಲ್ಗಳೊ! ಸಲ್ಲೀಲೆಯ ಪೊಂ
ಗೋಲ್ಗಳೊ! ಕಣಕಾಲ್ಗಳೋ! ಲಲಾಟೇಕ್ಷಣನಾ ॥ 223 ॥

ಚರಣಂ ಭಕ್ತಜನಾಂತಃ
ಕರಣಂ ನಂಬಿದರ ಹರಣವಿನಕುಲತೇಜಃ ।
ಕಿರಣಂ ತ್ರಿಲೋಕಶರಣಂ
ಶರಣಾಭರಣಂ ಸಮಸ್ತಮುಕ್ತಾವರಣಂ ॥ 224 ॥

ಎಂಬ ಪೊಗಟ್ಪೆಗೆ ಮಿಗಿಲೆನಿಸಿ ನೆಱೆವೆಱೆವೆ ಶಿವನ ಪುಣ್ಯಾಗಣ್ಯಲಾವಣ್ಯಮಯ ಸುಕುಮಾರಾವಯವಂಗಳಂ ಕಂಡು ಕೌತುಕಂಗೊಂಡು ನಂದೀಶ್ವರಂ ಬಂದು ಸುರಶಿ ರೋಮಾಲೆಯಂ ಪರಿಹರಿಸಿ ಮಣಿಕಿರೀಟವುಂ ಸಾರ್ಚಿ ಬಿಸುಗಣ್ಣಂ ಭಸಿತದಿಂ ಬಾಸಣಿಸಿ ಬಾಸಿಗವನಿಕ್ಕಿ ನಾಗಕುಂಡಲವುಂ ಕಳಚ್ಚಿ ಮಾಣಿಕ್ಯಾವತಂಸವುಂ ಕೈ ಕೊಳಸಿ ಕೂರ್ಮ ಶಿರವುಂ ತೆಗೆದು ತೋರಹಾರದೊಳ್ಕಲಿಸಿದ ಪದಕವುನಳವಡಿಸಿ ಸರ್ವೋಪವೀತವುಂ ನಡಿಚ್ಚಿ ಯಜ್ಞೋಪವೀತವುನವುರ್ಚಿ ಕೀರ್ತಿಮುಖವುಮುಖವುಂ ಕಳಚ್ಚಿ ಬಾಹುಪುರ ವುನೆಡೆಗೊಳಸಿ ಉರಗಕಂಕಣವುಂ ಕಳೆದು ರತ್ನಕಂಕಣವುಂ ತಿರುಂಪಿ ನೂಂಕಿ ಬ್ರಹ್ಮಕಪಾಲವುಂ ನಿಲಲೀಯದೆ ಪುಣ್ಯಪವಿತ್ರವುನಿಟ್ಟು ಖಟ್ವಾಂಗವುಂ ಬಿಡಿಸಿ ಮೂರು ಫಲವುನಿಂಬುಗೊಳಸಿ ಗಜಚರ್ಮವುನೋಸರಿಸಿ ನಿರ್ಮಳೋತ್ತರೀಯವುಂ ಪೊದೆ ಯಿಸಿ, ಪುಲಿದೊವಲಂ ನಿವಾರಿಸಿ ದಿವ್ಯದುಕೂಲವುನುಡಿಸಿ, ದೇವಕುಲವೆಱಿಲ್ವ ಬಾವು ಲಿಯ ತೊಡರಂ ಸಡಿಲಿಸಿ ಸಹಜಸೌಂದರ್ಯವುನಿರಿಸಿ ಇಂತು ಶಿವಯೋಗಕ್ಕೆ ಮುಕ್ತಿಯುಂ, ಮುಕ್ತಿಗೆ ವೈರಾಗ್ಯವುಂ, ವೈರಾಗ್ಯಕ್ಕೆ ಶಿವಜ್ಞಾನವುಂ, ಶಿವಜ್ಞಾನಕ್ಕೆ ಭಕ್ತಿಯುಂ,

ಭಕ್ತಿಗೆ ಪುಣ್ಯವುಂ, ಪುಣ್ಯಕ್ಕೆ ಸತ್ಕ್ರಿಯೆಯಂ, ಸತ್ಕ್ರಿಯೆಗೆ ಪಾವನಜನ್ಮವುನಲಂಕರಿಸುವಂತೆ ಪರಬ್ರಹ್ಮಬ್ರಹ್ಮಚರ್ಯಾಲಂಕೃತಿ, ಬ್ರಾಹ್ಮಣೋತ್ತಮೋತ್ತಮನಪ್ಪ ಶ್ರೀ ವಿರೂಪಾಕ್ಷಂಗೆ ಪರಮೈಶ್ವರ್ಯಪೂಜಿತಂಗ ನಾದವೂರ್ಗೆ ಶಿವಜ್ಞಾನಿಗೆ ವೇದಶಿಖಾಮಣಿಗೆ ಸತ್ಯಜ್ಞಾನಾಭರಣಂಗೆ ನಿತ್ಯಕಾಯಂಗೆ ನಿರಾಮಯಂಗೆ ವಿಶ್ವಾರಾಧ್ಯಂಗೆ ಶಾಶ್ವತಪ್ರತಾಪ ನಿಧಿಯೆನಿಪ ಕಂಕರಂಗೆ ನಂದೀಶಾದಿಗಣನಾಯಕಂ ಸಿಂಗರವುಂ ಮಾಡಿ ಹೊಸಾರ್ದು ನಿಂದು ನೋಡಲಂಜಿ ಕಣ್ಮುಚ್ಚಿ ಭಯದಿಂ ಶಿವಶಿವ ಜಯಜಯ ಜಯಜಯಯೆನುತ್ತುಮಿರೆ; ದಧೀಚಿದುರ್ವಾಸವಸಿಷ್ಠವಾಮದೇವಭೃಗುಕಶ್ಯಪಾದಿಮುನಿಜನಂಗಳ್ ಶಿವನ ಕಾಯಕಾಂತಿಯುಂ ಕಂಡು ನಿರೀಕ್ಷಿಸಲಮ್ಮದೆ ಚೇತೋದೃಷ್ಟಿಯಿಂ ನೋಡಿ,

ಮಿಗಿಲೆಂತುಂ ಜ್ಯೋತಿಗಂ ಪಾವಕರುಚಿಯೆಸವಾಜ್ಯೋತಿಗಂ ಪಾವಕಂಗಂ
ಮೃಗಲಕ್ಷ್ಮಜ್ಯೋತ್ಸ್ನೆಯೆಂತುಂ ಕರವುಸದಳವಾಜ್ಯೋತಿಗಂ ಪಾವಕಂಗಂ ।
ಮೃಗಲಕ್ಷ್ಮಜ್ಯೋತ್ಸ್ನೆಗಂ ಭಾಸ್ಕರರುಚಿ ಪಿರಿದಾಜ್ಯೋತಿಗಂ ಪಾವಕಂಗಂ
ಮೃಗಲಕ್ಷ್ಮಜ್ಯೋತ್ಸ್ನೆಗಂ ಭಾಸುರರುಚಿಗವುತರ್ಕ್ಯಂ ವಿರೂಪಾಕ್ಷತೇಜಂ ॥ 225 ॥

ಎಂದು ಪೊಗಳುತ್ತಿರ್ಪ ಸಮಯದೊಳ್ ಶಿವನ ವಿವಾಹಕ್ಕೆ ಸಕಲದೇವಕುಲಂ ಹರ್ಷದಿಂ ಬರುತ್ತಿರ್ಪಲ್ಲಿ,

ಸುರಪತಿಯಾನೆಯುಂ ಹುತವಹಂ ತಗರಂ ಸಮುವರ್ತಿ ಕೋಣನಂ
ನಿರುತಿ ವುನುಷ್ಯನಂ ಜಳಧಿಪಂ ನೆಗಱಂ ಪವಮಾನನೇಣನಂ ।
ಹರಸಖನಶ್ವವುಂ ಶಶಿಧರಂ ವೃಷನಂ ನಲಿದೇಱಿ ಬಂದರ
ತ್ಯುರುತರನಂದಿವಾಹನವಿವಾಹವುಹೋತ್ಸವದೇಲ್ಗೆ ಗಱ್ಕೆಱಂ ॥ 226 ॥

ಲೋಕೈಕಬಂಧುವೆನಿಪ ಪಿ
ನಾಕಿಯ ಪರಿಣಯವುಮಹೋತ್ಸವಕ್ಕತಿವುುದವುಂ ।
ಕೈಕೊಂಡು ಕೊಂಡುಕೊನೆಯು
ತ್ಸೇಕಾದಶರುದ್ರರಱ್ಕೆಱಂ ನಡೆತಂದರ್ ॥ 227 ॥

ವೇದಿನಿಯುವುನಂಬರವುುವು
ನಾ ದಿಕ್ಚಕ್ರವುುವುನಂಶುಕುಳದಿಂ ಬೆಳಗು ।
ತ್ತಾದಂ ಸಂತಸದಿಂದಂ
ದ್ವಾದಶರವಿಗಳ್ ವುಹೋಜ್ಜ್ವಳರ್ ನಡೆತಂದರ್ ॥ 228 ॥

ದೇವರ ದೇವನ ಗರಳ
ಗ್ರೀವನ ಭಕ್ತೈಕಬಾಂಧವನ ಸಕಳಜಗ ।
ಜ್ಜೀವನ ವುದುವೆಗೆ ನೆರೆದ
ಪ್ಪಾವನುಗಳ್ ನಡೆದು ಬಂದರತ್ಯುತ್ಸವದಿಂ ॥ 229 ॥

ನರತೇಜದಿಂ ಪವಿತ್ರ
ಚರಣಿಯಿನತಿಕವನವಿವುಳಸಾವುರ್ಘ್ಯತೆ(?)ಯಿಂ ।
ಕರವೆಸೆದನುನಯದಿಂ ರಾ
ಜಋಷಿ ಬ್ರಹ್ಮಋಷಿ ದೇವಋಷಿಗಳ್ ಬಂದರ್ ॥ 230 ॥

ಸಂಗಡಿಸಿದ ಶಂಖಂ ಚ
ಕ್ರಂ ಗದೆ ಶಾರ್ಙ್ಗಂಗಳೆಸೆಯೆ ಗರುಡಾಸನದೊಳ್ ।
ಪಿಂಗದೆ ಬಂದಂ ಯುತಚತು
ರಂಗಂ ಮಾಧವನ-ಮಾಧವಂ ಮೆಚ್ಚುವಿನಂ ॥ 231 ॥

ಭರದಿಂದಂ ತನ್ನ ಬಲಂ
ಪೆರಸೊಲವಿಂ ಹಂಸೆಯೀಱ್ ತೊಳತೊಳಗುತ್ತುಂ ।
ಭರವಸದಿಂ ನಡೆತಂದಂ
ಸರಸಿಜಭವನಭವನಭಯವಿಹಾಯಿ ಸರಾಗಂ ॥ 232 ॥

ಆಂತುಮಲ್ಲದೆಯುಂ,

ಸುರರ ಬಲಂ ಹರಹರ! ಖೇ
ಚರರ ಬಲಂ ಭಾಪು! ಕಿನ್ನರರ ಬಲವಾಹಾ! ॥
ಗರುಡರ ಬಲವರರೇ! ಸಿ
ದ್ಧರ ಬಲವಮ್ಮಮ್ಮ! ಭಲರೆ! ಗಂಧರ್ವಬಲಂ ॥ 233 ॥

ಆಂತು ಬಂದ ಬಲವುಂ ಕಂಡು ಮುದನಮರ್ದನಂ ನೋಡುತಿರ್ಪಾಗಳ್ ಬಿರುದಿನ ಗ್ಗದ ಗಣಂಗಳ್ ಬರುತಿರ್ದರದೆಂತೆಂದೊಡೆ:—

ತವುತವುಗುಗ್ರರುದಗ್ರರ್
ತವುತವುಗೆ ವಿಚಾರಸುರರಭವರ್ ವಿಭವರ್ ।
ತವುತವುಗಾಪ್ತರ್ ಗುಪ್ತರ್
ತವುತವುಗೆ ನವುಸ್ತಲೋಕವಂದ್ಯರನಿಂದ್ಯರ್ ॥ 234 ॥

ಸಿಡಿಲಂ ಸುರ್ಗುವ ಶೇಷನಂ ಪೊಸೆವ ದಿಙ್ನಾಗಂಗಳಂ ಪೊಯ್ದು ಘೀ
ಳಿಡಿವೇಱುಂ ಕಡಲಂ ತುಱುಂಕುವ ಕುಲಾದ್ರಿಸ್ತೋಮಮುಂ ಕೆಲ್ಲಣಂ ।
ಪೊಡೆಸೆಂಡಾಡುವ ಭೂಮಿಯಂ ಹಿಲ್ಲಿವ ಚಂದ್ರಾದಿತ್ಯರಂ ವಿಸ್ಮಿಂಟುತಿ
ರ್ಪುಡುಸಂತಾನಮನಾರ್ದುದಿಚ್ಚಿರ್ಚಿವ ಗಣಂಗಳ್ ಬಂದರಾನಂದದಿಂ॥ 235 ॥

ಇಂತಿವರ್ ಮೊದಲಾದ ಗಣೇಶ್ವರಬಲಸಹಿತಂ ಇಳಾತಳವುಂ ದಿಕ್ಚಕ್ರವುಂ ನಭೋಭಾಗವುಂ ತೆಕ್ಕನೆ ತೀವಿ ಬ್ರಹ್ಮಾಂಡವಿಂಬಿಲ್ಲಿಂಬು ಸಂಭ್ರಮವಿಂಬುವಡೆಯೆ ಬಂದು ನಿಂದ ಸಕಲಸುರಸಮೂಹವುಂ ವಿರೂಪಾಕ್ಷಂ ಕಂಡು ಮನಂಗೊಂಡು ಮುಂದಿರ್ದ ನಂದೀಶ್ವರನ ಮುಖವುಂ ನೋಡಿದಾಗಳ್,

ನಯದಿಂದೆಲ್ಲ ಸತಾಸ್ಯನಾಗಿ ವಿಪುಳಶ್ವಾಸಂಗಳೊಳ್ ದೇವಕೋ
ಟಿಯನಾಂದೋಳವನಾಡಿಸುತ್ತೆ ನಡೆತಂದುಚ್ಚಪ್ರಭಂ ಧರ್ಮಸಂ ।
ಜಯನಾನಂದವುಯಂ ಮಹೇಶನ ಸುಖಾವಾಸಾನ್ವಿತಂ ದಿಟ್ಟಿವಾ
ರಿಯು ಧೀರಂ ವೃಷಭೇಂದ್ರನಪ್ರತಿಮಕಾಯಂ ಮುಂದೆ ನಿಂದಿರ್ದುದುಂ ॥ 216 ॥

ಹರಿ ಜಯ! ಜೀಯಜೀಯೆನೆಯಜಂ ಮುಗ್ಧುಭಾಪೆನೆ ದೇವವೀಧಿ ದೇ
ವುರೆವುರೆ! ಸುರರಾಜರಾಜ ಧೀರುರೆಯೆನೆ ಸನ್ಮೌನಿಗಳ್ ಸರಾಗದಿಂ ।
ಹರಹರ ರುದ್ರ ಭದ್ರವೆನೆ ನಿಂದ ಗಣಾವಳಿಯಲ್ಲಿಯುಂ ಮುದೀ
ಶ್ವರ ಭಲರೇ! ಕಪರ್ದಿಯೆನೆ ನಂದಿಯನೇಱಿದನೆಮ್ಮ ಶಂಕರಂ ॥ 217 ॥

ಇಂತು ವೃಷಭಾರೂಢನಾಗಿಕೂಡೆ ನೆರೆದ ಗರುಡರ ಗಡಣದ ಗಂಧರ್ವರ ಸಂದಣಿಯ ಸಿದ್ಧರ ಪದ್ಧತಿಯ ವಿದ್ಯಾಧರರ ವೀಥಿಯ ಕಿನ್ನರರ ವ್ರಜದ ಪನ್ನಗಪ್ರಕರದ ಕಿಂಪುರುಷ ಸ್ತ್ರೋಮದ ಯಕ್ಷರ ಪಜ್ಜೆಯ ರಾಕ್ಷಸರ ತಿಂತಿಣಿಯ ಮಯೂರರ ಮಂತಣದ ಗುಹ್ಯಕರ ಯೂಥದ ಖೇಚರರ ತೆಕ್ಕೆಯ ಮನುಗಳ ವಂಗಡದ ಮುನಿಗಳ ಗೊಂದಣದ ಸುರರ ನೆರವಿಯು ದೇವಕಾಮಿನೀನಿಕರದ ದಿಕ್ಪಾಲಸಿಕಾಯದ ಹರಿವಿರಿಂಚಿಗಳ ಪರಿವಿಡಿಯ ಬಿರುದುಗಣಂಗಳ ತೆರಲ್ಕೆಯ ರವಿಮಂಡಲದ ಹಿಂಡುಗಳ ಶಶಿಮಂಡಲದ ಸಾಲ್ಗಳ ಕುಂಜರನಿಕರದ ತುರಂಗಸಂಘದ ರಥಪ್ರತಾನದ ಪದಾತಿಬಲದಿರ್ಕೆಲದೊಳ್ ದಿಕ್ಕರಿಗಳನೇಲೆ ಮಿಕ್ಕುಬರ್ಪ ದೇವಾಂಗವಸ್ತ್ರವಿತಾನದ ಪಟ್ಟೆಗಳೊಟ್ಟೆಜೆಯು ಸಾದಿನ ಪೆಟ್ಟಿಗೆಗಳ ವೃಗವುದದ ಕೊಂಬುಗಳ ಕರ್ಪೂರಕರಂಡಕನಿಕರದ ಪನಿನೀರ ಭಾಜನಂಗಳ ಕತ್ತುರಿಯ ಭಾಂಡಂಗಳ ಬಾವನ್ನದೊಟ್ಟಿಲ್ಗಳ ರತ್ನಾಭರಣರಾಶಿಗಳ ಚಿಂತಾಮಣಿಯ ಮುಡಿಪುಗಳ ಪರುಷದ ಕಣಿಯ ತನತನಗೆ ಪಿಡಿದು ಬರ್ಪ ಬಿಳಿಯ ಕರ್ಬಿನ ನಡೆವನದ ಪುಣ್ಯಫಲವ್ರಾತದ ಸುರತರುವಿನಾರವಿಗಳ ಸುರಭಿಗಳೋಯರದ ಮುಂದಣ ವೃಷಭಧ್ವಜದ ಪರ್ವಣದ ತಳರ್ಗಳ ಕಳಶಂಗಳಂ ಪಿಡಿದು ಮೆಲ್ಲಮೆಲ್ಲನಡಿಯಿಡುವರುಂಧತಿಯನಸೂಯಾದೇವಿ ಗಾಯತ್ರಿ ಸಾವಿತ್ರಿ ಸರಸ್ವತಿ ಶಚೀದೇವಿ ಲಕ್ಷ್ಮಿರೋಹಿಣಿಯರಾದಿಯಾದ ಪರಮಪತಿವ್ರತಾವಿತಾನದ ಪೊಡೆವ ಭೇರಿಯು ಸೂಳ್ಪೈಪ ನಿಸ್ಸಾಳದ ಪೂರಯಿಪ ಶಂಖದ ಬಿರುದೆತ್ತಿ ಕರೆವ ಕಹಳೆಗಳ ವೊಱಗುವ ಮುನ್ದಳಿಯು ಸುಗತಿಯನುಗುಳ್ವಿಕರಡೆಗಳ ಮೇಳೈಪ ಕಂಸಾಳದ ಗರ್ಗರಿಪ ಗಿರ್ಗಟೆಗಳ ಪೊಣ್ಮುವ ತಾಳದ ಉಣ್ಮುವ ಗಾನದ ಭೃಂಗಿಯ ನರ್ತನದ ಭೋರೆಂಬ ರವದ ಸವಸ್ತವಸ್ತುವಿಸ್ತರದ ನಡುವೆ ಧವಳಾತಪತ್ರದ ಭುವನಾಶ್ರಯಂ ಜಡೆವುಡಿಯ ಬೆಡಂಗಂ ಮುಕುಟದ ಮನೋಹರಂ ಶಶಿಕಳೆಯ ಸೊಬಗಂ ಬಾಸಿಗದ ಭಾಗ್ಯನಿಧಿ ಕರ್ಣಾವತಂಸದ ಕವುಸೀಯಂ ಕಪೋಳದ ವಿಪುಳಂ ಭ್ರೂಲತೆಯ ಭಾವಕಂ ಅಲರ್ಗಣ್ಗಳ ಸುಲಲಿತಂ ಶ್ರೀವನದ ಪಾವನಂ ಭೂರಿಭುಜದ ಮಾರಾರಿ ನಳತೋಳ್ಗಳ ನಾಯಕಂ ಕರತಳದ ಕಾಮಧೇನು ಕಂಕಣದ ಕಳಾವಿಧಂ ಹಸ್ತಪವಿತ್ರದ ಸುಲಭಂ ಮೂಧೂಪಲದ ಮಹಾನಿಧಿ ಹಾರದ ಹರ್ಷಮಯಂ ಪದಕದ ನದಮಳಂ ಜಾಹ್ನವಿನಸ್ಮಕುಟಂ ನಾಗಧಾರದ ಪನ್ನಗಭೂಷಣಂ ಪವಿತ್ರದ ಪರಮಾತ್ಮಂ ಧವಳೋತ್ತರೀಯದ ವಿರಳಂ ಪರಿವಸನದ ಪುಣ್ಯಾಧಿಕಂ ನಂದಿವಾಹನದ

ನವೀನಂ ಭಸಿತದ ಹೊಸವುದವಣಿಗನೆನಿಪ ಶ್ರೀಪಂಪಾವಿರೂಪಾಕ್ಷಂ ತನ್ನ ಕಾರುಣ್ಯ ಕಟಾಕ್ಷಕ್ಕೆ ಕೈವುುಗಿವ ನಾಲ್ಕುಂ ದೆಸೆಯ ದೇವಕುಲಕ್ಕೆ ಕರುಣಿಸುತ್ತುಂ ಪ್ರಸನ್ನ ವುುಖಂ ಸುಖಾವರಣಂ ಕರ್ವಂ ಸರ್ವಸಂಭ್ರವುದಿಂ ಬರೆ ನಡೆತಂದಿದಿರ್ಗೊಳ್ವ ಸುವಾಸಿನಿಯರೋಯರದಿಂ ನಿವಾಳಿಗಳಂ ಪಿಡಿದು ನಿವಾಳಿಸಲ್ ವುತ್ತವುಲ್ಲಿಂ ವುುಂದೆ ಕಾಲಾಂಗನೆಯರ್ ಸೂಸುವ ವುುತ್ತಿನ ಸೇಸೆಗಳನಾದರದೊಳಾನುತ್ತುಂ ನಂದೀಶ್ವರನ ಜೆನ್ನಿಂದ ವನಿತಳಕ್ಕವತರಿಸುತ್ತುಂ ಪ್ರವುಥಗಣಂಗಳ್ ಕೈವುಯಿಂ ಕೈಗುಡೆ ವುಹಾವಿವಾಹ ವುಂಟಪವುಂ ಪುಗುತಿರ್ಪಾಗಳ್ ಕಂಡು ಹರ್ಷವುನೆಡೆಗೊಂಡು ಮೆಯ್ಯಿಕ್ಕಿ ನಿಂದ ಮೇನಾದೇವಿಗಂ ವೂವನಪ್ಪ ಗಿರಿರಾಜಂಗಂ ಕಾರುಣ್ಯವುನೀಯುತ್ತುಂ ಸಿಂಹವಿಷ್ಟರ ವುನವಪ್ಪಂಭಿಸಿ ಸವುಯೋಚಿತಾವ್ಯತಾನ್ನವುನುಂಡು ವುಹಾವಿಭವವುಂ ಕಂಡು ವುಧುಪರ್ಕವುಂ ಕೈಕೊಂಡು,

ಇರೆ ಹರಿಯಜರನುವಿುಸುತುಂ
ಪರವುಕುಭಾಕರವುಹೂರ್ತವುಲಿಲಿ ಸವಿೂಪಂ ।
ಕರುಣಿಪುದೆನೆ ವುಂಗಳವಾ
ಗ್ವಿರಚನೆಯಂ ಕೇಳ್ದು ಭೋಂಕನೆಳ್ದಿಂ ರುದ್ರಂ ॥ 238 ॥

ಅವುವು! ವರವೂರ್ತಿ ನವವಿ
ಭ್ರವುವಿಸ್ತರನವೃತಶೀಲನಾನಂದವುಯಂ ।
ವುವು ಕರ್ತಂ ವುವು ಭರ್ತಂ
ಸುವುಹೂರ್ತಂ ಪತ್ತೆ ಸಾರ್ವವೋಲ್ ನಡೆತಂದಂ ॥ 239 ॥

ಇಂತು ನಡೆತಂದು ವಿವಾಹಗೇಹದೊಳಪೊಕ್ಕ,

ವುುತ್ತೈದೆಯರೊತ್ತೊತ್ತೆಯ
ನೊತ್ತರಿಸುತೆ ಬೆಳಗಿನೊಳಗೆ ಹೊಸಬೆಳಗಂ ಸೂ ।
ಸುತ್ತುಂ ಸವಿನೋಟವುನೀ
ಯುತ್ತುಂ ಜವನಿಕೆಯು ನೆಲೆಗೆ ಶಿವನೆಯ್ತಂದಂ ॥ 240 ॥

ಅಸವುಯದೊಳ್ ಪಾರ್ವತೀದೇವಿ ನಿಟ್ಟೈದೆ ವುೆಟ್ಟುಕ್ಕಿಯುಂ ವುೆಟ್ಟ ತೆಱೆಯುಂ ವುಱೆಗೊಂಡು ನಿಂದಿರ್ದಲ್ಲಿ,

ನಲ್ಲರ ನಡುವುಪಚಾರಂ
ಸಲ್ಲಲಿತೇಕ್ಷಣದ ನಡುವೆ ಪಕ್ಷ್ಮಪುಟಂ ಸಂ ।
ಫುಲ್ಲರದವುಧ್ಯದೊಳ್ ವಿುಗೆ
ಸೊಲ್ಲಿರ್ಪಂತಿರ್ದುದಲ್ಲಿ ತೆಱೆ ಹರನಿದಿರೊಳ್ ॥ 241 ॥

ಅಂತಿರ್ದ ಜವನಿಕೆಯಾನತಿಸ್ನೇಹದಿಂ ನೋಡಿ,

ಅವಿಭೇದಪ್ರಕೃತಿಗಳೆನಿ
ಪವಯವದಿಂದೊಪ್ಪುವರ್ಧನಾರೀಶ್ವರರೊಳ್ ।
ಜವನಿಕೆ ನಡುವೊಡ್ಡಿತು! ಕಾ
ಲವಶದಿನಾವಂಗವೂವುದಾಗದು! ಧರೆಯೊಳ್ ॥ 242 ॥

ಇಂತೆಂಬ ನಾಣ್ನುಡಿಗೆ ನೆಲೆಯಾಗಿ,

ಬೆಳಗಿನ ಬೀಜಾವಳಿಯೊ
ರ್ಮುಳಿಯೋ! ನಕ್ಷತ್ರರಾಶಿಯೋ! ನವಪುಣ್ಯಾಂ ।
ಗಳ ಪುದುವೊ! ಚಂದ್ರಿಕಾತಂ
ಡುಲವೋ! ಎನೆ ತೊಳಗಿ ತೋರ್ಪ ವೆಂಟ್ಟುಕ್ಕಿಗಳಂ ॥ 243 ॥

ಕಾಂತಿವಯಂ ಕಶಿಕೂಡಂ
ಶಾಂತಂ ನವಭೋಗಿಯೆನಿಪ ಲೀಲಾವಾಸಂ
ಸಂತಂ ಸುರುಚಿರಹರ್ಷವ
ಯಂ ತಡೆಯದೆ ನೆಟ್ಟಿ ನಿಂದ ಸವನಂತರದೊಳ್ ॥ 244 ॥

ಹರಿಯಂ ಸರಸಿಜಭವನುಂ
ಪುರುಹೂತನುಮೆಸೆವ ಋಷಿಗಳುಂ ಗಣಕುಲವುಂ ।
ಗಿರಿಜೇಶನ ಗಿರಿಜೆಯ ಭಾ
ಸುರಪರಿಧಾನದ ಸವಿೂಪದೊಳ್ ನಿಂದಾಗಳ್ ॥ 245 ॥

ಕಳಕಳವಂ ನಿವಾರಿಸುತುಮಾಯತವೇ! ಯೆನಲಾಯತಂ! ಲಸ
ದ್ಗಳಬಳವಂ ವಿವರ್ಜಿಸುತುಮಾಯತವೇ! ಯೆನಲಾಯತಂ! ನಿರಾ ।
ಕುಳಿತಮನಂ ಬೃಹಸ್ಪತಿ ಸಮಾಯತವೇ! ಯೆನಲಾಯತಂ! ಮನಂ
ಗೊಳಿಪ ಮಹಾವುಮಹೂರ್ತದೊಳಗಾಯತವೀಯೆನೆ ತಪ್ಪದಾಯತಂ ॥ 246 ॥

ಎಂಬ ಸಮಯದೊಳ್,

ಅವುರಗುರು ಸಕಳವೇದಾ
ಗವುಕೋವಿದನೊಲ್ದು ಭಕ್ತಿಯಿಂದಂ ಪುಣ್ಯಾ ।
ಹವೆನುತ್ತುವಿತ್ತ ರಾಜ
ತ್ಸುವುಮುಹೂರ್ತಂ ಬಂದು ತಱೆಯನೋಸರಿಸಲೊಡಂ ॥ 247 ॥

ಕರಡಿಗಳ ರವಂ ನಿಸ್ವ
ಳರವಂ ಭೇರೀರವಂ ಮೃದಂಗರವಂ ದೇ ।
ವರ ಹೂವುಟೆಗಳ ಭೋರೆಂ
ಬ ರಟಂ ವುಂಗಳರವಂಗಳುಣ್ಮಿದುವಾಗಳ್ ॥ 248 ॥

ಆನಿರೆ ಮತ್ತೊರ್ವಳ್ ಗಡ!
ತಾನಿರ್ಪಳ್ ಜಡೆಯೊಳೆನುತೆ ಮುಳಿದಿಡುವಂತಾ ।
ಮಾನಿನಿ ಜೀರಿಗೆಬೆಲ್ಲದೊ
ಳಾನುತೆ ಶಿವನುತ್ತಮಾಂಗವಂ ಪದೆದಿಟ್ಟಳ್ ॥ 249 ॥

ವ್ಯಡನಾಗಳ್ ಗಿರಿಜೆಯು ಚೆ
ಲ್ವಿಡಿವ ವೊಗಂಗಂಡು ಸಾತ್ವಿಕಂ ಕೈಕೊಂಡೊ ।
ಲ್ದಿಡುವಾಜೀರಿಗೆಬೆಲ್ಲಂ
ಸಡಿಲ್ದು ಕಂಪನದೆ ಬೀಳ್ದುವಗಜೆಯ ಪದದೊಳ್ ॥ 250 ॥

ಅನಂತರದಲ್ಲಿ,

ಅಱಿಸುತ್ತಿರೆ ಫಲಕಾಲದೊ
ಳುಱೆ ನಿನ್ನನೆನುತ್ತೆ ಶಿವನ ಮುಕುಟೇಂದುಗೆ ತಾಂ ।
ತುಱುಗಿದ ತಾರಗೆಯೆಂಬಾ
ತೆಱದಿಂ ತಂಡುಲವುನಗಜೆ ಸುರಿದಳ್ ಶಿರದೊಳ್ ॥ 251 ॥

ಆಗಳ್,

ಪರಮತಪೋನಿಧಿಯೆನಿಸಿದ
ಗಿರಿಜೆಗೆ ಪುಣ್ಯಾಂಬುವಿಂದವಃಭಿಷೇಕವುನೊ ।
ಪ್ಪಿರೆ ಮೂಡುವ ತೆಱದಿಂ ಕಂ
ಕರನವುಲಿನತಂಡುಲಂಗಳಂ ತವೆ ಸುರಿದಂ ॥ 252 ॥

ಆಸಮಯದೊಳ್,

ನಲಿನಲಿದು ಬಂದು ಗಿರಿಪತಿ
ಯೊಲವಿಂದಂ ಗಿರಿಜೆ ಸಹಿತವುಂ ನಾವೆಲ್ಲಂ ।
ನೆಲೆದೊಱ್ತೊರ್ ಬಱೆದೊಱ್ತೊರ್
ನಲಿದೊಱ್ತೊರ್ ನಿವುಗೆನುತ್ತೆ ಧಾರೆಯನೆಱೆದಂ ॥ 253 ॥

ಗಿರಿಜಾತೆಯ ಸಕಲಗುಣಂ
ಸರ! ನಿವ್ಮಂ ಸುತ್ತು ಗೀತೆಱೆದೊಳೆಂಬಂತೊ ।
ಪ್ಪಿರೆ ಸುತ್ತಿದರತಿವ್ಯಮುತರ
ಸುರುಚಿರನವಕಾಂತಿಯೆಸೆವ ಗುಣವುಂ ಗುಣವುಂ ॥ 254 ॥

ಐದುಂವದನನ ಕಾಂತೆಯ
ನೈದಿ ಪತಿವ್ರತೆಯರಧಿಕತರವುದೆದಿಂ ಮು ।
ತ್ಕೈದೆಯೆ! ನೆಱೆಯೈದೆಯೆ! ನಲೆ
ಯೈದೆಯೆ! ನಿಟ್ಟೈದೆಯೆಂದು ಪರಸುತ್ತಿರ್ದರ್ ॥ 255 ॥

ಇಂತು ವಿವಾಹವಿಭ್ರಮಮಂ ಕೈಕೊಂಡು ಗಿರಿಜೆಯ ಕರತಳಮಂ ಪಿಡಿದು ಸೋಮಂ ಸೋಮಧರಂ ವ್ಯೋಮಶಿಖಂ ಹೋಮಸ್ಥಳಕ್ಕೆ ನಡೆತಂದಿಕ್ಕಿದ ಹಸೆಯ ಮೇಲೆ ಪಶುಪತಿ ಕುಳ್ಳಿರೆ ಮಂತ್ರತಂತ್ರಯಂತ್ರಸಿದ್ಧನಪ್ಪ ಪರಮೇಷ್ಠಿ ಹರನನುಜ್ಞೆಯಿಂ ಸ್ಥಂಡಿಲಮನಲಂಕರಿಸಿ ಮೊಲ್ಲಮೊಲ್ಲನುಲ್ಲೇಖನಂಗೆಯ್ದಗ್ನಿಯಂ ಪ್ರತಿಷ್ಠೆಯಂ ಮಾಡಿ ಬ್ರಹ್ಮರ್ಷಿ ದೇವರ್ಷಿ ವಿಪ್ರೋತ್ತಮರನುಮತದಿಂ ಪ್ರಾಣಾಯಾಮಂಮಂತ್ರಿಸಿ ಸಮಿತ್ಪರಿಸ್ತರಣಂ ಪಾತ್ರಾಸಾಧನಂ ಆಜ್ಯಸಂಸ್ಕಾರಂ ಸ್ರುಕ್‌ಸ್ರುವಸಮ್ಮಾರ್ಜನಂ ದೂರ್ವಾಯುಪವಹಸ್ತಬಂಧನಾದಿ ಸತ್ಕ್ರಿಯೆಗಳಂ ಹೋಮಮಂ ಮಾಡುತ್ತಿರ್ದು,

ಭಾವಿಸಿ ಮಂತ್ರಾವಳಿಯಿಂ
ದೋವುತೆ ಹುತವಹನೊಳಿಸೆವ ಲಾಜಾಹುತಿಯಂ ।
ತೀವಿದನಂತರಮಗಸುತೆ
ದೇವನ ಬಲದಿಂದವೆಂಡಕೆ ಬಂದಳನೂನಂ ॥ 256 ॥

ಅಂತು ಬರೆ ಪೂರ್ಣಾಹುತಿಯಂ ಕೊಟ್ಟು ಹೋಮಸಮಾಪ್ತಿಯೊಳಾಪ್ತನಪ್ಪ ಕವಳಜಂ ಸಪ್ತಪದಿಯಂ ಕಟ್ಟಲ್ಕಿಱಿಂ ಮೆಟ್ಟಿಸಿ ತದನಂತರಂ ದೇವದಂಪತಿಗಳಂ ಸಿಂಹಾಸನದೊಳಲಂಕರಿಸೆ ಸಖನೆನಿಪ ನಿಮಿತ್ತಂ ಕುಬೇರಂಗೆ ನಿರೂಪಮಂ ಕೊಟ್ಟು ನಾರದಾದಿಋಷಿಗಳಂ ಕಳಿಪೆ, ದಿಟ್ಟವೂಱುರಸಂ ನಾರಾಯಣಪ್ರಿಯಂ ಕಾವೂರಿಯಾರೋಗಣೆಗೆ ನಡೆತಂದೆಡೆವೂಡಿದೆಡೆಯೊಳಕ್ಕಿರ್ದು ಚಿತಸಿಂಹಾಸನವನವಷ್ಟಂಭಿಸೆ, ನಂದೀಶ್ವರವೀರಭದ್ರಾದಿಯಾದ ಗಣಂಗಳುಂ ಹರಿವಿರಿಂಚಿಪುರಂದರಾದಿಸಮಸ್ತಸುರಸಮೂಹವುಂ ಸಪತ್ನಿಯೊಳ್ ಕುಳ್ಳಿರೆ, ಪಾರ್ವತಿಯೊಡನವ್ಯಾಜಾನ್ನವುನಾರೋಗಿಸಿ ಕೈಪಟ್ಟಿಯಂ ಕೊಂಡು ತಾಂಬೂಲವುನಾಚರಿಸುತ್ತುಮಂತಿಂತು ಕಂತುಮದಮರ್ದನನತಾಶೇಷ ಚತುರ್ಥಿಯಂ ಕಳೆದು ಸಾಕಾರನಿಧಿಯೋಕುಲಿಯಾಡಿ ಗಿರಿರಾಜಂಗೆ ಕರುಣಿಸುತ್ತುಂ ಮೇನಾದೇವಿಯುಂ ವುನ್ನಿಸುತ್ತುಂ ಗಿರಿಜೆಯುನಾಲಿಂಗಿಸುತ್ತುಂ ವೃಷಭನವೂರೂಢಂ ದಶಭುಜಪ್ರಖ್ಯಾತಂ ವುಹವಾನಿಧಿ ವುಹಾದೇವನುರಗಾಭರಣಂ ಗಜಾಜಿನಾವರಣಂ ಕರಣಕುಲಕಲ್ಪವೃಕ್ಷಂ ಸಕಲದೇವಗಣಪರಿವೃತಂ ಶೈಳಜಾವರಂ ಶೂಲಧರಂ ಭಾಳೇಂದುವುಳ ಕೈಲಾಸಾಭಿವುಖನಾಗಿ,

ಬಱುವಲ್ಲಿಯಾನೆಯುಂ ಬಲ್ಲಿಯ ರತ್ನವುವುಂ ಬಲ್ಲಿಯಶ್ವವೀಥಿಯುಂ
ಬಱುವಲ್ಲಿಯರ್ಥವುಂ ಬಲ್ಲಿಯ ನಾಣೆಯವುಂ ಬಲ್ಲಿಯಾಪ್ತವರ್ಗವುಂ ।
ಬಱುವಲ್ಲಿಯಂಗನಾನಿಕರವುಂ ಪದೆಪಿಂದವಳೋಕಿಸುತ್ತೆ ಕೋ
ವುಳಪುಳಕಂಗಳೇಲ್ಗೆಯನೊಡಂಬಡುತುಂ ನಡೆತಂದನೀಶ್ವರಂ ॥ 257 ॥

ಅನವುಯದೊಳ್,

ಹರನೀಬಂದನೆ! ಗಿರಿಜಾ
ವರನೀಬಂದನೆ! ವುಹೇಶನೀಬಂದನೆ! ಕಂ ।
ಕರನೀಬಂದನೆನುತ್ತುಂ
ಪರೆದುವು ದೆಸೆದೆಸೆಗೆ ಬಹಳಕಹಳಾನಾದಂ ॥ 258 ॥

ಅಂತು ಕರೆವ ಕಹಳಾನಾದವುಂ ಕೇಳುತ್ತುಂ ನಡೆತಂದು ಕೈಲಾಸಪುರದ್ವಾರವಲಯ ವುಂ ಪುಗುತಿರ್ಪಾಗಳ್,

ಕಟ್ಟಿದ ಗುಡಿಗಳ ವುಗಿಲಂ
ವುಟ್ಟಿದ ತೋರಣದ ನೆರೆದು ನೋಟ್ಪಬಲೆಯರೊಂ ।
ದೊಟ್ಟಜೆಗಳ ಲಾವಣ್ಯವು
ದಿಟ್ಟಣವೆನಿಸಿತ್ತು ಶಿವನ ಕಣ್ಗಂ ವುನಕಂ ॥ 259 ॥

ಅಂತುವುದಲ್ಲದೆಯುಂ,

ತರದಿಂ ವೇದಿಕೆಯೇಱಿ ಭದ್ರಚಯವುಂ ಬಂದೇಱಿಯುತ್ಸಾಹದಿಂ
ಕರುವಾಡಂಗಳನೇಱಿ ವೃಷ್ಟಕುಲವುಂ ಸಾರ್ದೇಱಿಯೊಪ್ಪಿರ್ಪ ಗೋ ।
ಪುರವೃಂದಂಗಳನೇಱಿ ಶೀತಕರಬಿಂಬವ್ರಾತವೆಟ್ಟಿಂದಪೋ
ಲರವಿಂದಾಕರವೆಟ್ಟಿವೋಲ್ ತುಱುಗಿ ನೋಡಿತ್ತಲ್ಲಿ ಕಾಂತಾಜನಂ ॥ 260 ॥

ಅಂತು ನೋಡುವ ಕಾಂತೆಯರೊಳೊರ್ವಳ್,

ನಡುವೆ ವಿಳಾಸದಿಂ ವೃಷಭರಾಜನನೇಱಿದವಂ ಶಿವಂ ಸವುಂ
ತೊಡನೆ ವುಹೇಶನಂ ಪ್ರಿಯದೊಳಪ್ಪಿದವಳ್ ಗಿರಿಜಾತೆಯಾಹ! ಚೆ ।
ಲ್ವೊಡರಿಸಿತಾಹ! ದಂಪತಿಗಳಾಹ! ಜಗತ್ಪ್ರಭುಗಳ್ ಸುಭಾಗ್ಯರೆ
ನ್ನೊಡೆಯರೆನುತ್ತ ಕೈವುಗಿದು ಬಣ್ಣಿಸುತಿರ್ದಳತಿಪ್ರವೋದದಿಂ ॥ 261 ॥

ವತ್ತವೊರ್ವಳುವುವುಹೇಶ್ವರರಂ ಕಂಡು ಕೊಂಡುಕೊನೆಯುತ್ತಿರ್ದಳೆಂತೆಂದೊಡೆ:—

ಸ್ಥಿರದಂಪತಿಗಳ್! ವುಂಗಳ
ಕರದಂಪತಿಗಳ್! ವಿಶೇಷದಂಪತಿಗಳ್! ಭಾ ।
ಸುರದಂಪತಿಗಳ್! ವಸುಧಾ
ವರದಂಪತಿಗಳ್! ವುನೋಜ್ಞಹರದಂಪತಿಗಳ್ ॥ 262 ॥

ಎಂದು ಪೊಗಱುತ್ತುಮಿರೆಯಿರೆ

ಇಂತಿಂತೊಪ್ಪುವ ಸಂಭ್ರಮ
ಮುಂ ತವೆ ನೋಡುತ್ತೆ ಪದೆದು ಕೊಂಡಾಡುತ್ತುಂ ।
ಕಂತುಹರಂ ಸಂತಸದಿಂ
ಮುಂತಣ ಕೈಲಾಸದರಮನೆಗೆ ನಡೆತಂದಂ ॥ 263 ॥

ಅಂತೊಳಪೊಕ್ಕು ಬಂದಾಗಳ್,

ಆರಜೆಯೆತ್ತೆ ರುದ್ರಗಣಿಕಾನಿಕರಂ ಸರಸೀಜನಾಭನುಂ
ವಾರಿಜಪುತ್ರನುಂ ಹೊಗಳೆ ದೇವಗಣಾವಳಿಯಟ್ಟಿಳಿಂದೆ ಕೈ ।
ವಾರಿಸೆ ನಂದಿಯಿಂದವಿಱಿದುನ್ನತಸನ್ನುತಸಂಹಪೀಠಮಂ
ತಾರಗಿರೀಂದ್ರನಾಥನೊಸೆದೇಱಿದನದ್ರಿಸುತಾಸಮನ್ವಿತಂ ॥ 264 ॥

ಅಂತು ಸಿಂಹವಿಷ್ಟರಮನೇಱಿ,

ಗಿರಿಪತಿಯಂ ಮೇನೆಯನಾ
ದರದಿಂ ಬೀೞ್ಕೊಟ್ಟು ಮುಕುಟರತ್ನಪ್ರಕರ ।
ಸ್ಫುರಿತಪ್ರದ್ಯೋತಪ್ರೋ
ತ್ಕರನಿಳಸಿತನಿಳಯದೊಳಗೆ ಶಿವನೆಸೆದಿರ್ದಂ ॥ 265 ॥

ಆಗಳ್ ಗಿರಿರಾಜನುಂ ಮೇನೆಯುಂ ಬೀೞ್ಕೊಳುತುಂ ಪಾರ್ವತಿಯಂ ನೋಡಿ,

ಮೂತೆ ಶಿವಂ ಪಿತಂ ಶಿವನನಂತಬಲಂ ಶಿವನೂರ್ಜಿತಂ ಶಿವಂ
ನೀತಿ ಶಿವಂ ಸ್ಥಿರಾಯು ಶಿವನೊಳ್ಪು ಶಿವಂ ಸುಕೃತಂ ಶಿವಂ ಘನ ।
ಖ್ಯಾತಿ ಶಿವಂ ಧವಂ ಶಿವನಪಾರಸುಖಂ ಶಿವನದ್ರಿಜಾತೆ ಸಂ
ಪ್ರೀತಿ ಶಿವಂ! ಶಿವಂ! ನಿನಗೆ ಚಿಂತಿಸದಿರ್! ಮುಱಿದೆಮ್ಮನೊರ್ಮೆಯುಂ ॥ 266 ॥

ಎಂದುಳ್ಳುದನುಪಚಾರಮಿಲ್ಲದೆ ನುಡಿದು ಸಾದರಂ ಪೋದರ್. ಇತ್ತಲ್ ಚಂಡಕೀರ್ತಿಗಳ್ ಮೊಱಿಯ್ಕಿಕ್ಕಿ ನಿಂದು ಕೆಯ್ಯಂ ಮುಗಿದು,

ಆತುಳಕಪಾಲಿ ಪಾಲಿಪುದುಮಾಪತಿ ಮಾಪತಿರಾಜ ರಾಜಭೂ
ಷಿತ ಸಿತಭಸ್ಮ ಭಸ್ಮಮಯಮನ್ಮಥ ಮನ್ಮಥವಿಗ್ರಹಗ್ರಹೋ ।
ನ್ನತ ನತಸಿದ್ಧ ಸಿದ್ಧಸಕಳಾತ್ಮ ಕಳಾತ್ಮ ವಿಶೇಷಕೇಷಪೂ
ಜಿತ ಜಿತಕಾಲ ಕಾಲವಿಲಸದ್ಗಳ ಸದ್ಗಳ ಹಂಪೆಯಾೞ್ದನೇ ॥ 267 ॥

ಕರುಣಿಸು ನಾಥ! ನಾಥಕುಲಸೇವಿತ! ಸೇವಿತಕಾಲ! ಕಾಲಸಂ
ಹರಣ! ರಣಾಗ್ರರಂಜಿತಜಿತಾಮರ! ತಾಮರಸಾಕ್ಷಸಾಕ್ಷಸಂ ।
ಸ್ಮರನಿಜದರ್ಪ! ದರ್ಪಕವಿನಾಶ ವಿನಾಶನಿಕಾಯ ಕಾಯವಿ
ಸ್ತರಿತಭುಜಂಗ! ಜಂಗವುಕೃಪಾವನ ಪಾವನ ಹಂಪೆಯಾಳ್ದನೇ ॥ 268 ॥

ಎಂದಿಂತು ಸಂತಸದಿಂ ಕೈವಾರಮಾಡೆ ಕೇಳ್ದು ದಂಡಧರಗರ್ವಪರ್ವತಕುಲಿಶಂ ಕುಸುಮಾಯುಕೋದಂಡಕುಮುದವಾರ್ತಂಡಂ ಪುರತ್ರಯಮೇಳುಮಹಾನಿಲಂ ಕತಪತ್ರಪು ತ್ರಶಿರಚ್ಛೇದನಕರಂ ನರೋಜನಯುನನಯುನಸರೋಜಪೂಜಿತಪದಂ ಜಲಂಧರವಾರಾಳ ಮೇಘಗರ್ಜಿತಂ ಅಂಧಕಾಸುರಾರಣ್ಯದಾವಾನಳಂ ಲಾಲಾಸುರೇಭಪಂಚಾನನಂ ದುರಿತ ಪಂಚಾನನಗರಭವಜೂರ್ತಿ ದಕ್ಷಮಖನಿರ್ಧೂಮಧಾಮಂ ಚತುರ್ದಶಭುವನಚಕ್ರಭೂ ಸ್ಕರಂ ಬ್ರಹ್ಮಾಂಡಭರಿತಕೀರ್ತಿಮಯಂ ಸರ್ವಬ್ರಹ್ಮಾಂಡಫಳಭರಿತಮಹಾಮಹೀರುಹಂ ವರನಿಜಯರಜಿತಪ್ರಕಸ್ತಹಸ್ತಂ ಸೋಮಧರಂ ಸೋಮಂ ಸಾವಿಗೇಯಪ್ರಿಯಂ ವಿಮ ಳತ್ರಿನೇತ್ರಂ ಕಮಲಜಶಿರಃಪಾತ್ರಂ ಸುರರಾಜರಾಜಂ ಕರಣಸುರಭೂಜಂ ದೇವಗಣನ ಮಾಜಂ ರವಿಕೋಟಿತೇಜಂ ಶೃಂಗಾರಸಾರಂ ವೀರರಸಪೂರಂ ರೌದ್ರಪ್ರತಾಪಂ ಭಯಾನ ಕರೂಪಂ ಪಿನಾಕಚಾಪಂ ಸಜ್ಜನಸಮೀಪಂ ಅದ್ಭುತಶೀಲಂ ಶೈಲಜಾಲೋಲಂ ಘನಘನ ಸ್ಫೂರ್ತಿಲಂ ವಿಶ್ವಲೋಕಪಾಲಂ ನತಜನವಿತತಸಂಪದಂ ಪ್ರೇಮಜನಕಾವುದುಳ್ಳಂ ಭಕ್ತ ಜನಭೂಗ್ಯೋದಯಂ ಮುಕ್ತಿಪ್ರದಾಯಕಂ ಪ್ರಮಥಜನಪುಣ್ಯಫಲಾಕಾರಂ ಕೃಪಾವೀರು ದಯಾನಿಧಿ ಪಾರ್ವತೀಪ್ರಾಣನಾಥನೆನಿಪ ಪಂಪಾಪುರಾಧಿಪಶ್ರೀವಿರೂಪಾಕ್ಷಂ ಚಂಡಕೀರ್ತಿ ಗಳ್ಗೆ ಮೆಚ್ಚಿ ಪಸಾಯನವನಿತ್ತು,

ಹರನುದ್ಯದ್ಗಿರಿಜಾವಮನೋಹರಸುಖಾಂಭೋರಾಶಿಚಂಚತ್ಸುಧಾ
ಕಿರಣಂ ತತ್ಸುಖದಿಂದವಿರ್ದ್ದಯಿಸಿದರ್ದ್ದಾ ಸ್ಕಂದನಿಂ ತಾರಕಾ ।
ಸುರನಂ ತೀರ್ಚಿ ಸಮಸ್ತಲೋಕಜಸತಾಸಂತುಷ್ಟಿಯಂ ಮಾಡಿ ಶಂ
ಕರನೊಪ್ಪಿರ್ದ್ದನುದಾರಿ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ ॥ 269 ॥

ಹರಿಸಂ ಮಿಗೆ ಕೈಲಾಸದ
ಪುರದೊಳಗೊಪ್ಪಿರ್ದನಭವನದ್ವಯರೂಪಂ ।
ವರಕರಣಾಳಗೆ ವರವಂ
ಕರುಣದೆ ಕರುಣಿಸುತೆ ಹಂಪೆಯ ವಿರೂಪಾಕ್ಷಂ ॥ 270 ॥

ತರದಿಂದಂ ಶಬ್ದವರ್ಥಂ ರಸವಿಸರವಲಂಕಾರದಿಂ ತೀವುತೊಳ್ಪಿಂ
ಧರೆಯೊಳ್ ಕೈಕೊಂಡು ಪಂಪಾಪುರದಧಿಪ ವಿರೂಪಾಕ್ಷನಿತ್ತಾಜ್ಞೆಯಿಂದಂ ।
ಹರಿದೇವಂ ಭಕ್ತಿಯಿಂದಂ ಗುರುಕರುಣದಿನುತ್ಸಾಹದಿಂ ಮುಚ್ಚಿ ಪೇಳ್ದಾ
ಗಿರಿಜಾಕಲ್ಯಾಣಕಾವ್ಯಂ ರವಿ ಶಶಿ ರಸೆಗಳ್ ನಿಲ್ವಿನಂ ನಿಲ್ಕೆ ಸಂತಂ ॥ 271 ॥

ಇಳೆಯೊಳ್ ಪೆರ್ಮೆಟಿಯುಂ ಸಮಸ್ತ ಫಲವುಂ ಸಂತೋಷವುಂ ಧರ್ಮವುಂ
ಕಳೆಯುಂ ಸತ್ಯವುಮಿಾಶ್ವರಾರ್ಚ್ಚನೆಯು ಸೊಂಪುಂ ಶ್ರೀಯುಮಾಯುಂ ನಿರಾ ।
ಕುಳವೆಂಬುಂ ನೆಲಸಿರ್ಪುದೊಂದು ತೆಱವುಂತಾವಾಲ್ಕೆ! ಸರ್ವೇಶ್ವರೀ
ವಿಳಸತ್ಸಂಗಸುಖಾಬ್ಧಿಶೀತಕಿರಣಂ ಪಂಪಾಪುರಾಧೀಶ್ವರಂ ॥ 272 ॥

ಪರಮಸ್ವಾಮಿ ಜಟಾಧರಂ ಕಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸಾಂಖ್ಯಾಕರಂ ಶಂಭುಕಂ ।
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮುಂ
ಕರುಣಂಗೆಯ್ದೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ 273 ॥

ಇದು ಸಮಸ್ತ ಸುರಾಸುರನಿಕರಮುಕುಟಘಟಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮಕರಂದಮತ್ತ ಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿಹರದೇವ ವಿರಚಿತಮಪ್ಪ
ಶ್ರೀಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ಪಾರ್ವತೀಪರಮೇಶ್ವರ ವಿವಾಹವರ್ಣನಂ

ಕವಿಕಾವ್ಯವಿಮರ್ಶೆ.

(ರಾವ್‌ಬಹದೂರ್. ಆರ್. ನರಸಿಂಹಾಚಾರ್ಯ. ಎಮ್ ಏ. ಯವರ
"ಕವಿಚರಿತ್ರೆ"ಯ ಆಧಾರದಿಂದ ಸಂಗ್ರಹಿಸಿದುದು.)

---

1. THE DRAVIDIAN LANGUAGES.

೧. ದ್ರಾವಿಡಭಾಷೆಗಳು.

ನಮ್ಮ ಭರತಖಂಡದಲ್ಲಿರುವ ಭಾಷೆಗಳನ್ನು ಗೌಡ ಮತ್ತು ದ್ರಾವಿಡಗಳೆಂದು ಮುಖ್ಯವಾದ ಎರಡು ವರ್ಗಗಳಾಗಿ ವಿಭಾಗಿಸಬಹುದು. ಹಿಂದೂಸ್ಥಾನದ ಉತ್ತರಭಾಗದಲ್ಲಿ ಪ್ರಾಯಕವಾಗಿ ಗೌಡಭಾಷೆಗಳೂ, ದಕ್ಷಿಣಪ್ರಾಂತದಲ್ಲಿ ದ್ರಾವಿಡಭಾಷೆಗಳೂ ವ್ಯವಹರಿಸಲ್ಪಡುವುವು. ಗೌಡಭಾಷೆಗಳೆಲ್ಲವೂ ಸಂಸ್ಕೃತಜನ್ಯಗಳು. ದ್ರಾವಿಡಭಾಷೆಗಳಲ್ಲಿ ಅನೇಕಸಂಸ್ಕೃತಪದಗಳು ಸಂಬಂಧಿಸಿದ್ದರೂ, ವ್ಯವಹಾರಕ್ಕೆ ಬೇಕಾದ ಶಬ್ದಗಳು ಪ್ರಾಯಕವಾಗಿ ಸ್ವತಂತ್ರವಾಗಿವೆ. ಆದುದರಿಂದ ದ್ರಾವಿಡಭಾಷೆಗಳು ಸ್ವತಂತ್ರಭಾಷೆಗಳೆನಿಸಿಕೊಳ್ಳುವುವು. ಈ ದ್ರಾವಿಡಭಾಷೆಗಳಲ್ಲಿ ಕನ್ನಡ, ತಮಿಳು, ತೆಲುಗು, ಮಲೆಯಾಳ, ತುಳು, ತುದವ, ಬಡಗ, ಕೋತ, ಕೊಡಗು ಮುಂತಾದ ಅನೇಕಭೇದಗಳುಂಟು. ಆದರೆ, ಇವುಗಳಲ್ಲಿ ಮೊದಲಿನ ಐದುಭಾಷೆಗಳೂ, ದಕ್ಷಿಣದೇಶದಲ್ಲಿ ಹೆಚ್ಚಾಗಿ ಪ್ರಚಾರದಲ್ಲಿರುವುದರಿಂದ, ಅವುಗಳನ್ನು ಪಂಚದ್ರಾವಿಡಭಾಷೆಗಳೆನ್ನುವರು. ಈ ಪಂಚದ್ರಾವಿಡಗಳಲ್ಲಿಯೂ, ತಮಿಳು, ಕನ್ನಡ, ತೆಲುಗು, ಮಲೆಯಾಳ, ಈ ನಾಲ್ಕುಭಾಷೆಗಳಿಗೂ, ವರ್ಣಮಾಲೆಗಳೂ, ವ್ಯಾಕರಣಗಳೂ, ಸಾಹಿತ್ಯಗ್ರಂಥಗಳೂ ಇರುವುದರಿಂದ ಇವು ಗ್ರಾಂಥಿಕಭಾಷೆಗಳೆನಿಸುವುವು. ಮಿಕ್ಕವು ಕೇವಲವ್ಯಾವಹಾರಿಕಭಾಷೆಗಳಾಗಿವೆ. ವರ್ಣಮಾಲೆಯಿಲ್ಲದ ಈ ಭಾಷೆಗಳೆಲ್ಲವೂ ಪ್ರಾಯಕವಾಗಿ ಕನ್ನಡದ ಆಭಾಸಗಳಂತೆ ತೋರುತ್ತಿವೆ. ಈ ನಾಲ್ಕು ಗ್ರಾಂಥಿಕ ದ್ರಾವಿಡಭಾಷೆಗಳಲ್ಲಿ ಕನ್ನಡಕ್ಕೂ, ತಮಿಳಿಗೂ ವಿಶೇಷವಾದ ಹೋಲಿಕೆಯಿರುವುದರಿಂದ, ಈ ಭಾಷೆಗಳು ಅನ್ಯೋನ್ಯವಾಗಿ ಅಕ್ಕತಂಗಿಯರ ಸಂಬಂಧವುಳ್ಳವುಗಳಂತೆ ತೋರುವುವು. ಇದರಿಂದ ಭಾಷಾತತ್ವಜ್ಞರು, ಈ ಭಾಷೆಗಳನ್ನು ಸಂಸ್ಕೃತದಿಂದ ಭಿನ್ನವಾದ ಯಾವುದೋ ಒಂದು ಮಾತೃಭಾಷೆಯಿಂದ ಹುಟ್ಟಿದುವೆಂದು ನಿರ್ಣಯಿಸಿರುವರು. ಮಲೆಯಾಳವು ತಮಿಳಿನ ಆಭಾಸವಾಗಿ ಹುಟ್ಟಿ, ಬಹುಕಾಲಕ್ಕೆ ಹಿಂದೆಯೇ ಸ್ವತಂತ್ರಭಾಷೆಯಾಯಿತೆಂದು ಹೇಳುವರು. ತೆಲುಗುಭಾಷೆಯು ವರ್ಣಮಾಲೆ, ಛಂದಸ್ಸು, ಸಾಂಪ್ರದಾಯವಿಷಯಗಳಲ್ಲಿ ಮಾತ್ರ ವಿಶೇಷವಾಗಿ ಕನ್ನಡವನ್ನು ಹೋಲುತ್ತದೆ. ಪೂರ್ವಕಾಲದಲ್ಲಿ ಕನ್ನಡಭಾಷೆಯು, ಕಾವೇರಿಯಿಂದ ಗೋದಾವರಿ

ಯವರೆಗೂ ಪ್ರಚಾರದಲ್ಲಿದ್ದುದಾಗಿ ಗ್ರಂಥಗಳಿಂದ ತಿಳಿದುಬರುತ್ತಿದೆ. ಈಗ ಈ ಕನ್ನಡಭಾಷೆಯು, ಮೈಸೂರು, ಕೊಡಗು, ಬೊಂಬಾಯಿ ಆಧಿಪತ್ಯದ ದಕ್ಷಿಣಜಿಲ್ಲೆಗಳು, ಹೈದರಾಬಾದುಸಂಸ್ಥಾನದ ಪಶ್ಚಿಮಭಾಗದಲ್ಲಿ ಕೆಲವು ಪ್ರದೇಶಗಳು, ಮದರಾಸ್ ಆಧಿಪತ್ಯದ ಕೆಲವು ಜಿಲ್ಲೆಗಳು, ಮಧ್ಯಪ್ರಾಂತ, ಬೀರಾರು ಇವುಗಳಲ್ಲಿ ಕೆಲವುಭಾಗಗಳು—ಈ ಪ್ರದೇಶಗಳಲ್ಲೆಲ್ಲ ಪ್ರಚಾರದಲ್ಲಿದೆ. ಈಗ ಈ ದೇಶದಲ್ಲಿ ಕನ್ನಡಭಾಷೆಯನ್ನಾಡತಕ್ಕ ಜನಸಂಖ್ಯೆ ಒಂದುಕೋಟಿಗೆ ಮೇಲಿದೆ.

---

2 THE DRAVIDIAN ALPHABETS.

೨. ದ್ರಾವಿಡವರ್ಣಮಾಲೆ.

ದ್ರಾವಿಡವರ್ಣಮಾಲೆಯಲ್ಲಿ ಸಂಸ್ಕೃತದಲ್ಲಿಲ್ಲದ ಎ. ಒ. ಳ. ಱ. ೞ. ಎಂಬ ಐದಕ್ಷರಗಳು ಹೆಚ್ಚಾಗಿರುವುವು. ಆದರೆ ಈಗೀಗ ಕನ್ನಡದಲ್ಲಿ ಐಕಾರ ಔಕಾರಗಳ ಸ್ಥಾನದಲ್ಲಿ, ಳಕಾರ ೞಕಾರಗಳೇ ಉಪಯೋಗಿಸಲ್ಪಡುವುವು. 12ನೆಯ ಶತಮಾನದಲ್ಲಿಯೇ ಒಬ್ಬಿಬ್ಬರು ಕವಿಗಳು ಈ ನಿಯಮವನ್ನುಲ್ಲಂಘಿಸಿ ಗ್ರಂಥರಚನೆಮಾಡಿರುವರು.

---

3. THE ANTIQUITY OF THE KANARESE LANGUAGE.

೩. ಕರ್ಣಾಟಕದ ಪ್ರಾಚೀನತೆ.

ಕರ್ಣಾಟಕದೇಶವು ಬಹುಕಾಲಕ್ಕೆ ಹಿಂದೆಯೇ ಪ್ರಸಿದ್ಧವಾಗಿದ್ದಂತೆ ಅನೇಕ ಆಧಾರಗಳಿಂದ ತಿಳಿಯಬರುತ್ತಿದೆ. ಕ್ರಿಸ್ತ ಪೂರ್ವ ಮೂರನೆಯ ಶತಮಾನದಲ್ಲಿಯೇ ಕರ್ಣಾಟಕದೇಶದಲ್ಲಿ ಕದಂಬರ ರಾಜಧಾನಿಯಾಗಿದ್ದ ಬನವಸಿಗೆ, ಅಶೋಕಮಹಾರಾಜನು ಒಬ್ಬ ಬೌದ್ಧಮತೋಪದೇಶಕನನ್ನು ಕಳುಹಿಸಿದ್ದಂತೆ ಮಹಾವಂಶವೆಂಬ ಬೌದ್ಧಗ್ರಂಥದಲ್ಲಿ ಬರೆದಿದೆ. ಕ್ರಿಸ್ತಶಕದ ಆದಿಭಾಗದಲ್ಲಿ ರಚಿತವಾದ ಒಂದಾನೊಂದು ಗ್ರೀಕುನಾಟಕದಲ್ಲಿ, ಕೆಲವು ಕನ್ನಡಶಬ್ದಗಳೂ, ವಾಕ್ಯಗಳೂ ಪ್ರಯೋಗಿಸಲ್ಪಟ್ಟಿರುವಂತೆ ತಿಳಿದುಬರುತ್ತಿದ ಕರ್ಣಾಟಕವೆಂಬ ಶಬ್ದದ ವ್ಯುತ್ಪತ್ತಿವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಎಲ್ಲರ ಕಿವಿಯಲ್ಲಿಯೂ ಬಿದ್ದು ಪ್ರಸಿದ್ಧವಾದುದರಿಂದ (ಕರ್ಣ + ಅಟ) ಕರ್ಣಾಟವೆಂದು ಕೆಲವರು ಅಭಿಪ್ರಾಯಪಡುವರು. ಆದರೆ (ಕರ್ + ನಾಡು) ಕರಿಯ ಮಣ್ಣುಳ್ಳ ಭೂಮಿಯಲ್ಲಿ ವ್ಯವಹರಿಸಲ್ಪಡುವ ಭಾಷೆಯಾದುದರಿಂದ, ಆ ಅರ್ಥದಮೇಲೆ ಇದಕ್ಕೆ "ಕರ್ಣಾಟ"ವೆಂಬ ರೂಪವು ಬಂದಿರಬೇಕೆಂಬುದು ಅನೇಕರ ಅಭಿಪ್ರಾಯವಾಗಿದೆ.

---

4. THE DIFFERENT STAGES OF THE KANARESE LANGUAGE.

೪. ಕನ್ನಡಭಾಷೆಯ ಅವಸ್ಥಾಭೇದಗಳು.

ಕನ್ನಡಭಾಷೆಯಲ್ಲಿ ಇದುವರೆಗೆ, ಪೂರ್ವದ ಹಳಗನ್ನಡ, ಹಳಗನ್ನಡ, ಹೊಸಗನ್ನಡವೆಂಬ ಮೂರವಸ್ಥೆಗಳುಂಟಾಗಿವೆ. ಕ್ರಿ. ಶ. ಎಂಟನೆಯ ಶತಮಾನದವರೆಗೆ ಪೂರ್ವದ ಹಳಗನ್ನಡವೂ, ಅದರಿಂದಾಚೆಗೆ 14ನೆಯ ಶತಮಾನದವರೆಗೆ ಹಳಗನ್ನಡವೂ, ಅದರಿಂದೀಚೆಗೆ ಹೊಸಕನ್ನಡವೂ ಬಳಕೆಗೆ ಬಂದಹಾಗೆ ಊಹಿಸಬಹುದಾಗಿದೆ.

---

5. THE ANTIQUITY OF THE KANARESE-LITERATURE.

೫. ಕನ್ನಡದಲ್ಲಿ ಗ್ರಂಥರಚನೆಯ ಪ್ರಾಚೀನತೆ.

ಈಗ ಕನ್ನಡದಲ್ಲಿ ನಮಗೆ ಗ್ರಂಥರೂಪವಾಗಿ ದೊರೆತಿರುವುದರಲ್ಲಿ 9ನೆಯ ಶತಮಾನದಲ್ಲಿ ಹುಟ್ಟಿದ ಕವಿರಾಜಮಾರ್ಗನೇ ಮೊದಲನೆಯದು. ಆದರೆ ಆ ಗ್ರಂಥಕರ್ತನಾದ ನೃಪತುಂಗನು, ತನ್ನಕಾಲಕ್ಕೆ ಹಿಂದೆಯೇ ಅನೇಕಗದ್ಯಪದ್ಯಗ್ರಂಥಗಳು ಹುಟ್ಟಿರುವಂತೆ ತಿಳಿಸಿರುವನು. ಮತ್ತು ಕ್ರಿ. ಶ. 6ನೆಯ ಶತಮಾನದಲ್ಲಿದ್ದ ಶ್ರೀವರ್ಧದೇವನು, 96000 ಗ್ರಂಥಗಳುಳ್ಳ ಚೂಡಾಮಣಿಯೆಂಬ ಜೈನಗ್ರಂಥವನ್ನು ರಚಿಸಿದುದಾಗಿಯೂ ಕಂಡು ಬಂದಿದೆ. ಆಗಲೇ ಇಂತಹ ಅಪಾರವಾದ ಗ್ರಂಥವು ಹುಟ್ಟಿರಬೇಕಾದರೆ, ಅದಕ್ಕೆ ಬಹು ಕಾಲದಹಿಂದೆಯೇ ಕನ್ನಡದಲ್ಲಿ ಗ್ರಂಥರಚನೆಗೆ ಆರಂಭವಾಗಿರಬೇಕು. ಇಷ್ಟು ಪ್ರಾಚೀನ ಕಾಲದಲ್ಲಿಯೇ ಗ್ರಂಥರಚನಾರಂಭವು, ತಮಿಳಿನಲ್ಲಿಹೊರತು ಬೇರೆಯಾವ ದ್ರಾವಿಡಭಾಷೆಯಲ್ಲಿಯೂ ಇದ್ದಂತೆ ಕಾಣುವುದಿಲ್ಲ. ಕನ್ನಡದಲ್ಲಿ ಛಂದೋಲಂಕಾರವ್ಯಾಕರಣ ಗ್ರಂಥಗಳು, ಕಾವ್ಯನಾಟಕಚಂಪುಗಳು, ನಿಘಂಟು, ವೈದ್ಯಶಾಸ್ತ್ರ, ಪಾಕಶಾಸ್ತ್ರ, ಗಣಿತಶಾಸ್ತ್ರ, ಜ್ಯೋತಿಶ್ಶಾಸ್ತ್ರ, ಕಾಮಶಾಸ್ತ್ರ, ಸ್ವರಶಾಸ್ತ್ರ, ರತ್ನಶಾಸ್ತ್ರ, ಸಾಮುದ್ರಿಕಶಾಸ್ತ್ರ, ಬಾಣಗಾರಿಕೆ, ಮುಂತಾದುವುಗಳವಿಷಯವಾಗಿ ಅನೇಕಗ್ರಂಥಗಳು ಹುಟ್ಟಿರುವುವೆಂಬುದಕ್ಕೆ ಆಧಾರಗಳು ಅನೇಕವಾಗಿವೆ. ಕಾವ್ಯನಿರ್ಣಯನ್ನನುಸರಿಸಿ ಉದ್ದಾಮಕವಿಗಳು ರಚಿಸಿರುವ ಅನೇಕಶಾಸನಗಳೂ ದೊರೆತಿವೆ. ಇವು ಪೂರ್ವಚರಿತ್ರಗಳನ್ನು ತಿಳಿಯುವುದಕ್ಕೆ ಬಹಳ ಸಹಕಾರಿಗಳಾಗಿವೆ.

---

6. THE KANARESE POETS.

೬. ಕನ್ನಡ ಕವಿಗಳು.

ಕನ್ನಡದಲ್ಲಿ ಗ್ರಂಥರಚನೆ ಮಾಡಿರುವ ಕವಿಗಳನ್ನು ಆಪಾತವಾಗಿ, ಜೈನರು ವೀರಶೈವರು, ವೈಷ್ಣವರೆಂಬ ಮೂರುಪಂಗಡವಾಗಿ ವಿಭಾಗಿಸಬಹುದು. ಇವರಲ್ಲಿ ಜೈನರೇ ಕನ್ನಡದಲ್ಲಿ ಆದಿಕವಿಗಳು. 12ನೆಯ ಶತಮಾನದವರೆಗೆ ವಿಶೇಷವಾಗಿ ಜೈನ ಗ್ರಂಥಗಳೇ ದೊರೆತಿರುವುವು. ಈ ಜೈನಕವಿಗಳಿಗೆ ಗಂಗರು, ರಾಷ್ಟ್ರಕೂಟರು, ಚಾಳುಕ್ಯರು, ಬಲ್ಲಾಳರು ಈ ರಾಜರೆಲ್ಲರೂ ವಿಶೇಷಪ್ರೋತ್ಸಾಹಕರಾಗಿದ್ದುದರಿಂದ, ಕನ್ನಡ ಭಾಷೆಯು ಉತ್ತಮಸ್ಥಿತಿಗೆ ಬರಲು ಕಾರಣವಾಯಿತು. 12ನೆಯ ಶತಮಾನದಲ್ಲಿ, ಹೊಯ್ಸಳ ಬಿಟ್ಟಿದೇವನು ವೈಷ್ಣವಮತವನ್ನವಲಂಬಿಸಿದುದು, ಬಸವನು ಲಿಂಗಾಯತರ ಮತವನ್ನು ಸ್ಥಾಪಿಸಿದುದು, ಕಾಲಚೂರ್ಯರಾಜವಂಶವು ನಷ್ಟವಾದುದು, ಇವೇ ಮೊದಲಾದ ಕಾರಣಗಳಿಂದ ಜೈನರ ಪ್ರಾಬಲ್ಯವು ಕುಗ್ಗಿದಂತೆ ಕಾಣುವುದು. 12ನೇ ಶತಮಾನದಿಂದಾಚೆಗೆ 16ನೇ ಶತಮಾನದವರೆಗೆ ವೀರಶೈವಗ್ರಂಥಗಳು ಹೆಚ್ಚಾಗಿವೆ. ಈ ವೀರಶೈವಗ್ರಂಥಗಳೆಲ್ಲವೂ ಪ್ರಾಯಕವಾಗಿ, ವಚನ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯವೆಂಬೀ ರೂಪಗಳಲ್ಲಿವೆ. ಅದರಿಂದಾಚೆಗೆ ವೈಷ್ಣವಕವಿಗಳ ಗ್ರಂಥಗಳು ಕೆಲವು ಹುಟ್ಟಿವೆ. ಇದಲ್ಲದೆ, ಅನೇಕರಾಜರೂ, ಕಂತಿ, ಬಿಜ್ಜಳದೇವಿ, ಮಹಾದೇವಿಯಕ್ಕ, ಚೆಲುವಾಂಬೆ, ಸಂಚಿಯಹೊನ್ನಮ್ಮ, ಮಹಾಲಕ್ಷ್ಮಿ ಮುಂತಾದ ಕೆಲವುಸ್ತ್ರೀಯರೂ ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿರುತ್ತಾರೆ.

---

7. REVIEW OF WORKS.

೭. ಗ್ರಂಥವಿಮರ್ಶೆ.

ಕವಿರಾಜಮಾರ್ಗ.—ಈಗ ದೊರೆತಿರುವ ಕನ್ನಡಗ್ರಂಥಗಳಲ್ಲಿ ಇದೇ ಮೊದಲನೆಯದು. ಇದು ಅಲಂಕಾರಗ್ರಂಥವು. ಆದರೆ ಈ ಗ್ರಂಥಕರ್ತನು ತನಗೆ ಹಿಂದಿದ್ದ ಕೆಲವು ಕನ್ನಡ ಗ್ರಂಥಕರ್ತರ ಹೆಸರನ್ನು ಹೇಳಿರುವುದರಿಂದ ಇದಕ್ಕೆ ಮೊದಲೇ ಎಷ್ಟೋ ಗ್ರಂಥಗಳು ಹುಟ್ಟಿರಬೇಕು. ಈ ಗ್ರಂಥಕರ್ತನಿಗೆ ನೃಪತುಂಗನೆಂದು ಹೆಸರು. ಇವನು ರಾಷ್ಟ್ರಕೂಟವಂಶದ ದೊರೆಯಾಗಿ, 814ರಿಂದ 877ರವರೆ ರಾಜ್ಯಭಾರಮಾಡಿದಂತೆ ಶಾಸನಗಳಿಂದ ತಿಳಿದುಬರುತ್ತಿದೆ. ಈಗ ಹೈದರಾಬಾದು ಸೀಮೆಯಲ್ಲಿ "ಮೂಲ್‌ಖೇಡ್" ಎಂದು ಕರೆಯಲ್ಪಡುವ ಮಾನಖೇಟಪುರವೇ ಈತನ ರಾಜಧಾನಿ. ಇವನಿಗೆ ಅತಿಶಯ ಧವಳ, ನರಲೋಕಚಂದ್ರ, ಕೃತಕೃತ್ಯಮಲ್ಲ, ಪರಮಸರಸ್ವತೀತೀರಾರ್ಥವತಾರ,

ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಕವಿರಾಜಮಾರ್ಗವೆಂಬ ಇವನ ಗ್ರಂಥದಲ್ಲಿ, ದೋಷಾನುವರ್ಣನನಿರ್ಣಯ, ಶಬ್ದಾಲಂಕಾರ, ಅರ್ಥಾಲಂಕಾರವೆಂಬ ಮೂರು ಪರಿಚ್ಛೇದಗಳಿವೆ. ಇವನು ತನ್ನ ಗ್ರಂಥಾದಿಯಲ್ಲಿ, ಕನ್ನಡಭಾಷೆಯು ಆಗ ಪ್ರಚಾರದಲ್ಲಿದ್ದ ಸ್ಥಳಗಳನ್ನೂ, ತನ್ನ ಕಾಲಕ್ಕೆ ಹಿಂದೆ ಹಳಗನ್ನಡವೆಂಬ ಭಾಷೆಯಿದ್ದುದನ್ನೂ, ಕನ್ನಡ ಭಾಷೆಯಲ್ಲಿ ದಕ್ಷಿಣೋತ್ತರಮಾರ್ಗಗಳೆಂಬ ಎರಡುಭೇದಗಳಿದ್ದುದನ್ನೂ, ಪೆದಂಡೆ, ಜತ್ತಾಣಗಳೆಂಬ ಪದ್ಯಕಾವ್ಯಭೇದಗಳಿದ್ದುದನ್ನೂ ಸೂಚಿಸಿರುವನು. ಈ ಗ್ರಂಥವು ನೃಪತುಂಗಕೃತವೆಂಬ ಪ್ರತೀತಿಯಿದ್ದರೂ, ಶ್ರೀವಿಜಯನೆಂಬ ಬೇರೆ ಕವಿಯು ಇದನ್ನು ಬರೆದು, ನೃಪತುಂಗನ ಅಂಕಿತದಿಂದ ಪ್ರಕಟಿಸಿದ್ದರೂ ಇರಬಹುದೆಂಬುದಕ್ಕೆ ಅಲ್ಲಲ್ಲಿ ಸೂಚನೆಗಳಿವೆ. ಆದರೆ, ಅದನ್ನು ಚೆನ್ನಾಗಿ ನಿರ್ಧರಿಸುವುದಕ್ಕೆ ತಕ್ಕ ಆಧಾರವಿಲ್ಲ. ಇವನ ಕವಿತೆಯು ಸರಳವಾಗಿದೆ.

ಪಂಪಭಾರತ.—ಇದಕ್ಕೆ ವಿಕ್ರಮಾರ್ಜುನವಿಜಯವೆಂದೂ ಹೆಸರು. ಇದನ್ನು ಬರೆದವನು ಪಂಪನು. ಇವನು ಆದಿಪುರಾಣವನ್ನೂ ಬರೆದಿರುವನು. ಇವನ ಕಾಲ, ಸುಮಾರು ಕ್ರಿ ಶ. 902. ಈತನು ಜೈನಬ್ರಾಹ್ಮಣನು. ಈ ಕವಿಯು ಪುಲಿಗೆರೆಯ ರಾಜನಾದ ಚಾಳುಕ್ಯವಂಶದ ಅರಿಕೇಸರಿಯ ಆಸ್ಥಾನಪಂಡಿತನಾಗಿ ದಂಡನಾಯಕನಾಗಿದ್ದಂತೆಯೂ ತೋರುತ್ತಿದೆ. ಈ ಕವಿಗೆ ಕವಿತಾಗುಣಾರ್ಣವ, ಪುರಾಣಕವಿ, ಸುಕವಿಜನಮನೋವಾನಸೋತ್ತಂಸಹಂಸ, ಸರಸ್ವತೀವಲ್ಲಭ, ಸಂಸಾರಸಾರೋದಯ, ಎಂಬ ಬಿರುದುಗಳುಂಟು. ಕವಿಯು ಈ ಗ್ರಂಥದಲ್ಲಿ ರಾಜನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿರುವನು. ಮತ್ತು ಈತನು ಭಾರತದಲ್ಲಿ ಲೌಕಿಕವನ್ನೂ ಆದಿಪುರಾಣದಲ್ಲಿ ಜಿನಾಗಮವನ್ನೂ ವಿವರಿಸಬೇಕೆಂದು ಯತ್ನಿಸಿ, ಒಂದನ್ನು ಆರುತಿಂಗಳಲ್ಲಿಯೂ, ಮತ್ತೊಂದನ್ನು ಮೂರುತಿಂಗಳಲ್ಲಿಯೂ ಬರೆದು ಮುಗಿಸಿದುದಾಗಿ ಹೇಳುತ್ತಾನೆ. ಇವನ ಕಾಲದಿಂದಾಚೆಗೆ ಕಾವ್ಯವನ್ನು ಬರೆದಿರುವ ಜೈನಕವಿಗಳೆಲ್ಲಾ ಪ್ರಾಯಶವಾಗಿ ಇವನನ್ನು ಕೊಂಡಾಡಿರುವರು. ಇವನ ಭಾಷಾಶೈಲಿಯು ಬಹಳ ಗಂಭೀರವಾಗಿಯೂ ಪೌಢವಾಗಿಯೂ ಇದೆ. ವಿಶೇಷಸಂಸ್ಕೃತಪದಗಳೂ, ಶಬ್ದಾರ್ಥಾಲಂಕಾರಗಳೂ ಇಲ್ಲದೆ, ಸ್ವಭಾವೋಕ್ತಿಗಳನ್ನೂ, ಲೋಕೋಕ್ತಿಗಳನ್ನೂ ಹೆಚ್ಚಾಗಿ ತೋರಿಸಿರುವನು. ಪಾಂಡವರ ಜನನದಿಂದ ಕೌರವವಧೆಯವರೆಗೆ ಭಾರತಕಥೆಯನ್ನು ಇದರಲ್ಲಿ ಸಂಕ್ಷೇಪವಾಗಿ ಹೇಳಿ, ಕೊನೆಯಲ್ಲಿ ಅರ್ಜುನನ ಪಟ್ಟಾಭಿಷೇಕವನ್ನು ವರ್ಣಿಸಿರುವನು.

ಶಾಂತಿಪುರಾಣ.—ಇದು ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನ ಚರಿತ್ರವು. ಇದರಲ್ಲಿ 12 ಆಶ್ವಾಸಗಳಿವೆ. ಈ ಕಾವ್ಯಕ್ಕೆ ಪುರಾಣಚೂಡಾಮಣಿಯೆಂದೂ ಹೆಸರು. ಈ ಗ್ರಂಥವನ್ನು ರಚಿಸಿದವನು ಪೊನ್ನನೆಂಬ ಕವಿ. ಈತನು ಜೈನಮತದವನು,

ಇವನಿಗೆ ಪೊನ್ನಿಗ, ಪೊನ್ನವುಯ್ಯ, ಸವಣ, ಕುರುಳ್ಗಳಸವಣ, ಎಂಬ ಹೆಸರುಗಳೂ ಕವಿಚಕ್ರವರ್ತಿ, ಉಭಯಕವಿಚಕ್ರವರ್ತಿ, ಸರ್ವದೇವಕವೀಂದ್ರ, ಸೌಜನ್ಯಕಂದಾ ಕುರ, ಮೊದಲಾದ ಬಿರುದುಗಳೂ ಇದ್ದಂತೆ ತಿಳಿದುಬರುತ್ತಿದೆ. ಇವನು, ರಾಮುಕಥೆ, ಗತಪ್ರತ್ಯಾಗತಕಾವ್ಯವೆಂಬ ಗ್ರಂಥಗಳನ್ನು ರಚಿಸಿರುವಂತೆ ತಿಳಿದುಬರುತ್ತಿದೆ. ಇವನಿಗೆ ಕವಿಚಕ್ರವರ್ತಿಯೆಂಬ ಬಿರುದನ್ನು ಕೃಷ್ಣರಾಜನೆಂಬ ದೊರೆಯು ಕೊಟ್ಟಿರುವುದಾಗಿ ಹೇಳಿದೆ. ಇವನ ಕಾಲ, ಸುಮಾರು. ಕ್ರಿ. ಶ. 950 ಈತನು ಬಹಳ ಪ್ರಸಿದ್ಧನಾದ ಕವಿ. ಅನೇಕಕವಿಗಳು ಇವನನ್ನು ತಮ್ಮ ಗ್ರಂಥಾದಿಯಲ್ಲಿ ಸ್ತುತಿಸಿರುತ್ತಾರೆ. ಪಂಪ, ಪೊನ್ನ, ರನ್ನ, ಈ ಮೂವರೂ ಕನ್ನಡಕವಿಗಳಲ್ಲಿ ರತ್ನತ್ರಯವೆನಿಸಿಕೊಂಡಿರುವರು.

ಕರ್ಣಾಟಕಕಾದಂಬರಿ.—ಇದು ಭಾಣಭಟ್ಟನಿಂದ ಸಂಸ್ಕೃತದಲ್ಲಿ ರಚಿತವಾದ ಕಾದಂಬರಿಗೆ ಕನ್ನಡಭಾಷಾಂತರವು. ಇದರಲ್ಲಿ ಪ್ರಾಯಕವಾಗಿ ಸಂಸ್ಕೃತಗ್ರಂಥದ ಆನುಪೂರ್ವಿಯೇ ಅನುಸರಿಸಲ್ಪಟ್ಟಿದೆ. ಇದನ್ನು ರಚಿಸಿದವನು ನಾಗವರ್ಮನು. ಕನ್ನಡದಲ್ಲಿ ಇದೇ ಹೆಸರಿನ ಇಬ್ಬರು ಕವಿಗಳು ಪ್ರಸಿದ್ಧರಾಗಿರುವರು. ಅವರಲ್ಲಿ ಈ ಕಾದಂಬರಿಯನ್ನು ರಚಿಸಿದವನು ಮೊದಲನೆಯವನು. ಮತ್ತು ಇವನಿಂದ ಛಂದೋಂಬುಧಿಯೆಂಬ ಛಂದಶ್ಶಾಸ್ತ್ರವೂ ರಚಿತವಾಗಿದೆ. ಈತನಿಗೆ ನಾಕಿ, ಸಯ್ಯುಡಿಯಾತಂ, ಎಂಬ ಹೆಸರುಗಳೂ, ಕವಿರಾಜಹಂಸನೆಂಬ ಬಿರುದೂ ಉಂಟು. ಈ ನಾಗವರ್ಮನು ರಕ್ಕಸ ಗಂಗನ (984–999) ಕಾಲದಲ್ಲಿದ್ದವನು. ಕಾದಂಬರಿಯ ಕೊನೆಯಲ್ಲಿ "ಸತ್ಕೃತಿ ವನಿತೆಗಿದೌಚಿತ್ಯವೆಂದಿತ್ತನತ್ಯುತ್ಸವದಿಂ ವಿದ್ವತ್ಸಭಾವಂಡಲಿ ತಣಿವಿನಿಗಂ ಭೋಜರಾಜಕ್ಷಿತೀಂದ್ರಂ" ಎಂದು ಹೇಳಿರುವುದರಿಂದ, ಧಾರಾಪುರದ ಭೋಜರಾಜನು, ಇವನಿಗೆ ಕುದುರೆಗಳನ್ನು ಬಹುಮಾನಿಸಿದಂತೆ ತಿಳಿಯಬರುತ್ತಿದೆ. ಆ ಭೋಜರಾಜನ ಕಾಲವು 997ರಿಂದ 1059ರವರೆಗೆಂದು ತಿಳಿದುಬರುವುದರಿಂದ, ಇವನು ಆಕಾಲದವನಾಗಿರಬೇಕು. ಈ ನಾಗವರ್ಮನು ಶೈವಬ್ರಾಹ್ಮಣನಾಗಿರಬಹುದೆಂದು ತೋರುತ್ತದೆ. ಈ ಕವಿಯ ಬಂಧವು ಲಲಿತವಾಗಿಯೂ, ಮಧುರವಾಗಿಯೂ ಇದೆ.

ಗದಾಯುದ್ಧಂ.—ಇದಕ್ಕೆ "ಸಾಹಸಭೀಮವಿಜಯ" ವೆಂದೂ ಹೆಸರು. ಇದನ್ನು ರಚಿಸಿದವನು ಕನ್ನಡಕವಿಗಳಲ್ಲಿ ಪ್ರಸಿದ್ಧನಾದ ರನ್ನನೆಂಬವನು. ಈತನು ಪರಶುರಾಮಚರಿತ, ಚಕ್ರೇಶ್ವರಚರಿತ, ಅಜಿತತೀರ್ಥೇಶ್ವರಚರಿತ(ಅಜಿತಪುರಾಣ)ವೆಂಬ ಗ್ರಂಥಗಳನ್ನು ಬರೆದಹಾಗೆ ತಿಳಿದುಬರುತ್ತಿದೆ. ಇವನು ಜೈನಮತದವನು. ಇವನು ಬೆಳುಗೆರೆನಾಡಿನಲ್ಲಿರುವ ಮುದುವೊಳಲಲ್ಲಿ ಸೌಮ್ಯಸಂವತ್ಸರದಲ್ಲಿ (949) ಹುಟ್ಟಿದವನು. ಬಳಿಗಾರಕಟಲಕ್ಕೆ ಸೇರಿದವನು. ಇವನಿಗೆ ತೈಲಪನು (973–997) ಕವಿಚಕ್ರವರ್ತಿಯೆಂಬ ಬಿರುದನ್ನು ಕೊಟ್ಟನು. ಇದಲ್ಲದೆ ಈತನಿಗೆ, ಕವಿರತ್ನ, ಅಭಿನವಕವಿಚಕ್ರವರ್ತಿ, ಕವಿ

ಕುಂಜರಾಂಕುಶ, ಉಭಯಕವಿ, ಎಂಬ ಬಿರುದುಗಳೂ ಉಂಟು. ಈ ಕವಿಯನ್ನು ಅಭಿನವಪಂಪ, ನಯಸೇನ ಮೊದಲಾದ ಕವಿಗಳು ಸ್ತುತಿಸಿರುತ್ತಾರೆ. ಈ ಗ್ರಂಥದಲ್ಲಿ ಭೀಮನು ದುರ್ಯೋಧನನ ತೊಡೆಗಳನ್ನು ಗದಾಯುದ್ಧದಲ್ಲಿ ಭಂಗಿಸಿ, ಪಟ್ಟಾಭಿಷಿಕ್ತನಾದ ಕಥೆಯು ವರ್ಣಿಸಿದೆ. ಈ ಕವಿಯು ತನ್ನ ಪ್ರಭುವಾದ ಅಹವಮಲ್ಲನ ಸಾಹಸಗಳನ್ನು ವರ್ಣಿಸಬೇಕೆಂಬ ಉದ್ದೇಶದಿಂದ, ಆವನನ್ನು ಭೀಮನಿಗೆ ಹೋಲಿಸಿ ಈ ಕಾವ್ಯವನ್ನು ಬರೆದಿರುವನು. ಈ ಕವಿಯ ವಾಕ್ಪೌಢಿಮೆಯು ಬಹಳ ಶ್ಲಾಘ್ಯವಾಗಿದೆ. ವೀರರಸವನ್ನು ಬಹಳ ಶ್ಲಾಘ್ಯವಾಗಿ ನಿರೂಪಿಸಿದ್ದಾನೆ. ಸಂಸ್ಕೃತದಲ್ಲಿ ಭಟ್ಟನಾರಾಯಣನಿಂದ ರಚಿತವಾದ ವೇಣೀಸಂಹಾರನಾಟಕದ ಅನೇಕಶ್ಲೋಕಗಳು ಹಾಗೆಯೇ ಕನ್ನಡಕ್ಕೆ ಪರಿವರ್ತಿತವಾದಂತೆ ಈ ಗ್ರಂಥದಲ್ಲಿ ಕಾಣುತ್ತಿವೆ. ಇವನು ಕನ್ನಡಕವಿಗಳಲ್ಲಿ ರತ್ನತ್ರಯವೆಂದು ಪ್ರಖ್ಯಾತರಾದವರಲ್ಲಿ ಒಬ್ಬನು.

ಪಂಪರಾಮಾಯಣ.—ಇದಕ್ಕೆ ರಾವಣಚಂದ್ರಚರಿತಪುರಾಣವೆಂದು ಹೆಸರು. ಇದು ಚಂಪೂಗ್ರಂಥವು. ಇದರಲ್ಲಿ ಜೈನಸಂಪ್ರದಾಯಾನುಸಾರವಾದ ರಾಮಾಯಣದ ಕಥೆಯು ಹೇಳಲ್ಪಟ್ಟಿದೆ. ವಿಪುಲಾಚಲದಲ್ಲಿ, ವೀರಜಿನಪಾರ್ಶ್ವದಲ್ಲಿ, ಗಣಾಗ್ರಣಿಯಾದ ಗೌತಮನು ಮಗಧಾಧಿಪತಿಗೆ ಹೇಳಿದ ರಾವಣಕಥೆಯನ್ನು ಈ ಕಾವ್ಯದಲ್ಲಿ ವರ್ಣಿಸುವುದಾಗಿ ಕವಿಯು ಹೇಳಿರುವನು. ಇದು ಜೈನರಿಗೆ ಗುರುಪರಂಪರೆಯಿಂದ ಉಪದಿಷ್ಟವಾದ ರಾವಣಕಥೆ. ಈ ಗ್ರಂಥದಲ್ಲಿ 16 ಆಶ್ವಾಸಗಳಿವೆ. ಗ್ರಂಥಾದಿಯಲ್ಲಿ ಕವಿಯು ಜೈನಸಂಪ್ರದಾಯಕ್ಕನುಸಾರವಾಗಿ, ಪ್ರಪಂಚಸ್ವರೂಪ, ಯುಗಸ್ವರೂಪ, ಮನುಗಳ ಪರಂಪರೆ, ನುಂತಾದುವನ್ನು ಹೇಳಿ, ಆವೇಲೆ ಕಥೆಯನ್ನಾರಂಭಿಸಿರುವನು. ವಾಲ್ಮೀಕಿರಾಮಾಯಣಕ್ಕೂ ಇದಕ್ಕೂ ಬಹಳ ವ್ಯತ್ಯಾಸಗಳಿವೆ. ಇದರಲ್ಲಿ ರಾವಣನ ತಾಯಿ ಅಪರಾಜಿತೆ. ಶತ್ರುಘ್ನನ ತಾಯಿ ಸುಪ್ರಭೆ. ಸುಮಿತ್ರೆಗೆ ಲಕ್ಷ್ಮಣನೊಬ್ಬನೇ ಮಗನು. ಸುಗ್ರೀವಾದಿಗಳು ಕಪಿಧ್ವಜರೇಹೊರತು ಕಪಿಗಳಲ್ಲ. ವಿಶ್ವಾಮಿತ್ರನ ಪ್ರಸ್ತಾವವೇ ಇದರಲ್ಲಿಲ್ಲ. ಇದರಲ್ಲಿ ಲಕ್ಷ್ಮಣನಿಗೇ ಹೆಚ್ಚು ಪ್ರಾಶಸ್ತ್ಯವು. ರಾವಣನ ವರ್ಣವು ಬಿಳುಪು. ಲಕ್ಷ್ಮಣನದು ಕಪ್ಪು. ಲಕ್ಷ್ಮಣನಿಗೆ ಅನೇಕ ಪತ್ನಿಯರು. ಲಕ್ಷ್ಮಣನೇ ರಾವಣನನ್ನು ಸಂಹರಿಸುವನು. ಕೊನೆಗೆ ಸೀತಾರಾಮರಿಬ್ಬರೂ ಜಿನದೀಕ್ಷೆಯಿಂದ ನಿರ್ವಾಣವನ್ನು ಹೊಂದುವರು. ಇದನ್ನು ರಚಿಸಿದವನು ನಾಗಚಂದ್ರನೆಂಬಕವಿ. ಇವನಿಗೆ ಅಭಿನವ ಪಂಪನೆಂಬ ಬಿರುದು ಪ್ರಸಿದ್ಧವಾಗಿದೆ. ಇವನು ಮಲ್ಲಿನಾಥಪುರಾಣವೆಂಬ ಬೇರೊಂದು ಗ್ರಂಥವನ್ನೂ ರಚಿಸಿರುವನು. ಇವನ ಸ್ಥಳವು ವಿಜಯಪುರ (ಬಿಜಾಪುರ)ವಾಗಿರಬಹುದೆಂದು ತೋರುತ್ತಿದೆ. ಇವನಿಗೆ ಭಾರತೀಕರ್ಣಪೂರ, ಕವಿತಾಮನೋಹರ ಮೊದಲಾದ ಬಿರುದುಗಳುಂಟು. ಈತನ ಕಾಲ, ನರಸಿಂಹರು ಕ್ರಿ. ಶ. 1105. ದ್ವಾರಸಮುದ್ರದ ಬಲ್ಲಾ

ಳರಾಯನ ಸಭೆಯಲ್ಲಿ ಆಸ್ಥಾನಪಂಡಿತೆಯಾಗಿದ್ದ ಕಂತಿಯೆಂಬವಳಗೂ, ಈ ನಾಗಚಂದ್ರನಿಗೂ ಪದ್ಯರೂಪವಾದ ಕೆಲವು ಸಂವಾದಗಳು ನಡೆದಂತೆ "ಕಂತಿಹಂಪನ" ಸಮಸ್ಯೆಗಳೆಂಬ ಕೆಲವು ಪದ್ಯಗಳು ವಾಡಿಕೆಯಲ್ಲಿವೆ. ಈ ಕವಿಯನ್ನು ಕರ್ಣಪಾರ್ಯ, ದುರ್ಗಸಿಂಹ, ಜನ್ನ, ಮಂಗರಸ, ಮೊದಲಾದವರು ಸ್ತುತಿಸಿರುವರು. ಇವನ ಬಂಧವು ಬಹಳ ಲಲಿತವಾಗಿಯೂ, ಮನೋಹರವಾಗಿಯೂ ಇದೆ.

ಕಾವ್ಯಾವಲೋಕನಂ.—ಇದೊಂದು ಲಕ್ಷಣಗ್ರಂಥವು. ಇದರಲ್ಲಿ ಕವಿಯು ಲಕ್ಷಣಸೂತ್ರಗಳನ್ನು ಮಾತ್ರ ತಾನು ಪದ್ಯರೂಪವಾಗಿ ಬರೆದು, ಲಕ್ಷ್ಯಗಳಿಗೆ ಪುರಾತನ ಗ್ರಂಥಗಳಿಂದ ಉದಾಹರಣೆಯನ್ನು ಕೊಟ್ಟಿರುತ್ತಾನೆ. ಇದರಲ್ಲಿ, ವ್ಯಾಕರಣ, ಕಾವ್ಯ ಗುಣದೋಷಗಳು, ನವರಸಭೇದಗಳು, ಶಬ್ದಾರ್ಥಾಲಂಕಾರಗಳು, ಕವಿಸಮಯವೆಂಬೀ ವಿಚಾರಗಳೆಲ್ಲವೂ ಬೇರೆಬೇರೆ ಐದು ಅಧಿಕರಣಗಳಾಗಿ ನಿರೂಪಿಸಲ್ಪಟ್ಟಿವೆ. ಇದನ್ನು ರಚಿಸಿದ ಕವಿಯು ನಾಗವರ್ಮನು. ಈತನು ಜೈನಬ್ರಾಹ್ಮಣನು. ಇವನ ತಂದೆ ದಾಮೋದರನು. ಇವನು "ಕರ್ಣಾಟಕಭಾಷಾಭೂಷಣ" ಮತ್ತು "ವಸ್ತುಕೋಶ" ವೆಂಬ ಬೇರೆ ಎರಡು ಗ್ರಂಥಗಳನ್ನೂ ರಚಿಸಿರುವನು. ಇವನಿಗೆ ಕವಿಕರ್ಣಪೂರ, ಕವಿತಾಗುಣೋದಯ ಎಂಬ ಬಿರುದುಗಳಿದ್ದಂತೆ ತೋರುತ್ತಿದೆ. 12ನೆಯ ಶತಮಾನದ ಅಂತ್ಯದಲ್ಲಿ, ಅನಂತನಾಥಪುರಾಣವನ್ನು ರಚಿಸಿದ ಜನ್ನನು, ಈತನನ್ನು ತನ್ನ ಉಪಾಧ್ಯಾಯನೆಂದು ಹೇಳಿಕೊಂಡಿರುತ್ತಾನೆ. ಇವನ ಕಾಲ, ಸುಮಾರು ಕ್ರಿ. ಶ. 1145. ಇವನಿಗೆ ಹಿಂದೆ ಕಾದಂಬರಿಯನ್ನೂ, ಛಂದೋಂಬುಧಿಯನ್ನೂ ರಚಿಸಿದ ಬೇರೊಬ್ಬ ನಾಗವರ್ಮನಿದ್ದುದರಿಂದ, ಇವನನ್ನು, ಈತನ ಸಮಾನಕಾಲಿಕರು ಅಭಿನವನಾಗವರ್ಮನೆಂದು ಕರೆಯುತಿದ್ದ ಹಾಗೆ ತಿಳಿಯಬರುತ್ತಿದೆ.

ಪಂಚತಂತ್ರಂ.—ಇದು ಚಂಪೂರೂಪವಾದ ನೀತಿಗ್ರಂಥವು. ಇದರಲ್ಲಿ, ಭೇದ, ಪರೀಕ್ಷೆ, ವಿಶ್ವಾಸ, ವಂಚನೆ, ಮಿತ್ರಕಾರ್ಯಗಳೆಂಬ ಐದುತಂತ್ರಗಳಿವೆ. ಕೈಲಾಸಪರ್ವತದಲ್ಲಿ ರುದ್ರನು, ಪಾರ್ವತಿಗೆ ಹೇಳಿದ ಕಥೆಯನ್ನು ಪುಷ್ಪದಂತನೆಂಬ ಗಣಾಧಿಪನೊಬ್ಬನು ಕೇಳುತಿದ್ದನು. ಅವನು ಯಾವುದೋ ಕಾರಣದಿಂದ ಮನುಷ್ಯಜನ್ಮವನ್ನೆತ್ತಿ, ಶಾಲಿವಾಹನನೆಂಬ ಚಕ್ರವರ್ತಿಯ ಆಸ್ಥಾನಕವಿಯಾಗಿದ್ದು, ಆ ಕಥೆಯನ್ನೇ ವೈಶಾಚಿಕಭಾಷೆಯಲ್ಲಿ ಬೃಹತ್ಕಥೆಯನ್ನಾಗಿ ರಚಿಸಲು, ವಸುಭೂಗಭಟ್ಟನೆಂಬವನು, ಅವುಗಳಲ್ಲಿ ಉತ್ತಮವಾದ ಐದುಕಥೆಗಳನ್ನು ಸಂಗ್ರಹಿಸಿ ಸಂಸ್ಕೃತದಲ್ಲಿ ಬರೆದುದಾಗಿಯೂ, ಅದನ್ನೇ ತಾನು ಕನ್ನಡಿಸಿದುದಾಗಿಯೂ ಕವಿಯು ಈ ಗ್ರಂಥದಲ್ಲಿ ಹೇಳಿರುವನು. ಇದು ಸಂಸ್ಕೃತದಲ್ಲಿ ಪ್ರಸಿದ್ಧವಾದ ವಿಷ್ಣುಶರ್ಮನ ಪಂಚತಂತ್ರಕ್ಕಿಂತಲೂ ಅನೇಕಭಾಗಗಳಲ್ಲಿ ವ್ಯತ್ಯಸ್ತವಾಗಿದೆ. ಇದನ್ನು ರಚಿಸಿದವನು ದುರ್ಗಸಿಂಹನೆಂಬ ಸ್ಮಾರ್ತಬ್ರಾಹ್ಮಣನು.

ಈತನು 1139 ರಿಂದ 1149ರ ವರೆಗೆ ಆಳಿದ ಜಗದೇಕಮಲ್ಲನೆಂಬ ಚಾಳುಕ್ಯರಾಜನಲ್ಲಿ ಸಂಧಿವಿಗ್ರಹಿಯಾಗಿದ್ದಂತೆ ತೋರುತ್ತಿದೆ. ಇವನು ಹುಟ್ಟಿದ ಸ್ಥಳವು ಕರ್ಣಾಟಕದೇಶದಲ್ಲಿ ಕಿಸುಕಾಡುನಾಡಿನಲ್ಲಿ ಸಯ್ಯಡಿಯೆಂಬ ಅಗ್ರಹಾರವು. ಇವನ ಬಂಧವು ಪ್ರಾಸಬದ್ಧವಾಗಿ ಬಹಳಗಂಭೀರವಾಗಿದೆ. ಇದರಲ್ಲಿ ನಡುನಡುವೆ ಸಂಸ್ಕೃತನೀತಿಶ್ಲೋಕಗಳನ್ನಿಟ್ಟು, ಅವುಗಳಿಗೆ ಟೀಕು ಕೊಟ್ಟಿದೆ. ಆ ಟೀಕೆಯಲ್ಲಿರುವ ವಾಕ್ಯನಿರಣಯವು ಅಷ್ಟು ಕುದ್ದಾಗಿಲ್ಲ. ಅದನ್ನು ಬರೆದವರು ಬೇರೆಯಾಗಿರಬೇಕು.

ಗಿರಿಜಾಕಲ್ಯಾಣ.—ಇದು ಚಂಪೂರೂಪವಾಗಿದೆ. ಇದರಲ್ಲಿ 10 ಆಶ್ವಾಸಗಳವೆ. ಇದನ್ನು ರಚಿಸಿದವನು ಹರೀಶ್ವರನೆಂಬ ವೀರಶೈವಕವಿ. ಇವನು ಶಿವಗಣದರಗಳೆ, ಪಂಪಾಶತಕವೆಂಬಿವೇ ಮೊದಲಾದ ಇನ್ನೂ ಕೆಲವು ಶೈವಗ್ರಂಥಗಳನ್ನೂ ಬರೆದಿರುತ್ತಾನೆ. ಈ ಕವಿಯು ನರಸಿಂಹಬಲ್ಲಾಳನ ಆಳ್ವಿಕೆಯಲ್ಲಿ ಹಳೆಯಬೀಡಿನಲ್ಲಿ ಕರಣಿಕಕುಲಕ್ಕೆ ಪ್ರಮುಖನಾಗಿದ್ದನು. ಈತನು ತನ್ನ ಗ್ರಂಥದಲ್ಲಿ ಹಂಪೆಯ ವಿರೂಪಾಕ್ಷದೇವರನ್ನು ವಿಶೇಷವಾಗಿ ಸ್ತುತಿಸಿರುವನು. ಇವನನ್ನು ಪ್ರಾಯಕವಾಗಿ ಎಲ್ಲಾ ವೀರಶೈವಕವಿಗಳೂ ಸ್ತುತಿಸಿರುವರು. ಅವರಲ್ಲಿ ಈತನೇ ಪ್ರಬಲನಾದ ಪೂರ್ವಕವಿಯೆನ್ನಬಹುದು. ಆದರೆ, ಈ ಹರೀಶ್ವರನು ತನಗೆ ಹಿಂದಿದ್ದ ಕೆಲವು ವೀರಶೈವಗ್ರಂಥಕರ್ತರನ್ನು ಸ್ತುತಿಸಿರುವನು. ಇವನಕಾಲಕ್ಕೆ ಹಿಂದೆಯೇ ಕೇವಲವಮತಜೋಧಕವಾದ ಕೆಲಕೆಲವು ವೀರಶೈವಗ್ರಂಥಗಳುಂಟು. ಅವೆಲ್ಲವೂ ಬಹಳ ಸಣ್ಣಗ್ರಂಥಗಳು. ಕಾವ್ಯರೂಪವಾಗಿ ದೊಡ್ಡಗ್ರಂಥವನ್ನು ಬರೆದ ವೀರಶೈವರಲ್ಲಿ ಇವನೇ ಪ್ರಾಚೀನನು. ಇವನ ಕಾಲ, ಕ್ರಿ. ಶ. ಸು. 1165. ಈ ಹರೀಶ್ವರನು ಶಿವಗಣದರಗಳೆಯೆಂಬ ದೊಡ್ಡಗ್ರಂಥವೊಂದನ್ನು ರಘುಟೂರೂಪವಾಗಿ ಬರೆದುದರಿಂದ, ಇವನನ್ನು ಕೆಲವರು "ರಗಳೆಯ ಕವಿ" ಯೆಂದು ಪರಿಹಾಸಮಾಡಿದಂತೆಯೂ, ಈ ಅಪವಾದವನ್ನು ನೀಗಿಸುವುದಕ್ಕಾಗಿ ಈತನು ಈ ಗಿರಿಜಾಕಲ್ಯಾಣವನ್ನು ಬರೆದು, ಇದರಲ್ಲಿ ತನ್ನ ವಾಗ್ವೈರಣೆಯನ್ನೂ, ಕವಿತಾಚಾತುರ್ಯವನ್ನೂ ತೋರಿಸಿದಂತೆಯೂ ಪ್ರತೀತಿಯಿದೆ. ಈ ಕವಿಯು ಆ ಆ ಕಾಳ ಕ್ಷಳ ವಿಚಾರವು ಅವಶ್ಯವಿಲ್ಲವೆಂಬ ಅಭಿಪ್ರಾಯವನ್ನು ತನ್ನ ಗ್ರಂಥದಲ್ಲಿ ತಿಳಿಸಿದ್ದಾನೆ. ಇದರಿಂದ ಈತನ ಕಾಲದಲ್ಲಿಯೇ ಆ ಅಕ್ಷರಗಳ ಪ್ರಾಸನಿಯಮವಿಷಯದಲ್ಲಿ ಅವ್ಯವಸ್ಥೆಯು ಆರಂಭವಾದಂತೆ ತೋರುತ್ತದೆ. ಇವನಿಗೆ ಹಿಂದಿನ ಜೈನಕಾವ್ಯಗಳಲ್ಲಿ ಆ ನಿಯಮವು ಬಹಳವಟ್ಟಿಗೆ ಅನುಸರಿಸಲ್ಪಟ್ಟಿಲ್ಲ.

S. P. C. K. PRESS, UNIVERSITY PRINTERS, MADRAS—U. 194.